1330

# ಭಕ್ತಿಚಂದ್ರಿಕೆ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1972

# ಶ್ರೀಶ್ರೀಗಳವರ ಉಪನ್ಯಾಸಗಳು

**೫. ಬ್ರಹ್ಮವಿದ್ಯೆ :** ಬ್ರಹ್ಮವಿದ್ಯೆಯು ಲೌಕಿಕವಿದ್ಯೆಗಳಿಗಿಂತ ಯಾವಯಾವ ಅಂಶಗಳಲ್ಲಿ ವಿಲಕ್ಷಣವಾಗಿದೆ? ಅದಕ್ಕೆ ಸಾಧಕರು ಅನುಸರಿಸಬೇಕಾದ ಮಾರ್ಗಗಳು ಯಾವವು? ಎಂಬುದನ್ನೂ ಬ್ರಹ್ಮವಿದ್ಯೆಯು ಸಾಧನಸಿದ್ಧಾಂತಗಳ ರಹಸ್ಯವನ್ನೂ ವಿವರಿಸುವ ಉಪದೇಶಗಳಿವೆ. ಬ್ರಹ್ಮವಿದ್ಯೆಯ ಹೆಚ್ಚುಗಾರಿಕೆ, ಜ್ಞಾನಸಾಧನಗಳು, ಬ್ರಹ್ಮಾನುದರ್ಶನಪ್ರಕಾರ, ಬ್ರಹ್ಮಾತ್ಮಜ್ಞಾನದಿಂದ ಅನರ್ಥನಿವೃತ್ತಿ, ಆಚಾರ್ಯೋಪದೇಶ, ಈಶ್ವರಾನುಗ್ರಹ- ಮುಂತಾದ ವಿಷಯಗಳ ಮರ್ಮವನ್ನು ತಿಳಿಸಿಕೊಡುವ ಉಪನ್ಯಾಸಗಳಿವು. **ಪುಟಗಳು : ಕ್ರೌನ್ ೫೬+೪**

**೬. ವೇದಾಂತವೂ ಆಧುನಿಕಜನಜೀವನವೂ :** ವೇದಾಂತದಿಂದ ಈಗಿನ ಜನಜೀವನಕ್ಕೆ ಏನಾದರೂ ಪ್ರಯೋಜನವು ದೊರಕುವಂತಿದೆಯೆ?- ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ವೇದಾಂತವೇ ನಾಗರಿಕತೆಗೆ ಮದ್ದು, ವೇದಾಂತದೃಷ್ಟಿಯಿಂದಾಗುವ ಲಾಭ, ಸರ್ವವೂ ಬ್ರಹ್ಮಮಯ- ಎಂಬ ವಿಷಯಗಳನ್ನು ವಿಸ್ತಾರವಾಗಿ ಹೃದಯಂಗಮವಾಗಿ ವಿವರಿಸಿರುತ್ತದೆ.

**ಪುಟಗಳು : ಕ್ರೌನ್ ೪೬+೨**

**೭. ಜೀವಂತವೇದಾಂತ :** ವೇದಾಂತವು ಜೀವಂತದರ್ಶನವೆನ್ನುವದಕ್ಕೆ ಗುರುತುಗಳೇನು? ಎಂಬ ವಿಷಯವನ್ನು ಕುರಿತು ಶ್ರೀಶ್ರೀಗಳವರು ಮನೋಹರ ರೀತಿಯಿಂದ ವರ್ಣಿಸಿರುತ್ತಾರೆ. ಸಾಮಾನ್ಯವಿದ್ಯಾಭ್ಯಾಸವುಳ್ಳ ಸ್ತ್ರೀಪುರುಷರೆಲ್ಲರಿಗೂ ಪ್ರಯೋಜನವಾಗುವಂಥ ಸರಳವಾದ ಶೈಲಿಯಿಂದ ವಿಷಯವನ್ನು ಪ್ರತಿಪಾದಿಸಿದೆ. ೫೫ ಉಪನ್ಯಾಸಗಳಿವೆ. **ಪುಟಗಳು : ಡೆಮ್ಮಿ ೩೦೨+೬**

**೮. ಅಧ್ಯಾತ್ಮವಿದ್ಯೆ :** ಅಧ್ಯಾತ್ಮವಿದ್ಯೆ- ಎಂಬುದು ವಸ್ತುಪ್ರಧಾನವಾದ ಜ್ಞಾನ, ಭಾವನಾಪ್ರಧಾನವಾದ ಉಪಾಸನೆ- ಎಂದು ಎರಡು ವಿಧವಾಗಿ ಉಪನಿಷತ್ತುಗಳಲ್ಲಿ ವರ್ಣಿಸಲ್ಪಟ್ಟಿರುವದನ್ನು ಇಲ್ಲಿ ಶ್ರೀಶ್ರೀಗಳವರು ೨೬ ಉಪನ್ಯಾಸಗಳಿಂದ ಹೃದಯಂಗಮವಾಗಿ ವಿವರಿಸಿರುತ್ತಾರೆ.

**ಪುಟಗಳು : ಡೆಮ್ಮಿ ೧೫೦+೬**

**೯. ಶಾಂಕರವೇದಾಂತದ ಮೂಲತತ್ತ್ವಗಳು :** ದಾವಣಗೆರೆಯಲ್ಲಿ 1966ರಲ್ಲಿ ನಡೆದ ಶಂಕರಸಪ್ತಾಹಕಾಲದಲ್ಲಿ ಮತ್ತು ಅದಕ್ಕೆ ಪೂರ್ವಭಾವಿಯಾಗಿ ಶ್ರೀಶ್ರೀಗಳವರು ಅನುಗ್ರಹಿಸಿದ ಉಪನ್ಯಾಸಗಳಿವು. ಪರಸ್ಪರವಿರುದ್ಧವಾಗಿರುವ ವ್ಯಾಖ್ಯಾನಗಳ ಕಾರಣದಿಂದ ಜಿಜ್ಞಾಸುಗಳ ಚಿತ್ತವು ಕದಡಿಹೋಗಿ ಆಚಾರ್ಯರ ಸಿದ್ಧಾಂತದ ಮೂಲತತ್ತ್ವಗಳ ರಹಸ್ಯವನ್ನರಿಯದೆ ಪೇಚಾಡುತ್ತಿರುವ ಜಿಜ್ಞಾಸುಗಳಿಗೆ ಈ ಗ್ರಂಥವು ವರಪ್ರದಾನವಾಗಿ ಪರಿಣಮಿಸಿದೆ. ಒಟ್ಟು ೨೧ ಉಪನ್ಯಾಸಗಳಿವೆ.

**ಪುಟಗಳು : ಡೆಮ್ಮಿ ೧೦೬+೪**

ಮೇಲಿನ ಗ್ರಂಥಗಳ ಈಗಿನ ಬೆಲೆಪಟ್ಟಿಗೆ ಈ ವಿಳಾಸಕ್ಕೆ ಬರೆಯಿರಿ :

---

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.

ಅಧ್ಯಾತ್ಮಗ್ರಂಥಾವಳಿ

# ಭಕ್ತಿಚಂದ್ರಿಕೆ

## (ನಾರದಭಕ್ತಿಸೂತ್ರಗಳ ವಿವರಣೆ)

ಬರೆದವರು :
ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೧೫೭

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.
( ಹಾಸನ-ಜಿಲ್ಲೆ, ಮೈಸೂರು ಸಂಸ್ಥಾನ )
1972

ಒಂದನೆಯ ಮುದ್ರಣ ೧೯೭೨
೧೦೦೦ ಪ್ರತಿಗಳು
('ಅಧ್ಯಾತ್ಮಪ್ರಕಾಶ'ಪತ್ರಿಕೆಯಿಂದ ತೆಗೆದಚ್ಚು)

©

All Rights Reserved
by
The Adhyatma Prakasha Karyalaya,
Holenarsipur. Mysore State.

(Registered under the Copy Right Act 1957.)

ಮುದ್ರಕರು :
ವೈ. ನರಸಪ್ಪ,
ಅಧ್ಯಾತ್ಮಪ್ರಕಾಶಮುದ್ರಣಾಲಯ,
ಹೊಳೆನರಸೀಪುರ.

# ಪ್ರಕಾಶಕರ ಮುನ್ನುಡಿ

---

ನಾರದಭಕ್ತಿಸೂತ್ರಗಳಿಗೆ ಸಣ್ಣದೊಂದು ವೃತ್ತಿಯನ್ನು ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು ತಮ್ಮ ಪೂರ್ವಾಶ್ರಮದಲ್ಲಿ ಬಹಳ ವರ್ಷಗಳ ಹಿಂದೆ ಬರೆದು "ವಿವೇಕೋದಯ"ವೆಂಬ ಪತ್ರಿಕೆಯ ಮೂಲಕ ಪ್ರಕಟಿಸಿದ್ದರು ; ಅನಂತರ ಅಂದರೆ ಸುಮಾರು ಐವತ್ತುನಾಲ್ಕುವರ್ಷಗಳ ಹಿಂದೆಯೇ ಒಂದು ವಿಸ್ತಾರವಾದ ವಿವರಣೆಯನ್ನು ಬರೆದು ಆಗ್ಗೆ ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ "ಪರಮಾರ್ಥ" ವೆಂಬ ಪತ್ರಿಕೆಯಲ್ಲಿ ಪ್ರಕಾಶಪಡಿಸಿದ್ದರು.

ಪುಸ್ತಕದ ಪ್ರತಿಗಳು ಮುಗಿದು ಅವು ಸಿಕ್ಕುವದು ತೀರ ದುರ್ಲಭವೆಂದು ಗೊತ್ತಾದಮೇಲೆ ಜನರು ಮತ್ತೆಮತ್ತೆ ಆ ಪುಸ್ತಕವನ್ನು ಪ್ರಕಾಶಪಡಿಸಬೇಕೆಂದು ಕೇಳಿಕೊಂಡ ಪ್ರಕಾರ ಶ್ರೀಶ್ರೀಗಳವರು ಈಗ ಆ ಗ್ರಂಥವನ್ನು ಸಂಪೂರ್ಣವಾಗಿ ಪರಿಷ್ಕರಿಸಿ ಈಚಿನ ಸ್ವಂತ ಅಭಿಪ್ರಾಯವಿಶೇಷಗಳನ್ನೂ ಸೇರಿಸಿ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಮೂಲಕ ಪ್ರಕಟಿಸುವಂತೆ ಅಪ್ಪಣೆಮಾಡಿದಪ್ರಕಾರ ಈ ಹೊಸ ಸಂಸ್ಕರಣವನ್ನು ಬೆಳಕಿಗೆ ಹಿಡಿದಿದೇವೆ.

ವಾಚಕರು ಈ ಪರಿಷ್ಕೃತಸಂಸ್ಕರಣದಿಂದ ಹೆಚ್ಚಿನ ಲಾಭವನ್ನು ಪಡೆಯುವ ರೆಂದು ಆಶಿಸುತ್ತೇನೆ.

ಹೊಳೆನರಸೀಪುರ
15-8-1972

ವೈ. ನರಸಪ್ಪ,
ಕಾರ್ಯಕಾರಿಸಮಿತಿಯ ಅಧ್ಯಕ್ಷ.

# ವಾಚಕರಲ್ಲಿ ಬಿನ್ನಹ

ನಾರದಭಕ್ತಿಸೂತ್ರವು ಪ್ರಸನ್ನಗಂಭೀರವಾದ ಒಂದು ಪುಟ್ಟಗ್ರಂಥ. ಇದರ ವಿವರಣೆಯು ಇಂಗ್ಲಿಷು, ಹಿಂದಿ- ಮುಂತಾದ ಹಲವು ಭಾಷೆಗಳಲ್ಲಿ ಆಗಿದ್ದರೂ ಈಗಲೂ ಅದರಲ್ಲಿ ಅಡಗಿರುವ ಸಿದ್ಧಾಂತದ ಮತ್ತು ಪ್ರಕ್ರಿಯೆಯ ಆಳವನ್ನು ನಿರ್ಧರಿಸುವದು ಕಷ್ಟವೇ ಆಗಿರುತ್ತದೆ.

ಈ ಗ್ರಂಥವು ಅನುಭವಪ್ರಧಾನವಾದ ಅಧ್ಯಾತ್ಮಗ್ರಂಥವೆಂಬುದು ಮೇಲೆಯೇ ಕಾಣುತ್ತಿದ್ದರೂ ಹಲವರು ಬೇರೆಬೇರೆಯ ಸಿದ್ಧಾಂತಗಳನ್ನು ಸೂತ್ರಾಕ್ಷರದ ಆಧಾರ ದಿಂದ ತೆಗೆಯಲು ಪ್ರಯತ್ನಿಸಿರುತ್ತಾರೆ. ವೇದಾಂತಪ್ರಸ್ಥಾನತ್ರಯವೆಂದು ಪ್ರಸಿದ್ಧ ವಾಗಿರುವ ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬಾದರಾಯಣಸೂತ್ರ- ಇವು ಗಳೇ ಅಲ್ಲದೆ ಶ್ರೀಮದ್ಭಾಗವತ, ವಿಷ್ಣುಪುರಾಣ- ಮುಂತಾದ ಭಕ್ತಿಪ್ರಧಾನವಾದ ಗ್ರಂಥಗಳನ್ನೂ ಅವಲೋಕನಮಾಡಿದಬಳಿಕ, ನನಗೆ ಈ ಗ್ರಂಥದ ಬಗ್ಗೆ ಅರ್ಧಶತ ಮಾನದ ಹಿಂದೆಯೇ ಉಂಟಾಗಿದ್ದ ಅಭಿಪ್ರಾಯಕ್ಕೇ ಈಗಲೂ ಈ ಸೂತ್ರಸಂದರ್ಭವು ಹೊಂದಿಕೆಯಾಗಿದೆ- ಎಂಬ ತೀರ್ಮಾನವು ದೃಢತರವಾಗಿರುತ್ತದೆ. **ಭಗವದ್ಗೀತೆ ಯಲ್ಲಿ ಹೇಳಿರುವ ಪರಭಕ್ತಿ ಅಥವಾ ಜ್ಞಾನನಿಷ್ಠೆ ಎಂಬುದೇ ಈ ನಾರದ ಭಕ್ತಿಸೂತ್ರಗಳ ಹೆಗ್ಗುರಿ** ಎಂಬುದು ನನ್ನ ತೀರ್ಮಾನವಾಗಿರುವದರಿಂದ ಈ ಗ್ರಂಥದಲ್ಲಿ ಆ ತೀರ್ಮಾನವನ್ನು ಸ್ಫುಟಗೊಳಿಸುವದಕ್ಕೆ ಬೇಕಾಗುವ ಆಧಾರ ಗ್ರಂಥಗಳನ್ನೂ ಯುಕ್ತ್ಯನುಭವಗಳನ್ನೂ ಸೂತ್ರಗಳ ಪ್ರತಿಪಾದನೆಗೆ ಹೊಂದುವಂತೆ ಈಗಿನ ಪರಿಷ್ಕರಣದಲ್ಲಿ ಹೊರಕ್ಕೆ ತಂದಿರುತ್ತೇನೆ.

ಭಕ್ತಿಜ್ಞಾನಯೋಗಗಳ ಸಂಬಂಧವನ್ನು ವಿವೇಚಿಸುವ ಸಂದರ್ಭದಲ್ಲಿ ನಾರದರ ಸಿದ್ಧಾಂತದಲ್ಲಿ ಈ ಮೂರರೊಳಗೆ ಯಾವದು ಸಾಧನ, ಯಾವದು ಫಲ ?- ಎಂಬ ವಿಷಯಕ್ಕೆ ಬೇರೆಬೇರೆಯ ದರ್ಶನಗಳ ವಾಸನೆಯಿಂದ ಕೂಡಿದ ಜನರು ಭಿನ್ನಭಿನ್ನಾಭಿ ಪ್ರಾಯಗಳನ್ನು ಹೊರಪಡಿಸುತ್ತಾ ವಿವಾದಕ್ಕೆ ಅವಕಾಶವನ್ನು ಕಲ್ಪಿಸಿರುತ್ತಾರೆ. ಆದರೆ ಈ ವಿಪ್ರತಿಪತ್ತಿಯು ಗೌಣಭಕ್ತ್ಯಾದಿಗಳನ್ನೂ ಪರಭಕ್ತ್ಯಾದಿಗಳ ತತ್ತ್ವವನ್ನೂ ಅರಿಯದ್ದರಿಂದ ಆಗಿರುತ್ತದೆಯೇ ಹೊರತು ವಸ್ತುಸ್ವರೂಪದಲ್ಲಿರುವ ವಿಭಾಗದಿಂದಾ ಗಿರುವದಿಲ್ಲ. ಇದನ್ನು ಈ ಭಕ್ತಿಚಂದ್ರಿಕೆಯಲ್ಲಿಯೇ ಆದಷ್ಟುಮಟ್ಟಿಗೂ ಸ್ಫುಟ ಗೊಳಿಸಿರುತ್ತೇನಾದರೂ **'ಗೀತಾಶಾಸ್ತ್ರೋಪದೇಶಸೋಪಾನಪಂಕ್ತಿ'** -ಎಂಬ ಹೆಸರಿನಿಂದ ಇಷ್ಟರಲ್ಲಿಯೇ ನಾನು ಪ್ರಕಟಿಸುವದಕ್ಕೆ ಸಂಕಲ್ಪಿಸಿರುವ ಸಂಸ್ಕೃತ ಗ್ರಂಥದಲ್ಲಿ ಇನ್ನಷ್ಟು ಸ್ಫುಟವಾಗುವದೆಂದು ನಂಬಿರುತ್ತೇನೆ.

ಈ ಹೊಸ ಸಂಸ್ಕರಣದ ವಿವರಣೆಯನ್ನು ಬರೆಯುವಾಗ ನಾನು ಹಿಂದೆ ಬರೆದಿದ್ದ ವಿವರಣೆಯನ್ನಲ್ಲದೆ, ರಾಮಕೃಷ್ಣಮಿಷನ್ನಿನ ಶ್ರೀತ್ಯಾಗೀಶಾನಂದವರು ಬರೆದಿರುವ ಇಂಗ್ಲಿಷು ವ್ಯಾಖ್ಯಾನವನ್ನೂ, 'ಪ್ರೇಮದರ್ಶನಮ್' ಎಂಬ ಹೆಸರಿನಿಂದ ಗೋಲೋಕವಾಸಿ ಹನುಮಾನ್‌ಪ್ರಸಾದಪೋದ್ದಾರ್‌ರವರು ಬರೆದಿರುವ ಗ್ರಂಥವನ್ನೂ ಅಲ್ಲಲ್ಲಿ ನೋಡಿ ಕೆಲವು ಸೂಚನೆಗಳನ್ನು ತೆಗೆದುಕೊಂಡಿರುತ್ತೇನೆ. ಆದರೆ ಈ ನನ್ನ ವ್ಯಾಖ್ಯಾನದಲ್ಲಿರುವ ವಿಚಾರಸರಣಿಗೆ ಪೂರ್ಣವಾಗಿ ನಾನೇ ಹೊಣೆಗಾರನಾಗಿರುತ್ತೇನೆ. ಈ ಪುಸ್ತಕವು ಅಧ್ಯಾತ್ಮಪ್ರಕಾಶಪತ್ರಿಕೆಯಲ್ಲಿ ಪ್ರಕಟವಾದ ಅನಂತರ ತೆಗೆದ ಮರಿಯಚ್ಚಾಗಿರುವದರಿಂದಲೂ ಪುಸ್ತಕದ ಬಹುಭಾಗವು ನಾನು ಬೆಂಗಳೂರಿನಲ್ಲಿರುವಾಗಲೇ ಅಚ್ಚಾದದ್ದರಿಂದಲೂ ನನ್ನ ನೇತ್ರದೋಷ, ಮತಿಮಾಂದ್ಯಗಳ ಕೊರತೆಯೂ ಸೇರಿ ಹಲವು ತಪ್ಪುಗಳು ಉಳಿದುಕೊಂಡಿರುವ ಸಂಭವವೇ ಇದೆ. ಈಗ ಈ ಗ್ರಂಥದ ಸರ್ವಸ್ವಾಮ್ಯವೂ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೇ ಸೇರಿರುವದರಿಂದ ಇಲ್ಲಿ ಕಾಣಬರಬಹುದಾದ ಭಾಷಾದೋಷಗಳು, ವಿಚಾರಸರಣಿಯ ದೋಷಗಳು-ಇವನ್ನು ವಾಚಕಮಹನೀಯರು ಯಾರಾದರೂ ತಿಳಿಯಿಸಿದರೆ ಅಂಥವುಗಳನ್ನು ಅವಶ್ಯವಾಗಿ ಕೃತಜ್ಞತಾಪ್ರಕಟನಪೂರ್ವಕವಾಗಿ ಮತ್ತೊಂದು ಸಂಸ್ಕರಣದಲ್ಲಿ ಪ್ರಕಾಶಕರು ಸರಿಪಡಿಸುವರು.

ಈ ಗ್ರಂಥದ ಕೈಬರಹದ ಪ್ರತಿಯನ್ನು ಶೋಧಿಸುವದಕ್ಕೂ ಅಚ್ಚಿನ ಕರಡುಗಳನ್ನು ತಿದ್ದುವದಕ್ಕೂ ಸಹಾಯಕರಾಗಿರುವ ಕಾರ್ಯಾಲಯದ ಪಂಡಿತರಾದ ವೇ|| ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು, ಆಪ್ತ ಕಾರ್ಯದರ್ಶಿ ಚಿ|| ಕೆ. ಜಿ. ಸುಬ್ರಾಯಶರ್ಮ-ಮುಂತಾದ ಸಕಲರಿಗೂ ಈ ಮೂಲಕ ನಾರಾಯಣ ಸ್ಮರಣಗಳನ್ನು ತಿಳಿಸುತ್ತೇನೆ.

ಈ ಅಲ್ಪಸೇವೆಯಿಂದ ಆ ಭಗವಂತನು ಸುಪ್ರೀತನಾದರೆ ಅಷ್ಟರಿಂದಲೇ ನಾನು ಧನ್ಯನು.

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಬೆಂಗಳೂರು ಶಾಖೆ.
ವಿರೋಧಿಕೃತ್‌ಸಂವತ್ಸರದ
ಆಷಾಢ ಬಹುಳ ದಶಮಿ

ಗ್ರಂಥಕರ್ತ.

# ವಿಷಯಾನುಕ್ರಮಣಿಕೆ


| | ವಿಷಯ | ಪುಟ |
|---|---|---|
| ೧. | ಅವತರಣಿಕೆ | ೧ |
| ೨. | ಶಾಸ್ತ್ರಾರಂಭಪ್ರತಿಜ್ಞೆ (ಸೂ. ೧) | ೨–೫ |
| ೩. | ಭಕ್ತಿಯ ಸ್ವರೂಪಲಕ್ಷಣ (ಸೂ. ೨–೩) | ೫–೧೫ |
| ೪. | ಭಕ್ತಿಯ ಫಲ (ಸೂ. ೪–೬) | ೧೬–೩೦ |
| ೫. | ಭಕ್ತಿಗೂ ಕರ್ಮಕ್ಕೂ ಇರುವ ವೈಲಕ್ಷಣ್ಯ (ಸೂ. ೭–೧೧) | ೩೦–೪೧ |
| ೬. | ಭಕ್ತನು ಕರ್ಮಗಳನ್ನು ಮಾಡುವ ರೀತಿ (ಸೂ. ೧೨–೧೪) | ೪೧–೪೭ |
| ೭. | ಭಕ್ತಿಯ ಹೆಗ್ಗುರುತುಗಳು (ಸೂ. ೧೫–೧೮) | ೪೮–೫೨ |
| ೮. | ಭಕ್ತಿಯ ಹೆಗ್ಗುರುತು : ನಾರದರ ಸಿದ್ಧಾಂತ (ಸೂ. ೧೯–೨೪) | ೫೨–೬೯ |
| [೯. | ಭಕ್ತ್ಯಾಚಾರ್ಯರಲ್ಲಿ ಮತಭೇದವೆ ? | ೫೭–೬೯] |
| ೧೦. | ಭಕ್ತಿಯೂ ಕರ್ಮಾದಿಗಳೂ (ಸೂ. ೨೫–೩೩) | ೬೯–೮೦ |
| ೧೧. | ಭಕ್ತಿಯ ಸಾಧನಗಳು (ಸೂ. ೩೪–೪೫) | ೮೦–೯೯ |
| ೧೨. | ಮಾಯೆಯನ್ನು ದಾಟುವದು ಹೇಗೆ ? (ಸೂ. ೪೬–೫೦) | ೯೯–೧೧೪ |
| ೧೩. | ಪ್ರೇಮದ ಮಹಿಮೆ (ಸೂ. ೫೧–೫೫) | ೧೧೫–೧೨೩ |
| ೧೪. | ಗೌಣಭಕ್ತಿ (ಸೂ. ೫೬–೫೭) | ೧೨೩–೧೨೮ |
| ೧೫. | ಗೌಣಭಕ್ತಿಯ ಸೌಲಭ್ಯ (ಸೂ. ೫೮–೬೦) | ೧೨೮–೧೩೫ |
| ೧೬. | ಸಾಧಕನು ನಡೆದುಕೊಳ್ಳಬೇಕಾದ ರೀತಿ (ಸೂ. ೬೧–೬೬) | ೧೩೫–೧೪೮ |
| ೧೭. | ಮುಖ್ಯಭಕ್ತರು (ಸೂ. ೬೭–೭೩) | ೧೪೮–೧೬೧ |
| ೧೮. | ಸಾಧಕರು ಹೇಗೆ ವರ್ತಿಸಬೇಕು ? (ಸೂ. ೭೪–೮೧) | ೧೬೧–೧೭೩ |
| ೧೯. | ಭಕ್ತಿಯ ಹನ್ನೊಂದು ಬಗೆ (ಸೂ. ೮೨) | ೧೭೪–೧೯೯ |
| ೨೦. | ಭಕ್ತ್ಯಾಚಾರ್ಯರುಗಳ ಐಕಮತ್ಯ (ಸೂ. ೮೩) | ೧೯೯–೨೦೨ |
| ೨೧. | ಶಾಸ್ತ್ರೋಪದೇಶದಂತೆ ಅನುಷ್ಠಾನಮಾಡಿದವರಿಗೆ ಫಲ (ಸೂ. ೮೪) | ೨೦೨ |
| ೧. | ಪರಿಶಿಷ್ಟ<br>ಭಕ್ತಿಯ ವಿಷಯಕ್ಕೆ ಆಕ್ಷೇಪಸಮಾಧಾನಗಳು | ೨೦೩–೨೧೫ |
| ೨. | ಪರಿಶಿಷ್ಟ<br>ಸಾರ್ಥಸೂತ್ರಪಾಠ —— | ೨೧೬–೨೩೩ |


1. ಕಂಸದಲ್ಲಿರುವ ೯ ಎಂಬ ಸಂಖ್ಯೆಯು ಅನವಶ್ಯವಾಗಿ ಕೈತಪ್ಪಿನಿಂದ ಬಿದ್ದಿದೆ ; ಇದನ್ನು ೮ಕ್ಕೇ ಸೇರಿಸಿಕೊಳ್ಳಬೇಕು. ಅನುಕ್ರಮಸಂಖ್ಯೆಯನ್ನು ಮುಂದುವರಿಸಲು ಇಲ್ಲಿ ಸೇರಿಸಿದೆ. ಶುದ್ಧಾಶುದ್ಧಪತ್ರಿಕೆಯನ್ನು ನೋಡಿ.

# ತಿದ್ದುಪಡಿ

**ಸೂಚನೆ :–** ಈ ಪುಸ್ತಕದಲ್ಲಿರುವ ಅವಾಂತರಶೀರ್ಷಿಕೆಗಳಿಗೂ ಪ್ರಮಾದದಿಂದ ಸಂಖ್ಯೆಯನ್ನು ಕೊಟ್ಟದ್ದರ ಫಲವಾಗಿ ವಿಷಯಗಳ ಸಂಖ್ಯೆಯು ಅನುಕ್ರಮದಲ್ಲಿಯೂ ಪುಟಗಳ ಬಲಗಡೆಯ ಸೂಚನೆಯ ತಲೆಬರಹಗಳಲ್ಲಿಯೂ ಕೆಲವು ತಪ್ಪುಗಳಾಗಿವೆ. ಭಕ್ತಿಯ ಹೆಗ್ಗುರುತುಗಳು ಎಂಬ ೭ನೆಯ ಸಂಖ್ಯೆಯಾದಬಳಿಕ ೮ ಭಕ್ತಿಯ ಹೆಗ್ಗುರುತು– ನಾರದರ ಸಿದ್ಧಾಂತ ಎಂದೇ ೫೨ರಿಂದ ೭೯ನೆಯ ಪುಟಗಳವರೆಗೆ ಪುಟಗಳ ಮೇಲಿನ ತಲೆಬರಹವಿರಬೇಕು. ೯ನೆಯ ಅನುಕ್ರಮಸಂಖ್ಯೆಯನ್ನು ಬಿಟ್ಟುಬಿಡಬೇಕು.

| ಪುಟ | ಸಾಲು | ಇರಬೇಕಾದದ್ದು |
|---|---|---|
| ೪ | ೫ | ಯಾವದರಿಂದಲೇ |
| ೧೭ ಕೆಳಗಿನಿಂದ | ೧೨ | ಪುಮಾನ್– ಎಂಬ ಶಬ್ದವನ್ನು ಮನುಷ್ಯಸಾಮಾನ್ಯದಲ್ಲಿ ಗಂಡಸರಿಗೇ ಹೇಳಿದ್ದರೂ ಮನುಷ್ಯಸಾಮಾನ್ಯಕ್ಕೂ ಬಳಸಬಹುದು. |
| ೨೭ | ೧೦ | ಹುಸಿತೋರಿಕೆ |
| ೩೨ ಕೆಳಗಿನಿಂದ | ೧೦ | ಆಪ್ತಕಾಮನಾಗಿ ಆತ್ಮೈಕಕಾಮನಾಗಿರುವದರಿಂದ. |
| ೩೩ | ೧೨ | ಆದರೆ ಭಕ್ತರು....ಎಂಬುದು ಬೇರೆ ಪ್ಯಾರ ಆಗಬೇಕು. |
| ೪೫ ಕೆಳಗಿನಿಂದ | ೫ | ಪ್ರತರ್ದನನಿಗೆ ಇಂದ್ರನು |
| ೯೬ ಕೆಳಗಿನಿಂದ | ೬ | ಶಮೋ ದಮೋ.... |
| ೯೭ | ೨ | ಶಾಂತಿದಾಂತಿಗಳು |
| ೧೦೫ | ೭ | ಮೋಹವನ್ನುಂಟು.... |
| ೧೧೬ ಕೆಳಗಿನಿಂದ | ೧೧ | 'ಒಂದು' ಎಂಬುದನ್ನು ಬಿಡಿರಿ. |
| ೧೨೨ | ೧ | ಕಾವ್ಯರಸದ ಅನುಭವದಿಂದಾಗುವ ಸುಖ |
| ೧೩೩ | ೯ | ಉಕ್ತಿಯೇ ಅವಕ್ಕೆ ಪ್ರಮಾಣ |
| ೧೩೩ ಕೆಳಗಿನಿಂದ | ೭ | ಪರಮಾರ್ಥಸ್ವರೂಪವೇ ಪರಮಾತ್ಮನು |
| ೧೩೯ ಕೆಳಗಿನಿಂದ | ೧೦ | ಅಸತ್ಪುರುಷರೂ ಸ್ತ್ರೀಯರ ಆಟದ ಮೃಗಗಳೂ ಆಗಿರುವವರಲ್ಲಿ ಸಂಗವನ್ನು |
| ೧೫೪ ಕೆಳಗಿನಿಂದ | ೩ | ಸಮಸ್ತವಾರಿನಿವಹಃ |
| ೧೫೪ ಕೆಳಗಿನಿಂದ | ೨ | ವಾರಾಣಸೀ ಮೇದಿನೀ |
| ೧೬೨ | ೧೧ | ತಿಳಿದಮೇಲಂತೂ |
| ೧೬೫ | ೧ | ದ್ವೇಷ ; ಲಾಭ ; ನಷ್ಟ |
| ೧೬೯ | ೧೫ | ಸಾಧ್ಯವಾದೀತೆ ?– ಎಂಬ ಶಂಕೆಗೆ ಹಿಂದೆ |
| ೧೭೬ | ೧೨ | ಭಗವಂತನಿಗೆ ಗುಣಗಳೇ ಇಲ್ಲವಲ್ಲ ! |
| ೧೭೬ | ೧೫ | ಯಾರವು ? ಭಗವಂತನನ್ನು |
| ೧೮೪ | ೫ | ಆತನು ಸಮಸ್ತ.... |
| ೨೦೨ ಸೂತ್ರದ ಮೇಲಕ್ಕೆ | | '೨೧ ಶಾಸ್ತ್ರೋಪದೇಶದಂತೆ ಅನುಷ್ಠಾನಮಾಡಿದವರಿಗೆ ಫಲ' ಎಂಬ ತಲೆಬರಹವನ್ನು ಸೇರಿಸಿಕೊಳ್ಳಿರಿ. |

# ಸಂಕೇತಾಕ್ಷರಗಳ ವಿವರಣೆ

**ಸೂಚನೆ :-** ಉಪನಿಷತ್ತುಗಳ ಹೆಸರುಗಳನ್ನು ಆಯಾ ಉಪನಿಷತ್ತಿನ ಮೊದಲನೆಯ ಅಕ್ಷರದಿಂದ ಸೂಚಿಸಿದೆ.

| | |
|---|---|
| ಅಧ್ಯಾ. ರಾಮಾ. | ಅಧ್ಯಾತ್ಮರಾಮಾಯಣ |
| ಗೀ. | ಭಗವದ್ಗೀತೆ |
| ಚಂ. ಭಾಗ. | ಚಂಪೂಭಾಗವತ |
| ಮನು. | ಮನುಸ್ಮೃತಿ |
| ಮು. ಮಾ. | ಮುಕುಂದಮಾಲಾಸ್ತೋತ್ರ |
| ಮೋ. ಧ. | ಮಹಾಭಾರತ_ಮೋಕ್ಷಧರ್ಮಪರ್ವ |
| ವಿ. ಚೂ. | ವಿವೇಕಚೂಡಾಮಣಿ |
| ವಿ. ಪು. | ವಿಷ್ಣುಪುರಾಣ |
| ಶಾ. ಭಾ. | ಮಹಾಭಾರತ_ಶಾಂತಿಪರ್ವ |

* ಓಮ್ *

ನಮೋ ಭಗವತೇ ಪರಮಾನನ್ದಸ್ವರೂಪಾಯ
ಭಕ್ತವರಾಯ ನಾರದಾಯ ಚ

# ಭಕ್ತಿಚಂದ್ರಿಕೆ

ಎಂಬ

## ನಾರದಭಕ್ತಿಸೂತ್ರವಿವರಣೆ

### ೧. ಅವತರಣಿಕೆ

ಅದೃಶ್ಯೋಽಪಿ ಸ್ವಭಕ್ತಾನಾಂ ದೃಶ್ಯೋ ಭವತಿ ಯಃ ಸದಾ ।
ಅಚಿನ್ತ್ಯಮಹಿಮಾನಂ ತಮಾಶ್ರಯೇಽಭೀಷ್ಟಸಿದ್ಧಯೇ ॥ ೧ ॥

ಸ್ವಾತ್ಮನ್ಯೇವಾಪ್ರತಿಮಪರಮಪ್ರೇಮಸೂತ್ರೇಣ ಬದ್ಧಃ
ಸರ್ವವ್ಯಾಪೀ ಪ್ರಭುರಪಿ ಸದಾ ಯೇನ ಕ್ಲೃಪ್ತಿಂ ಗತೋಽಸೌ
ವೀಣಾಗಾನಪ್ರಕಟಿತಪರಪ್ರೇಮಸಾರಂ ಮುನೀನ್ದ್ರಮ್
ಭಕ್ತ್ಯಾಚಾರ್ಯಂ ಭವಭಯನುದಂ ನೌಮ್ಯಹಂ ನಾರದಾಖ್ಯಮ್ ॥ ೨ ॥

ಲೋಕದಲ್ಲಿ ಎಲ್ಲರೂ ಪರಮಾನಂದಪ್ರಾಪ್ತಿಯನ್ನೇ ಬಯಸುತ್ತಾರೆ ; ಆದರೆ ಅದಕ್ಕೆ ಬೇಕಾದ ಪ್ರಯತ್ನವನ್ನು ಮಾಡದೆ 'ನಾನು', 'ನನ್ನದು' ಎಂಬ ದುರಭಿಮಾನಕ್ಕೆ ಸಿಕ್ಕಿ ಆಸೆ, ಸಿಟ್ಟು, ಜಿಪುಣತನ, ಒಂದನ್ನೊಂದೆಂದು ತಿಳಿಯುವದು, ಸೊಕ್ಕು, ಹೊಟ್ಟೆಕಿಚ್ಚು- ಎಂಬ ಮನೋದೋಷಗಳ ಹೊಡೆತಕ್ಕೆ ಸಿಕ್ಕಿ ಧರ್ಮಾಧರ್ಮಗಳ ಫಲವಾಗಿ ಬಗೆಬಗೆಯ ಶರೀರಗಳನ್ನು ಪಡೆದು ತಮ್ಮ ಕರ್ಮಗಳ ಫಲವಾಗಿ ಪ್ರಿಯಾಪ್ರಿಯಗಳನ್ನು ಪಡೆದು ಹಿಗ್ಗುತ್ತಲೂ ಕುಗ್ಗುತ್ತಲೂ ಸಂಸಾರದ ರಾಟೆಯಲ್ಲಿ ಸಿಕ್ಕಿ ನರಳುತ್ತಿರುವರು. ಅಂಥ ಜೀವರು ಈ ಕಷ್ಟದಿಂದ ಪಾರಾಗುವದಕ್ಕೆ ಭಗವದ್ಭಕ್ತಿಯನ್ನು ಬಿಟ್ಟರೆ ಮತ್ತೆ ಯಾವದೂ ಸಾಧನವಿಲ್ಲವೆಂಬುದನ್ನು ಶಾಸ್ತ್ರದಿಂದಲೂ ಆತ್ಮಾನುಭವದಿಂದಲೂ ಮನಗಂಡು ಭಕ್ತಿಯ ತತ್ತ್ವವನ್ನು ಸ್ವಲ್ಪದರಲ್ಲಿಯೇ ತಿಳಿಯಿಸಬೇಕೆಂದು ಆಚಾರ್ಯರಾದ ನಾರದರು ಈ ಭಕ್ತಿಸೂತ್ರಗಳ ಸಂಗ್ರಹರೂಪವಾದ ಶಾಸ್ತ್ರವನ್ನು ಆರಂಭಿಸಿರುತ್ತಾರೆ. ಈ ಶಾಸ್ತ್ರದ ಮೊದಲನೆಯ ಸೂತ್ರವಿದು :

## ೨. ಶಾಸ್ತ್ರಾರಂಭಪ್ರತಿಜ್ಞೆ

ಅಥಾತೋ ಭಕ್ತಿಂ ವ್ಯಾಖ್ಯಾಸ್ಯಾಮಃ ॥ ೧ ॥

೧. ಈಗ ಆದ್ದರಿಂದ ಭಕ್ತಿಯನ್ನು ವಿವರಿಸುವೆವು.

### ಅಥಶಬ್ದದ ಅರ್ಥ

೧. ಇಲ್ಲಿ 'ಅಥ' (ಇನ್ನು) ಎಂಬ ಶಬ್ದವು ಶಾಸ್ತ್ರದ ಪ್ರಾರಂಭವನ್ನು ಸೂಚಿಸುವದಕ್ಕೂ ಮಂಗಳವನ್ನು ಸೂಚಿಸುವದಕ್ಕೂ ಪ್ರಯುಕ್ತವಾಗಿರುತ್ತದೆ. ಸೂತ್ರಗಳ ಆರಂಭದಲ್ಲಿ 'ಅಥ', 'ಅತಃ'– ಎಂಬ ಶಬ್ದಗಳನ್ನು ಪ್ರಯೋಗಿಸುವದು ಆಸ್ತಿಕರ ಗ್ರಂಥಗಳಲ್ಲಿ ಸಂಪ್ರದಾಯಾಗತವಾಗಿರುತ್ತದೆ. ಭಕ್ತಿಯನ್ನು ವಿವರಿಸುವೆವು–ಎಂದು ಮಾಡಿರುವ ಪ್ರತಿಜ್ಞೆಯಿಂದಲೇ ಶಾಸ್ತ್ರದ ಆರಂಭವು ಸೂಚಿತವಾದಂತೆ ಆಗಿರುವದರಿಂದ ಇಲ್ಲಿ ಮುಖ್ಯವಾಗಿ ಮಂಗಲವನ್ನು ಹೇಳುವದಕ್ಕೇ ಈ ಶಬ್ದವನ್ನು ಪ್ರಯೋಗಿಸಿದೆ. ಮೃದಂಗ, ಕೊಳಲು, ಶಂಖ, ವೀಣೆ– ಮುಂತಾದ ಮಂಗಲ ವಾದ್ಯಗಳ ಶಬ್ದಮಾತ್ರವನ್ನು ಕೇಳುವದೇ ಮಂಗಲವೆಂದು ಆಸ್ತಿಕರು ಭಾವಿಸುವಂತೆಯೇ ಈ 'ಅಥ' ಎಂಬ ಶಬ್ದವನ್ನು ಬೇರೆಯ ಅರ್ಥದಲ್ಲಿ ಬಳಸಿರುವಾಗಲೂ ಇದು ಗ್ರಂಥದ ಆದಿಯಲ್ಲಿದ್ದಾಗ ಮಂಗಲಾರ್ಥಕವಾಗಿರುತ್ತದೆ.

**ಓಂಕಾರಶ್ಚಾಥಶಬ್ದಶ್ಚ ದ್ವಾವೇತೌ ಬ್ರಹ್ಮಣಃ ಪುರಾ ।**
**ಕಣ್ಠಂ ಭಿತ್ವಾ ವಿನಿರ್ಯಾತೌ ತಸ್ಮಾನ್ಮಾಙ್ಗಲಿಕಾವುಭೌ ॥**

ಎಂಬ ಸ್ಮೃತಿವಾಕ್ಯದಂತೆ ಓಂಕಾರವೂ ಅಥಶಬ್ದವೂ ಪೂರ್ವದಲ್ಲಿ ಬ್ರಹ್ಮದೇವರ ಕಂಠದಿಂದ ಹೊರಹೊಮ್ಮಿದ್ದರಿಂದ ಇವು ಮಂಗಲಸೂಚಕವೆಂದು ಆಸ್ತಿಕರೆಲ್ಲರೂ ಭಾವಿಸಿರುತ್ತಾರೆ. ಆದ್ದರಿಂದಲೇ ನಿರ್ವಿಘ್ನಪರಿಸಮಾಪ್ತಿಗೆಂದು ಅದನ್ನು ಪ್ರಯೋಗಿಸುವ ರೂಢಿಯುಂಟಾಗಿರುತ್ತದೆ.

ಭಕ್ತಿಶಾಸ್ತ್ರದಂಥ ಗ್ರಂಥಗಳಿಗೆ ವಿಘ್ನವೇ ಇಲ್ಲವಾದ್ದರಿಂದ ಇಲ್ಲಿ ಅಥಶಬ್ದವನ್ನು ಶಾಸ್ತ್ರವು ನಿರ್ವಿಘ್ನವಾಗಿ ಪರಿಸಮಾಪ್ತವಾಗಬೇಕೆಂಬ ಇಚ್ಛೆಯಿಂದ ನಾರದಋಷಿಗಳು ಪ್ರಯೋಗಿಸಿರುತ್ತಾರೆ ಎನ್ನುವಹಾಗೂ ಇಲ್ಲ. ಅದು ಹೇಗೆಂದರೆ :

**ಸರ್ವದಾ ಸರ್ವಕಾರ್ಯೇಷು ನಾಸ್ತಿ ತೇಷಾಮಮಂಗಲಮ್ ।**
**ಯೇಷಾಂ ಹೃದಿಸ್ಥೋ ಭಗವಾನ್ ಮಂಗಲಾಯತನಂ ಹರಿಃ ॥**

ಎಂಬ ಪುರಾಣವಾಕ್ಯದಂತೆ ಸರ್ವಮಂಗಲಗಳಿಗೂ ಆಶ್ರಯನಾಗಿರುವ ಶ್ರೀಹರಿಯು ಯಾರ ಹೃದಯದಲ್ಲಿ ಯಾವಾಗಲೂ ಇರುತ್ತಾನೋ ಅಂಥ ಭಕ್ತರಿಗೆ ಅಮಂಗಲ

ವಾಗುವಂತೆಯೇ ಇಲ್ಲ. ಆದರೂ ಗ್ರಂಥದ ಆದಿಯಲ್ಲಿ ಮಂಗಲವನ್ನು ಮಾಡ ಬೇಕೆಂಬ ಶಿಷ್ಟಾಚಾರವನ್ನು ಪರಿಪಾಲಿಸುವದಕ್ಕಾಗಿ, ಶ್ರೀಮನ್ನಾರಾಯಣನನ್ನು ನಿತ್ಯವೂ ಹೃದಯದಲ್ಲಿಟ್ಟುಕೊಂಡಿರುವ ನಾರದರು ಇಲ್ಲಿ ಅಥಶಬ್ದವನ್ನು ಮೊದಲು ಪ್ರಯೋಗಿಸಿರುತ್ತಾರೆ.

## ಅತಃಶಬ್ದದ ಅರ್ಥ

೨. 'ಅತಃ' (ಆದ್ದರಿಂದ) ಎಂಬುದು ಶಾಸ್ತ್ರದ ಪ್ರಯೋಜನವನ್ನು ಸೂಚಿಸುವದಕ್ಕಾಗಿ ಬಂದಿದೆ. ಲೋಕದಲ್ಲಿ ಜನರಿಗೆ ಪರಮಾನಂದಪ್ರಾಪ್ತಿಗೆ ಅಡ್ಡಿಯಾಗಿರುವದು ಯಾವದೆಂದರೆ ಸ್ವಭಾವದಿಂದಲೇ ಎಲ್ಲರಲ್ಲಿಯೂ ಇದ್ದುಕೊಂಡಿರುವ **ಅಹಂಕಾರವು.** ಈ ಅಹಂಕಾರವು ಲೌಕಿಕವ್ಯವಹಾರಗಳಿಂದ ಉಬ್ಬಿಕೊಂಡು ಬಲ, ದರ್ಪ, ಕಾಮ, ಕ್ರೋಧ- ಮುಂತಾದ ರೂಪಗಳನ್ನು ತಳೆಯುತ್ತಿರುವದು. ಈ ಅಹಂಕಾರವನ್ನು ಮಟ್ಟುಮಾಡುವದಕ್ಕೆ ಭಕ್ತಿಯೊಂದಲ್ಲದೆ ಮತ್ತೆಯಾವದೂ ಸಾಧನವಾಗಲಾರದು. ಲೌಕಿಕವ್ಯವಹಾರಕ್ಕೆ ಕಾಮವೂ ಕಾಮಕ್ಕೆ ಅವಿದ್ಯೆಯಿಂದಾಗಿರುವ ಅಹಂಕಾರವೂ ಕಾರಣವಾಗಿರುವವು. ಯಾವನಿಗೆ ಭಕ್ತಿಯುಂಟಾಗುವದೋ ಅವನಿಗೆ ವಿಷಯಗಳಲ್ಲಿ ವಿರಕ್ತಿಯುಂಟಾಗಿ ಅಹಂಕಾರವು ಬೆಳೆಯುವದಕ್ಕೆ ಅಡ್ಡಿಯಾಗುವದು.

ಭಕ್ತಿಃ ಪರೇಶಾನುಭವೋ ವಿರಕ್ತಿ-
ರನ್ಯತ್ರ ಚೈಷ ತ್ರಿಕ ಏಕಕಾಲಃ ।
ಪ್ರಪದ್ಯಮಾನಸ್ಯ ಯಥಾಶ್ನತಃ ಸ್ಯು-
ಸ್ತುಷ್ಟಿಃ ಪುಷ್ಟಿಃ ಕ್ಷುದಪಾಯೋಽನುಘಾಸಮ್ ॥

ಭಾಗ ೧೧-೨-೪೨

ಎಂದಿರುವಂತೆ ಭಗವಂತನನ್ನು ಶರಣುಹೊಕ್ಕವನಿಗೆ ಭಕ್ತಿ, ಪರಮಾತ್ಮಾನುಭವ, ವಿಷಯವಿರಾಗ- ಈ ಮೂರೂ ಒಮ್ಮೆಗೇ ಆಗುವದರಿಂದ ಅಹಂಕಾರವು ತಗ್ಗಿ ಪರಮಾನಂದಪ್ರಾಪ್ತಿಯು ನಿರ್ವಿಘ್ನವಾಗಿ ಉಂಟಾಗುವದು. ಆದ್ದರಿಂದ ಸಂಸಾರಿಗಳಿಗೆ ಪರಮಪುರುಷಾರ್ಥವು ಪ್ರಾಪ್ತಿಯಾಗಲೆಂಬ ಪ್ರಯೋಜನಕ್ಕಾಗಿ ಈ ಶಾಸ್ತ್ರವನ್ನು ಆರಂಭಿಸಿರುತ್ತೇವೆ ಎಂದರ್ಥ.

೩. ಪರಮಾನಂದಪ್ರಾಪ್ತಿಯೇ ನಿಜವಾಗಿ ಎಲ್ಲರೂ ಇಚ್ಛಿಸುವ ಪ್ರಯೋಜನವಾಗಿರುತ್ತದೆಯಾದರೂ ಆ ಆನಂದದ ಸ್ವರೂಪವು ಯಾವದು ?-ಎಂಬುದನ್ನು ತಿಳಿಯದೆ ಜನರು ವಿಷಯಗಳ ಭೋಗದಿಂದಲೇ ಆನಂದವು ತಮಗೆ ಸಿಕ್ಕುವದೆಂಬ ಭ್ರಾಂತಿಗೆ ಒಳಗಾಗಿರುತ್ತಾರೆ. ಆದರೆ ತತ್ತ್ವವೇನೆಂದರೆ ಆನಂದವೆಂದರೂ ಪರಮಾರ್ಥತತ್ತ್ವವಾದ ಬ್ರಹ್ಮವೆಂದರೂ ಒಂದೇ. ಭಗವಂತನೇ ಪರಮಾರ್ಥತತ್ತ್ವವು, ಅವನಿಗಿಂತ ಬೇರೆಯಾಗಿ ಯಾವದೊಂದೂ ಇರುವದೇಇಲ್ಲ.

आनन्दो ब्रह्मेति व्यजानात् । आनन्दाद्ध्येव खल्विमानि भूतानि जायन्ते । आनन्देन जातानि जीवन्ति । आनन्दं प्रयन्त्यभिसंविशन्तीति ॥ —तै. ३-६.

ಭೃಗುವೆಂಬಾತನು ತಂದೆಯ ಬಳಿಗೆ ಹೋಗಿ 'ಪರಮಾರ್ಥತತ್ತ್ವವಾದ ಬ್ರಹ್ಮವು ಯಾವದು ? ಅದನ್ನು ನನಗೆ ಹೇಳಿಕೊಡಬೇಕು'- ಎಂದು ಕೇಳಿಕೊಳ್ಳ ಲಾಗಿ ಯಾವದರಿಂದಲೇ ಎಲ್ಲಾ ಪ್ರಾಣಿಗಳೂ ಹುಟ್ಟುವವೋ, ಯಾವದರಲ್ಲಿಯೇ ಜೀವಿಸಿಕೊಂಡಿರುವವೋ, ಕೊನೆಗೆ ಯಾವದರಲ್ಲಿಯೇ ಹೋಗಿ ಸೇರಿಕೊಳ್ಳುವವೋ ಅದೇ ಬ್ರಹ್ಮವು-ಎಂದು ತಂದೆಯಾದ ವರುಣನು ಹೇಳಿದನು. ಭೃಗುವು ತನ್ನೊಳಗೇ ತಾನು ಆಲೋಚನೆಮಾಡಿ ಕೊನೆಗೆ ಮಾಡಿಕೊಂಡ ನಿರ್ಣಯವೇನೆಂದರೆ ಈ ಜಗತ್ತಿಗೆಲ್ಲ ಆನಂದನೇ ಆತ್ಮನು ; ಆನಂದದಿಂದಲೇ ಹುಟ್ಟಿ, ಅದರಲ್ಲಿಯೇ ಜೀವಿಸಿ ಕೊಂಡಿದ್ದು ಕೊನೆಗೆ ಅದರಲ್ಲಿಯೇ ಈ ಎಲ್ಲಾ ಪ್ರಾಣಿಗಳೂ ಐಕ್ಯವಾಗುತ್ತಿರುವವು. ಆದ್ದರಿಂದ ಸರಿಯಾಗಿ ನೋಡಿದರೆ ಆನಂದವನ್ನು ನಾವು ಹೊಸದಾಗಿ ಪಡೆದು ಕೊಳ್ಳಬೇಕಾದ್ದಿರುವದಿಲ್ಲ. ನಾವು ತಿಳಿವಳಿಕೆಯಿಲ್ಲದೆ ಅನಾದಿಕಾಲದಿಂದಲೂ ಹಾಕಿಕೊಂಡಿರುವ **ಅಹಂಕಾರ** (ನಾನು) ಎಂಬ ಬುರುಕಿಯನ್ನು ತೆಗೆದುಹಾಕಿದರೆ ಆ ಭಗವಂತನು ನಮ್ಮ ಸ್ವರೂಪವೇ ಆಗಿರುತ್ತಾನೆಂಬ ತತ್ತ್ವವು ಮನಸ್ಸಿನಲ್ಲಿ ಮಿಂಚೀತು. ಇದಕ್ಕೆ ವಿಷಯಗಳಲ್ಲಿರುವ ಆಸಕ್ತಿಯು ಹೋಗಬೇಕು; ಭಗವಂತ ನಲ್ಲಿ ಪ್ರೇಮವು ಮೂಡಿಕೊಳ್ಳಬೇಕು. ಅಹಂಕಾರವನ್ನು ಭಕ್ತಿಯಿಂದ ತೊಲ ಗಿಸಿಕೊಂಡರೆ ನಮ್ಮ ಅಲ್ಪತನವು ಗೊತ್ತಾಗುವದು ; ತುಚ್ಛವಾದ ವಿಷಯಗಳಲ್ಲಿ ತೋರುವ ಅಲ್ಪಸುಖವು ನಿಜವಾಗಿ ಸುಖವೇ ಅಲ್ಲವೆಂದೂ ಭಗವತ್ಸ್ವರೂಪವೇ ನಿಜವಾದ ಆನಂದವೆಂದೂ ಮನದಟ್ಟಾಗುವದು.

यत्र नान्यत्पश्यति नान्यच्छृणोति नान्यद्विजानाति स भूमाथ यत्रान्यत्पश्यत्यन्यच्छृणोत्यन्यद्विजानाति तदल्पं यो वै भूमा तदमृतमथ यदल्पं तन्मर्त्यम् ॥
—ಛಾಂ. ೭-೨೪-೧.

"ಎಲ್ಲಿ ಮತ್ತೊಂದನ್ನು ಕಾಣುವದಿಲ್ಲವೋ ಮತ್ತೊಂದನ್ನು ಕೇಳುವದಿಲ್ಲವೋ ಮತ್ತೊಂದನ್ನರಿಯುವದಿಲ್ಲವೋ ಅದೇ ಭೂಮವು ; ಇನ್ನು ಎಲ್ಲಿ ಮತ್ತೊಂದನ್ನು ಕಾಣುವನೋ ಮತ್ತೊಂದನ್ನು ಕೇಳುವನೋ ಮತ್ತೊಂದನ್ನು ಅರಿಯುವನೋ ಅದು ಅಲ್ಪವು. ಯಾವದು ಭೂಮವೋ ಅದೇ ಅಮೃತವು, ಇನ್ನು ಯಾವದು ಅಲ್ಪವೋ ಅದು ಮರ್ತ್ಯವು" (ಛಾಂ. ೭-೨೪-೧).

ಎಂಬ ಉಪನಿಷದ್ವಾಕ್ಯದಂತೆ ನಿಜವಾಗಿ ಭೂಮನಾಮಕನಾದ ಭಗವಂತನೇ ಎಲ್ಲೆಲ್ಲಿಯೂ ಇರುವನು ; ಆದರೂ ಸಂಸಾರಿಗಳು ಅಲ್ಪದೃಷ್ಟಿಯಿಂದ ಅಲ್ಪವಾದ

ವಿಷಯಗಳನ್ನು ಕಂಡು ಅವುಗಳ ಭೋಗದಿಂದ ಅಲ್ಪವಾದ ಸುಖಾಭಾಸವನ್ನು ಪಡೆದು ಸಂಸಾರದಲ್ಲಿ ತೊಳಲುತ್ತಿರುವರು. ಪರಮಾನಂದರೂಪನಾದ ಭಗವಂತ ನನ್ನು ಕಂಡುಕೊಂಡಾಗ **'ಸಕಲಮಿದಮಹಂ ಚ ವಾಸುದೇವಃ'** ಇದೆಲ್ಲವೂ ನಾನೂ ವಾಸುದೇವನೇ -ಎಂದು ಕಂಡುಕೊಳ್ಳುವರು. ಹೀಗೆ ಕಾಣದೆ ಇರುವದಕ್ಕೆ ಈಗ ಅಹಂಕಾರವೇ ಅಡ್ಡಿಯಾಗಿರುವದರಿಂದ ಅದನ್ನು ತೊಲಗಿಸುವದೇ ಭಕ್ತಿಯ ಪರಮಪ್ರಯೋಜನವಾಗಿರುತ್ತದೆ. ಇದನ್ನೇ ಇಲ್ಲಿ **'ಅತಃ'** ಎಂಬ ಶಬ್ದದಿಂದ ಭಕ್ತ್ಯಾಚಾರ್ಯರು ಸೂಚಿಸಿರುತ್ತಾರೆ.

### 'ವ್ಯಾಖ್ಯಾಸ್ಯಾಮಃ' ಎಂಬುದರ ಅರ್ಥ

೪. **'ವ್ಯಾಖ್ಯಾಸ್ಯಾಮಃ'** ಎಂಬ ಮಾತಿನಲ್ಲಿ ವಿ (ವಿಸ್ಪಷ್ಟವಾಗಿ) ಆ (ಎಲ್ಲಾ ಪ್ರಕಾರದಿಂದಲೂ) ಖ್ಯಾಸ್ಯಾಮಃ (ಬಿಡಿಸಿ ತಿಳಿಯಹೇಳುವೆವು)- ಎಂಬ ಮೂರು ಅವಯವಗಳಿವೆ. ಭಕ್ತಿಯೆಂದರೇನು ? -ಎಂಬುದನ್ನು ಸ್ಪಷ್ಟವಾಗಿ ತಿಳಿಯಹೇಳದಿದ್ದರೆ ಅದು ಲೌಕಿಕವಾದ ಪ್ರೇಮಗಳಂತೆಯೇ ಇರುವ ಒಂದಾ ನೊಂದು ಭಾವವೆಂಸು ತಪ್ಪಾಗಿ ಭಾವಿಸಿಕೊಳ್ಳುವ ಅಪಾಯವಿದೆ. ಅದರ ಲಕ್ಷಣವು ಯಾವದು ? ಅದು ಯಾವಯಾವ ರೂಪದಿಂದ ಕಾಣಿಸಿಕೊಳ್ಳುವದು ? ಅದರ ಅಭಿವ್ಯಕ್ತಿಗೆ ಸಾಧನವಾದ ಕಾರಣಗಳು ಯಾವವು ? ಅದರ ಫಲವು ಹೇಗೆ ಮನಸ್ಸಿಗೆ ತಟ್ಟುವದು ? ಭಕ್ತರ ಲಕ್ಷಣಗಳೇನು ?- ಎಂಬಿವೇ ಮುಂತಾದ ಎಲ್ಲಾ ವಿವರಗಳನ್ನೂ ಚೆನ್ನಾಗಿ ನೋಡಿ ತಿಳಿಸುವೆವು- ಎಂಬ ಭಾವವು 'ಆ' ಎಂಬ ಅವಯವದಲ್ಲಿ ಅಡಕವಾಗಿರುತ್ತದೆ.

ಹೀಗೆ ಈ ಪ್ರತಿಜ್ಞಾಸೂತ್ರದಲ್ಲಿ ಶಾಸ್ತ್ರದ ವಿಷಯವಾದ ಭಕ್ತಿ, ಅದರಿಂದಾ ಗುವ ಪ್ರಯೋಜನ- ಇವೆರಡನ್ನೂ ಸ್ಪಷ್ಟವಾಗಿ ಸೂಚಿಸಿದಂತೆ ಆಗಿರುತ್ತದೆ.

## ೩. ಭಕ್ತಿಯ ಸ್ವರೂಪಲಕ್ಷಣ

೫. 'ಭಕ್ತಿಯನ್ನು ವಿವರಿಸುವೆವು' ಎಂದು ಹೇಳಿದೆಯಷ್ಟೆ ? ಭಕ್ತಿಯ ಲಕ್ಷಣವೇನು ? ಎಂಬುದನ್ನು ಈಗ ಹೇಳುತ್ತಾರೆ :

ಸಾ ತ್ವಸ್ಮಿನ್ ಪರಮಪ್ರೇಮರೂಪಾ ॥ ೨ ॥

೨. ಅದಾದರೋ ಈತನಲ್ಲಿ ಮಿಗಿಲಿಲ್ಲದ ಪ್ರೇಮದ ರೂಪ ವಾಗಿರುತ್ತದೆ.

### ಸೂತ್ರದಲ್ಲಿರುವ ಸರ್ವನಾಮಗಳ ಅರ್ಥ

೬. 'ಸಾ' (ಅದು) ಎಂದರೆ ಭಕ್ತಿ. ಸರ್ವನಾಮಶಬ್ದಗಳಿಗೆ ಪ್ರಕೃತ ವಾಗಿರುವ ವಸ್ತುವನ್ನು ಪರಾಮರ್ಶಿಸುವದೊಂದು ಕೆಲಸ. ಇಲ್ಲಿ ಪ್ರತಿಜ್ಞಾಸೂತ್ರ

ದಲ್ಲಿ ಭಕ್ತಿಯನ್ನು ವಿವರಿಸುವೆವು– ಎಂದು ಪ್ರತಿಜ್ಞೆಮಾಡಿರುವದರಿಂದ ಭಕ್ತಿಯೇ ಪ್ರಕೃತವಾಗಿದೆ. ಆದ್ದರಿಂದ 'ಅದು' ಎಂಬ ಸರ್ವನಾಮಕ್ಕೆ ಭಕ್ತಿಯೇ ಅರ್ಥ.

ಆದರೆ 'ಅಸ್ಮಿನ್'[1] (ಈತನಲ್ಲಿ) ಎಂಬ ಸರ್ವನಾಮದ ವಿಷಯವು ಹಾಗಲ್ಲ ; ಏಕೆಂದರೆ 'ಈತನು' ಎಂಬುದು ಯಾವ ಪ್ರಕೃತನಾದ ಪುರುಷನನ್ನೂ ಹೇಳುವದಿಲ್ಲ. 'ಇದು' ಎಂಬುದು ಹತ್ತಿರವಿರುವದನ್ನೂ 'ಅದು' ಎಂಬುದು ದೂರವಿರುವ ವಸ್ತುವನ್ನೂ ಹೇಳುವವೆಂಬುದು ಸ್ವಭಾವ. ಆದರೆ ಇಲ್ಲಿ ದೂರವಿರುವ ಯಾವ ವಸ್ತುವನ್ನೂ ಪರಾಮರ್ಶಿಸದೆ ಇದ್ದರೂ 'ಈತನು' ಎಂದು ಹೇಳಿರುವದರಿಂದ ಈ ಶಬ್ದವನ್ನು ಇಲ್ಲಿ ಪ್ರಸಿದ್ಧವಾದ ಅರ್ಥವನ್ನು ತಿಳಿಯಿಸುವದಕ್ಕೆ ಪ್ರಯೋಗಿಸಿದೆ ಎಂದು ಭಾವಿಸಬೇಕಾಗಿದೆ. ಪರಮಾತ್ಮನು ಎಲ್ಲಕ್ಕಿಂತಲೂ ಒಳಗಿರುವ ಆತ್ಮನೆಂದೂ ಎಲ್ಲವನ್ನೂ ವ್ಯಾಪಿಸಿಕೊಂಡಿರುವ ಅಪರೋಕ್ಷವಾಗಿರುವ ನಿರತಿಶಯತತ್ತ್ವವೆಂದೂ ಶ್ರುತಿಸ್ಮೃತಿಗಳಲ್ಲಿ ಪ್ರಸಿದ್ಧವಾಗಿರುತ್ತದೆ. ಅನುಭವಿಗಳಾದ ಭಕ್ತರಿಗೂ ಹೀಗೆಂಬುದು ಸುಪ್ರಸಿದ್ಧವಾಗಿರುತ್ತದೆ.

'**यत्साक्षादपरोक्षाद् ब्रह्म य आत्मा सर्वान्तरः**' (ಬೃ. ೩–೪–೧) ಎಂಬ ಉಪನಿಷದ್ವಾಕ್ಯದಲ್ಲಿ ಬ್ರಹ್ಮವೆಂಬ ಶಬ್ದಕ್ಕೆ ನೇರವಾದ ಮುಖ್ಯಾರ್ಥವಾಗಿರುವ ತತ್ತ್ವವೂ ಎಂದಿಗೂ ದೇಶಕಾಲವಸ್ತುಗಳ ಮರೆಯಿಲ್ಲದೆ ಇರುವದರಿಂದ 'ಅಪರೋಕ್ಷ'ವೆನಿಸಿಕೊಂಡಿರುವ ತತ್ತ್ವವೂ, ಭಗವಂತನು– ಎಂದು ಹೇಳಿರುತ್ತದೆ. ಇದಲ್ಲದೆ ಅದೇ ಭಗವಂತನು ನಮ್ಮೆಲ್ಲರ ಆತ್ಮನಾಗಿರುತ್ತಾನೆ. ಆತ್ಮನೆಂದರೆ ತಾನು, ತನ್ನ ಸ್ವರೂಪವೇ ಆಗಿರುವ ವಸ್ತು. ತೀರ ಅಜ್ಞರಾದವರು ಹೆಂಡತಿ, ಮಕ್ಕಳು, ಮನೆಮಠಗಳಲ್ಲಿಕೂಡ ತಾವೆಂಬ ಉತ್ಕಟವಾದ ಅಭಿಮಾನವನ್ನು ಮಾಡಿಕೊಂಡಿರುತ್ತಾರೆ. ಸಾಮಾನ್ಯಜನರೇ ಅಲ್ಲದೆ, ವಿವೇಕಿಗಳಾದವರಿಗೂ ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ– ಇವುಗಳಲ್ಲಿ 'ನಾನು' ಎಂಬ ಬುದ್ಧಿಯು ಇರುತ್ತದೆ. 'ನಾನು ಬಂದನು', 'ನಾನು ಕಾಣುತ್ತಿದೇನೆ', 'ನಾನು ಬದುಕಿದೇನೆ', 'ನನಗೆ ಹಸಿವು ಆಗಿದೆ', 'ನನಗೆ ಸಿಟ್ಟು ಬಂದಿದೆ', 'ನನಗೆ ಹಾಗೆ ತೋರುತ್ತದೆ', 'ಇದೇ ನನ್ನ ನಿಶ್ಚಯ' ಎಂದು ತನಗಿಂತ ಬೇರೆಯಾದ ವಸ್ತುಗಳಲ್ಲಿಯೂ 'ನಾನು' ಎಂಬ ಪ್ರತ್ಯಯವೂ 'ನಾನು' ಎಂಬ ಶಬ್ದದ ಪ್ರಯೋಗವೂ ಆಗುತ್ತಿರುತ್ತವೆ. ಶಾಸ್ತ್ರದೃಷ್ಟಿಯಿಂದ ಭಗವಂತನು ಇವೆಲ್ಲವನ್ನೂ ಮೀರಿ ಕರ್ತೃಭೋಕ್ತೃವಾಗಿರುವ ಜೀವನಿಗಿಂತಲೂ ಒಳಗಿದ್ದು ಎಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ ಮತ್ತು ಕಲ್ಪಿತವಾಗಿರುವ ಹೊರಗಿನ ಆತ್ಮರುಗಳಿಗಿಂತ ನಿಜವಾದ ಆತ್ಮನಾಗಿರುವದರಿಂದ ಅವನನ್ನು

---

1. 'ಅಸ್ಮಿನ್' ಎಂಬುದಕ್ಕೆ ಬದಲು 'ಕಸ್ಮೈ' ಎಂಬ ಪಾಠಾಂತರವು ಕೆಲವು ಕಡೆಗಳಲ್ಲಿದೆ ; ಅದಕ್ಕಿಂತ 'ಅಸ್ಮಿನ್' ಎಂಬ ಪ್ರಸಿದ್ಧಪಾಠದಲ್ಲಿಯೇ ಹೆಚ್ಚಿನ ಅರ್ಥಸ್ವಾರಸ್ಯವಿದೆ ಎಂಬುದು ಮುಂದಿನ ವಿವರಣೆಯಿಂದ ಗೊತ್ತಾಗುವದು.

**'ಪರಮಾತ್ಮ'** ಎಂದು ಕರೆಯುತ್ತಾರೆ. ಆದ್ದರಿಂದ ಉಪನಿಷತ್ತು 'ಇವನು ಸರ್ವಾಂತರನಾದ ಆತ್ಮನು' ಎಂದು ಕರೆಯುತ್ತಿದೆ.

ಇದರಂತೆ **ಆಪಸ್ತಂಬಸ್ಮೃತಿ**ಯೇ ಮುಂತಾದ ಸ್ಮೃತಿಗಳಲ್ಲಿಯೂ ಭಗವಂತನೇ ನಮ್ಮೆಲ್ಲರಿಗೂ ನಿಜವಾದ ಆತ್ಮನೆಂದು ಹೇಳಿರುತ್ತದೆ. ಉದಾಹರಣೆಗೆ : **'ಪೂಃ ಪ್ರಾಣಿನಃ ಸರ್ವ ಏವ ಗುಹಾಶಯಸ್ಯ'** (ಆ. ಧ. ೧-೨೨-೪) ಎಲ್ಲಾ ಪ್ರಾಣಿಗಳೂ ಗುಹಾಶಯನಾದ ಪರಮಾತ್ಮನಿಗೆ ಪುರವಾಗಿರುತ್ತವೆ ; **'ಆತ್ಮಲಾಭಾನ್ನ ಪರಂ ವಿದ್ಯತೇ'** (ಆ. ಧ. ೧-೨೨-೨). ಆತ್ಮನನ್ನು ಪಡೆದುಕೊಳ್ಳುವದಕ್ಕಿಂತ ಹೆಚ್ಚಿನ ಲಾಭವಿಲ್ಲ- ಎಂಬ ಸ್ಮೃತಿಗಳಲ್ಲಿ ಭಗವಂತನನ್ನು ಆತ್ಮನೆಂದು ಕರೆದಿರುತ್ತದೆ. ಇದರಂತೆ :

**ಆತ್ಮಾ ಕ್ಷೇತ್ರಜ್ಞ ಇತ್ಯುಕ್ತಃ ಸಂಯುಕ್ತಃ ಪ್ರಾಕೃತೈರ್ಗುಣೈಃ ।**
**ತೈರೇವ ತು ವಿನಿರ್ಮುಕ್ತಃ ಪರಮಾತ್ಮೇತ್ಯುದಾಹೃತಃ ॥**

ಪ್ರಕೃತಿಗುಣಗಳಿಂದ ಕೂಡಿದ ಆತ್ಮನನ್ನು ಕ್ಷೇತ್ರಜ್ಞನೆನ್ನುವರು, ಅದೇ ಗುಣಗಳಿಂದ ಬಿಡಲ್ಪಟ್ಟಿರುವವನನ್ನು ಪರಮಾತ್ಮನೆನ್ನುವರು ; **'ಮಮಾನ್ತರಾತ್ಮಾ ತವ ಚ ಯೇ ಚಾನ್ಯೇ ದೇಹಸಂಸ್ಥಿತಾಃ'** (ಮೋ. ಧ. ೩೫೧-೪) ನನಗೂ ನಿನಗೂ ದೇಹಿಗಳೆಂದು ತಿಳಿದುಕೊಂಡಿರುವ ಮಿಕ್ಕೆಲ್ಲರಿಗೂ ನಿಜವಾಗಿ ಒಳಗಿರುವ ಆತ್ಮನೇ ಪರಮಾತ್ಮನು- ಎಂದು ಭಾರತದಲ್ಲಿ ಹೇಳಿರುತ್ತದೆ. ಹೀಗೆಯೇ **ವಿಷ್ಣು ಪುರಾಣದಲ್ಲಿ**-

**ವಿಸ್ತಾರಃ ಸರ್ವಭೂತಸ್ಯ ವಿಷ್ಣೋಃ ಸರ್ವಮಿದಂ ಜಗತ್ ।**
**ದ್ರಷ್ಟವ್ಯಮಾತ್ಮವತ್ತಸ್ಮಾದಭೇದೇನ ವಿಚಕ್ಷಣೈಃ ॥** ವಿ.ಪು. ೧-೧೭-೮೪

ಈ ಜಗತ್ತೆಲ್ಲವೂ ಸರ್ವಭೂತರೂಪನಾಗಿರುವ ವಿಷ್ಣುವಿನ ವಿಭೂತಿಯಾಗಿರುತ್ತದೆ. ಆದ್ದರಿಂದ ವಿವೇಕಿಗಳಾದವರು ಇದನ್ನು ತಮ್ಮ ಆತ್ಮನಂತೆಯೇ ಅಭೇದದಿಂದ ಕಾಣತಕ್ಕದ್ದು- ಎಂದು ಪ್ರಹ್ಲಾದನು ನುಡಿದಿರುತ್ತಾನೆ.

**ಏಕಃ ಸಮಸ್ತಂ ಯದಿಹಾಸ್ತಿ ಕಿಂಚಿತ್**
**ತದಚ್ಯುತೋ ನಾಸ್ತಿ ಪರಂ ತತೋಽನ್ಯತ್ ।**
**ಸೋಽಹಂ ಸ ಚ ತ್ವಂ ಸ ಚ ಸರ್ವಮೇತ-**
**ದಾತ್ಮಸ್ವರೂಪಂ ತ್ಯಜ ಭೇದಮೋಹಮ್ ॥**

ವಿ. ಪು. ೨-೧೬-೨೩

'ಇಲ್ಲಿರುವದು ಏನೇನಿದೆಯೋ ಅದೆಲ್ಲವೂ ಒಬ್ಬ ಪರಮಾತ್ಮನೇ, ಅದೇ ಆ ಅಚ್ಯುತನು; ಆತನಿಗಿಂತ ಬೇರೆ ಯಾವದೊಂದೂ ಇರುವದೇಇಲ್ಲ. ಆತನೇ ನಾನು, ಆತನೇ ನೀನು, ಮತ್ತು ಆತನೇ ಇದೆಲ್ಲವೂ, ಎಲ್ಲವೂ ಆತ್ಮಸ್ವರೂಪವಾಗಿರುತ್ತದೆ ; ಭೇದಮೋಹವನ್ನು ಬಿಟ್ಟುಬಿಡು-ಎಂದು **ನಿದಾಘನು** ಹೇಳಿರುತ್ತಾನೆ.

ಹೀಗೆ ಶ್ರುತಿಸ್ಮೃತಿಪುರಾಣಗಳಲ್ಲಿ ಒಬ್ಬ ಭಗವಂತನೇ ಎಲ್ಲೆಲ್ಲಿಯೂ ಎಲ್ಲಕ್ಕೂ ಆತ್ಮನಾಗಿರುತ್ತಾನೆಂದು ಪ್ರಸಿದ್ಧವಾಗಿರುವದರಿಂದ ಈ ಶಾಸ್ತ್ರಪ್ರಸಿದ್ಧಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಇಲ್ಲಿ ನಾರದರ್ಷಿಗಳು 'ಅಸ್ಮಿನ್' (ಈತನಲ್ಲಿ) ಎಂಬ ಸರ್ವನಾಮುವನ್ನು ಬಳಸಿರುತ್ತಾರೆಂದು ತಿಳಿಯಬೇಕು.

## ಅಸ್ಮಿನ್ 'ಈತನಲ್ಲಿ' –ಎಂಬ ಸರ್ವನಾಮುವನ್ನೇ ಆರಿಸಿಕೊಂಡಿರುವದೇಕೆ ?

೭. ಶಾಸ್ತ್ರಪ್ರಸಿದ್ಧಿಯನ್ನು ಅನುಸರಿಸಿದ್ದು ಯುಕ್ತವಾಗಬಹುದಾದರೂ 'ಪರಮಾತ್ಮನಲ್ಲಿ', 'ಪರಮೇಶ್ವರನಲ್ಲಿ', 'ಭಗವಂತನಲ್ಲಿ'– ಎಂಬ ಯಾವದಾದರೊಂದು ಶಾಸ್ತ್ರೀಯಶಬ್ದವನ್ನೇ ಏತಕ್ಕೆ ಪ್ರಯೋಗಿಸಿಬಿಡಬಾರದು?– ಎಂದರೆ ಇಲ್ಲಿ ಈ ಸರ್ವನಾಮುವನ್ನು ಆರಿಸಿರುವದೇ ಯುಕ್ತವಾಗಿರುತ್ತದೆ. ಏಕೆಂದರೆ **ಸರ್ವನಾಮುವು** ಎಲ್ಲಕ್ಕೂ ಹೆಸರು ; ಭಗವಂತನೇ ಎಲ್ಲವೂ ಆಗಿರುತ್ತಾನೆ.

ಪರಮಾತ್ಮನಿಗೆ ಸಗುಣ, ನಿರ್ಗುಣ; ಸಾಕಾರ, ನಿರಾಕಾರ– ಹೀಗೆ ಬೇರೆ ಬೇರೆಯ ರೂಪಗಳುಂಟು. ಈ ರೂಪಗಳನ್ನು ಕುರುಹಿಡುವದಕ್ಕೆ ಸತ್ಯ, ಜ್ಞಾನ, ಆನಂದ, ನಿತ್ಯಶುದ್ಧಬುದ್ಧಮುಕ್ತ, ಅಕ್ಷರ, ಬ್ರಹ್ಮ, ಪರಮೇಶ್ವರ, ವಿಷ್ಣು, ಶಿವ, ಶಕ್ತಿ, ಗಣೇಶ, ಸವಿತೃ– ಮುಂತಾದ ಸಾವಿರಾರು ಹೆಸರುಗಳನ್ನು ಶ್ರುತಿಸ್ಮೃತಿಪುರಾಣಗಳಲ್ಲಿ ಕಲ್ಪಿಸಿರುತ್ತದೆ ; ಇವುಗಳಲ್ಲಿ ಒಂದೊಂದು ಸಂಜ್ಞೆಯೂ ಒಂದೊಂದು ವಿಶೇಷಾರ್ಥವನ್ನೇ ತಟ್ಟನೆ ಸ್ಫೂರ್ತಿಗೆ ತರುತ್ತದೆ. ಹೇಗೆಂದರೆ '**ಸತ್ಯ**'ವೆಂದರೆ ತನ್ನ ಸ್ವರೂಪವನ್ನು ಯಾನಾಗಲೂ ಮಾರ್ಪಡಿಸಿಕೊಳ್ಳದೆ ಒಂದೇ ರೂಪದಲ್ಲಿರುವದು ; '**ಜ್ಞಾನ**' ಎಂದರೆ ಎಂದಿಗೂ ಮಾರ್ಪಡದ ಚೈತನ್ಯಸ್ವರೂಪ ; '**ಆನಂದ**' ಎಂದರೆ ಸಮೃದ್ಧವಾಗಿರುವ ಸುಖ ; '**ನಿತ್ಯಶುದ್ಧಬುದ್ಧಮುಕ್ತ**' ಎಂದರೆ ಯಾವಾಗಲೂ ಮತ್ತೊಂದು ಕಲ್ಮಷದ ಸಂಬಂಧವಿಲ್ಲದ ಎಂದೆಂದಿಗೂ ಸರ್ವಜ್ಞಸ್ವರೂಪವಾದ, ಎಂದೆಂದಿಗೂ ಯಾವದೊಂದರ ಕಟ್ಟುಪಾಡೂ ಇಲ್ಲದ್ದು ; '**ಅಕ್ಷರ**' ಎಂದರೆ ನಾಶರಹಿತವಾದದ್ದು ; '**ಬ್ರಹ್ಮ**' ಎಂದರೆ ಎಲ್ಲಾ ಬಗೆಯಿಂದಲೂ ಎಲ್ಲಕ್ಕೂ ದೊಡ್ಡದಾಗಿರತಕ್ಕದ್ದು ; '**ಪರಮೇಶ್ವರ**' ಎಂದರೆ ಸ್ವತಂತ್ರವಾಗಿ ಆಳುವವರಲ್ಲೆಲ್ಲರಿಗಿಂತಲೂ ಹೆಚ್ಚಿನ ಈಶ್ವರ; '**ವಿಷ್ಣು**' ಎಂದರೆ ಎಲ್ಲವನ್ನೂ ವ್ಯಾಪಿಸಿಕೊಂಡವನು, '**ಶಿವ**' ಎಂದರೆ ಮಂಗಲಸ್ವರೂಪನು ; '**ಶಕ್ತಿ**' ಎಂದರೆ ಬಲದ ಮುದ್ದೆಯಾಗಿರುವ ದೇವತೆ ; '**ಗಣೇಶ**' ಎಂದರೆ ಕಾರ್ಯಕರಣಸಮೂಹಗಳುಳ್ಳವರ ಗುಂಪಿಗೆ ಒಡೆಯನು ; '**ಸವಿತೃ**' ಎಂದರೆ ಜಗತ್ತನ್ನೂ ಜೀವರ ಕರ್ಮಫಲಗಳನ್ನೂ ಸೃಷ್ಟಿಮಾಡುವಾತನು. ಹೀಗೆ ಒಂದೊಂದು ಹೆಸರಿಗೂ ಒಂದೊಂದು ಅರ್ಥವೇ ತೋರುತ್ತಿರುವದರಿಂದ 'ಸರ್ವನಾಮು'ವಾದ ಈತನು ಎಂಬ ಹೆಸರು ಎಂಬುದು ಈ ಎಲ್ಲಾ ಹೆಸರುಗಳ ಅರ್ಥವನ್ನೂ ತನ್ನಲ್ಲಿ ಅಡಕಮಾಡಿಕೊಂಡಿರುವದಾದ್ದರಿಂದ ಇದನ್ನು ಆರಿಸಿಕೊಂಡದ್ದೇ ಯುಕ್ತವಾಗಿದೆ.

ಇನ್ನು ಮಿಕ್ಕ ಸರ್ವನಾಮಗಳಿಗಿಂತಲೂ ಈ ಸರ್ವನಾಮವನ್ನೇ ಆರಿಸಿಕೊಂಡಿರುವದರಲ್ಲಿ ಔಚಿತ್ಯವೇನಿದೆ ?– ಎಂದರೆ ಅದಕ್ಕೂ ಕಾರಣವಿದೆ. 'ಇದು' ಎಂಬ ಸರ್ವನಾಮವು ನಾವು ಮೊದಲೇ ತಿಳಿಸಿರುವಂತೆ ಪ್ರಸಿದ್ಧವಾಚಕವಾಗಿ ಶಾಸ್ತ್ರದಲ್ಲಿ '**अयमात्मा ब्रह्म**' ಮುಂತಾದ ಉಪನಿಷದ್ವಾಕ್ಯಗಳಲ್ಲಿ ಪ್ರಯೋಗದಲ್ಲಿರುವದರಿಂದಲೂ ಭಗವಂತನು ಎಲ್ಲೆಲ್ಲಿಯೂ ಎಲ್ಲಕ್ಕೂ ಎಲ್ಲರಿಗೂ ಸರ್ವಾಂತರನಾಗಿರುವ ಆತ್ಮನೇ ಆಗಿರುವದರಿಂದ ಇದನ್ನು ಆರಿಸಿಕೊಂಡಿರುವದು ಯುಕ್ತವಾಗಿದೆ. ಆತ್ಮನಾಗಿರುವ ಭಗವಂತನನ್ನು ಎಲ್ಲೆಲ್ಲಿಯೂ ಹುಡುಕಬೇಕಾಗಿಲ್ಲ, ನಿಮ್ಮೊಳಗೇ ಇರುತ್ತಾನೆ–ಎಂಬ ಭರವಸೆಯೂ ಸಾಧಕರಿಗೆ ಸಿಕ್ಕುವದು. ಆದ್ದರಿಂದ ಸಮೀಪವಾಚಿಯಾದ ಈ ಶಬ್ದವನ್ನು ಉಪಯೋಗಿಸಿರುವದರಲ್ಲಿ ಹೆಚ್ಚಿನ ಔಚಿತ್ಯವಿದೆ.

ಇದರಿಂದ **ಉಪನಿಷತ್ತಿನಲ್ಲಿ '**पश्यत्स्विहैव निहितं गुहायाम्**'** (ಸರಿಯಾಗಿ ನೋಡಿದರೆ ಪರಮಾತ್ಮತತ್ತ್ವವು ಇಲ್ಲಿಯೇ ಹೃದಯಗುಹೆಯಲ್ಲಿ ಇರುವದು ಕಂಡು ಬರುತ್ತದೆ ಮುಂ. ೩–೧–೭) ಎಂದಿರುವ ಉಪನಿಷದ್ವಾಕ್ಯದ, ಮತ್ತು **ಭಗವದ್ಗೀತೆಯಲ್ಲಿ 'ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ'** (ಅರ್ಜುನನೆ, ಈಶ್ವರನು ಸಕಲಪ್ರಾಣಿಗಳ ಹೃದಯದಲ್ಲಿಯೂ ಇರುತ್ತಾನೆ ಗೀ.೧೮–೬೧) ಎಂದು ಭಗವಂತನು ಹೇಳಿರುವ ವಾಕ್ಯದ– ನೆನಪನ್ನೂ ಕೊಟ್ಟಂತೆ ಆಗುವದು.

## ಪರಮಪ್ರೇಮರೂಪಾ –ಎಂಬುದರ ವಿವರ

೮. 'ಭಕ್ತಿ' ಎಂಬ ಶಬ್ದಕ್ಕೆ ಸಂಸ್ಕೃತದಲ್ಲಿ ಅನೇಕ ಅರ್ಥಗಳಿವೆ: (೧) ಸಾಮವೇದದಲ್ಲಿ– ಒಂದು ಸಾಮದ 'ಭಾಗ'ವೆಂದು ಇದಕ್ಕೆ ಅರ್ಥ. (೨) ಶಬ್ದಶಾಸ್ತ್ರದಲ್ಲಿ 'ಭಕ್ತಿ' ಎಂದರೆ ಒಂದು ಶಬ್ದವನ್ನು ಮತ್ತೊಂದು ಅರ್ಥದಲ್ಲಿ ಬಳಸಿದಾಗ ಆ ಶಬ್ದಕ್ಕೆ ಇಟ್ಟುಕೊಂಡ 'ಗೌಣವೃತ್ತಿ' –ಎಂದು ಅರ್ಥ. (೩) ಲೋಕದಲ್ಲಿ ಒಬ್ಬನು ತನ್ನ ಗುರುಹಿರಿಯರಲ್ಲಿಟ್ಟುಕೊಂಡಿರುವ ವಿಶ್ವಾಸ, ಅಥವಾ ಪ್ರೀತಿ– ಎಂಬರ್ಥವೂ ಈ ಶಬ್ದಕ್ಕಿದೆ. ಭಕ್ತಿ ಎಂಬ ಶಬ್ದವು ಸೇವೆಮಾಡುವದು ಎಂಬರ್ಥದ ಧಾತುವಿನಿಂದ ಹುಟ್ಟಿರುವದರಿಂದಲೂ ಸೇವೆಯನ್ನು ಮಾಡುವದಕ್ಕೆ ಪ್ರೇಮವು ಇರಬೇಕಾದದ್ದು ಅವಶ್ಯವಾಗಿರುವದರಿಂದಲೂ ಭಕ್ತಿ ಎಂಬ ಶಬ್ದಕ್ಕೆ 'ಪ್ರೇಮ'ವೆಂಬರ್ಥವೂ ಮನಸ್ಸಿನಲ್ಲಿ ಮಿಂಚುತ್ತದೆ. ಮಾತೃಭಕ್ತಿ, ಪಿತೃಭಕ್ತಿ, ಗುರುಭಕ್ತಿ, ರಾಜಭಕ್ತಿ, ರಾಷ್ಟ್ರಭಕ್ತಿ– ಮುಂತಾದ ಶಬ್ದಗಳಲ್ಲೆಲ್ಲ 'ಭಕ್ತಿ' ಎಂದರೆ ಪೂಜ್ಯಬುದ್ಧಿಯಿಂದ ಉಂಟಾಗಿರುವ ಪ್ರೇಮ ಎಂದೇ ಅರ್ಥ. ಆದರೆ ಈ ಶಾಸ್ತ್ರದಲ್ಲಿ ಭಗವಂತನಲ್ಲಿರುವ ಪ್ರೇಮವನ್ನೇ ಭಕ್ತಿ ಎಂಬ ಹೆಸರಿನಿಂದ ಕರೆದಿರುತ್ತದೆ.

ಈ ಭಕ್ತಿಗೆ ಇಲ್ಲಿ **'ಪರಮ'** ಎಂಬ ವಿಶೇಷಣವನ್ನು ಕೊಟ್ಟಿರುವದೇಕೆಂಬುದನ್ನು ಈಗ ವಿಚಾರಿಸಬೇಕು. ತಂದೆ, ತಾಯಿ, ಗಂಡ, ಹೆಂಡತಿ, ಹಣ–

ಮುಂತಾದ ವಸ್ತುಗಳು ನಮಗೆ ಬೇಕಾಗಿರುವದರಿಂದ ಅವುಗಳೂ ನಮಗೆ ಪ್ರಿಯವಾಗಿರುತ್ತವೆ. ಆದ್ದರಿಂದ ಅವುಗಳಲ್ಲಿಯೂ ನಮಗೆ ಪ್ರೇಮವಿದೆ ಎನ್ನಬಹುದು. ಆದರೆ ಯಾವ ವಸ್ತುವಿನಲ್ಲಿ-ಅಥವಾ ಮತ್ತ್ಯಾರಲ್ಲಿಯಾದರೂ-ನಮಗೆ ಪ್ರೇಮವಿರುವದು ನಮ್ಮ ಮೇಲೆ ನಮಗಿರುವ ಪ್ರೇಮಕ್ಕಾಗಿಯೇ ಹೊರತು ಅವುಗಳಿಗಾಗಿ ಅಲ್ಲ. ಆದ್ದರಿಂದ ತಾನು ತನಗೆ ಪ್ರಿಯನಾಗಿರುವಷ್ಟು ಮತ್ತೆ ಯಾವದೂ ಪ್ರಿಯವಾಗಿರುವದಿಲ್ಲ. ಆದ್ದರಿಂದಲೇ ಶ್ರುತಿಯು-

**तदेतत् प्रेयः पुत्रात्प्रेयो वित्तात्प्रेयोऽन्यस्मात्सर्वस्मादन्तरतरं यदयमात्मा ॥**

ಬೃ. ೧-೪-೮

'ಆದ್ದರಿಂದ ಈ ಆತ್ಮನೆಂಬುದು ಮಗನಿಗಿಂತ ಪ್ರಿಯ, ಧನಕ್ಕಿಂತ ಪ್ರಿಯ, ಮಿಕ್ಕ ಎಲ್ಲಕ್ಕಿಂತಲೂ ಪ್ರಿಯ, ಇದು ಎಲ್ಲಕ್ಕಿಂತಲೂ ಒಳಗಿರುವದು' ಎಂದು ಹೇಳುತ್ತಿದೆ. ಅಂತೂ ಆತ್ಮನು ಎಂದರೆ ತಾನು, ತನಗೆ ಎಲ್ಲಕ್ಕಿಂತಲೂ ಹೆಚ್ಚಿನ ಪ್ರೇಮಕ್ಕೆ ಪಾತ್ರನೆಂದು ಲೌಕಿಕಾನುಭವದಿಂದಲೇ ಗೊತ್ತಾಯಿತಷ್ಟೆ? ಪರಮಾತ್ಮನೇ ಈ ಆತ್ಮನ ಪರಮಾರ್ಥವಾಗಿರುವದರಿಂದ ನಮಗೆ ನಮ್ಮಲ್ಲಿರುವ ಪ್ರೇಮವು ನಿಜವಾಗಿ ನಮ್ಮೊಳಗಿರುವ ಸರ್ವಾಂತರನಾದ ಪರಮಾತ್ಮನಲ್ಲಿರುವ ಪ್ರೇಮವೇ ಎಂದಾಯಿತು. ಈ ಪ್ರೇಮವು ನಮಗೆ ಕಾರಣವು ಗೊತ್ತಿಲ್ಲದೆ ವಿಷಯಗಳಲ್ಲಿಯೋ, ನಮ್ಮ ಹುಸಿಯ ರೂಪವಾದ ನಾನು ಎಂಬ ಕಲ್ಪಿತಾತ್ಮನಲ್ಲಿಯೋ ಇರುತ್ತದೆ. ಇದಕ್ಕೆ ಬದಲು ನಮ್ಮೆಲ್ಲರಿಗೂ ನಿಜವಾದ ಆತ್ಮನಾಗಿರುವ ಭಗವಂತನಲ್ಲಿ ಇದೇ ಪ್ರೇಮವುಂಟಾದರೆ ಅದು ಭಕ್ತಿಯೆನಿಸುವದು. ಈ ಕಾರಣದಿಂದ 'ಈತನಲ್ಲಿ ಪರಮಪ್ರೇಮರೂಪವಾಗಿರುವದೇ ಭಕ್ತಿ' ಎಂದು ಸೂತ್ರದಲ್ಲಿ ಹೇಳಿರುತ್ತದೆ.

## ಭಕ್ತಿಯ ಎರಡು ರೂಪಗಳು

೯. ಭಗವಂತನಿಗೆ ಪ್ರೀತಿಯಿಂದ ಪತ್ರ, ಪುಷ್ಪ, ಫಲ- ಮುಂತಾದವುಗಳನ್ನು ಅರ್ಪಿಸುವದೂ ಆತನನ್ನು ಅಧ್ಯಯನ, ಸ್ತೋತ್ರ- ಮುಂತಾದವುಗಳಿಂದ ಅರ್ಚಿಸುವದೂ ಪ್ರೇಮಾಂಶದಿಂದ ಕೂಡಿರುವದರಿಂದ ಅದನ್ನೂ ಭಕ್ತಿಯೆಂದೇ ಕರೆಯುವರು. ಆದರೆ ಈ ಶಾಸ್ತ್ರಕ್ಕೆ ಮುಖ್ಯವಾದದ್ದು ಆ ಪ್ರೇಮವಲ್ಲ; ಮತ್ತೇನೆಂದರೆ ನೇರಾಗಿ ಬಾಹ್ಯವಿಷಯಗಳೆಲ್ಲಕ್ಕಿಂತಲೂ ಮಿಗಿಲಾದ ಪ್ರೇಮವನ್ನು ಭಗವಂತನಲ್ಲಿ ನಿಲ್ಲಿಸಿದರೆ ಆ ಮಿಗಿಲಿಲ್ಲದ ಪ್ರೇಮವೇ ಈ ಶಾಸ್ತ್ರದಲ್ಲಿ ಹೇಳಹೊರಟಿರುವ ನಿಜವಾದ ಭಕ್ತಿ. ಇದನ್ನು ಸೂಚಿಸುವದಕ್ಕಾಗಿಯೇ **'ಪರಮಪ್ರೇಮರೂಪಾ'** ಎಂಬ ಸ್ವರೂಪಲಕ್ಷಣವನ್ನು ಹೇಳಿರುತ್ತದೆ.

ಪೂಜೆ, ಸ್ತೋತ್ರ- ಮುಂತಾದವುಗಳಿಂದ ಭಗವಂತನಲ್ಲಿ ತೋರಿಸುವ ಭಕ್ತಿಗೆ **ಗೌಣಭಕ್ತಿ**ಯೆಂದು ಹೆಸರು. 'ಭಕ್ತಿಂ ವ್ಯಾಖ್ಯಾಸ್ಯಾಮಃ' (ಭಕ್ತಿಯನ್ನು ಸ್ಪಷ್ಟ

ವಾಗಿ ವಿವರಿಸಿ ಹೇಳುವೆವು) ಎಂದು ಒಂದನೆಯ ಸೂತ್ರದಲ್ಲಿ ಹೇಳಿರುವ ಭಕ್ತಿ ಶಬ್ದವು ಮುಖ್ಯವಾಗಿ ಪರಮಪ್ರೀತಿರೂಪವಾದ **ಪರಭಕ್ತಿಯೇ** ಆಗಿದ್ದರೂ 'ರಾಜನು ಬರುತ್ತಾನೆ' ಎನ್ನುವಾಗ ಅವನ **ಪರಿವಾರವೂ** ಬರುತ್ತದೆಯೆಂದೇ ಅರ್ಥವಾಗುವಂತೆ, ಈ ಶಾಸ್ತ್ರದಲ್ಲಿ ಗೌಣಭಕ್ತಿಯನ್ನೂ ವಿವರಿಸಿ ಹೇಳಿಯೇ ಇರುತ್ತದೆಯಾದರೂ ಶಾಸ್ತ್ರದ ಮುಖ್ಯವಾದ ಗುರಿಯು ಅದರಲ್ಲಿಲ್ಲ; **ಪರಭಕ್ತಿ** ಯಲ್ಲಿಯೇ ಇರುತ್ತದೆ. ಪರಮಾತ್ಮನಾದ ಭಗವಂತನಲ್ಲಿಡುವ ಪರಮಪ್ರೇಮವೇ ಮುಖ್ಯವಾದ ಅರ್ಥದಲ್ಲಿ ಭಕ್ತಿ. ಅದೇ ಈ ಶಾಸ್ತ್ರದ ವಿಷಯ.

## 'ತು'ಶಬ್ದದ ಅರ್ಥ

೧೦. ಸೂತ್ರದಲ್ಲಿ **'ಸಾ ತು'** (ಆ ಭಕ್ತಿಯಾದರೊ) –ಎಂದು ತು ಶಬ್ದವನ್ನು ಪ್ರಯೋಗಿಸಿರುವದು ಏಕೆಂದರೆ ಈ ಶಾಸ್ತ್ರದ ವಿಷಯವಾದ ಭಕ್ತಿಯಮೇಲೆ ಬರಬಹುದಾದ ಎಲ್ಲಾ ಆಕ್ಷೇಪಗಳಿಗೂ ಸಮಾಧಾನವನ್ನು ಸೂಚಿಸುವದಕ್ಕೆ. ಇಂಥ ಆಕ್ಷೇಪಗಳನ್ನು ಆಗಲೆ ಎತ್ತಿ ನಾವು ಸೂತ್ರದ ಪದಗಳ ಅರ್ಥವನ್ನು ವಿವರಿಸುವ ನೆಪದಿಂದ ಅವುಗಳನ್ನು ಪರಿಹರಿಸಿರುತ್ತೇವೆ. ಇನ್ನೊಂದು ಆಕ್ಷೇಪಕ್ಕೆ ಸಮಾಧಾನ ವನ್ನು ಮುಂದಿನ ಸೂತ್ರದಲ್ಲಿ ತಿಳಿಯಿಸಲಾಗುವದು.

ಪ್ರಕೃತದಲ್ಲಿ 'ಸಾ ತ್ವಸ್ಮಿನ್ ಪರಮಪ್ರೇಮರೂಪಾ' ಎಂಬ ನಾಲ್ಕು ಪದ ಗಳಿಂದ ಎಷ್ಟು ಗಂಭೀರವಾದ ಅರ್ಥವನ್ನು ಸೂಚಿಸಲಾಗಿದೆ –ಎಂಬುದನ್ನು ವಾಚಕರು ಮನಸ್ಸಿನಲ್ಲಿ ಮತ್ತೆಮತ್ತೆ ಮೆಲುಕುಹಾಕುವದರಿಂದ ಲಾಭವುಂಟು. ಸೂತ್ರವೆಂದರೆ :

**ಅಲ್ಪಾಕ್ಷರಮಸನ್ದಿಗ್ಧಂ ಸಾರವದ್ವಿಶ್ವತೋಮುಖಮ್ ।**
**ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥**

ಎಂಬ ಬಲ್ಲವರ ಲಕ್ಷಣವಾಕ್ಯದಂತೆ (೧) ಅದಷ್ಟು ಕಡಿಮೆಯ ಸಂಖ್ಯೆಯ ಮಾತು ಗಳಿರಬೇಕು; (೨) ಅರ್ಥದ ವಿಷಯಕ್ಕೆ ಯಾವ ಸಂದೇಹವೂ ಬರಬಾರದು. (೩) ಅರ್ಥದಲ್ಲಿ ಸಾರವಿರಬೇಕು; (೪) ಒಂದೇ ಮಾತಿನಿಂದ ಬಗೆಬಗೆಯ ಅರ್ಥ ಗಳು ಸೂಚಿತವಾಗಿರಬೇಕು ; (೫) ವ್ಯರ್ಥವಾದ, ಅರ್ಥವಿಲ್ಲದ ಶಬ್ದಗಳನ್ನು ಒಳಗೊಂಡಿರಬಾರದು ; (೬) ಯಾವ ದೋಷವೂ ವಾಕ್ಯಾರ್ಥದಲ್ಲಿರಬಾರದು. ಇಷ್ಟು ಗುಣಗಳಿದ್ದರೆ ಅದು **ಸೂತ್ರ**ವೆನಿಸುವದು.

ಅಂತೂ 'ಭಗವಂತನಲ್ಲಿಟ್ಟಿರುವ ಪರಮಪ್ರೇಮವೇ ಭಕ್ತಿಯು ; ಅದರಿಂದ ಪರಮಪುರುಷಾರ್ಥವೇ ದೊರೆಕುವದರಿಂದ ಅದನ್ನು ಸಕಲಪರಿಕರಗಳೊಡನೆ ವಿವರಿಸಿ ಹೇಳುವೆವು'– ಎಂಬುದು ಈವರೆಗಿನ ಎರಡು ಸೂತ್ರಗಳ ಒಟ್ಟರ್ಥ ವಾಯಿತು.

## ಭಕ್ತಿಯ ವಿಷಯಕ್ಕೆ ಒಂದು ಆಕ್ಷೇಪ

೧೧. ಪ್ರೇಮವು ಭಗವಂತನ ವಿಷಯವಾಗಿರುವದಾದ್ದರಿಂದ ಬಾಹ್ಯವಿಷಯಗಳಲ್ಲಿರುವ ಪ್ರೇಮದ ದೋಷವು ಅದರಲ್ಲಿಲ್ಲವೆಂದಂತೆ ಆಯಿತು. ವಿಷಯಗಳು ಅನಿತ್ಯವಾಗಿರುವದರಿಂದ ಅವುಗಳನ್ನು ಸಂಪಾದಿಸುವದರಲ್ಲಿಯೂ ರಕ್ಷಣೆಮಾಡಿಕೊಳ್ಳುವದರಲ್ಲಿಯೂ ಕೈಬಿಟ್ಟುಹೋದರೆ ಶೋಕವುಂಟಾಗುವದರಿಂದ ಮನಸ್ಸಿನ ಸಂಕಟವನ್ನು ಪರಿಹರಿಸಿಕೊಳ್ಳುವದರಲ್ಲಿಯೂ ಕ್ಲೇಶವುಂಟಾಗುವದು. ಆದರೆ ಭಗವಂತನು **'ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ'** (ಗೀ. ೨-೨೪) ಎಂಬಂತೆ ನಿತ್ಯನೂ ಎಲ್ಲೆಲ್ಲಿಯೂ ವ್ಯಾಪಿಸಿರುವಾತನೂ ಸ್ಥಿರಸ್ವರೂಪನೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸಿಹೋಗುವವನಲ್ಲದೆ ಇರುವವನೂ ಆಗಿರುತ್ತಾನೆ. ಆದ್ದರಿಂದ ಆತನಲ್ಲಿರುವ ಮಿಗಿಲಿಲ್ಲದ ಪ್ರೇಮವು ಪರಮಾನಂದದಾಯಕವೆಂದೂ ಆಗಬಹುದಾಗಿದೆ. ಆದರೆ ಪ್ರೇಮವೆಂಬುದೊಂದು ಮನೋವೃತ್ತಿಯಲ್ಲವೆ? ವೃತ್ತಿಯೆಂಬುದು ಮತ್ತೊಂದು ವೃತ್ತಿಯು ಎದ್ದುಕೊಳ್ಳುವವರೆಗೆ ಇದ್ದೀತೇ ಹೊರತು ಅದೇ ಎಂದೆಂದಿಗೂ ಇರುವದೆಂಬ ಪ್ರತ್ಯಾಶೆಯೇ ಇರುವದಿಲ್ಲವಲ್ಲ! ಹೀಗಿರುವದರಿಂದ ಆದ್ಯಂತಗಳುಳ್ಳ ಪ್ರೇಮವೆಂಬ ವೃತ್ತಿಯಿಂದ ತೋರುವ ಆನಂದವು ಹೇಗೆ ಎಂದೆಂದಿಗೂ ಇದ್ದೀತು? ಇಲ್ಲವೆಂದರೆ ಅದು ಪರಮಪುರುಷಾರ್ಥವೆಂದು ಹೇಗೆ ಆದೀತು?

ಈ ಆಕ್ಷೇಪಕ್ಕೂ ಉತ್ತರವನ್ನು ಹಿಂದಿನ ಸೂತ್ರದಲ್ಲಿ 'ಪರಮಪ್ರೇಮರೂಪಾ' ಎಂಬ ಪದದಲ್ಲಿರುವ 'ರೂಪ'ಶಬ್ದದಿಂದ ಸೂಚಿಸಿಯೇ ಇದೆ. ಹೇಗೆಂದರೆ ಭಕ್ತಿಯು ಪ್ರೇಮವೃತ್ತಿಯ ರೂಪವಾಗಿದೆಯಾದರೂ ಅದು ನಮ್ಮೆಲ್ಲರಿಗೂ ಗೊತ್ತಿರುವ ಕೇವಲ ಪ್ರೇಮವೃತ್ತಿಯೇ ಅಲ್ಲ. ಅದರ ಸ್ವರೂಪವೇ ಬೇರೆಯಾಗಿದೆ. ಹೇಗೆಂದರೆ :-

### ಅಮೃತಸ್ವರೂಪಾ ಚ ॥ ೩ ॥

೩. ಮತ್ತು ಅಮೃತಸ್ವರೂಪವೂ (ಆಗಿರುತ್ತದೆ).

೧೨. ಲೋಕಪ್ರಸಿದ್ಧವಾದ ಪ್ರೇಮಕ್ಕೂ ಈ ಭಕ್ತಿಗೂ ಇರುವ ವೈಲಕ್ಷಣ್ಯವೇನೆಂದರೆ, ಲೋಕದಲ್ಲಿ ಉಂಟಾಗುವ ಪ್ರೇಮವೆಂಬುದು ಇಂದ್ರಿಯಸಂನಿಕರ್ಷದಿಂದ ವಿಷಯಗಳ ಸಂಬಂಧದಿಂದಾಗುವ ಒಂದಾನೊಂದು ಮನೋವೃತ್ತಿಯು. ವಿಷಯವು ಯಾವ ರೂಪದಲ್ಲಿರುವದೋ ಅದಕ್ಕೆ ಅನುಗುಣವಾಗಿ ಮನಸ್ಸಿನ ವೃತ್ತಿಯುಂಟಾಗುತ್ತದೆ. ವಿಷಯವನ್ನು 'ಇಂಥದ್ದು', 'ಅಂಥದ್ದು'- ಎಂದು ವಿಕಲ್ಪಿಸುವದು, ಸಂಶಯಪಡುವದು, ನಿಶ್ಚಯಿಸಿಕೊಳ್ಳುವದು, ಅದರಲ್ಲಿ ನಾನುನನ್ನದೆಂಬ

ಅಭಿಮಾನವನ್ನು ಮಾಡಿಕೊಳ್ಳುವದು- ಇವುಗಳು ವಿಷಯಗಳ ಅರಿವು ಉಂಟಾಗು ವಾಗ ಆಗುವ ಮನೋವೃತ್ತಿಗಳು. ಇದರಂತೆ :

**कामः सङ्कल्पो विचिकित्सा श्रद्धाऽश्रद्धा धृतिरधृतिर्ह्रीर्धीर्भीरित्येतत्सर्वं मन एव ॥**

ಬೃ. ೧-೫-೩

'ಆಸೆ, ಸಂಕಲ್ಪಿಸುವದು,ಸಂಶಯ, ವಿಶ್ವಾಸ, ನಂಬದೇಇರುವದು, ಮನಸ್ಸನ್ನು ವಿಷಯ ದಲ್ಲಿಯೇ ದೃಢವಾಗಿಟ್ಟುಕೊಂಡಿರುವದು, ಆ ದಾರ್ಢ್ಯವಿಲ್ಲದಿರುವದು, ನಾಚಿಕೆ, ಬುದ್ಧಿ, ಅಂಜಿಕೆ- ಇವೇ ಮುಂತಾದವುಗಳೆಲ್ಲವೂ ವೃತ್ತಿಗಳೇ. ಇವು ಯಾವ ಹೊರಗಿನ ನಿಮಿತ್ತಗಳಿಂದ ಆಗುವವೋ ಅವು ವಿಷಯಗಳು. ವಿಷಯಗಳು ಕ್ಷಣ ಕ್ಷಣಕ್ಕೂ ಮಾರ್ಪಡುತ್ತಲೇ ಇರುವವು; ಮನಸ್ಸೂ ಇದ್ದಂತೆ ಇರುವದಿಲ್ಲ. ಆದ್ದರಿಂದ ಯಾವ ವೃತ್ತಿಯೂ ಬಹುಕಾಲ ನಿಲ್ಲುವಂತಿಲ್ಲ. ಪ್ರೇಮವೃತ್ತಿಯೂ ಹಾಗೆಯೇ. ಆದ್ದರಿಂದಲೇ ಲೋಕದಲ್ಲಿ ಪ್ರೇಮವುಂಟಾದಾಗ ತನ್ನ ಪ್ರೇಮಕ್ಕೆ ಕಾಣದ ವಸ್ತು ಎಲ್ಲಿ ನಾಶವಾಗಿಬಿಟ್ಟೀತೊ, ಅಥವಾ ಮುಂದೆ ಕಾಲಾನುಕಾಲಕ್ಕೆ ಈಗಿನಂತೆ ತನಗೆ ಅನುಕೂಲವಾಗದೆ ಬೇರೊಂದು ರೂಪವನ್ನು ಎಲ್ಲಿ ತಾಳೀತೊ, ಅಥವಾ ಆ ವಿಷಯ ವನ್ನು ಮತ್ತೆ ಯಾರಾದರೂ ಎಲ್ಲಿಗಾದರೂ ಕೊಂಡೊಯ್ಯುವರೋ ಅಥವಾ ನನ್ನ ಮನಸ್ಸೇ ಇದರ ವಿಷಯಕ್ಕೆ ಎಲ್ಲಿ ಬದಲಾಯಿಸಿಬಿಟ್ಟೀತೊ !- ಎಂದು ಜನರು ಅಂಜುತ್ತಲೇಇರುವರು. ಹೀಗೆ ಪ್ರೇಮಕ್ಕೆ ನಿಜವಾದ ಅಥವಾ ಕಲ್ಪಿತವಾದ ಅಂಜಿಕೆಯು ಇದ್ದೇಇರುತ್ತದೆ.

ಆದರೆ ಈಗ ನಾವು ವಿಚಾರಕ್ಕೆ ತೆಗೆದುಕೊಂಡಿರುವ ಭಕ್ತಿಯೊ, ಎಂದರೆ ಲೋಕದ ವೃತ್ತಿರೂಪಪ್ರೇಮದಲ್ಲಿಯೂ ವಿಷಯನಿಮಿತ್ತದಿಂದುಂಟಾದ ಕ್ಷಣಿಕವಾದ ಸುಖವು ತೋರುವಾಗ ಪುಣ್ಯವಶದಿಂದ ನಿತ್ಯವಾದ ಪ್ರೇಮದ ಅಂಶವು ಅದರಲ್ಲಿ ತೋರುತ್ತಿರುವದು. ಆದ್ದರಿಂದ ಆ ವೃತ್ತಿಯೂ ಪ್ರೇಮವೆಂದು ಕರೆಯಿಸಿಕೊಳ್ಳು ತ್ತದೆ. ಪುಣ್ಯವಶದಿಂದ ಮನಸ್ಸು ಅಲುಗಾಡದೆ ಸ್ವಲ್ಪಹೊತ್ತು ನಿಂತಾಗ ಅದರಲ್ಲಿ ಎಲ್ಲರ ಒಳಗೂ ನಿಜವಾಗಿದ್ದುಕೊಂಡಿರುವ ಆತ್ಮಾನಂದವು ಸ್ವಲ್ಪಕಾಲ ಪ್ರತಿಫಲಿಸು ವದು. ಇದನ್ನೇ ಜನರು ವಿಷಯಸುಖವೆಂದು ವ್ಯವಹರಿಸುತ್ತಿರುತ್ತಾರೆ ; ಅದಕ್ಕೆ ನಿಮಿತ್ತವಾಗಿದ್ದ ಪುಣ್ಯವು ಅಲ್ಪವಾಗಿರುವದರಿಂದ ಆ ಸುಖವೂ ಅಲ್ಪವಾಗಿರುತ್ತದೆ.

ಆದರೆ ಮನಸ್ಸನ್ನು ಶ್ರದ್ಧಾದಿಗಳಿಂದ ಭಗವಂತನಲ್ಲಿಯೇ ಇಟ್ಟುಕೊಳ್ಳುವ ಅಭ್ಯಾಸವನ್ನು ಮಾಡುವವರಿಗೆ ಆತ್ಮಾನಂದವು ಹೆಚ್ಚುಹೆಚ್ಚಾಗಿ ಅಭಿವ್ಯಕ್ತವಾಗು ವದು. ಆಗ ನಿಷ್ಕಲ್ಮಷವಾದ ಮನಸ್ಸು ಆತ್ಮಾಕಾರವಾಗಿಯೇ ಆಗಿಬಿಡುವದರಿಂದ ಅದರಲ್ಲಿ ಆತ್ಮನೇ ಮಾರುಹೊಳೆಯುತ್ತಾನೆ. ಆಗ ಮನಸ್ಸಿನ ವೃತ್ತಿಯೂ ಆತ್ಮನೂ ಒಂದೇ ರೂಪವಾಗಿ ಮಾರ್ಪಡುವದರಿಂದ ಆ ವೃತ್ತಿಯು ಅಥವಾ

ಅದಕ್ಕೆ ಆಧಾರವಾಗಿರುವ ಆತ್ಮಾನಂದವೇ 'ಭಕ್ತಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುತ್ತದೆ. ಹೀಗೆ ಆತ್ಮಾನಂದಾಕಾರವಾದ ವೃತ್ತಿಯು ಹೋದರೂ ಆತ್ಮಾನಂದವು ನಿತ್ಯವೇ ಆಗಿರುವದರಿಂದ ಮನಸ್ಸಿನಲ್ಲಿ ಉಂಟಾದ ಪ್ರೇಮವೃತ್ತಿಯ ಪ್ರಕಾಶವು ಇದ್ದುಕೊಂಡೇಬಿಡುತ್ತದೆ. ಹೀಗೆ ಇಲ್ಲಿ ಪರಮಪ್ರೇಮರೂಪವಾದ ಭಕ್ತಿಯೂ ಅದಕ್ಕೆ ವಿಷಯನಾದ ಪರಮಾತ್ಮನೂ ಒಂದೇ ಆಗಿಬಿಟ್ಟಿರುವದರಿಂದ ಭಕ್ತಿಯು ನಾಶವಾಗುವದೆಂಬ ಅಂಜಿಕೆಗೆ ಕಾರಣವಿರುವದಿಲ್ಲ. ಪರಮಭಕ್ತನ ಮನಸ್ಸು ಪರಮಾನಂದರೂಪನಾದ ಆತ್ಮನ ಸ್ವರೂಪವೇ ಆಗಿಬಿಟ್ಟಿರುವದರಿಂದ ಆ ಸ್ವರೂಪದಿಂದ ಅದು ಅಮೃತರೂಪವಾಗಿಯೇ ಇರುತ್ತದೆಯಾಗಿ ಅದನ್ನು 'ಅಮೃತಸ್ವರೂಪ'ವೆಂದು ಇಲ್ಲಿ ವರ್ಣಿಸಿರುತ್ತದೆ.

ಭಕ್ತನ ಆತ್ಮನು ನಿಜವಾಗಿ ಜನ್ಮರಹಿತನೂ ಸರ್ವವ್ಯಾಪಕನೂ ಮುಪ್ಪಿಲ್ಲದವನೂ ಸಾವಿಲ್ಲದವನೂ ಅಮೃತಸ್ವಭಾವನೂ ಅಂಜಿಕೆಯಿಲ್ಲದವನೂ ಆಗಿರುವ ಬ್ರಹ್ಮಸ್ವರೂಪನೇ ಆಗಿರುತ್ತಾನೆ; ಏಕೆಂದರೆ ಆ ಬ್ರಹ್ಮಕ್ಕೂ ತನಗೂ ಯಾವ ಭೇದವೂ ಇಲ್ಲನೆಂದು ಭಕ್ತನು ಅರಿತುಕೊಂಡಿರುತ್ತಾನೆ. 'स वा एष महानज आत्माऽजरोऽमरोऽमृतोऽभयो ब्रह्माभयं वै ब्रह्माभयं हि वै ब्रह्म भवति य एवं वेद ॥' (ಬೃ. ೪-೪-೨೫) ಎಂಬ ಶ್ರುತಿಯು ಈ ತತ್ತ್ವವನ್ನು ಸಾರುತ್ತಿರುವದು.

## ಪ್ರೇಮದ ಎರಡು ರೂಪಗಳು

೧೩. ಈವರೆಗೆ ಮಾಡಿರುವ ವಿವರಣೆಯಿಂದ ತಿಳಿಯಬೇಕಾಗಿರುವದೇನೆಂದರೆ: ಧ್ಯಾನ, ಚಿಂತನ, ಉಪಾಸನೆ, ಭಾವನ, ಭಜನ, ವೇದನ- ಮುಂತಾದ ಶಬ್ದಗಳಿಗೆ ಅರ್ಥವಾದ ವೃತ್ತಿಗಳನ್ನೂ ಅವುಗಳಿಂದುಂಟಾಗುವ ಫಲರೂಪವಾದ ಪ್ರೇಮವನ್ನೂ ಭಕ್ತಿಯೆಂಬ ಶಬ್ದದಿಂದಲೇ ಶಾಸ್ತ್ರದಲ್ಲಿ ಕರೆದಿರುತ್ತದೆ. ಮನಸ್ಸಿನ ವೃತ್ತಿರೂಪವಾದ ಭಕ್ತಿಯು ಕ್ರಿಯಾರೂಪವಾಗಿರುವದರಿಂದ ಅದನ್ನು ಮಾಡುವದಕ್ಕೂ, ಮಾಡದೆ ಇರುವದಕ್ಕೂ, ಬೇರೊಂದು ವಿಧವಾಗಿ ಮಾಡುವದಕ್ಕೂ ಆಗುತ್ತದೆ. ಅದು ಉಪಾಸಕನಾದ ಪುರುಷನ ಇಚ್ಛೆಗೆ ಅಧೀನವಾಗಿರುವದರಿಂದ ಅದು ಸ್ಥಿರವಾಗಿರುವದಕ್ಕೆ ಪ್ರಯತ್ನಪೂರ್ವಕವಾಗಿ ಧ್ಯೇಯನಾದ ಭಗವಂತನಲ್ಲಿ ಮನಸ್ಸನ್ನು ನಿಲ್ಲಿಸಿಕೊಳ್ಳಬೇಕಾಗುವದು. ಆದರೆ ಭಕ್ತಿಯು ಈ ಉಪಾಸಕನು ಸಾಧನರೂಪವನ್ನು ದಾಟಿ ತನ್ನ ಫಲವಾದ ನಿತ್ಯಪ್ರೇಮವನ್ನು ಅಭಿವ್ಯಕ್ತಗೊಳಿಸಿದಾಗ ಭಗವಂತ, ಭಕ್ತಿ, ಭಕ್ತ- ಎಂಬ ಮೂರು ರೂಪಗಳ ಭೇದವೂ ತೊಲಗಿ ಅಖಂಡವಾದ ಭಗವತ್ಸ್ವರೂಪವೊಂದೇ ಉಳಿದುಕೊಂಡುಬಿಡುವದು. ಉದಾಹರಣೆಗೆ ಪರಭಕ್ತನಾದ ಪ್ರಹ್ಲಾದನನ್ನು ತಂದೆಯಾದ ಹಿರಣ್ಯಕಶಿಪುವು ಚಿತ್ರಹಿಂಸೆಗೆ ಒಳಪಡಿಸಿದಾಗಲೂ ಅವನ ಪ್ರೇಮವು ಅಳಿಯದೆ ಉಳಿದುಕೊಂಡಿದ್ದದ್ದಕ್ಕೆ ಆತನ

ಮನೋವೃತ್ತಿಯು ಪ್ರೇಮಕ್ಕೆ ವಿಷಯನಾದ ಭಗವಂತನಲ್ಲಿ ಒಂದಾಗಿದ್ದದ್ದೇ ಕಾರಣವು. ಹಿರಣ್ಯಕಶಿಪುವು ಕೋಪಾವೇಶದಿಂದ ಪ್ರಹ್ಲಾದನನ್ನು ಸಮುದ್ರದೊಳಕ್ಕೆ ತಳ್ಳಿಸಿ ಮೇಲುಗಡೆಯಲ್ಲಿ ಬೆಟ್ಟಗಳನ್ನು ಒಟ್ಟಲುಹಾಕಿಸಿದಾಗಲೂ ಆ ಬಾಲಕನ ಅಚಲಪ್ರೇಮವು ಹೇಗಿತ್ತೆಂದರೆ : ಅವನು ಅಹ್ನಿಕವೇಳೆಯು ಬರುತ್ತಲೂ ಭಗವಂತನನ್ನು ಧ್ಯಾನಿಸುತ್ತಾ ತನ್ಮಯನಾಗಿಬಿಡುತ್ತಿದ್ದನು. ಆದ್ದರಿಂದ ಅವನು ಆಗ-

**ಓಂ ನಮೋ ವಿಷ್ಣವೇ ತಸ್ಮೈ ನಮಸ್ತಸ್ಮೈ ಪುನಃ ಪುನಃ ।**
**ಯತ್ರ ಸರ್ವಂ ಯತಃ ಸರ್ವಂ ಯಃ ಸರ್ವಂ ಸರ್ವಸಂಶ್ರಯಃ ॥**
**ಸರ್ವಗತ್ವಾದನನ್ತಸ್ಯ ಸ ಏವಾಹಮವಸ್ಥಿತಃ ।**
**ಮತ್ತಃ ಸರ್ವಮಹಂ ಸರ್ವಂ ಮಯಿ ಸರ್ವಂ ಸನಾತನೇ ॥**
**ಅಹಮೇವಾಕ್ಷಯೋ ನಿತ್ಯಃ ಪರಮಾತ್ಮಾತ್ಮಸಂಶ್ರಯಃ ।**
**ಬ್ರಹ್ಮಸಂಜ್ಞೋಽಹಮೇವಾಗ್ರೇ ತಥಾನ್ತೇ ಚ ಪರಃ ಪುಮಾನ್ ॥**

ವಿ. ಪು. ೧-೧೯-೮೪, ೮೫, ೮೬.

"ಓಂ ವಿಷ್ಣುವಿಗೆ ನಮಸ್ಕಾರ ! ಆತನಿಗೆ ಮತ್ತೆಮತ್ತೆ ನಮಸ್ಕಾರ ! ಯಾವನಲ್ಲಿ ಎಲ್ಲವೂ ಇರುತ್ತಿರುವದೋ, ಯಾವಾತನಿಂದ ಎಲ್ಲವೂ ಆಗಿರುವದೋ, ಯಾವಾತನು ಎಲ್ಲವೂ ಆಗಿರುವನೋ, ಎಲ್ಲಕ್ಕೂ ಆಶ್ರಯನಾಗಿರುವನೋ, (ಆತನಿಗೆ ನಮಸ್ಕಾರ !) ಅನಂತನಾದ ಆತನು ಸರ್ವವ್ಯಾಪಿಯಾಗಿರುವದರಿಂದ ಆತನೇ ನಾನಾಗಿರುತ್ತಾನೆ. ನನ್ನಿಂದಲೇ ಎಲ್ಲವೂ ಆಗಿದೆ, ನಾನೇ ಎಲ್ಲವೂ ; ಸನಾತನನಾದ ನನ್ನಲ್ಲಿಯೇ ಎಲ್ಲವೂ ಇರುವದು. ನಾನೇ ಅಕ್ಷಯನೂ ನಿತ್ಯನೂ ಆತ್ಮರಿಗೆ ಆಶ್ರಯನಾದ ಪರಮಾತ್ಮನೂ ಆಗಿರುವೆನು. ಎಲ್ಲಕ್ಕೂ ಮೊದಲಿರುವ ಬ್ರಹ್ಮನಾಮಕನು ನಾನೇ, ಕೊನೆಯಲ್ಲಿ ಉಳಿದಿರುವ ಪರಮಪುರುಷನೂ ನಾನೇ" ಎಂದು ತನ್ಮಯತೆಯಿಂದ ಇದ್ದುಬಿಟ್ಟನು !

ಹೀಗಿರುವದರಿಂದ ಪ್ರೇಮಸ್ವರೂಪವೂ ಭಕ್ತಪ್ರಿಯನಾದ ಪರಮಾನಂದರೂಪನಾದ ಭಗವಂತನ ಸ್ವರೂಪವೂ ಒಂದೇ ಆಗಿರುತ್ತದೆ. ಈ ಪ್ರೇಮವು ಪ್ರಯತ್ನದಿಂದ ಮಾಡಿಕೊಳ್ಳತಕ್ಕದ್ದಲ್ಲ. ನಿತ್ಯವಾಗಿ ಪರಮಾತ್ಮಸ್ವರೂಪದಿಂದಲೇ ಇದ್ದುಬಿಟ್ಟಿರುವದು. ಹೀಗೆ ಶಾಸ್ತ್ರೋಕ್ತರೀತಿಯಿಂದ ಪರಮಾತ್ಮನನ್ನು ಭಾವನೆಮಾಡುವ ವೃತ್ತಿಗೂ ಆ ಭಗವಂತನ ಸಾಕ್ಷಾತ್ಕಾರದಿಂದ ಆಗುವ ಸ್ವರೂಪಕ್ಕೂ ಪ್ರೇಮವೆಂದೇ ಭಕ್ತಿಯೆಂದೇ ಹೆಸರಿದ್ದರೂ ಒಂದು ಸಾಧನರೂಪವು, ಮತ್ತೊಂದು ಅಮೃತಾತ್ಮಸ್ವರೂಪವಾದ ಫಲರೂಪವು ಎಂಬುದನ್ನು ಮರೆಯದೆ ಇರಬೇಕು.

# ೪. ಭಕ್ತಿಯ ಫಲ

ಯಲ್ಲಬ್ಧ್ವಾ ಪುಮಾನ್ ಸಿದ್ಧೋ ಭವತ್ಯಮೃತೋ ಭವತಿ ತೃಪ್ತೋ ಭವತಿ ‖ ೪ ‖

೪. ಇದನ್ನು ಪಡೆದುಕೊಂಡರೆ ಪುರುಷನು ಸಿದ್ಧನಾಗುವನು, ಅಮೃತನಾಗುವನು, ತೃಪ್ತನಾಗುವನು.

## 'ಯತ್' ಎಂಬುದರ ಅರ್ಥ

೧೪. ಸಂಸ್ಕೃತದಲ್ಲಿ ಭಕ್ತಿಶಬ್ದವು ಸ್ತ್ರೀಲಿಂಗವಾದರೂ ನಪುಂಸಕಲಿಂಗದ 'ಯತ್' ಎಂಬ ಶಬ್ದವನ್ನು ಇಲ್ಲಿ ಏತಕ್ಕೆ ಉಪಯೋಗಿಸಿದೆ ? ಎಂದರೆ ಹಿಂದಿನ ಸೂತ್ರದಲ್ಲಿ ಹೇಳಿರುವ ಭಕ್ತಿಯ ಅಮೃತಸ್ವರೂಪವನ್ನು ಒತ್ತಿಹೇಳುವದಕ್ಕೆ. ಸಾವಿಲ್ಲದ ಪರಮಪ್ರೇಮರೂಪವಾದ ಭಕ್ತಿಯನ್ನು ಪಡೆದವನಿಗೆ ಪ್ರಯೋಜನವನ್ನು ಇಲ್ಲಿ ಸ್ಫುಟಗೊಳಿಸಿದೆ. ಈ ಫಲವನ್ನು ಒಂದನೆಯ ಸೂತ್ರದಲ್ಲಿರುವ 'ಅತಃ' ಎಂಬ ಶಬ್ದದಿಂದಲೇ ಸೂಚಿಸಿತ್ತಾದರೂ ಈ ಶಾಸ್ತ್ರವನ್ನು ಚಿಂತನೆಗೆ ಇಟ್ಟುಕೊಳ್ಳುವವರಿಗೆ ಇಂಥಿಂಥ ಫಲಗಳು ಸಿದ್ಧವಾಗುವವು– ಎಂಬುದನ್ನು ಓದುಗರಿಗೆ ಗ್ರಂಥದಲ್ಲಿ ರುಚಿಯು ಉಂಟಾಗಲಿ !– ಎಂಬ ಉದ್ದೇಶದಿಂದ ಸೂತ್ರಕಾರರು ಆ ಫಲದ ಸ್ವರೂಪವನ್ನು ಇಲ್ಲಿ ಬಿಚ್ಚಿ ತಿಳಿಸಿರುತ್ತಾರೆ.

## 'ಲಬ್ಧ್ವಾ' ಎಂಬುದರ ಅರ್ಥ

೧೫. ಭಕ್ತಿಯು ಪರಮಪ್ರೇಮರೂಪವಾದದ್ದು, ಅದು ಪರಮಾರ್ಥರೂಪವಾದ ಆತ್ಮರೂಪವೇ ಆಗಿರುತ್ತದೆ– ಎಂದು ಹೇಳಿದಮೇಲೆ ಅದನ್ನು 'ಪಡೆಯಬೇಕಾದದ್ದಿದೆ' ಎಂಬುವನ್ನು ಹೇಳುವ 'ಲಬ್ಧ್ವಾ' (ಪಡೆದುಕೊಂಡರೆ) ಎಂಬ ಶಬ್ದವನ್ನು ಪ್ರಯೋಗಿಸಿರುವದು ಸರಿಯೆ ?– ಎಂದು ಯಾರಾದರೂ ಶಂಕಿಸಬಹುದು.

ಇದಕ್ಕೆ ಪರಿಹಾರವೇನೆಂದರೆ: ಭಕ್ತಿಯು ಆತ್ಮಸ್ವರೂಪವೇ ಆಗಿರುವದೆಂಬುದು ನಿಜ. ಆದರೂ ಇದನ್ನು ವ್ಯಾವಹಾರಿಕಾವಸ್ಥೆಯಲ್ಲಿ ಅಹಂಕಾರವು ಮುಸುಕಿಕೊಂಡಿರುವದೆಂದು ಹಿಂದೆ (ಪ್ರ. ೨) ಹೇಳಿರುತ್ತೇವೆ. ಈ ಅಹಂಕಾರದ ಸಂಬಂಧದಿಂದ ಜನರ ಪರಮಾರ್ಥಸ್ವರೂಪವು ತೋರಿಕೊಳ್ಳದೆ 'ನಾನು' ಎಂಬ ಅಲ್ಪತ್ವದ ಜೀವಾಕಾರವೇ ತೋರುತ್ತಿರುತ್ತದೆ. ಹೀಗೆ ತೋರುವ ಮಾಯಾರೂಪವನ್ನೇ ತಮ್ಮ ರೂಪವೆಂದು ಭ್ರಮಿಸಿ ಜೀವರು ಸಂಸಾರದಲ್ಲಿ ತೊಳಲುತ್ತಿರುವರು. ಆದ್ದರಿಂದ ಭಕ್ತಿಯು ಯಾವಾಗಲೂ ಪ್ರಾಪ್ತವಾಗಿಯೇ ಇದ್ದರೂ ಅಪ್ರಾಪ್ತವಾದಂತೆ ಆಗಿರುತ್ತದೆ. ತಾವು ದೇಹಾದಿರೂಪವಾಗಿರುವವರೆಂದು ಭಾವಿಸಿರುವ ಅಜ್ಞರ ದೃಷ್ಟಿಯಿಂದ

ಆವರ ಪರಮಾರ್ಥರೂಪವಾದ ಅಮೃತಸ್ವರೂಪವನ್ನು ಅವರು ಹೊಸದಾಗಿ ಪಡೆದು ಕೊಳ್ಳಬೇಕಾಗಿರುತ್ತದೆ. ಪ್ರೇಮರೂಪವಾದ ವೃತ್ತಿಯೂ ವ್ಯವಹಾರದಲ್ಲಿ ಎಲ್ಲರಿಗೂ ಸ್ವಾಭಾವಿಕವಾಗಿರುವದಿಲ್ಲ; ರಾಗದ್ವೇಷಾದಿಗಳು ಅದಕ್ಕೆ ಅಡ್ಡಿಯಾಗಿರುವದರಿಂದ ಭಗವಚ್ಚಿಂತನೆಯೇ ಮುಂತಾದ ಸಾಧನಗಳಿಂದ ಅಡ್ಡಿಯನ್ನು ಕಳೆದುಕೊಂಡು ಅದನ್ನು ಸಂಪಾದಿಸಿಕೊಳ್ಳಬೇಕಾಗಿರುತ್ತದೆ. ಹೀಗೆ ಎರಡು ದೃಷ್ಟಿಯಿಂದಲೂ ಭಕ್ತಿಯನ್ನು ಪ್ರಯತ್ನಪೂರ್ವಕವಾಗಿ ಪಡೆದುಕೊಳ್ಳಬೇಕಾಗಿರುವದರಿಂದ 'ಅದನ್ನು ಪಡೆದುಕೊಂಡರೆ' ಎಂದು ಸೂತ್ರಕಾರರು ಹೇಳಿರುವದು ಯುಕ್ತವೇ ಆಗಿರುತ್ತದೆ.

## 'ಪುಮಾನ್' (ಪುರುಷನು) ಎಂಬುದರ ಅರ್ಥ

೧೬. ಈಗ ಇನ್ನೊಂದು ಶಂಕೆಯು ತಲೆಯೆತ್ತುವ ಸಂಭವವಿದೆ: ಸೂತ್ರದಲ್ಲಿ 'ಪುಮಾನ್' (ಪುರುಷನು) ಎಂಬ ಶಬ್ದವನ್ನು ಉಪಯೋಗಿಸಿರುವದನ್ನು ನೋಡಿದರೆ ಸ್ತ್ರೀಯರಿಗೆ ಭಕ್ತಿಯಲ್ಲಿ ಅಧಿಕಾರವಿಲ್ಲವೆಂಬ ಧ್ವನಿಯು ತೋರುವದಿಲ್ಲವೆ?

ಈ ಶಂಕೆಗೆ ಪರಿಹಾರವಿದು: ಸ್ತ್ರೀಯರಿಗೂ ಭಕ್ತಿಯಲ್ಲಿ ಅಧಿಕಾರವಿದೆ ಯೆಂಬುದು ಮುಂದೆ (ಸೂ. ೨೧ರಲ್ಲಿ) ವ್ರಜಗೋಪಿಕೆಯರ ದೃಷ್ಟಾಂತದಿಂದ ಸ್ಪಷ್ಟ ವಾಗುವದು. ಭಕ್ತಿಗೆ ಇಂಥವರೇ ಅಧಿಕಾರಿಗಳೆಂಬ ನಿಯಮವಿಲ್ಲವೆಂಬುದೂ ಎಲ್ಲರೂ ತಮತಮಗೆ ಉಚಿತವಾದ ಭಕ್ತಿಯ ಪ್ರಕಾರವನ್ನು ಅನುಸರಿಸಿ ಕೃತಕೃತ್ಯ ರಾಗಬಹುದೆಂಬುದೂ ಮುಂದೆ ಸ್ಪಷ್ಟವಾಗುವದು. ಈಗ ಇಲ್ಲಿ ಬಳಸಿರುವ 'ಪುಮಾನ್' ಎಂಬ ಶಬ್ದವು ಮನುಷ್ಯವಾಚಕ. **'ಸ್ಯುಃ ಪುಮಾಂಸಃ ಪಞ್ಚ ಜನಾಃ ಪುರುಷಾಃ ಪೂರುಷಾ ನರಃ'** (ಅಮರ. ಮನುಷ್ಯವರ್ಗ ೧) ಎಂಬ ನಿಘಂಟುವಿನಂತೆ ಪುಮಾನ್, ಪುರುಷ-ಎಂಬ ಶಬ್ದಗಳನ್ನು ಮನುಷ್ಯಸಾಮಾನ್ಯಕ್ಕೆ ಬಳಸಬಹುದಾಗಿದೆ. ಶಾಸ್ತ್ರದೃಷ್ಟಿಯಿಂದ ನೋಡಿದಾಗ ಆತ್ಮನು ಗಂಡಸೂ ಅಲ್ಲ, ಹೆಂಗಸೂ ಅಲ್ಲ.

**ಪುಮಾಂ ಸ್ತ್ರೀ ಗೌರಜಾ ವಾಜೀ ಕುಞ್ಜರೋ ವಿಹಗಸ್ತರುಃ ।**
**ದೇಹೇಷು ಲೋಕಸಂಜ್ಞೇಯಂ ವಿಜ್ಞೇಯಾ ಕರ್ಮಹೇತುಷು ॥**
**ಪುಮಾನ್ ನ ದೇವೋ ನ ನರೋ ನ ಪಶುರ್ನ ಚ ಪಾದಪಃ ।**
**ಶರೀರಾಕೃತಿಭೇದಾಸ್ತು ಭೂಪೈತೇ ಕರ್ಮಯೋನಯಃ ॥**

ವಿ. ಪು. ೨-೧೩-೯೭,೯೮

ಗಂಡಸು, ಹೆಂಗಸು, ಎತ್ತು, ಆಡು, ಕುದುರೆ, ಆನೆ, ಹಕ್ಕಿ, ಮರ- ಇವುಗಳೆಲ್ಲವೂ ಕರ್ಮದಿಂದಾಗಿರುವ ದೇಹಗಳಿಗೆ ಜನರು ಇಟ್ಟುಕೊಂಡಿರುವ ಹೆಸರುಗಳು. ಜೀವನು ದೇವತೆಯಲ್ಲ, ಮನುಷ್ಯನಲ್ಲ, ಪಶುವಲ್ಲ, ಮರವೂ ಅಲ್ಲ. ಈ ಶರೀರದ ಆಕೃತಿವಿಶೇಷಗಳು ಕರ್ಮನಿಮಿತ್ತವಾಗಿರುತ್ತವೆ. ಆದ್ದರಿಂದ ಸೂತ್ರಕಾರರಿಗೆ

ಪುಮಾನ್ ಎಂಬ ಶಬ್ದವನ್ನು ಗಂಡಸು ಎಂಬರ್ಥದಲ್ಲಿ ಬಳಸಬೇಕೆಂಬುದರಲ್ಲಿ ತಾತ್ಪರ್ಯವಿಲ್ಲ. ಮನುಷ್ಯರಾದವರಿಗೇ ಶಾಸ್ತ್ರದಲ್ಲಿ ಹೇಳಿರುವ ಸಾಧನಗಳನ್ನು ಅನುಷ್ಠಾನಮಾಡುವ ಅಧಿಕಾರವು ವಿಶೇಷವಾಗಿದೆ ಎಂಬುದನ್ನು ತಿಳಿಯಿಸುವದೇ ಅವರ ಮುಖ್ಯೋದ್ದೇಶ.

ಹಾಗಾದರೆ ಈ ಮಾತನ್ನು ಕೈಬಿಟ್ಟಿದ್ದರೇ ಆಗುತ್ತಿತ್ತಲ್ಲ? ಮನುಷ್ಯ ಎಂಬ ಪ್ರಸಿದ್ಧಶಬ್ದವನ್ನೇ ಏಕೆ ಬಳಸಬಾರದಾಗಿತ್ತು? ಇದನ್ನೇ ಇಲ್ಲಿ ಸೇರಿಸಿರುವದಕ್ಕೆ ಪ್ರಯೋಜನವೇನು?– ಎಂದರೆ ಸೂತ್ರಕಾರರಿಗೆ ಇಲ್ಲಿ ಒಂದು ಆಶಯವಿದೆ: ಗಂಡಸು ಎಂಬರ್ಥವೂ ಬರಬಹುದಾದ ಮನುಷ್ಯವಾಚಕವನ್ನು ಉಪಯೋಗಿಸಿರುವದರಿಂದ ಗಂಡಸರ ವಿಷಯಕ್ಕೆ ಹೇಳಬೇಕಾದ ಒಂದು ಹೆಚ್ಚಿನ ವಿಷಯವನ್ನು ಇಲ್ಲಿ ಸೂಚಿಸಿದಂತಾಗುವದು. ಅದೇನೆಂದರೆ ಹೆಂಗಸರಿಗಿಂತಲೂ ಲೋಕದಲ್ಲಿ ಗಂಡಸರಿಗೆ ಕೆಲವು ಸೌಕರ್ಯಗಳು ಹೆಚ್ಚಾಗಿರುತ್ತವೆ. ಆದ್ದರಿಂದ ಗಂಡಸಾದವನು ಓದು, ಬರಹ, ಲೆಕ್ಕ, ಭೌತಿಕವಿದ್ಯೆ– ಮುಂತಾದವುಗಳನ್ನು ಹೆಚ್ಚಾಗಿ ಕಲಿಯುವದರಲ್ಲಿಯೇ ತನ್ನ ಮನಸ್ಸನ್ನು ಹಾಕಿ, ಅದರಿಂದ ಪಡೆದುಕೊಂಡ ಜ್ಞಾನವನ್ನು ಸಭೆಗಳಲ್ಲಿಯೋ ಸರಕಾರದವರಲ್ಲಿಯೋ ತೋರಿಸಿ ಬಹುಮಾನಗಳನ್ನು ಪಡೆದು ಕುಟುಂಬವನ್ನು ರಕ್ಷಿಸಿಕೊಳ್ಳುತ್ತಿದೇನೆ– ಎಂದು ಗರ್ವಿಸಬಹುದು; ವೇದಗಳನ್ನೂ ವೇದಾಂಗಗಳನ್ನೂ ತತ್ತ್ವಶಾಸ್ತ್ರಗಳನ್ನೂ ಅಭ್ಯಾಸಮಾಡುವ ವಿಶಿಷ್ಟಾಧಿಕಾರವು ತನಗಿದೆ ಎಂದು ಹೆಮ್ಮೆಪಡಬಹುದು; ಕವಿತಾದಿಗಳಿಂದ ತನ್ನ ಹೆಚ್ಚುಗಾರಿಕೆಯನ್ನು ಪ್ರಕಟಿಸುತ್ತಾ ಎಲ್ಲವೂ ತನ್ನ ವಶವಾಗಿದೆ ಎಂದು ಹಮ್ಮಿನಿಂದ ನಡೆಯಬಹುದು; ಯೋಗಾಭ್ಯಾಸವನ್ನು ಮಾಡಿ ಅಷ್ಟವಿಧಸಿದ್ಧಿಗಳನ್ನು ಪಡೆದು ಮೆರೆಯುವೆನೆಂದು ಹವಣಿಸಬಹುದು; ಇಲ್ಲದಿದ್ದರೆ ದೇವತಾದಿಗಳನ್ನು ಉಪಾಸನೆಮಾಡಿ ಸಣ್ಣಪುಟ್ಟ ಸಿದ್ಧಿಗಳಿಗೆ ಕೈನೀಡಲೂಬಹುದು. ಇಂಥ ಅನರ್ಥಗಳಿಗೆ ಅವಕಾಶವು ಗಂಡಸಿಗೇ ಹೆಚ್ಚಾಗಿರುವದರಿಂದ ಇಂಥ ಭಾಗ್ಯಗಳು ಯಾರಿಗೂ ಸ್ಥಿರವಲ್ಲವೆಂದೂ ಎಂದಿಗೂ ಹೆಚ್ಚದೆ ಹಿಗ್ಗದೆ ಇರುವ ನಿತ್ಯಸಿದ್ಧಿಯನ್ನು ಪಡೆದುಕೊಂಡರೆ ಪುರುಷಜನ್ಮವನ್ನು ಪಡೆದುಕೊಂಡದ್ದು ಸಾರ್ಥಕವಾಗುವದೆಂದೂ ಗಂಡಸಾದವನಿಗೆ ಎಚ್ಚರಿಕೆಕೊಡುವದು ಆವಶ್ಯವಾಗಿರುತ್ತದೆ. ಇದನ್ನು ನೆನಪಿಗೆ ತರುವದಕ್ಕಾಗಿ 'ಪುಮಾನ್' ಎಂಬ ಶಬ್ದವನ್ನು ಇಲ್ಲಿ ಉಪಯೋಗಿಸಿರುತ್ತದೆ.

## 'ಸಿದ್ಧೋ ಭವತಿ' ಎಂಬುದರ ಅರ್ಥ

೧೭. ಭಕ್ತಿಯನ್ನು ಪಡೆದುಕೊಂಡವನಿಗೆ ಲಭಿಸುವ ಸಿದ್ಧಿಗಳೆಂದರೆ ಯೋಗಸಿದ್ಧಿ, ತಪಸ್ಸಿದ್ಧಿ, ಮಂತ್ರಸಿದ್ಧಿ– ಮುಂತಾದ ಸಿದ್ಧಿಗಳಲ್ಲ. ದೇವಯೋನಿಗಳಲ್ಲಿ ಕೆಲವರು ಸಿದ್ಧರೆಂಬ ವಿಶೇಷಜನ್ಮವನ್ನು ಪಡೆದಿರುತ್ತಾರೆ. ಅವರಿಗೆ ಇರುವ ಸಿದ್ಧಿಗಳೂ ಕೊನೆಗೆ ನಾಶವಾಗುವವೇ ಆಗಿರುತ್ತವೆ. ಇಲ್ಲಿ 'ಸಿದ್ಧಿ' ಎಂದರೆ ಭಕ್ತಿಯಿಂದ

ಭಗವನ್ಮಯನಾಗಿ ಅವನ ಸ್ವರೂಪದಿಂದಲೇ ನೆಲೆನಿಲ್ಲುವದೆಂಬ **ನಿತ್ಯಸಿದ್ಧಿ**. ಇದು ಇದ್ದವನಿಗೆ ಉಳಿದ ಸಿದ್ಧಿಗಳೆಲ್ಲವೂ ತಾವೇ ಸಿದ್ಧವಾಗಿರುತ್ತವೆ ; ಏಕೆಂದರೆ ಭಗವಂತನಲ್ಲಿಲ್ಲದ ಸಿದ್ಧಿಗಳು ಎಲ್ಲಿಂದ ಬರಬೇಕು ? ಹೀಗಿರುವಲ್ಲಿ ಭಗವತ್ಸ್ವರೂಪ ರಾಗಿಯೇ ಇರುವವರಿಗೆ ಯಾವ ಸಿದ್ಧಿಯ ಬಯಕೆಯಾಗಲಿ ಹೇಗೆತಾನೆ ಇದ್ದೀತು ?

ಒಮ್ಮೆ ಒಬ್ಬ ಭಕ್ತನು ಧನಿಕನಾಗಿಲ್ಲದ್ದನ್ನು ಕಂಡ ಮಹಾಲಕ್ಷ್ಮಿಯು ಕರುಣೆಯಿಂದ ಅಷ್ಟಸಿದ್ಧಿಗಳನ್ನು ಅವನ ಮನೆಗೆ ಕಳುಹಿಸಿಕೊಟ್ಟು ಅವನು ಹೇಳಿ ದಂತೆ ನಡೆದುಕೊಂಡಿರಬೇಕೆಂದು ಕಟ್ಟುಮಾಡಿದಳಂತೆ. ಆಗ ಆ ಸಿದ್ಧಿಗಳು ಸುಂದರಿಯರಾದ ಯುವತಿಯರ ರೂಪವನ್ನು ಧರಿಸಿ ಆ ಮನೆಗೆ ಬಂದವು. ಮಹಾತ್ಮನು ಹೊರಗೆ ಎಲ್ಲಿಯೋ ಹೋಗಿದ್ದವನು ಮನೆಗೆಬಂದಾಗ ಅವರನ್ನು ಕಂಡು 'ನೀವು ಯಾರು? ಇಲ್ಲಿಗೆ ಏತಕ್ಕೆ ಬಂದಿರುವಿರಿ ?' ಎಂದು ಕೇಳಲು ಸಿದ್ಧ್ಯಭಿ ಮಾನದೇವತೆಗಳು ಮಹಾಲಕ್ಷ್ಮೀದೇವಿಯ ಅಪ್ಪಣೆಯನ್ನು ಅವನಿಗೆ ಹೇಳಿದರು. 'ಹಾಗಾದರೆ ನಾನು ಹೇಳಿದಂತೆ ನೀವು ಕೇಳುವಿರಲ್ಲವೆ ?' ಎಂದು ಆತನು ಕೇಳಿದ್ದಕ್ಕೆ 'ಅಪ್ಪಣೆಯಾಗಬೇಕು ; ತಾವು ಹೇಳಿದಂತೆ ನಡೆಯುವದಕ್ಕೇ ಇಲ್ಲಿ ನಿಂತಿದೇವೆ' ಎಂದರು. ಆಗ ಆತನು 'ಹಾಗಾದರೆ ನೀವು ಈ ಕೂಡಲೆ ನನ್ನ ಮನೆಯಿಂದ ಹೊರಟುಹೋಗಿರಿ, ಮತ್ತೆ ಬರಬೇಡಿರಿ. ನನ್ನ ಮಾತನ್ನು ನಡೆಯಿಸುವದಾದರೆ ಈ ಮಾತಿನಂತೆ ಮೊದಲು ನಡೆಯಿರಿ'- ಎಂದನಂತೆ ! ಹೀಗೆ ಭಕ್ತರಾದವರು ಯಾವ ಸಿದ್ಧಿಯನ್ನೂ ಕಡೆಗಣ್ಣಿಂದಲೂ ನೋಡುವದಿಲ್ಲ. ಅಂಥ ಸಿದ್ಧಿಗಳೂ ಅವರಿಗೆ ದೊರತಿರುವ ಈ ಪರಭಕ್ತಿರೂಪವಾದ ಮಹಾಸಿದ್ಧಿಯಲ್ಲೇ ಅಡಕವಾಗಿವೆ.

ಭಗವಂತನು ತಾನೇ ಹೇಳಿರುವದೇನೆಂದರೆ :

**ನ ಪಾರಮೇಷ್ಠ್ಯಂ ನ ಮಹೇನ್ದ್ರಧಿಷ್ಣ್ಯಂ**
**ನ ಸಾರ್ವಭೌಮಂ ನ ರಸಾಧಿಪತ್ಯಮ್ ।**
**ನ ಯೋಗಸಿದ್ಧೀರಪುನರ್ಭವಂ ವಾ**
**ಮಯ್ಯರ್ಪಿತಾತ್ಮೇಚ್ಛತಿ ಮದ್ವಿನಾನ್ಯತ್ ॥**

ಭಾಗ. ೧೧-೧೪-೧೪

'ನನ್ನಲ್ಲಿಯೇ ಅಂತಃಕರಣವನ್ನು ಅರ್ಪಿಸಿರುವ ಭಕ್ತನು ಬ್ರಹ್ಮಪದವಿ ಯನ್ನಾಗಲಿ ಮಹೇಂದ್ರನ ಸ್ವರ್ಗವನ್ನಾಗಲಿ, ಚಕ್ರವರ್ತಿಯ ಪದವಿಯನ್ನಾಗಲಿ ಲೋಕಾಧಿಪತ್ಯವನ್ನಾಗಲಿ ಯೋಗಸಿದ್ಧಿಯನ್ನಾಗಲಿ ಪುನರ್ಜನ್ಮವಿಲ್ಲದ ಮೋಕ್ಷ ವನ್ನಾಗಲಿ – ನನ್ನನ್ನು ಬಿಟ್ಟರೆ ಮತ್ತೇನನ್ನೂ ಬಯಸುವದಿಲ್ಲ ! ಭಗವಂತನಲ್ಲಿ ರುವ ಪ್ರೇಮವೆಂಬುದು ಅಂಥ ಪರಮಸಿದ್ಧಿ !

ಇಲ್ಲಿ ಒಂದು ವಿಶೇಷ : ಭಕ್ತರಾದವರು ಮೋಕ್ಷವನ್ನು ಕೂಡ ಬಯಸುವದಿಲ್ಲವೆಂದು ಭಗವಂತನು ಹೇಳಿರುತ್ತಾನಷ್ಟೆ, ಇದರ ಅಭಿಪ್ರಾಯವೇನು ? **ಕುಲಶೇಖರ**ನೆಂಬ ರಾಜನು ಭಗವಂತನನ್ನು ಹೀಗೆಂದು ಪ್ರಾರ್ಥಿಸಿಕೊಂಡಿರುತ್ತಾನೆ :

**ನಾಹಂ ವನ್ದೇ ತವ ಚರಣಯೋರ್ದ್ವಂದ್ವಮದ್ವಂದ್ವಹೇತೋಃ**
**ಕುಮ್ಭೀಪಾಕಂ ಗುರುಮಪಿ ಹರೇ ನಾರಕಂ ನಾಪನೇತುಮ್ ।**
**ರಮ್ಯಾ ರಾಮಾ ಮೃದುತನುಲತಾ ನನ್ದನೇ ನಾಪಿ ರನ್ತುಂ**
**ಭಾವೇ ಭಾವೇ ಹೃದಯಭವನೇ ಭಾವಯೇಯಂ ಭವನ್ತಮ್ ॥**

ಮುಕುಂದಮಾಲಾ ೪

"ನಾನು ನಿನ್ನ ಪಾದಯುಗ್ಮವನ್ನು ಮೋಕ್ಷವೆಂಬ ಪ್ರಯೋಜನಕ್ಕಾಗಿ ವಂದಿಸುತ್ತಿಲ್ಲ ; ಶ್ರೀಹರಿಯೆ, ಕುಂಭೀಪಾಕವೆಂಬ ನರಕದ ಯಾತನೆಯನ್ನು ತಪ್ಪಿಸಿಕೊಳ್ಳುವದಕ್ಕಾಗಿಯೂ ವಂದಿಸುತ್ತಿಲ್ಲ; ನಂದನವನದಲ್ಲಿ ಕೋಮಲಾಂಗಿಯರ ಸಂಗದಿಂದ ಸುಖಿಸುತ್ತಿರಬೇಕೆಂದೂ ಬಯಸುತ್ತಿಲ್ಲ. (ಮತ್ತೇತಕ್ಕೆಂದರೆ), ಜನ್ಮಜನ್ಮದಲ್ಲಿಯೂ ನನ್ನ ಹೃದಯಗುಹೆಯಲ್ಲಿ ನಿನ್ನನ್ನು ಭಾವಿಸುತ್ತಿರುವಂತಾಗಲಿ !'' ಭಕ್ತನಾದವನು ಎಡೆಬಿಡದೆ ಭಗವಂತನನ್ನು ತನ್ನ ಹೃದಯದಲ್ಲಿ ಭಾವಿಸುತ್ತಿರಬೇಕೆಂದು ಬಯಸುತ್ತಾನೆ; ಅವನಿಗೆ ಭಗವಂತನೇ ಸಿಕ್ಕಿದಮೇಲೆ 'ಮೋಕ್ಷ'ವೆಂಬ ಪರಮಪುರುಷಾರ್ಥವಲ್ಲದೆ ಮತ್ತೇನು ಸಿಕ್ಕೀತು ? ಭಕ್ತನು ಬಯಸದಿದ್ದರೂ ಭಗವತ್ಪ್ರಾಪ್ತಿ ಎಂಬ ನಿತ್ಯಸಿದ್ಧಿಯು ಅವನಿಗೆ ಕಟ್ಟಿಟ್ಟಬುತ್ತಿಯಾಗಿರುವದು.

## 'ಅಮೃತೋ ಭವತಿ' ಎಂಬುದರ ಅರ್ಥ

೧೮. ಅಮೃತಸ್ವರೂಪನಾದ ಭಗವಂತನ ಸ್ವರೂಪದಲ್ಲಿ ನೆಲೆನಿಂತ ಭಕ್ತನು ಅಮೃತನಾಗುವದು ಸ್ವಾಭಾವಿಕವೇ ಆಗಿರುತ್ತದೆ. ಪ್ರೇಮಸ್ವರೂಪನಾದ ಭಗವಂತನನ್ನು ಪಡೆದುಕೊಳ್ಳುವದೆಂಬುದು ಊರು ಮುಂತಾದವುಗಳನ್ನು ದೂರಪ್ರಯಾಣದಿಂದ ಪಡೆಯುವಂತಲ್ಲ. ಅಜ್ಞಾನವನ್ನು ಕಳೆಯುವದಕ್ಕೆ ಸಮರ್ಥನಾಗಿರುವ ಪರಮಬ್ರಹ್ಮಸ್ವರೂಪವಾದ ಭಗವಂತನೇ ತನ್ನ ಆತ್ಮನೆಂಬ ಅನುಭವವನ್ನು ಪಡೆದುಕೊಳ್ಳುವದೇ ಭಗವತ್ಪ್ರಾಪ್ತಿ. ಹಾಗೆಂದು ಶ್ರುತಿಸ್ಮೃತಿಗಳು ಸಾರುತ್ತಿವೆ :

**(१) स यो ह वै तत्परमं ब्रह्म वेद ब्रह्मैव भवति । नास्याब्रह्मवित्कुले भवति । तरति शोकं तरति पाप्मानं गुहाग्रन्थिभ्यो विमुक्तोऽमृतो भवति ॥** ಮುಂ. ೩-೨-೯.

'ಯಾವನು ಆ ಪರಮಬ್ರಹ್ಮವನ್ನು ತನ್ನ ಸ್ವರೂಪವೇ ಎಂದು ಅರಿತುಕೊಳ್ಳುವನೋ, ಅವನು ಬ್ರಹ್ಮವೇ ಆಗುವನು; ಇವನ ಕುಲದಲ್ಲಿ ಬ್ರಹ್ಮವನ್ನರಿಯದಾತನು ಇರುವದಿಲ್ಲ. ಅವನು ಶೋಕವನ್ನು ದಾಟುವನು, ಧರ್ಮಾಧರ್ಮರೂಪವಾದ

ಪಾಪವನ್ನು ದಾಟುವನು. ಹೃದಯದಲ್ಲಿರುವ ಅವಿದ್ಯಾಗ್ರಂಥಿಗಳಿಂದ ಬಿಡುಗಡೆ ಯನ್ನು ಹೊಂದಿ ಅಮೃತನಾಗುವನು' ಎಂದು **ಮುಂಡಕಶ್ರುತಿಯು** ಹೇಳುತ್ತಿದೆ.

**ಪೂಃ ಪ್ರಾಣಿನಃ ಸರ್ವ ಏವ ಗುಹಾಶಯಸ್ಯಾಹನ್ಯಮಾನಸ್ಯ ವಿಕಲ್ಮಷಸ್ಯ ।**
**ಅಚಲಂ ಚಲನಿಕೇತಂ ಯೇಽನುತಿಷ್ಠನ್ತಿ ತೇಽಮೃತಾಃ ॥** ಆ.ಧ. ೧-೨-೨೪

ಎಂದು **ಆಪಸ್ತಂಬಸ್ಮೃತಿಯಲ್ಲಿ** ಹೇಳಿದೆ. 'ಎಲ್ಲಾ ಪ್ರಾಣಿಗಳೂ ಹೃದಯಗುಹೆ ಯಲ್ಲಿರುವ ನಾಶರಹಿತನಾದ, ಪಾಪರಹಿತನಾದ ಪರಮಾತ್ಮನ ಪುರಗಳು. ಅಚಲ ವಾಗಿ ಚಲವಾದ ದೇಹದಲ್ಲಿರುವ ಆತನನ್ನು ಯಾರು ಅರಿತು ಧ್ಯಾನಿಸುತ್ತಿರುವರೋ ಆವರು **ಅಮೃತರು**' ಎಂದು ಆ ಸೂತ್ರದ ಅರ್ಥ.

## ತೃಪ್ತೋ ಭವತಿ

೧೯. ಈ ಭಕ್ತಿಯನ್ನು ಪಡೆದುಕೊಂಡಿರುವಾತನು **ತೃಪ್ತನೂ** ಆಗಿರು ತ್ತಾನೆ. ತೃಪ್ತಿಯೆಂದರೆ ಇದನ್ನು ಸಂಪಾದಿಸಿಕೊಂಡು ಇಂಥ ಇಷ್ಟಪ್ರಾಪ್ತಿಯನ್ನು ಮಾಡಿಕೊಳ್ಳಬೇಕು ಎಂಬ ತಹತಹವಾಗಲಿ, ಇಂಥ ಸಂಕಷ್ಟದಾಯಕವಾದ ವಿಷಯವನ್ನು ದೂರವಾಗಿರಿಸಿಕೊಂಡು ಅನಿಷ್ಟವನ್ನು ಪರಿಹರಿಸಿಕೊಳ್ಳಬೇಕಲ್ಲ !. ಎಂಬ ಕಳವಳವಾಗಲಿ ಇಲ್ಲದೆ ಇರುವದು. ಲೋಕದಲ್ಲಿ ಸಾಮಾನ್ಯರು ಇಹ ಲೋಕದ ಸುಖಕ್ಕಾಗಿ ವಿಷಯಗಳ ಯೋಗಕ್ಷೇಮದಲ್ಲಿ ನಿರತರಾಗಿರುತ್ತಾರೆ ಕರ್ಮಿಗಳಾದವರು ಅನಿಷ್ಟವಾದ ನರಕವನ್ನು ತಪ್ಪಿಸಿಕೊಂಡು ಇಷ್ಟವಾದ ಸ್ವರ್ಗ ವನ್ನು ಪಡೆದುಕೊಳ್ಳಬೇಕೆಂದು ಆಯಾಸಕರವಾದ ಕರ್ಮಗಳನ್ನು ಮಾಡುತ್ತಿರು ತ್ತಾರೆ. ಇನ್ನು ಕೆಲವರು ಯೋಗಾದಿಗಳನ್ನು ಅನುಷ್ಠಾನಮಾಡಿ ಅವುಗಳಿಂದಾಗ ಬೇಕಾದ ಸಿದ್ಧಿಗಳನ್ನೋ ಸಮಾಧಿಸುಖವನ್ನೋ ಹೊಂದುವದಕ್ಕೆಂದೂ ಆಯಾಸ ಪಡುತ್ತಿರುತ್ತಾರೆ. ಈ ಯಾರಿಗೂ 'ಪಡೆಯಬೇಕಾದ್ದನ್ನು ಪಡೆದುಕೊಂಡೆವು, ಪರಿಹರಿಸಿಕೊಳ್ಳಬೇಕಾದದ್ದನ್ನು ತಪ್ಪಿಸಿಕೊಂಡೆವು, ತಿಳಿಯಬೇಕಾದದ್ದನ್ನು ತಿಳಿದು ಕೊಂಡೆವು, ಮಾಡಬೇಕಾದದ್ದೆಲ್ಲವನ್ನೂ ಮಾಡಿರುತ್ತೇವೆ'-ಎಂಬೀ ಪ್ರಕಾರದ ತೃಪ್ತಿ ಯುಂಟಾಗಿರುವದಿಲ್ಲ. ಯಾವನು ಭಗವಂತನ ಸ್ವರೂಪದಲ್ಲಿಯೇ ನಿಂತಿರುವನೋ, ಅವನು ಕರ್ಮವನ್ನು ಮಾಡುತ್ತಿರಲಿ, ಮಾಡದೆಇರಲಿ-ಅವನಿಗೆ ಯಾವ ತಳಮಳವೂ ಆಗುತ್ತಿರುವದಿಲ್ಲ, ಇಂಥದ್ದು ಬೇಕೆಂಬ ತಹತಹವೂ ಇರುವದಿಲ್ಲ. ಭಗವಂತನಲ್ಲಿ ಯೇ ಅವನು ನಿಂತಿರುವದರಿಂದ ಯಾವ ಕರ್ಮದಲ್ಲಿಯೂ ತೊಡಗದೆ ಇರುತ್ತಾನೆ. ಆಪ್ತಕಾಮನಾದ ಅವನಿಗೆ ಆಗಬೇಕಾದದ್ದು ಏನೂ ಇರುವದಿಲ್ಲ.

**ತ್ಯಕ್ತ್ವಾ ಕರ್ಮಫಲಾಸಙ್ಗಂ ನಿತ್ಯತೃಪ್ತೋ ನಿರಾಶ್ರಯಃ ॥** ಗೀ. ೪-೨೦

ಎಂಬಂತೆ ತಾವು ಮಾಡುತ್ತಿರುವ ಕರ್ಮಗಳೆಲ್ಲವೂ ಭಗವದರ್ಪಿತವಾಗಿರುವದರಿಂದ ಭಕ್ತರಾದವರಿಗೆ ಫಲಾಸಕ್ತಿಯಿರುವದಿಲ್ಲ. ಅವರು ನಿತ್ಯತೃಪ್ತರಾಗಿರುವರು ;

ಅವರು ಇಂಥದ್ದೊಂದು ತಮಗೆ ಬೇಕೆನ್ನುವದಿಲ್ಲ; ತಾವು ಪಡೆಯುವ ಫಲಕ್ಕಾಗಿ ಮತ್ತೊಬ್ಬರನ್ನು ಆಶ್ರಯಿಸುವದೂ ಇಲ್ಲ.

ಯತ್ಪ್ರಾಪ್ಯ ನ ಕಿಞ್ಚಿದ್ವಾಞ್ಛತಿ, ನ ಶೋಚತಿ, ನ ದ್ವೇಷ್ಟಿ, ನ ರಮತೇ, ನೋತ್ಸಾಹೀ ಭವತಿ ॥ ೫ ॥

೫. ಅದನ್ನು ಪಡೆದುಕೊಂಡವನು ಏನನ್ನೂ ಬಯಸುವದಿಲ್ಲ, ಯಾವದಕ್ಕಾಗಿಯೂ ಶೋಕಿಸುವದಿಲ್ಲ, ಯಾವದನ್ನೂ ದ್ವೇಷಿಸುವದಿಲ್ಲ, ಯಾವದರಲ್ಲಿಯೂ ರತನಾಗಿರುವದಿಲ್ಲ, (ಯಾವ ಕಾರ್ಯವನ್ನು ಮಾಡುವದರಲ್ಲಿಯೂ) ಉತ್ಸಾಹಿಯಾಗಿರುವದಿಲ್ಲ.

## ನ ಕಿಞ್ಚಿದ್ವಾಞ್ಛತಿ, ನ ಶೋಚತಿ

೨೦. ಪರಭಕ್ತನು ಭಗವದ್ಭಕ್ತಿಯ ಪ್ರಾಪ್ತಿಯಿಂದ 'ತೃಪ್ತ'ನಾಗಿರುವನು ಎಂದು ಹಿಂದೆ ಹೇಳಿರುವದರ ವಿವರವನ್ನು ಇಲ್ಲಿ ವ್ಯತಿರೇಕಮುಖವಾಗಿ ತಿಳಿಯಿಸಿದೆ. ಯಾವ ಮಜಲಿಗೆ ಹೋಗಬೇಕಾಗಿತ್ತೋ ಅಲ್ಲಿಗೆ ಹೋದವನಿಗೆ ಹೇಗೆ ಬಂದ ದಾರಿಯ ವಿಷಯದಲ್ಲಿಯಾಗಲಿ, ಆವರೆಗೆ ತಾನು ಉಪಯೋಗಿಸಿಕೊಂಡಿದ್ದ ಯಾನವಾಹನಾದಿಸಾಧನಗಳಲ್ಲಾಗಲಿ ಯಾವ ಆಸ್ಥೆಯೂ ಇಲ್ಲವೆಹೋಗುವದೋ, ಅವುಗಳನ್ನೆಲ್ಲ ಕೈಬಿಟ್ಟು ಹೇಗೆ ತಾನು ಮುಟ್ಟಬೇಕಾಗಿದ್ದ ಗುರಿಯನ್ನು ಮುಟ್ಟಿದೆನೆಂಬ ತೃಪ್ತಿಯಿಂದ ಅವುಗಳ ವಿಷಯಕ್ಕೆ ಉದಾಸೀನನಾಗಿರುವನೋ ಹಾಗೆಯೇ ಪರಭಕ್ತಿಯನ್ನು ಮುಟ್ಟಿದವನು ವಿಷಯಗಳ ವಿಷಯಕ್ಕೂ ಉದಾಸೀನನಾಗಿರುವನಲ್ಲವೆ ? ಇದನ್ನೇ ಇಲ್ಲಿ ವಿವರಿಷುವದಕ್ಕೆ ಮೊದಲುಮಾಡಿರುತ್ತದೆ.

ನದಿಯನ್ನು ದಾಟಿ ಆಚೆಯ ದಡವನ್ನು ಸೇರಿದವನು 'ಇದುವರೆಗೆ ನಾನು ನದಿಯನ್ನು ದಾಟುವಾಗ ಕೂತಿದ್ದ ದೋಣಿಗೆ ಒಳ್ಳೆಯ ಬಣ್ಣದ ಚಿತ್ರವಿತ್ತು ; ಆದ್ದರಿಂದ ಮತ್ತೊಂದುಸಲ ಆ ದೋಣಿಯಲ್ಲಿ ಕುಳಿತು ನದಿಯಮೇಲೆ ಹರಿದಾಡಬೇಕು' ಎಂದೇನೂ ಬಯಸುವದಿಲ್ಲ. ಹಾಗೆಯೇ ಭಕ್ತನು ಶರೀರಭೋಗಕ್ಕೆ ಈವರೆಗೆ ತಾನು ಬಳಸುತ್ತಿದ್ದ ವಿಷಯಗಳ ಗುಣವನ್ನು ನೆನಸಿಕೊಂಡು ಅವುಗಳ ಕಡೆಗೆ ತನ್ನ ಮನಸ್ಸನ್ನು ಹರಿಯಬಿಡುವದಿಲ್ಲ. ಒಬ್ಬ ಗೃಹಸ್ಥನು ಅಂಗಡಿಗೆ ಹೋಗಿ ತನಗೆ ಬೇಕಾಗಿದ್ದ ಪದಾರ್ಥವನ್ನು ಕೊಂಡುಕೊಂಡು ಮನೆಗೆ ಬಂದಮೇಲೆ ತನಗೆ ಬೇಕಾಗಿದ್ದ ಪದಾರ್ಥವು ಸಿಕ್ಕಿತು ಎಂದು ತೃಪ್ತನಾಗಿರುವನೇ ಹೊರತು, 'ಈವರೆಗೆ ನನ್ನ ಕೈಯಲ್ಲಿದ್ದ ರೂಪಾಯಿಗಳು ಎಷ್ಟು ಥಳಗುಟ್ಟುತ್ತಿದ್ದವು ! ಎಷ್ಟೋ ಕಷ್ಟಪಟ್ಟು ಅವನ್ನು ಸಂಪಾದಿಸಿದ್ದೆ ; ಈಗ ಅವನ್ನು ಅನ್ಯಾಯವಾಗಿ ಕಳೆದು

ಕೊಂಡೆನಲ್ಲ ! ಎಂದು ಶೋಕಿಸುವನೇನು ? ಇಲ್ಲ. ಹಾಗೆಯೇ ಭಕ್ತನಾದವನು ಭಕ್ತಿಯು ಸಿಕ್ಕುವವರೆಗೆ ಯಾವಯಾವ ವಿಷಯಗಳು ಅನರ್ಘವಾದವುಗಳೆಂದು ಭಾವಿಸಿದ್ದನೋ ಅವುಗಳನ್ನು ಕಳೆದುಕೊಂಡುಬಿಟ್ಟೆನಲ್ಲ !– ಎಂದು ಶೋಕಿಸು ವದಿಲ್ಲ.

## ನ ದ್ವೇಷ್ಟಿ, ನ ರಮತೇ

೨೧. ಇದರಂತೆಯೇ ಭಕ್ತಿಯ ಪ್ರಾಪ್ತಿಗಿಂತ ಮೊದಲು ಕೆಲವು ಪದಾರ್ಥಗಳೂ ಕೆಲವು ಪ್ರಾಣಿಗಳೂ ಮನುಷ್ಯರೂ ಇವನಿಗೆ ಒಳ್ಳೆಯವೆಂಬ ಭಾವವಿತ್ತು ; ಇನ್ನು ಕೆಲವು ಪದಾರ್ಥಗಳೂ ಪ್ರಾಣಿಗಳೂ ಮನುಷ್ಯರೂ ಕೆಟ್ಟವೆಂಬ ಭಾವನೆಯಿತ್ತು. ವಸ್ತುಗಳಲ್ಲಿ ಗುಣದೋಷಬುದ್ಧಿಯಿರುವದೇ ವ್ಯವಹಾರದಲ್ಲಿ ಮುಳುಗಿರುವವರ ಸ್ವಭಾವ. ದೋಷವುಳ್ಳ ವಸ್ತುಗಳನ್ನೂ ಜನರನ್ನೂ 'ಇವು ನನಗೆ ಬೇಡ' ಎಂದು ದ್ವೇಷದಿಂದ ಕಾಣುವದೂ ಗುಣವುಳ್ಳ ವಸ್ತುಗಳನ್ನೂ ಜನರನ್ನೂ ಮೆಚ್ಚಿ ಅವುಗಳಲ್ಲಿಯೇ ಮನಸ್ಸಿಟ್ಟು ರಮಿಸುತ್ತಿರುವದೂ ವ್ಯಾವಹಾರಿಕರಿಗೆ ಸ್ವಭಾವವಾಗಿರುತ್ತದೆ. ಆದರೆ ಸರ್ವವ್ಯವಹಾರವನ್ನೂ ಮೀರಿ ಭಗವಂತನಲ್ಲಿಯೇ ಪರಮಪ್ರೇಮವನ್ನು ಪಡೆದುಕೊಂಡಿರುವ ಮಹಾತ್ಮನಿಗೆ ವಿಷಯ ಗಳಲ್ಲಿ ದೋಷಬುದ್ಧಿಯೂ ಇರುವದಿಲ್ಲ, ಗುಣಬುದ್ಧಿಯೂ ಇರುವದಿಲ್ಲ ; ಭಗವಂತನೇ ಉದ್ಧವನಿಗೆ ಹೇಳಿರುವಂತೆ :

**ಕಿಂ ವರ್ಣಿತೇನ ಬಹುನಾ ಲಕ್ಷಣಂ ಗುಣದೋಷಯೋಃ ।**
**ಗುಣದೋಷದೃಶಿರ್ದೋಷೋ ಗುಣಸ್ತೂಭಯವರ್ಜಿತಃ ॥**

ಭಾಗ. ೧೧-೧೯-೪೫

ಗುಣವೆಂದರೇನು ? ದೋಷವೆಂದರೇನು ? –ಎಂಬುದನ್ನು ಬಗೆಬಗೆಯಾಗಿ ಬಣ್ಣಿಸಿ ಹೇಳುವದರಿಂದ ಪ್ರಯೋಜನವಿಲ್ಲ. ಒಂದೇ ಮಾತಿನಲ್ಲಿ ಹೇಳುವದಾದರೆ ಗುಣ, ದೋಷ –ಎಂದು ವಿಂಗಡಿಸಿ ಕಾಣುವದೇ **ದೋಷವು ; ಈ** ಎರಡು ಬುದ್ಧಿಗಳೂ ಇಲ್ಲದಿರುವದೇ **ಗುಣವು.** ಹೀಗೆಂಬುದು ಭಕ್ತನ ದೃಷ್ಟಿ. ಗುಣಗಳ ಮತ್ತು ದೋಷಗಳ ವಿಭಾಗವನ್ನು ಮೀರಿರುವ ಭಗವದ್ಭಕ್ತಿಯಲ್ಲಿಯೇ ತನ್ಮಯನಾಗಿರು ವವನಿಗೆ ಯಾವದರಲ್ಲಿತಾನೆ ದ್ವೇಷವಿದ್ದೀತು ? ಭಗವಂತನನ್ನು ಬಿಟ್ಟು ಮತ್ತೆ ಯಾವದರಲ್ಲಿತಾನೆ ಅವನು ರಮಿಸಿಯಾನು ?

## ನೋತ್ಸಾಹೀ ಭವತಿ

೨೨. ಉತ್ಸಾಹವೆಂದರೆ ಯಾವದಾದರೂ ಕಾರ್ಯದಲ್ಲಿ ಉದ್ಯತನಾಗು ವದು. ವ್ಯವಹಾರದಲ್ಲಿ ರಜೋಗುಣವು ಹೆಚ್ಚಾಗಿರುವವನು 'ಇದನ್ನು ಮಾಡುವೆನು, ಅದನ್ನು ಮಾಡುವೆನು' ಎಂದು ಉತ್ಸಾಹವನ್ನು ತೋರಿಸುತ್ತಾನೆ. ಹಾಗೆ ಯಾವ

ಕಾರ್ಯದಲ್ಲಿಯಾವರೂ ತೊಡಗುವದಕ್ಕೆ ಇಂಥ ಪ್ರಯೋಜನವಾಗಬೇಕು– ಎಂಬ ಇಚ್ಛೆಯೇ ಕಾರಣವು. ಆದರೆ ಪರಭಕ್ತನು ಪರಮಪುರುಷಾರ್ಥರೂಪವಾದ ಭಗವತ್ಪ್ರಾಪ್ತಿಯನ್ನು ಹೊಂದಿ ಕೃತಕೃತ್ಯನಾಗಿಬಿಟ್ಟಿರುವದರಿಂದ ಅವನಿಗೆ ಕಾರ್ಯವೆಂಬುದೇ ಉಳಿವಿರುವದಿಲ್ಲ. ಆದ್ದರಿಂದ ಅವನಿಗೆ ಯಾವ ಕಾರ್ಯವನ್ನಾದರೂ ಆರಂಭಿಸಬೇಕೆಂಬ ಉತ್ಸಾಹವು ಉಂಟಾಗುವದಕ್ಕೆ ಕಾರಣವಿರುವದಿಲ್ಲ; ಅವನು ಸರ್ವಥಾ ಉಪರತನಾಗಿ ಭಗವಂತನಲ್ಲಿ ನೆಲೆನಿಂತುಬಿಟ್ಟಿರುತ್ತಾನೆ.

## ಗೀತೆಯಲ್ಲಿ ವರ್ಣಿಸಿರುವ ಪರಭಕ್ತನ ಲಕ್ಷಣ

೨೩. ಪರಭಕ್ತನ ಲಕ್ಷಣಗಳು ಇಲ್ಲಿ ಹೇಳಿರುವಷ್ಟೇ ಎಂದು ತಿಳಿಯಬಾರದು. ಭಗವದ್ಗೀತೆಯಲ್ಲಿ ಹನ್ನೆರಡನೆಯ ಅಧ್ಯಾಯದಲ್ಲಿ ಹೇಳಿರುವ ಲಕ್ಷಣಗಳನು ಇಲ್ಲಿ ಮನಸ್ಸಿನಲ್ಲಿ ಹೊರಳಾಡಿಸುವದರಿಂದ ಪ್ರಯೋಜನವುಂಟು. ಶ್ರೀಶಂಕರಾಚಾರ್ಯರವರು ಅಲ್ಲಿರುವ ಶ್ಲೋಕಗಳಿಗೆ ಅವತರಣಿಕೆಯಾಗಿ ಬರೆದಿರುವದೇನೆಂದರೆ :

> "ಅಕ್ಷರೋಪಾಸಕಾನಾಂ ಸಮ್ಯಗ್ದರ್ಶನನಿಷ್ಠಾನಾಂ ಸಂನ್ಯಾಸಿನಾಂ ತ್ಯಕ್ತಸರ್ವೈಷಣಾನಾಂ 'ಅದ್ವೇಷ್ಟಾ ಸರ್ವಭೂತಾನಾಮ್' ಇತ್ಯಾದಿ ಧರ್ಮಪೂಗಂ ಸಾಕ್ಷಾದಮೃತತ್ವಸಾಧನಮ್ ವಕ್ಷ್ಯಾಮೀತಿ ಪ್ರವರ್ತತೇ ॥"

ಈ ವಾಕ್ಯದ ಅರ್ಥವೇನೆಂದರೆ : ಅಕ್ಷರರೂಪನಾದ ಭಗವಂತನನ್ನೇ ಉಪಾಸನೆ ಮಾಡುತ್ತಿರುವ ಸಮ್ಯಗ್ಜ್ಞಾನದಲ್ಲಿಯೇ ನೆಲೆನಿಂತಿರುವ, ಎಲ್ಲಾ ಏಷಣೆಗಳನ್ನೂ ತ್ಯಜಿಸಿರುವ ಸಂನ್ಯಾಸಿಗಳು 'ಅದ್ವೇಷ್ಟಾ ಸರ್ವಭೂತಾನಾಮ್' ಎಂದುಮುಂತಾಗಿ ವರ್ಣಿಸಿರುವ ನೇರಾಗಿ ಅಮೃತತ್ವವನ್ನು ಪಡೆಯುವದಕ್ಕೆ ಕಾರಣವಾಗಿರುವ ಧರ್ಮಸಮೂಹವನ್ನು ಹೇಳಬೇಕೆಂದು ಭಗವಂತನು ಹೊರಟಿರುತ್ತಾನೆ :

**ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।**
**ನಿರ್ಮಮೋ ನಿರಹಙ್ಕಾರಃ ಸಮದುಃಖಸುಖಃ ಕ್ಷಮೀ ॥ ॥ ೧೩ ॥**
**ಸನ್ತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।**
**ಮಯ್ಯರ್ಪಿತಮನೋಬುದ್ಧಿರ್ಯೋ ಮದ್ಭಕ್ತಃ ಸ ಮೇ ಪ್ರಿಯಃ ॥ ೧೪ ॥**
**ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ ।**
**ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸ ಚ ಮೇ ಪ್ರಿಯಃ ॥**
**ಅನಪೇಕ್ಷಃ ಶುಚಿರ್ದಕ್ಷ ಉದಾಸೀನೋ ಗತವ್ಯಥಃ ।**
**ಸರ್ವಾರಮ್ಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥ ೧೬ ॥**

ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಙ್ಕ್ಷತಿ ।
ಶುಭಾಶುಭಪರಿತ್ಯಾಗೀ ಭಕ್ತಿಮಾನ್ ಯಃ ಸ ಮೇ ಪ್ರಿಯಃ ॥ ೧೭ ॥
ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ ।
ಶೀತೋಷ್ಣಸುಖದುಃಖೇಷು ಸಮಃ ಸಙ್ಗವಿವರ್ಜಿತಃ ॥ ॥ ೧೮ ॥
ತುಲ್ಯನಿನ್ದಾಸ್ತುತಿರ್ಮೌನೀ ಸನ್ತುಷ್ಟೋ ಯೇನಕೇನಚಿತ್ ।
ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ ಮೇ ಪ್ರಿಯೋ ನರಃ ॥ ೧೯ ॥
ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।
ಶ್ರದ್ದಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ ॥ ೨೦ ॥

ಗೀ. ೧೨–೧೩ರಿಂದ ೨೦

ಈ ಶ್ಲೋಕಗಳನ್ನು ಕಂಠಪಾಠಮಾಡಿಕೊಂಡು ಅರ್ಥವನ್ನು ಅನುಸಂಧಾನಮಾಡುತ್ತಿರುವವರಿಗೆ ಪರಭಕ್ತಿಯ ಮಹಿಮೆಯು ಅನುಸಂಧಾನವು ಲಭಿಸುತ್ತದೆ. ಈ ಶ್ಲೋಕಗಳ ಅಭಿಪ್ರಾಯವೇನೆಂದರೆ : ಭಕ್ತನಿಗೆ ಎಲ್ಲೆಲ್ಲಿಯೂ ಭಗವದ್ಭಾವನೆಯೇ ಇರುತ್ತಿರುವದರಿಂದ ಅವನು ಯಾರೊಬ್ಬರನ್ನೂ – ತನಗೆ ತೊಂದರೆಯನ್ನು ಕೊಡುವ ಪ್ರಾಣಿಗಳನ್ನು ಕೂಡ – ಹಗೆಮಾಡುವದಿಲ್ಲ. ತನ್ನ ಹತ್ತಿರಕ್ಕೆ ಬರುವವರನ್ನೆಲ್ಲ ಮಿತ್ರಭಾವದಿಂದಲೇ ಕಾಣುತ್ತಿರುವನು ; ಮಿತ್ರರು ಹೇಗೆ ಒಬ್ಬರನ್ನೊಬ್ಬರು ತನಗೆ ಸಮಾನರೆಂದೇ ತಿಳಿದು ಒಬ್ಬರನ್ನೊಬ್ಬರು ಸಲುಗೆಯಿಂದ ವರ್ತಿಸುತ್ತಾ ಪರಸ್ಪರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರುವರೋ ಹಾಗೆಯೇ ಇವನು ಎಲ್ಲರಲ್ಲಿಯೂ ವರ್ತಿಸುತ್ತಿರುವನು. ತಾನು ಉಳಿದವರಿಗಿಂತ ಹೆಚ್ಚಿನವನೆಂಬ ಹೆಮ್ಮೆಯು ಅವನ ಮನದಲ್ಲಿ ಎಂದಿಗೂ ಮೂಡುವದಿಲ್ಲ. ಸಂಸಾರದ ದುಃಖದಿಂದ ನರಳುತ್ತಿರುವವರನ್ನು ಕಂಡರೆ ಅವನು ಕರುಣೆಯುಳ್ಳವನಾಗಿರುವನು. ದೇಹಾದ್ಯನಾತ್ಮವಸ್ತುಗಳಲ್ಲಿ 'ನಾನು ನನ್ನದು' ಎಂಬ ಅಭಿಮಾನವಿಲ್ಲದೆ ಇರುವನು. ದುಃಖವುಂಟಾಗಲಿ ಸುಖವುಂಟಾಗಲಿ ಮನಸ್ಸಿನಲ್ಲಿ ಏರಿಳಿತಗಳಿಲ್ಲದೆ ಇರುತ್ತಾನೆ. ತನ್ನನ್ನು ಬಲಿಷ್ಠರು ಹೊಡೆದರೂ ತಾಳ್ಮೆಯಿಂದಲೇ ಮನೋವಿಕಾರವನ್ನು ಪಡೆಯದೆ ಇರುವನು. ದೇಹಧಾರಣೆಗೆ ಬೇಕಾದಷ್ಟು ಆಹಾರಾದಿಗಳು ಸಿಕ್ಕಿದರೂ ಸಿಕ್ಕದಿದ್ದರೂ ಅಷ್ಟರಿಂದಲೇ ಸಂತುಷ್ಟನಾಗಿ ಸಂತತವಾಗಿ ಮನಸ್ಸನ್ನು ಸಮಾಧಾನಸ್ಥಿತಿಯಲ್ಲಿಟ್ಟುಕೊಂಡು ಶರೀರೇಂದ್ರಿಯಗಳನ್ನೂ ಸ್ವಾಧೀನದಲ್ಲಿಟ್ಟುಕೊಂಡು ಪರಮಾರ್ಥದ ವಿಷಯದಲ್ಲಿ ಸುನಿಶ್ಚಿತವಾದ ಅಭಿಪ್ರಾಯವುಳ್ಳವನಾಗಿ ತನ್ನ ಮನಸ್ಸನ್ನೂ ಬುದ್ಧಿಯನ್ನೂ ಭಗವಂತನಿಗೆ ಒಪ್ಪಿಸಿಬಿಟ್ಟಿರುವನು. ಇವನ ನಿಮಿತ್ತದಿಂದ ಯಾರೊಬ್ಬರಿಗೂ ಮನಸ್ಸಿನಲ್ಲಿ ತಳಮಳವುಂಟಾಗುವದಿಲ್ಲ ; ಮತ್ತೊಬ್ಬರ ವರ್ತನೆಯಿಂದ ಇವನೂ ತಳಮಳವನ್ನು ಹೊಂದದೆ ಇರುತ್ತಾನೆ. ಬಾಹ್ಯನಿಮಿತ್ತಗಳಿಂದ ಉಬ್ಬುವದು, ಮತ್ತೊಬ್ಬರ ವಿಷಯಕ್ಕೆ ಅಸಹನೆ, ಅಂಜಿಕೆ, ಮನಸ್ಸು ಕುದಿಯುವದು–

ಇವುಗಳು ಯಾವವೂ ಇಲ್ಲದಿರುವನು. ದೇಹ, ಇಂದ್ರಿಯಗಳು, ವಿಷಯಸಂಬಂಧ- ಇವುಗಳಲ್ಲಿ ಯಾವದೊಂದರಲ್ಲಿಯೂ ಇಂಥದ್ದು ಬೇಕೆಂಬುದಿಲ್ಲದೆ ನಿಃಸ್ಪೃಹನಾಗಿರುವನು ; ಮನಸ್ಸಿನಲ್ಲಿಯೂ ಮೈಯಲ್ಲಿಯೂ ಶುಚಿಯಾಗಿರುವನು. ಆಗಾಗ್ಗೆ ಬಂದೊದಗುವ ಕಾರ್ಯಗಳ ವಿಷಯಕ್ಕೆ ಏನುಮಾಡಬೇಕೆಂಬುದನ್ನು ಕೂಡಲೆ ಅರಿಯುವದರಲ್ಲಿ ಸಮರ್ಥನಾಗಿರುತ್ತಾನೆ ; ಯಾರೊಬ್ಬರ ಪಕ್ಷವನ್ನೂ ವಹಿಸದೆ ಏತರ ಅಂಜಿಕೆಯೂ ಇಲ್ಲದೆ ನಡೆದುಕೊಂಡಿರುವನು ; ಇಹಪರಸುಖಗಳನ್ನು ಪಡೆದು ಕೊಳ್ಳುವದಕ್ಕೆಂದು ಮಾಡಬೇಕಾದ ಎಲ್ಲಾ ಬಗೆಯ ಕರ್ಮಗಳನ್ನೂ ಬಿಟ್ಟುಬಿಟ್ಟಿರುತ್ತಾನೆ. ಇಷ್ಟಪ್ರಾಪ್ತಿಯಿಂದ ಉಬ್ಬದೆ, ಅನಿಷ್ಟವು ಬಂದೊದಗಿತೆಂದು ಅದರ ವಿಷಯಕ್ಕೆ ದ್ವೇಷವಿಲ್ಲದೆ ಇಂಥದ್ದೊಂದು ಹೋಯಿತಲ್ಲ !- ಎಂದು ಶೋಕಿಸದೆ, ಇಂಥದ್ದೊಂದು ದೊರಕಬೇಕಲ್ಲ! ಎಂದು ಬಾಯಿನೀರುಕರೆಯದೆ, ಒಳ್ಳೆಯ ಅಥವಾ ಕೆಟ್ಟಕರ್ಮಗಳನ್ನು ಮಾಡದೆ ಇರುತ್ತಾನೆ. ಶತ್ರುವಿನ ವಿಷಯದಲ್ಲಿಯೂ ಮಿತ್ರನ ವಿಷಯದಲ್ಲಿಯೂ ಮನ್ನಣೆಯ ಅಥವಾ ಅಪಮಾನದ ವಿಷಯದಲ್ಲಿಯೂ ಶೀತೋಷ್ಣಗಳು ಸುಖದುಃಖಗಳು ಎಂಬ ದ್ವಂದ್ವಗಳ ವಿಷಯದಲ್ಲಿಯೂ ಒಂದೇ ಬಗೆಯಿಂದ ವರ್ತಿಸುತ್ತಾ ಯಾವದೊಂದರಲ್ಲಿಯೂ ಆಸಕ್ತಿಯಿಲ್ಲದೆ ಇರುತ್ತಾನೆ. ಜನರು ತನ್ನನ್ನು ಹೊಗಳಲಿ, ತೆಗಳಲಿ- ವ್ಯರ್ಥಾಲಾಪವನ್ನಾಡದೆ ಮೌನದಿಂದಿರುತ್ತಾ ಯಾವದು ಸಿಕ್ಕಿದರೂ ಅಷ್ಟರಿಂದಲೇ ಸಂತುಷ್ಟನಾಗಿ ಇಂಥದ್ದೊಂದು ನಿವಾಸಸ್ಥಲವೆಂಬ ನಿಯಮವಿಲ್ಲದೆ ಪರಮಾರ್ಥದ ವಿಷಯದಲ್ಲಿ ಸ್ಥಿರಬುದ್ಧಿಯುಳ್ಳವನಾಗಿರುತ್ತಾನೆ.

ಈ ಲಕ್ಷಣಗಳನ್ನು ವಿಸ್ತಾರವಾಗಿ ಇಲ್ಲಿ ಹೇಳಿರುವ ಕಾರಣವನ್ನು ಕೊನೆಯ ಶ್ಲೋಕದಲ್ಲಿ ಹೇಳಿಟ್ಟಿರುತ್ತದೆ. ಭಗವದ್ಭಕ್ತನ ಲಕ್ಷಣಗಳು ಇಂಥವೆಂಬುದನ್ನು ಕೇಳಿದ ಮುಮುಕ್ಷುಗಳು ಈ ನಿವೃತ್ತಿಧರ್ಮದ ಸವಿಯನ್ನು ಅರಿತು, ನಾವೂ ಹೀಗೆಯೇ ಇರಬೇಕೆಂಬ ಆಸೆಯಿಂದ ಭಗವಂತನಲ್ಲಿಯೇ ಮನಸ್ಸಿಟ್ಟವರಾಗಿ ಶ್ರದ್ಧೆಯಿಂದ ಯಾರು ಪ್ರಯತ್ನಪೂರ್ವಕವಾಗಿ ಈ ಸಾಧನಗಳನ್ನು ಕೈಕೊಳ್ಳುವರೋ ಅವರು ಭಗವಂತನಿಗೆ, ಅತ್ಯಂತಪ್ರಿಯರಾಗುವರು- ಎಂಬುದು ಉಪಸಂಹಾರ ವಾಕ್ಯದ ತಾತ್ಪರ್ಯ. ಇಂಥ ಭಕ್ತನು ನನಗೆ ಪ್ರಿಯನು, **'ಯೋ ಮದ್ಭಕ್ತಃ ಸ ಮೇ ಪ್ರಿಯಃ'**-ಎಂದು ಪಲ್ಲವಿಯನ್ನು ಪ್ರತಿಯೊಂದು ಶ್ಲೋಕದ ಕೊನೆಯಲ್ಲಿಯೂ ಸೇರಿಸಿರುವದು ಭಗವಂತನು ಭಕ್ತಿಗೆ ಒಲಿಯುತ್ತಾನೆಯೇ ಹೊರತು ಮತ್ತೆಯಾವದನ್ನೂ ಬಯಸುವದಿಲ್ಲ- ಎಂದು ತಿಳಿಸುವದಕ್ಕಾಗಿ. ಭಗವಂತನು ಉದ್ಧವನನ್ನು ಕುರಿತು ಆಡಿದ ಮಾತುಗಳನ್ನು ಇಲ್ಲಿ ನೆನಪಿಗೆ ತಂದುಕೊಳ್ಳುವದು ಒಳ್ಳೆಯದು :

**ನ ತಥಾ ಮೇ ಪ್ರಿಯತಮ ಆತ್ಮಯೋನಿರ್ನ ಶಙ್ಕರಃ ।**
**ನ ಚ ಸಙ್ಕರ್ಷಣೋ ನ ಶ್ರೀರ್ನೈವಾऽऽತ್ಮಾ ಚ ಯಥಾ ಭವಾನ್ ॥**

ಭಾಗ. ೧೧-೧೪-೧೫

"ಉದ್ಧವನೆ, ನನಗೆ ಬ್ರಹ್ಮನಾಗಲಿ, ಶಿವನಾಗಲಿ, ಬಲರಾಮನಾಗಲಿ, ಲಕ್ಷ್ಮಿ ಯಾಗಲಿ, ಕೊನೆಗೆ ನಾನೇ ಆಗಲಿ, ನಿನ್ನಷ್ಟು ಪ್ರಿಯರಲ್ಲ." ಈ ಅರ್ಥವಾದವು ಭಗವದ್ಭಕ್ತನಿಗಿಂತ ಭಗವಂತನಿಗೆ ಮತ್ತೆಯಾರೂ ಹೆಚ್ಚು ಪ್ರಿಯರಾಗುವ ಸಂಭವ ವಿಲ್ಲ ಎಂಬುದನ್ನು ಮನಸ್ಸಿಗೆ ತಾಕಿಸುತ್ತದೆ.

## ಜ್ಞಾನಭಕ್ತಿಗಳ ಸಂಬಂಧ

೨೪. ಇಲ್ಲಿ ಒಂದು ಶಂಕೆ: ಅಹಂಕಾರವನ್ನು ತೊಲಗಿಸಿ ಪರಮಪುರುಷಾರ್ಥವನ್ನು ಕೊಡುವದಕ್ಕೆ ಜ್ಞಾನವು ಬೇಕೇಹೊರತು ಭಕ್ತಿಮಾತ್ರದಿಂದ ಆ ಫಲವುಂಟಾಗಲಾರದು. ಏಕೆಂದರೆ ಅಹಂಕಾರದ ತೊಡಕೆಂಬುದು ನಿಜವಾಗಿ ಉಂಟಾಗಿದ್ದರೆ ಅದು ಏತರಿಂದಲೂ ತೊಲಗಲಾರದು. ಆದ್ದರಿಂದ ಹಗ್ಗದಲ್ಲಿ ತೋರುವ ಹಾವಿನಂತೆ ಅದು ತಪ್ಪುತಿಳಿವಳಿಕೆಯಿಂದ ತೋರುವ ಹುಸುತೋರಿಕೆಯಾದ್ದರಿಂದ ಅದನ್ನು ಸರಿಯಾದ ತಿಳಿವಳಿಕೆಯ ರೂಪದ ಜ್ಞಾನವೊಂದೇ ತೊಲಗಿಸೀತು- ಹೀಗೆಂಬುದು ಕೆಲವರ ಆಕ್ಷೇಪ.

ಇದಕ್ಕೆ ಪರಿಹಾರವೇನೆಂದರೆ: ಮುಖ್ಯಭಕ್ತಿಯೆಂದರೆ ಆತ್ಮಾಕಾರವಾದ ವೃತ್ತಿಯೇ ಆಗಿರುತ್ತದೆ. ಆತ್ಮನು ಜ್ಞಾನಾನಂದರೂಪನೆಂದು ಶ್ರುತಿಗಳು ಹೇಳುತ್ತಿರುವದರಿಂದ ಅಂಥ ಆತ್ಮನ ಅನುಭವಕ್ಕೆ ಪ್ರೇಮದಿಂದೊಡಗೂಡಿದ ಆತ್ಮಾಕಾರವಾದ ವೃತ್ತಿಯೇ ಅವಶ್ಯವಾಗಿರುತ್ತದೆ. ಲೋಕದಲ್ಲಿ ಒಂದು ವಸ್ತುವಿನ ಜ್ಞಾನವಾಗುವಾಗ ಅದರಲ್ಲಿ ಪ್ರೇಮವೂ ಇರಬೇಕೆಂಬ ನಿಯಮವೇನೂ ಇರುವದಿಲ್ಲ; ಉದಾಹರಣೆಗೆ ಹಾವಿನಾಕಾರದ ವೃತ್ತಿಯುಂಟಾದಾಗ ಅದರ ಜ್ಞಾನದ ಹಿಂಗಡೆಯಲ್ಲಿಯೇ ಹೆದರಿಕೆಯೆಂಬ ವೃತ್ತಿಯೂ ಹುಟ್ಟುವದು. ಆದರೆ ಆತ್ಮನ ವಿಚಾರದಲ್ಲಿ ಹೀಗಿಲ್ಲ. **ಆನಂದರೂಪನಾಗಿರುವ ಆತ್ಮನ ಜ್ಞಾನವುಂಟಾಗುವಾಗ ಪ್ರೇಮಾಕಾರವಾದ ವೃತ್ತಿಯೂ ಅವಶ್ಯವಾಗಿ ಎದ್ದುಕೊಳ್ಳಲೇಬೇಕು. ಇಷ್ಟೇ ಅಲ್ಲ, ಆತ್ಮನ ಅನುಭವರೂಪವಾದ ಜ್ಞಾನವುಂಟಾಗುವದಕ್ಕೂ ಪ್ರೇಮವು ಅತ್ಯವಶ್ಯಕವಾಗಿರುತ್ತದೆ.** ಆದ್ದರಿಂದಲೇ ಭಗವಂತನು ಅರ್ಜುನನಿಗೆ-

**ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಙ್ಕ್ಷತಿ ।**
**ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್ ॥**
**ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।**
**ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನನ್ತರಮ್ ॥**

ಗೀ. ೧೮-೫೪, ೫೫

ಬ್ರಹ್ಮಸ್ವರೂಪನಾದವನು ಅಂತಃಕರಣದಲ್ಲಿ ಪ್ರಸನ್ನನಾಗಿ ಶೋಕವನ್ನೂ ಕಾಂಕ್ಷೆಯನ್ನೂ ಬಿಟ್ಟುಬಿಡುತ್ತಾನೆ. ಸರ್ವಭೂತಗಳಲ್ಲಿಯೂ ಸಮನಾಗಿದ್ದುಕೊಂಡು ನನ್ನ

ಪರಭಕ್ತಿಯನ್ನು ಪಡೆದುಕೊಳ್ಳುತ್ತಾನೆ. ಭಕ್ತಿಯಿಂದ ನಾನು ಎಷ್ಟು ಮಹಿಮೆಯುಳ್ಳವನು, ಯಾವ ಸ್ವರೂಪದವನು ? ಎಂಬುದನ್ನು ಹಿಡಿದು ಅರಿತು, ಆ ತತ್ತ್ವಜ್ಞಾನದಿಂದ ನನ್ನಲ್ಲಿಯೇ ಸೇರಿಹೋಗುತ್ತಾನೆ- ಎಂದಿರುತ್ತಾನೆ.

ಯಜ್ಜ್ಞಾತ್ವಾ ಮತ್ತೋ ಭವತಿ ಸ್ತಬ್ಧೋ ಭವತ್ಯಾತ್ಮಾ-
ರಾಮೋ ಭವತಿ ॥ ೬ ॥

೬. ಆ (ಭಕ್ತಿಯನ್ನು) ಅರಿತುಕೊಂಡವನು ಮತ್ತನಾಗಿರುತ್ತಾನೆ, ಸ್ತಬ್ಧನಾಗಿರುತ್ತಾನೆ, ಆತ್ಮಾರಾಮನಾಗಿರುತ್ತಾನೆ.

## ಮತ್ತೋ ಭವತಿ

೨೫. ಈ ಪ್ರೇಮಾಮೃತವನ್ನು ಅನುಭವಿಸುತ್ತಿರುವಾಗ ಭಕ್ತನು ಮೈಮರೆತಿರುವನು. ಮದ್ಯವನ್ನು ಕುಡಿದು ಮತ್ತನಾದವನಂತೆ ಇವನ ವರ್ತನೆಯೂ ಇರುವದು.

**ದೇಹಂ ಚ ನಶ್ವರಮವಸ್ಥಿತಮುತ್ಥಿತಂ ವಾ**
**ಸಿದ್ಧೋ ನ ಪಶ್ಯತಿ ಯತೋಽಧ್ಯಗಮತ್ ಸ್ವರೂಪಮ್ ।**
**ದೈವಾದಪೇತಮುತ ದೈವವಶಾದುಪೇತಂ**
**ವಾಸೋ ಯಥಾ ಪರಿಕೃತಂ ಮದಿರಾಮದಾನ್ಧಃ ॥**

ಭಾಗ. ೧೧-೧೩-೩೬

ಈ ನಶ್ವರವಾದ ಶರೀರವು ಧ್ಯಾನಾವಸ್ಥೆಯಲ್ಲಿ ಹೇಗೇ ಇರಲಿ, ಅಥವಾ ಎಚ್ಚತ್ತು ಎದ್ದೇಳಲಿ, ಸಿದ್ಧನಾದವನಿಗೆ ಇದು ಕಾಣಿಸುವದೇ ಇಲ್ಲ ; ಏಕೆಂದರೆ ಆತನು ತನ್ನ ಸ್ವರೂಪವನ್ನು ಪಡೆದುಕೊಂಡುಬಿಟ್ಟಿರುತ್ತಾನೆ. ಮದ್ಯದಿಂದ ಮತ್ತನಾಗಿ ಏನನ್ನೂ ಕಾಣದೆ ಇರುವವನು ದೈವವಶದಿಂದ ಮೈಮೇಲಿನ ಬಟ್ಟೆಯು ಅತ್ತಜಾರಿ ಬಿದ್ದರೂ ಅಥವಾ ದೈವವಶದಿಂದ ಸರಿಯಾಗಿ ಮೈಮೇಲೆಯೇ ಇದ್ದರೂ ಕಾಣದೆ ಇರುವನಲ್ಲವೆ ? ಅದರಂತೆಯೇ ಇವನ ಸ್ಥಿತಿಯಿರುವದು.

## ಸ್ತಬ್ಧೋ ಭವತಿ

೨೬. ಹೀಗೆ ಶರೀರದ ಭಾನವೇ ಇಲ್ಲದೆ ಆತ್ಮನಲ್ಲಿಯೇ ಮನಸ್ಸಿಟ್ಟುಕೊಂಡಿರುವದರಿಂದ ಈ ಭಕ್ತನು ಇದ್ದಲ್ಲಿದ್ದುಕೊಂಡು ಜಡನಂತೆ ಇರುವನು. ಹಾಗಾದರೆ ಇವನ ವ್ಯವಹಾರವು ಹೇಗೆ ನಡೆಯುವದು ?- ಎಂದರೆ, ಶ್ರುತಿಯಲ್ಲಿ ಇದಕ್ಕೊಂದು ದೃಷ್ಟಾಂತವನ್ನು ಕೊಟ್ಟಿರುತ್ತದೆ :

**नोपजनं स्मरन्निदं शरीरं स यथा प्रयोग्य आचरणे युक्त एवमेवाय-
मस्मिन् शरीरे प्राणो युक्तः ॥ ३ ॥** ಛಾಂ. ೮-೧೨-೩

ಈತನು ಮನುಷ್ಯಶರೀರವನ್ನು ಸ್ವಲ್ಪವೂ ಸ್ಮರಿಸಿಕೊಳ್ಳದೆ ಇದ್ದರೂ ಚೆನ್ನಾಗಿ ತಿದ್ದಿ ಪಳಗಿಸಿದ ಎತ್ತು, ಕುದುರೆ- ಮುಂತಾದ ಪ್ರಾಣಿಗಳು ದಾರಿಯನ್ನು ನಡೆದು ಮೊದಲು ಅಭ್ಯಾಸವಾಗಿರುವದರಿಂದ ಗಾಡಿಯವನು ನೋಡಿಕೊಳ್ಳದೆ ಸುಮ್ಮನಿರುವಾಗಲೂ ತಾವೇ ಮುಂದುವರಿದು ಮುಟ್ಟಬೇಕಾದ ಸ್ಥಳಕ್ಕೆ ಗಾಡಿಯನ್ನು ಹೇಗೆ ಒಯ್ಯುವವೋ, ಅದರಂತೆ ಶರೀರದ ಕೆಲಸಗಳೂ ಪ್ರಾರಬ್ಧಕರ್ಮದ ಬಲದಿಂದ ಶರೀರದಲ್ಲಿ ಕೆಲಸಮಾಡುತ್ತಿರುವ ಪ್ರಾಣಶಕ್ತಿಯ ವಶದಿಂದ ತಾವೇ ನಡೆಯುತ್ತಿರುವವು.

೨೭. ಹೀಗಿದ್ದರೂ ಈತನು ನಿಜವಾಗಿ ಎಚ್ಚರತಪ್ಪಿರುವನೆಂದಾಗಲಿ ಹುಚ್ಚನಾಗಿರುವನೆಂದಾಗಲಿ ಭಾವಿಸಬಾರದು. ಲೋಕದಲ್ಲಿ ಮಿಕ್ಕವರು ಯಾವ ವ್ಯವಹಾರದ ವಿಷಯಕ್ಕೆ ಎಚ್ಚರದಿಂದ ನಡೆದುಕೊಳ್ಳುತ್ತಿರುವರೋ ಆ ವಿಷಯಕ್ಕೆ ಇವನು ಎಚ್ಚರವಿಲ್ಲದೆ ಇರುವದೇನೊ ನಿಜ. ಆದರೇನು? ಅವರು ಎಚ್ಚರವಾಗಿರುವರೆಂದರೆ ಕನಸನ್ನು ಅನುಭವಿಸುವಂತೆ ಮಿಥ್ಯಾದೃಶ್ಯಗಳನ್ನು ಕಾಣುತ್ತಾ ತಾವು ಎಚ್ಚರಿಕೆಯಿಂದ ವ್ಯವಹರಿಸುತ್ತಿದೇವೆಂದು ಭಾವಿಸುತ್ತಿರುವರು. ಆದರೆ ಭಕ್ತನು ಯಾವ ವಿಷಯದಲ್ಲಿ ಎಚ್ಚತ್ತಿರುವನೋ ಆ ಪರಮಾತ್ಮತತ್ತ್ವದಲ್ಲಿ ಅವರಿಗೆ ನಿದ್ರೆಯೇ ಇರುತ್ತದೆ. ಭಗವಂತನೇ ಹೇಳಿರುವದೇನೆಂದರೆ :

**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥**
ಗೀ. ೨-೬೯

ಯಾವ ಪರಮಾರ್ಥದ ಅರಿವೆಂಬ ವಿಷಯವು ಮಿಕ್ಕ ಪ್ರಾಣಿಗಳಿಗೆ ಅವಿವೇಕಾಕಾರವಾದ ಕಾಳರಾತ್ರಿಯಾಗಿರುವದೋ, ಅದರ ವಿಷಯದಲ್ಲಿ ಜಿತೇಂದ್ರಿಯನಾದ ಭಕ್ತನು ಎಚ್ಚತ್ತಿರುವನು. ಆದರೆ ಕನಸಿನಲ್ಲಿ ಎಚ್ಚರವನ್ನು ಕಾಣುವವರಂತೆ ಮಿಕ್ಕವರು ಯಾವ ವಿಷಯಭೋಗಗಳಲ್ಲಿ ಎಚ್ಚತ್ತಿರುವಂತೆ ಕಾಣುತ್ತಿರುವರೋ ಅದೆಲ್ಲವನೂ ಕನಸೆಂದು ಅರಿತಿರುವ ಈ ಮಹಾತ್ಮನು ಏಕೆ ಅವುಗಳಲ್ಲಿ ತೊಡಗುವನು? ಉದ್ಧವನಿಗೆ ಭಗವಂತನು ಈ ವಿಷಯದಲ್ಲಿ ಹೀಗೆಂದು ಉಪದೇಶಿಸಿರುತ್ತಾನೆ :

**ವಿಷಯಾನ್ ಧ್ಯಾಯತಶ್ಚಿತ್ತಂ ವಿಷಯೇಷು ವಿಷಜ್ಜತೇ ।
ಮಾಮನುಸ್ಮರತಶ್ಚಿತ್ತಂ ಮಯ್ಯೇವ ಪ್ರವಿಲೀಯತೇ ॥
ತಸ್ಮಾದಸದಭಿಧ್ಯಾನಂ ಯಥಾ ಸ್ವಪ್ನಮನೋರಥವತ್ ।
ಹಿತ್ವಾ ಮಯಿ ಸಮಾಧತ್ಸ್ವ ಮನೋ ಮದ್ಭಾವಭಾವಿತಮ್ ॥**
ಭಾಗ. ೧೧-೧೪-೨೭, ೨೮

'ಉದ್ಧವನೆ, ವಿಷಯಚಿಂತನೆಯಲ್ಲಿಯೇ ನಿರತನಾಗಿರುವವನಿಗೆ ಚಿತ್ತವು ವಿಷಯಗಳಲ್ಲಿ ಆಸಕ್ತವಾಗಿರುವದು; ನನ್ನನ್ನೇ ಅನುಸ್ಮರಣೆಮಾಡುತ್ತಿರುವ ಚಿತ್ತವು ನನ್ನಲ್ಲಿಯೇ ಮುಳುಗಿ ಕರಗಿಬಿಡುವದು. ಆದ್ದರಿಂದ ನೀನು ಸ್ವಪ್ನ, ಮನೋರಥ-ಮುಂತಾದವುಗಳಲ್ಲಿ ತೋರುವ ಹುಸಿಪದಾರ್ಥಗಳಂತಿರುವ ಲೌಕಿಕವಿಷಯಗಳ ಚಿಂತೆಯನ್ನು ಬಿಟ್ಟು, ಮನಸ್ಸನ್ನು ನನ್ನ ಭಾವನೆಯಿಂದಲೇ ಊಡಿಕೊಂಡಿರುವಂತೆ ಮಾಡಿಕೊಂಡು ನನ್ನಲ್ಲಿಯೇ ಸಮಾಧಾನಪಡಿಸಿಕೊ.

೨೮. ಭಕ್ತನು ಲೌಕಿಕಜನರ ಕಣ್ಣಿಗೆ ಹುಚ್ಚನಂತೆ ಕಾಣಿಸುತ್ತಿರಬಹುದು; ಆದರೆ ಅವನ ಹುಚ್ಚು ಬೇರೊಂದು ತೆರನಾಗಿರುತ್ತದೆ.

'अव्यक्तलिङ्गा अव्यक्ताचारा अनुन्मत्ता उन्मत्तवदाचरन्तः' ಜಾ. ೬

ಎಂಬ ಶ್ರುತಿವಾಕ್ಯದಂತೆ ಭಕ್ತರ ವೇಷ, ಆಚಾರ- ಇವು ಯಾವವುಗಳಿಂದಲೂ ಅವರನ್ನು ಭಕ್ತರೆಂದು ಗುರುತಿಸುವದಕ್ಕೆ ಆಗುವದಿಲ್ಲ; ಅವರು ಹುಚ್ಚರಲ್ಲದಿದ್ದರೂ ಉಳಿದ ಜನಕ್ಕೆ ಅವರ ಆಚಾರವು ಹುಚ್ಚರ ಆಚಾರದಂತೆ ಕಾಣುತ್ತಿರುವದು.

## ಆತ್ಮಾರಾಮೋ ಭವತಿ

ಯಾವದಾದರೂ ಚಿಂತೆಯಲ್ಲಿ ಮುಳುಗಿರುವಾತನು ಸುಮ್ಮನೆ ಕುಳಿತಿರುವಂತೆ ತೋರುತ್ತಿದ್ದರೂ ಅವನು, ಹೇಗೆ ನಿಜವಾಗಿ ಸುಮ್ಮನೆ ಕುಳಿತಿರುವದಿಲ್ಲವೋ. ಕಡಿವಾಣದ ಬಲದಿಂದ ಬಲವಾದ ಕುದುರೆಯನ್ನು ಗಾಡಿಯವನು ಹಿಡಿತದಲ್ಲಿಟ್ಟುಕೊಂಡಿದ್ದಾಗ ಹೊರಗೆ ನೋಡುವವರಿಗೆ ಕುದುರೆಯು ತನಗೆತಾನೆ ಸುಮ್ಮನೆ ನಿಂತಿರುವನೆಂಬ ಭಾವನೆಯು ಬರುವದೋ ಹಾಗೆಯೇ ಭಕ್ತರು ಸುಮ್ಮನೆ ನಿಂತಿರುವಂತೆ ಕಾಣುವಾಗಲೂ ಅವರೇನೂ ಮೈಗಳ್ಳತನದಿಂದ ಸುಮ್ಮನೆ ನಿಂತಿರುವದಿಲ್ಲ.

'स वा एष एवं पश्यन्नेवं मन्वान एवं विजानन्नात्मरतिरात्मक्रीड आत्ममिथुन आत्मानन्दः स स्वराड् भवति ॥' ಛಾಂ. ೭-೨೫-೨

ಎಂಬ ವಾಕ್ಯದಂತೆ ಜ್ಞಾನಿಭಕ್ತನಾದವನು ಎಲ್ಲೆಲ್ಲಿಯೂ ಆತ್ಮನನ್ನೇ ಕಾಣುತ್ತಾ ಆತ್ಮರತಿಯಾಗಿ ಆತ್ಮನಲ್ಲಿಯೇ ಕ್ರೀಡಿಸುತ್ತಾ ಆತ್ಮನಲ್ಲಿಯೇ ಬೆರೆತು ಯಾವದೊಂದು ನಿಮಿತ್ತವೂ ಇಲ್ಲದೆ ಆತ್ಮನಲ್ಲಿಯೇ ಆನಂದವನ್ನು ಅನುಭವಿಸುತ್ತಾ ಸ್ವಾರಾಜ್ಯಸುಖವನ್ನು ಅನುಭವಿಸುತ್ತಿರುವನು.

## ೫. ಭಕ್ತಿಗೂ ಕಾಮಕ್ಕೂ ಇರುವ ವೈಲಕ್ಷಣ್ಯ

ಸಾ ನ ಕಾಮಯಮಾನಾ ನಿರೋಧರೂಪತ್ವಾತ್ ॥ ೭ ॥

೭. ಅದು ಕಾಮಿಸುವದಲ್ಲ, ಏಕೆಂದರೆ ಅದು ನಿರೋಧರೂಪದ್ದಾಗಿರುತ್ತದೆ.

## ನ ಕಾಮಯಮಾನಾ

೨೯. ಇಲ್ಲಿ ಒಂದು ಆಕ್ಷೇಪವು ತಲೆದೋರಬಹುದು : ಭಕ್ತಿಯೆಂಬುದು ಆತ್ಮನಲ್ಲಿರುವ ಪರಮಪ್ರೇಮವೆಂದು ಹೇಳಲಾಗಿದೆಯಷ್ಟೆ ? ಪ್ರೇಮವೂ ಕಾಮವೇ ಅಲ್ಲವೆ ? ಕಾಮವು ಸಂಸಾರದುಃಖಕ್ಕೆಲ್ಲ ಮೂಲವೆಂದು ಶಾಸ್ತ್ರಗಳು ಹೇಳುತ್ತವೆ. ಹೀಗಿರುವಲ್ಲಿ ಪರಮಾತ್ಮನಲ್ಲಿಟ್ಟಿರುವ ಕಾಮವು, ಅಥವಾ ಪರಮಾತ್ಮಪ್ರಾಪ್ತಿಯಿಂದ ಮೋಕ್ಷವನ್ನು ಪಡೆಯಬೇಕೆಂಬ ಕಾಮವು, ಹೇಗೆ ಪುರುಷಾರ್ಥಸಾಧನವಾದೀತು ? ಅರ್ಜುನನು "ದೇವ, ಮನುಷ್ಯನು ಏತರಿಂದ ಪ್ರೇರಿತನಾಗಿ ತನಗೆ ಇಚ್ಛೆಯಿಲ್ಲದೆ ಇದ್ದರೂ ಪಾಪವನ್ನು ಮಾಡುತ್ತಿರುತ್ತಾನೆ ?" –ಎಂದು ಕೇಳಿದ್ದಕ್ಕೆ ಶ್ರೀಕೃಷ್ಣ ಭಗವಂತನು :

**ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।**
**ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್ ॥**

ಗೀ. ३–३೭

"ಅರ್ಜುನ, ಇದೇ ಕಾಮವು, ಇದೇ ಕ್ರೋಧವು ; ಇದು ರಜೋಗುಣದಿಂದ ಉಂಟಾಗಿರುವದು ; ಇದಕ್ಕೆ ಎಷ್ಟುತಿಂದರೂ ತೃಪ್ತಿಯಾಗುವದಿಲ್ಲ, ಇದು ಮಹಾ ಪಾಪಿಯು ; ಇದೇ ಇಲ್ಲಿ ಮನುಷ್ಯನಿಗೆ ವೈರಿಯಾಗಿ ಮಾಡಬಾರದ್ದನ್ನು ಮಾಡಿಸುತ್ತಿದೆ" ಎಂದು ಉತ್ತರವನ್ನು ಕೊಟ್ಟಿರುತ್ತಾನೆ. ಇದಲ್ಲದೆ,

**ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಮ್ ।**
**ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ॥**

ಮೋ. ಧ. ೧೭೪–೪೬

'ಈ ಲೋಕದಲ್ಲಿ ಕಾಮೋಪಭೋಗದಿಂದ ಆಗುವ ಸುಖ, ಮತ್ತು ಉತ್ತಮಕರ್ಮಗಳನ್ನು ಮಾಡಿ ಸ್ವರ್ಗದಲ್ಲಿ ಅನುಭವಿಸುವ ಮಹಾಸುಖ– ಈ ಎರಡೂ ಕಾಮವನ್ನು ನೀಗಿಕೊಂಡರೆ ಆಗುವ ಸುಖಕ್ಕೆ ಹೋಲಿಸಿದರೆ, ಆ ಸುಖದ ಹದಿನಾರನೆಯ ಪಾಲಿಗೂ ಇವು ಸರಿಗಟ್ಟಲಾರವು' ಎಂದು ಸ್ಮೃತಿಕಾರರು ಹೇಳಿರುತ್ತಾರೆ. ಕಾಮಗಳನ್ನು ಕಾಮಿಸುತ್ತಿರುವವನಿಗೆ ಶಾಂತಿಯೆಲ್ಲಿಂದ ಬರಬೇಕು ?

**ಕಾಮಬನ್ಧನಮೇವೇದಂ[1] ನಾನ್ಯದಸ್ತೀಹ ಬನ್ಧನಮ್ ।**
**ಕಾಮಬನ್ಧನಮುಕ್ತೋ ಹಿ ಬ್ರಹ್ಮಭೂಯಾಯ ಕಲ್ಪತೇ ॥**

ಮೋ. ಧ. ೨೫೧–೭

---

1. 'ಕಾಮಬನ್ಧನಮೇವೈಕಮ್' ಗೋ॥ ಮುದ್ರಿತಪಾಠ.

'ಈ ಸಂಸಾರವೆಲ್ಲವೂ ಕಾಮಬಂಧದಿಂದಲೇ ಆಗಿರುತ್ತದೆ, ಮತ್ತೆಯಾವ ಬಂಧವೂ ಇಲ್ಲಿಲ್ಲ. ಯಾವನು ಕಾಮಬಂಧದಿಂದ ಮುಕ್ತನಾಗಿರುವನೋ ಅವನು ಪುನರ್ಜನ್ಮ ರಹಿತವಾದ ಮೋಕ್ಷವನ್ನು ಪಡೆಯುವನು- ಎಂದು ದೊಡ್ಡವರು ಕಾಮವನ್ನು ಬಹುವಾಗಿ ನಿಂದಿಸಿರುತ್ತಾರೆ. ಹೀಗಿರುವಲ್ಲಿ ಭಗವತ್ಪ್ರಾಪ್ತಿಗೆ ಕಾಮರೂಪವಾದ ಪ್ರೇಮವು ಹೇಗೆ ಸಾಧನವಾದೀತು ?

ಈ ಆಕ್ಷೇಪವು ಕಾಮಕ್ಕೂ ಭಗವತ್ಪ್ರೇಮಕ್ಕೂ ಇರುವ ವೈಲಕ್ಷಣ್ಯವನ್ನರಿಯದೆ ಎದ್ದುಕೊಂಡದ್ದು. ಈ ಪ್ರೇಮವು ಕಾಮರೂಪವಲ್ಲ ; ಮತ್ತೇನೆಂದರೆ :

## ನಿರೋಧರೂಪತ್ವಾತ್

೩೦. ಏಕೆಂದರೆ ಇದು ಕಾಮಗಳೆಲ್ಲವುಗಳ ನಾಶರೂಪವಾಗಿರುತ್ತದೆ.

**प्राप्यान्तं कर्मणस्तस्य यत्किञ्चेह करोत्ययम् । तस्माल्लोकात्पुनरेत्यस्मै लोकाय कर्मणे इति नु कामयमानोऽथाकामयमानो योऽकामो निष्काम आप्तकाम आत्मकामो न तस्य प्राणा उत्क्रामन्ति ब्रह्मैव सन् ब्रह्माप्येति ॥**

ಬೃ. ೪-೪-೬

**तदेतत् प्रेयः पुत्रात् प्रेयो वित्तात् प्रेयोऽन्यस्मात् सर्वस्मात् ॥**

ಬೃ. ೧-೪-೮

ಕಾಮಿಯಾದವನು ಕಾಮವಶನಾಗಿ ಕರ್ಮಗಳನ್ನು ಮಾಡಿ ತಾನು ಮಾಡಿದ ಕರ್ಮದ ಫಲವನ್ನೆಲ್ಲ ಪರಲೋಕದಲ್ಲಿ ಕ್ಷಯಿಸಿಕೊಂಡು ಮತ್ತೆ ಈ ಲೋಕಕ್ಕೆ ಬಂದು ಕರ್ಮದಲ್ಲಿಯೇ ತೊಡಗುತ್ತಾನೆ. ಆದರೆ ಕಾಮವಿಲ್ಲದವನೊ, ಎಂದರೆ ಅವನಿಗೆ ಯಾವ ಕಾಮಗಳೂ ಇರುವದೇಇಲ್ಲ ; ಎಲ್ಲಾ ಕಾಮಗಳೂ ಭಗವತ್ಪ್ರಾಪ್ತಿ ಯಿಂದಲೇ ಅವನಿಗೆ ದೊರಕಿರುವದರಿಂದ ಅವನು ಆಪ್ತಕಾಮನಾಗಿ ಅಕಾಮನಾಗಿರುತ್ತಾನೆ. ಅವನಿಗೆ ಜನ್ಮಾಂತರವೆಂಬುದೇ ಇಲ್ಲ, ಯಾವ ಬಂಧವೂ ಇಲ್ಲ. ಅವನು ಭಗವದ್ರೂಪನಾಗಿ ಭಗವಂತನಲ್ಲಿಯೇ ಬೆರೆತುಹೋಗುವನು. ಈ ಆತ್ಮನೆಂಬುದು ವಿತ್ತಪುತ್ರಾದಿಗಳಿಗಿಂತಲೂ ಪ್ರಿಯವಾದದ್ದು- ಎಂದು ಶ್ರುತಿಯು ಕಾಮಕ್ಕೂ ಭಗವತ್ಪ್ರೇಮಕ್ಕೂ ಇರುವ ವೈಲಕ್ಷಣ್ಯವನ್ನು ಘಂಟಾಘೋಷವಾಗಿ ಸಾರುತ್ತಿರುವದು.

೩೧. ನಿರೋಧವೆಂದರೆ ಸಕಲಕಾಮಗಳನ್ನೂ ಬಿಡುವದು. ಆದರೆ ಕಾಮಗಳನ್ನೆಲ್ಲ ತೊಲಗಿಸಿಕೊಳ್ಳುವದು ಯಾರಿಗೆ ತಾನೆ ಸಾಧ್ಯವಾದೀತು ? ಲೋಕದಲ್ಲಿ ಜೀವನು ಯಾವಯಾವದನ್ನು ಮಾಡುತ್ತಾನೋ ಅದೆಲ್ಲ ಕಾಮಮೂಲವಾಗಿರುತ್ತದೆ.

**ಯದ್ಯದ್ಧಿ ಕುರುತೇ ಜನ್ತುಸ್ತತ್ತತ್ಕಾಮಸ್ಯ ಚೇಷ್ಟಿತಮ್ ॥**

ಮನು. ೨-೪

ಎಂದು ಸ್ಮೃತಿಯೂ ಹೇಳುತ್ತಿದೆ. ಕೆಲವು ಕರ್ಮಗಳಿಗೆ – ಉದಾಹರಣೆಗೆ ಉಸಿರಾಡುವದಕ್ಕೆ, ಎದೆಬಡಿಯುವದಕ್ಕೆ ಮುಂತಾದ ಕೆಲಸಗಳಿಗೆ – ಮನುಷ್ಯನ ಇಚ್ಛೆಯು ಮೂಲವಾಗಿಲ್ಲವೆಂದು ತಟ್ಟನೆ ತೋರಬಹುದು. ಆದರೂ ಅವುಗಳ ಬುಡವನ್ನು ಶೋಧಿಸಿ ನೋಡಿದರೆ ಅವುಗಳಿಗೂ ಮನುಷ್ಯನ ಕಾಮವೇ ಕಾರಣವೆಂಬುದು ಗೊತ್ತಾಗುವದು. ಉಸಿರಾಡುವದನ್ನು ಇಷ್ಟಪಟ್ಟರೆ ಪ್ರಯತ್ನದಿಂದ ನಿಲ್ಲಿಸಿಬಿಡಬಹುದು; ಆದ್ದರಿಂದ ಬದುಕಿರಬೇಕೆಂಬ ಆಶೆಯೇ ಅದಕ್ಕೆ ಕಾರಣವಾಗಿದೆಯೆನ್ನಬಹುದು. ಯೋಗಿಗಳು ಕೆಲವು ಕಾಲ ತಮ್ಮ ಎದೆಬಡಿಯುವದನ್ನು ನಿಲ್ಲಿಸಿಕೊಳ್ಳಬಲ್ಲವರಾಗಿರುತ್ತಾರೆ. ಇದರಂತೆ ಪ್ರಾಣಿಗಳ ಕರ್ಮಗಳೆಲ್ಲ ಕಾಮಮೂಲಕವಾಗಿಯೇ ಇರುತ್ತವೆ– ಎಂಬುದನ್ನು ಮನವರಿಕೆಮಾಡಿಕೊಳ್ಳಬಹುದಾಗಿದೆ. ಕೆಲವರು ಪರೋಪಕಾರದಲ್ಲಿಯೇ ನಿರತರಾಗಿರುತ್ತಾರೆ; ಅವರಿಗೆ ಏತರ ಕಾಮ ?– ಎಂದು ಕೇಳಿದರೆ ತಮ್ಮ ಮನಸ್ಸಿಗೆ ಸುಖವನ್ನು ಕೊಡುವ ಕೀರ್ತಿಯ ಆಶೆಯು ಅವರಿಗೂ ಇದ್ದೇ ಇರುತ್ತದೆ. ಆದರೆ ಭಕ್ತರು ತಮ್ಮ ಕಾಮಗಳನ್ನೆಲ್ಲ ಹೇಗೆ ಜಯಿಸುವರು ? ಎಂದರೆ ಅದಕ್ಕೆ ಉತ್ತರವಿದು.

## ನಿರೋಧಸ್ತು ಲೋಕವೇದವ್ಯಾಪಾರನ್ಯಾಸಃ ॥ ೮ ॥

೮. ನಿರೋಧವಾದರೊ, ಎಲ್ಲಾ – ಲೌಕಿಕ ಮತ್ತು ವೈದಿಕ-ಕರ್ಮಗಳನ್ನೂ ಬಿಡುವದು.

೩೨. ಕರ್ಮಗಳು ಎರಡು ಬಗೆ; ಕೆಲವು ಲೌಕಿಕ ಎಂದರೆ ಈ ಲೋಕದ ವ್ಯವಹಾರಕ್ಕೆ ಬೇಕಾಗಿರುವ ಕೆಲಸಗಳು. ಮತ್ತೆ ಕೆಲವು ಪರಲೋಕದ ಸುಖಕ್ಕೆ ಸಂಬಂಧಪಟ್ಟಿರುವ ವೈದಿಕಕರ್ಮಗಳು. ಇವೆರಡಕ್ಕೂ ಆಯಾ ಲೋಕದ ಭೋಗಗಳಲ್ಲಿರುವ ಕಾಮವೇ ಕಾರಣವಾದ್ದರಿಂದ ಅವುಗಳ ಆಸೆಯನ್ನೆಲ್ಲ ತೊರೆದು ಭಗವಂತನ ಕಡೆಗೆ ತಿರುಗಿರುವ ಭಕ್ತನಿಗೆ ಆ ಕರ್ಮಗಳು ಯಾವವೂ ಬೇಕಿರುವದಿಲ್ಲ. ಇದಲ್ಲದೆ :

ಇತ್ಯಚ್ಯುತಾಙ್ಘ್ರಿಂ ಭಜತೋಽನುವೃತ್ತ್ಯಾ
ಭಕ್ತಿರ್ವಿರಕ್ತಿರ್ಭಗವತ್ಪ್ರಬೋಧಃ ।
ಭವನ್ತಿ ವೈ ಭಾಗವತಸ್ಯ ರಾಜನ್
ತತಃ ಪರಾಂ ಶಾನ್ತಿಮುಪೈತಿ ಸಾಕ್ಷಾತ್ ॥

ಭಾಗ. ೧೧–೨–೪೩

ಎಂದು ನಿಮಿರಾಜನಿಗೆ ಕವಿ ಎಂಬ ಋಷಿಯು ಹೇಳಿರುವಂತೆ ಭಾಗವತೋತ್ತಮನಾದವನಿಗೆ ಭಕ್ತಿಯೂ ವಿರಕ್ತಿಯೂ ಭಗವತ್ಸ್ವರೂಪದ ಜ್ಞಾನವೂ ಉಂಟಾಗಿರುವದರಿಂದ ಅವನು ಯಾವ ಕರ್ಮವನ್ನಾದರೂ ಏತಕ್ಕೆ ಮಾಡಿಯಾನು ?

ದೇಹಸ್ಥೋಽಪಿ ನ ದೇಹಸ್ಥೋ ವಿದ್ವಾನ್ ಸ್ವಪ್ನಾದ್ಯಥೋತ್ಥಿತಃ ।
ಅದೇಹಸ್ಥೋಽಪಿ ದೇಹಸ್ಥಃ ಕುಮತಿಃ ಸ್ವಪ್ನದೃಗ್ಯಥಾ ॥
ಇನ್ದ್ರಿಯೈರಿನ್ದ್ರಿಯಾರ್ಥೇಷು ಗುಣೈರಪಿ ಗುಣೇಷು ಚ ।
ಗೃಹ್ಯಮಾಣೇಷ್ವಹಂ ಕುರ್ಯಾನ್ನ ವಿದ್ವಾನ್ ಯಸ್ತ್ವವಿಕ್ರಿಯಃ ॥
ದೈವಾಧೀನೇ ಶರೀರೇಽಸ್ಮಿನ್ ಗುಣಭಾವ್ಯೇನ ಕರ್ಮಣಾ ।
ವರ್ತಮಾನೋಽಬುಧಸ್ತತ್ರ ಕರ್ತಾಸ್ಮೀತಿ ನಿಬಧ್ಯತೇ ॥
ಏವಂ ವಿರಕ್ತಃ ಶಯನೇ ಆಸನಾಟನಮಜ್ಜನೇ ।
ದರ್ಶನಸ್ಪರ್ಶನಘ್ರಾಣಭೋಜನಶ್ರವಣಾದಿಷು ॥
ನ ತಥಾ ಬಧ್ಯತೇ ವಿದ್ವಾಂಸ್ತತ್ರ ತತ್ರಾದಯನ್ ಗುಣಾನ್ ।
ಪ್ರಕೃತಿಸ್ಥೋಽಪ್ಯಸಂಸಕ್ತೋ ಯಥಾ ಖಂ ಸವಿತಾಽನಿಲಃ ॥

ಭಾಗ. ೧೧-೧೧-೮ರಿಂದ ೧೨

ಎಂದಿರುವಂತೆ ಭಗವತ್ತತ್ತ್ವವನ್ನು ಅರಿತಿರುವಾತನು ದೇಹದಲ್ಲಿದ್ದರೂ- ಕನಸಿನಿಂದ ಎಚ್ಚತ್ತವನು ಕನಸಿನ ದೇಹದ ಅಭಿಮಾನವಿಲ್ಲದಿರುವಂತೆ - ದೇಹಾಭಿಮಾನವಿಲ್ಲದೆ ಇರುತ್ತಾನೆ. ಅಜ್ಞಾನಾದವನು ನಿಜವಾಗಿ ದೇಹದಲ್ಲಿರುವದಿಲ್ಲವಾದರೂ - ಕನಸು ಕಾಣುವವನಂತೆ ದೇಹಾಭಿಮಾನಿಯಾಗಿರುತ್ತಾನೆ. ಗುಣಾತ್ಮಕವಾದ ಇಂದ್ರಿಯ ಗಳು ಗುಣಾತ್ಮಕವಾದ ಇಂದ್ರಿಯಾರ್ಥ(ವಿಷಯ)ಗಳಲ್ಲಿ ವರ್ತಿಸುತ್ತಿದ್ದರೂ ಜ್ಞಾನಿ ಯಾದ ಭಕ್ತನು ಆ ಕರ್ಮಗಳಲ್ಲಿ ಅಹಂಭಾವವಿಲ್ಲದವನಾಗಿರುವದರಿಂದ 'ಇವು ನನ್ನ ಕರ್ಮಗಳು' ಎಂಬ ಅಭಿಮಾನವಿಲ್ಲದೆ ಇರುತ್ತಾನೆ. ಮಲಗಿರಲಿ, ಕುಳಿತಿರಲಿ, ಸಂಚರಿಸುತ್ತಿರಲಿ, ಸ್ನಾನಮಾಡುತ್ತಿರಲಿ, ನೋಡುತ್ತಿರಲಿ, ಏನನ್ನಾದರೂ ಮುಟ್ಟು ತ್ತಿರಲಿ, ಮೂಸುತ್ತಿರಲಿ, ಭುಂಜಿಸುತ್ತಿರಲಿ, ಕೇಳುತ್ತಿರಲಿ, ಆಯಾ ಗುಣಗಳು ಮಾಡುತ್ತಿರುವ ಕರ್ಮಗಳಲ್ಲಿ ಅಸಕ್ತನಾಗಿ ಬದ್ಧನಾಗದೆ ಇರುವನು. ಸೂರ್ಯನಾಗಲಿ ವಾಯುವಾಗಲಿ ಹೇಗೆ ಆಕಾಶವನ್ನು ಅಂಟಿಕೊಳ್ಳದೆ ಇರುವವೋ ಹಾಗೆ ಪ್ರಕೃತಿ ಯಲ್ಲಿರುವಂತೆ ತೋರುತ್ತಿದ್ದರೂ ಅವನು ಸರ್ವದಾ ಅಸಕ್ತನಾಗಿಯೇ ಇರುವನು ; ಆಕಾಶವು ಎಲ್ಲೆಲ್ಲಿಯೂ ಇರುತ್ತಿದ್ದರೂ ಹೇಗೆ ಒಂದರ ಅಂಟೂ ಇಲ್ಲದೆಇರುವದೋ ಸೂರ್ಯನು ಹೇಗೆ ಎಲ್ಲವನ್ನೂ ಬೆಳಗುತ್ತಿದ್ದರೂ ಹೇಗೆ ಪ್ರಕಾಶ್ಯವಸ್ತುಗಳ ಗುಣ ದೋಷಗಳ ಅಂಟಿಲ್ಲದೆ ಇರುವನೋ, ಗಾಳಿಯು ಹೇಗೆ ಧೂಳಿ, ಹೂಗಳ ಗಂಧ- ಮುಂತಾದವುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯುತ್ತಿದ್ದರೂ ತಾನುಮಾತ್ರ ಅವುಗಳ ಲೇಪವಿಲ್ಲದೆ ಇರುವದೋ ಹಾಗೆಯೇ ವಿವೇಕಿಯಾದವನು ಕರ್ಮಗಳನ್ನು ಮಾಡುತ್ತಿದ್ದರೂ ಯಾವ ಕರ್ಮದಲ್ಲಿಯೂ ಕರ್ತೃವಾಗದೆ ಇರುತ್ತಾನೆ. ಈ ರೀತಿಯಲ್ಲಿ ಸರ್ವಲೌಕಿಕವೈದಿಕಕರ್ಮಗಳನ್ನೂ ಸಂನ್ಯಾಸಮಾಡಿರು ವದರಿಂದ ಭಕ್ತನ ಭಕ್ತಿಯು ಸರ್ವಕಾಮಗಳ ನಿರೋಧರೂಪವಾಗಿರುತ್ತದೆ.

೩೩. ಕೆಲವರು ಇಲ್ಲಿ ಲೋಕವೇದವ್ಯಾಪಾರವನ್ನು ನ್ಯಾಸಮಾಡುವದೆಂದರೆ ಕರ್ಮಗಳನ್ನು ಮಾಡಿ ಅವುಗಳ ಫಲವನ್ನು ಬಿಡುವದು- ಎಂದು ಅರ್ಥವನ್ನು ಮಾಡಿರುತ್ತಾರೆ. **'ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ'** (ಗೀ. ೧೮-೨) ಎಂಬ ಶ್ಲೋಕವೇ ಅವರಿಗೆ ಆಧಾರ. ಭಗವದ್ಗೀತೆಯ ಹದಿನೆಂಟನೆಯ ಅಧ್ಯಾಯದಲ್ಲಿ ಶ್ರೀಕೃಷ್ಣಾರ್ಜುನರ ಸಂವಾದವು ಸಂನ್ಯಾಸತ್ಯಾಗಗಳ ಅರ್ಥವನ್ನು ನಿರ್ಧರಿಸುವದಕ್ಕೆಂದೇ ಬಂದಿರುವದು ನಿಜ. ಆದರೆ ಅದರ ಒಂದು ಭಾಗವನ್ನು ಮಾತ್ರ ಇಟ್ಟುಕೊಂಡು ಇಲ್ಲಿ 'ಲೋಕವೇದವ್ಯಾಪಾರನ್ಯಾಸಃ' ಎಂಬ ಶಬ್ದದ ಅರ್ಥವನ್ನು ನಿರ್ಣಯಿಸುವದು ಯೋಗ್ಯವಲ್ಲ. ಗ್ರಂಥಸಂದರ್ಭವನ್ನೆಲ್ಲ ತೆಗೆದುಕೊಂಡು ಭಗವಂತನ ಅಭಿಪ್ರಾಯವನ್ನು ನಿರ್ಣಯಿಸಬೇಕು.

ಹೇಗೆಂದರೆ ಅರ್ಜುನನು 'ಸಂನ್ಯಾಸ ಮತ್ತು ತ್ಯಾಗಗಳ ತತ್ತ್ವವನ್ನು ಹೇಳು' (೧೮-೧) ಎಂದು ಕೇಳಿಕೊಂಡದ್ದಕ್ಕೆ "ಕೆಲವರ ಮತದಿಂದ ಸಂನ್ಯಾಸತ್ಯಾಗಶಬ್ದಗಳಿಗೆ ಅರ್ಥವಿವೇಕವು ಹೀಗಾಗುವದು. 'ಕಾಮ್ಯಕರ್ಮಗಳನ್ನು ಬಿಡುವದು ಸಂನ್ಯಾಸ; ಸರ್ವಕರ್ಮಫಲತ್ಯಾಗವನ್ನು ಮಾಡುವದು ತ್ಯಾಗ'- ಎಂದು ಹೇಳಿದ ಬಳಿಕ ಕರ್ಮವನ್ನು ಬಿಟ್ಟುಬಿಡಬೇಕೆಂದು ಕೆಲವರು, ಯಜ್ಞದಾನತಪಸ್ಸುಗಳನ್ನು ಬಿಡಬಾರದೆಂದು ಕೆಲವರು - ಹೀಗೆ ಮತಭೇದವಿದೆ. ಆದರೆ ನನ್ನ ಅಭಿಪ್ರಾಯದಲ್ಲಿ ನಿತ್ಯಕರ್ಮಗಳನ್ನು ಬಿಡಬಾರದು, ಸಂಗತ್ಯಾಗಫಲತ್ಯಾಗಪೂರ್ವಕವಾಗಿ ಮಾಡುತ್ತಿರಬೇಕು" ಎಂದು ತನ್ನ ಸಿದ್ಧಾಂತವನ್ನು ಭಗವಂತನು ತಿಳಿಸಿರುತ್ತಾನೆ. **'ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ'** (ಗೀ. ೧೮-೧೧) ಎಂಬವರೆಗಿನ ಗ್ರಂಥಭಾಗದ ತೀರ್ಮಾನವಿದು. ಈ ಗ್ರಂಥಭಾಗದಲ್ಲಿ ತ್ಯಾಗವೆಂದರೆ ಬಿಡುವದು ಎಂಬ ಅರ್ಥವೇ ಇರುವದೆಂಬುದು ಸ್ಪಷ್ಟ; ಏಕೆಂದರೆ ಕರ್ಮವನ್ನು ಬಿಡಬೇಕೋ, ಮಾಡುತ್ತಿರಬೇಕೊ ?- ಎಂಬುದೇ ಇಲ್ಲಿ ವಿಚಾರದ ವಿಷಯವೇ ಹೊರತು ಕರ್ಮಫಲವನ್ನು ಬಿಡಬೇಕೊ, ಬಾರದೊ ?- ಎಂಬುದೇನೂ ವಿಚಾರಣೀಯವಿಷಯವಲ್ಲ. ಇನ್ನು ಇದರ ಮುಂದಿನ ಶ್ಲೋಕವನ್ನು ನೋಡಿದರೆ ಕರ್ಮಗಳನ್ನು ಪೂರ್ಣವಾಗಿ ಬಿಟ್ಟ ಸಂನ್ಯಾಸಿಗಳ ಪ್ರಶಂಸೆಯೇ ಇರುತ್ತದೆ. **'ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಮ್ । ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್ ॥'** (ಗೀ. ೧೮-೧೨) ಈ ಶ್ಲೋಕದಲ್ಲಿ- ಕರ್ಮವನ್ನು ಬಿಡದೆ ಇರುವವರಿಗೆ ಅವರವರ ಕರ್ಮಾನುಸಾರವಾಗಿ ಇಷ್ಟಾನಿಷ್ಟಮಿಶ್ರಫಲಗಳು ಪರಲೋಕದಲ್ಲಿ ಆಗುವವು; ಕರ್ಮವನ್ನು ಬಿಟ್ಟ ಪರಮಾರ್ಥಸಂನ್ಯಾಸಿಗಳಿಗೆ ಕಾಮವಿಲ್ಲದ್ದರಿಂದ ಯಾವ ಫಲವೂ ಆಗುವದಿಲ್ಲ- ಎಂಬ ಸಿದ್ಧಾಂತವನ್ನೇ ಭಗವಂತನು ಎತ್ತಿಹಿಡಿದಿರುತ್ತಾನೆ. ಅಲ್ಲಿಯೂ ಸಂನ್ಯಾಸ, ತ್ಯಾಗ- ಎಂಬ ಎರಡು ಶಬ್ದಗಳಿಗೂ ಬಿಡುವದು ಎಂಬ ಒಂದೇ ಅರ್ಥವಿರುತ್ತದೆ. ಮುಂದೆ-

**ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ ।**
**ಪಶ್ಯತ್ಯಕೃತಬುದ್ಧಿತ್ವಾನ್ನ ಸ ಪಶ್ಯತಿ ದುರ್ಮತಿಃ ॥** ಗೀ. ೧೮-೧೬

ಹೀಗೆ ಶರೀರ, ಕರ್ತೃ, ಕರಣ, ಪ್ರಾಣಗಳ ಚೇಷ್ಟೆ, ದೇವತೆ- ಈ ಐದೂ ಕರ್ಮಕ್ಕೆ ಕಾರಣವಾಗಿರುವದರಿಂದ ಕೇವಲನಾಗಿರುವ ಆತ್ಮನಿಗೆ ಕರ್ತೃತ್ವವೇ ಇಲ್ಲ; ಅವನಿಗೆ ಕರ್ತೃತ್ವವಿದೆಯೆಂದು ಭಾವಿಸುವವನು ದುರ್ಮತಿಯು- ಎಂದು ಪರಮಾತ್ಮನಲ್ಲಿಯೇ ನಿಷ್ಠೆಯುಳ್ಳಾತನಿಗೆ ಯಾವ ಕರ್ಮವೂ ಇಲ್ಲ ಎಂಬ ಸಿದ್ಧಾಂತವನ್ನೇ ಭಗವಂತನು ಎತ್ತಿಹಿಡಿದಿರುತ್ತಾನೆ. ಆದ್ದರಿಂದ ಇಲ್ಲಿ ಮಾಡಿಕೊಳ್ಳಬೇಕಾದ ತೀರ್ಮಾನವು ಏನೆಂದರೆ: ಅಜ್ಞನಾದ ಮುಮುಕ್ಷುವು ಕರ್ಮವನ್ನು ಮಾಡಬೇಕು, ಸಂಗವನ್ನೂ ಫಲವನ್ನೂ ತ್ಯಜಿಸಬೇಕು! ಜ್ಞಾನಿಗಳಾದ ಪರಭಕ್ತರಿಗೆ ಯಾವ ಕರ್ಮವೂ ಇರುವದಿಲ್ಲ- ಎಂಬಿದೇ ಆಗಿದೆ. ಭಾಗವತವಾಕ್ಯಗಳ ಪ್ರಮಾಣದಿಂದ ನಾವು ಭಕ್ತನಿಗೆ ಕರ್ತೃತ್ವವಿಲ್ಲವೆಂಬುದನ್ನು ಆಗಲೆ ನಿರ್ಧರಿಸಿ ತೋರಿಸಿಯೇ ಇರುತ್ತೇವಷ್ಟೆ? ಅದೇ ಭಾಗವತದಲ್ಲಿ:

**ನೈಷ್ಕರ್ಮ್ಯಮಪ್ಯಚ್ಯುತಭಾವವರ್ಜಿತಂ ।**
**ನ ಶೋಭತೇ ಜ್ಞಾನಮಲಂ ನಿರಞ್ಜನಮ್ ॥** ಭಾಗ. ೧-೫-೧೨

(ಭಕ್ತಿಯಿಲ್ಲದೆ ಮಾಡಿದ ಸಂನ್ಯಾಸವು ಶೋಭಿಸುವದಿಲ್ಲ) ಎಂದು ಕೇವಲಸಂನ್ಯಾಸವನ್ನು ನಿಂದಿಸಿಯೂ ಇದೆ. ಆದ್ದರಿಂದ ನಾವು ಮಾಡಿರುವ ತೀರ್ಪೇ ಸರಿ. ನ್ಯಾಸವೆಂದರೆ ಲೋಕವೇದವ್ಯಾಪಾರಗಳನ್ನು ಬಿಡುವದೆಂದೇ ಅರ್ಥ. ಹೀಗಿದ್ದರೂ **'ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ'** ಎಂಬ ವಾಕ್ಯವನ್ನೇ ಪ್ರಮಾಣವೆಂದು ಹಿಡಿಯುವವರಿಗೆ 'ಫಲತ್ಯಾಗವೇ ನ್ಯಾಸ' -ಎಂಬ ಸಿದ್ಧಾಂತವು ಎಂದಿಗೂ ದಕ್ಕಲಾರದು. ಏಕೆಂದರೆ **'ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ'** ಎಂದು ಅದೇ ಶ್ಲೋಕದಲ್ಲಿ ನ್ಯಾಸವೆಂದರೆ ಕಾಮ್ಯಕರ್ಮಗಳನ್ನು ಬಿಡುವದು ಎಂದೂ ಹೇಳಿರುವದರಿಂದ ಆ ಶ್ಲೋಕದ ಪ್ರಮಾಣದಿಂದ ಕಾಮ್ಯಕರ್ಮಗಳನ್ನು ಬಿಡುವದೇ 'ನ್ಯಾಸ' ಎಂದೂ ಈ ಸೂತ್ರಕ್ಕೆ ಅರ್ಥವನ್ನು ಮಾಡಬೇಕಾಗಿಬಂದೀತು. ಅದಂತೂ ಅವರಿಗೆ ಇಷ್ಟವಿಲ್ಲ. ಆದ್ದರಿಂದ ಪರಭಕ್ತನಾದವನು ವ್ಯವಹಾರದೃಷ್ಟಿಯಿಂದ ನೋಡಿದಾಗ ತನಗಾಗಿ ಯಾವ ಕಾರ್ಯವನ್ನೂ ಮಾಡುವದಿಲ್ಲ; ಅವನಿಗೆ ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ದೊರೆಯಬೇಕಾದ ಯಾವ ಫಲದ ಕಾಮನೆಯೂ ಇರುವದೇಇಲ್ಲವಾದ್ದರಿಂದ ಎಲ್ಲಾ ಕರ್ಮಗಳನ್ನೂ ಬಿಟ್ಟುಬಿಡುತ್ತಾನೆ.

**ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।**
**ಆತ್ಮನ್ಯೇವ ಚ ಸನ್ತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥** ಗೀ. ೩-೧೭

(ಯಾವನು ಆತ್ಮನಲ್ಲಿಯೇ ರಮಿಸುತ್ತಿರುವನೋ, ಆತ್ಮನಿಂದಲೇ ತೃಪ್ತನಾಗಿರುವನೋ, ಆತ್ಮನಿಂದಲೇ ಸಂತುಷ್ಟನಾಗಿ ಯಾವದೊಂದರ ತೃಷ್ಣೆಯೂ ಇಲ್ಲದಿರುವನೋ- ಅವನು ತನಗಾಗಿ ಮಾಡಿಕೊಳ್ಳಬೇಕಾದದ್ದು ಏನೂ ಇರುವದಿಲ್ಲ). ಪರಮಾರ್ಥದೃಷ್ಟಿಯಿಂದ ಕರ್ತೃತ್ವವೇ ಅವನಿಗಿರುವದಿಲ್ಲವಾದ್ದರಿಂದ ಅವನು ಕರ್ಮಗಳನ್ನು ಮಾಡುವಂತೆ ಹೊರಗೆ ಕಾಣಿಸುತ್ತಿದ್ದರೂ ನಿಜವಾಗಿ ಏನನ್ನೂ ಮಾಡುತ್ತಲೇ ಇರುವದಿಲ್ಲ. ಇದೇ ಲೋಕವೇದವ್ಯಾಪಾರನ್ಯಾಸವು.

ತಸ್ಮಿನ್ನನನ್ಯತಾ ತದ್ವಿರೋಧಿಷೂದಾಸೀನತಾ ಚ ॥ ೯ ॥

೯. ಆತನಲ್ಲಿ ಅನನ್ಯನಾಗಿರುವದು ಮತ್ತು ಅದಕ್ಕೆ ಪ್ರತಿಕೂಲವಾದವುಗಳಲ್ಲಿ ಉದಾಸೀನನಾಗಿರುವದೂ (ನಿರೋಧವು).

ಅನ್ಯಾಶ್ರಯಾಣಾಂ ತ್ಯಾಗೋಽನನ್ಯತಾ ॥ ೧೦ ॥

೧೦. ಮಿಕ್ಕ ಆಶ್ರಯಗಳನ್ನು ಬಿಟ್ಟುಬಿಡುವದು ಅನನ್ಯತೆಯು.

ಲೋಕವೇದೇಷು ತದನುಕೂಲಾಚರಣಂ ತದ್ವಿರೋಧಿಷು ಉದಾಸೀನತಾ ॥ ೧೧ ॥

೧೧. ಲೌಕಿಕಕರ್ಮಗಳಲ್ಲಿಯೂ ವೈದಿಕಕರ್ಮಗಳಲ್ಲಿಯೂ ಅದಕ್ಕೆ ಅನುಕೂಲವಾಗಿರುವದನ್ನೇ ಮಾಡುತ್ತಿರುವದು ಅದಕ್ಕೆ ಪ್ರತಿಕೂಲವಾದವುಗಳಲ್ಲಿ ಔದಾಸೀನ್ಯವೆನಿಸುವದು.

## ಅನನ್ಯತೆ

೩೪. ಲೋಕವೇದವ್ಯಾಪಾರಗಳನ್ನು ಬಿಟ್ಟುಬಿಡುವದು- ಎಂಬ ಮಾತಿನಲ್ಲಿ ಸರ್ವಥಾ ಕರ್ಮತ್ಯಾಗವೆಂದು ಅರ್ಥವಾಗುತ್ತದೆ. ಆದರೆ ನಾಸ್ತಿಕರು ಕರ್ಮಗಳನ್ನೆಲ್ಲ ಬಿಟ್ಟೇಇರುತ್ತಾರೆ. ಅಷ್ಟುಮಾತ್ರದಿಂದ ಅವರಲ್ಲಿ ಅವುಗಳ ನಿರೋಧವೇನೂ ಆಗಿರುವದಿಲ್ಲ. ಆದ್ದರಿಂದ ಲೌಕಿಕವೈದಿಕಕರ್ಮಗಳನ್ನು ಬಿಡುವದೆಂದರೆ ಹೇಗೆ ? -ಎಂಬುದರ ಅರ್ಥವನ್ನು ಇನ್ನಷ್ಟು ಬಿಚ್ಚಿ ಹೇಳಬೇಕಾಗಿರುತ್ತದೆ. ಭಕ್ತನ ಕಾಮನಿರೋಧವು ಸುಮ್ಮನೆ ಕರ್ಮಗಳನ್ನು ಬಿಡುವದರಲ್ಲಿಲ್ಲ. ಆ ನಿರೋಧದಲ್ಲಿ ಎರಡು ಅಂಶಗಳು ಸೇರಿಕೊಂಡಿರುತ್ತವೆ. ಅವೆರಡರಲ್ಲಿ 'ಅನನ್ಯತೆ' ಎಂಬುದು ಮೊದಲನೆಯ ಅಂಶವು; ಔದಾಸೀನ್ಯವು ಎರಡನೆಯಂಶವು. ಭಗವಂತನಲ್ಲಿ ಅನನ್ಯನಾಗಿರುವದೆಂದರೇನು ?- ಎಂಬುದನ್ನು ಹತ್ತನೆಯ ಸೂತ್ರದಲ್ಲಿ ಹೇಳಿರುತ್ತದೆ. ಮಿಕ್ಕ ಆಶ್ರಯಗಳನ್ನು ಬಿಟ್ಟು ಭಗವಂತನನ್ನೇ ಆಶ್ರಯಿಸಿರುವದೇ ಅನನ್ಯತೆ.

ಈ ಸಂಸಾರದಲ್ಲಿರುವವರೆಲ್ಲರೂ ಯಾವದಾದರೊಂದು ವಸ್ತುವನ್ನೊ, ಯಾವನಾದರೊಬ್ಬ ಮನುಷ್ಯನನ್ನೊ, ಅಥವಾ ದೇವತೆಯನ್ನೊ-ಆಶ್ರಯಿಸಿಕೊಂಡೇ ತಮ್ಮ ಇಷ್ಟಾರ್ಥವನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನವನ್ನು ಮಾಡುವರು. ಬಡತನದಿಂದ ನರಳುತ್ತಿರುವವರು ಹಣದ ಸೌಕರ್ಯಕ್ಕಾಗಿ ಧನವಂತರನ್ನು ಆಶ್ರಯಿಸಿಕೊಂಡಿರುತ್ತಾರೆ. ರೋಗದಿಂದ ನರಳುತ್ತಿರುವವರು ವೈದ್ಯರನ್ನು ನಂಬಿರುತ್ತಾರೆ ; ಕೆಲವರು ವ್ಯವಹಾರದಲ್ಲಿ ಉಂಟಾಗಿರುವ ವಿವಾದನಿಮಿತ್ತವಾದ ದುಃಖದ ಪರಿಹಾರಕ್ಕೆ ವಕೀಲರನ್ನು ನಂಬಿರುತ್ತಾರೆ ; ಕೆಲವರು ಸುಖಜೀವನಕ್ಕೆಂದು ಸರಕಾರದ ಅಧಿಕಾರಿಗಳನ್ನು ಆಶ್ರಯಿಸಿರುತ್ತಾರೆ ; ಮತ್ತೆ ಕೆಲವರು ಪರಲೋಕದ ಸುಖಕ್ಕಾಗಿ ಕೆಲಕೆಲವು ದೇವತೆಗಳನ್ನು ಆಶ್ರಯಿಸಿರುತ್ತಾರೆ. ಇತ್ಯಾದಿ, ಇತ್ಯಾದಿ. ಆದರೆ ಭಕ್ತನು :

**ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ।**
**ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ ॥** ಗೀ. ೩-೧೮

ಎಂದು ಭಗವಂತನು ಹೇಳಿರುವಂತೆ, ಇಷ್ಟಾರ್ಥವಾದ ಭಗವತ್ತತ್ತ್ವಜ್ಞಾನವಾಗಲಿ ಭಕ್ತಿಯ ನಿಷ್ಠೆಯಾಗಲಿ ದೊರಕುವದಕ್ಕೆಂದು ಯಾವ ಕರ್ಮವನ್ನೂ ಮಾಡುವದಿಲ್ಲ, ತನಗೆ ಬಂದೊದಗಿರುವ ಅನರ್ಥಗಳು ಪರಿಹಾರವಾಗಬೇಕೆಂದು ಯಾವ ಕರ್ಮವನ್ನೂ ಬಿಡುವದಕ್ಕೆ ಹೋಗುವದಿಲ್ಲ. ಬ್ರಹ್ಮಾದಿಸ್ಥಾವರಾಂತವಾದ ಪ್ರಾಣಿಗಳೊಳಗೆ ಯಾರೊಬ್ಬರನ್ನೂ ತನ್ನ ಇಷ್ಟಾರ್ಥಪ್ರಾಪ್ತಿಗೆಂದು ಅಥವಾ ಅನಿಷ್ಟ ಪರಿಹಾರಕ್ಕೆಂದು ಆಶ್ರಯಿಸಿರುವದಿಲ್ಲ. ಹೀಗಿರುವದೇ ಅನ್ಯಾಶ್ರಯತ್ಯಾಗರೂಪವಾದ ಅನನ್ಯತೆ.

## ತದ್ವಿರೋಧಿಷೂದಾಸೀನತಾ

೩೫. ಇನ್ನು ಒಂಬತ್ತನೆಯ ಸೂತ್ರದಲ್ಲಿ ಹೇಳಿರುವ 'ತದ್ವಿರೋಧಿಷೂದಾಸೀನತಾ' ಎಂಬುದನ್ನು ಬಿಚ್ಚಿನೋಡಬೇಕಷ್ಟೆ ? 'ತದ್ವಿರೋಧಿಷು' ಎಂಬ ಪದಕ್ಕೆ ವಿಗ್ರಹವಾಕ್ಯವನ್ನು ಹೇಳಬೇಕಾದರೆ 'ತಸ್ಯ ಭಗವತಃ ಪ್ರತಿಕೂಲಾನಿ ಯಾನಿ ತೇಷು' ಆ ಭಗವಂತನಿಗೆ ವಿರೋಧಿಯು ಯಾವಯಾವದು ಇರುವದೋ ಅದೆಲ್ಲದರಲ್ಲಿಯೂ ಎಂದೋ ಅಥವಾ 'ತದನನ್ಯತಾಯಾಃ ಪ್ರತಿಕೂಲಾನಿ ಯಾನಿ, ತೇಷು' ಆ ಅನನ್ಯತೆಗೆ ಅಡ್ಡಿಯಾಗಿರುವವು ಯಾವವೋ ಅವುಗಳೆಲ್ಲದರಲ್ಲಿಯೂ ಎಂದೋ ಬಿಡಿಸಿಕೊಳ್ಳಬಹುದು. ಈ ಎರಡು ವಿಕಲ್ಪಗಳಲ್ಲಿ ಮೊದಲನೆಯದು ಇಲ್ಲಿ ಹೊಂದುವಂತಿಲ್ಲ ; ಏಕೆಂದರೆ ಭಗವಂತನಿಗೆ ಯಾವದೊಂದೂ ಅನುಕೂಲವೂ ಅಲ್ಲ, ಪ್ರತಿಕೂಲವೂ ಅಲ್ಲ.

**ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।**
**ಯೇ ಭಜನ್ತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥**
ಗೀ. ೯-೨೯

(ನನಗೆ ವಿರೋಧಿಗಳೂ ಇಲ್ಲ, ಪ್ರಿಯರೂ ಇಲ್ಲ; ನಾನು ಎಲ್ಲರಲ್ಲಿಯೂ ಸಮವರ್ತಿಯಾಗಿರುತ್ತೇನೆ. ಯಾರು ನನ್ನನ್ನು ಭಕ್ತಿಯಿಂದ ಭಜಿಸುವರೋ ಅವರು ನನ್ನಲ್ಲಿಯೂ ನಾನು ಅವರಲ್ಲಿಯೂ ಇರುವೆವು) ಎಂದು ಭಗವಂತನೇ ಹೇಳಿರುತ್ತಾನೆ.

ಆದ್ದರಿಂದ ಭಗವಂತನ ಅನನ್ಯತೆಗೆ ಅಡ್ಡಿಯಾಗುವ ಯಾವ ವಸ್ತುಗಳನ್ನೂ ಮತ್ತು ಯಾವ ಪ್ರಾಣಿಗಳನ್ನೂ ತನ್ನ ಇಷ್ಟಾನಿಷ್ಟಗಳ ಪ್ರಾಪ್ತಿಪರಿಹಾರಗಳಿಗಾಗಿ ಆಶ್ರಯಿಸದೆ ಇದ್ದುಕೊಂಡು ಲೋಕವ್ಯಾಪಾರಗಳಲ್ಲಿಯೂ ವೈದಿಕಕರ್ಮಗಳಲ್ಲಿಯೂ ಆ ಅನನ್ಯತೆಗೆ ಅನುಕೂಲವಾಗಿರುವ ಕಾರ್ಯಗಳನ್ನೇ ಮಾಡುತ್ತಾ ಮಿಕ್ಕ ಕರ್ಮಗಳನ್ನು ಮನಸ್ಸಿಗೆ ತಾರದೆ ಇರುವದು ಆ ಅಡ್ಡಿಗಳ ವಿಷಯಕ್ಕೆ ಔದಾಸೀನ್ಯವು- ಎಂದು ಹನ್ನೊಂದನೆಯ ಸೂತ್ರದಲ್ಲಿ ವಿವರಿಸಲಾಗಿದೆ. ಭಗವಂತನು ಅರ್ಜುನನಿಗೆ-

**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।**
**ಯತ್ತಪಸ್ಯಸಿ ಕೌನ್ತೇಯ ತತ್ಕುರುಷ್ವ ಮದರ್ಪಣಮ್ ॥** ಗೀ. ೯-೨೭

ಎಂದಿರುತ್ತಾನೆ. ಈ ಶ್ಲೋಕದಲ್ಲಿ ಯತ್ಕರೋಷಿ, ಯದಶ್ನಾಸಿ (ಯಾವದನ್ನು ಮಾಡುತ್ತಿರುವೆಯೋ ಯಾವದನ್ನು ಉಣ್ಣುತ್ತಿರುವೆಯೋ) ಎಂದಿರುವದು ಲೌಕಿಕವ್ಯಾಪಾರವನ್ನು ಹೇಳುತ್ತದೆ. ಲೌಕಿಕವ್ಯಾಪಾರಗಳನ್ನು ಮಾಡುವಾಗ 'ಇಂಥ ಕೆಲಸವನ್ನೇ ಮಾಡುತ್ತೇನೆ' ಎಂಬ ಸಂಕಲ್ಪವಿಲ್ಲದೆ ಯಾವದನ್ನು ಅವಶ್ಯವಾಗಿ ಮಾಡಲೇಬೇಕಾಗಿ ಬರುವದೋ ಅಂಥ ಕರ್ತವ್ಯವನ್ನು ಮಾಡುವದು, ಆ ಕೆಲಸದ ಫಲವಾಗಿ ಯಾವ ಸುಖದುಃಖವು ಬಂದೊದಗುವದೋ ಅದನ್ನು ಪ್ರತೀಕಾರಬುದ್ಧಿಯಿಲ್ಲದೆ ಅನುಭವಿಸುವದು- ಹೀಗೆ ಬಂದೊದಗಿದ ಕರ್ತೃತ್ವಭೋಕ್ತೃತ್ವಗಳನ್ನುಕೂಡ ತನ್ನದೆಂದು ತಿಳಿಯದೆ ಅವುಗಳನ್ನೆಲ್ಲ ಭಗವಂತನಿಗೆ ಅರ್ಪಿಸುವದು- ಹೀಗೆ ಮಾಡುತ್ತಿರಬೇಕು; ಇದರಂತೆ ಅವಶ್ಯವಾಗಿ ಮಾಡಬೇಕಾಗಿರುವ ವೈದಿಕಕರ್ಮಗಳಾದ ಯಜ್ಞದಾನತಪಸ್ಸುಗಳನ್ನೂ ಭಗವಂತನಿಗೆ ಅರ್ಪಿಸುತ್ತಿರಬೇಕು. ಹೀಗೆ ಮಾಡಿದರೆ :

**ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬನ್ಧನೈಃ ।**
**ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥**
ಗೀ. ೯-೨೮

ಎಂದಿರುವಂತೆ ಇಷ್ಟಾನಿಷ್ಟಪ್ರಾಪ್ತಿಪರಿಹಾರಗಳೆಂಬ ಫಲಗಳು ಉಂಟಾಗುವದಿಲ್ಲ; ಆದ್ದರಿಂದ ಕರ್ಮವನ್ನು ಮಾಡಿದವನಿಗೆ ಕರ್ಮದ ಬಂಧವೂ ಆಗದೆಇರುತ್ತದೆ. ಭಗವಂತನಿಗೆ ಸಮರ್ಪಣೆಮಾಡಿದ ಸಂನ್ಯಾಸಯೋಗದ ಮಹಿಮೆಯಿಂದ ಕರ್ಮಬಂಧಮುಕ್ತನಾಗಿ ಸತ್ತಬಳಿಕ ಭಗವಂತನನ್ನೇ ಸೇರುವನು- ಎಂಬುದು ಸಾಧಕನ ದೃಷ್ಟಿಯಿಂದ ಹೇಳಿದ ಮಾತು

ಪ್ರಕೃತದಲ್ಲಿ ಭಗವದ್ಭಕ್ತನಾದವನು–

**ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।**
**ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಮ್ ॥** ಗೀ. ೧೮–೨೦

(ಸರ್ವಭೂತಗಳಲ್ಲಿಯೂ ಒಂದೇಒಂದು ಅವ್ಯಯವಾದ ಭಗವತ್ತತ್ತ್ವವು ಯಾವ ವಿಭಾಗವೂ ಇಲ್ಲದೆ ಇರುವದೆಂಬುದನ್ನು ಅರಿತಿರುವ **ಜ್ಞಾನವು ಸಾತ್ತ್ವಿಕವೆಂದು** ತಿಳಿ).

**ಮುಕ್ತಸಙ್ಗೋಽನಹಂವಾದೀ ಧೃತ್ಯುತ್ಸಾಹಸಮನ್ವಿತಃ ।**
**ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾ ಸಾತ್ತ್ವಿಕ ಉಚ್ಯತೇ ॥**
ಗೀ. ೧೮–೨೬

(ಸಂಗವಿಲ್ಲದವನೂ ಅಹಂಕಾರವಿಲ್ಲದವನೂ ಈ ಕಾರ್ಯಕರಣಗಳನ್ನು ಕುಸಿಯಬಿಡದೆ ಉದ್ಯಮಶೀಲನಾಗಿ ಫಲಸಿದ್ಧಿಯಾಗಲಿ ಆಗದಿರಲಿ ಯಾವ ವಿಕಾರವೂ ಇಲ್ಲದೆ ಶಾಸ್ತ್ರೋಕ್ತವೆಂಬ ಒಂದೇ ಕಾರಣದಿಂದ ಕರ್ಮವನ್ನು ಮಾಡುವವನು **ಸಾತ್ತ್ವಿಕ ಕರ್ತೃವೆನಿಸುವನು**) ಎಂದಿರುವಂತೆ ಸಾತ್ತ್ವಿಕಜ್ಞಾನವುಳ್ಳ ಸಾತ್ತ್ವಿಕಕರ್ತೃವಾಗಿ ಭಗವಂತನಲ್ಲಿ ಅನನ್ಯತೆಗೆ ಅನುಗುಣವಾಗಿರುವ ಲೌಕಿಕಕರ್ಮಗಳನ್ನೇ ಮಾಡುತ್ತಿರುವನಾದ್ದರಿಂದ ಇದನ್ನು 'ತದ್ವಿರೋಧಿಗಳಲ್ಲಿ ಉದಾಸೀನತೆ' ಎಂದು ಕರೆದಿರುತ್ತದೆ. ಆದ್ದರಿಂದ ಹೀಗೆ ಅವನ ಭಕ್ತಿಯು ಕಾಮಗಳ ನಿರೋಧವಾಗಿದೆ ಎಂದು ಹೇಳಿದ್ದು ಯುಕ್ತವಾಯಿತು.

೩೬. ಇಲ್ಲಿ ಒಂದು ಶಂಕೆ : ಹಿಂದೆ (೮ನೆಯ ಸೂತ್ರದಲ್ಲಿ) ಲೋಕವೇದ ವ್ಯಾಪಾರಗಳನ್ನೆಲ್ಲ ಬಿಡುವದೇ ನಿರೋಧವೆಂದು ಹೇಳಿ ಇಲ್ಲಿ ಅನನ್ಯತೆಗೆ ಅನುಕೂಲವಾದ ಕರ್ಮಗಳನ್ನು ಮಾಡುವದು ನಿರೋಧವೆಂದಿರುವದು ಅನ್ಯೋನ್ಯವಿರುದ್ಧವಾಗಲಿಲ್ಲವೆ ?– ಎಂದರೆ :

ಹಾಗಲ್ಲ. ಏಕೆಂದರೆ ಭಕ್ತನು ಯಾವಾಗಲೂ ಭಗವಂತನ ಚಿಂತನೆಯಲ್ಲಿಯೇ ಮುಳುಗಿರುತ್ತಾನೆ. ಭಗವತ್ತತ್ತ್ವವನ್ನು ಮನಗಂಡಿರುವನಾದ್ದರಿಂದ ಅವನಿಗೆ ನೇರಾಗಿ ಕರ್ತೃತ್ವವಾಗಲಿ ಭೋಕ್ತೃತ್ವವಾಗಲಿ ಇರುವದೇ ಇಲ್ಲ–ಎಂದು ಪರಮಾರ್ಥ ದೃಷ್ಟಿಯಿಂದ ಹೇಳಿದೆವು. ಭಕ್ತನು ಯಾವ ವರ್ಣಾಶ್ರಮಗಳಲ್ಲಿರಲಿ ಅದಕ್ಕೆ ತಕ್ಕ ಕರ್ಮಗಳನ್ನು ಮಾಡುವವನಾಗಿರುತ್ತಾನೆ– ಎಂದು ಇಲ್ಲಿ ಹೇಳಿರುತ್ತದೆ. ಭಾವ ಸಮಾಧಿಯಲ್ಲಿರುವ ಭಕ್ತನು ಹೊರಮುಖನಾಗಿದ್ದರೆ ಲೋಕದ ಜನರಿಗೆ ಮೇಲು ಪಙ್ಕ್ತಿಯನ್ನು ಹಾಕಿಕೊಡುವದಕ್ಕಾಗಿ ತನ್ನ ವರ್ಣಕ್ಕೂ ಆಶ್ರಮಕ್ಕೂ ತಕ್ಕ ಕರ್ಮವನ್ನು ಮಾಡುತ್ತಿದ್ದರೂ ಅವನಿಗೆ ಯಾವ ಕರ್ತೃತ್ವಬುದ್ಧಿಯೂ ಇಲ್ಲದೆ ಇರುವದರಿಂದ ಅವನು ಮಾಡುವ ಕರ್ಮವೆಲ್ಲವೂ–

**ಬ್ರಹ್ಮಾರ್ಪಣಂ ಬ್ರಹ್ಮ ಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।**
**ಬ್ರಹ್ಮೈವ ತೇನ ಗನ್ತವ್ಯಂ ಬ್ರಹ್ಮಕರ್ಮಸಮಾಧಿನಾ ॥ ಗೀ. ೪-೨೪**

ಎಂಬ ವಚನದಂತೆ ಜ್ಞಾನಿಯು ಗೃಹಸ್ಥನಾಗಿದ್ದರೆ ಅವನು ಮಾಡುವ ಯಜ್ಞಾದಿ ಕರ್ಮಗಳೆಲ್ಲವೂ ಸಾಧನಫಲಸಹಿತವಾಗಿ ಅವನ ಪಾಲಿಗೆ ಭಗವನ್ಮಯವಾಗಿಯೇ ಕಾಣುತ್ತಿರುವವು. ಹೀಗೆಯೇ ಬ್ರಹ್ಮಚರ್ಯ, ವಾನಪ್ರಸ್ಥಾಶ್ರಮ, ಅಥವಾ ಯತ್ಯಾಶ್ರಮ- ಇವುಗಳಲ್ಲಿರುತ್ತಿದ್ದರೂ ಅವನು ಶಾಸ್ತ್ರಕ್ಕೆ ಅವಿರೋಧವಾದ ಆಚರಣೆಯನ್ನೇ ಇಟ್ಟುಕೊಂಡಿರುತ್ತಾನೆ. (ಇದು ಮುಂದಿನ ಸೂತ್ರಗಳಲ್ಲಿ ಸ್ಫುಟವಾಗುವದು). ಆದ್ದರಿಂದ ವ್ಯವಹಾರದೃಷ್ಟಿಯಿಂದ ಅವನು ಕರ್ಮವನ್ನು ಮಾಡುತ್ತಿದ್ದರೂ ಅದು ಕಾಮಪ್ರಯುಕ್ತವಾದ ಕರ್ಮವಲ್ಲ ; ಕರ್ತೃತ್ವಬುದ್ಧಿಯಿಂದ ಮಾಡಿದ ಕರ್ಮವೂ ಅಲ್ಲ. ಹೀಗಿರುವದರಿಂದ ಇಲ್ಲಿ ಯಾವ ವಿರೋಧವೂ ಇಲ್ಲ.

## ೬. ಭಕ್ತನು ಕರ್ಮಗಳನ್ನು ಮಾಡುವ ರೀತಿ

ಭವತು ನಿಶ್ಚಯದಾರ್ಢ್ಯಾದೂರ್ಧ್ವಂ ಶಾಸ್ತ್ರರಕ್ಷಣಮ್॥೧೨॥

೧೨. (ಭಕ್ತಿಯ ವಿಷಯಕ್ಕೆ) ನಿಶ್ಚಯವು ಗಟ್ಟಿಯಾದಮೇಲೆ ಶಾಸ್ತ್ರವನ್ನು ಕಾಪಾಡಿಕೊಂಡಿರಬೇಕು.

೩೬. ಹಿಂದೆ ನಾವು ಪರಿಹರಿಸಿದ ಶಂಕೆಗೆ ಯಾವ ಅವಕಾಶವೂ ಇಲ್ಲವೆಂಬುದು ಮುಂದಿನ ಮೂರು ಸೂತ್ರಗಳಲ್ಲಿ ಸ್ಫುಟೀಕೃತವಾಗಿರುತ್ತದೆ.

ಭಕ್ತನು ಭಗವಂತನಲ್ಲಿಯೇ ನೆಲೆನಿಂತದ್ದರ ಫಲವಾಗಿ ಭಗವಂತನ ಸ್ವರೂಪವೇ ಆಗಿರುತ್ತಾನೆ. ಗೌಣಭಕ್ತರು ಪರಮಾತ್ಮನಿಗಿಂತ ತಾವು ಅನ್ಯರೆಂದೂ ಆತನಿಂದ ತಮಗೆ ಇಷ್ಟಾರ್ಥಪ್ರಾಪ್ತಿಯಾಗಬೇಕೆಂದೂ ಅನಿಷ್ಟನಿವೃತ್ತಿಯಾಗಬೇಕೆಂದೂ ಭಾವಿಸಿ ಪರಮಾತ್ಮನ ಪ್ರೀತ್ಯರ್ಥವಾಗಿ ಲೌಕಿಕವೈದಿಕವ್ಯಾಪಾರಗಳನ್ನು ಮಾಡುತ್ತಿರುವರು. ಆದರೆ ಪರಭಕ್ತನು ಹಾಗಲ್ಲ; **'ಜ್ಞಾನೀ ತ್ವಾತ್ಮೈವ ಮೇ ಮತಮ್। ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಮ್ ॥** (ಗೀ. ೭-೧೮) ಎಂದು ಭಗವಂತನೇ ಹೇಳಿರುವಂತೆ ವಾಸುದೇವಭಗವಂತನೇ ನಾನು, ಅವನಿಗಿಂತ ಸ್ವಲ್ಪವೂ ಬೇರೆಯಲ್ಲ- ಎಂಬ ನಿಶ್ಚಯವನ್ನು ಗಟ್ಟಿಯಾಗಿ ಅನುಭವಕ್ಕೆ ತಂದುಕೊಂಡವನಾದ್ದರಿಂದಲೂ

**ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ ಮಾಂ ಪ್ರಪದ್ಯತೇ ।**
**ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥ ಗೀ. ೭-೧೯**

ಎಂದು ಭಗವಂತನೇ ಹೇಳಿರುವಂತೆ ಎಷ್ಟೋ ಜನ್ಮಗಳಲ್ಲಿ ಭಗವದ್ಭಕ್ತಿಯ ಸಂಸ್ಕಾರವನ್ನು ಬೆಳೆಯಿಸಿಕೊಂಡು ಕೊನೆಗೆ ವಾಸುದೇವಭಗವಂತನೇ ಎಲ್ಲವೂ, ಆತನಿಗಿಂತ ಬೇರೆಯಾಗಿ ಯಾವದೊಂದೂ ಇರುವದೇಇಲ್ಲ- ಎಂಬ ನಿಶ್ಚಯಕ್ಕೆ ಬಂದಿರುವ ಮಹಾತ್ಮನವನಾಗಿರುವದರಿಂದ ಆತನಿಗೆ ಶಾಸ್ತ್ರೋಕ್ತಕರ್ಮಗಳನ್ನುಮಾಡಿ ಪಡೆದುಕೊಳ್ಳಬೇಕಾದ ಪುರುಷಾರ್ಥವು ಮತ್ತೆ ಬೇರೆ ಉಳಿದಿರುವದೇಇಲ್ಲ.

**ಸ್ಮರ್ತವ್ಯಃ ಸತತಂ ವಿಷ್ಣುರ್ವಿಸ್ಮರ್ತವ್ಯೋ ನ ಜಾತುಚಿತ್ ।**
**ಸರ್ವೇ ವಿಧಿನಿಷೇಧಾಃ ಸ್ಯುರೇತಯೋರೇವ ಕಿಙ್ಕರಾಃ ॥**

ಎಂಬಂತೆ ವಿಷ್ಣುವನ್ನು ಎಂದೆಂದಿಗೂ ಸ್ಮರಿಸುತ್ತಿರಬೇಕು, ಆತನನ್ನು ಎಂದಿಗೂ ಮರೆಯಬಾರದು- ಎಂಬೀ ಎರಡರಲ್ಲಿಯೇ ಎಲ್ಲಾ ವಿಧಿನಿಷೇಧಗಳೂ ಸೇರಿಹೋಗಿರುತ್ತವೆ. ಯಾರು ಸತ್ತ್ವರಜಸ್ತಮೋಗುಣಗಳ ಸೇರುವಿಕೆಯಿಂದಾಗಿರುವ ಸಂಸಾರದಲ್ಲಿ ತೊಳಲುತ್ತಿರುವರೋ ಅವರು ವಿಧಿನಿಷೇಧಗಳಿಗೆ ಆಳುಗಳು; ಆದರೆ ನಿಸ್ತ್ರೈಗುಣ್ಯರಾಗಿರುವ ಶುದ್ಧಸಾತ್ತ್ವಿಕರಾದ ಭಕ್ತರಿಗೆ ವಿಧಿಯೆಲ್ಲಿಂದ ಬಂತು, ನಿಷೇಧವೆಂಬುದೆಲ್ಲಿಂದ ಬಂತು? (**ನಿಸ್ತ್ರೈಗುಣ್ಯೇ ಪಥಿ ವಿಚರತಾಂ ಕೋ ವಿಧಿಃ ಕೋ ನಿಷೇಧಃ**) ಹೀಗೆ ಯಾವ ವೇದದ ಕಟ್ಟಳೆಯೂ ಭಕ್ತರನ್ನು ಕಟ್ಟುಮಾಡುವಂತಿಲ್ಲವಾದರೂ ಅವರಿಗೆ ಶುಭಕರ್ಮಗಳನ್ನೇ ಮಾಡುವದೆಂಬುದು ಸ್ವಭಾವವಾಗಿಬಿಟ್ಟಿರುತ್ತದೆ. ಅವರು ಮಾಡುವ ಕರ್ಮಾಚರಣೆಯ ಪದ್ಧತಿಯು ಶಾಸ್ತ್ರಾಚಾರವನ್ನು ಪರಿಪಾಲನೆಮಾಡುವದು; ಆದರಿಂದ ಉಳಿದವರೂ ಅವರಂತೆಯೇ ಶಾಸ್ತ್ರೋಕ್ತಕರ್ಮಗಳನ್ನು ಮಾಡುವದಕ್ಕೆ ದಾರಿಯಾಗಿರುತ್ತದೆ.

**ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಙ್ಗಿನಾಮ್ ।**
**ಜೋಷಯೇತ್ ಸರ್ವಕರ್ಮಾಣಿ ವಿದ್ವಾನ್ ಯುಕ್ತಃ ಸಮಾಚರನ್ ॥**
ಗೀ. ೩-೨೬

ಎಂದಿರುವಂತೆ ಕರ್ಮವನ್ನು ಮಾಡಲೇಬೇಕು ಎಂಬ ಬುದ್ಧಿಯು ಆಸ್ತಿಕರೂ ಕರ್ಮಸಂಗಿಗಳೂ ಆದ ಅಜ್ಞಾನಿಗಳಿಗೆ ಸ್ವಾಭಾವಿಕವಾಗಿರುತ್ತದೆ; ಜ್ಞಾನಿಯಾದವನಿಗೆ ಮಾಡಬೇಕಾದ ಯಾವ ಕರ್ಮಗಳೂ ಇಲ್ಲವಾದರೂ ಬಲ್ಲವರಾದ ಜ್ಞಾನಿಗಳು ತಾವೂ ಕರ್ತವ್ಯಕರ್ಮಗಳನ್ನು ವಿಧಿವತ್ತಾಗಿಯೇ ಮಾಡುತ್ತಾ ಅವರನ್ನು ಕರ್ಮನಿಷ್ಠೆಯಲ್ಲಿರುವಂತೆ ಪ್ರೋತ್ಸಾಹಿಸುತ್ತಿರುವರು. ಹೀಗೆ ಮಾಡುವದರಿಂದ ಪರಭಕ್ತರು ಲೋಕವೇದವ್ಯಾಪಾರಗಳನ್ನೆಲ್ಲವನ್ನೂ ಸಂನ್ಯಾಸಮಾಡಿರುತ್ತಾರೆ ಎಂಬ ನಿಯಮಕ್ಕೆ ಯಾವ ಅಪವಾದವೂ ಆಗುವದಿಲ್ಲ.

ಅನ್ಯಥಾ ಪಾತಿತ್ಯಶಙ್ಕಯಾ ॥ ೧೩ ॥

೧೩. ಏಕೆಂದರೆ ಹೀಗಿಲ್ಲದಿದ್ದರೆ ಪತಿತನೆಂಬ ಶಂಕೆಯುಂಟಾದೀತು.

## ಭಕ್ತರು ಜನರನ್ನು ಸನ್ಮಾರ್ಗಕ್ಕೆಳೆಯುವದರಿಂದಾಗುವ ಪ್ರಯೋಜನ

೩೮. ಭಕ್ತರಿಗೆ ಜನರನ್ನು ಸರಿಯಾದ ದಾರಿಗೆ ತಂದದ್ದರಿಂದ ಆಗಬೇಕಾದ ಸ್ವಪ್ರಯೋಜನವು ಯಾವದೂ ಇಲ್ಲ; ಅಥವಾ ತಮ್ಮನ್ನು ಲೋಕವು ಕೊಂಡಾಡಲಿ !– ಎಂಬ ಕೀರ್ತಿಯ ಕಾಙ್ಕ್ಷೆಯೂ ಇರುವದಿಲ್ಲ. ಆದರೂ ತಮಗೆ ಹೇಗೆ ಎಲ್ಲೆಲ್ಲಿಯೂ ಆನಂದರೂಪನಾದ ಪರಮಾತ್ಮನೇ ಕಾಣುತ್ತಿರುವನೋ, ಹಾಗೆಯೇ ಉಳಿದವರಿಗೂ ಕಾಣಲಿ !– ಎಂಬ ಸರ್ವಹಿತಾಕಾಂಕ್ಷೆಯೇ ಅವರಿಗೆ ಸ್ವಭಾವವಾಗಿರುತ್ತದೆ. ಭಗವಂತನು ಜನರಿಗೆ ಸನ್ಮಾರ್ಗವು ದೊರಕಲಿ !– ಎಂದು ತಾನು ಸ್ವೀಕರಿಸಿದ ಅವತಾರಗಳಲ್ಲಿ ಹೇಗೆ ಸತ್ಕರ್ಮಾಚರಣೆಯಿಂದಲೇ ವರ್ತಿಸುವನೋ ಅದರಂತೆಯೇ ಇದು. ಶ್ರೀಕೃಷ್ಣಭಗವಂತನು ಈ ವಿಷಯದಲ್ಲಿ ಹೇಳಿರುವದನ್ನು ಮನಸ್ಸಿಗೆ ತಂದುಕೊಳ್ಳುವದರಿಂದ ಲಾಭವುಂಟು.

**ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಞ್ಚನ ।**
**ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥**
**ಯದಿ ಹ್ಯಹಂ ನ ವರ್ತೇಯ ಜಾತು ಕರ್ಮಣ್ಯತನ್ದ್ರಿತಃ ।**
**ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ ॥**
**ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಮ್ ।**
**ಸಙ್ಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥**
**ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವನ್ತಿ ಭಾರತ ।**
**ಕುರ್ಯಾದ್ ವಿದ್ವಾಂಸ್ತಥಾಽಸಕ್ತಶ್ಚಿಕೀರ್ಷುರ್ಲೋಕಸಙ್ಗ್ರಹಮ್ ॥**

ಗೀ. ೩–೨೨ರಿಂದ ೨೬

“ಪಾರ್ಥನೆ, ನನಗೆ ಮೂರು ಲೋಕಗಳಲ್ಲಿಯೂ ಮಾಡಬೇಕಾದ ಕಾರ್ಯವೆಂಬುದಿರುವದಿಲ್ಲ; ಏಕೆಂದರೆ ನಾನು ಮನುಷ್ಯಲೋಕ, ಪಿತೃಲೋಕ, ದೇವಲೋಕ–ಎಂಬ ಮೂರು ಲೋಕಗಳಲ್ಲಿಯೂ ಈವರೆಗೆ ಪಡೆದುಕೊಳ್ಳದೆ ಇನ್ನುಮುಂದೆ ಪಡೆದುಕೊಳ್ಳಬೇಕಾದದ್ದೆಂಬುದು ಇಲ್ಲವೇಇಲ್ಲ. ಹೀಗೆ ಆಪ್ತಕಾಮನಾಗಿದ್ದರೂ ಕರ್ಮವನ್ನು ಮಾಡುತ್ತಲೇಇರುತ್ತೇನೆ. ನಾನು ಆಲಸ್ಯವನ್ನು ಬಿಟ್ಟು ಕರ್ಮವನ್ನು ಮಾಡುವದರಲ್ಲಿ ಯಾವಾಗಲೂ ತೊಡಗದೆಇದ್ದರೆ, ಅಷ್ಟರಿಂದಲೇ ಜನರು ನನ್ನ ಹಾದಿಯನ್ನೇ ಹಿಡಿದು ಹಾಳಾದಾರು; ನಾನು ಅವರಿಗೆ ಅನುಗ್ರಹವನ್ನು ಮಾಡಬೇಕೆಂದು ಅವತರಿಸಿರುವೆನಾದರೂ ಅದಕ್ಕೆ ವಿರುದ್ಧವಾಗಿ ಇವರನ್ನೆಲ್ಲ ಕೆಡಿಸಿದವನಾದೇನು! ಆದ್ದರಿಂದ ಲೋಕವನ್ನು ಸರಿಯಾದ ದಾರಿಗೆ ತರಬೇಕೆಂದು ಬಯಸುವಂಥ ಜ್ಞಾನಿಗಳಾದವರು– ಅಜ್ಞರು ಹೇಗೆ ಆಸಕ್ತಿಯಿಂದ ಕರ್ಮವನ್ನು ಮಾಡುವರೋ ಹಾಗೆಯೇ– ಸಂಗವಿಲ್ಲದೆ ಕರ್ಮಗಳನ್ನು ಮಾಡುತ್ತಿರಬೇಕು.”

ಭಕ್ತರು ಈ ವಿಷಯದಲ್ಲಿ ಭಗವಂತನನ್ನೇ ಅನುಕರಿಸುತ್ತಿರುವರು. ತಮಗೆ ಕರ್ಮಾಚರಣೆಯಿಂದ ಆಗಬೇಕಾದದ್ದು ಏನೂ ಇಲ್ಲದಿದ್ದರೂ ಕರ್ಮವನ್ನು ಮಾಡದೆ ಬಿಟ್ಟರೆ 'ಇವರು ಪತಿತರು' ಎಂದುಕೊಂಡು ಆಸ್ತಿಕರಾದ ಜನರು ಇವರಲ್ಲಿಗೆ ಬಂದು ಅಧ್ಯಾತ್ಮಮಾರ್ಗದಲ್ಲಿ ಮಾಡಬೇಕಾದ ಸಾಧನಗಳ ತತ್ತ್ವವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡದೆ ಇದ್ದಾರು; ತೀರ ಅಜ್ಞರಾದವರು ಇಂಥವರೇ ಕರ್ಮವನ್ನು ಬಿಟ್ಟಿರುತ್ತಾರಾದ್ದರಿಂದ ಕರ್ಮಗಳನ್ನು ಮಾಡಿದ್ದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಕಾಣುತ್ತದೆ– ಎಂದುಕೊಂಡು ತಾವೂ ಬಿಟ್ಟು ಕೆಟ್ಟು ಹೋದಾರು ! ಹಾಗಾಗದಿರಲೆಂದುಕೊಂಡು ಭಕ್ತರು ಸಂಗರಹಿತರಾಗಿ ಕರ್ಮಗಳನ್ನು ವಿಧ್ಯುಕ್ತರೀತಿಯಿಂದಲೇ ಮಾಡುತ್ತಾ ಜನರನ್ನು ಆಸ್ತಿಕ್ಯದ ಮಾರ್ಗಕ್ಕೆ ತರುವದಕ್ಕೆ ಪ್ರಯತ್ನಿಸುತ್ತಿರುವರು.

> ಶಾನ್ತಾ ಮಹಾನ್ತೋ ನಿವಸನ್ತಿ ಸನ್ತೋ
> ವಸನ್ತವಲ್ಲೋಕಹಿತಂ ಚರನ್ತಃ ।
> ತೀರ್ಣಾಃ ಸ್ವಯಂ ಭೀಮಭವಾರ್ಣವಂ ಜನಾ-
> ನಹೇತುನಾನ್ಯಾನಪಿ ತಾರಯನ್ತಃ ॥ ವಿ. ಚೂ. ೩೭

ಎಂಬಂತೆ ಮಹಾಪುರುಷರಾದ ಸಜ್ಜನರು ವಸಂತಋತುವಿನಂತೆ ಸ್ವಭಾವದಿಂದಲೇ ಜನರಿಗೆ ಹಿತವನ್ನಾಚರಿಸುತ್ತಿರುವರು. ತಾವೂ ಭಯಂಕರವಾದ ಸಂಸಾರಸಾಗರದಿಂದ ಪಾರಾಗಿ ಮಿಕ್ಕವರನ್ನೂ ಯಾವ ಪ್ರಯೋಜನವನ್ನೂ ಬಯಸದೆ ಪಾರುಮಾಡುತ್ತಿರುವರು.

## ಭಕ್ತರಿಗೆ ಕರ್ಮಭ್ರಂಶದಿಂದ ಪಾತಿತ್ಯವಿಲ್ಲ

೩೯. ಈ ಸೂತ್ರಕ್ಕೆ ಕೆಲವರು 'ಶಾಸ್ತ್ರದ ವಿಧಿಯನ್ನು ಮೀರಿ ಕರ್ಮವನ್ನು ಬಿಟ್ಟರೆ ಪತನಭಯವುಂಟು' ಎಂಬ ಅರ್ಥವನ್ನು ಮಾಡಿಕೊಂಡಿರುತ್ತಾರೆ. ಇದು ಸರಿಯಲ್ಲ. ಏಕೆಂದರೆ ಭಕ್ತರೆಂದರೆ ಏಳುಬೀಳುಗಳಿಲ್ಲದ ಪರಮಾತ್ಮನ ಸ್ಥಾನವನ್ನು ಸೇರಿದವರಾಗಿರುತ್ತಾರೆ. ಅವರಿಗೆ ದುಷ್ಕರ್ಮವನ್ನು ಮಾಡಿ ಕೆಡುವೆನೆಂಬ ಅಂಜಿಕೆಯಾಗಲಿ ಉತ್ತಮಕರ್ಮಗಳನ್ನು ಮಾಡಿದರೆ ಉತ್ತಮಗತಿಯಾದೀತೆಂಬ ಆಶೆಯಾಗಲಿ ಇರುವದಿಲ್ಲ. ಮತ್ತೊಬ್ಬರನ್ನು ಉದ್ಧಾರಮಾಡಿ ಯಾವದಾದರೊಂದು ಲಾಭವನ್ನು ಪಡೆಯಬೇಕೆಂಬ ಹಂಬಲೂ ಅವರಿಗಿರುವದಿಲ್ಲ. ನಾವು ಹಿಂದೆಯೇ (ಪು. ೨೪) ಹೇಳಿರುವಂತೆ ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ವರ್ಣಿಸಿರುವ ಸ್ವಭಾವದವರೇ ಅವರು. ಶ್ರೀಸುರೇಶ್ವರಾಚಾರ್ಯರು ತಮ್ಮ ನೈಷ್ಕರ್ಮ್ಯಸಿದ್ಧಿಯಲ್ಲಿ ಬರೆದಿರುವಂತೆ :

**ಉತ್ಪನ್ನಾತ್ಮಪ್ರಬೋಧಸ್ಯ ಹ್ಯದ್ವೇಷ್ಟೃತ್ವಾದಯೋ ಗುಣಾಃ ।**
**ಅಯತ್ನತೋ ಭವನ್ತ್ಯಸ್ಯ ನ ತು ಸಾಧನರೂಪಿಣಃ ॥** ನೈ. ಸಿ. ೪-೬೯

ಆತ್ಮಜ್ಞಾನವುಂಟಾಗಿರುವ ಭಕ್ತರಿಗೆ ಅದ್ವೇಷವೇ ಮುಂತಾದ ಗುಣಗಳು ಯಾವ ಪ್ರಯತ್ನವೂ ಇಲ್ಲದೆ ತಾನೇ ಉಂಟಾಗಿರುತ್ತವೆ; ಅದಕ್ಕಾಗಿ ಅವರು ಯಾವ ಸಾಧನವನ್ನೂ ಮಾಡಬೇಕಾಗಿರುವದೇಇಲ್ಲ.

ಸ್ವರ್ಗವೇ ಮುಂತಾದವುಗಳನ್ನು ಬಯಸುವ ಕರ್ಮಠರು-

**ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ**
**ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ ॥**
**ಏವಂ ತ್ರಯೀಧರ್ಮಮನುಪ್ರಪನ್ನಾ**
**ಗತಾಗತಂ ಕಾಮಕಾಮಾ ಲಭನ್ತೇ ॥** ಗೀ. ೯-೨೧

ಎಂದಿರುವಂತೆ ಕರ್ಮದ ಫಲವಾದ ಸ್ವರ್ಗಾದಿಗಳನ್ನು ಪಡೆದು ಪುಣ್ಯವು ಕ್ಷಯ ವಾಗಲು ಮತ್ತೆ ಮರ್ತ್ಯಲೋಕಕ್ಕೆ ಹಿಂತೆರಳುವರು. ಆದ್ದರಿಂದ ಕಾಮಿಗಳಾದ ಅವರಿಗೆ ಪತನಭಯವುಂಟು.ಆದರೆ ಭಕ್ತಿಯು ಕಾಮಗಳ ನಿರೋಧರೂಪವಾಗಿರುವದ ರಿಂದ ಯಾವ ಅಧಃಪತನಶಂಕೆಯೂ ಭಕ್ತರಿಗಿರುವದಿಲ್ಲ. ಇನ್ನು ಶಾಸ್ತ್ರವಿಧಿಯನ್ನು ಉಲ್ಲಂಘಿಸಿದ ದೋಷದಿಂದ ಅವರಿಗೆ ಪ್ರತ್ಯವಾಯವುಂಟಾಗುವದೆಂಬ ಅಂಜಿಕೆ ಯಾಗಲಿ ದುಷ್ಕರ್ಮವನ್ನು ಮಾಡಿದ್ದರಿಂದ ನರಕಪತನವಾಗುವದೇ ಮುಂತಾದ ಅಂಜಿಕೆಯಾಗಲಿ ಅವರಿಗೆ ಉಂಟಾಗುವದು ತೀರ ಅಸಂಭಾವಿತವಾಗಿರುತ್ತದೆ. ಏಕೆಂದರೆ ಅವರು ಕರ್ತೃತ್ವಭೋಕ್ತೃತ್ವವಿಲ್ಲದ ಪರಮಾತ್ಮಸ್ವರೂಪವನ್ನೇ ಹೊಂದಿ ಬಿಟ್ಟಿರುತ್ತಾರೆಂದು ಹಿಂದೆ (ಪು. ೧೨) ತಿಳಿಯಿಸಿರುತ್ತೇನೆ. ಅವರ ದೃಷ್ಟಿಯಲ್ಲಿ '**तद्विष्णोः परमं पदं सदा पश्यन्ति सूरयः**' (ಋ. ಮಂ. ೧-೫-೨೨-೨೦) ಎಂಬ ಶ್ರುತ್ಯನುಸಾರವಾಗಿ ಎಲ್ಲೆಲ್ಲಿಯೂ ಯಾವಾಗಲೂ ವಿಷ್ಣುವಿನ ಪರಮಪದವೇ ಕಾಣಿಸುತ್ತಿರುವದರಿಂದ ಅವರು ಎಲ್ಲಿಂದ ಎಲ್ಲಿಗೆ ಬೀಳಬೇಕು? ಅವರಿಗೆ ಅಹಂ ಕಾರವೇ ಇಲ್ಲದ್ದರಿಂದ ಯಾವ ಕರ್ಮದಿಂದಲೂ ಯಾವ ಫಲವೂ ಆಗುವಂತೆಯೇ ಇಲ್ಲ.

ಶಾಸ್ತ್ರದಲ್ಲಿ ಜ್ಞಾನಿಗಳಿಗೆ ಯಾವ ನಿಷಿದ್ಧಕರ್ಮದಿಂದಲೂ ಸದ್ಗತಿಗೆ ತೊಂದರೆ ಯಾಗುವದಿಲ್ಲವೆಂದು ಹೊಗಳಿರುವದುಂಟು. ಉದಾಹರಣೆಗೆ **ಕೌಷೀತಕ್ಯುಪನಿಷತ್ತಿನಲ್ಲಿ** ಪ್ರತರ್ದನನು

**स यो मां विजानीयान्नास्य**
**केन च कर्मणा लोको मीयते ।**
**न मातृवधेन न पितृवधेन न स्तेयेन**
**न भ्रूणहत्यया ........ ॥** ಕೌ. ೩-೧

"ಯಾವನು ನನ್ನನ್ನು ಅರಿತು ಉಪಾಸನೆಮಾಡುತ್ತಾನೋ ಅವನಿಗೆ ಯಾವ ಕರ್ಮದಿಂದಲೂ – ಮಾತೃವಧೆಯಿಂದಾಗಲಿ ಪಿತೃವಧೆಯಿಂದಾಗಲಿ ಕಳ್ಳತನದಿಂದಲಾಗಲಿ ಭ್ರೂಣಹತ್ಯೆಯಿಂದಾಗಲಿ .... ದೊರಕಬೇಕಾದ ಲೋಕಕ್ಕೆ ಅಡ್ಡಿಯಾಗುವದಿಲ್ಲ" –ಎಂದಿರುತ್ತಾನೆ. **ಭಗವದ್ಗೀತೆಯಲ್ಲಿ**

**ಯಸ್ಯ ನಾಹಙ್ಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।**
**ಹತ್ವಾಪಿ ಸ ಇಮಾಲ್ಲೋಕಾನ್ನ ಹನ್ತಿ ನ ನಿಬಧ್ಯತೇ ॥**

ಗೀ. ೧೮–೧೭

"ಯಾವನು ಶಾಸ್ತ್ರಾಚಾರ್ಯೋಪದೇಶದಿಂದಲೂ ಸ್ವಾನುಭವದಿಂದಲೂ ಅಂತಃಕರಣದ ಸಂಸ್ಕಾರವನ್ನು ಹೊಂದಿ ನಾನು ಕರ್ತೃವೆಂಬ ಅಭಿಮಾನವೇ ಇಲ್ಲದವನಾಗಿರುವನೋ 'ಇಂಥ ದುಷ್ಕೃತ್ಯವನ್ನು ಮಾಡಿದೆನಲ್ಲ '!– ಎಂದು ಯಾವನ ಅಂತಃಕರಣದಲ್ಲಿ ಶಂಕೆಯೂ ಉಳಿದುಕೊಂಡಿಲ್ಲವೋ ಅವನು ಎಲ್ಲಾ ಪ್ರಾಣಿಗಳನ್ನೂ ಕೊಂದರೂ ಕೊಂದವನಾಗುವದಿಲ್ಲ ; ಆ ಕೃತ್ಯದ ಫಲದಿಂದ ಬದ್ಧನೂ ಆಗುವದಿಲ್ಲ" ಎಂದು ಭಗವಂತನೇ ಹೇಳಿರುತ್ತಾನೆ. ಇದು ಭಕ್ತನಿಗೆ ಉಂಟಾಗಿರುವ ತತ್ತ್ವಜ್ಞಾನದ ಮಹಿಮೆಯನ್ನು ಹೊಗಳುವದಕ್ಕೇ ಹೊರತು ನಿಜವಾಗಿ ಅವನು ಇಂಥ ಪಾಪಕೃತ್ಯಗಳನ್ನು ಮಾಡುತ್ತಾನೆಂದೇನೂ ಅಲ್ಲಿ ವಿವಕ್ಷಿತವಾಗಿರುವದಿಲ್ಲ. ಶಾಸ್ತ್ರೋಕ್ತಕರ್ಮಗಳನ್ನುಕೂಡ ತನಗಾಗಿ ಅವನು ಮಾಡಿಕೊಳ್ಳುವದಿಲ್ಲ ; ಹೀಗಿರುವಲ್ಲಿ ಪಾಪಕೃತ್ಯಗಳನ್ನು ಮಾಡುವದೆಲ್ಲಿಂದ ಬಂದೀತು ?

ಆದ್ದರಿಂದ ಭಕ್ತನು ಶಾಸ್ತ್ರದ ಕಾರ್ಯಾಕಾರ್ಯನಿಯಮಗಳನ್ನು ಪಾಲಿಸಿಕೊಂಡೇ ಬರುತ್ತಾನೆ. ಅದರಿಂದ ಅವನಿಗೆ ಆಗಬೇಕಾದ ಫಲವು ಯಾವದೂ ಇಲ್ಲದಿದ್ದರೂ ಅವನ ಆಚರಣೆಯು ಅಜ್ಞಜನರಿಗೆ ಮಾರ್ಗದರ್ಶಕವಾಗಿ ಲೋಕೋಪಕಾರಕ್ಕೆ ಕಾರಣವಾಗಿರುತ್ತದೆ– ಎಂಬುದೇ ಈ ಎರಡು (೧೨–೧೩) ಸೂತ್ರಗಳ ಆಶಯವು. 'ಪಾತಿತ್ಯಶಂಕೆ' ಎಂಬುದು ಲೋಕದ ಜನರು – ಇವನು ಕರ್ಮಗಳನ್ನು ಬಿಟ್ಟದ್ದರಿಂದ ಪತಿತನೆಂಬ ಶಂಕೆಯಿಂದ ಇವನಿಂದಾಗುವ ಉಪದೇಶಗಳ ಲಾಭವನ್ನು –ಕಳೆದುಕೊಂಡಾರೆಂಬ ಶಂಕೆಯೇ ಹೊರತು ನಿಜವಾಗಿ ಪಾತಿತ್ಯವು ಯಾವ ಕಾರಣದಿಂದಲೂ ಭಕ್ತನಿಗೆ ಸೋಂಕಲಾರದು ಎಂಬುದೇ ಸಿದ್ಧಾಂತ.

ಲೋಕೋಽಪಿ ತಾವದೇವ ಭೋಜನಾದಿವ್ಯಾಪಾರಸ್ತ್ವಾಶರೀರಧಾರಣಾವಧಿ ॥ ೧೪ ॥

೧೪. ಲೋಕವ್ಯಾಪಾರವೂ ಅಲ್ಲಿಯವರೆಗೇ ; ಆದರೆ ಭೋಜನಾದಿವ್ಯಾಪಾರವು ಶರೀರವನ್ನು ಧರಿಸಿರುವವರೆಗೂ ಇದ್ದುಕೊಂಡಿರುವದು.

೪೦. ಭಕ್ತನು ಶಾಸ್ತ್ರೀಯಕರ್ಮಗಳನ್ನು ಲೋಕಸಂಗ್ರಹಕ್ಕಾಗಿ ಮಾಡುತ್ತಿರುವನೆಂಬುದು ಯುಕ್ತವಾಗಿರುತ್ತದೆ. ಲೌಕಿಕವ್ಯಾಪಾರಗಳಲ್ಲಿ ಇವನು ತೊಡಗಿರಬೇಕಾದದ್ದೇಕೆ ?– ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರವೇನೆಂದರೆ :

ಭಕ್ತನು ಯಾವ ಲೌಕಿಕವೈದಿಕವ್ಯಾಪಾರಗಳನ್ನೂ ತನಗಾಗಿ ಮಾಡುತ್ತಿರುವದಿಲ್ಲವೆಂದು ಹಿಂದೆಯೇ (ಸೂತ್ರ ೮ರಲ್ಲಿ) ಹೇಳಿದ್ದಾಗಿದೆ. ಲೌಕಿಕವ್ಯಾಪಾರಗಳನ್ನು ಮಾಡುವಾಗಲೂ ಪ್ರಾರಬ್ಧವಶದಿಂದ ಪ್ರಾಪ್ತವಾಗಿರುವ ಕರ್ತವ್ಯಗಳು ಯಾವವಾದರೂ ಅವನ್ನು ಅಭಿಮಾನವಿಲ್ಲದೆ ಫಲಾಶೆಯಿಲ್ಲದೆ ಭಕ್ತನು ಮಾಡುತ್ತಲೇ ಇರುವನು. ಜನಕನು ಚಕ್ರವರ್ತಿಯಾಗಿದ್ದರೂ–

**ಅನನ್ತಂ ಬತ ಮೇ ವಿತ್ತಂ ಯಸ್ಯ ಮೇ ನಾಸ್ತಿ ಕಿಞ್ಚನ ।**
**ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಞ್ಚನ ॥**
ಮಹಾಭಾರತ ಶಾಂ. ೧೭–೧೯

'ನನ್ನ ವಿತ್ತವು ಅನಂತವಾಗಿದ್ದರೂ ನನ್ನದೆಂಬುದು ಯಾವದೂ ಇಲ್ಲವೇ ಇಲ್ಲ ; ಮಿಥಿಲಾನಗರಿಯೇ ಸುಟ್ಟುಹೋದರೂ ನನ್ನದು ಯಾವದೂ ಸುಟ್ಟುಹೋಗುವದಿಲ್ಲ' ಎಂದನಂತೆ ! ಹಾಗೆಯೇ ಭಕ್ತನು ತನ್ನ ಎಲ್ಲಾ ಕೃತ್ಯಗಳನ್ನೂ ನಿರಭಿಮಾನಿಯಾಗಿ ಮಾಡುತ್ತಿರುತ್ತಾನಾದ್ದರಿಂದ ಅವನಿಗೆ ಅದರಿಂದ ಯಾವ ಅಡ್ಡಿಯೂ ಆಗುವಂತಿಲ್ಲ. ಎಲ್ಲಾ ಆಶ್ರಮಗಳನ್ನೂ ಬಿಟ್ಟು ಸಂನ್ಯಾಸಿಯಾಗಿರುವಾಗಲೂ **'ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್'** (ಗೀ. ೪–೨೧) ಎಂಬ ಗೀತೋಕ್ತಿಯಂತೆ ಅವನು ಭಿಕ್ಷಾಟನಾದಿಗಳಿಂದ ಶರೀರಸ್ಥಿತಿಗೆ ಬೇಕಾದಷ್ಟು ಕರ್ಮವನ್ನು ಪ್ರಾರಬ್ಧಕರ್ಮವಶದಿಂದ ಶರೀರವಿರುವವರೆಗೂ ಮಾಡುತ್ತಿರುವನು. ಆಗ ಅವನು

**ಯೇನಕೇನಚಿದಾಚ್ಛನ್ನೋ ಯೇನಕೇನಚಿದಾಶಿತಃ ।**
**ಯತ್ರ ಕ್ವಚನ ಶಾಯೀ ಸ್ಯಾತ್ತಂ ದೇವಾ ಬ್ರಾಹ್ಮಣಂ ವಿದುಃ ॥**
ಮೋ. ಧ. ೨೪೫–೧೨

ಎಂಬಂತೆ ದೊರೆತಷ್ಟು ಬಟ್ಟೆಯನ್ನು ಹೊದೆದುಕೊಳ್ಳುತ್ತಾ, ದೊರೆತಷ್ಟು ಆಹಾರದಿಂದ ತೃಪ್ತನಾಗಿ, ಸಿಕ್ಕಿದ ಹಾಳುಮನೆಯೇ ಮುಂತಾದ ಸ್ಥಲಗಳಲ್ಲಿ ಮಲಗಿ ನಿದ್ರಿಸುತ್ತಾ ದೇಹಯಾತ್ರೆಯನ್ನು ಸಾಗಿಸುತ್ತಿರುವನು. ಇದು ಅವನ ವ್ಯವಹಾರದೃಷ್ಟಿಯಿಂದ ಹೇಳಿದ್ದು. ನಿಜವಾಗಿ ಅವನ ದೃಷ್ಟಿಯಿಂದ **' ಸರ್ವಂ ವಿಷ್ಣುಮಯಮ್ '** ಜಗತ್ತೆಲ್ಲವೂ ವಿಷ್ಣುಮಯವಾಗಿಯೇ ಇರುತ್ತದೆ.

# ೭. ಭಕ್ತಿಯ ಹೆಗ್ಗುರುತುಗಳು

ತಲ್ಲಕ್ಷಣಾನಿ ವಾಚ್ಯನ್ತೇ ನಾನಾಮತಭೇದಾತ್ ॥ ೧೫ ॥

೧೫. ಬೇರೆಬೇರೆಯ (ಆಚಾರ್ಯರ) ಮತದಿಂದ ಆ (ಭಕ್ತಿಯ) ಲಕ್ಷಣಗಳನ್ನು (ಶಾಸ್ತ್ರದಲ್ಲಿ) ಹೇಳಿರುತ್ತದೆ.

೪೧. ಇಲ್ಲಿ ಭಕ್ತಿಯ 'ಲಕ್ಷಣಗಳನ್ನು' ಬೇರೆಬೇರೆಯ ಆಚಾರ್ಯರ ಮತಗಳನ್ನು ಅನುಸರಿಸಿ ಹೇಳುವದಕ್ಕೆ ಮೊದಲು ಮಾಡಿರುತ್ತದೆ. ಲಕ್ಷಣವೆಂದರೆ ತಾರ್ಕಿಕರು ಹೇಳುವ 'ಅವ್ಯಾಪ್ತಿ', 'ಅತಿವ್ಯಾಪ್ತಿ', 'ಅಸಂಭವ'– ಎಂಬ ದೋಷಗಳಿಲ್ಲದ ಅಸಾಧಾರಣವಾದ ಧರ್ಮ– ಎಂಬ ಅರ್ಥದಲ್ಲಿ ಉಪಯೋಗಿಸಿರುವ ಶಬ್ದವಿದಲ್ಲ. 'ಕಪ್ಪಗೆ ಇರುವದೇ ಎತ್ತು' ಎಂದರೆ ಬಿಳಿಯ ಎತ್ತುಗಳು ಎತ್ತುಗಳಲ್ಲವೆಂದಾಗುವದರಿಂದ ಎಲ್ಲಾ ಎತ್ತುಗಳ ಲಕ್ಷಣವನ್ನೂ ಹೇಳಿದಂತೆ ಆಗುವದಿಲ್ಲವಾದ್ದರಿಂದ ಅದು 'ಅವ್ಯಾಪ್ತಿ' ದೋಷವುಳ್ಳ ಲಕ್ಷಣ. 'ಕೋಡುಗಳುಳ್ಳ ಪ್ರಾಣಿಯು ಎತ್ತು' ಎಂದರೆ ಎತ್ತಿನ ಜಾತಿಗೆ ಸೇರದೆ ಇರುವ ಎಮ್ಮೆಯೇ ಮುಂತಾದ ಪ್ರಾಣಿಗಳನ್ನೂ ಸೇರಿಸಿದಂತೆ ಆಗುವದರಿಂದ ಅದು 'ಅತಿವ್ಯಾಪ್ತಿ' ಎಂಬ ದೋಷವುಳ್ಳ ಲಕ್ಷಣ. 'ರೆಕ್ಕೆಗಳಿರುವ ಪ್ರಾಣಿಯೇ ಎತ್ತು' ಎಂದರೆ ಅದು ಎತ್ತಿನಜಾತಿಗೆ ಹೊಂದುವದೇ ಇಲ್ಲವಾದ್ದರಿಂದ 'ಅಸಂಭವ' (ಹೇಗೂ ಆಗದೆ ಇರುವದು) ಎಂಬ ದೋಷವುಳ್ಳ ಲಕ್ಷಣ. ಹೀಗೆ ಹೆಚ್ಚುಕುಂದುಗಳಿಲ್ಲದೆ ಎಂದಿಗೂ ಹೊಂದದೆ ಇರುವದೂ ಆಗದೆ ಆ ಜಾತಿಗೆ ಮಾತ್ರ ಹೊಂದುವ ಅಸಾಧಾರಣಧರ್ಮವನ್ನು ಮಾತ್ರ ಲಕ್ಷಣವೆಂದು ನೈಯಾಯಿಕರು ಕರೆಯುತ್ತಾರೆ. ಆದರೆ ಇಂಥ ಲಕ್ಷಣಗಳನ್ನು ಇಲ್ಲಿ ಮುಂದೆ ಹೇಳುವದಿಲ್ಲ; ಒಂದೇ ವಸ್ತುವಿಗೆ ಅನೇಕ ಲಕ್ಷಣಗಳು ಇರುವಂತೆಯೇ ಇಲ್ಲವಾದ್ದರಿಂದಲೂ ಇಲ್ಲಿ ಈ ಅರ್ಥದ ಲಕ್ಷಣಗಳನ್ನು ಹೇಳುವದಕ್ಕೆ ಬಂದಿಲ್ಲವೆಂಬುದು ಸ್ಪಷ್ಟವಾಗಿದೆ. ಸ್ವರೂಪವನ್ನೇ ಲಕ್ಷಣವೆಂದು ಕರೆಯುವದುಂಟು ; ಆದರೆ ಭಕ್ತಿಯೆಂದರೆ ಭಗವಂತನಲ್ಲಿರುವ ಪರಮಪ್ರೇಮರೂಪವೆಂದು ಇದರ ಸ್ವರೂಪಲಕ್ಷಣವನ್ನು ಆಗಲೇ ಹೇಳಿಯೇ ಆಗಿದೆಯಾಗಿ ಅದನ್ನೂ ಇಲ್ಲಿ ಹೇಳುವ ಕಾರಣವಿಲ್ಲ.

ಆದ್ದರಿಂದ ಇಲ್ಲಿ ಲಕ್ಷಣಗಳು ಎಂದರೆ ಹೆಗ್ಗುರುತುಗಳು ಎಂಬರ್ಥವನ್ನು ತೆಗೆದುಕೊಳ್ಳಬೇಕು. ಭಕ್ತರಾದವರಿಗೆ ಭಗವಂತನಲ್ಲಿ ಪರಮಪ್ರೇಮವಿರುವದು ಅವರವರ ಅನುಭವದಿಂದಲೇ ಅವರವರಿಗೆ ನಿಶ್ಚಯವಾಗಿಬಿಟ್ಟಿರುವದರಿಂದ ಅವರಿಗಾಗಿ ಈ ಲಕ್ಷಣಗಳನ್ನು ಹೇಳಬೇಕಾದದ್ದಿರುವದಿಲ್ಲ. ಆದರೂ ಭಕ್ತಿಮಾರ್ಗದಲ್ಲಿ ನಡೆಯುತ್ತಿರುವವರಿಗೆ ತಮಗೆ ದೃಢಭಕ್ತಿಯಾಯಿತೊ, ಇಲ್ಲವೊ ?– ಎಂಬುದನ್ನು ಗೊತ್ತುಮಾಡಿಕೊಂಡು ಭಕ್ತಿಯ ದಾರ್ಢ್ಯಕ್ಕಾಗಿ ಪ್ರಯತ್ನವನ್ನು ಮಾಡುವದಕ್ಕೆ

ಅನುಕೂಲಿಸುವಂತೆ ಇಲ್ಲಿ ಸಾಧಕರಾದವರು ಯತ್ನಪೂರ್ವಕವಾಗಿ ಸಾಧಿಸಿಕೊಳ್ಳುವದಕ್ಕೆ ಅನುಕೂಲವಾಗುವ ಭಕ್ತರ ಲಕ್ಷಣಗಳನ್ನು ಹೇಳುತ್ತಾರೆ. ಅಧ್ಯಾತ್ಮಶಾಸ್ತ್ರದಲ್ಲಿ ಕೃತಕೃತ್ಯರಾದವರ ಲಕ್ಷಣಗಳು ಅವರಿಗೆ ಸ್ವಭಾವದಿಂದಲೇ ನಿಂತುಬಿಟ್ಟಿರುತ್ತವೆ ; ಅವುಗಳನ್ನೇ ಪ್ರಯತ್ನಪೂರ್ವಕವಾಗಿ ಸಾಧಿಸಬೇಕೆಂದು ಜನರಿಗೆ ಉಪದೇಶಿಸುವದಕ್ಕಾಗಿ ಸಿದ್ಧರ ಲಕ್ಷಣಗಳನ್ನು ಶಾಸ್ತ್ರಗಳಲ್ಲಿ ಹೇಳಿದೆ.

ಪೂಜಾದಿಷ್ವನುರಾಗ ಇತಿ ಪಾರಾಶರ್ಯಃ ।। ೧೬ ।।

೧೬. ಪೂಜೆಯೇ ಮುಂತಾದವುಗಳಲ್ಲಿ ಇರುವ ಅನುರಾಗವೇ (ಭಕ್ತಿಯ ಲಕ್ಷಣ) ಎಂದು ಪರಾಶರಪುತ್ರರಾದ ವ್ಯಾಸರು ಹೇಳುತ್ತಾರೆ.

೪೨. ಪೂಜಾದಿಗಳೆಂದರೆ ದೇಹವನ್ನು ಶುಚಿಯಾಗಿಟ್ಟುಕೊಳ್ಳುವದು, ಮಿಂದು ಮಡಿಯುಟ್ಟು ಹೂತುಲಸಿ ಮುಂತಾದವುಗಳನ್ನು ತರುವದು, ನಿತ್ಯಕರ್ಮಗಳನ್ನು ಭಗವತ್ಪ್ರೀತಿಗೆಂದು ಮಾಡುವದು, ಮನೆಯಲ್ಲಿ ಭಗವಂತನ ಚಿತ್ರ, ವಿಗ್ರಹ- ಮುಂತಾದವುಗಳನ್ನಿಟ್ಟುಕೊಂಡು ಮನಸ್ಸಿಗೆ ದರ್ಶನಾದಿಗಳಿಂದ ನೈರ್ಮಲ್ಯವನ್ನುಂಟುಮಾಡಿಕೊಳ್ಳುವದು, ದೇವಾಲಯಕ್ಕೆ ಹೋಗಿ ದೇವಾಲಯದ ಸುತ್ತಲಿನ ಭಾಗವು ಶುಚಿಯಾಗಿರುವಂತೆ ಗುಡಿಸುವದು, ಸಾರಿಸುವದು, ರಂಗವಲ್ಲಿಯೇ -ಮುಂತಾದವುಗಳನ್ನು ಬರೆಯುವದು, ದೇವರ ದರ್ಶನವನ್ನು ಮಾಡಿಕೊಂಡು ಹಣ್ಣುಕಾಯಿಗಳನ್ನು ಅರ್ಪಿಸುವದು, ಮನೆಯಲ್ಲಿ ಗುರುಹಿರಿಯರನ್ನೂ ಅತಿಥಿಗಳು, ಅಭ್ಯಾಗತರು-ಇವರುಗಳನ್ನೂ ಸತ್ಕರಿಸುವದು, ಅವರಿಗೆ ದಾನವನ್ನು ಮಾಡುವದು, ಕಾಲಕಾಲಕ್ಕೆ ಬಂದೊದಗುವ ಹಬ್ಬಹರಿದಿನಗಳನ್ನು ಆಚರಿಸುವದು, ವ್ರತೋಪವಾಸಾದಿಗಳಿಂದ ಭಗವಂತನಿಗಾಗಿ ದೇಹವನ್ನು ದಂಡಿಸುವದು, ಕೆರೆಕಟ್ಟೆಗಳನ್ನು ಕಟ್ಟಿಸುವದಕ್ಕೆ ಸಹಾಯಮಾಡುವದು, ಅನ್ನಸತ್ರಗಳ ನಿರ್ಮಾಣಕ್ಕೆ ನೆರವಾಗುವದು- ಇವೇ ಮುಂತಾದವುಗಳು. ಸ್ವವರ್ಣಾಶ್ರಮಧರ್ಮಗಳನ್ನು ಆಚರಿಸಿ ಭಗವಂತನಿಗೆ ಅರ್ಚನೆಯನ್ನು ಮಾಡುವದು, ಪರೋಪಕಾರ-ಮುಂತಾದವುಗಳಿಂದ ಭಕ್ತರನ್ನು ಗುರುತಿಸಬೇಕು ; ಸಾಧಕರಾದವರು ಇಂಥ ಕಾರ್ಯಗಳನ್ನು ತಪ್ಪದೆ ಮಾಡಬೇಕು- ಎಂಬುದು ಶ್ರೀವೇದವ್ಯಾಸರ ಮತವು.

**ಶ್ರೀವಿಷ್ಣೋರರ್ಚನಂ ಯೇ ತು ಪ್ರಕುರ್ವನ್ತಿ ನರಾ ಭುವಿ ।**
**ತೇ ಯಾನ್ತಿ ಶಾಶ್ವತಂ ವಿಷ್ಣೋರಾನನ್ದಂ ಪರಮಂ ಪದಮ್ ।।**

ಎಂಬ 'ವಿಷ್ಣುರಹಸ್ಯ'ವಾಕ್ಯದಂತೆ ಭಗವದರ್ಚನೆಯನ್ನು ಮಾಡಿದ ಮಾನವರು ಶಾಶ್ವತವಾದ ಆನಂದಮಯನಾದ ವಿಷ್ಣುವಿನ ಪರಮಪದವನ್ನೇ ಪಡೆಯುತ್ತಾರೆ.

ಕಥಾದಿಷ್ವಿತಿ ಗರ್ಗಃ ॥ ೧೭ ॥

೧೭. ಕಥಾದಿಗಳಲ್ಲಿರುವ (ಅನುರಾಗವೇ ಭಕ್ತಿಯ ಲಕ್ಷಣ) ಎಂದು ಗರ್ಗರು ಹೇಳಿರುತ್ತಾರೆ.

೪೩. ಕಥೆಯೆಂದರೆ ಭಗವಂತನ ಗುಣಕರ್ಮಗಳನ್ನು ವರ್ಣಿಸುವ ಪುರಾಣಾದಿ ಗಳನ್ನು ಹೇಳುವದು, ಕೇಳುವದು. ಇವುಗಳಲ್ಲಿರುವ ಅನುರಾಗ. 'ಮುಂತಾದವು ಗಳು' ಎಂದರೆ ನಾಮಕೀರ್ತನೆಯನ್ನು ಮಾಡುವದು, ಕೇಳಿ ಧನ್ಯನಾಗುವದು, ಭಗವಂತನ ನಾಮಗಳಲ್ಲಿ ತನಗೆ ಇಷ್ಟವಾದವುಗಳನ್ನು ದೊಡ್ಡವರಿಂದ ಉಪದೇಶ ಮಾಡಿಸಿಕೊಂಡು ಅದನ್ನು ಮಂತ್ರವಾಗಿ ಜಪಿಸುವದು, ಗುರುಹಿರಿಯರ ಉಪ ದೇಶಕ್ಕೆ ಕಿವಿಗೊಡುವದು, ದೇವರ ನಿರ್ಮಾಲ್ಯವನ್ನು ಅಕ್ಕರೆಯಿಂದ ಮೂಸಿ ಮುಡಿದುಕೊಳ್ಳುವದು, ದೇವರಿಗೆ ಅರ್ಪಿಸಿದ ನೈವೇದ್ಯವನ್ನೇ ಭುಂಜಿಸಿ ಕೃತಾರ್ಥ ನಾಗುವದು- ಮುಂತಾದವುಗಳು. ಹಿಂದಿನ ಸೂತ್ರದಲ್ಲಿ ಹೇಳಿರುವ ಆಚಾರಗಳು ಶರೀರಪ್ರಧಾನವಾಗಿರುವವುಗಳು ; ಇಲ್ಲಿ ಹೇಳಿರುವವುಗಳು ವಾಗಾದೀಂದ್ರಿಯ ಪ್ರಧಾನವಾದವುಗಳು- ಎಂಬುದು ವಿಶೇಷ. ಮೈಯಿಂದ ಮಾಡುವ ಕಷ್ಟದ ಕೆಲಸಗಳಿಗಿಂತಲೂ ಇಂದ್ರಿಯಗಳನ್ನು ಭಗವಂತನ ಸೇವೆಗೆ ವಿ ನಾಸಲಾಗಿಂಸುವದು ಭಕ್ತಿಯ ಹೆಚ್ಚಿನ ಗುರುತು- ಎಂಬುದು ಗರ್ಗರ ಮತವು.

ಆತ್ಮರತ್ಯವಿರೋಧೇನೇತಿ ಶಾಣ್ಡಿಲ್ಯಃ ॥ ೧೮ ॥

೧೮. ಆತ್ಮರತಿಗೆ ಅಡ್ಡಿಯಾಗದಂತೆ ಪೂಜಾದಿಗಳಲ್ಲಿಯೂ ಕಥಾದಿಗಳಲ್ಲಿಯೂ ತೋರಿಸುವ ಅನುರಾಗವು (ಭಕ್ತಿಯ ಹೆಗ್ಗುರುತು) ಎಂದು ಶಾಂಡಿಲ್ಯರೆನ್ನುತ್ತಾರೆ.

೪೪. ಪೂಜೆಯೇ ಮುಂತಾದವುಗಳಲ್ಲಿ ಅನುರಾಗವಿರಬೇಕಾದದ್ದು ಪೂಜಾದಿ ಗಳಿಗಾಗಿಯೇ ಅಲ್ಲ, ಪೂಜಾದಿಗಳಿಗೆ ವಿಷಯನಾಗಿರುವ ಭಗವಂತನಿಗಾಗಿ. ಆದ್ದರಿಂದ ಭಗವಂತನಲ್ಲಿ ಪ್ರೇಮವುಂಟಾಗಿ ಆತನಲ್ಲಿಯೇ ರತಿಯುಂಟಾಗುವದಕ್ಕೆ ಅನುಕೂಲವಾಗುವಮಟ್ಟಿಗೆ ಪೂಜಾದಿಗಳನ್ನು ಮಾಡುತ್ತಿರಬೇಕು. ಪರಭಕ್ತರು ಪೂಜಾದಿಗಳಲ್ಲಿ ಆಸಕ್ತರಾಗಿರುವಂತೆ ತೋರಿದರೂ ಅವರಿಗೆ ಎಲ್ಲೆಲ್ಲಿಯೂ ಭಗವಂತ ನೇ ಕಾಣಿಸುತ್ತಿರುವನು. ಆದ್ದರಿಂದ ಆತ್ಮರತಿಗೆ ವಿಘ್ನವಾದೀತೆಂದು ಕಂಡರೆ ಅವರು ಈ ಪೂಜಾದಿಗಳನ್ನೂ ಬಿಡುವದಕ್ಕೆ ಸಿದ್ಧರಾಗಿರುವರು.

ಆತ್ಮರತಿಯೆಂದರೆ ಎಲ್ಲರಿಗೂ ಆತ್ಮನಾಗಿರುವ ಭಗವಂತನನ್ನು ಕಂಡುಕೊಂಡು ಆತನಲ್ಲಿಯೇ ಮನಸ್ಸು ಆಡುತ್ತಿರುವದು ಭಕ್ತರಿಗೆ ಮುಖ್ಯಲಕ್ಷಣವೆನ್ನಬೇಕೇ

ಹೊರತು ಪೂಜಾದಿಗಳಲ್ಲಿ ಅನುರಾಗವಿರುವದೆಂಬ ಒಂದೇ ಕಾರಣದಿಂದ ಅವರು ಭಕ್ತರೆಂದು ಭಾವಿಸುವದು ಎಂದಿಗೂ ಸರಿಯಾಗುವದಿಲ್ಲ. ರತಿಯೆಂದರೆ ಒಂದೇ ವಿಷಯದಲ್ಲಿ ಮನಸ್ಸನ್ನು ಹೊರಳಾಡಿಸುತ್ತಾ ಆನಂದದಿಂದಿರುವದು. ಎರಡನೆಯ ವಸ್ತುವಿನೊಡನೆ ಆಡುತ್ತಿರುವದು ಕ್ರೀಡೆ. ಇದನ್ನು ಆಟವೆಂಬ ಮಾತಿನಿಂದಲೇ ದೇಶಭಾಷೆಯಲ್ಲಿ ಕರೆಯುತ್ತಾರಾದರೂ ಆತ್ಮನಿಗಿಂತ ಮತ್ತೆಯಾವ ವಸ್ತುವೂ ಭಕ್ತನಾದವನಿಗೆ ಪ್ರೇಮಪಾತ್ರವಾಗಿರುವದಿಲ್ಲ. ಆದ್ದರಿಂದ ಪೂಜೆಯಾಗಲಿ, ಪೂಜಾಸಾಮಗ್ರಿಯಾಗಲಿ ಆತ್ಮನಿಗಿಂತ ಹೆಚ್ಚೆಂದು ಬಗೆಯುವದು ಎಂದಿಗೂ ಭಕ್ತಿಗೆ ಸಾಧಕವಲ್ಲ.

ಪೂಜಾದಿಗಳು ಕರ್ಮೇಂದ್ರಿಯಗಳಿಗೆ ಸಂಬಂಧಪಟ್ಟವುಗಳು, ಕಥೆಗಳು ಜ್ಞಾನೇಂದ್ರಿಯಗಳಿಗೆ ಹೆಚ್ಚು ಸಂಬಂಧಪಟ್ಟವೆಯಾದ್ದರಿಂದ ಪೂಜಾದಿಗಳಿಗಿಂತ ಇವು ಭಕ್ತಿಗೆ ಹೆಚ್ಚು ಅಂತರಂಗಸಾಧನವಾಗಿರುತ್ತವೆ. ಆತ್ಮರತಿಯೊ, ಎಂದರೆ ಮನಸ್ಸಿಗೆ ಸಂಬಂಧಪಟ್ಟಿರುತ್ತದೆಯಾದ್ದರಿಂದ ಕಥಾದಿಗಳಿಗಿಂತಲೂ ಹೆಚ್ಚು ಅಂತ ರಂಗವಾಗಿರುತ್ತದೆ.

> ಗಙ್ಗಾಜಲೇ ಕಿಂ ನ ವಸನ್ತಿ ಮತ್ಸ್ಯಾಃ
> ದೇವಾಲಯೇ ಪಕ್ಷಿಗಣಾ ವಸನ್ತಿ ।
> ಭಾವೋಜ್ಝಿತಾಸ್ತೇ ನ ಫಲಂ ಲಭನ್ತೇ
> ತೀರ್ಥಾಚ್ಚ ದೇವಾಯತನಾಚ್ಚ ಮುಖ್ಯಮ್ ॥

ಎಂದಿರುವಂತೆ ಗಂಗೆಯಲ್ಲಿ ಮೀನುಗಳು ಓಡಾಡುತ್ತಿದ್ದರೂ ಅವಕ್ಕೆ ತೀರ್ಥಸ್ನಾನದ ಫಲವೇನೂ ದೊರೆಯುವದಿಲ್ಲ; ಹಕ್ಕಿಗಳು ದೇವಾಲಯದಲ್ಲಿ ವಾಸಮಾಡುತ್ತಿದ್ದರೂ ದೇವಾಯತನವಾಸದ ಪುಣ್ಯವೇನೂ ಅವಕ್ಕೆ ಬರುವದಿಲ್ಲ; ಹೀಗೆ ಭಕ್ತಿಭಾವವೇನೂ ಮನಸ್ಸಿನಲ್ಲಿಲ್ಲದಿರುವಾಗ ಬಾಹ್ಯಸಾಧನವು ಫಲಕಾರಿಯಾಗಲಾರದು.

ಇಲ್ಲಿ ಒಂದು ವಿಶೇಷ : ಹೊರಗಿನ ಸಾಧನಗಳಾದ ಪೂಜೆಯೇ ಮುಂತಾದವುಗಳು ಎಲ್ಲರಿಗೂ ಕಾಣುತ್ತವೆ; ಕಥಾದಿಗಳ ಶ್ರವಣಪಠನವೇ ಮುಂತಾದವುಗಳು ಮತ್ತೊಬ್ಬರಿಗೆ ತಿಳಿಯಬರುತ್ತವೆ. ಆದ್ದರಿಂದ ಅವುಗಳನ್ನೇ ಇಲ್ಲಿ ಲಕ್ಷಣವೆಂದು ತಿಳಿಯುವದು ಯುಕ್ತವಾಗಿದೆ. ಆತ್ಮರತಿ ಎಂಬುದು ಭಕ್ತರ ಅನುಭವದಿಂದ ಅವರಿಗೆ ಮಾತ್ರ ಗೋಚರವಾಗತಕ್ಕದ್ದು. ಹೀಗಿದ್ದರೂ ಆತ್ಮರತಿಯನ್ನು ಇಲ್ಲಿ ಸೇರಿಸಿರುವದಕ್ಕೆ ಕಾರಣವೇನೆಂದರೆ ಯಾವ ಭಕ್ತರು ಯಾವ ಸಾಧನದಲ್ಲಿಯೇ ವ್ಯಾಪೃತರಾಗಿರುವಂತೆ ಕಾಣಲಿ, ಯಾರ ಸಂನಿಧಿಯಲ್ಲಿ ಸಾಧಕರ ಮನಸ್ಸು ವಿಷಯಭೋಗಗಳ ರತಿಯನ್ನು ತೊರೆದು ಒಳಮುಖವಾಗುವದೋ, ಯಾರ ದರ್ಶನಾದಿಗಳಿಂದ ಸಾಧಕರಿಗೆ ಭಕ್ತಿಯಲ್ಲಿ ರುಚಿಯು ಹೆಚ್ಚುವದೋ ಅವರನ್ನೇ ಅನುಕರಿಸುವದಕ್ಕೆ ಯತ್ನಿಸಬೇಕು ; ಅವರ ಉಪದೇಶಕ್ಕೇ ಮುಖ್ಯವಾಗಿ ಕಿವಿಗೊಡ

ಬೇಕು- ಎಂಬುದನ್ನು ತಿಳಿಸುವದೇ ಇಲ್ಲಿ ಗುರಿಯಾಗಿರುತ್ತದೆ. ಪರಭಕ್ತರು ಹೇಗಿದ್ದರೂ ಆತ್ಮರತರೇ ಆಗಿರುತ್ತಾರೆ.

೪೫. ಪುರಾಣಾದಿಗಳಲ್ಲಿ ಕರ್ಮಪ್ರಧಾನವಾದ ಸಾಧನಗಳನ್ನು ಅಲ್ಲಲ್ಲಿ ಹೀಯಾಳಿಸಿರುವದುಂಟು. ಉದಾಹರಣೆಗೆ ಸೂತಸಂಹಿತೆಯಲ್ಲಿ :

**ಅಶ್ವಮೇಧಾದಯೋ ಯಜ್ಞಾ ಅಶೇಷಾ ವೇದದರ್ಶಿತಾಃ ।**
**ಮುನೀನ್ದ್ರ ಧ್ಯಾನಯಜ್ಞಸ್ಯ ಕಲಾಂ ನಾರ್ಹನ್ತಿ ಷೋಡಶೀಮ್ ॥**
ಸೂ. ಸಂ. ಯಜ್ಞ. ೯-೪೯

ವೇದವಿಹಿತವಾಗಿರುವ ಯಜ್ಞಗಳೆಲ್ಲವೂ ಸೇರಿದರೂ, ಎಲೈ ಋಷಿಗಳಿರಾ, ಧ್ಯಾನ ಯಜ್ಞದ ಹದಿನಾರನೆಯ ಪಾಲನ್ನೂ ಹೋಲಲಾರವು- ಎಂದಿದೆ. ಭಕ್ತಶ್ರೇಷ್ಠನಾದ **ಕುಲಶೇಖರನ** ಮತವಿದು :

**ಆಮ್ನಾಯಾಭ್ಯಸನಾನ್ಯರಣ್ಯರುದಿತಂ ವೇದವ್ರತಾನ್ಯನ್ವಹಂ**
**ಮೇದಶ್ಛೇದಫಲಾನಿ ಪೂರ್ತವಿಧಯಃ ಸರ್ವಂ ಹುತಂ ಭಸ್ಮನಿ ।**
**ತೀರ್ಥಾನಾಮವಗಾಹನಾನಿ ಚ ಗಜಸ್ನಾನಂ ವಿನಾ ಯತ್ಪದ-**
**ದ್ವನ್ದ್ವಾಮ್ಭೋರುಹಸಂಸ್ಮೃತಿಂ ವಿಜಯತೇ ದೇವಃ ಸ ನಾರಾಯಣಃ ॥**
ಮು. ಮಾ. ೨೫

ಯಾವಾತನ ಪಾದಕಮಲಗಳೆರಡರ ಸಂಸ್ಮರಣೆಯಿಲ್ಲದೆ ಇರುವ ವೇದಾಧ್ಯಯನಾಭ್ಯಾಸಗಳು ಅರಣ್ಯರೋದನವಾಗುವವೋ ; ವೇದೋಕ್ತನಿಯಮಗಳು ಕೇವಲ ಶರೀರದ ಕೊಬ್ಬನ್ನಿಳಿಸುವ ಫಲವುಳ್ಳವಾಗುವವೋ, ವಾಪೀಕೂಪತಟಾಕಾದಿಗಳ ನಿರ್ಮಾಣವು ಭಸ್ಮದಲ್ಲಿ ಮಾಡಿದ ಹೋಮಮಾತ್ರವಾಗುವವೋ ತೀರ್ಥಗಳಲ್ಲಿ ಮಾಡಿದ ಸ್ನಾನಗಳು ಆನೆಯ ಸ್ನಾನದಂತೆ ನಿಷ್ಫಲವಾಗುವವೋ, ಅಂಥ ದೇವನಾದ ನಾರಾಯಣನೊಬ್ಬನೇ ಎಲ್ಲಕ್ಕಿಂತಲೂ ಹೆಚ್ಚಿನವನಾಗಿರುತ್ತಾನೆ.

ಇಲ್ಲಿ ವೇದಾಧ್ಯಯನ, ಯಜ್ಞಾದಿಕರ್ಮಗಳ ಆಚರಣೆ, ಸ್ಮಾರ್ತಕರ್ಮಗಳಾದ ವಾಪೀಕೂಪಾದಿನಿರ್ಮಾಣಗಳು- ಇವೆಲ್ಲವನ್ನೂ ನಿಂದಿಸಿದಂತೆ ತೋರುತ್ತಿದ್ದರೂ ಇವೆಲ್ಲವೂ ಭಗವಂತನ ಸ್ಮರಣದ ಅಂಗವಾಗಿರಬೇಕೆಂಬುದರಲ್ಲಿಯೇ ತಾತ್ಪರ್ಯವಿರುತ್ತದೆ. ಇದು ಶಾಂಡಿಲ್ಯರ ಮತವು. ಆದ್ದರಿಂದ ಈ ಸಾಧನಗಳು ಅಂತರಂಗಬಹಿರಂಗಭೇದದಿಂದ ಬೇರೆಬೇರೆಯೇ ಹೊರತು ಭಕ್ತಿಯ ಲಕ್ಷಣಗಳಿವು ಎಂಬ ಬಗೆಗೆ ಯಾವ ಮತಭೇದವೂ ಇಲ್ಲವೆಂದರಿಯಬೇಕು.

## ೮. ನಾರದರ ಸಿದ್ಧಾಂತ

ನಾರದಸ್ತು ತದರ್ಪಿತಾಖಿಲಾಚಾರತಾ ತದ್ವಿಸ್ಮರಣೇ ಪರಮವ್ಯಾಕುಲತೇತಿ ॥ ೧೯ ॥

೧೯. ನಾರದನಾದರೋ ಆತನಿಗೆ ಸಕಲಾಚಾರಗಳನ್ನೂ ಅರ್ಪಿಸುವದು, ಆತನನ್ನು ಮರೆತರೆ ಪರಮವ್ಯಾಕುಲನಾಗಿರುವದು (ಭಕ್ತಿಯ ಗುರುತು)- ಎಂದು (ಹೇಳುತ್ತಾನೆ).

### ತದರ್ಪಿತಾಖಿಲಾಚಾರತಾ

೪೬. ಶಾಂಡಿಲ್ಯರ ಮತದಲ್ಲಿ ಭಕ್ತನ ಗುರುತೆಂದರೆ : ಆತ್ಮರತಿಯೇ- ಎಂದದ್ದು ಸರಿಯೇ ಆಗಿರುತ್ತದೆ. ಏಕೆಂದರೆ ಭಕ್ತಿಯೆಂದರೆ ಭಗವಂತನಲ್ಲಿರುವ ಪರಮಪ್ರೇಮವು ; ಆದ್ದರಿಂದ ಅದು ಮನಸ್ಸಿನ ಧರ್ಮವು- ಎಂಬುದೇ ಯುಕ್ತ. ಆದರೆ ಪರಭಕ್ತನ ಮನಸ್ಸು ಯಾವಾಗಲೂ ಒಳಸರಿದು ಮುದುರಿಕೊಂಡಿರುತ್ತದೆ- ಎಂದು ಅರಿಯುವದು ಸರಿಯಲ್ಲ. ಎಲ್ಲೆಲ್ಲಿ ಮನಸ್ಸು ಹೋಗುವದೋ ಅಲ್ಲೆಲ್ಲ ಪರಮಾತ್ಮನನ್ನೇ ಕಾಣುವಷ್ಟು ವಿಶಾಲವಾಗಿರುತ್ತದೆ, ಭಕ್ತನ ಮನಸ್ಸು. ಆದ್ದರಿಂದಲೇ ಭಕ್ತಿಗೆ ಅನುಗುಣವಾದ ಲೋಕವೇದವ್ಯಾಪಾರಗಳನ್ನು ಮಾಡುತ್ತಲೇ ಇರುವನೆಂದು ಹಿಂದೆ (೧೧ನೆಯ ಸೂತ್ರದಲ್ಲಿ) ಹೇಳಿರುತ್ತದೆ. ಆದ್ದರಿಂದ ಅವನು ಪೂಜಾದಿಗಳು, ಕಥಾದಿಗಳು, ಆತ್ಮಧ್ಯಾನ-ಏನನ್ನಾದರೂ ಮಾಡಬಹುದಾಗಿರುತ್ತದೆ. ಅವನಿಗೆ ಮುಖ್ಯವಾದ ಗುರುತೆಂದರೆ ಇದೇ. ಅವನು ಯಾವ ವ್ಯಾಪಾರವನ್ನೇ ಮಾಡಲಿ, ತನ್ನ ಆಚಾರಗಳನ್ನೆಲ್ಲ ಭಗವಂತನಿಗೆ ಸಮರ್ಪಿಸುತ್ತಿರುವನು. ಭಗವಂತನಿಗಲ್ಲದ ವ್ಯಾಪಾರವೇ ಅವನ ಜೀವನದಲ್ಲಿರುವದಿಲ್ಲ. ಆದರೆ ಪರಮಾತ್ಮನನ್ನು ಯಾವದಾದರೂ ನಿಮಿತ್ತದಿಂದ ಮರೆಯುವಂತಾದರೆ ಮಾತ್ರ ಅವನ ಮನಸ್ಸು ವ್ಯಾಕುಲವಾಗುವದು. ಭಗವಂತನೇ ಅವನ ಜೀವನ- ಎಂಬುದು **ನಾರದರ** ಮತವು.

**ಕಾಯೇನ ವಾಚಾ ಮನಸೇನ್ದ್ರಿಯೈರ್ವಾ**
**ಬುದ್ಧ್ಯಾತ್ಮನಾ ವಾನುಸೃತಸ್ವಭಾವಾತ್ ।**
**ಕರೋತಿ ಯದ್ಯತ್ ಸಕಲಂ ಪರಸ್ಮೈ**
**ನಾರಾಯಣಾಯೇತಿ ಸಮರ್ಪಯೇತ್ತತ್ ॥**

ಭಾಗ. ೧೧-೨-೩೬

ಎಂದು **ಕವಿ** ಎಂಬ ಋಷಿಯು ನಿಮಿರಾಜನಿಗೆ ಹೇಳಿರುವಂತೆ ಮನೋವಾಕ್ಕಾಯಗಳಿಂದ ಮಾಡುವದೆಲ್ಲವನ್ನೂ ನಾರಾಯಣಭಗವಂತನಿಗೆ ಅರ್ಪಿಸುತ್ತಿರುವದೆಂಬುದೇ ಭಾಗವತಧರ್ಮದ ಸಾರವು. ಆದ್ದರಿಂದ ಎಲ್ಲಾ ಆಚಾರ್ಯರ ಮತವೂ ಇದರಲ್ಲಿಯೇ ಸೇರಿರುತ್ತದೆ.

೪೭. ಇಲ್ಲಿ ಒಂದು **ಆಕ್ಷೇಪ :** ಯಾವ ಕರ್ಮವನ್ನು ಮಾಡಿದರೂ ಭಕ್ತಿಗೆ ಅಡ್ಡಬರದಂತಿರಬೇಕೆಂದು ಶಾಂಡಿಲ್ಯರು ಹೇಳಿದಾರಷ್ಟೆ? ಕರ್ಮಗಳು ಭಕ್ತಿಗೆ ಸಾಧನವೆಂದೇ ಮಾಡುತ್ತಿರುವಲ್ಲಿ ಅವು ಭಕ್ತಿಗೆ ಅಡ್ಡಿಯಾಗುವವೆಂಬುದು ಹೇಗೆ ಸರಿ ?

ಇದನ್ನು ಪರಿಹರಿಸಿಕೊಳ್ಳುವದಕ್ಕೆ ತಿಳಿದಿರಬೇಕಾದದ್ದೇನೆಂದರೆ : ಕರ್ಮಗಳನ್ನು ಮಾಡುವದು ಎರಡು ದೃಷ್ಟಿಯಿಂದ ಆಗಬಹುದಾಗಿದೆ. ಕರ್ಮಕ್ಕಾಗಿ ಕರ್ಮವನ್ನು ಮಾಡುವದು ಒಂದು ದೃಷ್ಟಿಯಿಂದ ; ಭಕ್ತಿಗಾಗಿ ಕರ್ಮವನ್ನು ಮಾಡುವದು ಮತ್ತೊಂದು ದೃಷ್ಟಿಯಿಂದ. ಭಕ್ತಿಗಾಗಿ ಕರ್ಮವನ್ನು ಮಾಡುವ ದೃಷ್ಟಿಯಲ್ಲಿ ಕರ್ಮದಿಂದ ಮತ್ತೆ ಯಾವ ಫಲವನ್ನೂ ಬಯಸದೆ ಪರಮೇಶ್ವರನು ಅದರಿಂದ ಪ್ರೀತನಾಗಲೆಂಬುದೊಂದೇ ಗುರಿಯಾಗಿರುತ್ತದೆ. ಅದರಲ್ಲಿ 'ಕರ್ಮವನ್ನು ನಾನು ಮಾಡುತ್ತಿದೇನೆ' ಎಂಬ ಸಂಗವಾಗಲಿ, ಈ 'ಕರ್ಮದಿಂದ ಇಂಥ ಫಲವು ಆಗಬೇಕಾಗಿದೆ' ಎಂಬ ಅಭಿಸಂಧಿಯಾಗಲಿ ಇರುವದಿಲ್ಲ. ಇವುಗಳೊಳಗೆ ಭಗವದ್ಭಕ್ತನು ಮಾಡುವ ಕರ್ಮವು ಸಂಗತ್ಯಾಗ, ಫಲತ್ಯಾಗ– ಇವುಗಳ ಜೊತೆಗೆ ಭಗವಂತನಅನವರತಚಿಂತನೆಯಿಂದಲೇ, ಕೂಡಿರುತ್ತದೆ. ಆದ್ದರಿಂದ ಅವನ ಕರ್ಮವೂ ಭಕ್ತಿಯೊಳಗೇ ಅಡಕವಾಗಿರುತ್ತದೆ; ಕರ್ಮಕ್ಕಾಗಿ ಕರ್ಮವನ್ನು ಮಾಡುವ ಉಳಿದವರ ಕರ್ಮಗಳು ಭಕ್ತಿಗೆ ಅಡ್ಡಿಯಾಗಿರುತ್ತವೆ. ಆದ್ದರಿಂದಲೇ ಶ್ರೀಕೃಷ್ಣಭಗವಂತನು ಅರ್ಜುನನಿಗೆ ಹೇಳಿಕೊಡಬೇಕಾಗಿದ್ದದ್ದನ್ನೆಲ್ಲ ಹೇಳಿದಮೇಲೂ :

ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್ ॥
ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥

ಗೀ. ೧೮–೬೪, ೬೫

"ಅರ್ಜುನ, ನಿನಗೆ ನಾನು ಎಷ್ಟೋಸಲ ಹೇಳಿದ್ದರೂ ಹೇಳಿದ್ದರೊಳಗೆಲ್ಲ ಪರಮ ಗುಹ್ಯವಾದ ಉಪದೇಶವನ್ನು ಮತ್ತೂ ಒಂದುಸಲ ಹೇಳಿಬಿಡುತ್ತೇನೆ, ಕೇಳು. ಇದೇ ನನ್ನ ಕಟ್ಟಕಡೆಯ ಮಾತು. ನನ್ನಲ್ಲಿಯೇ ಮನಸ್ಸಿಡು, ನನ್ನಲ್ಲಿಯೇ ಭಕ್ತಿಯನ್ನಿಟ್ಟುಕೊ, ನನಗಾಗಿಯೇ ಪೂಜಾದಿಗಳನ್ನು ಮಾಡುತ್ತಿರು, ನನಗೇ ನಮಸ್ಕಾರವನ್ನು ಮಾಡುತ್ತಿರು. ನನಗೆ ಅತ್ಯಂತವಾಗಿ ಬೇಕಾದವನು ನೀನೆಂದು ಇದನ್ನು ಹೇಳಿರುತ್ತೇನೆ. ಹೀಗೆ ಮಾಡುತ್ತಿದ್ದರೆ ನನ್ನನ್ನೇ ಸೇರುವೆ, ಸತ್ಯವಾಗಿ ಆಣೆಮಾಡಿ ಹೇಳಿರುತ್ತೇನೆ" ಎಂದು ಸಾರಿಸಾರಿ ಹೇಳಿರುತ್ತಾನೆ.

ಈ ಕಾರಣದಿಂದಲೇ ನಾರದರು ತನ್ನ ಆಚಾರವೆಲ್ಲವನ್ನೂ ಭಗವಂತನಿಗೆ ಅರ್ಪಿಸಿರುವದೇ ಭಕ್ತನ ಹೆಗ್ಗುರುತೆಂದು ನಿರ್ಧರಿಸಿರುತ್ತಾರೆ. ಭಕ್ತಿಗೋಸ್ಕರವಾಗಿ ಸಕಲ ಕರ್ಮಗಳನ್ನೂ ಮಾಡುವದರಿಂದ ಮನಸ್ಸಿನಲ್ಲಿ ಯಾವ ಏರುಪೇರೂ ಆಗುವದಿಲ್ಲವೆಂಬುದಕ್ಕೆ ಒಂದು ದೃಷ್ಟಾಂತವನ್ನು ಕೊಡಬಹುದು. ಒಬ್ಬ ತಂದೆಯು ಮಗನಿಗೆ ಒಂದು ಪದಾರ್ಥವನ್ನು ತರುವದಕ್ಕೆಂದು ಹೇಳಿ ಹಣವನ್ನು ಕೊಟ್ಟು ಪೇಟೆಗೆ

ಕಳುಹಿಸುವಾಗ ಮಗನು ಓಡುತ್ತೋಡುತ್ತಾ ಪೇಟೆಗೆ ಹೋಗಿ ಉತ್ತಮವಲ್ಲದ ಪದಾರ್ಥವನ್ನು ತಂದುಕೊಟ್ಟರೆ, ಅಥವಾ ಪದಾರ್ಥವು ಸಿಕ್ಕಲಿಲ್ಲವೆಂದು ಬಂದು ಹೇಳಿದರೆ, ಮನೆಯಲ್ಲಿ ಸುಮ್ಮನೆ ಕುಳಿತಿದ್ದ ತಂದೆಗೆ ದುಃಖವಾಗುವದು ; ಓಡಿ ಆಯಾಸದಿಂದ ಮನೆಗೆ ಬಂದ ಹುಡುಗನಿಗೆ ಕೆಲಸವು ಆಗಲಿ, ಆಗದೆ ಇರಲಿ- ತನ್ನ ಕರ್ತವ್ಯವನ್ನು ಮಾಡಿಬಿಟ್ಟೆದೇನಲ್ಲ !- ಎಂದು ತೃಪ್ತಿಯೇ ಆಗಿರುತ್ತದೆ. ಅಲ್ಲವೆ ? ಇದರಂತೆಯೇ ಫಲದಲ್ಲಿ ಸಕ್ತರಾಗಿ ಕರ್ಮವನ್ನು ಮಾಡುವವರಿಗೆ ಫಲವು ದೊರಕದೆ ಇದ್ದರೆ, ಅಥವಾ ತಾವು ನಿರೀಕ್ಷಿಸಿದಮಟ್ಟಿಗೆ ಫಲವಾಗದೆ ಇದ್ದರೆ, ದುಃಖವಾಗುವದು ; ಭಕ್ತಿಗಾಗಿ ಕರ್ಮವನ್ನು ಮಾಡಿದವರಿಗೊ, ಎಂದರೆ ಫಲವು ಸಿದ್ಧಿಸಲಿ ಸಿದ್ಧಿಸದೆ ಇರಲಿ, ಮನಸ್ಸಿನಲ್ಲಿ ಯಾವ ಏರುಪೇರೂ ಆಗುವದಿಲ್ಲ ; ಭಗವಂತನ ಸೇವೆಯನ್ನು ಮಾಡಿದೆನಲ್ಲ !- ಎಂದು ಆನಂದವೇ ಆಗುವದು. ಹೀಗೆಯೇ ದಾನಧರ್ಮ ಪರೋಪಕಾರಾದಿಗಳನ್ನು ಮಾಡುವವರು ತಮ್ಮ ಸಂತೋಷಕ್ಕಾಗಿಯೋ ಕೀರ್ತ್ಯಾದಿಗಳಿಗಾಗಿಯೋ ಮಾಡಿದ್ದರೆ ಫಲದ ಸಿದ್ಧಿಯನ್ನವಲಂಬಿಸಿಯೇ ಅವರ ಮನಸ್ಸು ಉದ್ಯುಕ್ತವಾಗಿರುತ್ತದೆ ; ಆದ್ದರಿಂದ ಅವರಿಗೆ ಕಾರ್ಯದ ಪರಿಣಾಮದಿಂದ ಸುಖವೋ ದುಃಖವೋ ಆಗಬಹುದು. ಆದರೆ ಅದೇ ಕೆಲಸಗಳನ್ನು ಭಗವತ್ಪ್ರೀತಿಗೆಂದು ಮಾಡುವಾತನಿಗೆ ಮಾಡಿದ ಕರ್ಮವೆಲ್ಲ ಭಕ್ತಿಯಾಗಿಯೇ ಪರಿಣಮಿಸುವದು. ಆದರಿಂದ ಅವನು ಎಲ್ಲಾ ಅವಸ್ಥೆಗಳಲ್ಲಿಯೂ ತೃಪ್ತನೇ ಆಗಿರುವನು.

## ತದ್ವಿಸ್ಮರಣೇ ಪರಮವ್ಯಾಕುಲತಾ

೪೮. ಮಾಡಿದ ಕೆಲಸವನ್ನೆಲ್ಲ ಭಗವಂತನಿಗೆ ಅರ್ಪಿಸಿದರೆ, ಅದು ಭಕ್ತಿಯಾಗಿ ಆನಂದದಾಯಕವಾಗುವದೆಂಬುದರಲ್ಲಿ ಒಂದು ಗುಟ್ಟಿದೆ. ಅದೇನೆಂದರೆ ನಾವು ಯಾವ ಕೆಲಸವನ್ನು ಮಾಡಲಿ, ಅದು ನಮಗೂ ಅರಿವಿಲ್ಲದೆಯೇ, ಭಗವಂತನಿಗೇ ಅರ್ಪಿತವಾಗುತ್ತಿರುವದು. ಹೇಗೆಂದರೆ ನಾವು ಕಾರ್ಯದಲ್ಲಿ ಉದ್ಯುಕ್ತರಾಗಿರುವಾಗ, ಕಾರ್ಯವನ್ನು ಮುಗಿಸಿ ಸುಮ್ಮನಿರುವಾಗ, ಮತ್ತೆ ಕಾರ್ಯದಲ್ಲಿ ಉದ್ಯುಕ್ತರಾಗುವಾಗ ನಮ್ಮ ಮನಸ್ಸಿನ ಸ್ಥಿತಿ ಹೇಗಿರುವದೆಂಬುದನ್ನು ಪರೀಕ್ಷಿಸಿದರೆ ಒಂದು ವಿಶೇಷವು ವ್ಯಕ್ತವಾಗುವದು. ಅದೇನೆಂದರೆ : ಕೆಲಸದಲ್ಲಿ ತೊಡಗಿರುವಾಗ ಈ ಕೆಲಸವನ್ನು ನಾನು ಮಾಡುತ್ತಿದೇನೆ, ಇಂಥದ್ದೊಂದು ಫಲವಾಗಬೇಕಾಗಿದೆ- ಎಂಬ ಬುದ್ಧಿಯು ಇದ್ದುಕೊಂಡಿರುತ್ತದೆ ; ಕೆಲಸದ ಪರಿಣಾಮವನ್ನು ನಾವು ಅನುಭವಿಸಿ ಮತ್ತೆ ಅದೇ ಕೆಲಸದಲ್ಲಿ ಅಥವಾ ಮತ್ತೊಂದು ಕೆಲಸದಲ್ಲಿ ತೊಡಗುವಾಗ ಈ ಕಾರ್ಯವು ನಿರ್ವಿಘ್ನವಾಗಿ ನೆರವೇರಬೇಕು, ನನಗೆ ಇದರಿಂದ ಸುಖವೇ ದೊರಕಬೇಕು- ಎಂಬ ಹಾರೈಕೆಯಿರುತ್ತದೆ. ಕಾರ್ಯವು ಸಿದ್ಧಿಸಿತೆಂಬ ಹಿಗ್ಗು ಉಂಟಾದಾಗ ಮಾತ್ರ ಫಲದ ಅನುಭವಕಾಲದಲ್ಲಿ ತೃಪ್ತಿಯಾಗುತ್ತದೆ. ಫಲವು

ಕೈಗೂಡದೆ ಇರುವಾಗ ದುಃಖವುಂಟಾಗುವದೆಂಬುದು ನಿಜವಾದರೂ ಹಿಂದೆ ಮಾಡಿದ ಕಾರ್ಯದ ಉತ್ತಮಫಲದ ಸ್ಮರಣೆಯಿಂದಲೇ ಈಗ ಹಾಗೆ ತೃಪ್ತಿಯನ್ನು ಅನುಭವಿಸುವ ಯೋಗವು ತಪ್ಪಿತಲ್ಲ !- ಎಂಬ ಕಳವಳವೇ ದುಃಖಕ್ಕೆ ಕಾರಣವಾಗಿರುತ್ತದೆ. ತೃಪ್ತಿಯಾದಾಗ ಮಾತ್ರ ಸುಖದುಃಖಗಳೆಂಬ ಉಬ್ಬರವಿಳಿತಗಳಿಲ್ಲದೆ ಸ್ವಸ್ಥರಾಗಿರುತ್ತೇವೆ. ಆಗ 'ನಾನು' ಎಂಬ ಅರಿವೇ ಇರುವದಿಲ್ಲವೆಂಬುದು ಮಾತ್ರ, ಲಕ್ಷ್ಯವಿಟ್ಟು ತಮ್ಮನ್ನು ತಾವು ಪರೀಕ್ಷಿಸಿಕೊಂಡವರಿಗೇ ಮನದಟ್ಟಾಗುವದು. ಕೆಲಸಮಾಡುವದು, ತೃಪ್ತಿ, ಮತ್ತೆ ಕೆಲಸದಲ್ಲಿ ತೊಡಗುವದು- ಇವುಗಳಲ್ಲಿಯೇ ನಿರತರಾಗಿರುವವರಿಗೆ 'ತೃಪ್ತಿ' ಎಂಬ ಮಾತು ಬಳಕೆಯಲ್ಲಿರುವದೇ ಹೊರತು ತೃಪ್ತಿಯ ಸ್ವರೂಪದ ವಿಷಯಕ್ಕೆ ನಿಶ್ಚಿತಬುದ್ಧಿಯುಂಟಾಗಿರುವದಿಲ್ಲ. 'ಇಂಥ ಪದಾರ್ಥವನ್ನು ಅನುಭವಿಸಿ ಸುಖಿಯಾದೆನು' ಎಂದು ಜನರು ಆಡಿಕೊಳ್ಳುವದುಂಟು ; ಆದರೆ ಅವರಿಗೆ ತಮ್ಮ ಮಾತಿನ ನಿಜವಾದ ಅರ್ಥವೇ ಹೊಳೆದಿರುವದಿಲ್ಲ. ಏಕೆಂದರೆ ತೃಪ್ತಿಯಾದಾಗ ನಾನೆಂಬ ಬುದ್ಧಿಯಿರುವದಿಲ್ಲ, ನಾನೆಂಬ ಬುದ್ಧಿಯಿರುವಾಗ ತೃಪ್ತಿಯಿರುವದಿಲ್ಲ. ಕೆಲಸವನ್ನು ಬಿಟ್ಟು ಸುಮ್ಮನಿದ್ದಾಗ ಮತ್ತು ಕೆಲಸದ ಪರಿಣಾಮದ ಅನುಭವದಿಂದ ಮನಸ್ಸಿನಲ್ಲಿ ಸುಖದುಃಖಗಳುಂಟಾಗುವಾಗ 'ನಾನು' ಎಂಬ ಬುದ್ಧಿಯಿರುವದರಿಂದ ನಡುವೆಯೂ ಅದು ಇದ್ದುಕೊಂಡೇ ಇರುತ್ತದೆ- ಎಂಬ ತಪ್ಪುತಿಳಿವಳಿಕೆಯು ಜನರಲ್ಲಿ ಉಂಟಾಗಿಬಿಟ್ಟಿರುತ್ತದೆ. ಸುಖದುಃಖರೂಪವಾದ ಪ್ರತ್ಯಯಗಳಿಲ್ಲದೆ ಸುಮ್ಮನೆ ಇರುವಾಗಲೇ ನಮಗೆ ಸ್ವಾಸ್ಥ್ಯವು ಅಥವಾ 'ತೃಪ್ತಿಯು' ಆಗಿರುತ್ತದೆ ಎಂಬುದನ್ನು ಬಹಳ ಸೂಕ್ಷ್ಮಬುದ್ಧಿಯಿಂದ ಅರಿತುಕೊಳ್ಳಬೇಕು. ಯಾವ ಕೆಲಸವನ್ನೂ ಮಾಡದೆ, ಯಾವ ಕಾಮವೂ ಇಲ್ಲದೆ, ಯಾವದೊಂದನ್ನೂ ಕಾಣದೆ ಇರುವ ಗಾಢನಿದ್ರೆಯ ಅನುಭವವನ್ನು ಲಕ್ಷಿಸಿದರೆ ಅಲ್ಲಿ 'ನಾನು, ನನ್ನದು, ಮತ್ತೊಂದು'ಎಂಬ ಅನುಭವವು ಸಂಪೂರ್ಣವಾಗಿ ಅಳಿಸಿಹೋಗಿದ್ದರೂ ಎಂಥ ಆನಂದವುಂಟಾಗಿರುತ್ತದೆ ಎಂಬುದು ತಮ್ಮ ಅನುಭವವನ್ನು ತಾವು ಪರೀಕ್ಷಿಸಿಕೊಂಡವರಿಗೆ ಮಾತ್ರವೇ ಮನದಟ್ಟಾದೀತು. ಇಂಥ ತೃಪ್ತಿಯಲ್ಲಿ ನಾನು ಎಂಬ ಅಭಿಮಾನರೂಪವಾದ ಅಹಂಕಾರವು ತೊಲಗಿ ನಾವು ಪರಮಾತ್ಮನಲ್ಲಿಯೇ ಒಂದಾಗಿಬಿಟ್ಟಿರುವೆವು- ಎಂದು ಶಾಸ್ತ್ರವು ಸಾರುತ್ತಿದೆ. ಅಹಂಕಾರವನ್ನು ಕಳೆದುಕೊಂಡಮೇಲೆ ಆಗುವ ಆನಂದವೇ ಭಗವಂತನಲ್ಲಿರುವ ಪರಮಪ್ರೇಮದ ರೂಪವಾಗಿರುವ ಭಕ್ತಿಯೆಂದು ಹಿಂದೆ (೨ನೆಯ ಸೂತ್ರದಲ್ಲಿ) ಹೇಳಿರುವದನ್ನು ನೆನಪಿನಲ್ಲಿಟ್ಟವರಿಗೆ ಆನಂದವನ್ನು ಯಾವಾಗಲೂ ಅನುಭವಿಸುವ ಭಗವಂತನ ನಿರಂತರಸ್ಮರಣೆಯನ್ನು ಇಟ್ಟುಕೊಳ್ಳಬೇಕೆಂಬ ಸಂಕಲ್ಪವುಂಟಾಗುವದು ಸ್ವಾಭಾವಿಕ. ಆದ್ದರಿಂದಲೇ ಪರಭಕ್ತನಾದವನು ಭಗವಂತನ ವಿಸ್ಮರಣೆಯುಂಟಾದರೆ ಪರಮವ್ಯಾಕುಲತೆಯುಳ್ಳವನಾಗಿರುವನೆಂದು ನಾರದರು ತೀರ್ಮಾನಿಸಿರುತ್ತಾರೆ.

## ೯. ಭಕ್ತ್ಯಾಚಾರ್ಯರಲ್ಲಿ ಮತಭೇದವೆ ?

೪೯. ವ್ಯಾಸರು, ಗರ್ಗರು, ಶಾಂಡಿಲ್ಯರು, ನಾರದರು-ಈ ಆಚಾರ್ಯರುಗಳು ಭಕ್ತರ ಲಕ್ಷಣಗಳನ್ನು ಹೇಳುವಾಗ ಪೂಜಾದಿಗಳಲ್ಲಿರುವ ಅನುರಾಗ, ಕಥಾದಿಗಳಲ್ಲಿರುವ ಅನುರಾಗ, ಆತ್ಮರತ್ಯವಿರೋಧಾನುರಾಗ, ಸಮಸ್ತಾಚಾರಗಳನ್ನೂ ಭಗವದರ್ಪಣೆಮಾಡುತ್ತಾ ನಿರಂತರಭಗವತ್ಸ್ಮರಣೆಯಲ್ಲಿರುವದು- ಎಂದು ವಿಧವಿಧವಾಗಿ ಹೇಳಿರುತ್ತಾರೆ. ಈ ಮಾತುಗಳಲ್ಲಿರುವ ವೈಲಕ್ಷಣ್ಯವು ಆಯಾ ಉಪಾಧಿಗಳಿಂದಾಗಿರುವದೇ ಹೊರತು ನಿಜವಾದ ವೈಲಕ್ಷಣ್ಯವಲ್ಲ- ಎಂದು ನಾವು ವಿವರಿಸಿದ್ದೇವಷ್ಟೆ ?

ಕೆಲವರು 'ಪಾರಾಶರ್ಯ, ಗರ್ಗ- ಇವರಿಬ್ಬರೂ ಕರ್ಮಪ್ರಧಾನವಾದ ಭಕ್ತಿಯನ್ನೂ ಶಾಂಡಿಲ್ಯರು ಅದ್ವೈತಭಕ್ತಿಯನ್ನೂ ನಾರದರು ದ್ವೈತಭಕ್ತಿಯನ್ನೂ ಎತ್ತಿಹಿಡಿದಿರುತ್ತಾರೆ'- ಎಂದು ಈ ಆಚಾರ್ಯರುಗಳ ಮತಗಳನ್ನು ವಿವೇಚಿಸಿರುತ್ತಾರೆ. ಆದರೆ ಈ ಕಲ್ಪನೆಗೆ ಯಾವ ಕಾರಣವೂ ಇಲ್ಲ. ಏಕೆಂದರೆ ನಾವು ಉಪಕ್ರಮದಲ್ಲಿಯೇ ಹೇಳಿರುವಂತೆ ಭಕ್ತರ ಬಾಹ್ಯಲಕ್ಷಣಗಳನ್ನು ಇಲ್ಲಿ ಹೇಳಿರುತ್ತದೆಯೇ ಹೊರತು ಭಕ್ತಿಯ ಸ್ವರೂಪವನ್ನೇನೂ ಹೇಳಿಲ್ಲ. ಭಕ್ತಿಯೆಂಬುದು ಭಗವಂತನಲ್ಲಿರುವ ಪರಮಪ್ರೇಮವು. ಭಕ್ತನಾದವನು ಭಗವಂತನಲ್ಲಿ ಯಾವಾಗ ಯಾವ ದೃಷ್ಟಿಯುಳ್ಳವನಾಗುವನೋ ಆಗ ಆ ದೃಷ್ಟಿಯಿಂದ ಪರಮಾತ್ಮನನ್ನು ಭಜಿಸಿ ಆನಂದವನ್ನು ಹೊಂದುತ್ತಿರುತ್ತಾನೆ.

**ದೇಹಬುದ್ಧ್ಯಾ ತು ದಾಸೋಽಹಂ ಜೀವಬುದ್ಧ್ಯಾ ತ್ವದಂಶಕಃ ।**
**ಆತ್ಮಬುದ್ಧ್ಯಾ ತ್ವಮೇವಾಹಮಿತಿ ಮೇ ನಿಶ್ಚಿತಾ ಮತಿಃ ॥**

ಎಂಬ ಉಕ್ತಿಯಂತೆ ಭಕ್ತನು ಭಗವಂತನಿಗಾಗಿ ಕರ್ಮಗಳನ್ನು ಮಾಡುವಾಗ 'ಭಗವಂತನ ದಾಸನು ನಾನು' ಎನ್ನುತ್ತಿರುವನು; ಅನಂತಜೀವರುಗಳಲ್ಲಿ ನಾನು ಒಬ್ಬನು-ಎಂದು ಅಂತಃಕರಣೋಪಾಧಿಯ ದೃಷ್ಟಿಯಿಂದ ನೋಡಿದಾಗ 'ನಾನು ಪರಮಾತ್ಮನ ಅಂಶವೇ' ಎನ್ನುತ್ತಿರುವನು ; ನಿರುಪಾಧಿಕವಾದ ಆತ್ಮಮಾತ್ರದೃಷ್ಟಿಯಿಂದ ನೋಡಿದಾಗ 'ಎಲ್ಲವೂ ಪರಮಾನಂದರೂಪವಾಗಿರುವ ಪರಬ್ರಹ್ಮವೇ' (**ಸಕಲಮಿದಮಹಂ ಚ ವಾಸುದೇವಃ**) ಎನ್ನುತ್ತಿರುವನು. ನಿಜವಾಗಿ ಒಳಹೊಕ್ಕು ನೋಡಿದರೆ ನಿಸ್ತರಂಗವಾದ ಆನಂದಾಂಬುಧಿಯಾಗಿರುವ ಆ ಭಗವಂತನಲ್ಲಿ ದ್ವೈತಾದ್ವೈತಗಳ ವಿಭಾಗವೆಲ್ಲಿಂದ ಬರಬೇಕು ? 'ನಾನು' ಎಂಬ ಅಭಿಮಾನವೇ ದ್ವೈತಾದ್ವೈತವಿವೇಕಕ್ಕೆ ಕಾರಣ ; ಎಲ್ಲವೂ ಭಗವಂತನೇ ಎಂದು ಭಗವನ್ಮಯರಾಗಿರುವವರು ಈ ವಿಂಗಡದ ವಿಚಾರಕ್ಕೆ ಮನಸ್ಸನ್ನು ಹಾಕುವದೇ ಇಲ್ಲ.

**ದಾಸೋಽಹಮಿತಿ ಸನ್ಮೋಽಹಸ್ತತಃ ಸೋಽಹಮಿತಿ ಭ್ರಮಃ ।**
**ಅಹಂ ಸ ಇತಿ ಸನ್ಮೋಽಹಸ್ತಸ್ಮಾತ್ತ್ರೀಣಿ ಪರಿತ್ಯಜೇತ್ ॥**

ಸೂತಸಂಹಿತೆ ಯಜ್ಞ. ೧೪-೩೭

ಎಂಬಂತೆ 'ದಾಸನು ನಾನು', 'ಆತನು ನಾನೇ', 'ನಾನು ಆತನೇ'- ಎಂಬೀ ಮೂರೂ ಭ್ರಾಂತಿಗಳೇ ; ನಾನು ಎಂಬುದಿಲ್ಲವೇ ಇಲ್ಲ. ಎಲ್ಲವೂ ಭಗವಂತನೇ ಎಂಬುದೇ ತತ್ತ್ವದ ಸಾರವು. **ಅವಧೂತಗೀತೆಯಲ್ಲಿ ಈ ವಿಷಯಕ್ಕೆ** ಹೀಗೆಂದಿದೆ :

**ಅದ್ವೈತಂ ಕೇಚಿದಿಚ್ಛನ್ತಿ ದ್ವೈತಮಿಚ್ಛನ್ತಿ ಚಾಪರೇ ।**
**ಪರಂ ತತ್ತ್ವಂ ನ ಜಾನನ್ತಿ ದ್ವೈತಾದ್ವೈತವಿವರ್ಜಿತಮ್ ॥**

ಅವ. ೩೭

ಕೆಲವರು ಅದ್ವೈತವನ್ನೇ ಒಪ್ಪುತ್ತಾರೆ ; ಮತ್ತೆ ಕೆಲವರಿಗೆ ದ್ವೈತವೇ ಬೇಕು. ಆದರೆ ದ್ವೈತವಾಗಲಿ ಅದ್ವೈತವಾಗಲಿ ಇಲ್ಲದ ಪರತತ್ತ್ವವನ್ನು ಅರಿಯದೆ ಇರುವವರೇ ಬಹಳಮಂದಿ.

## ಅಸ್ತ್ಯೇವಮೇವಮ್ ॥ ೨೦ ॥

೨೦. ಇದು ಹೀಗೆಯೇ ಸರಿ.

೫೦. ಅಖಿಲಾಚಾರಗಳನ್ನೂ ಭಗವಂತನಿಗೇ ಅರ್ಪಿಸಿ ಆತನನ್ನು ಒಂದರೆಘಳಿಗೆಯೂ ಮರೆಯದೆ ಇರುವದೇ ಭಕ್ತಿಯ ಹೆಗ್ಗುರುತೆಂಬುದಕ್ಕೆ ಪುರಾಣೇತಿಹಾಸಗಳಲ್ಲಿ ಉದಾಹರಣೆಗಳು ಬೇಕಾದಷ್ಟಿವೆ. ಈ ಲಕ್ಷಣವು ಯಾರಲ್ಲಿ ಕಾಣುತ್ತಿರುವದೋ ಅವರೇ ಭಕ್ತರು ; ಯಾರಲ್ಲಿರುವದಿಲ್ಲವೋ ಅವರು ಭಕ್ತರಲ್ಲ. ವರ್ಣಾಶ್ರಮವ್ಯವಸ್ಥೆಯಿಂದ ಕರ್ಮವನ್ನು ಮಾಡುತ್ತಿರುವ ಭಕ್ತರೂ ಇರುತ್ತಾರೆ ; ಅದಿಲ್ಲದವರೂ ಇರುತ್ತಾರೆ. ಯಾವ ಕರ್ಮವನ್ನೇ ಮಾಡುತ್ತಿರಲಿ, ಲೌಕಿಕವೈದಿಕ ವ್ಯಾಪಾರಗಳನ್ನೆಲ್ಲ ಭಗವಂತನಿಗೆ ಅರ್ಪಣೆಮಾಡುತ್ತಿರುವದು, ಆತನ ವಿಸ್ಮರಣೆಯ ಮಾತ್ರದಿಂದ ವ್ಯಾಕುಲತೆಯನ್ನು ಪಡೆಯುವದು- ಹೀಗಿರುವವರು ಭಕ್ತರೆಂಬುದು ಸಿದ್ಧಾಂತ.

ಇಲ್ಲಿ 'ಏವಮೇವಮ್' ಎಂದು ದ್ವಿರುಕ್ತಿಯನ್ನು ಸಿದ್ಧಾಂತದಲ್ಲಿ ಹೇಳಿರುವದು ಭಕ್ತರ ಲಕ್ಷಣವನ್ನು ಹೇಳುವ ಪ್ರಕರಣವು ಮುಗಿಯಿತೆಂಬುದನ್ನು ತಿಳಿಸುವದಕ್ಕಾಗಿ. ಈ ಲಕ್ಷಣವು ಮಿಕ್ಕ ಲಕ್ಷಣಗಳಲ್ಲೆಲ್ಲ ಸೇರಿಕೊಂಡಿರುವದರಿಂದ ಇದೇ ಸಿದ್ಧಾಂತವು- ಎಂದು ಹೇಳಿ ಇಲ್ಲಿಂದ ಮುಂದಕ್ಕೆ ಈ ಲಕ್ಷಣವನ್ನು ಅನ್ವಯ ವ್ಯತಿರೇಕಗಳಿಂದ ಲಕ್ಷ್ಯದಲ್ಲಿ ಅನ್ವಯಿಸಿ ತೋರಿಸುವದಕ್ಕೆ ಹೊರಟಿರುತ್ತಾರೆ.

# ಯಥಾ ವ್ರಜಗೋಪಿಕಾನಾಮ್ ॥ ೨೧ ॥

೨೧. ವ್ರಜದ ಗೋಪಿಯರ (ಭಕ್ತಿ)ಯಂತೆ.

೫೧. ಭಗವಂತನಲ್ಲಿ ಅಖಿಲಾಚಾರಗಳನ್ನೂ ಅರ್ಪಿಸುವದೂ, ಅವನನ್ನು ಮರೆತರೆ ಅತ್ಯಂತವಾಗಿ ವ್ಯಾಕುಲತೆಯುಂಟಾಗುವದೂ ಪರಭಕ್ತಿಯು -ಎಂದು ಹೇಳಿದ್ದಕ್ಕೆ ಗೋಪಿಯರ ಭಕ್ತಿಯೇ ದೃಷ್ಟಾಂತವು.

## ತದರ್ಪಿತಾಖಿಲಾಚಾರತಾ

ಗೋಪಿಯರ ಭಕ್ತಿಯಲ್ಲಿ ತಮ್ಮ ಸಕಲಾಚಾರಗಳನ್ನೂ ಭಗವಂತನಿಗೇ ಅರ್ಪಿಸುವದೆಂಬ ಲಕ್ಷಣವಿತ್ತೆಂಬುದನ್ನು ತಿಳಿಯುವದಕ್ಕೆ ಮೊದಲು ಅವರಿಗೆ ಯಾವ ಶಾಸ್ತ್ರದ ಜ್ಞಾನವೂ ಇರಲಿಲ್ಲ; ಅವರಿಗೆ ವಿಹಿತವಾಗಿದ್ದ ವೈದಿಕಕರ್ಮಗಳು ಯಾವವೂ ಇರಲೇಇಲ್ಲ- ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಚಾಣೂರ ಮುಷ್ಟಿಕರೊಡನೆ ಮಲ್ಲಯುದ್ಧವನ್ನು ಮಾಡುತ್ತಿದ್ದ ಶ್ರೀಕೃಷ್ಣಭಗವಂತನನ್ನು ಕಂಡು ಮಥುರೆಯ ಸ್ತ್ರೀಯರು ಒಬ್ಬರೊಡನೊಬ್ಬರು ಆಡಿಕೊಳ್ಳುತ್ತಿದ್ದ ಮಾತಿದು :

ಗೋಪ್ಯಸ್ತಪಃ ಕಿಮಚರನ್ ಯದಮುಷ್ಯ ರೂಪಂ
ಲಾವಣ್ಯಸಾರಮಸಮೋರ್ಧ್ವಮನನ್ಯಸಿದ್ಧಮ್ ।
ದೃಗ್ಭಿಃ ಪಿಬನ್ತ್ಯನುಸವಾಭಿನವಂ ದುರಾಪ-
ಮೇಕಾನ್ತಧಾಮ ಯಶಸಃ ಶ್ರಿಯ ಐಶ್ವರಸ್ಯ ॥

ಯಾ ದೋಹನೇಽವಹನನೇ ಮಥನೋಪಲೇಪ-
ಪ್ರೇಙ್ಖೇಙ್ಖನಾರ್ಭರುದಿತೋಕ್ಷಣಮಾರ್ಜನಾದೌ ।
ಗಾಯನ್ತಿ ಚೈನಮನುರಕ್ತಧಿಯೋಽಶ್ರುಕಣ್ಠ್ಯೋ
ಧನ್ಯಾ ವ್ರಜಸ್ತ್ರಿಯ ಉರುಕ್ರಮಚಿತ್ತಯಾನಾಃ ॥

ಭಾಗ. ೧೦-೪೪-೧೪, ೧೫

'ಸಖಿ, ಗೋಪಿಯರು ಯಾವ ತಪಸ್ಸನ್ನು ಮಾಡಿದ್ದದ್ದರ ಫಲವೊ ! ಲಾವಣ್ಯಸಾರವೂ ತನಗೆ ಸಮಾನವಾದ ಅಥವಾ ಅಧಿಕವಾದದ್ದೇ ಇಲ್ಲದ, ಸ್ವತಃಸಿದ್ಧವಾದ ಒಂದೊಂದು ಹೊತ್ತಿಗೂ ಹೊಸಹೊಸದಾಗುತ್ತಿರುವ, ಮತ್ತೆ ಯಾರಿಗೂ ದೊರಕದ ಈತನ ರೂಪವನ್ನು ಹಾಡಿಹೊಗಳುತ್ತಲೂ ಯಶಸ್ಸಿಗೂ, ಪರಮೈಶ್ವರ್ಯಕ್ಕೂ ವಾಸಸ್ಥಾನವಾಗಿರುವ ಈತನ ರೂಪವನ್ನು ಕಂಗಳಿಂದ ಪಾನಮಾಡುತ್ತಿರುವರಲ್ಲ ! ಹಾಲುಕರೆಯುವಾಗ, ಧಾನ್ಯವನ್ನು ಕುಟ್ಟುವಾಗ, ಮೊಸರುಕಡೆಯುವಾಗ, ನೆಲವನ್ನು ಸಾರಿಸುವಾಗ, ತೊಟ್ಟಿಲುತೂಗುವಾಗ, ಮಕ್ಕಳನ್ನು ಸಮಾಧಾನಗೊಳಿಸುವಾಗ, ನೀರನ್ನು ಚಿಮುಕಿಸುವಾಗ, ಗುಡಿಸುವಾಗ, ಯಾವ ಕೆಲಸವನ್ನೇ ಮಾಡು

ತ್ತಿರಲಿ, ಈತನಲ್ಲಿಯೇ ಇಟ್ಟ ಅನುರಾಗದಿಂದೊಡಗೂಡಿದ ಅಂತಃಕರಣವುಳ್ಳವರಾಗಿ ಆನಂದಬಾಷ್ಪವನ್ನನುಸರಿಸುತ್ತಾ ಗದ್ಗದಕಂಠದಿಂದ ಹಾಡಿಹೊಗಳುತ್ತಿರುವರಲ್ಲ ! ಚಿತ್ರಯಾನದಿಂದ ಆ ತ್ರಿವಿಕ್ರಮನಲ್ಲಿಗೇ ಹೋಗುತ್ತಿರುವ ವ್ರಜಸ್ತ್ರೀಯರು ನಿಜವಾಗಿಯೂ ಧನ್ಯರು !' ಎಂದು ಮಥುರೆಯ ಸ್ತ್ರೀಯರು ಕೊಂಡಾಡುತ್ತಿದ್ದರಂತೆ !

ನ ತತ್ರಾಪಿ ಮಾಹಾತ್ಮ್ಯಜ್ಞಾನವಿಸ್ಮೃತ್ಯಪವಾದಃ ॥ ೨೨ ॥

೨೨. ಅವರಲ್ಲಿಯೂ ಮಾಹಾತ್ಮ್ಯಜ್ಞಾನವಿಸ್ಮೃತಿ –ಎಂಬ ನಿಯಮಾಪವಾದವಿಲ್ಲ.

೫೨. ಭಕ್ತನಾದವನು ಪರಮಾತ್ಮನನ್ನು ಮರೆತು ಮತ್ತೊಂದರಲ್ಲಿ ವ್ಯಾಪೃತನಾಗುವದೆಂಬುದೇ ಇಲ್ಲ. ಆದ್ದರಿಂದ ಆತನನ್ನು ಮರೆತರೆ ಪರಮ ವ್ಯಾಕುಲನಾಗುವದೆಂದರೇನು ?– ಎಂಬ ಶಂಕೆಯು ಯಾರಿಗಾದರೂ ಉಂಟಾಗ ಬಹುದು. ಆದರೆ ಲೋಕದ ವ್ಯವಹಾರದಲ್ಲಿರುವಾಗ ಮತ್ತೆ ಯಾರಾದರೂ ತಮ್ಮನ್ನು ಬೇರೆಯ ವ್ಯವಹಾರಕ್ಕೆಳೆದರೆ, ಅಥವಾ ಮತ್ತೆ ಯಾವದಾದರೂ ಅನಿರೀಕ್ಷಿತವಾದ ವಿಘ್ನಗಳು ಬಂದರೆ ನಡುವೆ ವಿಸ್ಮರಣೆಯು ಬರಬಹುದಷ್ಟೆ ? ಅಷ್ಟಕ್ಕೇ ಭಕ್ತನು ಪರಮವ್ಯಾಕುಲನಾಗಿ ಮತ್ತಷ್ಟು ಬಲವಾಗಿ ಭಗವಂತನ ಸ್ಮರಣೆಯನ್ನು ತಂದುಕೊಳ್ಳುತ್ತಾನೆ ಎಂಬುದೇ ಇಲ್ಲಿ ತಿಳಿಯಬೇಕಾದದ್ದು.

**ಪ್ರಾಯಶಃ ಸಾಧವೋ ಲೋಕೇ ಪರೈರ್ದ್ವಂದ್ವೇಷು ಯೋಜಿತಾಃ ।**
**ನ ವ್ಯಥನ್ತಿ ನ ಹೃಷ್ಯನ್ತಿ ಯತ ಆತ್ಮಾಗುಣಾಶ್ರಯಃ ॥**

ಭಾ. ೧–೧೮–೫೦

ಎಂಬಂತೆ ಬಲುಮಟ್ಟಿಗೆ ಸಾಧುಗಳಾದವರು ತಮ್ಮನ್ನು ಮತ್ತೊಬ್ಬರು ಸುಖದುಃಖಾದಿಗಳಲ್ಲಿ ತಳ್ಳಿದರೂ ವ್ಯಥೆಪಡದೆ ಹರ್ಷವನ್ನು ಹೊಂದದೆ ಸಮಚಿತ್ತರಾಗಿಯೇ ಇರುತ್ತಾರೆ. ಪ್ರಕೃತದಲ್ಲಿ ಗೋಪಿಯರು ಪ್ರಾಕೃತಜನರಲ್ಲಿ ಜನಿಸಿದ ಸ್ತ್ರೀಯರಾದ್ದರಿಂದ ಅವರಿಗೆ ಭಗವತ್ಸ್ವರೂಪದ ಜ್ಞಾನವೆಲ್ಲಿಂದಬರಬೇಕು ? ಅವರಿಗೆ ಶ್ರೀಕೃಷ್ಣನು ರೂಪವಂತನಾದ ಮನುಷ್ಯನೆಂಬ ಕಾಮವುಂಟಾದದ್ದರಿಂದಲೇ ಹಾಗೆಲ್ಲ ಅವನಲ್ಲಿ ಅನುರಕ್ತರಾಗಿದ್ದರು– ಎಂದು ಕೆಲವರು ಭಾವಿಸುತ್ತಾರೆ. ಸಾಮಾನ್ಯ ಲೌಕಿಕರಿಗೆ ಈ ಭಾವನೆಯುಂಟಾಗುವದರಲ್ಲಿ ಆಶ್ಚರ್ಯವೇನೂ ಇಲ್ಲ. ಭಾಗವತದಲ್ಲಿಯೇ ಅದಕ್ಕೆಡೆಗೊಡುವಂಥ ವಚನಗಳೂ ಕೆಲವುಕಡೆ ಬಂದಿರುತ್ತವೆ. ಉದಾಹರಣೆಗೆ :

ಭಗವಂತನ ಸಂದೇಶವನ್ನು ನಂದಗೋಕುಲಕ್ಕೆ ತಂದ ಉದ್ಧವನು :

**ಕ್ವೇಮಾಃ ಸ್ತ್ರಿಯೋ ವನಚರೀರ್ವ್ಯಭಿಚಾರದುಷ್ಟಾಃ ।**
**ಕೃಷ್ಣೇ ಕ್ವ ಚೈಷ ಪರಮಾತ್ಮನಿ ರೂಢಭಾವಃ ।**
**ನನ್ವೀಶ್ವರೋಽನುಭಜತೋಽವಿದುಷೋಽಪಿ ಸಾಕ್ಷಾ-**
**ಚ್ಛ್ರೇಯಸ್ತನೋತ್ಯಗದರಾಜ ಇವೋಪಯುಕ್ತಃ ॥**

ಭಾಗ. ೧೦-೪೭-೫೯

"ವ್ಯಭಿಚಾರದೋಷದಿಂದ ದೂಷಿತರಾಗಿದ್ದ ಈ ಸ್ತ್ರೀಯರೆಲ್ಲಿ, ಪರಮಾತ್ಮನಲ್ಲಿ ಬೇರೂರಿಕೊಂಡಿರುವ ಭಾವವೆಲ್ಲಿ ! ಈಶ್ವರನು ತನ್ನನ್ನೇ ಅನುಸರಿಸಿಕೊಂಡು ಭಜಿಸುತ್ತಿರುವವರಿಗೆ– ಉತ್ಕೃಷ್ಟವಾದ ಔಷಧವನ್ನು ಉಪಯೋಗಿಸಿದರೆ ಹೇಗೋ ಹಾಗೆ– ಶ್ರೇಯಸ್ಸನ್ನೇ ಉಂಟುಮಾಡುವವನಲ್ಲವೆ ?" ಎಂದಿರುತ್ತಾನೆ.

ಸಾಕ್ಷಾತ್ ಕೃಷ್ಣಭಗವಂತನೂ ಉದ್ಧವನೊಡನೆ ಮಾತನಾಡುತ್ತಾ ಹೀಗೆಂದಿರುತ್ತಾನೆ :

**ಮತ್ಕಾಮಾ ರಮಣಂ ಜಾರಮಸ್ವರೂಪವಿದೋಽಬಲಾಃ ।**
**ಬ್ರಹ್ಮ ಮಾಂ ಪರಮಂ ಪ್ರಾಪುಃ ಸಙ್ಗಾಚ್ಛತಸಹಸ್ರಶಃ ॥**

ಭಾಗ. ೧೧-೧೨-೧೩

'ನನ್ನನ್ನು ಜಾರಸ್ವಭಾವದವನೆಂದು ಭಾವಿಸಿ ಕಾಮಿಸಿ ನನ್ನ ಸ್ವರೂಪವನ್ನರಿಯದೆ ಆ ಸ್ತ್ರೀಯರು ಪರಬ್ರಹ್ಮವಾದ ನನ್ನನ್ನೇ ಸಂಗಮಹಿಮೆಯಿಂದ ನೂರುಗಟ್ಟಲೆ ಸಾವಿರಗಟ್ಟಲೆಯಾಗಿ ಸೇರಿರುತ್ತಾರೆ.'

೫೩. ಲೌಕಿಕಜನರ ಬುದ್ಧಿಯನ್ನನುಸರಿಸಿ ವ್ಯಾಸರು ಪರೀಕ್ಷಿತಮಹಾರಾಜನಿಂದ ಈ ಪ್ರಶ್ನೆಯನ್ನು ಹಾಕಿಸಿರುತ್ತಾರೆ :

**ಕೃಷ್ಣಂ ವಿದುಃ ಪರಂ ಕಾನ್ತಂ ನ ತು ಬ್ರಹ್ಮತಯಾ ಮುನೇ ।**
**ಗುಣಪ್ರವಾಹೋಪರಮಸ್ತಾಸಾಂ ಗುಣಧಿಯಾಂ ಕಥಮ್ ॥**

ಭಾಗ. ೧೦-೨೯-೧೨

'ಮುನಿವರ್ಯ, ಗೋಪಿಯರು ಶ್ರೀಕೃಷ್ಣನನ್ನು ಕೇವಲ ತಮ್ಮ ಪ್ರಿಯನೆಂದೇ ಭಾವಿಸಿದ್ದರೇ ಹೊರತು ಬ್ರಹ್ಮಸ್ವರೂಪನೆಂದೇನೂ ಭಾವಿಸಿರಲಿಲ್ಲವಲ್ಲ ! ಹೀಗೆ ಗುಣತ್ರಯಬುದ್ಧಿಯುಳ್ಳ ಅವರಿಗೆ ಗುಣಪ್ರವಾಹವು ಹೇಗೆ ಕಡಿದುಹೋಯಿತು ?' ಇದಕ್ಕೆ ಶುಕರು ಹೇಳಿದ ಉತ್ತರವಿದು :

**ಉಕ್ತಂ ಪುರಸ್ತಾದೇತತ್ತೇ ಚೈದ್ಯಃ ಸಿದ್ಧಿಂ ಯಥಾಗತಃ ।**
**ದ್ವಿಷನ್ನಪಿ ಹೃಷೀಕೇಶಂ ಕಿಮುತಾಧೋಕ್ಷಜಪ್ರಿಯಾಃ ॥**

ನೃಣಾಂ ನಿಃಶ್ರೇಯಸಾರ್ಥಾಯ ವ್ಯಕ್ತಿರ್ಭಗವತೋ ನೃಪ ।
ಅವ್ಯಯಸ್ಯಾಪ್ರಮೇಯಸ್ಯ ನಿರ್ಗುಣಸ್ಯ ಗುಣಾತ್ಮನಃ ॥
ಕಾಮಂ ಕ್ರೋಧಂ ಭಯಂ ಸ್ನೇಹಮೈಕ್ಯಂ ಸೌಹೃದಮೇವ ಚ ।
ನಿತ್ಯಂ ಹರೌ ವಿದಧತೋ ಯಾಂತಿ ತನ್ಮಯತಾಂ ಹಿ ತೇ ॥
ನ ಚೈವಂ ವಿಸ್ಮಯಃ ಕಾರ್ಯೋ ಭವತಾ ಭಗವತ್ಯಜೇ ।
ಯೋಗೇಶ್ವರೇಶ್ವರೇ ಕೃಷ್ಣೇ ಯತ ಏತದ್ವಿಮುಚ್ಯತೇ ॥
ಭಾಗ. ೧೦-೨೯-೧೪ರಿಂದ ೧೬

"ಆ ಶ್ರೀಹರಿಯನ್ನು ದ್ವೇಷಿಸುವವನಾಗಿದ್ದರೂ ಚೈದ್ಯನು ಹೇಗೆ ಪರಮಪುರುಷಾರ್ಥ
ಸಿದ್ಧಿಯನ್ನು ಪಡೆದುಕೊಂಡನೆಂಬುದನ್ನು ಈ ಮೊದಲೇ ಹೇಳಿರುತ್ತೇನಷ್ಟೆ ?
ಹೀಗಿರುವಲ್ಲಿ ಆ ವಿಷ್ಣುವನ್ನು ಪ್ರೀತಿಸುವವರು ವಿಮುಕ್ತರಾದದ್ದರಲ್ಲಿ ಹೆಚ್ಚುಗಾರಿಕೆ
ಯೇನಿದೆ ? ಎಲೈ ರಾಜನೆ, ಭಗವಂತನು ಅವತರಿಸಿದ್ದು ಜನರಿಗೆ ಮುಕ್ತಿಯಾಗ
ಲೆಂದೇ ಅಲ್ಲವೆ ? ಅತನು ಅವ್ಯಯನು, ಪ್ರಮಾಣಗಳಿಗೆ ವಿಷಯನಲ್ಲ, ನಿರ್ಗುಣ
ನಾದರೂ ಗುಣಾತ್ಮಕನು. ಹೀಗಿದ್ದರೂ ಜನರ ಉದ್ಧಾರಕ್ಕಾಗಿ ವ್ಯಕ್ತರೂಪವನ್ನು
ಪಡೆದುಕೊಂಡನು. ಕಾಮವನ್ನಾಗಲಿ, ಕ್ರೋಧವನ್ನಾಗಲಿ, ಭಯವನ್ನಾಗಲಿ,
ಸ್ನೇಹವನ್ನಾಗಲಿ, ಏಕತ್ವವನ್ನಾಗಲಿ, ಸುಹೃದ್ಭಾವವನ್ನಾಗಲಿ– ಆ ಹರಿಯಲ್ಲಿ
ನಿತ್ಯವಾಗಿ ಮಾಡುತ್ತಿರುವವರು ತನ್ಮಯರೇ ಆಗಿಬಿಡುವರು. ಜನ್ಮಾದಿವಿಕಾರ
ಗಳಿಲ್ಲದ ಯೋಗೀಶ್ವರರಿಗೆಲ್ಲ ಈಶ್ವರನಾದ ಕೃಷ್ಣನ ವಿಷಯದಲ್ಲಿ ಕಾಮವನ್ನು
ಮಾಡಿದವರೂ ಈ ದೋಷಗಳಿಂದ ವಿಮುಕ್ತರಾಗುವರೆಂಬ ವಿಷಯಕ್ಕೆ ನೀನು
ಅಚ್ಚರಿಪಡಬೇಕಾದದ್ದಿಲ್ಲ."

ಈ ಉತ್ತರದಲ್ಲಿ ಅಡಗಿರುವ ಅಭಿಪ್ರಾಯವನ್ನು ಸ್ವಲ್ಪ ವಿಮರ್ಶಿಸಬೇಕು.
ಏಕೆಂದರೆ ಕಾಮಕ್ರೋಧಾದಿಗಳಿಗೆ ವಿಷಯವಾಸನೆಯೇ ಕಾರಣವು. ವಿಷಯ
ಗಳಲ್ಲಿ ಕಾಮವುಂಟಾದವರಿಗೆ ಇನ್ನಷ್ಟು ಕಾಮವು ಬೆಳೆದುಕೊಳ್ಳುವದು. ಕ್ರೋಧ
ವುಂಟಾದರೆ ಇನ್ನಷ್ಟು ಹೆಚ್ಚಾಗುವದು ; ಹೀಗೆಯೇ ಭಯಸ್ನೇಹಾದಿಗಳೂ ವಿಷಯ
ನಿಮಿತ್ತದಿಂದ ಉಂಟಾದಾಗ ಬೆಂಕಿಗೆ ತುಪ್ಪವನ್ನು ಸುರಿದಂತೆ ಅವು ಭುಗಿಲೆಂದು
ಎದ್ದುಕೊಳ್ಳುವವು. ಆದರೆ ಪರಮಾತ್ಮನ ವಿಷಯವು ಹಾಗಲ್ಲ ; ಅವನು ನಿರ್ಗುಣ
ನಾದ್ದರಿಂದ ಅವನ ಕಡೆಗೆ ಸತ್ತ್ವರಜಸ್ತಮೋಗುಣಗಳೊಳಗೆ ಯಾವದೊಂದನ್ನು
ತಿರುಗಿಸಿದರೂ ಅಂತಃಕರಣವು ನಿರ್ಗುಣವೇ ಆಗಿಬಿಡುವದು. ವಿಷಯಗಳ ಕಡೆಗೆ
ತಿರುಗಿದ ಮನಸ್ಸು ವಿಷಯಮಯವೇ ಆಗಿಬಿಡುವಂತೆ ಭಗವಂತನ ಕಡೆಗೆ ನಿತ್ಯವೂ
ತಿರುಗಿದ ಮನಸ್ಸಿನಲ್ಲಿ ಕಾಮಾದಿಗಳೊಳಗೆ ಯಾವದೊಂದು ವೃತ್ತಿಯು ಇದ್ದರೂ
ಅದು ಶಾಂತವಾಗಿ ಭಗವನ್ಮಯವಾಗಿಬಿಡುವದು. ಹೀಗೆ ತಮಗೂ ಅರಿಯದಂತೆ
ಕಾಮುಕರಾಗಿ ಬಂದ ಗೋಪಿಯರ ಮನಸ್ಸೂ ಶಾಂತವಾಗಿ ಭಗವನ್ಮಯವೇ
ಆಗಿಬಿಟ್ಟಿತು– ಎಂಬುದು ಶುಕಮಹರ್ಷಿಗಳ ಭಾವ.

೫೪. ಶ್ರೀವೇದವ್ಯಾಸರು ಮತ್ತೊಂದುಸಲ ಪರೀಕ್ಷಿತನಿಂದ ಪ್ರಶ್ನೆಯನ್ನು ಹಾಕಿಸಿರುತ್ತಾರೆ :

**ಸಂಸ್ಥಾಪನಾಯ ಧರ್ಮಸ್ಯ ಪ್ರಶಮಾಯೇತರಸ್ಯ ಚ ।**
**ಅವತೀರ್ಣೋ ಹಿ ಭಗವಾನಂಶೇನ ಜಗದೀಶ್ವರಃ ॥**
**ಸ ಕಥಂ ಧರ್ಮಸೇತೂನಾಂ ವಕ್ತಾ ಕರ್ತಾಽಭಿರಕ್ಷಿತಾ ।**
**ಪ್ರತೀಪಮಾಚರದ್ ಬ್ರಹ್ಮನ್ ಪರದಾರಾಭಿಮರ್ಶನಮ್ ॥**
**ಆಪ್ತಕಾಮೋ ಯದುಪತಿಃ ಕೃತವಾನ್ ವೈ ಜುಗುಪ್ಸಿತಮ್ ।**
**ಕಿಮಭಿಪ್ರಾಯ ಏತಂ ನಃ ಸಂಶಯಂ ಛಿನ್ಧಿ ಸುವ್ರತ ॥**

ಭಾಗ. ೧೦–೩೩–೨೭ರಿಂದ ೨೯

ರಾಸಕ್ರೀಡೆಯ ವರ್ಣನೆಯನ್ನು ಕೇಳಿದ ರಾಜನ ಪ್ರಶ್ನೆಯಿದು : 'ಭಗವಂತನು ಧರ್ಮಸ್ಥಾಪನೆ, ಅಧರ್ಮವಿನಾಶ- ಇವುಗಳಿಗೋಸ್ಕರವೇ ಅವತರಿಸಿದವನು. ಧರ್ಮವ್ಯವಸ್ಥೆಯನ್ನು ಶಾಸ್ತ್ರಮುಖದಿಂದ ಹೇಳಿ ನಿರ್ಮಿಸಿ ರಕ್ಷಿಸುವಾತನಲ್ಲವೆ, ಅವನು ? ಆಪ್ತಕಾಮನಾದ ಶ್ರೀಕೃಷ್ಣನು ಪರದಾರಸಂಪರ್ಕದಂಥ ಜುಗುಪ್ಸಿತ ಕರ್ಮವನ್ನು ಮಾಡಿದನೆಂಬುದರಲ್ಲಿ ಏನು ಅಭಿಪ್ರಾಯವು ? ದಯವಿಟ್ಟು ನನ್ನ ಈ ಸಂಶಯವನ್ನು ಪರಿಹರಿಸಬೇಕು.'

ಶ್ರೀಶುಕರು ಇದಕ್ಕೆ ಕೊಟ್ಟಿರುವ ಉತ್ತರವು ಹೀಗಿದೆ :

**ಧರ್ಮವ್ಯತಿಕ್ರಮೋ ದೃಷ್ಟ ಈಶ್ವರಾಣಾಂ ಚ ಸಾಹಸಮ್ ।**
**ತೇಜೀಯಸಾಂ ನ ದೋಷಾಯ ವಹ್ನೇಃ ಸರ್ವಭುಜೋ ಯಥಾ ॥**
**ನೈತತ್ ಸಮಾಚರೇಜ್ಜಾತು ಮನಸಾಪಿ ಹ್ಯನೀಶ್ವರಃ ।**
**ವಿನಶ್ಯತ್ಯಾಚರನ್ ಮೌಢ್ಯಾದ್ಯಥಾ ರುದ್ರೋಽಬ್ಧಿಜಂ ವಿಷಮ್ ॥**
**ಈಶ್ವರಾಣಾಂ ವಚಃ ಸತ್ಯಂ ತಥೈವಾಽಽಚರಿತಂ ಕ್ವಚಿತ್ ।**
**ತೇಷಾಂ ಯತ್ಸ್ವವಚೋಯುಕ್ತಂ ಬುದ್ಧಿಮಾಂಸ್ತತ್ಸಮಾಚರೇತ್ ॥**
**ಕುಶಲಾಚರಿತೇನೈಷಾಮಿಹ ಸ್ವಾರ್ಥೋ ನ ವಿದ್ಯತೇ ।**
**ವಿಪರ್ಯಯೇಣ ವಾಽನರ್ಥೋ ನಿರಹಙ್ಕಾರಿಣಾಂ ಪ್ರಭೋ ॥**

ಭಾಗ. ೧೦–೩೩–೩೦ರಿಂದ ೩೩

'ತೇಜೋವಂತರಾದವರು ಕೆಲವು ಕಡೆಗಳಲ್ಲಿ ಧರ್ಮವ್ಯತಿಕ್ರಮವನ್ನು ಮಾಡಿರುತ್ತಾರೆ; ಆದರೂ ಅವರಿಗೆ ದೋಷವಿಲ್ಲ. ಬೆಂಕಿಯು ಎಲ್ಲವನ್ನೂ ಸುಡುತ್ತದೆಯಲ್ಲವೆ ? ಆದರೆ ದೊಡ್ಡವರು ಮಾಡಿದರೆಂಬ ಕಾರಣದಿಂದ ಕಿಞ್ಚಿಜ್ಞರೂ ಅಲ್ಪಸಾಮರ್ಥ್ಯವುಳ್ಳವರೂ ಎಂದಿಗೂ ಅನುಕರಿಸುವದಕ್ಕೆ ಹೋಗಬಾರದು. ರುದ್ರನು ಕಾಲಕೂಟವನ್ನು ಕುಡಿದನೆಂದು ಮಿಕ್ಕವರು ಕುಡಿಯುವದಕ್ಕಾದೀತೆ ? ಆದ್ದರಿಂದ ಬುದ್ಧಿ

ವಂತನಾದವನು ದೊಡ್ಡವರು ಹೇಳಿದಂತೆ ಆಚಾರವನ್ನಿಟ್ಟುಕೊಳ್ಳಬೇಕೇ ಹೊರತು ಅವರು ಮಾಡಿದಂತೆ ಮಾಡುವೆನೆಂದು ತನ್ನ ಕೈಗೆ ಮೀರಿದ್ದನ್ನು ಮಾಡುವದಕ್ಕೆ ಹೋಗಬಾರದು. ಸಿದ್ಧರಾದವರಿಗೆ ಪುಣ್ಯವನ್ನು ಮಾಡಿದ್ದರಿಂದ ಆಗಬೇಕಾದ ಅರ್ಥವಿರುವದಿಲ್ಲ, ಪಾಪವನ್ನು ಮಾಡಿದ್ದರಿಂದ ಬರುವ ಪ್ರತ್ಯವಾಯವೂ ಇರುವದಿಲ್ಲ; ಏಕೆಂದರೆ ಅವರು ನಿರಭಿಮಾನಿಗಳಾಗಿರುವದರಿಂದ ಅವರ ಕರ್ಮವು ಅಕರ್ಮವೇ ಆಗಿರುತ್ತದೆ.' ಸಾಮಾನ್ಯಲೌಕಿಕರಿಗೆ ಇದರ ಮರ್ಮವೇ ತಿಳಿಯು ವಂತಿರುವದಿಲ್ಲ. ಏಕೆಂದರೆ ಅಕರ್ತೃತ್ವಸ್ವಭಾವದವರು ಕರ್ಮವನ್ನು ಹೇಗೆ ಮಾಡುವ ರೆಂಬುದರ ರಹಸ್ಯವೇ ಸಾಮಾನ್ಯರ ಬುದ್ಧಿಗೆ ಹತ್ತುವದಿಲ್ಲ. ಇನ್ನು ಭಗವಂತನ ವಿಷಯದಲ್ಲಿ ತತ್ತ್ವಜ್ಞಾನವು ಅವರಿಗೆ ಹೇಗೆ ಆಗಬೇಕು? ಶುಕರು ಈ ವಿಷಯಕ್ಕೆ ಹೀಗೆಂದಿರುತ್ತಾರೆ :

**ಕಿಮುತಾಖಿಲಸತ್ತ್ವಾನಾಂ ತಿರ್ಯಙ್ಮರ್ತ್ಯದಿವೌಕಸಾಮ್ |**
**ಈಶಿತುಶ್ಚೇಶಿತವ್ಯಾನಾಂ ಕುಶಲಾಕುಶಲಾನ್ವಯಃ || ೩೪ ||**

**ಯತ್ಪಾದಪಙ್ಕಜಪರಾಗನಿಷೇವತೃಪ್ತಾ**
**ಯೋಗಪ್ರಭಾವವಿಧುತಾಖಿಲಕರ್ಮಬನ್ಧಾಃ |**
**ಸ್ವೈರಂ ಚರನ್ತಿ ಮುನಯೋಽಪಿ ನ ನಹ್ಯಮಾನಾ-**
**ಸ್ತಸ್ಯೇಚ್ಛಯಾತ್ತವಪುಷಃ ಕುತ ಏವ ಬನ್ಧಃ || ೩೫ ||**

**ಗೋಪೀನಾಂ ತತ್ಪತೀನಾಂ ಚ ಸರ್ವೇಷಾಮೇವ ದೇಹಿನಾಮ್ |**
**ಯೋಽನ್ತಶ್ಚರತಿ ಸೋಽಧ್ಯಕ್ಷಃ ಕ್ರೀಡನೇನೇಹ ದೇಹಭಾಕ್ || ೩೬ ||**
**ಅನುಗ್ರಹಾಯ ಭೂತಾನಾಂ ಮಾನುಷಂ ದೇಹಮಾಸ್ಥಿತಃ |**
**ಭಜತೇ ತಾದೃಶೀಃ ಕ್ರೀಡಾ ಯಾಃ ಶ್ರುತ್ವಾ ತತ್ಪರೋ ಭವೇತ್ || ೩೭ ||**

'ಎಲೈ ರಾಜನೆ, ಹೀಗಿರುವಲ್ಲಿ ತಿರ್ಯಗ್ಜಂತುಗಳು, ಮನುಷ್ಯರು, ದೇವತೆಗಳು— ಮುಂತಾದ ಎಲ್ಲಾ ಜೀವರುಗಳಿಗೂ ಸಾಕ್ಷಿಯಾಗಿ ಎಲ್ಲರನ್ನೂ ಆಳುತ್ತಿರುವ ಸರ್ವ ಸ್ವತಂತ್ರನಾದ ಪರಮೇಶ್ವರನಿಗೆ ಪುಣ್ಯಪಾಪಗಳ ಬಂಧವೆಲ್ಲಿಯದು? ಯಾವನ ಪಾದಪದ್ಮಗಳ ಮಕರಂದವನ್ನು ಸೇವಿಸಿ ತೃಪ್ತರಾಗಿರುವ, ಯೋಗಮಹಿಮೆಯಿಂದ ಕರ್ಮಬಂಧನನ್ನೆಲ್ಲ ತೊಳೆದುಕೊಂಡಿರುವ ಮುನೀಶ್ವರರೂ ಸ್ವೇಚ್ಛೆಯಿಂದ ಬಂಧ ರಹಿತರಾಗಿ ವರ್ತಿಸುತ್ತಿರುವಲ್ಲಿ ಸ್ವೇಚ್ಛಾಮಾತ್ರದಿಂದ ಶರೀರಿಯಾಗಿರುವ ಭಗವಂತ ನಿಗೆ ಬಂಧವೆಲ್ಲಿಯದು? ಗೋಪರಿಗೂ ಗೋಪಿಯರಿಗೂ ಸರ್ವದೇಹಿಗಳಿಗೂ ಅಂತರಾತ್ಮನಾಗಿರುವ ಸರ್ವಸಾಕ್ಷಿಯಾದ, ಆಟಕ್ಕಾಗಿ ದೇಹಾಧಾರಿಯಾಗಿ ಸರ್ವ ಭೂತಗಳಿಗೂ ಅನುಗ್ರಹವನ್ನು ಮಾಡುವದಕ್ಕಾಗಿ ಮಾನುಷದೇಹವನ್ನು ಧರಿಸಿರುವ ಆ ಭಗವಂತನು ಅಂಥ ಕ್ರೀಡೆಗಳನ್ನು ಹೊಂದಿದರೆ ಅವನ್ನು ಶ್ರವಣಮಾಡಿದ್ದರಿಂದ ಭಗವತ್ಪರಾಯಣನಾಗುವನು.'

ಈ ಉತ್ತರದಲ್ಲಡಗಿರುವ ತತ್ತ್ವರಹಸ್ಯವನ್ನು ಮನದಟ್ಟುಮಾಡಿಕೊಳ್ಳುವದು ಲೌಕಿಕದೃಷ್ಟಿಯ ಜನರಿಗೆ ಎಂದಿಗೂ ಸಾಧ್ಯವಾಗಲಾರದು. ಪರಶುರಾಮನು ತಂದೆಯ ಆಜ್ಞೆಯಂತೆ ತಾಯಿಯನ್ನು ಕೂಡಲೆ ಕಡಿದುಹಾಕಿದನು ; ಸುಪ್ರೀತನಾದ ತಂದೆಯು 'ವರವನ್ನು ಬೇಡಿಕೊ !'– ಎನ್ನಲು 'ಮಾತೃವನ್ನು ಉಜ್ಜೀವನಗೊಳಿಸಿಕೊಡಿ' ಎಂದು ಕೇಳಿದನು. ಇಂಥ ತಪೋನಿಧಿಗಳ ಚರಿತೆಯನ್ನು ಕೇಳಿ ಸಾಮಾನ್ಯರು ಮಾತೃಹತ್ಯೆಗೆ ಎಳಸಿದರೆ ವಿವೇಕಿಗಳೆನಿಸಿಕೊಂಡಾರೆ ? ಋಷಿಗಳು ಮಾಡಿದ ಇಂಥ ಅದ್ಭುತಚರಿತೆಗಳಿಂದ ಅವರ ಮಹಿಮೆಯಲ್ಲಿ ಗೌರವವನ್ನು ವಹಿಸಬೇಕೇ ಹೊರತು ಧರ್ಮಾಧರ್ಮಗಳ ತತ್ತ್ವವನ್ನು ಅವರ ಸಾಹಸದ ಆಚರಣೆಯಿಂದ ನಿಶ್ಚಯಿಸುವದಕ್ಕೆ ಹೋಗಬಾರದು ; ಅವರು ಮಾಡಿರುವ ಉಪದೇಶವನ್ನು ಮಾತ್ರ ಅನುಸರಿಸಬೇಕು. ಇದು ಲೌಕಿಕರಲ್ಲಿರುವ ತೇಜಸ್ಸಿನ ತಾರತಮ್ಯವನ್ನವಲಂಬಿಸಿ ಹೇಳಿದ ಮಾತು. ಆದರೆ ಭಗವಂತನನ್ನು ಈ ಅಳತೆಯ ಕೋಲಿನಿಂದ ಅಳೆಯುವದಕ್ಕೆ ಆಗುವದೇ ಇಲ್ಲ. ಏಕೆಂದರೆ ಭಗವಂತನು ಅರೂಪನಾಗಿ ತನ್ನ ಸ್ವರೂಪದಲ್ಲಿರುವಾಗ ಹೇಗೆ ಧರ್ಮಾಧರ್ಮಗಳನ್ನು ಮೀರಿರುತ್ತಾನೋ ಹಾಗೆಯೇ ಸ್ವೇಚ್ಛೆಯಿಂದ ವಹಿಸಿದ ಮಾನುಷರೂಪದಲ್ಲಿಯೂ ಸರ್ವಾಂತರ್ಯಾಮಿಯಾಗಿರುವ ಸರ್ವಸಾಕ್ಷಿಯೇ ಆಗಿರುತ್ತಾನೆ. ನಿತ್ಯಕೂಟಸ್ಥಚೈತನ್ಯಸ್ವರೂಪನಾದ ಆತನು ಯಾವಾಗಲೂ ಎಲ್ಲಾ ಜೀವರುಗಳ ಶರೀರದಲ್ಲಿಯೂ ಇರುತ್ತಿರುವನು. ಇಷ್ಟು ಮಾತ್ರದಿಂದ ಅವನಿಗೆ ಆಯಾ ದೇಹಗಳು ಮಾಡಿದ ಪುಣ್ಯಪಾಪಗಳ ಸಂಸ್ಪರ್ಶವು ಎಳ್ಳಷ್ಟಾದರೂ ಆದೀತೇನು ? ಶ್ರೀಕೃಷ್ಣಭಗವಂತನು ರಾಸಕ್ರೀಡೆಯನ್ನು ಮಾಡುತ್ತಿರುವಾಗಲೂ ತನ್ನ ಕೂಟಸ್ಥಾಸಂಗಾದ್ವಿತೀಯವಾದ ಸಾಕ್ಷಿತ್ವವನ್ನು ಬಿಟ್ಟಿರಲಿಲ್ಲ. ಅವನು ಗೋಪಿಯರೊಡನೆ ರಾಸಕ್ರೀಡೆಯನ್ನುಮಾಡಿ ತೋರಿಸಿದ ಲೀಲೆಯೆಂಬುದೂ ಅವನ ಮಾಯಾಕೃತಲೀಲೆಯಲ್ಲದೆ ಮತ್ತೇನೂ ಅಲ್ಲ. ಆತನಿಗೆ ಯಾವದೊಂದು ದೇಹದ ಸಂಬಂಧವಾಗಲಿ ಅದರ ಧರ್ಮಾಧರ್ಮಾವಸ್ಥೆಗಳ ಸಂಪರ್ಕವಾಗಲಿ ಎಂದಿಗೂ ಒಂದಿಷ್ಟೂ ಇಲ್ಲವೇ ಇಲ್ಲ.

೫೫. ಇಲ್ಲಿಯವರೆಗಿನ ವಿಚಾರಕ್ರಮದಿಂದ ಸಿದ್ಧವಾದದ್ದೇನೆಂದರೆ : ಗೋಪಿಯರಿಗೆ ತಿಳಿವಳಿಕೆಯು ಸಾಲದೆ ಇದ್ದಾಗ ಅವರು ಭಗವಂತನ ಸ್ವರೂಪವನ್ನರಿಯದೆ ಕಾಮದಿಂದಲೇ ಅವನನ್ನು ಪ್ರೀತಿಸುವದಕ್ಕೆ ಬಂದದ್ದು ನಿಜ ; ಆದರೆ ತೀವ್ರಕಾಮದಿಂದ ಭಗವಂತನಲ್ಲಿಯೇ ಏಕಾಂತಪ್ರೇಮವನ್ನು ಮಾಡಿದ್ದರಿಂದ ಅವರಿಗೆ ಕಾಮವೃತ್ತಿಯೇ ಪರಮಪ್ರೇಮವಾಗಿ ಪರಿಣಮಿಸಿತು ; ಶ್ರೀಕೃಷ್ಣಭಗವಂತನು ಅವರನ್ನು ಕಾಮಿಸಿದನೆಂದಾಗಲಿ, ಅವನಿಗೆ ಲೌಕಿಕಕಾಮುಕರಂತೆ ಗೋಪಿಯರ ಸಂಬಂಧವಾಯಿತೆಂದಾಗಲಿ ಕಲ್ಪಿಸುವದು ಅವಿವೇಕಿಗಳು ಲೋಕದೃಷ್ಟಿಯಿಂದ ಕಲ್ಪಿಸಿರುವ ಕಥೆಯೇ ಹೊರತು ಭಾಗವತಪುರಾಣನಿರ್ಮಾತೃಗಳಾದ ವ್ಯಾಸರ ಅಭಿಪ್ರಾಯವದಲ್ಲ;

ಅವರು ಭಾಗವತದಲ್ಲಿ ಪರೀಕ್ಷಿತನ ಶಂಕೆಗೆ ಪರಿಹಾರವನ್ನು ಹೇಳುವ ವ್ಯಾಜದಿಂದ ತತ್ತ್ವಾರ್ಥವನ್ನೇ ಹೇಳಿಬಿಟ್ಟಿರುತ್ತಾರೆ. ಭಗವಂತನ ಅನುಗ್ರಹಕ್ಕೆ ಪಾತ್ರರಾದ ಮಹನೀಯರು ಮಾಡಿದ ಕೆಲವು ಆಚಾರಗಳ ವಿಷಯಕ್ಕೆ ಅಪಾರ್ಥಮಾಡುವದು ಧರ್ಮಸೂಕ್ಷ್ಮವನ್ನು ಅರಿಯದೆ ಮಾಡಿಕೊಂಡ ತಪ್ಪುಗ್ರಹಿಕೆಗಳಾಗಿರುತ್ತವೆ. ಅಂಥ ನಿಸ್ತ್ರೈಗುಣ್ಯಮಾರ್ಗದ ತೇಜೋವಂತರ ವರ್ತನೆಗೆ ಸರಿಯಾದ ಅರ್ಥವನ್ನು ಮಾಡಿಕೊಳ್ಳುವದು ಅವರ ದೃಷ್ಟಿಯನ್ನನುಸರಿಸುವ ಭೂಮಿಕೆಗೆ ಬಂದಮೇಲೆಯೇ ಸಾಧ್ಯನಾದೀತು; ಅಲ್ಲಿಯವರೆಗೆ ಶಾಸ್ತ್ರದಲ್ಲಿ ಹೇಳಿರುವಂತೆಯೇ ಧರ್ಮಾಧರ್ಮಗಳನ್ನು ನಿರ್ಣಯಿಸಿ ಸಾಮಾನ್ಯರು ವರ್ತಿಸಬೇಕು. ಇದಲ್ಲದೆ ನಿತ್ಯಶುದ್ಧಬುದ್ಧ ಮುಕ್ತಸ್ವರೂಪನಾದ ಭಗವಂತನು ತನ್ನ ಸ್ವರೂಪದಲ್ಲಿದ್ದು ಸರ್ವಭೂತಗಳ ದೇಹದಲ್ಲಿಯೂ ಸಾಕ್ಷಿಯಾಗಿ ತೋರುತ್ತಿರುತ್ತಾನಾದ್ದರಿಂದ ಆತನಿಗೆ ದೇಹಧರ್ಮಾದಿಗಳ ಅಂಟು ಬರುವಂತೆಯೇ ಇರುವದಿಲ್ಲ; ಮಾಯೆಯಿಂದ ಆತನು ಯಾವ ದೇಹವನ್ನು ಧರಿಸಿ ಅವತರಿಸಿದರೂ :

**ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।**
**ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥** ಗೀ. ೪-೬
**ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ ।**
**ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ॥** ಗೀ. ೪-೯

ಎಂದು ಭಗವಂತನೇ ಹೇಳಿರುವಂತೆ ಭಗವಂತನ ಜನ್ಮಕರ್ಮಗಳು ಬದ್ಧರಾದ ಜೀವರ ಜನ್ಮಕರ್ಮಗಳಂತೆ ಅಲ್ಲವಾದ್ದರಿಂದ ಅವುಗಳ ತತ್ತ್ವವನ್ನರಿಯದ ಮೂಢರು ಆತನೂ ಮನುಷ್ಯನೆಂದು ಭಾವಿಸಿ ಇಲ್ಲದ ಕಲಂಕವನ್ನು ಆತನಿಗೆ ಹತ್ತಿಸುತ್ತಿರುವರು. ತತ್ತ್ವವನ್ನು ತಿಳಿದವರಿಗೆ ಆತನ ಜನ್ಮಾದಿಗಳನ್ನು ಸ್ಮರಿಸಿಕೊಂಡದ್ದರಿಂದಲೇ ಸದ್ಗತಿಯಾಗುವದು.

೫೬. ಪರಮಪ್ರಾಕೃತರಾದ ಗೋಪಿಯರ ರಾಸಕ್ರೀಡೆಯ ತತ್ತ್ವವನ್ನು ಅರಿಯದವರು ಹೇಗೇ ತಪ್ಪಾಗಿ ಭಾವಿಸಲಿ, ಗೋಪಿಯರಿಗೆ ಅಷ್ಟುಹೊತ್ತಿಗೆ ಭಗವಂತನ ಮಾಹಾತ್ಮ್ಯಜ್ಞಾನವು ಉಂಟಾಗಿಬಿಟ್ಟಿತ್ತು- ಎಂಬುದು ಸುನಿಶ್ಚಿತ. ಕೃಷ್ಣಭಗವಂತನ ವಿಯೋಗದಿಂದಾದ ವ್ಯಥೆಯಿಂದ ಅವರು :

**ತನ್ಮನಸ್ಕಾಸ್ತದಾಲಾಪಾಸ್ತದ್ವಿಚೇಷ್ಟಾಸ್ತದಾತ್ಮಿಕಾಃ ।**
**ತದ್ಗುಣಾನೇವ ಗಾಯನ್ತ್ಯೋ ನಾತ್ಮಾಗಾರಾಣಿ ಸಸ್ಮರುಃ ॥**
ಭಾಗ. ೧೦-೩೦-೪೩

ಅವರು ಆತನಲ್ಲಿಯೇ ಇಟ್ಟ ಮನಸ್ಸಿನಿಂದ ಆತನ ವಿಚಾರವಾಗಿಯೇ ಮಾತನಾಡುತ್ತಾ ಆತನ ಲೀಲಾವ್ಯಾಪಾರಗಳನ್ನು ಅನುಕರಿಸುತ್ತಾ ತದಾತ್ಮಕರಾಗಿ

ಆತನ ಗುಣಗಳನ್ನೇ ಗಾನಮಾಡುತ್ತಾ ದೇಹಗೇಹಾದಿಗಳ ಸ್ಮರಣೆಯೇ ಇಲ್ಲದೆ ಇದ್ದರು. ಆಗ ಅವರ ಮನಃಸ್ಥಿತಿಯನ್ನು ವರ್ಣಿಸಿರುವ 'ಗೋಪಿಕಾಗೀತೆ'ಯನ್ನು ಪಠಿಸುವ ವಿಶುದ್ಧಮನಸ್ಕರಿಗೆ ಅವರು ಭಗವಂತನ ಮಾಹಾತ್ಮ್ಯವನ್ನು ಎಷ್ಟರ ಮಟ್ಟಿಗೆ ಅರಿತಿದ್ದರೆಂಬುದು ಮನದಟ್ಟಾದೀತು.

ನ ಖಲು ಗೋಪಿಕಾನನ್ದನೋ ಭವಾ-
ನಖಿಲದೇಹಿನಾಮನ್ತರಾತ್ಮದೃಕ್।
ವಿಖನಸಾರ್ಥಿತೋ ವಿಶ್ವಗುಪ್ತಯೇ
ಸಖ ಉದೇಯಿವಾನ್ ಸಾತ್ವತಾಂ ಕುಲೇ ॥

ಭಾಗ. ೧೦-೩೧-೪

"ನೀನು ಗೋಪಿಯ ಮಗನಲ್ಲವೇ ಅಲ್ಲ; ಸಕಲಜೀವರಿಗೂ ಅಂತರಾತ್ಮನಾದ ಸರ್ವಸಾಕ್ಷಿಯೇ ನೀನು. ದೇವತೆಗಳು ನಿನ್ನನ್ನು ಪ್ರಾರ್ಥಿಸಿಕೊಳ್ಳಲಾಗಿ ಜಗತ್ತನ್ನು ರಕ್ಷಿಸುವದಕ್ಕಾಗಿ, ಎಲೈ ಸಖನೆ, ಸಾತ್ವತರ ಕುಲದಲ್ಲಿ ಉದಯಿಸಿರುವೆ" ಎನ್ನುತ್ತಾರೆ. ಇಂಥವರಿಗೆ ಲೌಕಿಕಕಾಮದ ವಾಸನೆಯಾದರೂ ಹೇಗೆ ಬರಬೇಕು ?

ವಿರಚಿತಾಭಯಂ ವೃಷ್ಣಿಧುರ್ಯ ತೇ
ಚರಣಮೀಯುಷಾಂ ಸಂಸೃತೇರ್ಭಯಾತ್ ।
ಕರಸರೋರುಹಂ ಕಾನ್ತ ಕಾಮದಂ
ಶಿರಸಿ ಧೇಹಿ ನಃ ಶ್ರೀಕರಗ್ರಹಮ್ ॥ ಭಾಗ. ೧೦-೩೧-೫

'ಎಲೈ ವೃಷ್ಣಿಕುಲಶ್ರೇಷ್ಠನೆ, ಸಂಸಾರದ ಭಯದಿಂದ ನಿನಗೆ ಶರಣುಬಂದಿರುವ ನಮ್ಮಗಳ ತಲೆಯಮೇಲೆ- ಯಾರು ಏನನ್ನು ಬೇಡುವರೋ ಅಂಥ ಇಷ್ಟಾರ್ಥವನ್ನು ಕೊಡುವ, ಲಕ್ಷ್ಮೀದೇವಿಯ ಕೈಯನ್ನು ಹಿಡಿದಿರುವ- ನಿನ್ನ ಅಭಯಹಸ್ತವನ್ನು ಇಡು.'' ಹೀಗೆ ಸಂಸಾರಭಯದಿಂದ ಪಾರಾಗಬೇಕೆಂದು ಭಗವಂತನನ್ನು ಶರಣು ಹೊಗುವವರೂ ಕಾಮಿಗಳಾದರೆ ಇನ್ನು ಮುಮುಕ್ಷುಗಳು ಯಾರು ? ಕಾಮಿನೀಕಾಂಚನನಿವಿಷ್ಟಮನಸ್ಕರಾದ ಮೂಢರಿಗೆ ಈ ಗೀತೆಯಲ್ಲಿಯೂ ಶೃಂಗಾರರಸವೇ ಕಾಣಿಸುವದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಗೋಪಿಕಾಸ್ತ್ರೀಯರು ಪರಿಶುದ್ಧ ಮನಸ್ಸಿನಿಂದ ಭಗವಂತನಲ್ಲಿಯೇ ನೆಟ್ಟಮನಸ್ಸಿನವರಾಗಿದ್ದರೆ ಅವರಲ್ಲಿ ಭಕ್ತಿಯ ಲಕ್ಷಣವು ಪರಿಪೂರ್ಣವಾಗಿತ್ತು- ಎಂಬುದನ್ನು ಶುದ್ಧಸಾತ್ತ್ವಿಕರು ಬಲ್ಲರು. ಭಗವಂತನ ಸ್ಮರಣಮಾತ್ರದಿಂದ ಎಲ್ಲವನ್ನೂ ಮರೆತು ತನ್ಮಯರಾಗಿ ಸಮಾಧಿಯನ್ನು ಅನುಭವಿಸುವ ಚಿತ್ತಭೂಮಿಕೆಯಲ್ಲಿರುವ ಮಹಾತ್ಮರು ಮಾತ್ರ ಗೋಪಿಯರ ಆಗಿನ ಮನಃಸ್ಥಿತಿಯನ್ನು ಊಹಿಸಿಕೊಳ್ಳಬಲ್ಲರು. ಭಾವುಕರಾದವರು ಈ ಸಂದರ್ಭವನ್ನು ಚೆನ್ನಾಗಿ ಮನದಲ್ಲಿ ಊಡಿಸಿಕೊಳ್ಳಬೇಕಾದರೆ ಭಾಗವತಪುರಾಣವನ್ನೂ ವಿಷ್ಣುಪುರಾಣವನ್ನೂ ಭಕ್ತಾಗ್ರೇಸರರಾದ ಮಹಾತ್ಮರ ಮೂಲಕವಾಗಿ ಶ್ರವಣಮಾಡ

ಬೇಕು. ವಿಷ್ಣು ಪುರಾಣದಲ್ಲಿ ಪಂಚಮಾಂಶದ ಹದಿಮೂರನೆಯ ಅಧ್ಯಾಯದಲ್ಲಿ ವರ್ಣಿತವಾಗಿರುವ ಗೋಪಿಯರ ಮನೋವ್ಯಥೆಯ ಸಾತ್ತ್ವಿಕತೆಯನ್ನೂ ಅವರಿಗೆ ಆದ ಸದ್ಗತಿಯನ್ನೂ ಮನಸ್ಸಿನಲ್ಲಿ ಹೊರಳಾಡಿಸಿ ರೋಮಾಂಚವನ್ನೂ ಆನಂದವನ್ನೂ ಅನುಭವಿಸುವದಕ್ಕೆ ಪೂರ್ವಜನ್ಮದ ಸುಕೃತವು ಬೇಕು. ಅವು ಗಳೊಳಗೆ ಈ ಒಂದು ಭಾಗದ ಅರ್ಥವನ್ನು ವಾಚಕರು ಮನಸ್ಸಿನಲ್ಲಿ ಹೊರಳಾಡಿಸ ಬೇಕು :

**ತಚ್ಚಿತ್ತವಿಮಲಾಹ್ಲಾದಕ್ಷೀಣಪುಣ್ಯಚಯಾ ತಥಾ ।**
**ತದಪ್ರಾಪ್ತಿಮಹಾದುಃಖವಿಲೀನಾಶೇಷಪಾತಕಾ ॥**
**ಚಿನ್ತಯನ್ತೀ ಜಗತ್ಸೂತಿಂ ಪರಬ್ರಹ್ಮಸ್ವರೂಪಿಣಮ್ ।**
**ನಿರುಚ್ಛ್ವಾಸತಯಾ ಮುಕ್ತಿಂ ಗತಾನ್ಯಾ ಗೋಪಕನ್ಯಕಾ ॥**

ವಿ. ಪು. ೫-೧೩-೨೧, ೨೨

"ಒಬ್ಬ ಗೋಪಿಯು ಆ ಕೃಷ್ಣನಲ್ಲಿಯೇ ನೆಲೆನಿಂತ ಚಿತ್ತದಿಂದುಂಟಾದ ಪರಮಾ ನಂದದಿಂದ ಪುಣ್ಯರಾಶಿಯನ್ನೆಲ್ಲ ಸವೆಯಿಸಿಕೊಂಡು, 'ಆತನನ್ನು ಪಡೆಯಲಿಲ್ಲವಲ್ಲ !' -ಎಂಬ ಮಹಾದುಃಖದಿಂದ ಪಾಪವೆಲ್ಲವನ್ನೂ ಕರಗಿಸಿಕೊಂಡು, ಪರಬ್ರಹ್ಮಸ್ವರೂಪಿ ಯಾದ ಜಗತ್ಕಾರಣನಾದ ಶ್ರೀಕೃಷ್ಣ ಭಗವಂತನನ್ನೇ ಚಿಂತಿಸುತ್ತಾ ಉಸಿರನ್ನು ಬಿಡದೆ ಮುಕ್ತಿಯನ್ನು ಹೊಂದಿದಳು." ಈ ವರ್ಣನೆಯನ್ನು ಕೇಳಿದವರಿಗೆ ಗೋಪಿಯರ ಮಾಹಾತ್ಮ್ಯಜ್ಞಾನದ ವಿಷಯಕ್ಕೆ ಸ್ವಲ್ಪವೂ ಸಂಶಯವುಂಟಾಗುವ ಸಂಭವವಿಲ್ಲ.

## ತದ್ವಿಹೀನಂ ಜಾರಾಣಾಮಿವ ॥ ೨೩ ॥

೨೩. ಈ ಲಕ್ಷಣವಿಲ್ಲದ (ಪ್ರೇಮವು) ಜಾರರ (ಪ್ರೇಮ)ದಂತೆ.

೫೭. ಈಗ ವ್ಯತಿರೇಕದೃಷ್ಟಾಂತವನ್ನು ಕೊಡುತ್ತಾರೆ. ಜಾರಪುರುಷರೂ ವ್ಯಭಿಚಾರಿಣಿಯರಾದ ಸ್ತ್ರೀಯರೂ ಪರಸ್ಪರಪ್ರೀತಿಯನ್ನು ತೋರಿಸುವದು ತಮ ಗಾಗಿಯೇ ಹೊರತು ತಮ್ಮ ಪ್ರೀತಿಗೆ ಪಾತ್ರರೆಂದು ಹೇಳಿಕೊಳ್ಳುವವರಿಗಾಗಿ ಅಲ್ಲ ವೆಂಬುದು ಸ್ಪಷ್ಟವಾಗಿದೆ.

## ನಾಸ್ತ್ಯೇವ ತಸ್ಮಿಂಸ್ತತ್ಸುಖಸುಖಿತ್ವಮ್ ॥ ೨೪ ॥

೨೪. ಆ (ಪ್ರೇಮ)ದಲ್ಲಿ ಅವರು ಸುಖಪಟ್ಟರೆ ತಾನೂ ಸುಖಿ ಎಂಬುದು ಇರುವದೇ ಇಲ್ಲ.

೫೮. ಜಾರರ ಪ್ರೀತಿಯಲ್ಲಿ ಭಕ್ತಿಯ ಯಾವ ಲಕ್ಷಣವೂ ಇಲ್ಲದ್ದರಿಂದ ಅದು ಕೀಳುತೆರನಾದ ಪ್ರೇಮವೆಂಬುದನ್ನು ಇಲ್ಲಿ ಸ್ಫುಟಗೊಳಿಸಿರುತ್ತದೆ. ಅವರು ತಮಗೆ

ಪ್ರಿಯರಾದವರ ಸುಖವನ್ನು ಮಾತ್ರ ಲಕ್ಷ್ಯದಲ್ಲಿಟ್ಟಿರುವದಿಲ್ಲ; ತಮ್ಮ ಸುಖಕ್ಕಾಗಿಯೇ ಅವರನ್ನು ಪ್ರೀತಿಸುವರು. ಒಂದೊಂದು ವೇಳೆ ಅವರು ತಮ್ಮ ಪ್ರಿಯರಾಗಿದ್ದವರನ್ನು ಸುಖಪಡಿಸುವದಕ್ಕಾಗಿ ಸ್ವಾರ್ಥತ್ಯಾಗವನ್ನು ಮಾಡಿದಂತೆ ಕಾಣುವದುಂಟು; ಆದರೆ ಅವರಿಂದ ತಮಗೆ ಹಿಂದೆ ಆಗಿದ್ದ ಸುಖದ ಸ್ಮರಣೆಯಿಂದಲೇ ಅಥವಾ ಈಗಲೂ ಯಾವದೋ ಒಂದು ಪ್ರತ್ಯುಪಕಾರದ ನಿರೀಕ್ಷಣೆಯಿಂದಲೇ ಅವರು ಹಾಗೆ ಮತ್ತೊಬ್ಬರಿಗಾಗಿ ಸ್ವಲ್ಪ ಸ್ವಾರ್ಥವನ್ನೂ ತ್ಯಾಗಮಾಡಿದವರಂತೆ ತೋರ್ಪಡಿಸಿಕೊಳ್ಳುತ್ತಿರುತ್ತಾರೆಯೇ ಹೊರತು ಕೇವಲ ನಿಃಸ್ವಾರ್ಥತೆಯಿಂದ ಎಂದಿಗೂ ಮತ್ತೊಬ್ಬರನ್ನು ಪ್ರೀತಿಸುತ್ತಿರುವದಿಲ್ಲವೆಂಬುದು ನಿಶ್ಚಯ. ಒಟ್ಟಿನಲ್ಲಿ ಲೌಕಿಕರೆಲ್ಲರೂ ಅಂಗಡಿಯಿಟ್ಟುಕೊಂಡವರಂತೆ, ಅಥವಾ ಸಾಲತಂದವರಂತೆ ಯಾವದೋ ಒಂದು ನಿರೀಕ್ಷಣೆಯಿಂದ ಅಥವಾ ಮರೆಯಲಾಗದ ಉಪಕಾರದ ಸ್ಮರಣೆಯಿಂದಲೇ ಮತ್ತೊಬ್ಬರಿಗಾಗಿ ದುಡಿಯುವವರೇ ಹೊರತು ಎಂದಿಗೂ ಸಂಪೂರ್ಣವಾಗಿ ಸ್ವಾರ್ಥತ್ಯಾಗವನ್ನು ಮಾಡುವದಕ್ಕೆ ಸಿದ್ಧರಾಗಿರುವದಿಲ್ಲ. ಗೋಪಿಯರಂಥ ಭಕ್ತಶಿರೋಮಣಿಗಳು ಹಾಗಲ್ಲ; ಅವರು ಭಗವಂತನಿಗೆ ಆತ್ಮನಿವೇದನವನ್ನು ಮಾಡಿಬಿಟ್ಟಿರುತ್ತಾರೆ; ತಮ್ಮ ತನುಮನೋಧನಗಳು ತಮ್ಮವಲ್ಲವೆಂದೂ ಅವು ಭಗವಂತನಿಗೆ ಮುಡಿಪು ಎಂದೂ ಅವರ ನಿಶ್ಚಯ. ತಮ್ಮ ಶರೀರೇಂದ್ರಿಯಮನಸ್ಸುಗಳ ವ್ಯಾಪಾರದಿಂದ ಭಗವತ್ಪ್ರೀತಿಯಾದರೆ ಸಾಕು, ಅವರು ಆ ಆತ್ಮಾರ್ಪಣೆಗೆ ಬದಲಾಗಿ ಏನನ್ನೂ ಬಯಸದೆ ತಮಗೆ ಈ ಸೇವೆಯು ಸಿಕ್ಕಿತಲ್ಲ!- ಎಂದೇ ಆನಂದಿಸುತ್ತಿರುವರು.

## ೧೦. ಭಕ್ತಿಯೂ ಕರ್ಮಾದಿಗಳೂ

ಸಾ ತು ಕರ್ಮಜ್ಞಾನಯೋಗೇಭ್ಯೋಽಪ್ಯಧಿಕತರಾ ॥೨೫॥

೨೫. ಆ (ಭಕ್ತಿ)ಯಾದರೊ, ಕರ್ಮ- ಜ್ಞಾನ- ಯೋಗಗಳಿಗಿಂತಲೂ ಹೆಚ್ಚಿನದು.

೫೯. ಪರಭಕ್ತಿಯ ಸ್ವರೂಪ, ಅದರಿಂದಾಗುವ ಪ್ರಯೋಜನ, ಭಕ್ತರ ವ್ಯವಹಾರ, ಭಕ್ತರ ಲಕ್ಷಣ- ಇವನ್ನು ಈವರೆಗೆ ಚರ್ಚಿಸಲಾಗಿದೆ. ಈಗ ಶಾಸ್ತ್ರೋಕ್ತವಾದ ಕರ್ಮ, ಜ್ಞಾನ, ಯೋಗ- ಇವುಗಳಿಗೂ ಭಕ್ತಿಗೂ ಇರುವ ಸಂಬಂಧವನ್ನು ಕುರಿತ ವಿಚಾರಕ್ಕೆ ಪ್ರಾರಂಭಿಸಿರುತ್ತಾರೆ. ಶಾಸ್ತ್ರದಲ್ಲಿ ಇವುಗಳನ್ನೆಲ್ಲ ಕೊಂಡಾಡಿರುತ್ತದೆ.

(೧) '**अपाम सोममभृता अभूम**' (ತೈ. ಸಂ. ೩-೨-೫-೧೮) ಸೋಮವನ್ನು ಕುಡಿದು ಅಮೃತರಾದೆವು), '**अक्षय्यं ह वै चातुर्मास्ययाजिनः**

**सुकृतं भवति** ' (?) ಎಂದುಮುಂತಾಗಿ ಕೆಲವುವಾಕ್ಯಗಳಲ್ಲಿ ಕರ್ಮದಿಂದ ನಾಶರಹಿತವಾದ ಪುರುಷಾರ್ಥವೇ ದೊರಕುವದೆಂದು ಹೇಳಿರುತ್ತದೆ. (೨) '**ज्ञानादेव तु कैवल्यम्**' ( ? ) ಎಂದುಮುಂತಾದ ಸ್ಥಲಗಳಲ್ಲಿ ಜ್ಞಾನದಿಂದಲೇ ಮುಕ್ತಿಯಾಗುವದೆಂದು ವರ್ಣಿಸಿದೆ. (೩) '**न तस्य रोगो न जरा न मृत्युः प्राप्तस्य योगाग्निमयं शरीरम्**' (ಶ್ವೇ. ೨–೧೨) ಎಂದು ಯೋಗಾಗ್ನಿಮಯವಾದ ಶರೀರವನ್ನು ಪಡೆದುಕೊಂಡಾತನಿಗೆ ರೋಗವಿಲ್ಲ, ಮುಪ್ಪಿಲ್ಲ, ಮರಣವೂ ಇಲ್ಲ ಎಂದು ಯೋಗವನ್ನು ಕೆಲವು ಕಡೆಗಳಲ್ಲಿ ಕೊಂಡಾಡಿರುತ್ತದೆ. (೪) '**तँ ह देवमात्मबुद्धिप्रकाशं मुमुक्षुर्वै शरणमहं प्रपद्ये**' (ಶ್ವೇ. ೬–೧೮) ಆತ್ಮಬುದ್ಧಿಯನ್ನು ಬೆಳಗುವ ಆ ದೇವನನ್ನು ಮುಮುಕ್ಷುವಾಗಿ ಶರಣುಹೊಕ್ಕಿದ್ದೇನೆ ಎಂದುಮುಂತಾಗಿ ಭಗಚ್ಛರಣಾಗತಿರೂಪವಾದ ಭಕ್ತಿಯೇ ಮುಕ್ತಿಗೆ ಕಾರಣವೆಂದೂ ಕೆಲವು ವಚನಗಳಲ್ಲಿದೆ. ಹೀಗೆ ಶಾಸ್ತ್ರವು ಆಕುಲವಾಗಿ ತೋರುತ್ತಿರುವದರಿಂದ ಈ ಸಾಧನಗಳೊಳಗೆ ಯಾವದು ಹೆಚ್ಚಿನದು ?– ಎಂಬ ಪ್ರಶ್ನೆಯು ಎದ್ದುಕೊಳ್ಳಬಹುದು.

ಈ ಶಂಕೆಗೆ ಪರಿಹಾರವೇನೆಂದರೆ : ಭಗವದ್ಭಕ್ತಿಯೇ ಹೆಚ್ಚಿನದು. ಏಕೆಂದರೆ ಭಗವಂತನಲ್ಲಿ ಪ್ರೇಮವಿಲ್ಲದವನು ಭಗವದರ್ಥವಾಗಿ ಕರ್ಮವನ್ನು ಮಾಡುವದಕ್ಕೆ ಆಗುವದಿಲ್ಲ ; ಭಗವಂತನಲ್ಲಿ ಪ್ರೇಮವಿಲ್ಲದವನಿಗೆ ಭಗವಂತನ ಸ್ವರೂಪಜ್ಞಾನವು ಆಗುವಂತೆಯೇಇಲ್ಲ. **ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ । ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ॥"** (ಗೀ. ೧೦–೧೦) ಪ್ರೇಮಪೂರ್ವಕವಾಗಿ ನನ್ನನ್ನು ನಿರಂತರವೂ ಭಜಿಸುತ್ತಿರುವವರಿಗೆ ನನ್ನನ್ನು ಸೇರುವ ಜ್ಞಾನವನ್ನು ಕೊಡುತ್ತೇನೆ– ಎಂದು ಭಗವಂತನು ಹೇಳಿರುತ್ತಾನೆ. ಇನ್ನು **ಧ್ಯಾನಯೋಗದ** ವಿಷಯದಲ್ಲಿ ಭಗವಂತನು :

**ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।**
**ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ ॥**
ಗೀ. ೬–೪೬

'ತಪಸ್ವಿಗಳಿಗಿಂತಲೂ ಜ್ಞಾನಿಗಳಿಗಿಂತಲೂ ಕರ್ಮಿಗಳಿಗಿಂತಲೂ ಯೋಗಿಯು ಹೆಚ್ಚಿನವನು ; ಆದ್ದರಿಂದ ಅರ್ಜುನನೆ, ನೀನು ಯೋಗಿಯಾಗು' ಎಂದು ಧ್ಯಾನವೇ ಹೆಚ್ಚಿನದೆಂದು ಹೊಗಳಿದಬಳಿಕ–

**ಯೋಗಿನಾಮಪಿ ಸರ್ವೇಷಾಂ ಮದ್ಗತೇನಾನ್ತರಾತ್ಮನಾ ।**
**ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥**
ಗೀ. ೬–೪೭

'ಯೋಗಿಗಳಲ್ಲೆಲ್ಲ ಯಾವನು ನನ್ನಲ್ಲಿಯೇ ಅಂತಃಕರಣವನ್ನು ನಿಲ್ಲಿಸಿ ಶ್ರದ್ಧೆಯಿಂದ ಭಜಿಸುತ್ತಿರುವನೋ ಅವನೇ ಹೆಚ್ಚಿನ ಯೋಗಿಯು' -ಎಂದಿರುವದರಿಂದ ಭಕ್ತಿಯೇ ಎಲ್ಲಕ್ಕಿಂತ ಹೆಚ್ಚಿನದೆಂದು ಹೇಳಿದಂತೆ ಆಗಿರುತ್ತದೆ. ಪ್ರೇಮವಿಲ್ಲದೆ ಭಗವಂತನನ್ನು ಧ್ಯಾನಿಸುವದುತಾನೆ ಹೇಗೆ ? ಬರಿಯ ಧ್ಯಾನಕ್ಕೆ ಬಿಡಿಬಿಡಿಯ ದೇವತೆಗಳೂ ವಿಷಯವಾಗಿರಬಹುದು. ಆದರೆ ಭಕ್ತನಿಗೆ ಸರ್ವದೇವಾತ್ಮಕನಾದ ವಾಸುದೇವ ಭಗವಂತನೇ ವಿಷಯನಾಗಿರುತ್ತಾನೆ. ಆದ್ದರಿಂದ ಕರ್ಮಜ್ಞಾನಾದಿಗಳಿಗಿಂತಲೂ ಧ್ಯಾನವು ಹೆಚ್ಚಿನದು, ಧ್ಯಾನಯೋಗಗಳೆಲ್ಲಕ್ಕಿಂತಲೂ ಭಕ್ತಿಯೇ ಹೆಚ್ಚಿನದು ಎಂದು ಸಿದ್ಧವಾಯಿತು.

ಇಲ್ಲಿ ಒಂದು ಶಂಕೆ : 'ಜ್ಞಾನದಿಂದಲೇ ಅಲ್ಲವೆ, ಅಹಂಕಾರವು ಮಟ್ಟಾಗುವದು ? ಆದ್ದರಿಂದ ಜ್ಞಾನವೇ ಮುಕ್ತಿಗೆ ಕಾರಣವಾಗುವದೆಂದು ಶಾಸ್ತ್ರದಲ್ಲಿ ಹೇಳಿರುವದೇ ಸರಿಯಲ್ಲವೆ ?' ಎಂದು ಮಾಡಿದ ಆಕ್ಷೇಪಣೆಗೆ ಜ್ಞಾನಕ್ಕೂ ಭಕ್ತಿಗೂ ಭೇದವಿಲ್ಲವೆಂತಲೂ ಭಗವನ್ಮಯವಾಗಿರುವ ಜ್ಞಾನಾಕಾರವಾಗಿರುವ ವೃತ್ತಿಯು ಪ್ರೇಮಾಕಾರವಾಗಿಯೂ ಅವಶ್ಯವಾಗಿ ಇರುತ್ತದೆಯೆಂತಲೂ ಹಿಂದೆ (ಪು. ೨೭) ಪರಿಹಾರವನ್ನು ಹೇಳಿತ್ತು. ಈಗ ಭಕ್ತಿಯು ಜ್ಞಾನಕ್ಕಿಂತ ಹೆಚ್ಚಿನದೆಂದು ಈ ಸೂತ್ರದಲ್ಲಿ ಹೇಳಿದೆಯಲ್ಲ! ಇವೆರಡೂ ಒಂದಕ್ಕೊಂದು ವಿರುದ್ಧವಲ್ಲವೆ?-ಎಂದರೆ ಹಾಗೇನೂ ಇಲ್ಲ. ಏಕೆಂದರೆ ಭಕ್ತಿಯು ಗೌಣ, ಮುಖ್ಯ- ಎಂದು ಎರಡು ಬಗೆಯಾಗಿರುವಂತೆ ಜ್ಞಾನವೂ ಎರಡು ಬಗೆಯಾಗಿದೆ. ಪರಮಾತ್ಮನ ಸಾಕ್ಷಾದನುಭವಕ್ಕೆ ಜ್ಞಾನವೆಂದು ಹೆಸರು. ಇದೇ ಮುಖ್ಯಾರ್ಥದಲ್ಲಿ ಜ್ಞಾನ; ಆ ಜ್ಞಾನಕ್ಕೂ ಪರಭಕ್ತಿಗೂ ಭೇದವಿಲ್ಲ. ಇದರಂತೆ ವಸುರುದ್ರಾದಿತ್ಯಾದಿದೇವತೆಗಳನ್ನು ಧ್ಯಾನಿಸುವವರೂ ಯೋಗಿಗಳು ; ಅವರಿಗಿಂತ ಭಕ್ತಿಯೋಗಿಯು ಹೆಚ್ಚಿನವನು. ಅವನೂ ಮುಖ್ಯಾರ್ಥದಲ್ಲಿ ಯೋಗಿಯೇ. ಹೀಗೆಯೇ ಶಾಸ್ತ್ರಾರ್ಥವನ್ನು ನಿಶ್ಚಯಿಸಿಕೊಂಡು ಪರಮಾತ್ಮಸ್ವರೂಪವನ್ನು ತಿಳಿದುಕೊಂಡಿರುವ ಗೌಣಜ್ಞಾನಕ್ಕಿಂತ ಮುಖ್ಯಜ್ಞಾನಪರ್ಯಾಯವಾಗಿರುವ ಭಕ್ತಿಯು ಹೆಚ್ಚಿನದು ಎಂದು ಇಲ್ಲಿ ಹೇಳಿದೆ. ಆದ್ದರಿಂದ ಇಲ್ಲಿ ಯಾವ ವಿರೋಧವೂ ಇಲ್ಲ.

## ಫಲರೂಪತ್ವಾತ್ ॥ ೨೬ ॥

೨೬. ಏಕೆಂದರೆ (ಈ ಭಕ್ತಿಯು) ಫಲರೂಪವಾಗಿರುತ್ತದೆ.

೬೦. ಕರ್ಮಜ್ಞಾನಯೋಗಗಳಿಗೆ ಭಕ್ತಿಯು ಫಲರೂಪವಾಗಿರುತ್ತದೆ. ಹೇಗೆಂದರೆ **'ಯೋಗಿನಃ ಕರ್ಮ ಕುರ್ವನ್ತಿ ಸಙ್ಗಂ ತ್ಯಕ್ತ್ವಾತ್ಮಶುದ್ಧಯೇ'** (ಗೀ. ೫-೧೧) ಎಂದಿರುವಂತೆ ಕರ್ಮಯೋಗಕ್ಕೆ ಚಿತ್ತವು ನಿರ್ಮಲವಾಗುವದೇ

ಫಲವು ; 'ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇನ್ದ್ರಿಯಕ್ರಿಯಃ' (ಗೀ. ೬-೧೨) ಆಸನದಲ್ಲಿ ಕುಳಿತು ಮನಸ್ಸನ್ನು ಏಕಾಗ್ರವಾಗಿ ಮಾಡಿಕೊಂಡು ಇಂದ್ರಿಯಗಳನ್ನೂ ಮನಸ್ಸನ್ನೂ ಚಂಚಲವಾಗದಂತೆ ನಿಲ್ಲಿಸಿಕೊಳ್ಳುವದೇ ಯೋಗಕ್ಕೆ ಫಲವು ; 'ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಮ್' (ಗೀ. ೧೩-೧೧) ಎಂದಿರುವಂತೆ ಆತ್ಮಾನಾತ್ಮವಿಮರ್ಶೆಯನ್ನು ಮಾಡುತ್ತಾ ತತ್ತ್ವಜ್ಞಾನಾರ್ಥವಾದ ಮೋಕ್ಷವನ್ನು ಗುರಿಯಲ್ಲಿಟ್ಟುಕೊಂಡಿರುವದೇ ಸಂಶಯಗಳನ್ನು ಪರಿಹರಿಸಿಕೊಂಡ ಜ್ಞಾನಕ್ಕೆ ಫಲವು. ಹೀಗೆ ಕರ್ಮಜ್ಞಾನಯೋಗಗಳಿಗೆ ಅವಾಂತರ ಫಲಗಳು ಬೇರೆಬೇರೆಯಾಗಿದ್ದರೂ ಈ ಫಲಗಳನ್ನು ಪಡೆದುಕೊಂಡವರಿಗೇ ಪರಮಾತ್ಮನ ಪರಮಪ್ರೇಮರೂಪವಾದ ಭಕ್ತಿಯು ದಕ್ಕುವದು. ಆದ್ದರಿಂದ ಭಕ್ತಿಯು ಕರ್ಮಜ್ಞಾನಯೋಗಗಳಿಗೆಲ್ಲ ಪರಮಫಲವಾಗಿರುತ್ತದೆ.

ಹೀಗೆ ಪರಮಫಲವಾಗಿದ್ದರೂ ಹಿಂದೆ (ಪು. ೧೪, ೧೫) ಹೇಳಿರುವಂತೆ ಅದು ವೃತ್ತಿರೂಪವಲ್ಲದೆ ವೃತ್ತ್ಯುಪಲಕ್ಷಿತವಾದ ಆನಂದಸ್ವರೂಪನಾದ ಪರಮಾತ್ಮನಿಗಿಂತ ಅವ್ಯತಿರಿಕ್ತವಾಗಿರುವದರಿಂದ ಅಮೃತಸ್ವರೂಪವೂ ಆಗಿದೆ. ಹೀಗೆ ಪ್ರೇಮವೃತ್ತಿಯ ಕೊನೆಯಲ್ಲಿ ತೋರಿಕೊಳ್ಳುವದರಿಂದ ಭಕ್ತಿಯು ಫಲವೆಂದು ಹೇಳಿದಾಗಲೂ ಅದು ನಿತ್ಯವೇ ಆಗಿರುವದೆಂಬ ಸಿದ್ಧಾಂತಕ್ಕೆ ಯಾವ ಹಾನಿಯೂ ಇಲ್ಲ. ಆದ್ದರಿಂದ ಇಲ್ಲಿ **'ಫಲರೂಪ'** (ಫಲದಂತೆ ಇರುವದು) ಎಂದು ಸೂತ್ರದಲ್ಲಿ ಹೇಳಲಾಗಿದೆ.

ಈ ಅಭಿಪ್ರಾಯದಿಂದಲೇ ಭಗವಂತನು ಉದ್ಧವನನ್ನು ಕುರಿತು :

**ನ ಸಾಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಉದ್ಧವ ।**
**ನ ಸ್ವಾಧ್ಯಾಯಸ್ತಪಸ್ತ್ಯಾಗೋ ಯಥಾ ಭಕ್ತಿರ್ಮಮೋರ್ಜಿತಾ ॥**

ಭಾಗ. ೧೧-೧೪-೨೦

"ನನ್ನನ್ನು ಯೋಗವಾಗಲಿ ಸಾಂಖ್ಯ(ಜ್ಞಾನವಾಗಲಿ) ಕರ್ಮವಾಗಲಿ ಸಾಧಿಸಿಕೊಡಲಾರದು ; ಅಧ್ಯಯನ, ತಪಸ್ಸು, ತ್ಯಾಗ- ಇವುಗಳೂ ಸಾಧಿಸಿಕೊಡಲಾರವು. ನಿತ್ಯವಾದ ಭಕ್ತಿಯೊಂದೇ ನನ್ನನ್ನು ದೊರಕಿಸಿಕೊಟ್ಟೀತು" ಎಂದಿರುತ್ತಾನೆ.

ಈಶ್ವರಸ್ಯಾಪ್ಯಭಿಮಾನದ್ವೇಷಿತ್ವಾತ್ ದೈನ್ಯಪ್ರಿಯತ್ವಾಚ್ಚ ॥

೨೭. ಮತ್ತು ಈಶ್ವರನೂ ಅಹಂಕಾರಕ್ಕೆ ಹಗೆಯಾಗಿರುತ್ತಾನೆ ; ದೈನ್ಯಕ್ಕೆ ಪ್ರಿಯನಾಗಿರುತ್ತಾನೆ. ಆದ್ದರಿಂದಲೂ (ಭಕ್ತಿಯೇ ಹೆಚ್ಚಿನದು).

## ಈಶ್ವರಸ್ಯ

೭೧. ಭಕ್ತಿಯ ಲಕ್ಷಣಸೂತ್ರದಲ್ಲಿಕೂಡ 'ಅಸ್ಮಿನ್' (ಈತನಲ್ಲಿ) ಎಂಬ ಸರ್ವನಾಮವನ್ನು ಉಪಯೋಗಿಸಿರುವ ನಾರದರು ಇಲ್ಲಿ 'ಈಶ್ವರ'ನೆಂಬ ಶಬ್ದವನ್ನು ಪ್ರಯೋಗಿಸಿರುವದಕ್ಕೆ ಕಾರಣವುಂಟು. ಏಕೆಂದರೆ ಇನ್ನುಮೇಲೆ ಪರಭಕ್ತಿಯ ಸಾಧನಗಳನ್ನು ಹೇಳುವದಕ್ಕೆ ಮೊದಲುಮಾಡುತ್ತಾರೆ. ಸಾಧನದಶೆಯಲ್ಲಿ ಪರಮಾತ್ಮನಿಗೂ ಭಕ್ತನಿಗೂ ಭೇದವನ್ನಿಟ್ಟುಕೊಂಡೇ ಇರಬೇಕಾಗುತ್ತದೆ. ಭಗವಂತನು ಸ್ವರೂಪದಿಂದ ಅನಂತನೇ- ಎಂದರೆ ದೇಶಕಾಲವಸ್ತುಪರಿಚ್ಛೇದಗಳಿಲ್ಲದವನೇ- ಆಗಿದ್ದರೂ ವ್ಯವಹಾರದೃಷ್ಟಿಯಿಂದ ಅನೇಕಕರ್ತೃಭೋಕ್ತೃಗಳಿಂದೊಡಗೂಡಿ ನಾಮರೂಪಕರ್ಮಾತ್ಮಕವಾಗಿರುವ ಈ ಜಗತ್ತು ತೋರಿಕೊಳ್ಳುವದಕ್ಕೆ, ಇರುವದಕ್ಕೆ, ಮತ್ತು ಕೊನೆಯಲ್ಲಿ ಕಾಣದಂತೆ ಹೋಗಿಬಿಡುವದಕ್ಕೆ ಆಧಾರವಾಗಿರುವ ಪರಬ್ರಹ್ಮರೂಪದವನೆಂದು :

**यतो वा इमानि भूतानि जायन्ते । येन जातानि जीवन्ति । यत्प्रयन्त्यभिसंविशन्ति । तद्विजिज्ञासस्व । तद् ब्रह्मेति ॥** ತೈ. ೩–೧

ಎಂಬುದೇ ಮುಂತಾದ ಶ್ರುತಿಗಳು ಸಾರುತ್ತಿರುವವು. ಹೀಗೆ ಜಗತ್ತಿನ ಜನ್ಮಸ್ಥಿತಿಪ್ರಲಯಗಳಿಗೆ ಆಧಾರನಾಗಿರುವ ಭಗವಂತನನ್ನು ಸರ್ವಜ್ಞನೂ ಸರ್ವಶಕ್ತನೂ ಆದ 'ಈಶ್ವರ' ಎಂದು ಶ್ರುತಿಸ್ಮೃತಿಗಳಲ್ಲಿ ವ್ಯವಹರಿಸಲಾಗಿದೆ. ಗೌಣಭಕ್ತಿಗೆ ಈ ಜೀವೇಶ್ವರವಿಭಾಗವು ಅವಶ್ಯವೆಂದು ತಿಳಿಯಿಸುವದಕ್ಕಾಗಿ ಇಲ್ಲಿ ಈಶ್ವರಶಬ್ದವನ್ನು ಸೂತ್ರಕಾರರು ಬಳಸಿರುತ್ತಾರೆ.

ಸರಿಯಾಗಿ ನೋಡಿದರೆ ಈಶ್ವರನಿಗೆ ಹಗೆಗಳಿಲ್ಲ, ಪ್ರಿಯರಾದವರೂ ಇಲ್ಲ. ಭಗವಂತನು ಅರ್ಜುನನಿಗೆ ಹೀಗೆಂದು ಹೇಳಿರುತ್ತಾನೆ :

**ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।**
**ಯೇ ಭಜನ್ತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥**
ಗೀ. ೯–೨೯

"ನಾನು ಸಮಸ್ತಪ್ರಾಣಿಗಳ ವಿಷಯಕ್ಕೂ ಸಮನಾಗಿರುವೆನು ; ನನಗೆ ಹಗೆಯಿಲ್ಲ, ಪ್ರಿಯನೂ ಇಲ್ಲ. ಆದರೆ ಯಾರು ನನ್ನನ್ನು ಭಕ್ತಿಯಿಂದ ಭಜಿಸುತ್ತಿರುವರೋ ಅವರು ನನ್ನಲ್ಲಿರುವರು, ನಾನೂ ಅವರಲ್ಲಿರುವೆನು." ಬೆಂಕಿಯ ಸಮೀಪಕ್ಕೆ ಬಂದವರಿಗೆ ಅದರ ಸನ್ನಿಧಿಯಿಂದ ಶೀತನಿವಾರಣೆಯಾಗುವದು, ದೂರವಿದ್ದವರಿಗೆ ಆಗುವದಿಲ್ಲ; ಇದರಂತೆಯೇ ಯಾರುಯಾರು ಭಗವಂತನನ್ನು ಪ್ರೇಮದಿಂದ ಭಜಿಸುವರೋ ಅವರು ಭಗವತ್ಸ್ವರೂಪರೇ ಆಗಿಬಿಡುತ್ತಾರಾದ್ದರಿಂದ ಅವರಿಗೆ ಮಾತ್ರ ಭಗವಂತನ ಅನುಗ್ರಹವಾಗುವದು.

ಆದರೆ ಯಾರು ಅಹಂಕಾರದಿಂದ ತಾವು ಭಗವಂತನಿಗಿಂತ ಬೇರೆಯಾಗಿರುವ ವ್ಯಕ್ತಿಗಳೆಂದು ಪರಿಚ್ಛಿನ್ನಬುದ್ಧಿಯುಳ್ಳವರಾಗಿರುವರೋ ಅಂಥವರಿಗೆ ಭಗವಂತನು ಸರ್ವವ್ಯಾಪಿಯಾಗಿದ್ದರೂ ಅವರ ಪಾಲಿಗೆ ದೂರನಾಗಿರುವದರಿಂದ ಅವರು ತಮ್ಮ ಪಾಪಫಲವನ್ನು ಅನುಭವಿಸಬೇಕಾಗುವದು. ಇದನ್ನೇ 'ಭಗವಂತನು ಅಭಿಮಾನ ದ್ವೇಷಿಯು'– ಎಂಬ ಮಾತುಗಳಿಂದ ಸೂತ್ರದಲ್ಲಿ ಹೇಳಿರುತ್ತದೆ.

ತಸ್ಯಾ ಜ್ಞಾನಮೇವ ಸಾಧನಮಿತ್ಯೇಕೇ ॥ ೨೮ ॥

೨೮. ಆ (ಭಕ್ತಿಗೆ) ಜ್ಞಾನವೇ ಸಾಧನವೆಂದು ಕೆಲವರು.

ಅನ್ಯೋನ್ಯಾಶ್ರಯತ್ವಮಿತ್ಯನ್ಯೇ ॥ ೨೯ ॥

೨೯. ಅನ್ಯೋನ್ಯಾಶ್ರಯತ್ವವೆಂದು ಮತ್ತೆ ಕೆಲವರು.

೬೨. ಕರ್ಮಜ್ಞಾನಯೋಗಗಳಿಗೆ ಭಕ್ತಿಯು ಫಲವೆಂದದ್ದರಿಂದಲೇ ಅವು ಮೂರೂ ಭಕ್ತಿಗೆ ಸಾಧನಗಳೆಂದು ಹೇಳಿದಂತೆಯೇ ಆಯಿತಾದರೂ ಇವುಗಳೊಳಗೆ ಯಾವದು ಮುಖ್ಯಸಾಧನವೆಂಬುದನ್ನು ಗೊತ್ತುಪಡಿಸುವದಕ್ಕಾಗಿ ಈ ಪ್ರಕರಣವು ಬಂದಿರುತ್ತದೆ.

ತಿಳಿಯದೆ ಇರುವ ವಸ್ತುವಿನಲ್ಲಿ ಯಾರಿಗೂ ಪ್ರೇಮವುಂಟಾಗಲಾರದು ; ತಿಳಿವು ವಸ್ತುವಿನ ಸ್ವರೂಪಾದಿಗಳ ಬಗೆಗೆ ಮಾಡಿದ ವಿಚಾರದಿಂದಲೇ ಹುಟ್ಟುತ್ತದೆ. ಆದ್ದರಿಂದ ವಿಚಾರಪೂರ್ವಕವಾಗಿ ಮೊದಲು ಶಾಸ್ತ್ರಾರ್ಥವನ್ನು ನಿಶ್ಚಯಿಸಿಕೊಳ್ಳುವ ಜ್ಞಾನವು ಅವಶ್ಯವಾಗಿರುತ್ತದೆ ಎಂದು ಕೆಲವರ ಮತವು. ಇವರ ದೃಷ್ಟಿಯಲ್ಲಿ ಜ್ಞಾನವೆಂದರೆ ಗೌಣಜ್ಞಾನವೇ ಎಂಬುದು ಸ್ಪಷ್ಟ. ಏಕೆಂದರೆ ನಾವು ಹಿಂದೆಯೇ (ಪು. ೨೭) ಹೇಳಿರುವಂತೆ ಪರಜ್ಞಾನವೂ ಪರಭಕ್ತಿಯೂ ಒಂದೇ ಆಗಿರುತ್ತದೆ.

**ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।**
**ಇತಿ ಮತ್ವಾ ಭಜನ್ತೇ ಮಾಂ ಬುಧಾ ಭಾವಸಮನ್ವಿತಾಃ ॥** ಗೀ. ೧೦–೮

"ನಾನೇ ಎಲ್ಲಕ್ಕೂ ಕಾರಣನು, ನನ್ನಿಂದಲೇ ಜಗತ್ತೆಲ್ಲವೂ ವ್ಯಾಪಾರಮಾಡುತ್ತಿರುವದು– ಎಂದರಿತುಕೊಂಡು ವಿವೇಕಿಗಳು ಭಾವಪೂರ್ಣರಾಗಿ ನನ್ನನ್ನು ಭಜಿಸುತ್ತಾರೆ" ಎಂದು ಭಗವಂತನು ಹೇಳಿರುವ ವಾಕ್ಯವು ಇವರಿಗೆ ಪ್ರಮಾಣವು.

೬೩. ಪ್ರೇಮವಿಲ್ಲದ ವಸ್ತುವನ್ನು ಕುರಿತು ಯಾರೂ ವಿಚಾರಮಾಡುವದಿಲ್ಲ ; ವಿಚಾರಮಾಡಿ ಅರಿತುಕೊಳ್ಳದ ವಿಷಯದಲ್ಲಿ ಯಾರಿಗೂ ಪ್ರೇಮವುಂಟಾಗುವದಿಲ್ಲ. ಆದ್ದರಿಂದ ಒಂದು ದೃಷ್ಟಿಯಿಂದ ನೋಡಿದರೆ ಜ್ಞಾನದಿಂದ ಪ್ರೇಮವುಂಟಾಗು

ವದು ; ಇನ್ನೊಂದು ದೃಷ್ಟಿಯಿಂದ ನೋಡಿದರೆ ಪ್ರೇಮದಿಂದ ಜ್ಞಾನವುಂಟಾಗುವದು. ಪ್ರೇಮದಿಂದಲೇ ಜ್ಞಾನವುಂಟಾಗುವದೆಂಬುದಕ್ಕೂ ಭಗವಂತನ ವಚನದ ಆಧಾರವಿದೆ.

**ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।**
**ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥**
**ತೇಷಾಮೇವಾನುಕಮ್ಪಾರ್ಥಮಹಮಜ್ಞಾನಜಂ ತಮಃ ।**
**ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥**

ಗೀ. ೧೦-೧೦, ೧೧

'ಯಾರು ನನ್ನನ್ನೇ ಭಜಿಸುತ್ತಿರುವರೋ ಅವರಿಗೆ ಯಾವ ಬುದ್ಧಿಯೋಗದಿಂದ ನನ್ನನ್ನು ಸೇರಬಹುದೋ ಅಂಥ ಜ್ಞಾನಯೋಗವನ್ನು ಕೊಡುವೆನು. ಅವರ ಮೇಲಿನ ಮರುಕದಿಂದಲೇ ಜ್ಞಾನದೀಪದಿಂದ ಅವರ ಅಜ್ಞಾನವನ್ನು ನೀಗಿಸುವೆನು' ಎಂದಿರುವದರಿಂದ ಭಕ್ತಿಯಿಂದ ಜ್ಞಾನವುಂಟಾಗುವದೆಂಬುದಕ್ಕೂ ಆಧಾರವಿಲ್ಲದೆಇಲ್ಲ. ಹೀಗೆ ಭಕ್ತಿಜ್ಞಾನಗಳೊಳಗೆ, ಯಾವದು ಮೊದಲು, ಯಾವದು ಆಮೇಲೆ ?- ಎಂಬುದನ್ನು ನಿರ್ಣಯಿಸುವದಕ್ಕೆ ಆಗುವದಿಲ್ಲ. ಇವೆರಡೂ ಒಂದರಿಂದೊಂದು ಬೆಳಯುತ್ತಿರುವವು- ಎಂಬುದು ಮತ್ತೆ ಕೆಲವರ ಮತ.

## ಸ್ವಯಂಫಲರೂಪತೇತಿ ಬ್ರಹ್ಮಕುಮಾರಃ ॥ ೩೦ ॥

೩೦. (ಆ ಭಕ್ತಿಗೆ) ಸ್ವಯಂಫಲರೂಪತ್ವವಿರುತ್ತದೆ- ಎಂದು ಬ್ರಹ್ಮಕುಮಾರನು (ತಿಳಿಸಿರುತ್ತಾನೆ).

೭೪. ಯಾರು ಕೇವಲ ಬುದ್ಧಿಶರಣರಾಗಿ ವಿಚಾರಮಾಡುವರೋ ಅವರಿಗೆ 'ನಾನು ಅರಿತೆನು' ಎಂಬ ಅಭಿಮಾನವುಂಟಾಗುವ ಅಪಾಯವಿರುತ್ತದೆ. ಆದರೆ ಪರಮಾತ್ಮನು ಎಲ್ಲರಿಗೂ ಆತ್ಮನೇ ಆಗಿರುತ್ತಾನಾದ್ದರಿಂದ ಅವನನ್ನು ಅರಿತುಕೊಳ್ಳುವ ಶಕ್ತಿಯು ಯಾರಿಗೂ ಬರುವಂತಿಲ್ಲ. ಸರ್ವಸಾಕ್ಷಿಯಾದ ಪರಮಾತ್ಮನನ್ನು ಏತರಿಂದ ಅರಿಯುವದಕ್ಕಾದೀತು ? '**विज्ञातारमरे केन विजानीयात् ?**' (ಬೃ. ೨-೪-೧೪), 'ಎಲೆ ಎಲ್ಲವನ್ನೂ ತನ್ನ ವಿಜ್ಞಾನಸ್ವರೂಪದಿಂದ ಬೆಳಗುವ ಆ ಪರಮಾತ್ಮನನ್ನು ಏತರಿಂದತಾನೆ ಅರಿತುಕೊಂಡಾನು ?'- ಎಂದು ಮೈತ್ರೇಯಿಗೆ ಯಾಜ್ಞವಲ್ಕ್ಯರು ಹೇಳಿರುತ್ತಾರೆ. ಆದರೆ ಯಾರು ಭಗವಂತನಿಗೇ ಶರಣುಹೊಗುವರೋ ಅವರಿಗೆ ಭಗವಂತನ ಸಾಕ್ಷಾದನುಭವವು ಆತನ ಅನುಗ್ರಹದಿಂದಲೇ ದೊರಕುವದು ನಿಶ್ಚಯ. ಇದಲ್ಲದೆ ಬಹಿರ್ಮುಖರಾದವರಿಗೆ ಭಗವಂತನ ತತ್ತ್ವವನ್ನು ಅರಿಯಬೇಕೆಂಬ ಮನಸ್ಸಿನ ಒಲವಾದರೂ ತಟ್ಟನೆ ಹೇಗೆ ಬರಬೇಕು ? ಆದ್ದರಿಂದಲೇ ಭಗವಂತನು ಉದ್ಧವನನ್ನು ಕುರಿತು ಉಪದೇಶಮಾಡುವಾಗ :

**ಯೋಗಾಸ್ತ್ರಯೋ ಮಯಾ ಪ್ರೋಕ್ತಾ ನೃಣಾಂ ಶ್ರೇಯೋವಿಧಿತ್ಸಯಾ ।**
**ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋಽನ್ಯೋಽಸ್ತಿ ಕುತ್ರಚಿತ್ ॥**
**ನಿರ್ವಿಣ್ಣಾನಾಂ ಜ್ಞಾನಯೋಗೋ ನ್ಯಾಸಿನಾಮಿಹ ಕರ್ಮಸು ।**
**ತೇಷ್ವನಿರ್ವಿಣ್ಣಚಿತ್ತಾನಾಂ ಕರ್ಮಯೋಗಸ್ತು ಕಾಮಿನಾಮ್ ॥**
**ಯದೃಚ್ಛಯಾ ಮತ್ಕಥಾದೌ ಜಾತಶ್ರದ್ಧಸ್ತು ಯಃ ಪುಮಾನ್ ।**
**ನ ನಿರ್ವಿಣ್ಣೋ ನಾತಿಸಕ್ತೋ ಭಕ್ತಿಯೋಗೋಽಸ್ಯ ಸಿದ್ಧಿದಃ ॥**

ಭಾಗ· ೧೧–೨೦–೬, ೭, ೮

ಎಂದಿರುತ್ತಾನೆ. ಯಾರು ವಿಷಯಗಳಲ್ಲಿ ವಿರಕ್ತರಾಗಿ ಕರ್ಮಸಂನ್ಯಾಸವನ್ನು ಮಾಡಿರುತ್ತಾರೋ ಅವರಿಗೆ ಜ್ಞಾನಯೋಗ ; ವೈರಾಗ್ಯವಿಲ್ಲದವರಿಗೆ ಕರ್ಮಯೋಗ; ಇವೆರಡೂ ಇಲ್ಲದೆ ಹೇಗೋ ಭಗವತ್ಕಥಾಶ್ರವಣಾದಿಗಳಲ್ಲಿ ಶ್ರದ್ಧೆಯುಂಟಾದವರಿಗೆ ಭಕ್ತಿ. ಹೀಗೆ ಯಾವದೋ ಸುಯೋಗದಿಂದ ಭಕ್ತಿಯಲ್ಲಿ ಪ್ರಾರಂಭವಾದ ರುಚಿಯು ಭಕ್ತಿಯಿಂದಲೇ ಬೆಳೆದು ಭಕ್ತಿಯಲ್ಲಿ ಕೊನೆಗಾಣುವದು ಹೆಚ್ಚು ಸ್ವಾಭಾವಿಕವಾಗಿದೆಯೇ ಹೊರತು ಮತ್ತೆಯಾವದೂ ಅಷ್ಟು ಸುಲಭವಾಗಿ ಭಕ್ತಿಗೆ ಪ್ರಧಾನಸಾಧನವಾಗುವದು ಸಂಭಾವಿತವಾಗಿಲ್ಲ.

ಲೋಕದಲ್ಲಿ ಯಾವದಾದರೂ ವಸ್ತುವನ್ನು ಹುಡುಕಬೇಕಾದರೆ ಅದು ನಮಗೆ ಬೇಕಾಗಿರಬೇಕು. ಅದ್ದರಿಂದ ಆ ಅನ್ವೇಷಣವು ಪ್ರೇಮದಿಂದ ಪ್ರಾರಂಭವಾಗಬಹುದು ; ಆದರೆ ಅದು ಪ್ರೇಮದಿಂದಲೇ ಬೆಳೆಯುವದೆಂಬ ಭರವಸೆಯಿಲ್ಲ ; ಪ್ರೇಮದಿಂದ ಹುಟ್ಟಿದ ಕೆಲಸಗಳೂ ಜುಗುಪ್ಸೆಯಲ್ಲಿ ಕೊನೆಗಾಣುವದುಂಟು. ಇಂಥದ್ದೊಂದು ವಸ್ತು ಒಳ್ಳೆಯದೆಂಬ ಭಾವನೆ ಬಂದರೂ ಅದನ್ನು ಪಡೆಯುವದಕ್ಕಾಗಿ ಪ್ರಯತ್ನಿಸುತ್ತಿರುವಾಗ ಅದರಲ್ಲಿ ಕೆಲವು ದೋಷಗಳು ಇವೆಯೆಂದು ಕಂಡುಬಂದರೆ ಆ ಪ್ರಯತ್ನವನ್ನು ಅಲ್ಲಿಗೇ ನಿಲ್ಲಿಸಿಬಿಡಬಹುದು ; ಅಥವಾ ಅದು ಸಿಕ್ಕಿದಮೇಲೆ ಅದರಲ್ಲಿ ಮೊದಲಿದ್ದ ಮೋಹವು ಹೋಗಿಬಿಡಬಹುದು. ಆದರೆ ಭಕ್ತಿಯ ವಿಷಯವು ಹಾಗಿಲ್ಲ. ಅದು ಹುಟ್ಟುವದೇ ತಡ ; ಪ್ರೇಮದಿಂದ ಅದರ ಸವಿಯು ಹೆಚ್ಚುತ್ತಾಹೆಚ್ಚುತ್ತಾ ಅದರಲ್ಲಿ ಪ್ರೇಮವು ಇನ್ನೂ ಬಲವಾಗುವದು. ಕೊನೆಗೆ ಅಡ್ಡಿಯಾಗಿರುವ ಅಹಂಕಾರವು ಹೋಗಿ ಅನಂತಪ್ರೇಮಸಾಗರನಾದ ಪರಮಾತ್ಮನಲ್ಲಿಯೇ ಸೇರಿಹೋಗುವೆವು.

೬೫. ಭಗವಂತನ ಕಥಾಶ್ರವಣಾದಿಗಳಲ್ಲಿ ಪ್ರೀತಿಯುಂಟಾಗಿ ಅದರಲ್ಲಿಯೇ ನಿರತನಾದವನಿಗೆ ಬಾಹ್ಯಸಾಧನಕ್ಕಿಂತಲೂ ಅಂತರಸಾಧನವು ಹೆಚ್ಚೆಂಬುದು ಮನಸ್ಸಿನಲ್ಲಿ ಮಿಂಚುವದು. ಆ ಸಾಧನದಲ್ಲಿ ಸವಿಯು ಇನ್ನೂ ಹೆಚ್ಚಿದರೆ ಏಕಾಂತಸ್ಥಲದಲ್ಲಿದ್ದುಕೊಂಡು ಭಗವಂತನನ್ನು ಧ್ಯಾನಿಸಬೇಕೆಂಬ ಕುತೂಹಲವುಳ್ಳವನಾಗುವನು.

ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾಽಽತ್ಮಾನಂ ನಿಯಮ್ಯ ಚ ।
ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ॥
ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥
ಅಹಙ್ಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ ।
ವಿಮುಚ್ಯ ನಿರ್ಮಮಃ ಶಾನ್ತೋ ಬ್ರಹ್ಮಭೂಯಾಯ ಕಲ್ಪತೇ ॥

ಭ. ಗೀ. ೧೮–೫೧, ೫೨, ೫೩

ಎಂದಿರುವಂತೆ ಚಿತ್ತಶುದ್ಧಿಯಿಂದ ನಿರ್ಮನುಸ್ವಭಾವದವನಾಗಿ ಅಂತಃಕರಣವನ್ನು ಬಿಗಿಹಿಡಿದುಕೊಂಡು ಬಾಹ್ಯವಿಷಯಗಳನ್ನು ತ್ಯಜಿಸಿ ರಾಗದ್ವೇಷಗಳಿಲ್ಲದೆ ಏಕಾಂತ ವಾಸದಲ್ಲಿದ್ದುಕೊಂಡು ತ್ರಿಕರಣಸಂಯಮಪೂರ್ವಕವಾಗಿ ನಿತ್ಯವೂ ಭಗವದ್ಧ್ಯಾನ ವನ್ನೇ ಮಾಡುತ್ತಾ ಸುವಿರಕ್ತನಾಗಿ ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ, ತನ್ನದೆಂಬ ಅಭಿಮಾನ– ಇವುಗಳನ್ನೆಲ್ಲ ಪರಿಹರಿಸಿಕೊಂಡು ಬ್ರಹ್ಮಸ್ವರೂಪನೇ ಆಗಿಬಿಡುವನು.

ಇದೇ ಪರವಿಜ್ಞಾನವು. ಆಗ–

ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಙ್ಕ್ಷತಿ ।
ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್ ॥
ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನನ್ತರಮ್ ॥

ಗೀ. ೧೮–೫೪, ೫೫

ಯಾವನು ಪರಜ್ಞಾನಿಯೋ ಅವನೇ ಪರಭಕ್ತನು. ಅವನಿಗೆ ಶೋಕವಿಲ್ಲ, ಕಾಮ ವಿಲ್ಲ ; ಎಲ್ಲೆಲ್ಲಿಯೂ ಎಲ್ಲಾ ಜೀವರಲ್ಲಿಯೂ ಭಗವಂತನೇ ಕಾಣಿಸುತ್ತಿರುವನು. ಅವನಿಗೆ ಎಲ್ಲೆಲ್ಲಿಯೂ ಭಗವತ್ಪ್ರೇಮವಲ್ಲದೆ ಮತ್ತೊಂದು ಮನೋವೃತ್ತಿಯಿರುವ ಸಂಭವವೇ ಇರುವದಿಲ್ಲ. ಅಂಥ ಜ್ಞಾನಿಭಕ್ತನಿಗೆ ಪರಮಾತ್ಮನೇ ಪರಮಾರ್ಥವು, ಪರಮಾತ್ಮನೇ ಎಲ್ಲವೂ –ಎಂಬ ತತ್ತ್ವಾನುಭವವುಂಟಾಗಿ ಅವನು ಭಗವಂತ ನಲ್ಲಿಯೇ ಬೆರೆತುಹೋಗಿಬಿಟ್ಟಿರುತ್ತಾನೆ.

ಹೀಗೆ ಗೌಣಭಕ್ತಿಯಿಂದ ಮೊದಲಾಗಿ ಬೆಳೆದುಕೊಂಡ ಭಕ್ತಿಯು ಪರಭಕ್ತಿ ಯಾಗಿ ಪರಿಪಕ್ವವಾಗುತ್ತಿರುವದರಿಂದಲೂ ಇಲ್ಲಿ ಜ್ಞಾನಭಕ್ತಿಗಳು ಎರಡೂ ಸಮರಸ ವಾಗಿ ಒಂದೇ ತತ್ತ್ವವಾಗಿಬಿಟ್ಟಿರುವದರಿಂದಲೂ ಜ್ಞಾನವೇ ಸಾಧನ, ಅಥವಾ ಜ್ಞಾನಭಕ್ತಿಗಳು ಅನ್ಯೋನ್ಯಾಶ್ರಿತ– ಎಂಬ ವಿಭಕ್ತಜ್ಞಾನವು ಅಡಗಿ ಎಲ್ಲವೂ ಭಕ್ತಿಯೇ ಆಗಿಬಿಟ್ಟಿರುವದು.

ರಾಜಗೃಹಭೋಜನಾದಿಷು ತಥೈವ ದೃಷ್ಟತ್ವಾತ್ ॥ ೩೧ ॥

೩೧. ಏಕೆಂದರೆ ಅರಮನೆ, ಊಟ- ಮುಂತಾದವುಗಳಲ್ಲಿ ಹಾಗೆಯೇ ಕಂಡುಬರುತ್ತದೆ.

ನ ತೇನ ರಾಜಪರಿತೋಷಃ ಕ್ಷುಚ್ಛಾನ್ತಿ(ಕ್ಷುಧಾ ಶಾನ್ತಿ)ರ್ವಾ॥

೩೨. ಅದರಿಂದ ರಾಜನಿಗೆ ಪರಿತೋಷವಾಗಲಿ ಹಸಿವು ಅಡಗುವದಾಗಲಿ ಇಲ್ಲ.

೬೬. ಗೌಣಜ್ಞಾನ, ಗೌಣಭಕ್ತಿ- ಇವುಗಳೊಳಗೆ ಪರಭಕ್ತಿಗೆ ನಿಯಮದಿಂದ ಸಾಧನವಾಗತಕ್ಕದ್ದು ಗೌಣಭಕ್ತಿಯೇ ಎಂಬುದು ಲೋಕಸಿದ್ಧವಾದ ದೃಷ್ಟಾಂತಗಳಿಂದಲೂ ಏರ್ಪಡುತ್ತದೆ. ಹೇಗೆಂದರೆ ಒಬ್ಬನಿಗೆ ಅರಮನೆಯ ಜ್ಞಾನವಾದಮಾತ್ರದಿಂದ ಅರಸನಿಂದಾಗುವ ಫಲವು ದೊರಕಲಾರದು. ಅರಸನನ್ನು ಸೇವಿಸಿ ಅವನಿಗೆ ಸಂತೋಷವನ್ನುಂಟುಮಾಡಿದಮೇಲೆಯೇ ಅರಸನು ಸೇವಕನಿಗೆ ಇಷ್ಟವಾದ ಫಲವನ್ನು ಕೊಟ್ಟಾನು. ಇದರಂತೆ ಶಾಸ್ತ್ರಾದಿಗಳ ಪರಿಚಯದಿಂದ ಪರಮಾತ್ಮಸ್ವರೂಪದ ಜ್ಞಾನವನ್ನು ಸಂಪಾದಿಸಿಕೊಂಡಮಾತ್ರದಿಂದ ಪರಮಾತ್ಮನಿಗೆ ಸಂತೋಷವಾಗಲಾರದು. ಯಾವಾತನಿಗೆ ಪರಮಾತ್ಮನಲ್ಲಿಯೇ ಪ್ರೇಮವಿರುವದೋ, ಅವನಿಗೇ ಭಗವಂತನ ಅನುಗ್ರಹವಾದೀತೆಂದು ನಿರೀಕ್ಷಿಸಬಹುದಾಗಿದೆ. **'ಯೇ ಭಜನ್ತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥'** ಎಂಬ ಗೀತಾವಚನವು ಜ್ಞಾನಿಭಕ್ತನ ವಿಷಯವೆಂಬುದು ನಿಜವಾದರೂ ಭಗವಂತನನ್ನು ಯಾವದೇ ನಿಮಿತ್ತದಿಂದ ಭಾವಿಸಿದರೂ ಭಗವಂತನ ಅನುಗ್ರಹವಾಗುವದೆಂಬುದರಲ್ಲಿ ಸಂಶಯವಿಲ್ಲ. ಧಣಿಯಾದವನು ತನ್ನನ್ನು ಎಡೆಬಿಡದೆ ಸೇವೆಮಾಡುವ ಭೃತ್ಯನಿಗೆ – ಅವನು ಕೇಳುವದಕ್ಕಿಂತಲೂ ಹೆಚ್ಚಿನ ಫಲವನ್ನು ಕೊಟ್ಟು- ಅನುಗ್ರಹಿಸುವದು ಲೋಕದಲ್ಲಿ ಕಂಡಿರುತ್ತದೆ. ಸೇವಕನಿಗೆ ಒಡೆಯನ ಜ್ಞಾನವಿರಲಿ ಇಲ್ಲದಿರಲಿ, ಅವನನ್ನು ಎಡೆಬಿಡದೆ ಸೇವಿಸುವದರಿಂದ ಆಗುವ ಫಲವು ಎಂದಿಗೂ ಅವನ ಸ್ವರೂಪಜ್ಞಾನದಿಂದ ಆಗಲಾರದೆಂಬುದು ಸುಸ್ಪಷ್ಟ. ಭಗವಂತನು ದುರಾರಾಧ್ಯನಾದ ಧನಿಯೇನೂ ಅಲ್ಲವಾದರೂ ಪ್ರೇಮವು ಪ್ರೀತಿಸುವ ವಿಷಯದಲ್ಲಿ ಪ್ರೀತಿಸುವವನನ್ನು ಒಂದಾಗಿಸುವದೆಂಬ ನಿಯಮವಿರುವದರಿಂದ ಭಗವಂತನಲ್ಲಿ ಗೌಣಭಕ್ತನು ಕ್ರಮಕ್ರಮವಾಗಿ ಒಂದಾಗಿ ಆನಂದಿಸುವ ಪರಭಕ್ತಿಯನ್ನು ಪಡೆದುಕೊಳ್ಳುವನೆಂಬುದು ಸ್ವಭಾವಿಕವಾಗಿದೆ.

ಹೀಗೆಯೇ ಭೋಜ್ಯಪದಾರ್ಥಗಳ ಗುಣಗಳನ್ನು ಎಷ್ಟು ಅರಿತುಕೊಂಡರೂ ಹಸಿವು ಅಡಗುವದಿಲ್ಲ ; ಭೋಜನವನ್ನು ಮಾಡುವದಕ್ಕೆ ಆರಂಭಿಸುವದರಿಂದಲೇ

ಆ ಭೋಜ್ಯದಲ್ಲಿ ಪ್ರೀತಿಯೂ ಹೆಚ್ಚುವದು, ಹಸಿವೂ ಅಡಗುವದು. ಇದರಂತೆ ಭಗವಂತನ ಪ್ರೇಮವೆಂಬುದು ಭಗವತ್ಸ್ವರೂಪದ ಅನುಭವವೇ ಆಗಿರುವದರಿಂದ ಭಗವಂತನ ಸೇವೆಯಿಂದಲೇ ಆತನ ಆನಂದಸ್ವರೂಪದ ಅನುಭವವಾದೀತೇ ಹೊರತು ಬರಿಯ ಜ್ಞಾನದಿಂದ ಎಂದಿಗೂ ಆಗಲಾರದು.

## 'ಆದಿ' ಎಂಬ ಶಬ್ದದಿಂದ ಗ್ರಹಿಸಬೇಕಾದದ್ದು

**'ಆದಿಷು'** ಎಂಬ ಶಬ್ದವನ್ನು ಇಲ್ಲಿ ಪ್ರಯೋಗಿಸಿರುವದರಿಂದ ಪ್ರಾಪ್ಯವಾದ ಗ್ರಾಮವೇ ಮುಂತಾದವುಗಳನ್ನು ಇಲ್ಲಿ ಗ್ರಹಿಸಬಹುದು. ಒಂದು ಊರಿಗೆ ಹೋಗುವ ದಾರಿಯ ಸ್ವಭಾವದ ಪರಿಚಯವನ್ನು ವಿಚಾರಮಾಡಿಕೊಂಡಮಾತ್ರದಿಂದ ಗ್ರಾಮ ಪ್ರಾಪ್ತಿಯು ಎಂದಿಗೂ ಆಗಲಾರದು. ಒಂದೊಂದು ಹೆಜ್ಜೆಯನ್ನು ಮುಂದಿಟ್ಟರೂ 'ನಾನು ಮುಟ್ಟಬೇಕಾದ ಮಜಲಿನ ಕಡೆಗೆ ನಡೆಯುತ್ತಿದೇನೆ' ಎಂಬ ಅರಿವು ಬಂದು ಹರ್ಷವೂ ಆಗುವದು; ಪ್ರಾಪ್ತಿಯು ಅಷ್ಟಷ್ಟುಮಟ್ಟಿಗೆ ಲಭ್ಯವೂ ಆಗುತ್ತಿರುವದು. ಇದರಂತೆ ನಿತ್ಯಪ್ರಾಪ್ತನಾಗಿರುವ ಭಗವಂತನು ನಮ್ಮ ಆತ್ಮನೇ ಎಂಬ ಜ್ಞಾನವು ಇಲ್ಲದಿದ್ದರೂ ಆತನು ಆನಂದಸ್ವರೂಪನಾಗಿರುವದರಿಂದ ಸಾಧಕನು ಎಷ್ಟುಮಟ್ಟಿಗೆ ಗೌಣಭಕ್ತಿಯನ್ನು ಅನುಷ್ಠಾನಮಾಡುವನೋ ಅಷ್ಟುಮಟ್ಟಿಗೆ ತನ್ನ ಒಳಕ್ಕೇ ಮನಸ್ಸು ಹೋಗುತ್ತಿರುವದರಿಂದ 'ಭಗವಂತನು ಜೀವರ ಆತ್ಮನು'-ಎಂಬ ವಾಕ್ಯದ ಅನುಭವವೂ ಬರುತ್ತಿರುತ್ತದೆ. ಆದ್ದರಿಂದಲೂ ಗೌಣಭಕ್ತಿಯೇ ಗೌಣಜ್ಞಾನಕ್ಕಿಂತ ಪರಭಕ್ತಿಗೆ ಹೆಚ್ಚು ಮುಖ್ಯಸಾಧನವೆಂದು ಏರ್ಪಡುತ್ತದೆ.

ಇನ್ನೊಂದು ಮಾತು : ಅನುಭವವೇ ಕೊನೆಗೆ ಆಗಬೇಕಾಗಿರುವ ಪರಜ್ಞಾನವಾಗಿರುವದರಿಂದ ಭಕ್ತಿಯು ಬೆಳೆದಂತೆಲ್ಲ ಜ್ಞಾನವೂ ಬೆಳೆಯುವದು- ಎಂಬ ಆಚಾರ್ಯರುಗಳ ಪಕ್ಷವು ಸರಿಯೆಂದು ಇದರಿಂದಲೇ ಏರ್ಪಡುತ್ತದೆ.

೭೭. ಈ ಸೂತ್ರದಲ್ಲಿ 'ಕ್ಷುಚ್ಛಾನ್ತಿ' ಎಂಬುದಕ್ಕೆ 'ಕ್ಷುಧಾ ಶಾನ್ತಿ' ಎಂಬ ಪಾಠ ಭೇದವೂ ಕಾಣಬರುತ್ತದೆ. ಅದನ್ನು ನೋಡಿದರೆ 'ಕ್ಷುಧಾದಿ' ಎಂಬ ಪಾಠವೂ ಉಂಟೇನೊ !- ಎಂಬ ಸಂಶಯಕ್ಕೆ ಎಡೆಯುಂಟಾಗುತ್ತದೆ. ಏಕೆಂದರೆ 'ರಾಜಗೃಹ ಭೋಜನಾದಿಷು' (ಅರಮನೆ, ಊಟ ಮುಂತಾದವುಗಳಂತೆ) ಎಂಬಲ್ಲಿರುವ ಆದಿ ಶಬ್ದಕ್ಕೆ ಅನುಗುಣವಾಗಿ 'ಕ್ಷುಧಾದಿಶಾನ್ತಿ' ಎಂಬಲ್ಲಿಯೂ ಆದಿಶಬ್ದವಿರಬೇಕೆಂದು ನಿರೀಕ್ಷಿಸುವದಕ್ಕೆ ಅವಕಾಶವಿದೆ. ಊರಿಗೆ ಹೋಗುವವನಿಗೆ 'ಊರು ಎಷ್ಟುದೂರ ವಿರಬಹುದೊ ! ನಾನು ಅದನ್ನು ಎಂದಿಗೆ ಮುಟ್ಟೆಯೇನೊ ! ಎಂಬ ಆಕಾಂಕ್ಷೆಯೂ ಕುತೂಹಲವೂ ಇರುತ್ತವೆಯಷ್ಟೆ ? ಅದು ಊರಕಡೆಗೆ ಹೋದಂತೆಲ್ಲ ನಿವೃತ್ತಿ ಯಾಗುವದೇ ಹೊರತು ಬರಿಯ ದಾರಿಯ ಜ್ಞಾನದಿಂದ ನಿವೃತ್ತವಾಗಲಾರದು. ಇದರಂತೆ ಭಗವತ್ಪ್ರಾಪ್ತಿಯಲ್ಲಿರುವ ಆಕಾಂಕ್ಷೆಯೂ ಕುತೂಹಲವೂ ನಿವೃತ್ತಿಯಾಗ

ವದಕ್ಕೆ ಗೌಣಭಕ್ತಿಯೇ ಮುಖ್ಯವಾಗಿ ಬೇಕು- ಎಂಬುದನ್ನು ಈ 'ಆದಿ'ಶಬ್ದವು ಸೂಚಿಸುತ್ತದೆ.

ತಸ್ಮಾತ್ ಸೈವ ಗ್ರಾಹ್ಯಾ ಮುಮುಕ್ಷುಭಿಃ ॥ ೩೩ ॥

೩೩. ಆದ್ದರಿಂದ ಮುಮುಕ್ಷುಗಳಾದವರಿಗೆ ಆ ಭಕ್ತಿಯೇ ಗ್ರಾಹ್ಯವಾಗಿರುತ್ತದೆ.

೬೮. ಹೀಗೆ ಕರ್ಮ, ಜ್ಞಾನ, ಯೋಗ- ಇವುಗಳು ನೇರಾಗಿ ಸಾಧಕನಿಗೆ ದೊರೆತಿರಲಿ ದೊರೆಯದೆ ಇರಲಿ, ಇವುಗಳೊಳಗೆಲ್ಲ ಭಕ್ತಿಯು ಪೋಣಿಸಿಕೊಂಡು ಇರಲೇಬೇಕಾದ್ದರಿಂದಲೂ ಗೌಣಜ್ಞಾನಗೌಣಭಕ್ತಿಗಳೊಳಗೆ ಗೌಣಭಕ್ತಿಗೇ ಮುಖ್ಯ ಸ್ಥಾನವಿದ್ದು ಭಕ್ತಿಯೇ ಸಾಧನ, ಭಕ್ತಿಯೇ ಫಲ- ಎಂಬ ಸಿದ್ಧಾಂತಕ್ಕೆ ಯಾವ ಅಪವಾದವೂ ಇಲ್ಲವಾದ್ದರಿಂದಲೂ ಸಾಧಕರಾದವರು ಭಕ್ತಿಯನ್ನೇ ಸಾಧಿಸಿಕೊಳ್ಳಬೇಕು. ಮಿಕ್ಕ ಸಾಧನಗಳು ಸರಪಳಿಯ ಒಂದು ಕೊಂಡಿಯನ್ನು ಹಿಡಿದೆಳೆದರೆ ಎಲ್ಲವೂ ಹಿಂಬಾಲಿಸುವಂತೆ ತಮಗೆತಾವೇ ಬಂದು ಕೈಗೂಡಿಕೊಳ್ಳುವವು. ಇಲ್ಲಿಗೆ ಪರಭಕ್ತಿಯ ಸಿದ್ಧಾಂತಭಾಗವು ಮುಗಿಯಿತು.

## ೧೧. ಭಕ್ತಿಯ ಸಾಧನಗಳು

ತಸ್ಯಾಃ ಸಾಧನಾನಿ ಗಾಯನ್ತ್ಯಾಚಾರ್ಯಾಃ ॥ ೩೪ ॥

೩೪. ಆ (ಭಕ್ತಿಗೆ) ಆಚಾರ್ಯರುಗಳು ಸಾಧನಗಳನ್ನು (ಹೀಗೆಂದು) ಹೇಳಿರುತ್ತಾರೆ.

೬೯. ಪರಭಕ್ತಿಯು ತಲೆದೋರಿಕೊಂಡಮೇಲೆ ಮತ್ತೆಯಾವ ಪ್ರಯೋಜನವನ್ನೂ ಬಯಸದೆ ಪ್ರೇಮಪರವಶನಾಗಿ ಭಗವಂತನ ಸ್ಮರಣೆಯ ಆನಂದದಲ್ಲಿಯೇ ನೆಲೆನಿಂತುಬಿಡುತ್ತಾನಾದ್ದರಿಂದ ಆಮೇಲೆ ಮಾಡಬೇಕಾದದ್ದೇನೂ ಉಳಿದಿರುವದಿಲ್ಲ. ಆದರೆ ಅದಕ್ಕಿಂತಲೂ ಮೊದಲು ಭಗವಂತನನ್ನು ಪ್ರೇಮದಿಂದ ಭಜಿಸುವವರೂ ಉಂಟು. ಅವರಿಗೆ ಏನಾದರೊಂದು ಫಲವು ಭಕ್ತಿಯಿಂದ ಬೇಕಾಗಿರುತ್ತದೆಯಾದ್ದರಿಂದ ಅದು ಗೌಣಭಕ್ತಿಯೆನಿಸುವದು. ಇದನ್ನು ಮುಂದೆ (೫೬ನೆಯ ಸೂತ್ರದಲ್ಲಿ) ವಿವರಿಸಲಾಗುವದು. ಗೌಣಭಕ್ತಿಯೇ ಮೊದಲು ಅಂಕುರಿಸಿ ಬೆಳೆದುಕೊಂಡಮೇಲೆ ಪರಭಕ್ತಿಯ ರೂಪಕ್ಕೆ ತಿರುಗುವದಾದ್ದರಿಂದ 'ಭಕ್ತಿಯು ಸ್ವಯಂಫಲರೂಪ'ವಾಗಿರುವದೆಂದು ಹಿಂದೆ ಹೇಳಲಾಯಿತು. ಈಗ ಗೌಣಭಕ್ತಿಯಾದರೂ ಮೊಳೆತು ಚಿಗುರಿಕೊಳ್ಳುವದು ಹೇಗೆ ? ಅದಕ್ಕೆ ಯಾವ ಸಹಕಾರಿಸಾಮಗ್ರಿಗಳು ಬೇಕು ?

ಇವನ್ನು ಹೇಳುವದಕ್ಕೆ ಹೊರಟಿರುತ್ತಾರೆ. ಈ ಸಾಮಗ್ರಿಗಳನ್ನು ಇಲ್ಲಿ 'ಸಾಧನೆಗಳು'- ಎಂದು ಕರೆದಿರುತ್ತಾರೆ.

ಭಕ್ತಿಗೆ ಭಕ್ತಿಯೇ ಸಾಧನವೆಂದು ಹೇಳಿದ್ದಕ್ಕೆ ಇದು ವಿರುದ್ಧವಾಗುವದಿಲ್ಲವೆ ? -ಎಂದರೆ ಹಾಗಲ್ಲ. ಗಿಡಕ್ಕೆ ಬೀಜದಂತೆ ಭಕ್ತಿಗೆ ಭಕ್ತಿಯೇ ಬೀಜವೆಂಬುದು ನಿಜ. ಆದರೂ ಬೀಜವನ್ನು ಬಿತ್ತಬೇಕಾದ ನೆಲವು ಗಟ್ಟಿಯಾಗಿದ್ದರೆ ಮೊದಲು ಅದನ್ನು ಉತ್ತು ಹರಗಿದಮೇಲೆಯೇ ಬೀಜವನ್ನು ಬಿತ್ತಬೇಕಾಗುವದು ; ಇಲ್ಲದಿದ್ದರೆ ಬಿತ್ತಿದ ಬೀಜವು ಹಾಗೆಯೇ ಸೀದುಹೋಗಿಬಿಡಬಹುದು. ನೆಲದಲ್ಲಿ ಗಿಡವು ಬೆಳೆದುಕೊಳ್ಳುವದಕ್ಕೆ ತಕ್ಕಷ್ಟು ಪೋಷಕಸಾಮಗ್ರಿಯಿಲ್ಲದಿದ್ದರೆ ಗೊಬ್ಬರವನ್ನು ಹಾಕಬೇಕಾಗಿಬರಬಹುದು. ಬೀಜವು ಮೊಳೆತು ಚಿಗುರಿದಮೇಲೂ ಸುತ್ತಲೂ ಕಳೆಗಳು ಬೆಳೆದುಕೊಂಡಿದ್ದರೆ ಅವನ್ನು ಕಿತ್ತುಹಾಕಬೇಕಾಗುವದು. ಹಕ್ಕಿಗಳು ಸಣ್ಣ ಸಸಿಯನ್ನು ತಿನ್ನದಂತೆ ಕಾಯಬೇಕಾಗುವದು. ಮೇಕೆಯೇ ಮುಂತಾದ ಪ್ರಾಣಿಗಳು ಬಾಯಿಹಾಕದಂತೆ ಮುಳ್ಳುಬೇಲಿಯನ್ನು ಕಟ್ಟಬೇಕಾಗುವದು. ಇದರಿಂದ ಗಿಡದ ಬೆಳವಣಿಗೆಗೆ ಇರಬಹುದಾದ ಅಡಚಣೆಗಳು ತಪ್ಪುವವು. ಹೀಗೆಯೇ ಇಲ್ಲಿಯೂ ಭಕ್ತಿಬೀಜದಿಂದ ಭಕ್ತಿವೃಕ್ಷವು ಬೆಳೆದು ಪಕ್ವವಾಗಬೇಕಾಗಿರುವ ಭಕ್ತಿಫಲಕ್ಕೆ ಇರುವ ಅಡಚಣೆಗಳನ್ನು ನಿವಾರಿಸುವದಕ್ಕಾಗಿ ಅನುಸರಿಸಬೇಕಾದ ಉಪಾಯಗಳನ್ನು ಇಲ್ಲಿ ಸಾಧನಗಳು ಎಂದು ಕರೆದಿದೆ.

ತತ್ತು ವಿಷಯತ್ಯಾಗಾತ್ ಸಙ್ಗತ್ಯಾಗಾಚ್ಚ ॥ ೩೫ ॥

೩೫. ಅದಾದರೊ ವಿಷಯತ್ಯಾಗದಿಂದಲೂ ಸಂಗತ್ಯಾಗದಿಂದಲೂ (ದಕ್ಕುತ್ತದೆ).

೭೦. ಭಕ್ತಿಶಬ್ದವು ಸಂಸ್ಕೃತದಲ್ಲಿ ಸ್ತ್ರೀಲಿಂಗವಾದರೂ ಇಲ್ಲಿ 'ಪ್ರೇಮ'ವೆಂಬರ್ಥವನ್ನು ಇಟ್ಟುಕೊಂಡು ತತ್ (ಅದು) ಎಂಬ ನಪುಂಸಕಲಿಂಗವನ್ನು ಪ್ರಯೋಗಿಸಿದೆಯೆಂದು ತೋರುತ್ತದೆ. ಹಿಂದೆ (ಪು. ೧೬) 'ಯತ್ ಲಬ್ಧ್ವಾ' -ಮುಂತಾದ ಸೂತ್ರಗಳಲ್ಲಿ ಯತ್ ಎಂಬ ನಪುಂಸಕಲಿಂಗದ ಶಬ್ದವನ್ನು ಪಯೋಗಿಸಿದಂತೆಯೇ ಇದು- ಎಂದು ಭಾವಿಸಬಹುದು. ವಿಷಯಗಳಲ್ಲಿರುವ ಪ್ರೇಮವೂ ಸಂಗವೂ ಭಕ್ತಿಗೆ ಅಡಚಣೆಯಾಗಿರುವದರಿಂದ ಅವುಗಳನ್ನು ಬಿಟ್ಟುಬಿಡಬೇಕು ಎಂಬುದು ಸೂತ್ರದ ಅರ್ಥ.

ಗನ್ಧಾನ್ ರಸಾನ್ ನಾನುರುನ್ಧ್ಯಾತ್ ಸುಖಂ ವಾ
ನಾಲಙ್ಕಾರಾಂಶ್ಚಾಪ್ನುಯಾತ್ ತಸ್ಯ ತಸ್ಯ ।
ಮಾನಂ ಚ ಕೀರ್ತಿಂ ಚ ಯಶಶ್ಚ ನೇಚ್ಛೇತ್
ಸ ವೈ ಪ್ರಚಾರಃ ಪಶ್ಯತೋ ಬ್ರಾಹ್ಮಣಸ್ಯ ॥ ಮೋ. ಧ. ೨೫೧-೧

"ವಿಷಯಗಳ ವಾಸನೆಗಳು, ಸವಿಗಳು– ಇವುಗಳ ಬೆನ್ನು ಹತ್ತದೆ ಇರಬೇಕು. ಅವುಗಳಿಂದಾಗುವ ಕ್ಷಣಿಕಸುಖಕ್ಕೆ ಬೆರಗಾಗಬಾರದು. ಬೆಳ್ಳಿ ಬಂಗಾರವೇ ಮುಂತಾದವುಗಳ ಒಡವೆಗಳಿಂದ ಅಲಂಕೃತನಾಗಿ ಮೆರೆಯಬಾರದು. ಸನ್ಮಾನ, ಕೀರ್ತಿ, ಯಶಸ್ಸು –ಇವುಗಳನ್ನು ಬಯಸಬಾರದು. ತತ್ತ್ವವನ್ನರಿತ ಬ್ರಾಹ್ಮಣನಿಗೆ ಇದೇ ಯುಕ್ತವಾದ ವ್ಯವಹಾರವು" ಎಂದಿರುವಂತೆ ವಿಷಯಗಳ ಉಪಭೋಗವನ್ನು ಬಿಡುವದರಿಂದ ಒಳಗಿರುವ ಪರಮಾತ್ಮನ ಪ್ರೇಮದ ಅಂಕುರಕ್ಕೆ ಕಾರಣವಾಗುವದು. ಇಲ್ಲಿ ವಿಷಯಗಳೆಂದರೆ ಹೊರಗೆ ಕಾಣುವ ಸಾಮಾನ್ಯಪದಾರ್ಥಗಳನ್ನು ಮಾತ್ರವೇ ಅಲ್ಲದೆ, ಹೆಂಡಿರು, ಮಕ್ಕಳು, ಹಣಕಾಸು, ದನಕರುಗಳು, ಆಳುಗಳು, ಆಪ್ತೇಷ್ಟರು– ಹೊರಗೆ ಕಾಣುವ ಯಾವಯಾವ ವಿಷಯವೇ ಆಗಲಿ– 'ಇದು ನನಗೆ ಇಷ್ಟಾರ್ಥವನ್ನುಂಟುಮಾಡೀತು' ಎಂದು ಪ್ರೇಮದಿಂದ ಯಾವನು ಸಾಕಿಕೊಳ್ಳುವನೋ ಅವನು ಕೊನೆಗೆ ಅದೆಲ್ಲವೂ ದುಃಖದ ಬೀಜವೇ ಆಗಿರುತ್ತದೆಯೆಂದು ಕಂಡುಕೊಂಡು ಪಶ್ಚಾತ್ತಾಪಪಡುವನು.

> ಜಾಯಾತ್ಮಜಾರ್ಥಪಶುಭೃತ್ಯಗೃಹಾಪ್ತವರ್ಗಾನ್
> ಪುಷ್ಣಾತಿ ಯಃ ಪ್ರಿಯಚಿಕೀರ್ಷಿತಯಾ ವಿತನ್ವನ್ ।
> ಸೋಽನ್ತೇ ಸಕೃಚ್ಛ್ರಮವರುದ್ಧಮನಾಃ ಸ್ವದೇಹಂ
> ಸೃಷ್ಟ್ವಾಽಸ್ಯ ಬೀಜಮವಸೀದತಿ ವೃಕ್ಷಧರ್ಮಾ ॥

ಎಂಬ ವ್ಯಾಸೋಕ್ತಿಯಂತೆ ಈ ಹೆಂಡತಿ, ಮಗ, ಧನ, ದನ, ಆಳು, ಮನೆ, ಆಪ್ತರು –ಇವರೆಲ್ಲರಿಗೂ ಪ್ರಿಯವನ್ನು ಮಾಡುವೆನು ; ಅವರೂ ನನಗೆ ಬೇಕಾದದ್ದನ್ನು ಮಾಡುವರು– ಎಂದು ಸಾಕಿಕೊಳ್ಳುವನೋ ಅವನು ದೇಹವನ್ನು ಅತಿಕಷ್ಟಕ್ಕೆ ಈಡುಮಾಡಿಕೊಂಡು– ಬೀಜದಿಂದ ಹುಟ್ಟಿದ ಮರವು ಮತ್ತೊಂದು ಬೀಜವನ್ನು ಹುಟ್ಟಿಸಿ ಬೀಳುವಂತೆ– ದೇಹಧಾರಣೆಗೆ ಬೀಜವನ್ನೇ ಬಿತ್ತಿಕೊಳ್ಳುತ್ತಿರುವನು. ತನ್ನ ಸ್ವಾರ್ಥವನ್ನು ಹಾಳುಮಾಡಿಕೊಂಡು ವಿಷಯಗಳನ್ನು ಕಾಪಾಡಿಕೊಳ್ಳುವವನು ಎಂಥ ಮೂರ್ಖನು ! ದೇಹವೇ ಮುಂತಾದ ವಿಷಯಗಳು 'ನಾವು ನಿನ್ನ ಆತ್ಮವೇ' ಎಂಬ ಭ್ರಮೆಯನ್ನುಂಟುಮಾಡುತ್ತಿರುವವು ; ಮತ್ತು ನಿಜವಾದ ಆತ್ಮನಾದ ಪರಮಾತ್ಮನನ್ನು ಮರೆಯುವಂತೆ ಮಾಡುತ್ತಿರುವವು.

ವಿಷಯಭೋಗವನ್ನು ಬಿಟ್ಟುಬಿಟ್ಟಮಾತ್ರದಿಂದ ಅವುಗಳನ್ನು ಬಿಟ್ಟೆವೆಂಬ ಭ್ರಾಂತಿಯನ್ನು ಎಂದಿಗೂ ತಳೆಯಬಾರದು. ಏಕೆಂದರೆ ವಿಷಯಗಳನ್ನು ಬಿಟ್ಟರೂ ಅವುಗಳ 'ಸಂಗವು' ಮನಸ್ಸಿನಲ್ಲಿದ್ದುಕೊಂಡೇ ಇರುವದು. ಸಂಸಾರದಲ್ಲಿ ಸಾರವಿಲ್ಲ –ಎಂಬ ಮಾತಿನ ವೈರಾಗ್ಯವಿಷ್ಟೇ ಸಾಲದು.

**ಬೀಭತ್ಸಾ ವಿಷಯಾ ಜುಗುಪ್ಸಿತತಮಃ ಕಾಯೋ ವಯೋ ಗತ್ವರಂ**
**ಪ್ರಾಯೋ ಬನ್ಧುಭಿರಧ್ವನೀವ ಪಥಿಕೈರ್ಯೋಗೋ ವಿಯೋಗಾವಹಃ ।**
**ಹಾತವ್ಯೋಽಯಮಸಾರ ಏಷ ವಿರಸಃ ಸಂಸಾರ ಇತ್ಯಾದಿಕಂ**
**ಸರ್ವಸ್ಯೈವ ಹಿ ವಾಚಿ ಚೇತಸಿ ಪುನಃ ಕಸ್ಯಾಪಿ ಪುಣ್ಯಾತ್ಮನಃ ॥**

ಎಂಬ ಸುಭಾಷಿತದಂತೆ 'ವಿಷಯಗಳು ಅಸಹ್ಯವಾಗಿದೆ, ಶರೀರವು ಎಷ್ಟು ನಿಂದನೀಯ ! ಆಯುಸ್ಸು ನಶ್ವರವು, ನೆಂಟರೆಂದರೆ ದಾರಿಹೋಕರಂತೆ ಸಂಗಡವಿರುವವರು, ಯಾವ ವಸ್ತುವಿನ ಸಂಯೋಗವಾದರೂ ವಿಯೋಗವಾಗುವದು ನಿಶ್ಚಿತ. ಈ ಸಂಸಾರವು ಅಸಾರವಾಗಿರುವದರಿಂದ ಬಿಟ್ಟುಬಿಡತಕ್ಕದ್ದು' ಎಂದುವುಂತಾದ ಬಾಯಿವೈರಾಗ್ಯಪ್ರದರ್ಶನವು ಪ್ರತಿಯೊಬ್ಬನ ಮಾತಿನಲ್ಲಿಯೂ ಇರಬಹುದು ; ನಿಜವಾಗಿಯೂ ಯಾವನೋ ಒಬ್ಬ ಪುಣ್ಯಾತ್ಮನಿಗೆ ಮಾತ್ರ ಮನಸ್ಸಿನಲ್ಲಿಯೂ ಉಂಟಾಗುವದು. ಇದಕ್ಕೆ ಸಂಗವೇ ಕಾರಣವಾಗಿರುವದರಿಂದ ಮೊದಲು ಸಂಗತ್ಯಾಗವನ್ನು ಮಾಡಬೇಕು.

**ತಥಾಪಿ ಸಙ್ಗಃ ಪರಿವರ್ಜನೀಯೋ**
**ಗುಣೇಷು ಮಾಯಾರಚಿತೇಷು ತಾವತ್ ।**
**ಮದ್ಭಕ್ತಿಯೋಗೇನ ದೃಢೇನ ಯಾವದ್**
**ರಜೋ ನಿರಸ್ಯೇತ ಮನಃಕಷಾಯಃ** ॥ ಭಾಗ. ೧೧-೨೮-೨೭.

ಎಂದು ಭಗವಂತನು ಹೇಳಿರುವಂತೆ ರಜೋಗುಣವು ನಿವೃತ್ತಿಯಾಗಿ ಮನಃಕಷಾಯವು ಹೋಗುವದಕ್ಕೆ ಗುಣಗಳಲ್ಲಿ ಸಂಗತ್ಯಾಗವನ್ನು ಮಾಡುವದು ಅತ್ಯವಶ್ಯ.

## ಅವ್ಯಾವೃತ್ತಭಜನಾತ್ ॥ ೩೬ ॥

೩೬. ಎಡೆಬಿಡದೆ ಮಾಡಿದ ಭಜನೆಯಿಂದ (ಅದು ದೊರಕುವದು).

೭೧. ಹಿಂದಿನ ಸೂತ್ರದಲ್ಲಿ ವಿಷಯತ್ಯಾಗವೆಂಬ ಬಾಹ್ಯಸಾಧನ, ಸಂಗತ್ಯಾಗವೆಂಬ ಆಂತರಸಾಧನ- ಇವುಗಳಲ್ಲಿ ನಿಷೇಧಮುಖವಾದ (ಬಿಡಬೇಕಾದ) ಸಾಧನಗಳನ್ನೇ ಹೇಳಿದೆ. ವಿಷಯಗಳನ್ನು ಬಿಟ್ಟರೂ ವಿಷಯಗಳಲ್ಲಿರುವ ಸಂಗವು ತಪ್ಪದೆ ಇರಬಹುದು ; ಸಂಗವನ್ನು ಬಿಡುವದಕ್ಕೆ ಮನಸ್ಸಿಗೆ ಸಂಗವನ್ನು ತಪ್ಪಿಸುವ ವಿಧಿಮುಖವಾದ (ಮಾಡಬೇಕಾದ) ಸಾಧನವೊಂದು ಬೇಕಲ್ಲವೆ ? ಅದನ್ನು ಇಲ್ಲಿ ಹೇಳಿರುತ್ತದೆ. ಭಗವಂತನನ್ನು ಎಡೆಬಿಡದೆ ಭಜಿಸುತ್ತಿರಬೇಕು ; ಪರಮಾತ್ಮನ ಚಿಂತನೆಯಿಲ್ಲದವರಿಗೆ ವಿಷಯಚಿಂತನೆಯು ಗಂಟುಬೀಳುವದು ಸುನಿಶ್ಚಿತ.

**ಯನ್ಮುಹೂರ್ತಂ ಕ್ಷಣಂ ವಾಪಿ ವಾಸುದೇವೋ ನ ಚಿನ್ತ್ಯತೇ ।**
**ಸಾ ಹಾನಿಸ್ತನ್ಮಹಚ್ಛಿದ್ರಂ ಸಾ ಭ್ರಾನ್ತಿಃ ಸಾ ಚ ವಿಕ್ರಿಯಾ ॥**
ಗಾರುಡ. ಪೂ. ಖಂ. ೨೨೨-೨೨.

ಎಂಬ ಗಾರುಡಪುರಾಣೋಕ್ತಿಯಂತೆ ಒಂದು ಮುಹೂರ್ತ, ಅಥವಾ ಒಂದು ಕ್ಷಣ ಮಾತ್ರ, ಪರಮಾತ್ಮಚಿಂತನೆಯನ್ನು ಬಿಟ್ಟರೂ ಅದೇ ಅನರ್ಥಕ್ಕೆ ಅವಕಾಶವನ್ನು ಕೊಟ್ಟು ಮಹಾಹಾನಿಯನ್ನುಂಟುಮಾಡಿಬಿಡುವದು ; ಅದೇ ಭ್ರಾಂತಿಯೆಂಬುದು, ಅದೇ ಮನಸ್ಸಿನ ವಿಕಾರವು. ವಿಷಯಚಿಂತನೆಗೆ ಅವಕಾಶವಾಗುವದಕ್ಕೆ ಮನಸ್ಸು ಹೊರಕ್ಕೆ ಹರಿಯುವದೇ ಕಾರಣ. ಅದು ಹೊರಮುಖವಾಗುವದಕ್ಕೆ ಭಗವಚ್ಚಿಂತನೆಯಿಲ್ಲದಿರುವದೇ ಕಾರಣ. ಭಗವದ್ಭಕ್ತರಾದವರು :

**ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯನ್ತಃ ಪರಸ್ಪರಮ್ ।**
**ಕಥಯನ್ತಶ್ಚ ಮಾಂ ನಿತ್ಯಂ ತುಷ್ಯನ್ತಿ ಚ ರಮನ್ತಿ ಚ ॥** ಗೀ. ೧೦-೯.

ಎಂಬ ಗೀತೋಕ್ತಿಯಂತೆ ಭಗವಂತನಲ್ಲಿಯೇ ಚಿತ್ತವನ್ನಿಟ್ಟು ಸಕಲೇಂದ್ರಿಯಗಳನ್ನೂ ವಿನಿಯೋಗಿಸುತ್ತಾ ಒಬ್ಬರಿಗೊಬ್ಬರು ಪರಮಾತ್ಮನ ವಿಷಯವನ್ನು ಬೋಧಿಸುತ್ತಾ ಭಗವಂತನ ಜ್ಞಾನಬಲವೀರ್ಯತೇಜಐಶ್ವರ್ಯಾದಿಗಳನ್ನು ಸ್ಮರಣೆಗೆ ತರುತ್ತಾ ಇರುವದು ಪರಭಕ್ತರ ಸ್ವಭಾವವು ; ಭಕ್ತಿಯನ್ನು ಸಾಧಿಸಿಕೊಳ್ಳಬೇಕೆನ್ನುವ ಸಾಧಕನು ಪ್ರಯತ್ನಪೂರ್ವಕವಾಗಿ ಅವರನ್ನು ಅನುಕರಿಸುತ್ತಿರಬೇಕು. ಆದ್ದರಿಂದಲೇ ಶ್ರುತಿಯು

'तमेवैकं जानथ आत्मानमन्या वाचो विमुञ्चथ' ಮುಂ. ೨-೨-೫.

ಪರಮಾತ್ಮನೊಬ್ಬನನ್ನೇ ಅರಿತುಕೊಳ್ಳುವದಕ್ಕೆ ಪ್ರಯತ್ನಿಸುತ್ತಿರಿ, ಮಿಕ್ಕ ಮಾತುಗಳನ್ನು ಬಿಟ್ಟುಬಿಡಿರಿ- ಎಂದು ಬೋಧಿಸುತ್ತಿರುವದು. ವಿಷಯಗಳಲ್ಲಿ ಮನಸ್ಸಿಟ್ಟರೆ ಮನುಷ್ಯನು ತನ್ಮಯನಾಗುತ್ತಾನೆಂಬುದು ನಿಶ್ಚಯವಾಗಿರುವಂತೆ ಭಗವಂತನಲ್ಲಿಟ್ಟರೆ ತನ್ಮಯನಾಗುತ್ತಾನೆಂಬುದೂ ನಿಶ್ಚಯ.

**ಯತ್ರ ಯತ್ರ ಮನೋ ದೇಹೀ ಧಾರಯೇತ್ ಸಕಲಂ ಧಿಯಾ ।**
**ಸ್ನೇಹಾದ್ ದ್ವೇಷಾದ್ ಭಯಾದ್ವಾಪಿ ಯಾತಿ ತತ್ತತ್ಸರೂಪತಾಮ್ ॥**
ಭಾಗ. ೧೧-೯-೨೨.

ಮನುಷ್ಯನು ಸ್ನೇಹ, ದ್ವೇಷ, ಭಯಾದಿನಿಮಿತ್ತದಿಂದ ಏತೇತರಲ್ಲಿ ಮನಸ್ಸನ್ನು ನೆಡುತ್ತಾನೋ ಅದದರ ಸಾರೂಪ್ಯವನ್ನು ಹೊಂದುತ್ತಾನೆ.

**ವಿಷಯಾನ್ ಧ್ಯಾಯತಶ್ಚಿತ್ತಂ ವಿಷಯೇಷು ವಿಷಜ್ಜತೇ ।**
**ಮಾಮನುಸ್ಮರತಶ್ಚಿತ್ತಂ ಮಯ್ಯೇವ ಪ್ರವಿಲೀಯತೇ ॥**

**ತಸ್ಮಾದಸದಭಿಧ್ಯಾನಂ ಯಥಾ ಸ್ವಪ್ನಮನೋರಥಮ್ ।**
**ಹಿತ್ವಾ ಮಯಿ ಸಮಾಧತ್ಸ್ವ ಮನೋ ಮದ್ಭಾವಭಾವಿತಮ್ ॥**

**ಭಾಗ. ೧೧-೧೪-೨೭, ೨೮.**

'ಉದ್ಧವನೆ, ವಿಷಯಗಳನ್ನೇ ಧ್ಯಾನಿಸುತ್ತಿರುವವನ ಚಿತ್ತವು ವಿಷಯಗಳಲ್ಲಿಯೇ ಸಂಗವನ್ನು ಪಡೆಯುವದು ; ಹಾಗೆಯೇ ನನ್ನನ್ನೇ ಸ್ಮರಿಸುತ್ತಿರುವವನ ಚಿತ್ತವು ನನ್ನಲ್ಲೇ ಲೀನವಾಗಿಬಿಡುತ್ತದೆ. ಆದ್ದರಿಂದ ಸ್ವಪ್ನಮನೋವಿಕಲ್ಪನೆಗಳಲ್ಲಿ ವಿಷಯವಾಗಿರುವ ತೋರಿಕೆಗಳು ಅಸದ್ರೂಪವಾಗಿರುವಂತೆಯೇ ಇವುಗಳೂ ತೋರುತ್ತವೆ- ಎಂದು ನಿಶ್ಚಯಿಸಿ ವಿಷಯಗಳ ಚಿಂತನೆಯನ್ನು ಬಿಟ್ಟು ಭಗವದ್ಭಾವದಿಂದಲೇ ಊಡಿಕೊಂಡ ಮನಸ್ಸನ್ನು ನನ್ನಲ್ಲಿಯೇ ಇಟ್ಟುಕೊ' ಎಂದು ಭಗವಂತನು ಉಪದೇಶಿಸಿರುತ್ತಾನೆ.

## ಲೋಕೇऽಪಿ ಭಗವದ್ಗುಣಶ್ರವಣಕೀರ್ತನಾತ್ ॥ ೩೭ ॥

**೩೭.** ಲೋಕ(ವ್ಯವಹಾರ)ದಲ್ಲಿಯೂ ಭಗವಂತನ ಗುಣಗಳನ್ನು ಕೇಳುವದು ಕೀರ್ತನಮಾಡುವದು (ಇವುಗಳಿಂದ ದೊರಕುವದು).

೭೨. ಭಗವಚ್ಚಿಂತನೆಯನ್ನೇ ಮಾಡುತ್ತಾ ಇರಬೇಕೆಂದು ಹಿಂದಿನ ಸೂತ್ರದಲ್ಲಿ ಹೇಳಿರುತ್ತದೆಯಷ್ಟೆ ? ಇಂಥ ಕಟ್ಟುನಿಟ್ಟಾದ ಭಕ್ತಿಯಲ್ಲಿದ್ದರೂ ಊಟವೇ ಮುಂತಾದ ಅನಿವಾರ್ಯವಾದ ಲೋಕವ್ಯವಹಾರಗಳು ನಡೆಯಲೇಬೇಕಾಗಿವೆಯಲ್ಲವೆ ? ಲೌಕಿಕಜನರೊಡನೆ ಅಪರಿಹಾರ್ಯವಾಗಿ ವ್ಯವಹರಿಸುವಾಗ ಹೇಗೆ ಮಾಡಬೇಕು ? ಅವ್ಯಾವೃತ್ತ (ಕಡಿವಡೆಯದ) ಭಜನೆಯು ಹೇಗೆತಾನೆ ಯಾರಿಗಾದರೂ ಸಾಧ್ಯ ?- ಎಂದು ಕೇಳಿದರೆ ಆ ಪ್ರಶ್ನೆಗೆ ಇಲ್ಲಿ ಉತ್ತರವಿದೆ.

ಭಗವಂತನ ಗುಣಗಳೆಂದರೆ :

**ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ ।**
**ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈರ್ಗುಣಾದಿಭಿಃ ॥**

**ವಿ. ಪು. ೬-೫-೭೯.**

ಎಂಬಂತೆ ಹೇಯಗುಣಗಳ ಸಂಪರ್ಕವಿಲ್ಲದೆ ಇರುವ ನಿತ್ಯವಾದ ಷಡ್ಗುಣೈಶ್ವರ್ಯಗಳಿಂದೊಡಗೂಡಿರುವ ಭಗವಂತನ ಕಲ್ಯಾಣಗುಣಗಳನ್ನು-ಜನರೊಡನೆ ವ್ಯವಹರಿಸುವಾಗ - ಹೇಳುತ್ತಲೂ ಕೇಳುತ್ತಲೂ ಇರುವದೆಂಬುದು ಭಗವಚ್ಚಿಂತನೆಯನ್ನೇ ಮುಂದುವರಿಯಿಸುತ್ತಿರುವದು. ಭಗವಂತನ ಗುಣಗಳನ್ನು ವರ್ಣಿಸಿ ಹೇಳುವದರಿಂದಲೂ ಮತ್ತೊಬ್ಬರು ಹೇಳುವದನ್ನು ಕೇಳುವದರಿಂದಲೂ ವಿಷಯಚಿಂತನೆಯ ವಾಸನೆಯು ಅಳಿದುಹೋಗುವದು.

ಭಗವಂತನ ಅನಂತಗುಣಗಳನ್ನೆಲ್ಲವನ್ನೂ ಸ್ಮರಿಸುವದು ಎಲ್ಲರಿಗೂ ಸಾಧ್ಯವಿಲ್ಲವೆಂಬುದು ಸ್ಪಷ್ಟವೇ ಆಗಿದೆ. ಆದರೆ 'ಭಗವಾನ್' ಎಂಬ ಶಬ್ದದಲ್ಲಿರುವ ಅಕ್ಷರಗಳ ಸಂಕೇತಾರ್ಥವನ್ನು ದೊಡ್ಡವರು ವರ್ಣಿಸಿರುವಷ್ಟನ್ನಾದರೂ ವ್ಯವಹಾರದಲ್ಲಿ ಆಗಾಗ್ಗೆ ಸ್ಮರಿಸುತ್ತಿರುವದು ಭಕ್ತಿಯ ಅಭಿವ್ಯಕ್ತಿಗೆ ಕಾರಣವಾಗಿರುತ್ತದೆ. 'ವಿಷ್ಣುಪುರಾಣ'ದಲ್ಲಿ ಈ ವಿಷಯಕ್ಕೆ ಹೇಳಿರುವದೇನೆಂದರೆ :-

**ಅಶಬ್ದಗೋಚರಸ್ಯಾಪಿ ತಸ್ಯ ವೈ ಬ್ರಹ್ಮಣೋ ದ್ವಿಜ ।**
**ಪೂಜಾಯಾಂ ಭಗವಚ್ಛಬ್ದಃ ಕ್ರಿಯತೇ ಹ್ಯುಪಚಾರತಃ ॥**

ವಿ. ಪು. ೬-೫-೭೧.

ಪರಮಾತ್ಮನು ಯಾವ ಶಬ್ದಕ್ಕೂ ವಾಚ್ಯನಲ್ಲವಾದರೂ ಆತನನ್ನು ಪೂಜಿಸುವಾಗ ಭಗವಚ್ಛಬ್ದವನ್ನು ಉಪಚಾರಕ್ಕಾಗಿ ಪ್ರಯೋಗಿಸುವರು.

**ಸಂಭರ್ತೇತಿ ತಥಾ ಭರ್ತಾ ಭಕಾರೋಽರ್ಥದ್ವಯಾನ್ವಿತಃ ।**
**ನೇತಾ ಗಮಯಿತಾ ಸ್ರಷ್ಟಾ ಗಕಾರಾರ್ಥಸ್ತಥಾ ಮುನೇ ॥ ೭೩ ॥**
**ವಸನ್ತಿ ತತ್ರ ಭೂತಾನಿ ಭೂತಾತ್ಮನ್ಯಖಿಲಾತ್ಮನಿ ।**
**ಸ ಚ ಭೂತೇಷ್ವಶೇಷೇಷು ವಕಾರಾರ್ಥಸ್ತತೋಽವ್ಯಯಃ ॥ ೭೪ ॥**

''ಆತನು 'ಭರ್ತೃ' ಪೋಷಕನು, ಮತ್ತು ಆಧಾರನು -ಎಂಬ ಎರಡು ಗುಣಗಳಿಂದ ಕೂಡಿರುವವನೆಂಬುದನ್ನು ಭಕಾರವು ಸೂಚಿಸುವದು. ಭೂತಾತ್ಮನೂ ಅಖಿಲಾತ್ಮನೂ ಆದ ಆತನು ಕರ್ಮಫಲದತ್ತ ಜೀವರನ್ನು 'ಗಮಯತಿ' ಒಯ್ಯುತ್ತಾನೆ, ಮತ್ತು 'ಉತ್ಪತ್ತಿಂ ಗಮಯತಿ ಸೃಷ್ಟ್ವಾ' ಎಂಬರ್ಥವನ್ನೂ ಗಕಾರವು ಸೂಚಿಸುವದು. ಪ್ರಾಣಿಗಳ ರೂಪದಲ್ಲಿರುವ ಮತ್ತು ಪ್ರಾಣಿಗಳಿಗೆಲ್ಲ ಆತ್ಮನಾಗಿರುವ ಆತನಲ್ಲಿಯೇ ಎಲ್ಲಾ ಜೀವರುಗಳೂ ವಾಸವಾಗಿರುತ್ತಾರೆ ; ಮತ್ತು ಆತನೂ ಎಲ್ಲಾ ಪ್ರಾಣಿಗಳಲ್ಲಿಯೂ ವಾಸಮಾಡಿಕೊಂಡಿರುತ್ತಾನೆ - ಎಂಬರ್ಥವನ್ನು ವಕಾರವು ಸೂಚಿಸುವದು.'' ಹೀಗೆ ಭಗವಚ್ಛಬ್ದದಲ್ಲಿರುವ ಒಂದೊಂದು ಅಕ್ಷರವೂ ಎರಡೆರಡು ಗುಣಗಳನ್ನು ತಿಳಿಯಿಸುತ್ತಿವೆ ಎಂದು ಭಾವಿಸಬೇಕು.

ಇದಲ್ಲದೆ

**ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ ।**
**ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ॥ ೭೫ ॥**

'ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಶ್ರೀ(ಸಂಪತ್ತು), ಜ್ಞಾನ, ವೈರಾಗ್ಯ- ಈ ಆರೂ ಭಗಶಬ್ದಕ್ಕೆ ಅರ್ಥವು.' ಆದ್ದರಿಂದ ಭಗವಾನ್ ಎಂದರೆ ಈ ಆರು ಗುಣಗಳುಳ್ಳಾತನು ಎಂದು ಆತನ ಗುಣಗಳನ್ನು ಸ್ಮರಣೆಮಾಡಬೇಕು.

**ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್ ।**
**ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥ ೭೮ ॥**

'ಪ್ರಾಣಿಗಳು ಹೇಗೆ ಉತ್ಪನ್ನವಾಗುವವು, ಭೂತಗಳು ಎಲ್ಲಿಂದ ಬರುವವು, ಎಲ್ಲಿಗೆ ಹೋಗುವವು, ವಿದ್ಯಾವಿದ್ಯೆಗಳ ಸ್ವರೂಪವೇನು ?– ಇದೆಲ್ಲವನ್ನೂ ಯಾವನು ಅರಿತಿರುತ್ತಾನೋ ಆತನು ಭಗವಂತನು' ಎಂದು ಸ್ಮರಿಸಬೇಕು.

ಪರಮಾತ್ಮನ ಗುಣವನ್ನು ಕೀರ್ತನಮಾಡುವದೆಂಬುದು ಮಹಾಪುಣ್ಯದ ಫಲವೆನ್ನಬೇಕು. ನಾರದರು ವ್ಯಾಸರೊಡನೆ ಮಾತನಾಡುತ್ತಿದಾಗ ಹೀಗೆಂದರೆಂದು **ಭಾಗವತ**ದಲ್ಲಿದೆ :–

**ಇದಂ ಹಿ ಪುಂಸಸ್ತಪಸಃ ಶ್ರುತಸ್ಯ ವಾ**
**ಸ್ವಿಷ್ಟಸ್ಯ ಸೂಕ್ತಸ್ಯ ಚ ಬುದ್ಧಿದತ್ತಯೋಃ ।**
**ಅವಿಚ್ಯುತೋಽರ್ಥಃ ಕವಿಭಿರ್ನಿರೂಪಿತೋ**
**ಯದುತ್ತಮಶ್ಲೋಕಗುಣಾನುವರ್ಣನಮ್ ॥**

ಭಾಗ. ೧-೫-೨೨.

'ಮನುಷ್ಯನಾದವನು ಮಾಡಿದ ತಪಸ್ಸಿಗೆ, ಅಧ್ಯಯನಕ್ಕೆ, ಯಜ್ಞಕರ್ಮಕ್ಕೆ ವಾಗ್ವ್ಯವಹಾರಕ್ಕೆ, ಸಂಪಾದಿಸಿದ ಬುದ್ಧಿಗೆ, ಮಾಡಿರುವ ದಾನಕ್ಕೆ ನಿಜವಾದ ಸಾರ್ಥಕ್ಯವೆಂದರೆ ಭಗವಂತನ ಗುಣಗಳನ್ನು ವರ್ಣನಮಾಡುವದೇ –ಎಂದು ಬಲ್ಲವರು ಹೇಳುವರು' ಎಂಬುದು ಶ್ಲೋಕದ ಭಾವಾರ್ಥ.

**ಯತ್ರೋತ್ತಮಶ್ಲೋಕಗುಣಾನುವಾದಃ**
**ಪ್ರಸ್ತೂಯತೇ ಗ್ರಾಮ್ಯಕಥಾವಿಘಾತಃ ।**
**ನಿಷೇವ್ಯಮಾಣೋಽನುದಿನಂ ಮುಮುಕ್ಷೋ-**
**ರ್ಮತಿಂ ಸತೀಂ ಯಚ್ಛತಿ ವಾಸುದೇವೇ ॥**

ಭಾಗ. ೫-೧೨-೧೩.

'ಎಲ್ಲಿ ಗ್ರಾಮ್ಯವಿಚಾರದ ಮಾತುಕಥೆಗಳನ್ನು ಕೆಡಿಸುವಂತೆ ಪರಮಾತ್ಮನ ಗುಣಗಳ ಕಥನವೇ ನಡೆಯುತ್ತಿರುವದೋ, ಅದನ್ನೇ ಮುಮುಕ್ಷುವಾದವನು ಸೇವಿಸುತ್ತಿದ್ದರೆ ಅದು ವಾಸುದೇವಭಗವಂತನಲ್ಲಿಯೇ ಬುದ್ಧಿಯನ್ನಿಡುವಂತೆ ಮಾಡುವದು.'

## ಕೀರ್ತನ

೭೩. ಭಗವಂತನ ಗುಣಗಳನ್ನು **ಕೀರ್ತನ**ಮಾಡುವದೆಂಬುದೂ ಹೀಗೆಯೇ. ಅದು ದೊರಕಿದರೆ ಪೂರ್ವಸುಕೃತವು ಸಾರ್ಥಕವಾಯಿತೆಂದು ತಿಳಿಯಬೇಕು.

ಅರ್ಜುನನು ಭಗವಂತನ ವಿಶ್ವರೂಪವನ್ನು ಕಂಡಾಗ ಹೇಳಿರುವದನ್ನು ಇಲ್ಲಿ ಸ್ಮರಿಸಿಕೊಳ್ಳುವದರಿಂದ ಲಾಭವುಂಟು :

**ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ**
**ಜಗತ್ಪ್ರಹೃಷ್ಯತ್ಯನುರಜ್ಯತೇ ಚ ।**
**ರಕ್ಷಾಂಸಿ ಭೀತಾನಿ ದಿಶೋ ದ್ರವನ್ತಿ**
**ಸರ್ವೇ ನಮಸ್ಯನ್ತಿ ಚ ಸಿದ್ಧಸಙ್ಘಾಃ ॥ ಗೀ. ೧೧-೩೬.**

"ಭಗವಂತನೆ, ನಿನ್ನ ಮಾಹಾತ್ಮ್ಯಕೀರ್ತನೆಯಿಂದ ಜಗತ್ತೇ ಅತ್ಯಂತವಾಗಿ ಹರ್ಷಿತವಾಗುವದು, ಅನುರಾಗವನ್ನು ಹೊಂದುತ್ತಿರುವದು. ರಾಕ್ಷಸರು ಭೀತರಾಗಿ ದಿಕ್ಕುದಿಕ್ಕುಗಳಿಗೆ ಪಾಲಾಗಿ ಓಡುತ್ತಿರುವರು ; ಸಿದ್ಧರ ಸಂಘಗಳೆಲ್ಲ ನಮಸ್ಕರಿಸುತ್ತಿರುವರು."

ಭಗವಂತನ ಗುಣಗಳನ್ನು ಕೀರ್ತನೆಮಾಡಿದಮಾತ್ರದಿಂದ ಆಸ್ತಿಕರಿಗೆ ಹರ್ಷವು ಉಕ್ಕೇರುವದು. ಏಕೆಂದರೆ ಎಲ್ಲರಿಗೂ ಭಗವಂತನೇ ಆತ್ಮನಾಗಿರುತ್ತಾನಾದ್ದರಿಂದ ಭಗವಂತನು ನಮ್ಮೊಳಗೂ ಇರುತ್ತಾನೆಂಬ ಅರಿವು ಅವರ ಹರ್ಷಕ್ಕೆ ಕಾರಣವಾಗಿರುತ್ತದೆ. ಇಷ್ಟೇ ಅಲ್ಲ, ಭಗವಂತನ ಗುಣಗಳನ್ನು ಕೀರ್ತನೆಮಾಡಿದಂತೆಲ್ಲ ಆತನ ವಿಷಯದಲ್ಲಿ ಅನುರಾಗವೂ ಉಂಟಾಗುವದು. ಗುಣಕೀರ್ತನವೆಂಬುದು ಭಕ್ತಿಗೆ ಒಂದು ದೊಡ್ಡಸಾಧನವಾಗುವದು. ಜನರಲ್ಲಿರುವ ಪಾಪವಾಸನೆಗಳ ರೂಪವಾದ ರಾಕ್ಷಸರು ಓಡಿಹೋಗುವರು ; ಅಂತಃಕರಣವು ಹೆಚ್ಚುಹೆಚ್ಚಾಗಿ ಪರಿಶುದ್ಧವಾಗುವದು. ಸಿದ್ಧಿಗಳು, ಕೀರ್ತನೆಮಾಡಿದವರ ಬಳಿಗೆ ತಾವೇ ಬಂದು ನಮ್ಮನ್ನು ಸ್ವೀಕರಿಸಬೇಕು- ಎಂದು ಕೇಳಿಕೊಳ್ಳುವವು. ಆದ್ದರಿಂದ ಗುಣಕೀರ್ತನವು ಭಕ್ತಿಗೆ ಸಾಧನವಾಗಿದೆ, ಪರಮಪುರುಷಾರ್ಥಸಿದ್ಧಿಗೆ ಕಾರಣವೂ ಆಗಿದೆ- ಎಂದು ತಿಳಿಯಬೇಕು.

## ಮುಖ್ಯತಸ್ತು ಮಹತ್ಕೃಪಯೈವ ಭಗವತ್ಕೃಪಾಲೇಶಾದ್ವಾ ॥

೩೮. ಮುಖ್ಯವಾಗಿ ಮಹಾಪುರುಷರ ಕೃಪೆಯಿಂದಲೇ ಸಿಕ್ಕುವದು ; ಭಗವಂತನ ಕೃಪಾಲೇಶದಿಂದಾದರೂ (ಸಿಕ್ಕುವದು).

೭೪. ಸಾಧನಗಳೆಲ್ಲಕ್ಕೂ ಸಾಧನವಾಗಿರುವದು ಮಹಾಪುರುಷರ ಸಂಗವೇ. ಆದ್ದರಿಂದ ಇಲ್ಲಿ 'ಮುಖ್ಯತಸ್ತು' ಎಂದಿದೆ.

**(೧) ಸತ್ಸಂಗಲಬ್ಧಯಾ ಭಕ್ತ್ಯಾ ಮಯಿ ಮಾಂ ಸ ಉಪಾಸಿತಾ ।**
**ಸ ವೈ ಮೇ ದರ್ಶಿತಂ ಸದ್ಭಿರಞ್ಜಸಾ ವಿನ್ದತೇ ಪದಮ್ ॥**

ಭಾಗ. ೧೧-೧೧-೨೫.

'ಸತ್ಸಂಗದಿಂದ ದೊರೆತ ಭಕ್ತಿಯಿಂದ ನನ್ನನ್ನು ಉಪಾಸನೆಮಾಡುವಾತನು ಸತ್ಪುರುಷರು ತೋರಿಸಿಕೊಟ್ಟ ರೀತಿಯಿಂದ ನನ್ನ ಪರಮಪದವನ್ನೇ ಪಡೆಯು ತ್ತಾನೆ' ಎಂದು ಭಗವಂತನು ಉದ್ಧವನಿಗೆ ಹೇಳಿರುತ್ತಾನೆ.

ಸಾಧುಜನರ ಸಂಗದಿಂದ ಭಕ್ತಿಯು ದೊರಕುವದೆಂಬುದನ್ನು ಕಪಿಲದೇವರು ದೇವಹೂತಿಗೆ ಹೀಗೆ ಬೋಧಿಸಿರುತ್ತಾರೆ :

**ಸತಾಂ ಪ್ರಸಙ್ಗಾನ್ಮಮ ವೀರ್ಯಸಂವಿದೋ (ಸಂಪದೋ)**
**ಭವನ್ತಿ ಹೃತ್ಕರ್ಣರಸಾಯನಾಃ ಕಥಾಃ।**
**ತಜ್ಜೋಷಣಾದಾಶ್ವಪವರ್ಗವರ್ತ್ಮನಿ**
**ಶ್ರದ್ಧಾ ರತಿರ್ಭಕ್ತಿರನುಕ್ರಮಿಷ್ಯತಿ ॥** ಭಾಗ. ೩-೨೫-೨೫

'ಸತ್ಪುರುಷರ ಸಂಗದಿಂದ ಭಗವಂತನ ವೀರ್ಯವನ್ನು ತಿಳಿಸಿಕೊಡುವ, ಕಿವಿಗೂ ಹೃದಯಕ್ಕೂ ರಸಾಯನವಾಗಿರುವ ಮಾತುಕಥೆಗಳು ಲಭಿಸುವವು. ಅವುಗಳನ್ನು ಸೇವಿಸುವದರಿಂದ ಮೋಕ್ಷಮಾರ್ಗದಲ್ಲಿ ಶ್ರದ್ಧೆಯೂ ಪ್ರೀತಿಯೂ ಭಕ್ತಿಯೂ ಕ್ರಮ ಕ್ರಮವಾಗಿ ದೊರಕುವವು.'

## 'ಭಗವತ್ಕೃಪಾಲೇಶಾದ್ವಾ' ಎಂಬಲ್ಲಿ 'ವಾ'ಶಬ್ದದ ಅರ್ಥ

೭೫. ಈ ಸೂತ್ರದಲ್ಲಿ **'ಮಹತ್ಕೃಪಯೈವ'** (ದೊಡ್ಡವರ ಕೃಪೆಯಿಂದಲೇ) ಎಂದು ಹೇಳಿದಮೇಲೆ ಭಗವಂತನ ಕೃಪೆಯ ಲೇಶದಿಂದಲಾದರೂ ಎಂದು ಹೇಳಿರುವದರಲ್ಲಿ ಒಂದು ಸ್ವಾರಸ್ಯವಿದೆ. ಮಹಾತ್ಮರ ಸೇವೆಯಿಂದ ಅವರ ಕೃಪೆ ಯಿಂದಲೇ ಭಕ್ತಿಯು ದೊರಕುವದು ಎಂಬುದಂತೂ ಸುನಿಶ್ಚಿತ. ಆದರೆ ಅವರ ಕೃಪೆಯು ದೊರಕುವದು ಹೇಗೆ ?- ಎಂದರೆ ಭಗವಂತನ ಕೃಪಾಲೇಶದಿಂದಲೇ ಅದು ದೊರಕುವದು. ಭಗವಂತನ ಕೃಪಾಲೇಶದಿಂದಾದರೂ- ಎಂಬ ಅಕ್ಷರಾರ್ಥಕ್ಕೆ ಅಭಿಪ್ರಾಯವೇನೆಂದರೆ : ಮೊದಲೇ ನಮಗೆ ಸತ್ಪುರುಷರ ಸಂಗವು ದೊರಕುವದು ಕಷ್ಟ. ಆದ್ದರಿಂದ ಅದು ದೊರಕುವವರೆಗೆ **'ರಂಗ ನಿನ್ನ ಕೊಂಡಾಡುವ ಮಂಗ ಳಾತ್ಮರ । ಸಂಗಸುಖವಿತ್ತು ಕಾಯೊ ಕರುಣಾಸಾಗರ'** ಎಂದು ದಾಸರು ಹಾಡಿರುವಂತೆ 'ಭಕ್ತರ ಸಂಗವನ್ನಾದರೂ ಕೊಡು' ಎಂದು ಬೇಡಿಕೊಳ್ಳುತ್ತಿರ ಬೇಕು. ಈ ಪರೋಕ್ಷಪ್ರಾರ್ಥನೆಯಿಂದ ಮಹತ್ಸಂಗವು ದೊರಕುವದು ; ಆ ಬಳಿಕ ಅವರ ಕೃಪೆಯಿಂದಲೇ ಭಗವದ್ಭಕ್ತಿಯು ದೊರಕುವದು. 'ವಾ' ಎಂಬ ಶಬ್ದಕ್ಕೇ 'ಏವ' ಎಂಬ ಅವಧಾರಣಾರ್ಥವೂ ಇದೆ ; ಆದ್ದರಿಂದ ದೊಡ್ಡವರ ಕೃಪೆಯಿಂದಲೇ, ಭಗವಂತನ ಕೃಪೆಯಿಂದಲೇ, ಭಕ್ತಿಯು ದೊರಕುವದು ಎಂದೂ ಅರ್ಥವನ್ನು ಮಾಡಬಹುದು. ಭಗವಂತನ ಸ್ವರೂಪವನ್ನು ಅರಿತಿರಲಿ, ಅರಿಯ ದಿರಲಿ, 'ದೇವ, ನಿನ್ನ ಸ್ವರೂಪವನ್ನು ನಾನರಿಯೆ, ನೀನು ಹೇಗಿರುವೆಯೋ

ಅಂಥ ನಿನಗೆ ನಮಸ್ಕಾರ !' ಎಂದು ಭಜಿಸುತ್ತಿರುವವರಿಗೆ ಭಕ್ತರ ಸಂಗವು ದೊರಕು ವದು. (ಇದು ಮುಂದೆ ಸೂ. ೪೦ರಲ್ಲಿ ಸ್ಫುಟವಾಗುವದು). ಆದ್ದರಿಂದ ಯಾರಿಗೆ ಪೂರ್ವಕೃತಪುಣ್ಯವಶದಿಂದ ದೊಡ್ಡವರ ಸಂಗವೇ ಮೊದಲು ಸಿಕ್ಕುವದೋ ಅವರಿಗೆ ಸತ್ಸಂಗವೇ ಮುಖ್ಯಸಾಧನ. ಆದರೆ ಯಾರಿಗೆ ವಿದ್ಯಾಮದವೇ ಮುಂತಾದ ಕಾರಣ ಗಳಿಂದ ದೊಡ್ಡವರ ಸಂಗವು ಸಿಕ್ಕುವದಕ್ಕೆ ಅಡ್ಡಿಯಿರುವದೋ ಅವರಿಗೆ ಭಗವತ್ಕೃಪಾ ಲೇಶವುಹಿಮೆಯಿಂದ ಸತ್ಸಂಗವೂ ಅದರಿಂದ ಭಕ್ತಿಯೂ ದೊರಕುವದು– ಎಂದು ತಿಳಿಯಬೇಕು.

ಮಹತ್ಸಙ್ಗಸ್ತು ದುರ್ಲಭೋಽಗಮ್ಯೋಽಮೋಘಶ್ಚ ॥ ೩೯ ॥

೩೯. ದೊಡ್ಡವರ ಸಂಗವಾದರೊ, ದುರ್ಲಭವು, ಅದನ್ನು ಅರಿತುಕೊಳ್ಳುವದೂ ಕಷ್ಟ ; ದೊರೆತರೆ ಅದು ಅಮೋಘವೂ ಆಗಿರು ತ್ತದೆ.

## ಸತ್ಸಂಗವು ದುರ್ಲಭ

೭೬. ಹಿಂದಿನ ಸೂತ್ರದ ವಿವರಣೆಯಲ್ಲಿ ನಾವು ಹೇಳಿರುವ ಅಭಿಪ್ರಾಯ ವನ್ನು ಇಲ್ಲಿ ಸುಸ್ಫುಟವಾಗಿ ತಿಳಿಸಿದೆ.

ಸಂಗವನ್ನು ಬಿಡುವದು ಭಕ್ತಿಗೆ ಸಾಧನವೆಂಗು ಹಿಂದೆ (೩೫ನೆಯ ಸೂತ್ರ ದಲ್ಲಿ) ಹೇಳಿದಮೇಲೂ ಮಹತ್ಸಂಗವನ್ನು ಮಾಡಬೇಕೆಂದು ಹೇಳಿರುವದೇಕೆ ? ಅವರ ಸಂಗವಾದರೂ ಒಂದು ಸಂಗವೇ ಅಲ್ಲವೆ ?– ಎಂಬ ಆಕ್ಷೇಪಕ್ಕೆ ಇಲ್ಲಿ 'ತು' (ಆದರೊ) ಎಂಬ ಶಬ್ದದಿಂದ ಪರಿಹಾರವನ್ನು ಸೂಚಿಸಿರುತ್ತದೆ. ಉಂಡನ್ನವನ್ನು ಅರಗಿಸಿಕೊಳ್ಳಲಾರದವನು ಶುಂಠಿಯನ್ನು ತಿಂದರೆ ಅದು ಅನ್ನವನ್ನೂ ಅರಗಿಸಿ ತಾನೂ ಜೀರ್ಣವಾಗುವಂತೆ ದೊಡ್ಡವರ ಸಂಗವು ಸಿಕ್ಕಿದರೆ ಸರ್ವಸಂಗವನ್ನೂ ಪರಿಹರಿಸಿಕೊಂಡಂತೆ ಆಗುತ್ತದೆ. ಶ್ರದ್ಧಾಭಕ್ತಿಪೂರ್ವಕವಾಗಿ ಮೋಕ್ಷಮಾರ್ಗ ವನ್ನನುಸರಿಸುವವರೇ ಸತ್ಪುರುಷರು.

ಆದರೆ ದೊಡ್ಡವರು ಯಾರು ? ಎಲ್ಲಿರುವರು ?– ಎಂಬುದನ್ನು ಅರಿಯುವದು ಕಡುಕಷ್ಟ. ಕಪಿಲರು ದೇವಹೂತಿಗೆ ಹೇಳಿರುವಂತೆ–

**ತಿತಿಕ್ಷವಃ ಕಾರುಣಿಕಾಃ ಸುಹೃದಃ ಸರ್ವದೇಹಿನಾಮ್ ।**
**ಅಜಾತಶತ್ರವಃ ಶಾನ್ತಾಃ ಸಾಧವಃ ಸಾಧುಭೂಷಣಾಃ ॥**
**ಮಯ್ಯನನ್ಯೇನ ಭಾವೇನ ಭಕ್ತಿಂ ಕುರ್ವನ್ತಿ ಯೇ ದೃಢಾಮ್ ।**
**ಮತ್ಕೃತೇ ತ್ಯಕ್ತಕರ್ಮಾಣಸ್ತ್ಯಕ್ತಸ್ವಜನಬಾನ್ಧವಾಃ ॥**

ಮದಾಶ್ರಯಾಃ ಕಥಾ ಮೃಷ್ಟಾಃ ಶೃಣ್ವನ್ತಿ ಕಥಯನ್ತಿ ಚ ।
ತಪನ್ತಿ ವಿವಿಧಾಸ್ತಾಪಾ ನೈತಾನ್ ಮದ್ಗತಚೇತಸಃ ॥
ತ ಏತೇ ಸಾಧವಃ ಸಾಧ್ವಿ ಸರ್ವಸಙ್ಗವಿವರ್ಜಿತಾಃ ।
ಸಙ್ಗಸ್ತೇಷ್ವಥ ತೇ ಪ್ರಾರ್ಥ್ಯಃ ಸಙ್ಗದೋಷಹರಾ ಹಿ ತೇ ॥

ಭಾಗ. ೩–೨೫–೨೧ರಿಂದ ೨೪

ಸತ್ಪುರುಷರು ತಿತಿಕ್ಷುಗಳಾಗಿರುತ್ತಾರೆ, ಮಹಾಕರುಣಾಮೂರ್ತಿಗಳಾಗಿರುತ್ತಾರೆ, ಅವರಿಗೆ ಶತ್ರುಗಳೇ ಇರುವದಿಲ್ಲ. ಅವರು ಭಗವಂತನನ್ನೇ ಆಶ್ರಯಿಸಿಕೊಂಡು ಆತನಲ್ಲಿ ದೃಢಭಕ್ತಿಯುಳ್ಳವರಾಗಿರುತ್ತಾ, ಆತನ ವಿಷಯದ ಮೃದುಮಧುರವಾದ ಮಾತುಗಳನ್ನು ಹೇಳುತ್ತಲೂ ಕೇಳುತ್ತಲೂ ಇರುವರು. ಆತನಲ್ಲಿಯೇ ನೆಟ್ಟ ಚಿತ್ತವುಳ್ಳವರಾಗಿ ಎಲ್ಲಾ ತಾಪಗಳನ್ನೂ ಸಹಿಸಿಕೊಂಡು ಸರ್ವಸಂಗವನ್ನೂ ಪರಿತ್ಯಜಿಸಿ ಇರುತ್ತಾರೆ. ಅವರ ಸಂಗವನ್ನು ಪಡೆದುಕೊಂಡರೆ ವಿಷಯತ್ಯಾಗವೂ ಸಂಗತ್ಯಾಗವೂ ಸುಲಭವಾಗಿ ವಶವಾಗುವದು.

## ಸತ್ಸಂಗವು ಅಗಮ್ಯ

೭೭. ಆದರೆ ಈ ಮಹಾಪುರುಷರು ಮಹಾತ್ಮರಾದ್ದರಿಂದಲೇ ತಮ್ಮ ಸ್ವರೂಪವನ್ನು ತೋರ್ಪಡಿಸಿಕೊಂಡು ಹೆಮ್ಮೆಯಿಂದ ಮೆರೆಯುತ್ತಿರುವದಿಲ್ಲ. ಅವರು ನಮ್ಮ ಕಣ್ಣಮುಂದೆಯೇ ಇದ್ದರೂ 'ಇವರು ಭಗವಂತನಲ್ಲಿ ಅನುರಕ್ತರಾದ ಸಂತರು' ಎಂಬ ಅರಿವೇ ಆಗುವದಿಲ್ಲ. ಕೆಲವು ವೇಳೆ ಅವರ ಬಾಹ್ಯವರ್ತನೆಯನ್ನು ಕಂಡು ಅವಿವೇಕಿಗಳು, 'ಇವರಿಂದೇನಾದೀತು ? ಇವರು ಅತ್ಯಂತಸಾಮಾನ್ಯಪುರುಷರು'– ಎಂದು ತುಚ್ಛಬುದ್ಧಿಯಿಂದ ಕಾಣುವ ಸಂಭವವೂ ಉಂಟು. ಆದರೆ ದೈವಾನುಗ್ರಹದಿಂದ ಅವರ ನಡತೆಯನ್ನು ಪರಿಶೀಲಿಸಿ 'ಇವರು ಮಹಾತ್ಮರು'–ಎಂದು ಅರಿತುಕೊಳ್ಳುವ ಯೋಗ್ಯತೆಯೂ ಸಿಕ್ಕಬಹುದು. ಸಾಧುಗಳೆಂದರೆ ದೂರಕ್ಕೆ ಹೋಗಿ ತೀರ್ಥಾದಿಗಳ ದರ್ಶನಸೇವಾದಿಗಳಿಂದ ಪವಿತ್ರರಾಗುವಂತೆ ನಮಗೆ ಲಾಭವನ್ನುಂಟುಮಾಡುವವರು ಎಂದು ಬಗೆಯಬಾರದು.

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನನ್ತ್ಯುರುಕಾಲೇನ ದರ್ಶನಾದೇವ ಸಾಧವಃ ॥

ಭಾಗ. ೧೦–೪೮–೩೧

'ನೀರಿನಿಂದಾಗಿರುವ ತೀರ್ಥಗಳು ನಿಜವಾದ ತೀರ್ಥಗಳಲ್ಲ, ಕಲ್ಲುಮಣ್ಣುಗಳಿಂದಾಗಿರುವ ಗೊಂಬೆಗಳು ನಿಜವಾದ ದೇವತೆಗಳಲ್ಲ ; ಮಹಾತ್ಮರ ಸಂಪರ್ಕದಿಂದಲೂ ಮಹಾತ್ಮರು ಪ್ರತಿಷ್ಠೆಮಾಡಿದ್ದರಿಂದಲೂ ಆ ತೀರ್ಥದೇವತೆಗಳು ಕಾಲಾನುಕಾಲಕ್ಕೆ ಭಕ್ತರಿಗೆ ಪಾವಿತ್ರ್ಯವನ್ನುಂಟುಮಾಡುವವು ; ಸಾಧುಗಳು ದರ್ಶನಮಾತ್ರದಿಂದ

ಜನರನ್ನು ಪಾವನಗೊಳಿಸುವರು' ಎಂದಿರುವಂತೆ ಅವರ ದರ್ಶನವು ಅನಂತಫಲವುಳ್ಳದ್ದಾಗಿರುತ್ತದೆ.

## ಸತ್ಸಂಗವು ಅಮೋಘ

೭೮. ಅವರು ಮಾಡಿದ ಉಪದೇಶವೊ, ಎಂದರೆ ಅತ್ಯಂತಬೆಲೆಯುಳ್ಳದ್ದು.

**ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ||**
**ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಣ್ಡವ |**
**ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ ||**

ಗೀ. ೪-೩೪, ೩೫

ಎಂದು ಭಗವಂತನು ಅರ್ಜುನನಿಗೆ ಹೇಳಿರುವಂತೆ ಅವರು ಒಂದು ಮಾತನಾಡಿದರೂ ಅಷ್ಟರಿಂದಲೇ ಆಶ್ರಿತರ ಮೋಹವೆಲ್ಲ ಅತ್ಯಂತವಾಗಿ ಹೋಗಿ ತನ್ನ ಆತ್ಮನಾದ ಭಗವಂತನಲ್ಲಿ ಸಕಲಭೂತಗಳೂ ಇರುತ್ತಿರುವರೆಂಬ ದಿವ್ಯಜ್ಞಾನವು ಉಂಟಾಗಿ ಬಿಡುವದು.

**ಸತ್ಸಙ್ಗಮೋ ಯರ್ಹಿ ತದೈವ ಸದ್ಗತೌ |**
**ಪರಾವರೇಶೇ ತ್ವಯಿ ಜಾಯತೇ ಮತಿಃ ||** ಭಾಗ. ೧೦-೫೧-೫೪

ಎಂಬ ಮುಚುಕುಂದೋಕ್ತಿಯಂತೆ ಸಾಧುಸಮಾಗಮವು ಆಯಿತೆಂದರೆ ಆಗಲೇ ಸನ್ಮಾರ್ಗದಲ್ಲಿಯೂ ಭಗವಂತನಲ್ಲಿಯೂ ಮನಸ್ಸುಂಟಾಗುವದು ಸುನಿಶ್ಚಿತ.

### ಲಭ್ಯತೇಽಪಿ ತತ್ಕೃಪಯೈವ || ೪೦ ||

೪೦. ಹೀಗಿದ್ದರೂ ಆತನ ಕೃಪೆಯಿಂದಲೇ (ಆ ಮಹತ್ಸಮಾಗಮವು) ದೊರಕುತ್ತದೆ.

೭೯. ಮಹಾಪುರುಷರ ಸಂಗವು ದುರ್ಲಭವೆಂಬುದು ನಿಜ. ಆದರೆ ಭಗವಂತನನ್ನೇ ಭಜಿಸುತ್ತಿರುವವರಿಗೆ ಆತನ ಅನುಗ್ರಹದಿಂದಲೇ ಅದೂ ದೊರಕುವದು. "ವಿವೇಕಚೂಡಾಮಣಿ"ಯಲ್ಲಿ ಹೇಳಿರುವಂತೆ,

**ದುರ್ಲಭಂ ತ್ರಯಮೇವೈತದ್ ದೈವಾನುಗ್ರಹಹೇತುಕಮ್ |**
**ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ || ೩ ||**

ಈಶ್ವರನ ಅನುಗ್ರಹದಿಂದಲೇ ಮನುಷ್ಯತ್ವ, ಮುಮುಕ್ಷುತ್ವ, ಮಹಾಪುರುಷರ ಆಶ್ರಯ- ಇವು ಮೂರೂ ದೊರೆಯಬೇಕಾಗಿರುವವು. ಆದ್ದರಿಂದ ಅದು ದೊರಕುವವರೆಗೂ :

ಜ್ಞಾತ್ವಾಽಜ್ಞಾತ್ವಾಥ ಯೇ ವೈ ಮಾಂ ಯಾವಾನ್ ಯಶ್ಚಾಸ್ಮಿ ಯಾದೃಶಃ।
ಭಜನ್ತ್ಯನನ್ಯಭಾವೇನ ತೇ ಮೇ ಭಕ್ತತಮಾ ಮತಾಃ ॥

ಭಾಗ. ೧೧-೧೧-೩೩

ಎಂದಿರುವಂತೆ ಭಗವಂತನ ಸ್ವರೂಪವನ್ನೂ ವಿಭೂತಿಯನ್ನೂ ತಿಳಿದಿರಲಿ, ತಿಳಿಯದೆ ಇರಲಿ, ನೀನೇ ಶರಣು-ಎಂದು ಯಾರು ಭಜಿಸುತ್ತಿರುವರೋ ಅವರಿಗೆ ಭಗವಂತನೇ ಭಕ್ತರ ಸಂಗವನ್ನು ಅನುಗ್ರಹಿಸುವನು. ಸಾಮಾನ್ಯವಾಗಿ ಭಜಿಸುವ ಪ್ರಕಾರ ವನ್ನು ಭಗವಂತನು ಉದ್ಧವನಿಗೆ ಉಪದೇಶಿಸಿರುವ ರೀತಿಯಿಂದ ಯಥಾಶಕ್ತಿಯಾಗಿ ಮಾಡುತ್ತಿರಬೇಕು.

ಮಲ್ಲಿಙ್ಗಮದ್ಭಕ್ತಜನದರ್ಶನಸ್ಪರ್ಶನಾರ್ಚನಮ್ ।
ಪರಿಚರ್ಯಾ ಸ್ತುತಿಃ ಪ್ರಹ್ವಗುಣಕರ್ಮಾನುಕೀರ್ತನಮ್ ॥
ಮತ್ಕಥಾಶ್ರವಣೇ ಶ್ರದ್ಧಾ ಮದನುಧ್ಯಾನಮುದ್ಧವ ।
ಸರ್ವಲಾಭೋಪಹರಣಂ ದಾಸ್ಯೇನಾತ್ಮನಿವೇದನಮ್ ॥
ಮಜ್ಜನ್ಮಕರ್ಮಕಥನಂ ಮಮ ಪರ್ವಾನುಮೋದನಮ್ ।
ಗೀತತಾಣ್ಡವವಾದಿತ್ರಗೋಷ್ಠೀಭಿರ್ಮದ್ಗೃಹೋತ್ಸವಃ ॥
ಯಾತ್ರಾ ಬಲಿವಿಧಾನಂ ಚ ಸರ್ವವಾರ್ಷಿಕಪರ್ವಸು ।
ವೈದಿಕೀ ತಾನ್ತ್ರಿಕೀ ದೀಕ್ಷಾ ಮದೀಯವ್ರತಧಾರಣಮ್ ।
ಮಮಾರ್ಚಾಸ್ಥಾಪನೇ ಶ್ರದ್ಧಾ ಸ್ವತಃ ಸಂಹತ್ಯ ಚೋದ್ಯಮಃ ।
ಉದ್ಯಾನೋಪವನಾಕ್ರೀಡಪುರಮನ್ದಿರಕರ್ಮಣಿ ॥
ಸಮ್ಮಾರ್ಜನೋಪಲೇಪಾಭ್ಯಾಂ ಸೇಕಮಣ್ಡಲವರ್ತನೈಃ ।
ಗೃಹಶುಶ್ರೂಷಣಂ ಮಹ್ಯಂ ದಾಸವದ್ಯದಮಾಯಯಾ ॥
ಅಮಾನಿತ್ವಮದಮ್ಭಿತ್ವಂ ಕೃತಸ್ಯಾಪರಿಕೀರ್ತನಮ್ ।
ಅಪಿ ದೀಪಾವಲೋಕಂ ಮೇ ನೋಪಯುಞ್ಜ್ಯಾನ್ನಿವೇದಿತಮ್ ॥
ಯದ್ಯದಿಷ್ಟತಮಂ ಲೋಕೇ ಯಚ್ಚಾತಿಪ್ರಿಯಮಾತ್ಮನಃ ।
ತತ್ತನ್ನಿವೇದಯೇನ್ಮಹ್ಯಂ ತದಾನನ್ತ್ಯಾಯ ಕಲ್ಪತೇ ॥

ಭಾಗ. ೧೧-೧೧-೩೪ರಿಂದ ೪೧

'ಭಗವಂತನ ಪ್ರತಿಮಾದಿಗಳನ್ನೂ ಭಗವದ್ಭಕ್ತರನ್ನೂ ದರ್ಶನಮಾಡುತ್ತಿರುವದು, ಅವರ ಸ್ಪರ್ಶ, ಅರ್ಚನೆ, ಸೇವೆ, ಸ್ತುತಿ, ನಮಸ್ಕಾರ, ಗುಣಕರ್ಮಗಳನ್ನು ಕೀರ್ತನ ಮಾಡುತ್ತಿರುವದು, ಭಗವಂತನ ಕಥೆಯನ್ನು ಕೇಳುವದರಲ್ಲಿ ಶ್ರದ್ಧೆ, ಭಗವಂತನನ್ನು ಧ್ಯಾನಿಸುತ್ತಿರುವದು, ತಮಗೆ ದೊರಕಿದ್ದನ್ನೆಲ್ಲ ಅರ್ಪಿಸುವದು, ಭಗವಂತನ ದಾಸನೆಂದು ತನ್ನನ್ನೇ ಅರ್ಪಿಸಿಕೊಳ್ಳುವದು, ಭಗವಂತನ ಜನ್ಮವನ್ನೂ ಕರ್ಮ

ಗಳನ್ನೂ ಮತ್ತೊಬ್ಬರಿಗೆ ಹೇಳುತ್ತಿರುವದು, ಆತನ ಪರ್ವದಿನಗಳನ್ನು ಆಚರಿಸುವದು ; ಗೀತ, ನರ್ತನ, ವಾದ್ಯ- ಮುಂತಾದ ಗೋಷ್ಠಿಗಳಿಂದ ದೇವಾಯತನದಲ್ಲಿ ಉತ್ಸವವನ್ನು ಮಾಡುವದು, ಯಾತ್ರಾಬಲಿಸಮರ್ಪಣಕ್ಕಾಗಿ ವರ್ಷದಲ್ಲಿ ಬರುವ ಹಬ್ಬಹರಿದಿನಗಳನ್ನು ಎದುರುನೋಡುತ್ತಿರುವದು, ವೈದಿಕವಾದ ಅಥವಾ ತಾಂತ್ರಿಕವಾದ ದೀಕ್ಷೆಯನ್ನು ಸ್ವೀಕರಿಸುವದು. ಭಗವಂತನ ವ್ರತವನ್ನು ಸ್ವೀಕರಿಸುವದು, ಭಗವಂತನ ಪ್ರತಿಮೆಗಳನ್ನು ಸ್ಥಾಪಿಸುವದರಲ್ಲಿ ತಾನೂ ಮತ್ತೊಬ್ಬರೊಡನೆಯೂ ಶ್ರದ್ಧೆಯನ್ನು ವಹಿಸುವದು ; ಉದ್ಯಾನ, ಉಪವನ, ಕ್ರೀಡಾಸ್ಥಾನಗಳು, ಮಂದಿರಗಳು- ಇವುಗಳ ನಿರ್ಮಾಣದಲ್ಲಿ ಆದರ, ಭಗವಂತನ ಸ್ಥಾನವನ್ನು ಗುಡಿಸುವದು, ಸಾರಿಸುವದು, ನೀರುಚಿಮುಕಿಸುವದು, ರಂಗವಲ್ಲಿಯೇ ಮುಂತಾದವುಗಳಿಂದ ಅಲಂಕರಿಸುವದು, ವಂಚನೆಯಿಲ್ಲದೆ ದಾಸನಂತೆ ನನ್ನ ಗೃಹಕರ್ಮವನ್ನು (ದೇವಾಲಯದಲ್ಲಿ ಸೇವೆಯನ್ನು) ಮಾಡುವದು, ಅಮಾನಿತ್ವ, ಅದಂಭಿತ್ವಗಳನ್ನು ಅಳವಡಿಸಿಕೊಳ್ಳುವದು, ಮಾಡಿದ್ದನ್ನು ಹೇಳಿಕೊಳ್ಳದಿರುವದು- ಭಗವಂತನಿಗೆ ಅರ್ಪಿಸಿದ ದೀಪದ ಬೆಳಕನ್ನಾಗಲಿ ಯಾವ ವಸ್ತುವನ್ನಾಗಲಿ ತನಗಾಗಿ ಉಪಯೋಗಿಸಿಕೊಳ್ಳದೆ ಇರುವದು ; ತನಗೆ ಯಾವದು ಇಷ್ಟತಮವಾಗಿ ಪ್ರಿಯತಮವಾಗಿ ಇರುವದೋ ಅದನ್ನು ಭಗವಂತನಿಗೆ ಅರ್ಪಿಸುವದು- ಇಂಥ ಕರ್ಮಗಳಲ್ಲಿ ತನ್ನ ಶಕ್ತಿಗೆ ಅಳವಡುವಷ್ಟನ್ನು ಮಾಡುತ್ತಿರಬೇಕು. ಇದರಿಂದ ಭಗವತ್ಪ್ರಸಾದವೂ ಮಹಾತ್ಮರ ಸಂಗವೂ ಪ್ರಾಪ್ತವಾಗುವವು.

## ತಸ್ಮಿಂಸ್ತಜ್ಜನೇ ಭೇದಾಭಾವಾತ್ ॥ ೪೧ ॥

೪೧. ಏಕೆಂದರೆ (ಭಗವಂತನಿಗೂ) ಭಕ್ತರಿಗೂ ಭೇದವಿಲ್ಲ.

೮೦. ಭಗವಂತನು ಪ್ರಸನ್ನನಾದರೆ ಭಗವದ್ಭಕ್ತರಾದ ಮಹಾಪುರುಷರ ಸಂಗವು ದೊರಕುವದೆಂದು ಹಿಂದೆ ಹೇಳಿದೆಯಷ್ಟೆ ? ಇದಕ್ಕೆ ಕಾರಣವೇನೆಂದರೆ ಭಕ್ತರೆಂಬವರು ಭಗವಂತನೆಂಬ ಸೂರ್ಯನ ಕಿರಣಗಳಿದ್ದಂತೆ ; ಭಗವಂತನನ್ನು ಶ್ರದ್ಧಾಪುರಸ್ಸರವಾಗಿ ಶರಣುಹೊಕ್ಕಾಗ ಆತನೇ ಆ ಭಕ್ತರ ರೂಪದಿಂದ ನಮಗೆ ದರ್ಶನವನ್ನು ಕೊಡುತ್ತಾನೆ. ಹೇಗೆ ಭಗವಂತನು ಇಲ್ಲದ ಸ್ಥಲವೇ ಇಲ್ಲವೋ ಹಾಗೆಯೇ ಭಗವದ್ಭಕ್ತರು ಇಲ್ಲದ ಸ್ಥಲವೂ ಇಲ್ಲ. ಆದರೆ 'ಇವರು ಭಗವದ್ಭಕ್ತರು' ಎಂದು ನಮ್ಮ ಮನಸ್ಸಿಗೆ ತಟ್ಟಬೇಕಾದರೆ ಸಾಮಾನ್ಯರೂಪದಿಂದ ಭಗವಂತನನ್ನು ಭಜಿಸುವದಕ್ಕೆ ಮೊದಲುಮಾಡಬೇಕು. ಸೂರ್ಯನನ್ನು ನೋಡುವದಕ್ಕೆಂದು ಮನೆಯ ಹೊರಕ್ಕೆ ಬಂದರೆ ಹೇಗೆ ಅವನ ಬೆಳಕಿಗೆ ಬಂದೇತೀರಬೇಕೊ, ಹಾಗೆಯೇ ಭಗವಂತನ ಅನುಗ್ರಹಕ್ಕೆ ಹಂಬಲಿಸುತ್ತಿರುವವರಿಗೆ ಭಕ್ತರ ದರ್ಶನವು ಅವಶ್ಯವಾಗಿ ಆಗುವದು. ಶ್ರೀಕೃಷ್ಣಭಗವಂತನು,

**ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥**
ಗೀ. ೭–೧೭

**ಯೇ ಭಜನ್ತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥**
ಗೀ. ೬–೨೧

**ಜ್ಞಾನೀ ತ್ವಾತ್ಮೈವ ಮೇ ಮತಮ್ ॥** ಗೀ. ೭–೧೮

"ಜ್ಞಾನಿಗೆ ನಾನು ಅತ್ಯಂತಪ್ರಿಯನಾಗಿರುತ್ತೇನಲ್ಲವೆ, ಆದ್ದರಿಂದ ಅವನೂ ನನಗೆ ಪ್ರಿಯನಾಗಿರುವನು. ನನ್ನನ್ನು ಯಾರು ಭಕ್ತಿಯಿಂದ ಭಜಿಸುತ್ತಿರುವರೋ ಅವರು ನನ್ನಲ್ಲಿರುವರು, ನಾನೂ ಅವರಲ್ಲಿರುವೆನು. ಜ್ಞಾನಿಯೆಂದರೆ ನನ್ನ ಆತ್ಮನೇ" ಎಂದು ತನ್ನ ಮಹಿಮೆಯನ್ನರಿತು ತನ್ನನ್ನೇ ಭಜಿಸುತ್ತಿರುವ ಸತ್ಪುರುಷರನ್ನು ಕೊಂಡಾಡಿರುತ್ತಾನೆ. ಈ ಕಾರಣದಿಂದಲೇ ನಾವು ಹಿಂದೆ (ಪು. ೭೬, ೭೭) ಭಕ್ತ, ಭಕ್ತಿ, ಭಗವಾನ್– ಈ ಮೂವರಲ್ಲಿ ಯಾವ ಭೇದವೂ ಇಲ್ಲ, ಭಗವಂತನೇ ಈ ಮೂರು ರೂಪದಿಂದಲೂ ತೋರಿಕೊಳ್ಳುತ್ತಿದಾನೆ– ಎಂದು ಹೇಳಿರುವದು.

ತದೇವ ಸಾಧ್ಯತಾಂ ತದೇವ ಸಾಧ್ಯತಾಮ್ ॥ ೪೨ ॥

೪೨. ಅದನ್ನೇ ಸಾಧಿಸಿಕೊಳ್ಳಬೇಕು, ಅದನ್ನೇ ಸಾಧಿಸಿಕೊಳ್ಳಬೇಕು.

೮೧. ಇಲ್ಲಿ 'ತದೇವ' ಎಂಬ ಅವಧಾರಣೆಯಿಂದ ಯಾವದನ್ನು ಪರಾಮರ್ಶಿಸಿದೆ ಎಂದು ನಿರ್ಣಯಿಸುವದು ಸುಲಭವಲ್ಲ. ಕೆಲವರು (೩೫ರಿಂದ ೩೭ರವರೆಗೆ) ಹಿಂದೆ ಹೇಳಿರುವ ಸಂಗತ್ಯಾಗಾದಿಗಳು ಎಂದು ಕಲ್ಪಿಸಿರುತ್ತಾರೆ. ಆದರೆ ಅವುಗಳನ್ನು ಇಲ್ಲಿ ಪರಾಮರ್ಶಿಸಿದೆ ಎಂಬುದಕ್ಕೆ ಗಮಕವೇನೂ ಇಲ್ಲ. ತ್ಯಾಗಶಬ್ದವು ಪುಲ್ಲಿಂಗವಾಗಿದೆಯಲ್ಲ !– ಎಂಬ ಶಂಕೆಗೆ ಪರಿಹಾರವೂ ಆ ಕಲ್ಪನೆಯಲ್ಲಿ ದೊರಕುವದಿಲ್ಲ. ಮೂವತ್ತನಾಲ್ಕನೆಯ ಸೂತ್ರದಲ್ಲಿ ಹೇಳಿರುವ 'ಸಾಧನಾನಿ' ಎಂಬ ಶಬ್ದವನ್ನು 'ಸಾಧನಮ್' ಎಂದು ಏಕವಚನಕ್ಕೆ ವಿಪರಿಣಾಮವನ್ನು ಮಾಡಿಕೊಂಡರೆ ಇಲ್ಲಿಯವರೆಗೆ ಹೇಳಿರುವ ಸಾಧನವನ್ನು ಎಂದು ಸಾಮಾನ್ಯವನ್ನು ಹೇಳುವ ನಪುಂಸಕಲಿಂಗಕ್ಕೆ ಗತಿಯನ್ನು ಹೇಳಿದಂತೆ ಆಗುತ್ತದೆ. ಅಥವಾ ಮಹತ್ಸಂಗವೇ ಇಲ್ಲಿ ಮುಖ್ಯವಾಗಿ ಉಪಸಂಹೃತವಾಗಿರುವದರಿಂದಲೂ ಮುಂದೆ ದುಸ್ಸಂಗವನ್ನು ಬಿಡಬೇಕೆಂಬುದನ್ನು ಹೇಳುವ ಪ್ರಕರಣವು ಬರುವದರಿಂದಲೂ 'ತತ್' ಎಂಬ ಶಬ್ದಕ್ಕೆ ಲಿಂಗವಿಪರಿಣಾಮವನ್ನುಮಾಡಿ 'ಮಹತ್ಸಂಗ ಏವ' ಎಂದು ಅರ್ಥವನ್ನು ಮಾಡುವದೇ ಹೆಚ್ಚಾಗಿ ಸಂದರ್ಭಕ್ಕೆ ಒಪ್ಪುತ್ತದೆ ಎಂದಿಟ್ಟುಕೊಳ್ಳಬೇಕು. ಈ ಸಾಧನಪ್ರಕರಣವು ಮುಗಿಯಿತೆಂದು ಸೂಚಿಸುವದಕ್ಕೆ 'ತದೇವ ಸಾಧ್ಯತಾಮ್' ಎಂಬುದನ್ನು ಎರಡುಸಲ ಹೇಳಿರುತ್ತದೆ.

ಮಹಾನ್ತಸ್ತೇ ಸಮಚಿತ್ತಾಃ ಪ್ರಶಾನ್ತಾ ।
ವಿಮನ್ಯವಃ ಸುಹೃದಃ ಸಾಧವೋ ಯೇ ॥ ಭಾಗ. ೫-೫-೨

ಯೇ ವಾ ಮಯೀಶೇ ಕೃತಸೌಹೃದಾರ್ಥಾ
ಜನೇಷು ದೇಹಮ್ಭರವಾರ್ತಿಕೇಷು ॥
ಗೃಹೇಷು ಜಾಯಾತ್ಮಜರಾತಿಮತ್ಸು
ನ ಪ್ರೀತಿಯುಕ್ತಾ ಯಾವದರ್ಥಾಶ್ಚ ಲೋಕೇ ॥ ಭಾಗ. ೫-೫-೩

ಎಂಬ ಋಷಭದೇವನ ಉಕ್ತಿಯಂತೆ ಮಹಾಪುರುಷರೆಂದರೆ ಇಷ್ಟವಾದದ್ದು ಬಂದೊದಗಲಿ ಅನಿಷ್ಟವಾದದ್ದೇ ಬಂದೊದಗಲಿ ಸಮಚಿತ್ತರಾಗಿ, ಅಂತಃಕರಣವನ್ನು ಸ್ವಾಧೀನದಲ್ಲಿಟ್ಟುಕೊಂಡು ಕೋಪರಹಿತರಾಗಿ ಎಲ್ಲರಲ್ಲಿಯೂ ಸುಹೃದ್ಭಾವದಿಂದಿರುವವರು. ಇಂಥ ಸಾಧುಗಳು ಭಗವಂತನಲ್ಲಿಯೇ ಮನಸ್ಸಿಟ್ಟುಕೊಂಡು, ಹೊಟ್ಟೆಹೊರೆಯುವ ಮಾತುಗಳನ್ನೇ ಆಡುತ್ತಿರುವವರಲ್ಲಿಯಾಗಲಿ, ಮನೆಮಠದಲ್ಲಾಗಲಿ, ಹೆಂಡಿರು ಮಕ್ಕಳಲ್ಲಾಗಲಿ, ಧನವನ್ನು ಕೊಡುವವರಲ್ಲಾಗಲಿ, ವಿಶೇಷಪ್ರೀತಿಯನ್ನಿಟ್ಟುಕೊಳ್ಳದೆ, ಎಷ್ಟು ಸಿಕ್ಕಿದರೆ ಅಷ್ಟರಿಂದಲೇ ತೃಪ್ತರಾಗಿರುವರು. ಅಂಥವರ ಸಂಗವನ್ನೇ ಸಾಧಿಸಿಕೊಂಡವರಿಗೆ ಭಕ್ತಿಯ ಸಾಧನಗಳು ಅನಾಯಾಸವಾಗಿ ದೊರಕುವವು.

ದುಸ್ಸಙ್ಗಃ ಸರ್ವಥೈವ ತ್ಯಾಜ್ಯಃ ॥ ೪೩ ॥

೪೩. (ಕೆಟ್ಟ ವಸ್ತುಗಳ ಮತ್ತು ಜನರು)ಗಳ ಸಂಗವನ್ನು ಎಲ್ಲಾ ಬಗೆಯಿಂದಲೂ ಬಿಟ್ಟುಬಿಡಬೇಕು.

೮೨. ಮಹಾಪುರುಷರ ಸಂಗವು ದೊರಕದೆ ಇದ್ದರೂ ದುಷ್ಟಸಂಗವನ್ನು ಮಾತ್ರ ಸರ್ವಥಾ ಮಾಡಬಾರದು.

ಯದ್ಯಸದ್ಭಿಃ ಪಥಿ ಪುನಃ ಶಿಶ್ನೋದರಕೃತೋದ್ಯಮೈಃ ।
ಆಸ್ಥಿತೋ ರಮತೇ ಜನ್ತುಸ್ತಮೋ ವಿಶತಿ ಪೂರ್ವವತ್ ॥
ಸತ್ಯಂ ಶೌಚಂ ದಯಾ ಮೌನಂ ಬುದ್ಧಿಃ ಶ್ರೀರ್ಹ್ರೀರ್ಯಶಃ ಕ್ಷಮಾ ।
ಶಮೋ ದಮೋ ಭಗಶ್ಚೇತಿ ಯತ್ಸಙ್ಗಾದ್ಯಾತಿ ಸಙ್ಕ್ಷಯಮ್ ॥
ತೇಷ್ವಶಾನ್ತೇಷು ಮೂಢೇಷು ಖಣ್ಡಿತಾತ್ಮಸ್ವಸಾಧುಷು ।
ಸಙ್ಗಂ ನ ಕುರ್ಯಾಚ್ಛೋಚ್ಯೇಷು ಯೋಷಿತ್ಕ್ರೀಡಾಮೃಗೇಷು ಚ ॥
ಭಾಗ. ೩-೩೧-೩೨ರಿಂದ ೩೪

'ಯಾವಾತನು ಸ್ತ್ರೀಸಂಬಂಧದಲ್ಲಿ ಮತ್ತು ಹೊಟ್ಟೆಹೊರೆಯುವ ಕೆಲಸಗಳಲ್ಲಿಯೇ ಉದ್ಯುಕ್ತರಾಗಿರುವವರ ಸಂಗವನ್ನು ಮಾಡಿ ಅವರ ಮಾರ್ಗವನ್ನೇ ಅನುಸರಿಸು

ತ್ತಾನೋ ಅವನು ನರಕಕ್ಕೇ ಹೋಗುವನು. ಸತ್ಯ, ಶೌಚ, ದಯಾ, ಮೌನ, ಬುದ್ಧಿ, ಧನಸಂಪತ್ತು, ಲಜ್ಜೆ, ಕೀರ್ತಿ, ಕ್ಷಮಾಗುಣ, ಶಾಂತಿ, ದಾಂತಿಗಳು, ಐಶ್ವರ್ಯಾದಿಷಡ್ಗುಣಗಳು- ಇವೆಲ್ಲವೂ ಅವರ ಸಂಗದಿಂದ ಕ್ಷಯವಾಗುವದು. ಅಶಾಂತರೂ ಮೂಢರೂ ಅಂತಃಕರಣವನ್ನು ಹಾಳುಮಾಡಿಕೊಂಡವರೂ ಆದ ಅಸತ್ಪುರುಷರು ಸ್ತ್ರೀಯರ ಆಟದ ಮೃಗಗಳಂತೆ ಸರ್ವರಿಗೂ ಶೋಚ್ಯರಾಗಿರುವರು. ಅಂಥವರ ಸಂಗವನ್ನು ಎಂದಿಗೂ ಮಾಡಬಾರದು' ಎಂದು ಕಪಿಲರು ಹೇಳಿರುತ್ತಾರೆ.

ಕಾಮಕ್ರೋಧಮೋಹಸ್ಮೃತಿಭ್ರಂಶಬುದ್ಧಿನಾಶ
ಸರ್ವನಾಶಕಾರಣತ್ವಾತ್ ॥ ೪೪ ॥

೪೪. ಏಕೆಂದರೆ (ದುಸ್ಸಂಗವು) ಕಾಮ, ಕ್ರೋಧ, ಮೋಹ, ಸ್ಮೃತಿಭ್ರಂಶ, ಬುದ್ಧಿನಾಶ (ಹೀಗೆ)- ಸರ್ವನಾಶಕ್ಕೂ ಕಾರಣವಾಗಿರುತ್ತದೆ.

೪೫. ವಿಷಯತ್ಯಾಗದಿಂದಲೂ ಸಂಗತ್ಯಾಗದಿಂದಲೂ ಭಕ್ತಿಪ್ರಾಪ್ತಿಯಾಗುವದೆಂದು ಹಿಂದೆ ಹೇಳಿತ್ತಷ್ಟೆ? ಈಗ ವಿಷಯಸಂಗವೇ ದುಸ್ಸಂಗವೆಂದೂ ಅದರಿಂದ ಸರ್ವಾನರ್ಥವೂ ಆಗುವದೆಂದೂ ವ್ಯತಿರೇಕಮುಖವಾಗಿ ಹೇಳುತ್ತಿದಾರೆ.

ದುರ್ಜನರ ಸಂಗದಿಂದ ಆಗುವ ಅನರ್ಥಗಳು ಸಾಮಾನ್ಯರಿಗೆ ಮೊದಮೊದಲು ಹತ್ತುವದೇ ಇಲ್ಲ. ವಿಷಯಾಸಕ್ತರಾಗಿರುವವರು ಯಾವಾಗಲೂ ವಿಷಯಗಳ ಸಂಬಂಧವಾದ ಮಾತುಗಳನ್ನೇ ಆಡುತ್ತಿರುವದರಿಂದ ಅವರ ಸಂಗವುಳ್ಳವನಿಗೂ ವಿಷಯಚಿಂತನೆಯುಂಟಾಗುವದು.

**ಧ್ಯಾಯತೋ ವಿಷಯಾನ್ ಪುಂಸಃ ಸಙ್ಗಸ್ತೇಷೂಪಜಾಯತೇ ।**
**ಸಙ್ಗಾತ್ ಸಞ್ಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ॥**
**ಕ್ರೋಧಾದ್ ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿವಿಭ್ರಮಃ ।**
**ಸ್ಮೃತಿಭ್ರಂಶಾದ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥**
ಗೀ. ೨-೬೨, ೬೩

ಎಂದು ಭಗವಂತನು ಅರ್ಜುನನಿಗೆ ಹೇಳಿರುವಂತೆ ವಿಷಯಗಳ ಚಿಂತನೆಯಿಂದ ಅದನ್ನು ಅನುಭವಿಸಬೇಕೆಂಬ ಆಸೆಯುಂಟಾಗುವದು; ಆ ಆಸೆಗೆ ಏನಾದರೂ ಅಡ್ಡಿಯು ಬಂದೊದಗಿದರೆ ಸಿಟ್ಟು ಎದ್ದುಕೊಳ್ಳುವದು. ಸಿಟ್ಟಿನಿಂದ ಯಾವದನ್ನು ಮಾಡಬಹುದು, ಯಾವದನ್ನು ಮಾಡಬಾರದು- ಎಂಬ ವಿವೇಕವೇ ಇಲ್ಲದಂತೆ ಆಗಿಬಿಡುವದು. ಈ ಸಂಮೋಹವುಂಟಾದಾಗ ಮಾಡಬೇಕಾದ ಕೃತ್ಯಗಳನ್ನೆಲ್ಲ ಬಿಟ್ಟು ನಿಷಿದ್ಧಕರ್ಮಗಳನ್ನು ಕೂಡ ಮಾಡುವದಕ್ಕೆ ತೊಡಗುವನು. ಈ ಸಂಮೋಹಕ್ಕೆ ವಶನಾದವನಿಗೆ ಶಾಸ್ತ್ರಾಚಾರ್ಯರ ಉಪದೇಶದಿಂದ ಉಂಟಾಗಿದ್ದ ಕೃತ್ಯಾ

ಕೃತ್ಯವಿವೇಕದ ನೆನವು ತಪ್ಪಿಹೋಗುವದು. ಆ ಅಂತಃಕರಣದಲ್ಲಿ ವಿವೇಚನಾ ಶಕ್ತಿಯೇ ಇಲ್ಲದಾಗುವದು. ಆಮೇಲೆ ಸರ್ವಪುರುಷಾರ್ಥಗಳಿಂದಲೂ ವಂಚಿತ ನಾಗಿ ಕುಕೃತ್ಯಗಳಲ್ಲಿಯೇ ನಿಂತುಬಿಡುವನು. ಹೀಗೆ ಸರ್ವಾನರ್ಥಗಳಿಗೂ ದುಃಸಂಗವೇ ಕಾರಣವಾಗಿರುತ್ತದೆ. ಅವಿವೇಕಿಗಳಾದವರು ವಿಷಯಗಳನ್ನು ಮನಸ್ಸಿನಲ್ಲಿ ಹೊಗಳಾಡಿಸುತ್ತಿರುವದರಿಂದ ಮನಸ್ಸಿನಲ್ಲುಂಟಾಗುವ ವಿಷಯಜ್ಞಾನ, ಸುಖ, ಕಾಮಕ್ರೋಧಾದಿಗಳನ್ನು ತಮಗೇ ಆಗುವವೆಂದುಕೊಳ್ಳುವರು. ಸಾತ್ತ್ವಿಕ ಗುಣದಿಂದ ಆಗುವ ವಿಷಯಜ್ಞಾನದ ಸಂಗ, ವಿಷಯದಿಂದಾಗುವದೆಂದು ತಪ್ಪಾಗಿ ಭಾವಿಸಿಕೊಳ್ಳುವ ಕ್ಷಣಿಕಸುಖದ ಸಂಗ, ರಜೋಗುಣದಿಂದಾಗುವ ಕಾಮದ ಸಂಗ ಮತ್ತು ಕರ್ಮದ ಸಂಗ, ತಮೋಗುಣದಿಂದಾಗುವ ನಿದ್ರೆ, ಆಲಸ್ಯ, ಪ್ರಮಾದ- ಇವುಗಳಿಂದಾಗುವ ಮಂಕಿನ ಸುಖದ ಸಂಗ- ಇವುಗಳೂ ತಮಗೇ ನಿಜವಾಗಿ ಸೇರಿರುತ್ತವೆ ಎಂದು ಅವರು ಭ್ರಮಿಸುವರು. ಐಹಿಕವಾದ ಲೌಕಿಕಸುಖವೇ ಅಲ್ಲದೆ ಪಾರತ್ರಿಕವಾದ ಸುಖವುಕೂಡ ಸತ್ತ್ವಗುಣದ ಸಂಗದಿಂದಲೇ ಆಗುತ್ತಿರು ವದು. ಮೂರುಲೋಕಗಳಲ್ಲಿಯೂ ನಮಗೆ ಆಗುತ್ತಿರುವ ಜ್ಞಾನಸುಖಗಳು ಗುಣ ಸಂಗದಿಂದಲೇ ಆಗಿರುವವು- ಎಂಬುದನ್ನು ಅವರು ನಿಶ್ಚಯಿಸಿಕೊಳ್ಳಲಾರದೆ ಸಂಸಾರದಲ್ಲಿ ತೊಳಲುತ್ತಿರುವರು.

ತರಙ್ಗಾಯಿತಾ ಅಪೀಮೇ ಸಙ್ಗಾತ್ ಸಮುದ್ರಾಯನ್ತಿ ||

೪೫. ಇವು ಅಲೆಗಳಂತಿವೆಯಾದರೂ ಸಂಗದಿಂದ ಸಮುದ್ರ ದಂತೆ ಆಗಿಬಿಡುವವು.

೪೪. ಆಶೆಯೇ ಮುಂತಾದವುಗಳು ಸಮುದ್ರದ ಅಲೆಗಳಿದ್ದಂತೆ; ಇವು ಒಂದುಸಲ ಏಳುವದು, ಮತ್ತೆ ಬೀಳುವದು- ಹೀಗೆ ಮಾಡುತ್ತಲೇ ಇರುತ್ತವೆ. ಸಾಮಾನ್ಯಜನರಿಗೆ ಇವು ಬಂದುಹೋದವೆಂಬುದೇ ಗೊತ್ತಾಗುವದಿಲ್ಲ. ಈ ವೃತ್ತಿ ಗಳು ಉಂಟಾಗುತ್ತಿರುವದೇ ತಮ್ಮ ಸ್ವಭಾವವೆಂದು ಅವರು ಭಾವಿಸಿಕೊಂಡಿರು ವರು. ಹೀಗಿರುವಲ್ಲಿ ವಿವೇಕಿಗಳಾದವರು ಇಗೊ, ನನ್ನಲ್ಲಿ ಕಾಮವುಂಟಾಯಿತು- ಎಂಬುದನ್ನರಿತುಕೊಂಡು ಅದನ್ನು ಅಡಗಿಸಿಕೊಳ್ಳುವದಕ್ಕೆ ಮೊದಲುಮಾಡಬಹುದು; ಇದೂ ಅಲ್ಲದೆ ಕಾಮಕ್ರೋಧಾದಿಗಳು ಎದ್ದುಕೊಂಡವು- ಎಂಬುದನ್ನು ಲಕ್ಷ್ಯವಿಟ್ಟು ನೋಡುವವರಿಗೆ ಅವುಗಳ ಕಾಟದಿಂದ ತಪ್ಪಿಸಿಕೊಳ್ಳುವದು ಸುಲಭವಾಗಿರುತ್ತದೆ. ಆದರೆ ದುಸ್ಸಂಗವಿದ್ದರೆ ಅವುಗಳಿಂದಾಗುವ ಅನರ್ಥವು ಮನಸ್ಸಿಗೆ ಹತ್ತುವದೇಇಲ್ಲ. ಇಷ್ಟೇಅಲ್ಲ, ತಾನೂ ಕಾಮಾದಿಗಳಿಗೆ ವಶನಾಗಿಬಿಡುವನು. ಸೌಭರಿಯು ನೀರಿನಲ್ಲಿ ಒಂದು ಮೀನು ಅನುಭವಿಸುತ್ತಿದ್ದ ಸ್ತ್ರೀಸಂಗವನ್ನು ಕಂಡಮಾತ್ರದಿಂದ ಕಾಮಪರ ವಶನಾಗಿ ಐವತ್ತುಜನ ಪತ್ನಿಯರನ್ನು ವರಿಸಿ ಕೊನೆಗೆ ವಿರಕ್ತನಾಗಿ ಹೇಳಿರುವ ಮಾತಿದು :

ಅಹೋ ಇಮಂ ಪಶ್ಯತ ಮೇ ವಿನಾಶಂ
ತಪಸ್ವಿನಃ ಸಚ್ಚರಿತವ್ರತಸ್ಯ ।
ಅನ್ತರ್ಜಲೇವಾರಿಚರಪ್ರಸಙ್ಗಾತ್
ಪ್ರಚ್ಯಾವಿತಂ ಬ್ರಹ್ಮ ಚಿರಂ ಧೃತಂ ಯತ್ ॥
ಸಙ್ಗಂ ತ್ಯಜೇತ ಮಿಥುನವ್ರತಿನಾಂ ಮುಮುಕ್ಷುಃ
ಸರ್ವಾತ್ಮನಾ ನ ವಿಸೃಜೇತ್ ಬಹಿರಿನ್ದ್ರಿಯಾಣಿ ।
ಏಕಶ್ಚರನ್ ರಹಸಿ ಚಿತ್ತಮನನ್ತ ಈಶೇ
ಯುಞ್ಜೀತ ತದ್ವ್ರತಿಷು ಸಾಧುಷು ಚೇತ್ ಪ್ರಸಙ್ಗಃ ॥

ಭಾಗ. ೯-೬-೫೦. ೫೧

"ಅಯ್ಯೋ, ನೋಡಿರಿ, ನಾನು ಹೇಗೆ ಕೆಟ್ಟೆ! ತಪಸ್ವಿಯಾಗಿದ್ದೆ, ಸದಾಚಾರದಲ್ಲಿಯೇ ನಿರತನಾಗಿದ್ದೆ; ನೀರಿನಲ್ಲಿ ಮೀನುಗಳ ಪರಸ್ಪರಸಂಬಂಧವನ್ನು ನೋಡಿದ ಮಾತ್ರದಿಂದ ಬ್ರಹ್ಮಚಿಂತನೆಯಿಂದ ಚ್ಯುತನಾಗಿಬಿಟ್ಟೆನಲ್ಲ! ಮುಮುಕ್ಷುವಾದವನು ಪರಸ್ಪರಸಂಗವನ್ನೇ ನಿಯಮವಾಗಿಟ್ಟುಕೊಂಡಿರುವವರ ಸಂಗವನ್ನು ಬಿಡಬೇಕು; ಇಂದ್ರಿಯಗಳನ್ನು ಹೇಗೂ ಹೊರಕ್ಕೆ ಬಿಡಲೇಬಾರದು. ಏಕಾಂತದಲ್ಲಿ ತಾನೊಬ್ಬನೇ ಇದ್ದಾಗ್ಯೂ ಅನಂತನಾದ ಈಶ್ವರನಲ್ಲಿ ಚಿತ್ತವಿಟ್ಟುಕೊಂಡಿರಬೇಕು. ಭಗವಂತನ ಚಿಂತನೆಯಲ್ಲಿಯೇ ನಿರತರಾಗಿರುವವರ ಸಂಗವು ಸಿಕ್ಕಿದರೆ ಅವಶ್ಯವಾಗಿ ಅದನ್ನು ಇಟ್ಟುಕೊಳ್ಳಬೇಕು."

ಸಂಗವು ವಿಷಯಚಿಂತನೆಯಿಂದ ಉಂಟಾಯಿತೆಂದರೆ ಕಾಮಕ್ರೋಧಗಳೇ ಮುಂತಾದ ಅಲೆಗಳು ಒಂದರಹಿಂದೊಂದು ಎದ್ದುಕೊಂಡು ಒಟ್ಟುಗೂಡಿ ಸಮುದ್ರವಾಗಿಬಿಡುವವು.

ಸೂತ್ರದಲ್ಲಿ ಸಂಗವೆಂದರೆ ದುಸ್ಸಂಗ, ಅದರಿಂದುಂಟಾಗುವ ವಿಷಯಸಂಗ, ಆ ಸಂಗದಿಂದ ಉಂಟಾಗುವ ಕಾಮವೇ ಮುಂತಾದ ವೃತ್ತಿಗಳು ಒಂದರೊಡನೊಂದು ಮಾಡಿಕೊಳ್ಳುವ ಸಂಗ- ಇಷ್ಟನ್ನೂ ಗ್ರಹಿಸಬೇಕು. ಈ ಅಲೆಗಳು ಒಂದಕ್ಕೊಂದು ಸೇರಿಕೊಂಡಾಗ ದಾಟಲಾಗದ ಸಮುದ್ರವೇ ಆಗಿಬಿಡುವವು. ಆದ್ದರಿಂದ ದುಃಸಂಗವನ್ನು ಸರ್ವಥಾ ಬಿಟ್ಟುಬಿಡುವದಕ್ಕೆ ಮುಮುಕ್ಷುಗಳು ಪ್ರಯತ್ನಿಸಬೇಕು-ಎಂಬುದು ಪ್ರಕರಣದ ಸಾರ.

## ೧೨. ಮಾಯೆಯನ್ನು ದಾಟುವದು ಹೇಗೆ?

ಕಸ್ತರತಿ ಕಸ್ತರತಿ ಮಾಯಾಮ್? ಯಸ್ಸಙ್ಗಾಂಸ್ತ್ಯಜತಿ ಯೋ ಮಹಾನುಭಾವಂ ಸೇವತೇ ಯೋ ನಿರ್ಮಮೋ ಭವತಿ ॥೪೬॥

೪೬. ಯಾವನು ಮಾಯೆಯನ್ನು ದಾಟುತ್ತಾನೆ, ಯಾವನು ದಾಟುತ್ತಾನೆ ? ಯಾವನು ಸಂಗಗಳನ್ನು ಬಿಟ್ಟುಬಿಡುವನೋ,

ಯಾವನು ಮಹಾನುಭಾವನನ್ನು ಸೇವಿಸುವನೋ, ಯಾವನು ನಿರ್ಮಮನಾಗುವನೋ (ಅವನು ಅದನ್ನು ದಾಟುವನು.)

೮೫. ಮಾಯೆಯೆಂದರೇನು? ಹಿಂದಿನ ಸೂತ್ರದಲ್ಲಿ ಹೇಳಿದಂತೆ ಕಾಮ ಕ್ರೋಧಾದಿಗಳಿಗೆ ಕಾರಣವಾಗಿರುವ ಹುಸಿತೋರಿಕೆಯ ದೃಶ್ಯಪ್ರಪಂಚವೆಂಬ ಸಮುದ್ರವೇ **ಮಾಯೆ.** ಮಾಯೆ ಎಂಬ ಶಬ್ದಕ್ಕೆ ಯಾವದು ಇಲ್ಲವೋ ಅದು (ಯಾ ಮಾ ಸಾ ಮಾಯಾ) ಎಂದು ಕೆಲವರು ವ್ಯುತ್ಪತ್ತಿಯನ್ನು ಕಲ್ಪಿಸಿರುತ್ತಾರೆ.

**ಋತೇಽರ್ಥಂ ಯತ್ ಪ್ರತೀಯೇತ ನ ಪ್ರತೀಯೇತ ಚಾತ್ಮನಿ ।**
**ತದ್ವಿದ್ಯಾದಾತ್ಮನೋ ಮಾಯಾಂ ಯಥಾಽಽಭಾಸೋ ಯಥಾ ತಮಃ ॥**

ಭಾಗ. ೨-೧೦-೩೩

ಎಂಬ ಭಾಗವತೋಕ್ತಿಯಂತೆ ಯಾವದು ತಾನು ಕಾಣುವಂಥ ರೂಪದಿಂದ ಇರುವ ವಸ್ತುವಲ್ಲವೋ, ಪರಮಾರ್ಥವಸ್ತುವನ್ನು ಕಂಡುಕೊಂಡವರಿಗೆ ಆತ್ಮನಲ್ಲಿ ನಿಜವಾಗಿಲ್ಲವೋ ಅದನ್ನು **ಮಾಯೆ** ಎಂದು ಬಲ್ಲವರು ಕರೆಯುತ್ತಾರೆ. **ಬ್ರಹ್ಮಾಂಡ ಪುರಾಣ**ದಲ್ಲಿ ಮಾಯೆಯನ್ನು ಹೀಗೆಂದು ವರ್ಣಿಸಿದೆ :

**ಏಷಾ ಚತುರ್ವಿಂಶತಿಭೇದಭಿನ್ನಾ**
**ಮಾಯಾಽಪರಾ ಪ್ರಕೃತಿಸ್ತತ್ಸಮುತ್ಥಾ ।**
**ಕಾಮಕ್ರೋಧೌ ಲೋಭಮೋಹೌ ಭಯಂ ಚ**
**ವಿಷಾದಶೋಕೌ ಚ ವಿಕಲ್ಪಜಾಲಮ್ ॥**
**ಧರ್ಮಾಧರ್ಮೌ ಸುಖದುಃಖೇ ಚ ಸೃಷ್ಟಿ-**
**ರ್ವಿನಾಶಪಾತೌ ನರಕೇ ಗತಿಶ್ಚ ।**
**ವಾಸಃ ಸ್ವರ್ಗೇ ಜಾತಯಶ್ಚಾಶ್ರಮಾಶ್ಚ**
**ರಾಗದ್ವೇಷೌ ವಿವಿಧಾ ವ್ಯಾಧಯಶ್ಚ ॥**
**ಕೌಮಾರತಾರುಣ್ಯಜರಾಧಿಯೋಗ-**
**ಭೋಗಾ ವಿರಾಗಾನಶನವ್ರತಾನಿ ॥**

ಈ ಮಾಯೆಯು ನಿಜವಾಗಿಲ್ಲವೇಇಲ್ಲವೆಂದೂ ಇದು ಇದೆಯೆಂಬುದು ಒರಿಯ ಭ್ರಮೆಯೆಂದೂ ಶಾಸ್ತ್ರಕಾರರು ಹೇಳುತ್ತಾರೆಂದು ಕೆಲವರು ಭ್ರಾಂತರಾಗಿರುತ್ತಾರೆ, ಹಾಗೇನೂ ಇಲ್ಲ; ವ್ಯವಹಾರದೃಷ್ಟಿಯಿಂದ ಇದು ನಿಜವಾಗಿರುತ್ತದೆ, ಏಕೆಂದರೆ ಇದು ಇಪ್ಪತ್ತನಾಲ್ಕುರೂಪಗಳನ್ನು ತಳೆದು ಜನರ ಮುಂದೆ ನರ್ತನಮಾಡುತ್ತಿರುವದು- ಎಂದು ಸಾಂಖ್ಯಶಾಸ್ತ್ರಜ್ಞರು ನಿರ್ಣಯಮಾಡಿರುತ್ತಾರೆ. ಇವುಗಳನ್ನು ಭಗವದ್ಗೀತೆಯ ಈ ಶ್ಲೋಕದಲ್ಲಿ ಸಂಗ್ರಹಿಸಿರುತ್ತದೆ :

**ಮಹಾಭೂತಾನ್ಯಹಙ್ಕಾರೋ ಬುದ್ಧಿರವ್ಯಕ್ತಮೇವ ಚ ।**
**ಇನ್ದ್ರಿಯಾಣಿ ದಶೈಕಂ ಚ ಪಞ್ಚ ಚೇನ್ದ್ರಿಯಗೋಚರಾಃ॥** ಗೀ.೧೩-೫

ಸೂಕ್ಷ್ಮಭೂತಗಳು (೫), ಅಹಂಕಾರವೆಂಬ ಭೂತಕಾರಣ (೧) ಬುದ್ಧಿಯೆಂಬ ಅಹಂಕಾರಕಾರಣ (೧), ಅವ್ಯಕ್ತವೆಂಬ ಬುದ್ಧಿಕಾರಣ (೧), ಇಂದ್ರಿಯಗಳು (೧೦), ಮನಸ್ಸು (೧), ಇಂದ್ರಿಯಕ್ಕೆ ವಿಷಯವಾಗಿರುವ ಮಹಾಭೂತಗಳು (೫)- ಇವಿಷ್ಟೂ ಮಾಯೆಯ ರೂಪಗಳೇ ಆದರೂ ಅವ್ಯಕ್ತವನ್ನೇ ಮಾಯೆಯೆಂದು ಕರೆಯುವದು ರೂಢಿಯಲ್ಲಿದೆ ಇದನ್ನು ಪರಮೇಶ್ವರನ 'ಅಪರಾ ಪ್ರಕೃತಿ' ಎಂದೂ ಕರೆಯುವರು. ಕಾಮ, ಕ್ರೋಧ, ಲೋಭ, ಮೋಹ, ಭಯ, ವಿಷಾದ (ಕುಸಿದುಬೀಳುವದು), ಶೋಕ, ವಿಕಲ್ಪಗಳು, ಧರ್ಮಾಧರ್ಮಗಳು, ಸುಖದುಃಖ ಗಳು, ಸೃಷ್ಟಿಸ್ಥಿತಿ, ನರಕಪಾತ, ಊರ್ಧ್ವಾಧೋಗತಿಗಳು, ಸ್ವರ್ಗವಾಸ, ಜಾತಿಗಳು, ಆಶ್ರಮಗಳು, ರಾಗದ್ವೇಷಗಳು, ರೋಗಗಳು, ಬಾಲ್ಯಾದ್ಯವಸ್ಥೆಗಳು, ಮನೋ ವ್ಯಥೆ, ಸಂಯೋಗವಿಯೋಗಗಳು, ವಿಷಯಭೋಗವಿಷಯತ್ಯಾಗಗಳು- ಇವೆಲ್ಲವೂ ಈ ಮಾಯಾಸಮುದ್ರದ ರೂಪಗಳೇ !

೮೬. ಇದೆಲ್ಲ ನಿಜವಾಗಿ ಬರಿಯ ಮಾಯೆಯೆ? ಇಷ್ಟು ರೂಪಗಳಿಂದ ನಮಗೆ ಪ್ರಿಯಾಪ್ರಿಯಗಳನ್ನು ತಂದೊಡ್ಡುತ್ತಿರುವ ಈ ಸಂಸಾರವನ್ನು ಮಾಯೆ ಯೆನ್ನಬಹುದೆ ? ಇದನ್ನು ದಾಟುವದಕ್ಕೆ ಯಾವ ಉಪಾಯವೂ ಕಾಣುವದಿಲ್ಲ ವಲ್ಲ !- ಎಂಬ ಮನೋವ್ಯಥೆಯಿಂದ ನರಳುತ್ತಿರುವವರಿಗೆ ಈ ಸೂತ್ರದಿಂದ ಹಿಡಿದು ಮುಂದಕ್ಕೆ ನಲವತ್ತೊಂಬತ್ತನೆಯ ಸೂತ್ರವೂ ಸೇರಿ ನಾಲ್ಕು ಸೂತ್ರಗಳಲ್ಲಿ ಧೈರ್ಯವನ್ನುಂಟುಮಾಡುವ ಉತ್ತರವನ್ನು ಹೇಳಿರುತ್ತದೆ. ಇದು ನಿಜವಾಗಿ ಹುರುಳಿಲ್ಲದ ಬರಿಯ ತೋರಿಕೆಯಲ್ಲ, ಆತ್ಮನಲ್ಲಿ ಕಲ್ಪಿತವಾಗಿರುವ ತೋರಿಕೆ ಯಿದು. ಶ್ರೀಶಂಕರಭಗವತ್ಪಾದರವರು ಹೇಳಿರುವಂತೆ :

> **ಸರ್ವಜ್ಞಸ್ಯೇಶ್ವರಸ್ಯಾತ್ಮಭೂತೇ ಇವಾವಿದ್ಯಾಕಲ್ಪಿತೇ ನಾಮ-ರೂಪೇ ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯೇ ಸಂಸಾರಪ್ರಪಞ್ಚ-ಬೀಜಭೂತೇ ಸರ್ವಜ್ಞಸ್ಯೇಶ್ವರಸ್ಯ ಮಾಯಾ, ಶಕ್ತಿಃ, ಪ್ರಕೃತಿಃ-ಇತಿ ಚ ಶ್ರುತಿಸ್ಮೃತ್ಯೋರಭಿಲಪ್ಯೇತೇ** ॥ ಸೂ. ಭಾ. ೨-೧-೧೪

ಸರ್ವಜ್ಞನಾದ ಈಶ್ವರನ ಸ್ವರೂಪವೇ ಎಂಬಂತೆ ಅವಿದ್ಯೆಯಿಂದ ಕಲ್ಪಿತವಾಗಿರುವ, ಈಶ್ವರನ ಸ್ವರೂಪವೇ ಎಂದಾಗಲಿ, ಅದಕ್ಕಿಂತ ಭಿನ್ನವೆಂದಾಗಲಿ ನಿರ್ಣಯಿಸಿ ಹೇಳಲಿಕ್ಕಾಗದಿರುವ, ನಾಮರೂಪಗಳನ್ನು ಸರ್ವಜ್ಞನಾದ ಆ ಈಶ್ವರನ **ಮಾಯೆ, ಶಕ್ತಿ, ಪ್ರಕೃತಿ**- ಎಂದು ಶ್ರುತಿಸ್ಮೃತಿಗಳಲ್ಲಿ ಹೇಳಿರುತ್ತದೆ. ಇವುಗಳ ಪರಮಾರ್ಥ ಸ್ವರೂಪವು ಆ ಸರ್ವಜ್ಞನೂ ಸರ್ವಶಕ್ತನೂ ಆದ ಪರಮಾತ್ಮನೇ ಆಗಿರುತ್ತಿದ್ದರೂ ಆ ರೂಪವನ್ನು ಅರಿತವರಿಗೆ ಮಾತ್ರ ಅವು ಆತ್ಮನಲ್ಲಿ ಕಾಣಿಸುವದಿಲ್ಲ, ಮಿಕ್ಕವರಿಗೆ ನಿಜವಾಗಿಯೇ ಇರುತ್ತವೆ. ಕನಸಿನಲ್ಲಿಯೂ 'ಇದು ಸತ್ಯ, ಇದು ಅಸತ್ಯ'- ಎಂಬ ವಿಭಾಗವು ಕಾಣಿಸುತ್ತಲೇ ಇರುವದಲ್ಲವೆ ? ಕನಸಿನಿಂದ ಎಚ್ಚರುವವರಿಗೂ ಅಲ್ಲಿ ಹೇಗೆ ಸತ್ಯಾಸತ್ಯವಿಭಾಗವು ನಿಜವಾಗಿಯೇ ಇರುವದೋ ಅದರಂತೆಯೇ ವ್ಯವಹಾರ

ದಲ್ಲಿಯೂ ಜ್ಞಾನಾಜ್ಞಾನಗಳು, ಧರ್ಮಾಧರ್ಮಗಳು, ಸಂಸಾರಗತಿ, ಜನ್ಮಮರಣಾದಿ ವಿಕಾರಗಳು, ಸುಖದುಃಖಗಳು- ಎಲ್ಲವೂ ಸತ್ಯವೇ ಆಗಿರುತ್ತವೆ. ಈ ಭಕ್ತಿಶಾಸ್ತ್ರ ದಲ್ಲಿ ಹೇಳಿರುವ ಉಪಾಯಗಳಿಂದ ಯಾರು ಭಗವಂತನನ್ನೇ ಶರಣುಹೊಗುವರೋ ಅವರು ಈ ಮಾಯೆಯನ್ನು ದಾಟುವರು; ಅವರಿಗೆ ಈ ಮಾಯಾಸ್ವಪ್ನದಿಂದಾಗಿ ರುವ ಸಂಸಾರವು ಆತ್ಯಂತಿಕವಾಗಿ ಇಲ್ಲವಾಗುವದು.

**ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।**
**ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ ॥**
ಗೀ. ೭-೧೪

ಎಂಬ ಭಗವದುಕ್ತಿಯಂತೆ ಸತ್ತ್ವರಜಸ್ತಮೋಮಯವಾದ ಈ ಮಾಯೆಯು ಭಗವಂತನಿಗೆ ಅಧೀನವಾಗಿರುತ್ತದೆ. ಈ ಮಾಯಾಸಮುದ್ರದಲ್ಲಿ ಮುಳುಗುತ್ತಲೂ ಏಳುತ್ತಲೂ ಇರುವ ಸಂಸಾರಿಗಳಿಗೆ ಸ್ವಪ್ರಯತ್ನದಿಂದ ಇದನ್ನು ದಾಟುವದು ಬಲು ಕಷ್ಟ. ಆದರೆ ಯಾರುಯಾರು ಇದನ್ನು ದಾಟುವದಕ್ಕೆ ತಮ್ಮ ಸ್ವಪ್ರಯತ್ನವನ್ನು ಮಾಡುವದನ್ನು ಬಿಟ್ಟು ಭಗವಂತನನ್ನೇ ಶರಣುಹೊಗುವರೋ ಅವರು ಈ ಮಾಯೆ ಯನ್ನು ದಾಟುವರು. ಭಗವಂತನಿಗೆ ಶರಣುಹೊಗುವದು ಹೇಗೆಂಬುದನ್ನು ಈ ಸೂತ್ರದಿಂದ ಹೇಳುವದಕ್ಕೆ ಮೊದಲುಮಾಡಿರುತ್ತದೆ :-

## ಯಃ ಸಙ್ಗಂಸ್ತ್ಯಜತಿ ಯೋ ಮಹಾನುಭಾವಂ ಸೇವತೇ

೮೭. ಹಿಂದೆ ಹೇಳಿರುವಂತೆ ದುಸ್ಸಂಗಗಳನ್ನು ಬಿಡುವದು, ಮತ್ತು ಮಹತ್ಸಂಗ ವನ್ನು ಮಾಡುವದು- ಇವು ಮೊಟ್ಟಮೊದಲನೆಯ ಉಪಾಯ.

**ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇ-**
**ಸ್ತಮೋದ್ವಾರಂ ಯೋಷಿತಾಂ ಸಙ್ಗಿಸಙ್ಗಮ್ ॥** ಭಾಗ. ೫-೫-೨

ಮಹಾಪುರುಷರ ಸಂಗವು ಅವಿದ್ಯೆಯಿಂದಾಗಿರುವ ಮಾಯಾಸಮುದ್ರವನ್ನು ದಾಟು ವದಕ್ಕೆ ಪರಮೋಪಾಯವು; ಇದರಂತೆ ಸ್ತ್ರೀಸಂಗಿಗಳೇ ಮುಂತಾದ ವಿಷಯಾಸಕ್ತರ ಸಂಗವೇ ಅವಿದ್ಯಾಕೃತಸಂಸಾರಸಮುದ್ರದಲ್ಲಿ ಬೀಳುವದಕ್ಕೆ ಕಾರಣವು. ಸುಕೇಶ ಭಾರದ್ವಾಜನೇ ಮೊದಲಾದ ಆರು ಜನರು ಪರಬ್ರಹ್ಮಜ್ಞಾನಕ್ಕೆಂದು ಪೂಜ್ಯರಾದ **ಪಿಪ್ಪಲಾದರನ್ನು** ಶರಣುಹೊಕ್ಕು ಅವರ ತತ್ತ್ವೋಪದೇಶದಿಂದ ಕೃತಕೃತ್ಯರಾಗಿ

**ते तमर्चयन्तस्त्वं हि नः पिता योऽस्माकमविद्यायाः परं पारं तारयसि ॥**
ಪ್ರ. ೬-೮.

"ಆತನನ್ನು ಅರ್ಚಿಸಿ ಈ ಅವಿದ್ಯಾಕೃತವಾದ ಜನ್ಮಜರಾಮರಣರೋಗದುಃಖಗಳೇ ಮುಂತಾದ ಮೊಸಳೆಗಳಿಂದ ತುಂಬಿದ ಮಾಯಾಸಾಗರವನ್ನು ದಾಟಿಸಿ ಆಚೆಯ ದಡವನ್ನು ಸೇರಿಸಿರುವೆಯಲ್ಲವೆ ? ನೀನೇ ನಮ್ಮ ನಿಜವಾದ ತಂದೆ" ಎಂದು

ಕೃತಜ್ಞತೆಯನ್ನು ತೋರಿಸಿದರೆಂದು **ಪ್ರಶ್ನೋಪನಿಷತ್ತಿನಲ್ಲಿದೆ.** ದೊಡ್ಡವರ ಸಂಗದಿಂದ ಅವರ ಮಹಾಗುಣಗಳೂ ನಮ್ಮಲ್ಲಿರುವ ದೋಷಗಳೂ ಕಾಣುವವು. ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡವರಿಗೆ ಮುಖದ ಮಾಲಿನ್ಯವು ಗೊತ್ತಾಗುವಂತೆಯೇ ಇದು.

## ಯೋ ನಿರ್ಮಮೋ ಭವತಿ

ಇದಲ್ಲದೆ **'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ'** ಎಂಬಂತೆ ದೊಡ್ಡವರಿಗೆ ದಂಡವತ್ಪ್ರಣಾಮವನ್ನು ಮಾಡಿ ಅವರ ಸೇವೆಯನ್ನು ಮಾಡುತ್ತಿರುವದರಿಂದ ಶಿಷ್ಯರಾದವರು ತಮ್ಮ ತನುಮನೋಧನಗಳನ್ನು ಅವರಿಗೆ ಒಪ್ಪಿಸಿ ನಿರ್ಮಮರಾಗುತ್ತಾರೆ. **'ಮಮೇತಿ ಬಧ್ಯತೇ ಜನ್ತುರ್ನ ಮಮೇತಿ ವಿಮುಚ್ಯತೇ'** ಎಂಬಂತೆ ನನ್ನದೆಂಬುದೇ ಬಂಧಕ್ಕೆ ಕಾರಣವಾಗಿರುತ್ತದೆ; ನನ್ನದೇನೂ ಇಲ್ಲ- ಎಂಬ ಮಮತಾತ್ಯಾಗವೇ ಮಾಯೆಯಿಂದ ಮುಕ್ತನಾಗುವದಕ್ಕೆ ಕಾರಣವಾಗುತ್ತದೆ.

ಯೋ ವಿವಿಕ್ತಸ್ಥಾನಂ ಸೇವತೇ ಯೋ ಲೋಕಬನ್ಧ-
ಮುನ್ಮೂಲಯತಿ ನಿಸ್ತ್ರೈಗುಣ್ಯೋ ಭವತಿ ಯೋ
ಯೋಗಕ್ಷೇಮಂ ತ್ಯಜತಿ ॥ ೪೭ ॥

೪೭. ಯಾವನು ಏಕಾಂತವಾಸವನ್ನು ಮಾಡುತ್ತಿರುವನೋ ಯಾವನು ಲೋಕಬಂಧವನ್ನು ಬೇರುಮಟ್ಟ ಕಿತ್ತುಹಾಕುವನೋ ಯಾವನು ನಿಸ್ತ್ರೈಗುಣ್ಯನಾಗುವನೋ ಯಾವನು ಯೋಗಕ್ಷೇಮವನ್ನು ಬಿಡುವನೋ (ಅವನು ದಾಟುವನು).

೪೮. ದೊಡ್ಡವರ ಉಪದೇಶವನ್ನು ಪಡೆದು ಅದರಂತೆ ತಾನೂ ಸಾಧನವನ್ನು ಮಾಡುವದಕ್ಕೆ ಪ್ರಾರಂಭಿಸಬೇಕು.

**ತಸ್ಮಾದ್ಗುರುಂ ಪ್ರಪದ್ಯೇತ ಜಿಜ್ಞಾಸುಃ ಶ್ರೇಯ ಉತ್ತಮಮ್ ।**
**ಶಾಬ್ದೇ ಪರೇ ಚ ನಿಷ್ಣಾತಂ ಬ್ರಹ್ಮಣ್ಯುಪಶಮಾಶ್ರಯಮ್ ॥**
**ತತ್ರ ಭಾಗವತಾನ್ ಧರ್ಮಾನ್ ಶಿಕ್ಷೇದ್ ಗುರ್ವಾತ್ಮದೈವತಃ ।**
**ಅಮಾಯಯಾನುವೃತ್ತ್ಯಾ ಯೈಸ್ತುಷ್ಯೇದಾತ್ಮಾऽಽತ್ಮದೋ ಹರಿಃ ॥**

ಭಾಗ. ೧೧-೩-೨೧, ೨೨

ಎಂಬ **ಪ್ರಬುದ್ಧೋಕ್ತಿಯಂತೆ** ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿನಲ್ಲಿ ಸೇವಾಪೂರ್ವಕವಾಗಿ ಭಾಗವತಧರ್ಮಗಳನ್ನು ಕಲಿತುಕೊಂಡಬಳಿಕ ಲೌಕಿಕಜನರು ಹೋಗಿಬರುತ್ತಿರುವ ಗದ್ದಲದ ಸ್ಥಲಗಳನ್ನು ಬಿಟ್ಟು ಅರಣ್ಯ ಪರ್ವತ, ಗುಹೆ-

ಮುಂತಾದ ಯಾವದಾದರೊಂದು ಏಕಾಂತಸ್ಥಲವನ್ನು ಆರಿಸಿಕೊಂಡು ಅಲ್ಲಿ ಗುರೂಪ ದೇಶದಂತೆ ಭಗವಂತನ ನಾಮಸ್ಮರಣೆ, ಸ್ವರೂಪದ ಧ್ಯಾನ- ಇವುಗಳಲ್ಲಿ ನಿರತ ನಾಗಿರಬೇಕು.

## ಲೋಕಬನ್ಧಮುನ್ಮೂಲಯತಿ

೪೯. ಹೀಗೆ ಮಾಡುವ ಮುಂಚೆಯೇ ಲೋಕಬಂಧನನ್ನು ಬೇರುಸುಟ್ಟ ಕಿತ್ತೊಗೆದಿರಬೇಕು. ಮನುಷ್ಯಲೋಕ, ಪಿತೃಲೋಕ, ದೇವಲೋಕ- ಎಂಬ ಮೂರು ಲೋಕಗಳಲ್ಲಿ ಯಾವನ ಮನಸ್ಸು ನೆಟ್ಟುಕೊಂಡಿರುತ್ತದೋ ಅವನು ಮಾಯಾಕ್ಷೇತ್ರ ದಲ್ಲಿಯೇ ಕೆಲಸಮಾಡುತ್ತಿರುವನು. ಮನುಷ್ಯಲೋಕವನ್ನು ಪುತ್ರಪ್ರಾಪ್ತಿಯಿಂದ ಗೆದ್ದುಕೊಳ್ಳಬೇಕು, ಪಿತೃಲೋಕವನ್ನು ಶಾಸ್ತ್ರೋಕ್ತಕರ್ಮಗಳ ಅನುಷ್ಠಾನದಿಂದ ಗೆದ್ದುಕೊಳ್ಳಬೇಕು ; ಉಪಾಸನೆಯಿಂದ ದೇವಲೋಕವನ್ನು ಗೆದ್ದುಕೊಳ್ಳಬೇಕು- ಎಂದು '**सोऽयं मनुष्यलोकः पुत्रेणैव जय्यो नान्येन कर्मणा, कर्मणा पितृलोको विद्यया देवलोकः**'॥ ' (ಬೃ. ೧-೫-೧೬) ಎಂಬ ಶ್ರುತಿಯು ಹೇಳುತ್ತಿರುವದು. ಆದರೆ ಎಲ್ಲಾ ಲೋಕಗಳನ್ನೂ ಮೀರಿರುವ ಪರಮಾತ್ಮನನ್ನೇ ನೋಡಬೇಕೆಂದು ಬಯಸುವಾತನಿಗೆ '**किं प्रजया करिष्यामो येषां नोऽयमात्माऽयं लोकः**' ( ಬೃ. ೪-೪-೨೨) ಎಂಬ ಶ್ರುತಿವಚನದಂತೆ ಪ್ರಜಾಸಂತತಿಯಾಗಲಿ ಕರ್ಮೋಪಾಸನೆಗಳ ಗೋಜಾಗಲಿ ಬೇಕಿರುವದಿಲ್ಲ. ಅವನು ಮುಂದಿನ ಸೂತ್ರದಲ್ಲಿ ಹೇಳಿರುವಂತೆ ಲೋಕ ಬಂಧಗಳನ್ನೆಲ್ಲ ಕತ್ತರಿಸಿಹಾಕಿರುತ್ತಾನೆ. '**ಋಣಾನಿ ತ್ರೀಣ್ಯಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್**' (ದೇವಋಣವೇ ಮುಂತಾದ ಮೂರು ಋಣ ಗಳನ್ನೂ ತೀರಿಸಿದಬಳಿಕವೇ ಮೋಕ್ಷದಲ್ಲಿ ಮನಸ್ಸಿಡಬೇಕು) ಎಂಬ (ಮನು. ೬-೩೫) ಸ್ಮೃತಿಯಂತೆ ತೀರಿಸಬೇಕಾಗಿರುವ ಯಾವ ಋಣವೂ ಉಳಿದಿರಲಾರದು. ಲೋಕದ ಆಸೆಗಳನ್ನು ಮೀರಿದವರಿಗೆ '**एतं वै तमात्मानं विदित्वा ब्राह्मणाः पुत्रैषणायाश्च वित्तैषणायाश्च लोकैषणायाश्च व्युत्थायाऽथ भिक्षाचर्यं चरन्ति।........ उभे ह्येते एषणे एव भवतः॥**' (ಬೃ. ೩-೫-೧) ಎಂಬಂತೆ ಯಾವ ಋಣವೂ ಇರುವದಿಲ್ಲ.

## ನಿಸ್ತ್ರೈಗುಣ್ಯೋ ಭವತಿ

೫೦. ಲೋಕಬಂಧನನ್ನು ಕತ್ತರಿಸಿಹಾಕುವದಕ್ಕೆ ಉಪಾಯವೇನೆಂದರೆ ನಿಸ್ತ್ರೈಗುಣ್ಯನಾಗುವದೇ. ಸತ್ತ್ವ, ರಜಸ್ಸು, ತಮಸ್ಸು- ಎಂಬ ಮೂರು ಗುಣ ಗಳಿಂದಲೇ ಜಗತ್ತೆಲ್ಲವೂ ಆಗಿರುವದೆಂದು ಸಾಂಖ್ಯರು ಹೇಳುತ್ತಾರೆ. ಭಗವದ್ಗೀತೆ ಯಲ್ಲಿಯೂ ಈ ವಾದವನ್ನು ಅಂಗೀಕರಿಸಿರುತ್ತದೆ.

**ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ ।**
**ಸತ್ತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಃ ಸ್ಯಾತ್ ತ್ರಿಭಿರ್ಗುಣೈಃ ॥**

ಗೀ. ೧೮–೪೦

ಈ ಮೂರು ಗುಣಗಳ ಸಂಬಂಧವಿಲ್ಲದ್ದು ಈ ಲೋಕದಲ್ಲಾಗಲಿ ದೇವಲೋಕದಲ್ಲಾಗಲಿ ಒಂದೂ ಇಲ್ಲನೇ ಇಲ್ಲ. ಇವುಗಳೊಳಗೆ ತಮೋಗುಣವೆಂಬುದು ಎದ್ದುಕೊಂಡಾಗ ಮನುಷ್ಯನನ್ನು ಮನಸ್ಸಿಗೆ ಏನೂ ತೋಚದಂತೆ ಮಾಡಿ, ಯಾವ ಕೆಲಸಕ್ಕೂ ಅವಕಾಶವನ್ನು ಕೊಡದೆ ಎಚ್ಚರಿಕೆಯನ್ನು ತಪ್ಪಿಸಿ ಮೋಸವನ್ನುಂಟುಮಾಡಿಬಿಡುವದು. ತಾಮಸಾಹಾರಗಳನ್ನು ತಿಂದು ಸುಮ್ಮನೆ ಇದ್ದಲ್ಲಿದ್ದುಕೊಂಡು ನಿದ್ರಾದಿಗಳಿಂದ ಕಾಲವನ್ನು ಕಳೆಯುವ ಸೋಮಾರಿಗಳಲ್ಲಿ ಈ ಗುಣದ ಪ್ರಭಾವವನ್ನು ಕಾಣಬಹುದು. ರಜೋಗುಣವು ಆಶೆಯನ್ನು ಹೆಚ್ಚಿಸಿ ಯಾವದಾದರೊಂದು ಕೆಲಸದಲ್ಲಿ ತೊಡಗುತ್ತಲೇ ಇರುವಂತೆ ಮಾಡುತ್ತಿರುವದು ; ಮತ್ತೊಬ್ಬರ ಸ್ವತ್ತನ್ನು ಕಸಿದುಕೊಳ್ಳುವ ಇಚ್ಛೆ, ಹರ್ಷರಾಗದ್ವೇಷಾದಿಗಳಲ್ಲಿ ಮುಳುಗಿರುವದು, ಏನಾದರೂ ತಮಗೆ ಬೇಕೇಬೇಕೆಂಬ ತಹತಹ- ಇವೆಲ್ಲ ರಜೋಗುಣದ ಸ್ವಭಾವ. ಕೇವಲ ನಿರ್ಮಲವಾಗಿರುವ ಸತ್ತ್ವಗುಣದ ಕಾರ್ಯವೆಂದರೆ ಮನಸ್ಸಿನಲ್ಲಿ ಸುಖದ ಆಶೆಯನ್ನೂ ಯಾವದಾದರೂ ಜ್ಞಾನವನ್ನು ಸಂಪಾದಿಸುವದರಲ್ಲಿ ತವಕವನ್ನೂ ಉಂಟುಮಾಡುತ್ತಿರುವದು. ಈ ಮೂರು ಗುಣಗಳ ವಿವರವನ್ನು ಗೀತೆಯ ಹದಿನಾಲ್ಕು, ಹದಿನೇಳು, ಹದಿನೆಂಟನೆಯ ಅಧ್ಯಾಯಗಳಲ್ಲಿ ವಿವರಿಸಿರುತ್ತದೆ. ಇವುಗಳಲ್ಲಿ ಒಂದು ಎದ್ದುಕೊಂಡಾಗ ಇನ್ನೆರಡು ಹಿಮ್ಮೆಟ್ಟಿರುತ್ತವೆ ; ಆದರೆ ಯಾವದೊಂದು ಗುಣವೂ ಒಂಟಿಯಾಗಿ ಯಾವಾಗಲೂ ಪ್ರಾಣಿಗಳಲ್ಲಿರುವದೇ ಇಲ್ಲ.

ಇವುಗಳನ್ನು ವಿಚಾರಬೇಕೆನ್ನುವವನು ಮೊದಲು ತಮೋಗುಣವನ್ನು ರಜೋಗುಣದ ಅವಲಂಬನೆಯಿಂದ ಗೆದ್ದುಕೊಳ್ಳಬೇಕು. ಯಾವದಾದರೊಂದು ಕೆಲಸದಲ್ಲಿ ವ್ಯಾಪೃತನಾಗುವದರಿಂದ ತಮೋಗುಣವು ಎದ್ದುಕೊಳ್ಳುವದಕ್ಕೆ ಅವಕಾಶವಿಲ್ಲದಂತೆ ಆಗುವದು. ರಜೋಗುಣವು ಹೆಚ್ಚಾಗಿದೆಯೆಂದು ತಿಳಿದಾಗ ಅದನ್ನು ಜ್ಞಾನಸುಖಶಾಂತಿಗಳ ಹಂಬಲಿಕೆಯನ್ನು ಬೆಳೆಯಿಸಿಕೊಂಡು ತುಳಿಯುವ ಪ್ರಯತ್ನವನ್ನು ಮಾಡಬೇಕು. ಸತ್ತ್ವವು ರಜಸ್ತಮೋಮಿಶ್ರವಾಗಿಯೂ ತೋರಿಕೊಳ್ಳಬಹುದಾದ್ದರಿಂದ ಶುದ್ಧಸತ್ತ್ವದ ಅವಲಂಬನೆಯಿಂದ ಅದನ್ನು ಮೆಟ್ಟಿಸುವದಕ್ಕೆ ಯತ್ನಿಸಬೇಕು. ಮುಂದೆ ಭಗವಂತನ ಭಕ್ತಿಯನ್ನು ಸಂಪಾದಿಸಿಕೊಂಡಮೇಲೆ–

**ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।**
**ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥**

ಗೀ. ೧೪–೨೬

ಎಂದಿರುವಂತೆ ಭಗವಂತನ ಸ್ವರೂಪದಲ್ಲಿಯೇ ನಿಂತು ಆತ್ಯಂತಿಕವಾಗಿ ಗುಣಾತೀತ ನಾಗುವನು.

## ಯೋಗಕ್ಷೇಮಂ ತ್ಯಜತಿ

೯೧. ಇದಕ್ಕೆ ಯೋಗಕ್ಷೇಮದ ಚಿಂತೆಯನ್ನು ಬಿಟ್ಟುಬಿಡುವದು ಮೊದಲನೆಯ ಸಾಧನ. **'ಯೋಗ'**ವೆಂದರೆ 'ಇದನ್ನು ಪಡೆದುಕೊಂಡಿಲ್ಲ; ಇದನ್ನು ಸಂಪಾದಿಸಿಕೊಳ್ಳಬೇಕು' ಎಂಬ ಚಿಂತೆ. 'ಇದನ್ನು ಸಂಪಾದಿಸಿಕೊಂಡದ್ದಾಯಿತು; ಇನ್ನು ಇದನ್ನು ಸಂಪಾದಿಸಿಕೊಳ್ಳಬೇಕು' ಎಂಬ ಚಿಂತೆಯಲ್ಲಿಯೇ ಯಾವಾಗಲೂ ಮುಳುಗಿರುವಾತನು ಅಸುರನೆನಿಸುತ್ತಾನೆ. ಅವನಿಗೆ ಎಂದಿಗೂ ಶ್ರೇಯೋಮಾರ್ಗದಲ್ಲಿ ನಡೆಯುವದು ಸಾಧ್ಯವಿಲ್ಲ. ದೊರೆತಷ್ಟಕ್ಕೆ ತೃಪ್ತನಾಗಿ ಭಗವಂತನು ಹೇಗೋ ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ– ಎಂಬ ಭರವಸೆಯಿಂದ ಭಗವಂತನ ಕಡೆಗೆ ಮನಸ್ಸನ್ನು ಹೊರಳಿಸಿದವನು ನಿರ್ಯೋಗಕ್ಷೇಮನು. ಭಕ್ತಿಮಾರ್ಗದಲ್ಲಿ ಮುನ್ನಡೆದಂತೆಲ್ಲ ಮನುಷ್ಯನು ತನ್ನ ಯೋಗಕ್ಷೇಮಗಳಿಗಾಗಿ ಮಾಡಿಕೊಳ್ಳಬೇಕಾದ ಪ್ರಯತ್ನವು ಕಡಿಮೆಯಾಗುತ್ತಾ ಹೋಗುವದು. ಕೊನೆಗೆ ಎಂದೆಂದಿಗೂ ಭಗವಂತನೇ ನಮಗೆ ಗತಿಯೆಂಬ ಜ್ಞಾನವನ್ನು ಪಡೆದು ಆತನ ಚಿಂತೆಯಲ್ಲಿಯೇ ಮುಳುಗಿರುವ ಪರಭಕ್ತನಿಗೆ–

**ಅನನ್ಯಾಶ್ಚಿನ್ತಯನ್ತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥**

ಗೀ. ೯–೨೨

ಎಂದಿರುವಂತೆ ಭಗವಂತನಿಗೂ ಭಕ್ತನಿಗೂ ಯಾವ ಭೇದವೂ ಇರುವದಿಲ್ಲವಾದ್ದರಿಂದ ನಿರಾಯಾಸವಾಗಿ ಅವನ ಯೋಗಕ್ಷೇಮಗಳು ನಡೆಯುತ್ತಿರುವವು. 'ದೇವರು ಹೇಗಾದರೂ ನನ್ನನ್ನು ಕಾಪಾಡುತ್ತಾನೆ' ಎಂದು ಸುಮ್ಮನೆ ಕುಳಿತವರ ಮಾತಲ್ಲ, ಇದು. ಅಂಥವರ ಯೋಗಕ್ಷೇಮವನ್ನು ಭಗವಂತನೇ ನೋಡಿಕೊಳ್ಳುತ್ತಿರುವನೆಂಬುದು ನಿಜ. ಆದರೆ ಅಂಥ ಆಲಸರ ಯೋಗಕ್ಷೇಮವು ಅವರ ಅರ್ಹತೆಗೆ ತಕ್ಕಂತೆ ಕಷ್ಟದಿಂದಲೇ ಸಾಗುವದು. ಅಂಥ ಸೋಮಾರಿಗಳಿಗೆ ಹಸಿವು ನೀರಡಿಕೆಗಳು, ಬಡತನ, ಜನರ ತಿರಸ್ಕಾರ– ಮುಂತಾದ ರೂಪಗಳಿಂದ ಎಚ್ಚರಿಕೆಕೊಟ್ಟು ಅಷ್ಟರಮಟ್ಟಿಗೆ ಅವರು ಮಾಡಬಹುದಾದ ಪ್ರಯತ್ನದಿಂದ ಅವರ ಯೋಗಕ್ಷೇಮವು ಸಾಗುವಂತೆ ಭಗವಂತನು ಏರ್ಪಡಿಸಿರುತ್ತಾನೆ. ಪರಭಕ್ತನು ಹಾಗಲ್ಲ. ಅವನಿಗೆ ಬದುಕಿರಬೇಕೆಂಬ ಅಥವಾ ಸಾಯಬೇಕೆಂಬುದರ ಚಿಂತೆಯೇ ಇರುವದಿಲ್ಲ. ಅವನು ನಿತ್ಯನಿರಂತರವಾಗಿ ಭಗವಚ್ಚಿಂತನೆಯಲ್ಲಿಯೇ ರತನಾಗಿರುತ್ತಾನೆ. ಅದೇ ಅವನ ಯೋಗಕ್ಷೇಮಕ್ಕೆ ಬೇಕಾದ ಏರ್ಪಾಡನ್ನು ಸಿದ್ಧಗೊಳಿಸುತ್ತಿರುತ್ತದೆ.

ಯಃ ಕರ್ಮಫಲಂ ತ್ಯಜತಿ, ಕರ್ಮಾಣಿ ಸಂನ್ಯಸ್ಯತಿ,
ತತೋ ನಿರ್ದ್ವನ್ದ್ವೋ ಭವತಿ ॥ ೪೮ ॥

೪೮. ಯಾವನು ಕರ್ಮಫಲಗಳನ್ನು ಬಿಡುತ್ತಾನೋ, ಕರ್ಮಗಳನ್ನು ಬಿಡುತ್ತಾನೋ, ಅದರಿಂದ ದ್ವಂದ್ವಗಳಿಲ್ಲದವನಾಗುತ್ತಾನೋ (ಅವನು ದಾಟುತ್ತಾನೆ).

## ಕರ್ಮಫಲಂ ತ್ಯಜತಿ

೯೨. ಮೂಢರು 'ಯೋಗಕ್ಷೇಮವನ್ನು ಬಿಡುವದೆಂಬುದು ಆಗದವಾತು' ಎಂದೇ ಭಾವಿಸಿಕೊಂಡಿರುತ್ತಾರೆ. 'ನನಗೆ ಇಂಥ ಫಲವು ದೊರಕಬೇಕು' ಎಂಬ ಗುರಿಯಿಲ್ಲದೆ ಇದ್ದರೆ ಮಾಡಿದ ಕೆಲಸವು ಸರಿಯಾಗಿ ಫಲಕಾರಿಯಾದೀತೆ ?' ಎಂಬುದೇ ಅವರ ಶಂಕೆ. ಆದರೆ ಫಲದ ಆಶೆಯಿಂದ ಕೆಲಸವನ್ನು ಮಾಡುವವರು ಮೊದಲು ಫಲವು ಬೇಕೆಂದು ಕೆಲಸದಲ್ಲಿ ತೊಡಗುತ್ತಾರೆಂಬುದು ನಿಜ ; ಆದರೆ ಕೆಲಸವನ್ನು ಮಾಡುವಾಗ ಫಲದ ಚಿಂತೆಯೇ ಅವರನ್ನು ಬಾಧಿಸುತ್ತಿದ್ದರೆ ಅವರ ಕೆಲಸವು ಎಂದಿಗೂ ಸರಿಯಾಗಿ ಆಗಲಾರದು. ಫಲವು ಎಂದಿಗಾದೀತು ? ಈ ಕೆಲಸಕ್ಕೆ ಎಷ್ಟು ಫಲವುಂಟಾದೀತು ?' -ಎಂಬ ಚಿಂತೆಯು ಕೆಲಸವನ್ನು ಮಾಡುವ ಕಾಲಕ್ಕೆ ಯಾರಿಗೆ ಇಲ್ಲದೆಇರುವದೋ ಅವರಿಗೇ ಉತ್ತಮವಾದ ಫಲವು ದೊರೆಯುವದು. ಚಿತ್ರವನ್ನು ಬರೆಯುವದು, ಕಾವ್ಯಬಂಧವನ್ನು ಮಾಡುವದು- ಮುಂತಾದ ಕೆಲಸಗಳಲ್ಲಿ ತೊಡಗಿರುವವರು ತತ್ಕಾಲಕ್ಕೆ ಕೆಲಸದಲ್ಲಿಯೇ ಮಗ್ನರಾಗಿಬಿಟ್ಟಿರುತ್ತಾರೆ ; ಕೆಲಸಮಾಡುವವನು 'ಕೆಲಸವು ಯಶಸ್ವಿಯಾಗುವದಕ್ಕಾಗಿ ಹೀಗೆ ಮಾಡುತ್ತಿದೇನೆ' ಎಂಬುದೇ ಮುಂತಾದ ಚಿಂತೆಯು ಒಂದಿಷ್ಟೂ ಇಲ್ಲದೆ ಕೆಲಸಕ್ಕಾಗಿ ಕೆಲಸವನ್ನು ಮಾಡುತ್ತಿದ್ದರೆ ಆ ಕೆಲಸವೇ ಉತ್ತಮವಾಗಿ ಕಾರ್ಯಕಾರಿಯಾಗುವದೆಂಬುದು ವಿವೇಕಿಗಳೆಲ್ಲರಿಗೂ ಮನವರಿಕೆಯಾಗಿರುತ್ತದೆ.

## ಕರ್ಮಾಣಿ ಸಂನ್ಯಸ್ಯತಿ

೯೩. ಹೀಗೆ ಕೆಲಸದಲ್ಲಿಯೇ ಮಗ್ನರಾಗಿರುವವರಿಗೇ ಕೆಲಸವು ಉತ್ತಮಪ್ರಕಾರದ್ದಾಗುವದೆಂಬುದು ಹಾಗಿರಲಿ, ಬಾಹ್ಯಲೋಕದಲ್ಲಿ ಆಗುತ್ತಿರುವ ಕ್ರಿಯೆಗಳು ಮನುಷ್ಯನಿಂದಾಗುತ್ತಿವೆಯೆ ? ಅಥವಾ ಮನುಷ್ಯನೊಳಗೆ ಆಗುತ್ತಿರುವ ನಿತ್ಯಕ್ರಿಯೆಗಳಾದರೂ ಯಾರಿಂದಾಗಿರುತ್ತವೆ ? ಎಂಬುದನ್ನು ವಿಚಾರಿಸಿದರೆ, ಅವು ಯಾವವೂ ಮನುಷ್ಯನ ಅಧೀನದಿಂದ ನಡೆಯುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಗಾಳಿಯು ಇತ್ತಲಿಂದ ಅತ್ತಕಡೆಗೆ ಬೀಸುತ್ತಿರುವದು, ಬೆಂಕಿಯು ಸುಡುತ್ತಿರುವದು, ಉರಿಯು ಮೇಲಕ್ಕೇ ಎದ್ದುಕೊಳ್ಳುತ್ತಿರುವದು, ಸೂರ್ಯನು ಹುಟ್ಟುತ್ತಲೂ

ಮುಳುಗುತ್ತಲೂ ಇರುವದು, ಮಳೆಯು ಆಗಾಗ್ಗೆ ಋತುಮಾನಕ್ಕೆ ಸರಿಯಾಗಿ ಬೀಳುತ್ತಿರುವದು– ಇವೇ ಮುಂತಾದವುಗಳು ಯಾರ ಅಧೀನಕ್ಕೆ ಒಳಗಾಗಿರುತ್ತವೆ? ಮನುಷ್ಯನಿಗೆ ಜನನಮರಣಗಳು ಆಗುತ್ತಿರುವದು, ಅವನ ಇಂದ್ರಿಯಗಳೂ ಮನಸ್ಸೂ ಬುದ್ಧಿಯೂ ನಿಯತಕ್ರಮದಿಂದ ಕೆಲಸಮಾಡುತ್ತಿರುವದು– ಇವೆಲ್ಲ ಮನುಷ್ಯನ ಅಧೀನದಲ್ಲಿ ಆಗುತ್ತಲೇಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಮನುಷ್ಯನು ಕೆಲವು ಪ್ರಕೃತಿನಿಯಮಗಳನ್ನು ಅನುಸರಿಸಿ ಅದನ್ನು ತನ್ನ ಉದ್ದೇಶಕ್ಕೆ ಅನುಗುಣವಾಗಿ ತಿರುಗಿಸಿಕೊಳ್ಳುತ್ತಿರುವದೂ ಆಧಿಭೌತಿಕ, ಆಧಿದೈವಿಕ– ಎಂಬ ತನ್ನ ಹೊರಗಿನ ಪ್ರಪಂಚವಿಭಾಗವನ್ನೇ ಅಲ್ಲದೆ ಶರೀರದ ಒಳಗಿನ ಶರೀರಾಂಗಗಳ ವ್ಯಾಪಾರವನ್ನೂ ಇಂದ್ರಿಯಮನೋವ್ಯಾಪಾರಗಳನ್ನೂ ಪರೀಕ್ಷಿಸಿ ಕೆಲಕೆಲವು ವಿಷಯಗಳಲ್ಲಿ ಅವುಗಳನ್ನು ಹಿಡಿತಕ್ಕೆ ತಂದುಕೊಳ್ಳುತ್ತಿರುವದೂ ವಿಜ್ಞಾನದ ಶೋಧನಗಳಿಗೆ ಬೇಕಾಗುವಂತೆ ಹೊಸಹೊಸ ಯಂತ್ರೋಪಕರಣಗಳನ್ನು ಕಂಡುಹಿಡಿಯುತ್ತಿರುವದೂ ನಿಜ. ಆದರೆ ಆ ಪ್ರಕೃತಿನಿಯಮಗಳು ಅಷ್ಟು ಕ್ರಮದಿಂದಿರುವದಕ್ಕೆ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಆಯಾ ದೃಶ್ಯಗಳ ವ್ಯಾಪಾರಗಳು ಮನುಷ್ಯನ ವ್ಯಾಪಾರಕ್ಕೆ ಹೊರಚ್ಚಾಗಿಯೇ ಸ್ವತಂತ್ರವಾಗಿ ನಿಯಮಾನುಸಾರವಾಗಿ ನಡೆಯುತ್ತಿರುವದಕ್ಕೂ ಕಾರಣವೇನೆಂಬುದನ್ನು ಯಾರೂ ಈವರೆಗೆ ಗೊತ್ತುಮಾಡಿರುವದಿಲ್ಲ ; ಮುಂದ ಎಂದಿಗೂ ಗೊತ್ತುಪಡಿಸುವ ಸಂಭವವೂ ಇರುವದಿಲ್ಲ. ಅಲ್ಲವೆ? ಇದರಿಂದ ಏನು ಸಿದ್ಧವಾಗುತ್ತದೆ?

**भीषास्माद् वातः पवते । भीषोदेति सूर्यः । भीषास्मादग्निश्चेन्द्रश्च ।**
**मृत्युर्धावति पञ्चम इति ॥** ತೈ. ೨–೮

ಎಂಬ ಉಪನಿಷದ್ವಾಕ್ಯದಂತೆ ಪರಿಮಿತವಾದ ಶಕ್ತಿಗಳುಳ್ಳ ಮನುಷ್ಯನಿಗೆ ಅಧೀನವಾಗುವ ಈ ವಾಯು, ಸೂರ್ಯ, ಅಗ್ನಿ, ಪರ್ಜನ್ಯ, ಮೃತ್ಯು– ಇವುಗಳ ಅಭಿಮಾನಿ ದೇವತೆಗಳೂ ಭಗವಂತನ ನಿಯಮಕ್ಕೆ ಒಳಪಟ್ಟೇ ಕೆಲಸವನ್ನು ಮಾಡುತ್ತಿದಾರೆ ಎಂಬುದೇ ಸತ್ಯ.

ಇದರಂತೆ ನಮ್ಮ ಶರೀರ, ಇಂದ್ರಿಯಗಳು, ಪ್ರಾಣ, ಮನಸ್ಸು, ಬುದ್ಧಿ– ಇವುಗಳ ಕರ್ಮದಲ್ಲಾದರೂ ನಮಗೆ ಸ್ವಾತಂತ್ರ್ಯವಿದೆಯೆ?– ಎಂದು ವಿಚಾರಿಸಿದರೆ ಅದೂ ಇಲ್ಲ.

**श्रोत्रस्य श्रोत्रं मनसो मनो यद्वाचो ह वाचं स उ प्राणस्य प्राणः ।**
**चक्षुषश्चक्षुरतिमुच्य धीराः प्रेत्यास्माल्लोकादमृता भवन्ति ॥** ಕೇ. ೧–೨

(ಈ ಆತ್ಮನು) ಕಿವಿಗೆ ಕಿವಿ, ಮನಸ್ಸಿಗೆ ಮನಸ್ಸು, ವಾಕ್ಕಿಗೆ ವಾಕ್ಕು, ಪ್ರಾಣಕ್ಕೆ ಪ್ರಾಣ, ಕಣ್ಣಿಗೆ ಕಣ್ಣು ; ಎಲ್ಲವನ್ನೂ ಬಿಟ್ಟಿದ್ದ ವಿವೇಕಿಗಳು ಈ ಲೋಕವನ್ನು

ಬಿಟ್ಟು ತೆರಳಿ ಅಮೃತರಾಗುತ್ತಾರೆ) ಎಂಬ ಶ್ರುತಿಯಂತೆ ಇಂದ್ರಿಯಗಳು. ಮನಸ್ಸು, ಪ್ರಾಣ ಈ ಎಲ್ಲವರ ವ್ಯಾಪಾರವೂ ಎಲ್ಲಕ್ಕೂ ಆತ್ಮನಾದ ಆ ಭಗವಂತನ ಸಾನ್ನಿಧ್ಯದಿಂದಲೇ ನಡೆಯುತ್ತಿರುವವು. ಧ್ರುವನು ಸ್ತೋತ್ರಮಾಡಬೇಕೆಂದು ತವಕಿಸುತ್ತಿದ್ದಾಗ ಭಗವಂತನು ಅವನ ಕೆನ್ನೆಗೆ ವೇದಮಯನಾದ ತನ್ನ ಶಂಖವನ್ನು ತಗಲಿಸಲು ಅವನು ಹೀಗೆಂದು ಸ್ತುತಿಸಿರುತ್ತಾನೆ :

**ಯೋಽನ್ತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ**
**ಸಞ್ಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ ।**
**ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್**
**ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಮ್ ॥**

ಭಾಗ. ೪-೯-೬

"ಭಗವಂತನೆ, ಸಮಸ್ತಶಕ್ತಿಯುಕ್ತನಾದ ಯಾವ ನೀನೇ ನನ್ನೊಳಗೆ ಪ್ರವೇಶಿಸಿ ನನ್ನೀ ವಾಗಿಂದ್ರಿಯವನ್ನೂ ಪಾಣಿಪಾದಶ್ರವಣತ್ವಗಾದೀಂದ್ರಿಯಗಳನ್ನೂ ಜೀವ ಕಳೆಯಿಂದ ಕೂಡುವಂತೆ ಮಾಡುತ್ತಿರುವೆಯೋ ಅಂಥ ಪುರುಷನಾದ ನಿನಗೆ ನಮಸ್ಕಾರ!' ಈ ಪುರಾಣವಾಕ್ಯದಲ್ಲಿಯೂ ಭಗವಂತನಿಂದಲೇ ನಮ್ಮ ಆಧ್ಯಾತ್ಮಿಕ ವ್ಯಾಪಾರಗಳೆಲ್ಲವೂ ನಡೆಯುತ್ತಿರುವವೆಂಬುದನ್ನು ಪ್ರತಿಪಾದಿಸಿರುತ್ತದೆ. ಹೀಗೆಂಬ ಅರಿವನ್ನು ಸಂಪಾದಿಸಿಕೊಂಡ ಮಹನೀಯರೇ ಪರಭಕ್ತರು, ಅವರು ಎಂದೆಂದಿಗೂ ಮಾಯೆಯನ್ನು ದಾಟಿರುತ್ತಾರೆ. ಗೌಣಭಕ್ತಿಯನ್ನು ಅಭ್ಯಾಸಮಾಡುತ್ತಿರುವವರು ನನ್ನ ವ್ಯಾಪಾರಗಳೆಂದು ನಾನು ಭಾವಿಸಿರುವ ಕರ್ಮಗಳೆಲ್ಲವೂ ಆ ಭಗವಂತನದೇ ಆಗಿರುತ್ತವೆ, ಆತನಿಗೆ ಇವನ್ನು ಅರ್ಪಿಸಿಬಿಟ್ಟಿರುತ್ತೇನೆ ; ಇವುಗಳಲ್ಲಿ ನಮಗೆ ಯಾವ ಸ್ವತ್ವವೂ ಇಲ್ಲ- ಎಂದು ಕರ್ಮಗಳನ್ನು ಆತನಿಗೇ ಅರ್ಪಿಸಿಬಿಡಬೇಕು.

**ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।**
**ಅನನ್ಯೇನೈವ ಯೋಗೇನ ಮಾಂ ಧ್ಯಾಯನ್ತ ಉಪಾಸತೇ ॥**
**ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ॥**

ಗೀ. ೧೨-೬೭

(ಯಾರು ಸರ್ವಕರ್ಮಗಳನ್ನೂ ನನ್ನಲ್ಲಿಯೇ ಇಟ್ಟು ನನಗೇ ಅರ್ಪಿಸುತ್ತಾ) ನನ್ನಲ್ಲಿಯೇ ತತ್ಪರರಾಗಿರುತ್ತಾರೋ ಅವರನ್ನು ಈ ಮೃತ್ಯುಯುಕ್ತವಾದ ಸಂಸಾರ ವೆಂಬ ಸಾಗರದಲ್ಲಿ ಮುಳುಗದಂತೆ ಎತ್ತುವೆನು) ಎಂದು ಭಗವಂತನು ಹೇಳಿರು ವದಕ್ಕೆ ಇದೇ ತಾತ್ಪರ್ಯ.

ಇನ್ನು ಭಗವಂತನು ತ್ಯಾಗದ ತತ್ತ್ವವನ್ನು ವಿವೇಚನೆಮಾಡುವಾಗ

**ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ ।**
**ಸಙ್ಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ ॥**

ನ ದ್ವೇಷ್ಟ್ಯಕುಶಲಂ ಕರ್ಮ ಕುಶಲೇ ನಾನುಷಜ್ಜತೇ ।
ತ್ಯಾಗೀ ಸತ್ತ್ವಸಮಾವಿಷ್ಟೋ ಮೇಧಾವೀ ಛಿನ್ನಸಂಶಯಃ ॥
ಗೀ. ೧೮-೯, ೧೦

ಎಂದಿರುವಂತೆ ಕಾಮ್ಯಕರ್ಮವನ್ನು ದ್ವೇಷಿಸದೆ ನಿತ್ಯಕರ್ಮದಲ್ಲಿ ಸಕ್ತನಾಗದೆ ಸಂಗಫಲತ್ಯಾಗಪೂರ್ವಕವಾಗಿ ಕರ್ಮವನ್ನು ಮಾಡತಕ್ಕದ್ದಾದ್ದರಿಂದ ಮಾಡುತ್ತೇನೆ ಎಂದು ಮಾಡುತ್ತಿರುವದು ಗೌಣಸಂನ್ಯಾಸವು- ಎಂಬುದನ್ನು ಇಲ್ಲಿ ಸೇರಿಸಿಕೊಳ್ಳ ಬೇಕೆಂಬುದನ್ನು ಸೂಚಿಸುವದಕ್ಕೆ '**ಕರ್ಮಫಲಂ ತ್ಯಜತಿ**' (ಕರ್ಮಫಲವನ್ನು ಬಿಡುತ್ತಾನೋ) ಎಂಬುದನ್ನು ಬಿಡಿಸಿ ಹೇಳಿ ಅನಂತರ '**ಕರ್ಮಾಣಿ ಸಂನ್ಯಸ್ಯತಿ**' ಎಂದು ಸೂತ್ರದಲ್ಲಿ ಹೇಳಿರುತ್ತದೆ.

## ನಿರ್ದ್ವಂದ್ವೋ ಭವತಿ

೯೪. ಮಾಯೆಯು ದ್ವಂದ್ವಮಯವಾಗಿರುತ್ತದೆ. ಸಂಸಾರದಲ್ಲಿ ಈ ದ್ವಂದ್ವಬಾಧೆಯು ಯಾರನ್ನೂ ಬಿಟ್ಟದ್ದಲ್ಲ.

ಇಚ್ಛಾದ್ವೇಷಸಮುತ್ಥೇನ ದ್ವನ್ದ್ವಮೋಹೇನ ಭಾರತ ।
ಸರ್ವಭೂತಾನಿ ಸಮ್ಮೋಹಂ ಸರ್ಗೇ ಯಾನ್ತಿ ಪರನ್ತಪ ॥
ಯೇಷಾಂ ತ್ವನ್ತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್ ।
ತೇ ದ್ವನ್ದ್ವಮೋಹನಿರ್ಮುಕ್ತಾಃ ಭಜನ್ತೇ ಮಾಂ ದೃಢವ್ರತಾಃ ॥
ಗೀ. ೭-೨೭, ೨೮

ಎಂಬ ಭಗವದುಕ್ತಿಯಂತೆ ಜನರು ಹುಟ್ಟಿದಂದಿನಿಂದಲೂ ದ್ವಂದ್ವಮೋಹಕ್ಕೆ ಸಿಕ್ಕಿಯೇ ಇರುತ್ತಾರೆ. ಇಚ್ಛಾದ್ವೇಷಗಳು ಜೀವರಿಗೆ ಸ್ವಭಾವದಿಂದಲೇ ಇರುತ್ತವ ಯಾದರೂ ಪುಣ್ಯಕರ್ಮವನ್ನು ಮಾಡಿ ಪಾಪವನ್ನು ಕಳೆದುಕೊಂಡಿರುವವರು ಭಗವಂತನಲ್ಲಿ ಭಕ್ತಿಯನ್ನು ಪಡೆದುಕೊಂಡು ಮಾಯೆಯನ್ನು ದಾಟುತ್ತಾರೆ. ಆದ್ದರಿಂದಲೇ ಕರ್ಮಯೋಗದಲ್ಲಿ 'ನಿರ್ದ್ವಂದ್ವನಾಗಿ ನಿತ್ಯಸತ್ತ್ವಸ್ಥನಾಗಿ ನಿರ್ಯೋಗ ಕ್ಷೇಮನಾಗಿರು' ಎಂದು ಭಗವಂತನು ಅರ್ಜುನನಿಗೆ ಉಪದೇಶಿಸಿರುತ್ತಾನೆ. ಆದರೆ ನಿರ್ದ್ವಂದ್ವತ್ವಾದಿಗಳೂ ಆತ್ಯಂತಿಕವಾಗಿ ಲಭಿಸುವದು ಪರಭಕ್ತಿಯಿಂದಲೇ ಎಂಬುದನ್ನು ಮಾತ್ರ ಮರೆಯಬಾರದು.

ಯದಾ ಸ್ತುತಿಂ ಚ ನಿನ್ದಾಂ ಚ ಸಮತ್ವೇನೈವ ಪಶ್ಯತಿ ।
ಕಾಞ್ಚನಂ ಚಾಯಸಂ ಚೈವ ಸುಖಂ ದುಃಖಂ ತಥೈವ ಚ ॥
ಶೀತಮುಷ್ಣಂ ತಥೈವಾರ್ಥಮನರ್ಥಂ ಪ್ರಿಯಮಪ್ರಿಯಮ್ ।
ಜೀವಿತಂ ಮರಣಂ ಚೈವ ಬ್ರಹ್ಮ ಸಂಪದ್ಯತೇ ತದಾ ॥

ಎಂದಿರುವಂತೆ ಸ್ತುತಿ, ನಿಂದೆ; ಚಿನ್ನ, ಕಬ್ಬಿಣ; ಸುಖ, ದುಃಖ; ಶೀತ, ಉಷ್ಣ: ಅರ್ಥ, ಅನರ್ಥ; ಪ್ರಿಯ, ಅಪ್ರಿಯ; ಬದುಕು, ಸಾವು- ಇವೇ ಮುಂತಾದ ದ್ವಂದ್ವಗಳು ಅವರಿಗೆ ಸಮವಾಗಿರುವವು. ಕರ್ಮಫಲವನ್ನು ಬಿಟ್ಟು, ಕರ್ಮಗಳನ್ನೂ ಸಂನ್ಯಾಸಮಾಡಿ, ಆತ್ಯಂತಿಕವಾಗಿ ನಿರ್ದ್ವಂದ್ವರಾಗಿರುವದರಿಂದ ಅವರಿಗೆ ಮಾಯೆಯ ಸೋಂಕೇ ಇರುವದಿಲ್ಲ.

ವೇದಾನಪಿ ಸಂನ್ಯಸ್ಯತಿ

ಕೇವಲಮವಿಚ್ಛಿನ್ನಾನುರಾಗಂ ಲಭತೇ ॥ ೪೯ ॥

೪೯. (ಯಾವನು) ವೇದಗಳನ್ನೂ ಬಿಟ್ಟುಬಿಡುವನೋ ಬರಿಯ ಕಡಿವಡೆಯದ ಅನುರಾಗವನ್ನೇ ಪಡೆದುಕೊಳ್ಳುವನೋ (ಅವನು ಮಾಯೆಯನ್ನು ದಾಟುತ್ತಾನೆ).

**ವೇದಾನಪಿ ಸಂನ್ಯಸ್ಯತಿ**

೯೫. ಕರ್ಮಗಳು ವೇದೋಕ್ತವಾಗಿವೆಯಾದರೂ ಅಧಿಕಾರಿಯಾದವನು ಕರ್ಮಸಂನ್ಯಾಸವನ್ನು ಮಾಡಬಹುದೆಂದು ಶ್ರುತಿಯಲ್ಲಿಯೇ ಹೇಳಿದೆ. ಆದ್ದರಿಂದ ಕರ್ಮಸಂನ್ಯಾಸವನ್ನು ಒಪ್ಪಿದರೂ ಒಪ್ಪಬಹುದು. ಆದರೆ ವೇದಗಳನ್ನು ಸಂನ್ಯಾಸ ಮಾಡಬಹುದೆ ? '**ವೇದಸಂನ್ಯಸನಾಚ್ಛೂದ್ರಸ್ತಸ್ಮಾದ್ವೇದಂ ನ ಸಂನ್ಯಸೇತ್ ॥**' (ವ. ಸ್ಮೃ ೧೦-೫) ಎಂಬ ವಸಿಷ್ಠಸ್ಮೃತಿವಾಕ್ಯವು ವೇದವನ್ನು ಬಿಟ್ಟವರಿಗೆ ಶೂದ್ರತ್ವವು ಬರುವದೆಂದು ಸಾರುತ್ತಿದೆ ಎಂದು ಕೆಲವರ ಅಭಿಪ್ರಾಯ.

ಇದೂ ಸರಿಯಲ್ಲ. ಏಕೆಂದರೆ ಸರ್ವಕರ್ಮಸಂನ್ಯಾಸವನ್ನು ಮಾಡಿದ ಜ್ಞಾನಿ ಭಕ್ತನಿಗೆ ಕರ್ಮವನ್ನು ವಿಧಿಸುವ ವೇದದಿಂದ ಆಗಬೇಕಾದದ್ದಾದರೂ ಏನಿದೆ ? ಕರ್ಮತ್ಯಾಗದಿಂದ ಅನಿಷ್ಟಫಲವು ಹೇಗೆ ಆಗಲಾರದೋ ಹಾಗೆಯೇ ಪರಭಕ್ತನಿಗೆ ವೇದತ್ಯಾಗದಿಂದಲೂ ಆಗಲಾರದು.

**ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಮ್ ।**
**ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್ ॥** ಗೀ. ೧೮-೧೨

ಎಂಬಂತೆ ನರಕಪಾತವೇ ಮುಂತಾದ ಅನಿಷ್ಟಫಲಗಳೂ ದೇವತ್ವಪ್ರಾಪ್ತಿಯೇ ಮುಂತಾದ ಇಷ್ಟಫಲಗಳೂ ಮನುಷ್ಯತ್ವಪ್ರಾಪ್ತಿಯೆಂಬ ಮಿಶ್ರಫಲವೂ ಅಜ್ಞರಾದ ಅಸಂನ್ಯಾಸಿಗಳಿಗೆ ಆಗುವವೇ ಹೊರತು ಪರಮಾತ್ಮನನ್ನೇ ನಂಬಿರುವ ಭಕ್ತರಿಗೆ ಎಂದಿಗೂ ಆಗಲಾರವು. ಆದ್ದರಿಂದಲೇ **ಭಾಗವತಪುರಾಣದಲ್ಲಿ**

**ತಾವತ್ ಕರ್ಮಾಣಿ ಕುರ್ವೀತ ನ ನಿರ್ವಿದ್ಯೇತ ಯಾವತಾ ।**
**ಮತ್ಕಥಾಶ್ರವಣಾದೌ ವಾ ಶ್ರದ್ಧಾ ಯಾವನ್ನ ಜಾಯತೇ ॥**
ಭಾಗ. ೧೧-೨೦-೯

ಎಲ್ಲಿಯುವರೆಗೆ ಫಲಭೋಗದಲ್ಲಿ ವೈರಾಗ್ಯವುಂಟಾಗುವದಿಲ್ಲವೋ, ಭಗವತ್ಕಥಾ ಶ್ರವಣಾದಿಗಳಲ್ಲಿ ಎಲ್ಲಿಯುವರೆಗೆ ಶ್ರದ್ಧೆಯುಂಟಾಗುವದಿಲ್ಲವೋ ಅಲ್ಲಿಯವರೆಗೆ ಕರ್ಮಗಳನ್ನು ಮಾಡುತ್ತಿರಬೇಕು- ಎಂದು ಹೇಳಿರುತ್ತದೆ.

**ಜ್ಞಾನನಿಷ್ಠೋ ವಿರಕ್ತೋ ವಾ ಮದ್ಭಕ್ತೋ ವಾऽನಪೇಕ್ಷಕಃ ।**
**ಸಲಿಙ್ಗಾನಾಶ್ರಮಾಂಸ್ತ್ಯಕ್ತ್ವಾ ಚರೇದವಿಧಿಗೋಚರಃ ॥**

ಭಾಗ. ೧೧-೧೮-೨೮

ಜ್ಞಾನನಿಷ್ಠನಾಗಿರಲಿ, ವಿರಕ್ತನಾಗಿರಲಿ, ಅಥವಾ ಮತ್ತೇನನ್ನೂ ಬಯಸದ ನನ್ನ ಭಕ್ತನೇ ಆಗಿರಲಿ, ಆಶ್ರಮದ ವೇಷಗಳನ್ನು ಬಿಟ್ಟು ಯಾವ ವಿಧಿಗೂ ಒಳಗಾಗದೆ ಅತ್ಯಾಶ್ರಮಿಯಾಗಿ ವ್ಯವಹರಿಸುತ್ತಿರಬೇಕು ಎಂದು ಭಗವಂತನು ಹೇಳಿದಂತೆ ವಿರಕ್ತನಾದ ಭಕ್ತನಿಗೆ ಯಾವ ವಿಧ್ಯುಕ್ತಕರ್ಮದ ಹಂಗೂ ಇರುವದಿಲ್ಲ.

**ಸತ್ಯಾನೃತೇ ಸುಖದುಃಖೇ ವೇದಾನಿಮಂ ಲೋಕಮಮುಂ ಚ**
**ಪರಿತ್ಯಜ್ಯಾತ್ಮಾನಮನ್ವಿಚ್ಛೇತ್** ॥ ಆ. ಧ. ಸೂ. ೨-೨೧-೧೩

ಎಂಬ ಸ್ಮೃತಿವಾಕ್ಯದಂತೆ ಸತ್ಯಾನೃತಗಳನ್ನೂ ಸುಖದುಃಖಗಳನ್ನೂ ವೇದಗಳನ್ನೂ ಈ ಲೋಕಪರಲೋಕ (ಸುಖಭೋಗೇಚ್ಛೆ)ಗಳನ್ನೂ ಬಿಟ್ಟಿದ್ದು ಆತ್ಮನನ್ನು ಹುಡುಕುವವನೇ ಭಕ್ತನು.

## ಅವಿಚ್ಛಿನ್ನಾನುರಾಗಂ ಲಭತೇ

೪೯. ವೇದಗಳನ್ನುಕೂಡ ಬಿಟ್ಟು ಕಡಿವಡೆಯದ ಭಗವದನುರಾಗವನ್ನು ಸಂಪಾದಿಸಿಕೊಳ್ಳಬೇಕು ಎಂದು ಹೇಳಿರುವದರಿಂದ ತಿಳಿದುಕೊಳ್ಳಬೇಕಾದದ್ದೇನೆಂದರೆ: ಸಕಲಶಾಸ್ತ್ರಗಳ ಅಭ್ಯಾಸಕ್ಕೂ ಪರಮಾತ್ಮನ ಭಕ್ತಿಯೇ ಫಲವು. ಆದ್ದರಿಂದ

**ಶಾಸ್ತ್ರಾಣ್ಯಧೀತ್ಯ ಮೇಧಾವೀ ಗುರೋರಭ್ಯಸ್ಯ ತಾನ್ಯಪಿ ।**
**ಪಲಾಲಮಿವ ಧಾನ್ಯಾರ್ಥೀ ತ್ಯಜೇದ್ ಗ್ರನ್ಥಮಶೇಷತಃ ॥**

ಸೂ. ಸಂ. ಮುಕ್ತಿಖಂಡ ೭-೭೦

ಎಂಬ ಸ್ಮೃತಿವಾಕ್ಯದಂತೆ ಗುರುವಿನಿಂದ ಶಾಸ್ತ್ರಗಳನ್ನು ಅಧ್ಯಯನಮಾಡಿ ಅವುಗಳನ್ನು ಚೆನ್ನಾಗಿ ಅಭ್ಯಾಸಮಾಡಿಕೊಂಡು ಅವುಗಳ ಸಾರವಾಗಿರುವ ಭಕ್ತಿಯನ್ನು ಸಂಪಾದಿಸಿಕೊಂಡಮೇಲೆ ಧಾನ್ಯವನ್ನು ಬಯಸುವಾತನು ಹೊಟ್ಟನ್ನು ತೂರಿ ಬಿಸುಡುವಂತೆ ಅವುಗಳನ್ನು ಬಿಡಬೇಕು; ಹೀಗೆ ಮಾಡಿದವನೇ ಮಾಯೆಯನ್ನು ದಾಟುವನು- ಎಂಬುದು ಸೂತ್ರದ ಅಭಿಪ್ರಾಯ.

ಸರಿಯಾಗಿ ನೋಡಿದರೆ ಮಾಯೆಯನ್ನು ದಾಟುವದೆಂಬುದು ಯಾರಿಗೂ ಸಾಧ್ಯವಿಲ್ಲ. ಏಕೆಂದರೆ ಮಾಯೆಯೆಂದರೂ ಒಂದೇ, ಭಗವಂತನ ಸ್ವರೂಪವನ್ನು

ತಿಳಿದು ಆತನನ್ನೇ ಶರಣುಹೊಗದೆ ಇರುವದರಿಂದ ತೋರಿಕೊಳ್ಳುವ ಸಂಸಾರ ವೆಂದರೂ ಒಂದೇ. ಐತರೇಯೋಪನಿಷತ್ತಿನ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು ಸಂಸಾರಸಾಗರವನ್ನು ವರ್ಣಿಸಿರುವದು ಹೇಗೆಂದರೆ :

**ತಾ ಏವಾ ಅಗ್ನ್ಯಾದಯೋ ದೇವತಾ ಲೋಕಪಾಲತ್ವೇನ ಸಂಕಲ್ಪ್ಯ ಸೃಷ್ಟಾ ಈಶ್ವರೇಣ ಅಸ್ಮಿನ್ ಸಂಸಾರಾರ್ಣವೇ ಸಂಸಾರಸಮುದ್ರೇ ಮಹತಿ ಅವಿದ್ಯಾಕಾಮಕರ್ಮಪ್ರಭವದುಃಖೋದಕೇ ತೀವ್ರ ರೋಗಜರಾಮೃತ್ಯುಮಹಾಗ್ರಾಹೇ ಅನಾದೌ, ಅನನ್ತೇ, ಅಪಾರೇ ನಿರಾಲಮ್ಬೇ ವಿಷಯೇನ್ದ್ರಿಯಜನಿತಸುಖಲವಲಕ್ಷಣವಿಶ್ರಾಮೇ ಪಞ್ಚೇನ್ದ್ರಿಯಾರ್ಥತೃಷ್ಣಾಮಾರುತವಿಕ್ಷೋಭೋತ್ಥಿತಾನರ್ಥಶತ ಮಹೋರ್ಮೌ, ಮಹಾರೌರವಾದ್ಯನೇಕನಿರಯಗತಹಾಹೇತ್ಯಾದಿ ಕೂಜಿತಾಕ್ರೋಶನೋದ್ಭೂತಮಹಾರವೇ ಸತ್ಯಾರ್ಜವದಾನ ದಯಾಽಹಿಂಸಾಶಮದಮಧೃತ್ಯಾದ್ಯಾತ್ಮಗುಣಪಾಥೇಯಪೂರ್ಣ ಜ್ಞಾನೋಡುಪೇ ಸತ್ಸಙ್ಗಸರ್ವತ್ಯಾಗಮಾರ್ಗೇ ಮೋಕ್ಷತೀರೇ ಏತಸ್ಮಿನ್ ಮಹತ್ಯರ್ಣವೇ ಪ್ರಾಪತನ್ ಪತಿತವತ್ಯಃ ॥**

ಪರಮೇಶ್ವರನು ಲೋಕಪಾಲರಾಗಲೆಂದು ಸೃಷ್ಟಿಸಿದ ಅಗ್ನ್ಯಾದಿದೇವತೆಗಳು ಈ ಸಂಸಾರವೆಂಬ ಮಹಾಸಾಗರದಲ್ಲಿ ಬಿದ್ದರು. ಆ ಸಂಸಾರವು ಹೇಗಿದೆ ಎಂದರೆ :

ಅವಿದ್ಯಾಕಾಮಕರ್ಮಗಳಿಂದಾದ ದುಃಖವೆಂಬ ನೀರು ಅದರಲ್ಲಿರುವದು. ಬಲವಾದ ರೋಗಗಳು, ಮುಪ್ಪುಮರಣಗಳೆಂಬ ದೊಡ್ಡದೊಡ್ಡ ಮೊಸಳೆಗಳು ಅದರಲ್ಲಿ ಹರಿದಾಡುತ್ತಿರುವವು ಅದಕ್ಕೆ ಆದಿಯಿಲ್ಲ, ಅಂತವಿಲ್ಲ, ದಡವಿಲ್ಲ, ಆಶ್ರಯವಿಲ್ಲ; ವಿಷಯೇಂದ್ರಿಯಗಳ ಸಂಯೋಗದಿಂದ ಉಂಟಾಗುವ ಅಲ್ಪಸುಖವೆಂಬ ವಿಶ್ರಾಂತಿ ಸ್ಥಾನವು ಅದರಲ್ಲಿರುವದು. ಪಂಚೇಂದ್ರಿಯಗಳ ತೃಷ್ಣೆ ಎಂಬ ಬಿರುಗಾಳಿಯಿಂದ ಆದ ಚಾಂಚಲ್ಯದಿಂದೆದ್ದ ನೂರಾರು ಅನರ್ಥಗಳೆಂಬ ಅಲೆಗಳು ಅದರಲ್ಲಿ ಕಾಣಿಸಿ ಕೊಳ್ಳುತ್ತಿರುವವು. ಮಹಾರೌರವವೇ ಮುಂತಾದ ಅನೇಕನರಕಗಳಲ್ಲಿನ ಕೂಗು ಬಯ್ಗುಳುಗಳಿಂದುಂಟಾದ ಮಹಾಶಬ್ದವು ಇಲ್ಲಿರುವದು. ಸತ್ಯ, ಋಜುತ್ವ, ದಾನ, ದಯೆ, ಶಮ, ದಮ, ಧೈರ್ಯ– ಮುಂತಾದ ಆತ್ಮಗುಣಗಳೆಂಬ ಬುತ್ತಿಯು ತುಂಬಿರುವ ಜ್ಞಾನವೆಂಬ ಹಡಗು ಇದರಮೇಲೆ ಸಂಚರಿಸುತ್ತಿರುವದು; ಸತ್ಸಂಗ ಸರ್ವತ್ಯಾಗವೆಂಬ ಮಾರ್ಗದಲ್ಲಿ ಆ ಹಡಗು ಹೋಗುತ್ತಿರುವದು ; ಮೋಕ್ಷ ವೆಂಬುದೇ ಈ ಸಾಗರಕ್ಕೆ ಆಚೆಯ ದಡವು (ಐ. ಭಾ. ೧–೨–೧ ಪು. ೩೩೨)

ಈ ಮಾಯಾಸಮುದ್ರವು ಇಷ್ಟು ಭೀಕರವಾಗಿದೆಯಾದರೂ

**ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।**
**ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ ॥**

ಗೀ. ೭–೧೪

ಎಂಬ ಭಗವದುಕ್ತಿಯಂತೆ ತ್ರಿಗುಣಾತ್ಮಕವಾದ ಈ ಮಾಯೆಯನ್ನು ದಾಟುವದು ಬಹಳ ಕಷ್ಟವಾಗಿದ್ದರೂ ಭಗವಂತನನ್ನೇ ಯಾರು ಶರಣುಹೊಗುವರೋ ಅವರು ಮಾಯೆಯನ್ನು ದಾಟುವರು ; ಅಥವಾ 'ದಾಟುವರು' ಎಂದೇಕೆ ಹೇಳಬೇಕು ? ಎಲ್ಲೆಲ್ಲಿಯೂ ಹರಡಿಕೊಂಡಿರುವ ಉರಿಬೇಗೆಯ ಬಿಸಿಲಿಗೂ ಅಂಜದೆ ಕೊಡೆಯನ್ನು ಹಿಡಿದುಕೊಂಡು ಸಂಚರಿಸುವ ಜನರಂತೆ ಅವರು ಮಾಯೆಯನ್ನು ಲೆಕ್ಕಿಸದೆ ಅದು ಇದೆ ಎಂಬ ಚಿಂತೆಯೂ ಇಲ್ಲದೆ ವ್ಯವಹರಿಸುತ್ತಿರುವರು. ಅವರ ಪಾಲಿಗೆ ಮಾಯೆಯೇ ಮಾಯವಾಗಿಬಿಟ್ಟಿರುವದು.

ಸ ತರತಿ ಸ ತರತಿ ಸ ಲೋಕಾಂಸ್ತಾರಯತಿ ॥ ೫೦ ॥

೫೦. ಅವನು ದಾಟುವನು ; ಅವನು ದಾಟುವನು ; ಅವನೇ ಜನರನ್ನು ದಾಟಿಸುವನು.

೯೭. **'ಯಾ ಮಾ ಸಾ ಮಾಯಾ'** ಎಂಬಂತೆ ಯಾವದು ನಿಜವಾಗಿಲ್ಲವೋ ಅದೇ ಮಾಯೆ. ಅಜ್ಞಾನಿಗಳಿಗೆ ಮಾಯೆಯು ದುಸ್ತರವಾಗಿರುತ್ತದೆ. ಆದರೆ:

**ತ್ವಯ್ಯಮ್ಬುಜಾಕ್ಷಾಖಿಲಸತ್ತ್ವಧಾಮ್ನಿ**
**ಸಮಾಧಿನಾವೇಶಿತಚೇತಸೈಕೇ ।**
**ತ್ವತ್ಪಾದಪೋತೇನ ಮಹತ್ಕೃತೇನ**
**ಕುರ್ವನ್ತಿ ಗೋವತ್ಸಪದಂ ಭವಾಬ್ಧಿಮ್ ॥**

ಭಾಗ. ೧೦-೨-೩೦

ಎಂದು ಬ್ರಹ್ಮಾದಿಗಳು ಶ್ರೀಕೃಷ್ಣಸ್ತುತಿಯಲ್ಲಿ ಹೇಳಿರುವಂತೆ ಭಗವಂತನಲ್ಲಿಯೇ ಇಟ್ಟ ಚಿತ್ತವುಳ್ಳ ಭಕ್ತರಿಗೆ ಭಗವಂತನ ಪಾದವೇ ಸಮುದ್ರವನ್ನು ದಾಟಿಸುವ ಹಡಗಾಗಿರುತ್ತದೆ. ಅವರ ಪಾಲಿಗೆ ಸಂಸಾರಸಾಗರವೆಂಬುದು ಒಂದು ಹಸುವಿನ ಕರುವಿನ ಕಾಲ್ಗೊರಸಿನಷ್ಟು ಚಿಕ್ಕದಾಗುವದು.

**ಸ್ವಯಂ ಸಮುತ್ತೀರ್ಯ ಸುದುಸ್ತರಂ ದ್ಯುಮನ್**
**ಭವಾರ್ಣವಂ ಭೀಮಮದಭ್ರಸೌಹೃದಾಃ ।**
**ಭವತ್ಪದಾಮ್ಭೋರುಹನಾವಮತ್ರ ತೇ**
**ನಿಧಾಯ ಯಾತಾಃ ಸದನುಗ್ರಹೋ ಭವಾನ್ ॥**

ಭಾಗ. ೧೦-೨-೩೧

ಅಂಥ ಮಹನೀಯರು ಅತ್ಯಂತದುಸ್ತರವಾದ ಸಂಸಾರಸಾಗರವನ್ನು ತಾವೂ ದಾಟಿ ಮಿಕ್ಕವರೂ ದಾಟಲೆಂದು ಭಗವತ್ಪಾದಕಮಲವೆಂಬ ನಾವೆಯನ್ನು ಇಲ್ಲಿಯೇ ಬಿಟ್ಟು ಹೋಗಿರುತ್ತಾರೆ. ಆದ್ದರಿಂದ ಅದರ ಸಹಾಯದಿಂದ ಸಾಮಾನ್ಯರೂ ಈ ಮಾಯಾ ಸಾಗರವನ್ನು ದಾಟಬಹುದಾಗಿರುತ್ತದೆ.

# ೧೩. ಪ್ರೇಮದ ಮಹಿಮೆ

## ಅನಿರ್ವಚನೀಯಂ ಪ್ರೇಮಸ್ವರೂಪಮ್ ॥ ೫೧ ॥

೫೧. ಪ್ರೇಮದ ಸ್ವರೂಪವು ಇಂಥದ್ದೆಂದು ಹೇಳುವದಕ್ಕೆ ಬರುವಂಥದ್ದಲ್ಲ.

೯೮. ಕಡಿವಡೆಯದ ಪ್ರೇಮವನ್ನು ಪಡೆದುಕೊಂಡವನು ಮಾಯೆಯನ್ನು ದಾಟುತ್ತಾನೆ ಎಂದು ಹೇಳಿರುತ್ತದೆಯಲ್ಲವೆ? ಆ ಪ್ರೇಮವೆಂಬುದರ ತತ್ತ್ವವೇನು ? –ಎಂದು ಯಾರಾದರೂ ಕೇಳಬಹುದು. ಅದು ಇಂಥದ್ದೆಂದು ಹೇಳುವದಕ್ಕೆ ಬರುವದಲ್ಲ. ಅದು ಹುಟ್ಟಿತೆಂದರೆ ಮಾಯೆಯು ಮಾಯವಾಗುವದು ಎಂದಿಷ್ಟೇ ಹೇಳಬಹುದು.

ಇದನ್ನು ಮನಗಾಣಿಸುವದಕ್ಕೆ ಒಂದು ಆಖ್ಯಾಯಿಕೆಯು ನಿದರ್ಶನವನ್ನು ಹೇಳಬಹುದು. ಶ್ರೀರಾಮಚಂದ್ರನು ಲಂಕೆಯಲ್ಲಿ ರಾವಣಾದಿಗಳನ್ನು ಸಂಹರಿಸಿ ಸೀತಾಸಮೇತನಾಗಿ ಅಯೋಧ್ಯೆಗೆ ಪುಷ್ಪಕವಿಮಾನದಲ್ಲಿ ವಿಭೀಷಣನೊಡನೆಯೂ ವಾನರಪರಿವಾರದೊಡನೆಯೂ ತೆರಳುತ್ತಿರುವಾಗ ದಾರಿಯಲ್ಲಿ ಭಕ್ತಾಗ್ರೇಸರನಾದ ಮಾರುತಿಯು ತನ್ನಲ್ಲಿತಾನೆ ಹೀಗೆಂದು ಮನಸ್ಸಿನಲ್ಲಿ ಗುಣಿಸಿಕೊಳ್ಳುವದಕ್ಕೆ ಮೊದಲುಮಾಡಿದನು. "ನೂರು ಯೋಜನದ ಸಾಗರವನ್ನು ದಾಟಿ ಸೀತಾದೇವಿಯನ್ನು ಕಂಡ ಸುದ್ದಿಯನ್ನು ಶ್ರೀರಾಮನಲ್ಲಿಗೆ ತಂದವನು ನಾನು. ಸೇತುವನ್ನು ಕಟ್ಟುವಾಗ ದೊಡ್ಡದೊಡ್ಡ ಬೆಟ್ಟಗಳನ್ನು ಕಿತ್ತು ತಂದುಹಾಕಿದವನು ನಾನು; ಲಕ್ಷ್ಮಣದೇವನು ಮೂರ್ಛೆಗೆ ಸಂದಾಗ ಸಂಜೀವನಪರ್ವತವನ್ನು ತಂದವನು ನಾನೇ. ಅಗಣಿತಸಂಖ್ಯೆಯ ರಕ್ಕಸರನ್ನು ಸದೆಬಡಿದು ವಿಭೀಷಣನಿಗೆ ರಾಜ್ಯವನ್ನು ಕೊಡಿಸಿ ಕಾರ್ಯವನ್ನು ಪೂರ್ಣಗೊಳಿಸಿದವನು ನಾನೇ. ಇಗೊ, ಹೇಳಿದ ಕೆಲಸವನ್ನು ಮುಂದೆಯೂ ಮಾಡಲು ಸಿದ್ಧನಾಗಿರುವೆನು!"

ಹೀಗೆಂದು ಹನುಮಂತನು ಮನಸ್ಸಿನಲ್ಲಿ ತನ್ನ ಹಿಂದಿನ ಪರಾಕ್ರಮದ ಕಾರ್ಯಗಳನ್ನೆಲ್ಲ ಹೊರಳಾಡಿಸುತ್ತಿರುವಲ್ಲಿ ಸರ್ವಜ್ಞನಾದ ಶ್ರೀರಾಮಚಂದ್ರನು 'ಮಾರುತಿ, ನನಗೆ ಬಹಳ ನೀರಡಿಕೆಯಾಗಿದೆ, ಸ್ವಲ್ಪ ನೀರು ತರುತ್ತೀಯ ?' ಎಂದನು. ಚಟುವಟಿಕೆಯಲ್ಲಿ ಮುಂದಾಳಾದ ಮಾರುತಿಯು ಕೂಡಲೆ 'ಅಪ್ಪಣೆ !' ಎಂದು ವಿಮಾನದಿಂದ ಚಂಗನೆ ನೆಗೆದು ತನ್ನ ದೃಷ್ಟಿಯು ಹಾಯುವವರೆಗೂ ನೋಡಿದರೂ ಎಲ್ಲಿಯೂ ನೀರು ಕಾಣಿಸಲಿಲ್ಲ. ಅದೊಂದು ದೊಡ್ಡ ಬೆಂಗಾಡಾದ ಬಯಲಾಗಿತ್ತು. ವಿಮಾನವು ವಾಯುವೇಗದಲ್ಲಿ ಹೋಗುತ್ತಿರುವದರಿಂದ ಬೇಗನೆ ನೀರುತಂದುಕೊಡದಿದ್ದರೆ ಹೊರಟ ಉದ್ದೇಶವು ವ್ಯರ್ಥವಾಗುವದೆಂಬ ಯೋಚನೆಯೊಂದು ಮನಸ್ಸಿನಲ್ಲಿ

ನೆಟ್ಟಿತು. ಇಷ್ಟರಲ್ಲಿ ಬಹುದೂರದಲ್ಲಿ ಒಂದು ಸರೋವರವಿರುವಂತೆ ಕಂಡುಬಂತು. ಅಷ್ಟುಹೊತ್ತಿಗೆ ಮಾರುತಿಯು ಹಾರಿಹಾರಿ ಬಹಳ ಸೋತಿದ್ದನು. ಆದ್ದರಿಂದ ಅಲ್ಲಿ ಕ್ಷಣಹೊತ್ತು ವಿಶ್ರಮಿಸಿಕೊಂಡು ನೀರನ್ನು ತೆಗೆದುಕೊಂಡು ಹೋಗೋಣ ವೆಂದು ಯೋಚಿಸಿಕೊಂಡನು. 'ನನ್ನ ವೇಗದ ಮುಂದೆ ಎಲ್ಲಿಯ ವಿಮಾನ ? ಇಗೊ, ಈಗ ಹೊರಟೆ' ಎನ್ನುತ್ತ ಸರೋವರದ ಬಳಿಗೆ ಬರಲು, ನೀರು ಸುವಾಸನೆಯ ತಾವರೆಹೂಗಳಿಂದ ಕೂಡಿದ್ದ ಆ ಸರೋವರದ ನಡುವೆ ಇದ್ದದ್ದರಿಂದಲೂ ಆಗತಾನೆ ತಣ್ಣತಂಗಾಳಿಯು ಸುಳಿದುಬರುತ್ತಿದ್ದದ್ದರಿಂದಲೂ ಸ್ಥಲವು ಯಾರ ಮನಸ್ಸ ನ್ನಾದರೂ ಸೆಳೆಯುವಂತೆಯೇ ಇದ್ದಿತು. ಒಂದು ತಾವರೆಯ ಎಲೆಯನ್ನು ಕಿತ್ತು ಆದರಲೆಯಲ್ಲಿ ನೀರನ್ನು ತುಂಬಿಕೊಳ್ಳಬೇಕೆಂದು ಯೋಚಿಸಿಕೊಳ್ಳುವದರೊಳಗಾಗಿ ಒಬ್ಬ ಕಾವಲುಗಾರನು ಕಾಣಿಸಿಕೊಂಡು 'ನಮ್ಮ ದೇವಿಯ ಅಪ್ಪಣೆಯಿಲ್ಲದೆ ಈ ಸರೋವರದ ಕಮಲನಾಳವನ್ನೇಕೆ ಕಿತ್ತೆಯೊ? ಎಂದು ಕಣ್ಣುಗಳನ್ನು ಕೆಂಪಗೆಮಾಡಿ ಕೊಂಡು ಗದರಿಸಿದನು.

ಮಾರುತಿಯು 'ಅಯ್ಯ, ನಾನು ರಾಮದೂತನು; ಹನುಮಂತನೆಂಬ ಹೆಸರನ್ನು ನೀನು ಕೇಳಿಯೇ ಇರಬಹುದು. ಶ್ರೀರಾಮನಿಗೆ ನೀರಡಿಕೆಯಾಗಿದೆ ; ಮಾತಾಡು ವದಕ್ಕೆ ಸಮಯವಿಲ್ಲ, ನೀರನ್ನು ತೆಗೆದುಕೊಂಡುಹೋಗುವೆನು' ಎಂದನು. ಅದಕ್ಕೆ ಕಾವಲುಗಾರನು 'ರಾಮದೂತನೊ, ಕಾಮದೂತನೊ, ನಾನೇನು ಬಲ್ಲೆ ? ನಡೆ ಚಾವಡಿಗೆ!' ಎಂದು ಮನಸ್ಸುಬಂದಂತೆ ಬಿರುನುಡಿಯನ್ನಾಡುತ್ತಾ ಒಂದು ಗುಹೆಯ ಕಡೆಗೆ ಕರೆದೊಯ್ದನು. ಆ ಗುಹೆಯ ಬಾಗಿಲನ್ನು ನೋಡಲು ಪೂರ್ವದಲ್ಲಿ ತಾನು ನೋಡಿದ್ದ ಸ್ವಯಂಪ್ರಭೆಯ ಗುಹೆಯು ನೆನಪಿಗೆ ಬಂದಿತು. ಮಾರುತಿಯು 'ಮತ್ತೂ ಒಳ್ಳೆಯದೇ ಆಯಿತು. ಆಕೆಗೆ ಹೇಳಿದರಂತೂ ಕಾರ್ಯವು ನೆರವೇರು ವದಕ್ಕೆ ಇನ್ನಷ್ಟು ಅನುಕೂಲವಾಗುವದು. ನಾನು ಅರಿಯದ ಸ್ವಯಂಪ್ರಭೆಯೆ ?' ಎನ್ನುತ್ತಾ ಗುಹೆಯೊಳಕ್ಕೆ ಹೋದನು. ಅಲ್ಲಿ ವಿಶಾಲವಾದ ಒಂದು ಅರಮನೆ ಯೊಂದು ತೋರಿತು. ಅಲ್ಲಿ ಒಂದುಕಡೆಗೆ ಇವನನ್ನು ಕಾವಲುಗಾರನು ಕರೆದೊ ಯ್ದನು. ಅಷ್ಟರಲ್ಲಿ ಮತ್ತೊಬ್ಬನು ಕೈಯಲ್ಲಿ ಒಂದು ಸರಪಳಿಯನ್ನು ತಂದು ನಸುನಗುತ್ತ ಮಾರುತಿಯ ಸೊಂಟಕ್ಕೆ ಕೈಹಾಕಿದನು. ಇವನಿಗೆ ತಕ್ಕ ಪ್ರತೀಕಾರ ವನ್ನು ಮಾಡಲೇಬೇಕೆಂದು ಮಾರುತಿಯು ಖತಿಗೊಂಡು ಮುಷ್ಟಿಯನ್ನು ಮಾಡಿ ಕೊಂಡು ಕೈಯೆತ್ತುವದಕ್ಕೆ ಹೋದರೆ ಏನಾಶ್ಚರ್ಯ ! ಅವನಿಗೆ ಕೈಯೇ ಏಳ ದಂತಾಯಿತು ! ಆ ಪುರುಷನು 'ಅಯ್ಯೊ, ಕಪಿಯೆ ! ನಿನ್ನ ಅವಸ್ಥೆಯನ್ನೇ ನೀನರಿಯೆಯಲ್ಲ !' ಎನ್ನುತ್ತಾ ಸೊಂಟಕ್ಕೆ ಸರಪಳಿಯನ್ನು ಬಿಗಿದು ಇವನನ್ನು ಒಂದು ಕಂಬಕ್ಕೆ ಕಟ್ಟಿಹಾಕಿದನು. ಮಾರುತಿಯು ಸುತ್ತಲೂ ನೋಡುತ್ತಾನೆ, ಅಲ್ಲಿ ತನ್ನ ರೂಪಿನವರೇ ಆದ ತೊಂಬತ್ತೊಂಬತ್ತು ಕಪಿಗಳು ತನ್ನಂತೆಯೇ ಕಂಬಕ್ಕೆ ಕಟ್ಟಲ್ಪಟ್ಟದ್ದು ಕಾಣಿಸಿತು !

ಆಗ ಆಶ್ಚರ್ಯದಿಂದಲೂ ಅಂಜಿಕೆಯಿಂದಲೂ ಚಮಕಿತನಾದ ಹನುಮಂತನು ತನಗೆ ತೀರ ಸಮೀಪದಲ್ಲಿದ್ದ ಒಬ್ಬ ವಾನರನನ್ನು ಕಂಡು 'ಅಯ್ಯ, ಇದೇನು ಕಥೆ! ನೀವೆಲ್ಲರೂ ಹೀಗೇಕೆ ಇಲ್ಲಿ ಕಟ್ಟುಬಿದ್ದಿರುವಿರಿ!' ಎಂದು ಕೇಳಿದನು. ಆಗ ಆ ಇನ್ನೊಬ್ಬ ವಾನರನು "ಅಯ್ಯಾ, ನಾನು ಪೂರ್ವದಲ್ಲಿ ಲಂಕೆಯಲ್ಲಿ ರಾಮಕಾರ್ಯ ಸಾಧನೆಗಾಗಿ ಹೋಗಿದ್ದ ಹನುಮಂತನು. ಶ್ರೀರಾಮಚಂದ್ರನಿಗೆ ನೀರುತರಬೇಕೆಂದು ಇಲ್ಲಿಗೆ ಬಂದು ಹೇಗೋ ರಾಕ್ಷಸರ ಮಾಯೆಗೆ ಒಳಗಾಗಿರುತ್ತೇನೆ. ಇದೆಂಥ ರಕ್ಕಸರ ಮಾಯೆಯೋ ನಾನರಿಯೆ; ಇಲ್ಲಿರುವ ಕಪಿಗಳೆಲ್ಲ 'ನಾನೇ ಹನುಮಂತನು' ಎಂದುಕೊಳ್ಳುತ್ತಿದಾರೆ. ಇಗೊ, ನೀನು ಕಟ್ಟುಬಿದ್ದಿರುವ ಕಂಬದಲ್ಲಿ ಇದೇ ಬಗೆಯ ಕಪಿಯಿದ್ದಿತು. ಅದನ್ನು ರಾಕ್ಷಸರು ಈ ದಿನ ಪಲ್ಯಕ್ಕೆಂದು ಹೆಚ್ಚಿದರು!' ಎಂದು ಪಿಸುಮಾತಿನಲ್ಲಿ ಹೇಳುತ್ತಿದ್ದಹಾಗೆಯೇ ಒಬ್ಬ ಸುಂದರಿಯಾದ ಸ್ತ್ರೀಯು ಅಲ್ಲಿಗೆ ಬಂದು 'ಈ ಹೊತ್ತು ಈ ಕಪಿಯೇ ಇರಲಿ!' ಎಂದು ಹನುಮಂತನನ್ನು ತೋರಿಸಿ ಹೋದಳು. ಕೂಡಲೆ ಒಬ್ಬ ಕರ್ರನೆಯ ಆಳು ಸರಪಳಿಯನ್ನು ಎಳೆದುಕೊಂಡು ಇವನನ್ನು ಅಡಿಗೆಯ ಕೋಣೆಯೊಳಕ್ಕೆ ಒಯ್ದನು. ಹನುಮಂತನಿಗೆ ದಿಕ್ಕು ತೋಚದಂತಾಯಿತು. ಕೋಟಿಗಟ್ಟಲೆಯ ರಕ್ಕಸರನ್ನು ಒಕ್ಕಲಿಕ್ಕಿದ ಕಲಿತನವೆಲ್ಲಿ ಅಡಗಿತೊ! ಆ ಅಡಿಗೆಯುವನ ಕಂಕುಳಲ್ಲಿ ಸೇರಿ ಸುಮ್ಮನೆ ಇದ್ದನು. ಆಗ ಬಾಣಸದವನು ಒಂದು ಈಳಿಗೆಯ ಕತ್ತಿಯನ್ನು ಇಟ್ಟುಕೊಂಡು ಹಲಸಿನಕಾಯಿ ಯನ್ನು ಅಡ್ಡಕುಯ್ಯುವಂತೆ ಹನುಮಂತನನ್ನು ಕುಯ್ಯಬೇಕೆಂದು ಎತ್ತಿಹಾಕು ವದಕ್ಕೆ ಮೊದಲುಮಾಡಿದ್ದಾನೆ ; ಹನುಮಂತನಿಗೆ ತನ್ನ ಆಟವೆಲ್ಲ ನಿಂತುಹೋಗಿ ಆ ಸಮಯದಲ್ಲಿ ತನ್ನ ಪ್ರೇಮದ ಸ್ವಾಮಿಯಾದ ಶ್ರೀರಾಮಚಂದ್ರನ ಸ್ಮರಣೆ ಯುಂಟಾಗಿದೆ! ಅವನು ನಿದ್ದೆಯ ಮಬ್ಬಿನಿಂದ ಎಚ್ಚರಗೊಂಡವನಂತೆ ಕಣ್ಣು ಬಿಟ್ಟು ನೋಡುತ್ತಾನೆ; ತಾನು ಬಲಿಷ್ಠನೆಂದು ಆವರೆಗೆ ನೋಡುತ್ತಿದ್ದ ಒಂದು ನೋಟವೂ ಇಲ್ಲ. ವಿಮಾನವು ನಡೆಯುತ್ತಲೇ ಇದೆ! ತಾನೂ ಅಲ್ಲಿಯೇ ಕುಳಿತಿದ್ದಾನೆ! ಕಾಲುಘಂಟೆಯಲ್ಲಿ ಇಷ್ಟು ಘಟನೆಗಳು ಮನಸ್ಸಿನಲ್ಲಿಯೇ ನಡೆದು 'ಆ ಭಗವಂತನ ದಯೆಯಿಲ್ಲದಿದ್ದರೆ ತಾನೆಷ್ಟರವನು!' ಎಂಬುದು ಮನದಟ್ಟಾ ಯಿತು! ಹೀಗಿರುತ್ತದೆ ಪ್ರೇಮದ ಮಹಿಮೆ!

## ಮೂಕಾಸ್ವಾದನವತ್ ॥ ೫೨ ॥

೫೨. ಮೂಕನು ನೋಡಿದ ರುಚಿಯಂತೆ (ಅನಿರ್ವಚನೀಯ).

೯೯. ಪ್ರೇಮವು ಅನಿರ್ವಚನೀಯವೆಂದರೆ ಹೇಗೆ ?– ಎಂಬುದನ್ನು ಇಲ್ಲಿ ದೃಷ್ಟಾಂತದಿಂದ ವಿಶದಗೊಳಿಸಿರುತ್ತದೆ.

'ಅನಿರ್ವಚನೀಯ'ವೆಂಬ ಶಬ್ದವನ್ನು ಬೇರೆಬೇರೆಯ ಅರ್ಥಗಳಲ್ಲಿ ಶಾಸ್ತ್ರ ಉಪಯೋಗಿಸಲಾಗಿರುತ್ತದೆ. ಶಂಕರಾಚಾರ್ಯರ ಅನುಯಾಯಿಗಳು ಹಗ್ಗದಲ್ಲಿ

ತೋರುವ ತೋರಿಕೆಯ ಹಾವು, ಮುತ್ತಿನಚಿಪ್ಪಿನಲ್ಲಿ ತೋರುವ ಬೆಳ್ಳಿ– ಇಂಥ ಹುಸಿ ಪದಾರ್ಥಗಳನ್ನು 'ಅನಿರ್ವಚನೀಯ'ವೆನ್ನುತ್ತಾರೆ. ಇದೆ, ಅಥವಾ ಇಲ್ಲ– ಎಂದು ನಿಶ್ಚಯಿಸಿ ಹೇಳುವದಕ್ಕೆ ಬರದ ಹುಸಿತೋರಿಕೆ ಎಂಬುದು ಅವರು ಈ ಶಬ್ದಕ್ಕೆ ಕೊಟ್ಟಿರುವ ಅರ್ಥ. ಈ ತೋರಿಕೆಗೆ ಉಪಾದಾನಕಾರಣವಾದ ಅವಿದ್ಯಾಶಕ್ತಿಯು ಆತ್ಮನಲ್ಲಿ ಅನಾದಿಕಾಲದಿಂದಿರುವದೆಂದೂ ಅದೂ ಅನಿರ್ವಚನೀಯುವೆಂದೂ ಅವರ ಮತ. ಶ್ರೀಶಂಕರಾಚಾರ್ಯರು ಪ್ರಪಂಚಕ್ಕೆ ಬೀಜವಾಗಿರುವ ನಾಮರೂಪಗಳು ಅವಿದ್ಯೆಯಿಂದ ಕಲ್ಪಿತವಾಗಿ ಆತ್ಮನಲ್ಲಿ ತೋರುತ್ತಿರುವವು ; ಅಥವಾ ಆತ್ಮನನ್ನೇ ನಾಮರೂಪಾತ್ಮಕವಾದ ಪ್ರಪಂಚವೆಂದು ಜನರು ತಪ್ಪಾಗಿ ಗ್ರಹಿಸಿರುತ್ತಾರೆ. ಆ ನಾಮರೂಪಬೀಜವೇ ಮಾಯೆ ; ಅದು ಆತ್ಮನೇ ಎಂದಾಗಲಿ ಆತ್ಮನಿಗಿಂತ ಬೇರೆಯಾಗಿರುವ ಸ್ವತಂತ್ರವಸ್ತುವೆಂದಾಗಲಿ ಹೇಳುವದಕ್ಕೆ ಬರುವದಿಲ್ಲ– ಎಂಬರ್ಥದಲ್ಲಿ ಅದನ್ನು 'ಅನಿರ್ವಚನೀಯ ಎಂದು ಕರೆದಿರುತ್ತಾರೆ.

ಇಲ್ಲಿ ' ಅನಿರ್ವಚನೀಯ ' ಎಂಬ ಶಬ್ದಕ್ಕೆ ಈ ಎರಡು ಅರ್ಥಗಳಲ್ಲಿ ಯಾವದೊಂದನ್ನೂ ಮನಸ್ಸಿನಲ್ಲಿಟ್ಟುಕೊಂಡಿಲ್ಲ. ಏಕೆಂದರೆ ಪ್ರೇಮವು ಭಗವಂತನ ಸ್ವರೂಪವಾದ ಆನಂದವೇ ಆಗಿರುತ್ತದೆ; ಅದನ್ನು ಅನುಭವಿಸುವ ಭಕ್ತರ ಪ್ರೇಮವೆಂಬ ವೃತ್ತಿಯೂ ಪ್ರೇಮವೆಂದೇ ಕರೆಯಲ್ಪಡುತ್ತದೆ. ಅದು ಅನಿರ್ವಚನೀಯ– ಎಂದರೆ ಇಂಥದ್ದೆಂದು ಮಾತಿನಿಂದ ಹೇಳುವದಕ್ಕೆ ಬರುವದಿಲ್ಲ; ಆದರೆ ಅನುಭವಕ್ಕೆ ಮಾತ್ರ ವಿಷಯವಾಗಿರುತ್ತದೆ. ಮೂಕನು ಸಕ್ಕರೆಯೇ ಮುಂತಾದ ಸಿಹಿಪದಾರ್ಥವನ್ನು ಅನುಭವಿಸುತ್ತಿರುವನಾದರೂ ಆ ಅನುಭವದಿಂದಾದ ಆನಂದವನ್ನು ಹೇಗೆ ಮತ್ತೊಬ್ಬರಿಗೆ ತಿಳಿಯಿಸುವದಕ್ಕೆ ಅವನಿಗೆ ಮಾತಿನ ಶಕ್ತಿಯಿಲ್ಲವೋ ಹಾಗೆ ಭಕ್ತರು ತಾವು ಅನುಭವಿಸುತ್ತಿರುವ ಪ್ರೇಮವನ್ನು ಮಾತಿನಿಂದ ಹೇಳಲಾರದೆ ಇರುವರು ; ಏಕೆಂದರೆ ವ್ಯವಹಾರದಲ್ಲಿರುವ ಯಾವ ಮಾತೂ ಅದನ್ನು ವರ್ಣಿಸುವ ಶಕ್ತಿಯುಳ್ಳದ್ದಾಗಿಲ್ಲ. ಆದ್ದರಿಂದ ಪ್ರೇಮವನ್ನು ಅನುಭವಿಸಿಯೇ ಗೊತ್ತುಮಾಡಿಕೊಳ್ಳಬೇಕಲ್ಲದೆ ಅದನ್ನು ಮಾತಿನಿಂದ ಬಣ್ಣಿಸಿ ಹೇಳುವದಕ್ಕೂ ಬರುವದಿಲ್ಲ. ಈ ದೃಷ್ಟಿಯಿಂದಲೇ ಅದು ಅನಿರ್ವಚನೀಯ ಎಂದು ಸೂತ್ರಕಾರರು ಹೇಳಿರುತ್ತಾರೆ. ಇಷ್ಟೇ ಹೊರತು ಪ್ರೇಮವು ಹುಸಿ ಎಂಬ ಅರ್ಥವನ್ನು ಇಲ್ಲಿ ಸ್ವಲ್ಪವೂ ಮನಸ್ಸಿಗೆ ತಂದುಕೊಳ್ಳಬಾರದು. ಅದರಷ್ಟು ಪರಮಾರ್ಥವಾದದ್ದು ಮತ್ತೆ ಯಾವದೊಂದೂ ಇರುವದಿಲ್ಲ.

## ಪ್ರಕಾಶ(ಶ್ಯ)ತೇ ಕ್ವಾಪಿ ಪಾತ್ರೇ ॥ ೫೩ ॥

೫೩. ಎಲ್ಲಿಯೋ ಒಬ್ಬೊಬ್ಬ ಯೋಗ್ಯನಲ್ಲಿ ಕಾಣಿಸಿಕೊಳ್ಳುತ್ತದೆ.

೧೦೦. ಪ್ರೇಮವು ಅನುಭವಮಾತ್ರಗೋಚರವೆಂದೂ ಅದನ್ನು ಮಾತಿನಿಂದ ವರ್ಣಿಸುವದಕ್ಕೆ ಬರುವದಿಲ್ಲವೆಂದೂ ಹೇಳಿದಮಾತ್ರದಿಂದ ಅದೇ ಇಲ್ಲವೆಂದು

ಭಾವಿಸಬಾರದು. ಅದು ಅನುಭವದಿಂದ ತೋರಿಕೊಳ್ಳುವದಕ್ಕೆ ಯೋಗ್ಯತೆ ಬೇಕು. ಆ ಯೋಗ್ಯತೆ ಇದ್ದ ಮಹನೀಯರಲ್ಲಿ ಅದು ಅವಶ್ಯವಾಗಿ ತೋರಿಕೊಳ್ಳುವದು. ಭಗವಂತನು ಈ ವಿಷಯದಲ್ಲಿ ಹೇಳಿರುವದೇನೆಂದರೆ :

**ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ ಯತತಿ ಸಿದ್ಧಯೇ ।**
**ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥** ಗೀ. ೭-೩
**ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ ಮಾಂ ಪ್ರಪದ್ಯತೇ ।**
**ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥** ಗೀ. ೭-೧೯

"ಸಾವಿರಗಟ್ಟಲೆಯ ಮನುಷ್ಯರೊಳಗೆ ಎಲ್ಲಿಯೋ ಒಬ್ಬನು ಪರಮಾತ್ಮನನ್ನು ಅರಿತು ಸಿದ್ಧನಾಗುವದಕ್ಕೆ ಯತ್ನಿಸುತ್ತಾನೆ. ಹಾಗೆ ಯತ್ನಮಾಡುವದೆಂಬುದೇ ಒಂದು ಸಿದ್ಧಿ. ಅಂಥ ಸಿದ್ಧರೊಳಗೆ ಎಲ್ಲಿಯೋ ಒಬ್ಬನು ನಾನು ಇರುವಂತೆಯೇ ನನ್ನನ್ನು ಅರಿತುಕೊಳ್ಳುತ್ತಾನೆ. ಅನೇಕಜನ್ಮಗಳನ್ನು ಪಡೆದಬಳಿಕ ನನ್ನ ತತ್ತ್ವದ ಅರಿವನ್ನು ಪಡೆದು ಪರಿಪಕ್ವಬುದ್ಧಿಯುಳ್ಳವನಾಗಿ ಸರ್ವರಿಗೂ ಪ್ರತ್ಯಗಾತ್ಮನಾಗಿರುವ ವಾಸುದೇವನೇ ಸರ್ವವೂ ಆಗಿರುತ್ತಾನೆ- ಎಂದು ಅನುಭವಕ್ಕೆ ತಂದುಕೊಂಡು ನನ್ನ ಭಕ್ತಿಯನ್ನು ಪಡೆದುಕೊಳ್ಳುತ್ತಾನೆ. ಅವನೇ ಮಹಾತ್ಮನು ; ಅವನಿಗೆ ಸಮರಾಗಲಿ ಅವನಿಗಿಂತ ಹೆಚ್ಚಿನವರಾಗಲಿ ಇರುವದೇ ಇಲ್ಲ. ಅಂಥ ಭಕ್ತರು ಬಹು ವಿರಳ' ಎಂಬುದು ಭಗವಂತನ ಅಭಿಪ್ರಾಯ. ಅಂಥ ಮಹಾತ್ಮರೇ ಪರಭಕ್ತರು ; ಅವರ ಪ್ರೇಮವು ಲೋಕವನ್ನೆಲ್ಲ ವ್ಯಾಪಿಸಿಕೊಂಡಿರುತ್ತದೆ ; ಅಂಥವರು ಇರುವ ಸ್ಥಲಗಳಲ್ಲಿ ಪರಸ್ಪರವೈರವಿರುವ ಇಲಿ, ಬೆಕ್ಕು ; ಚಿರತೆ, ಹುಲಿ ; ಮುಂಗಸಿ ಹಾವು- ಮುಂತಾದ ಪ್ರಾಣಿಗಳುಕೂಡ ಪರಸ್ಪರಪ್ರೇಮದಿಂದಿರುವವೆಂದು ಪುರಾಣಾದಿಗಳಲ್ಲಿ ವರ್ಣಿಸಿರುತ್ತದೆ.

## ಗುಣರಹಿತಂ ಕಾಮನಾರಹಿತಂ ಪ್ರತಿಕ್ಷಣಂ* ವರ್ಧಮಾನಮ್
## ಅವಿಚ್ಛಿನ್ನಂ ಸೂಕ್ಷ್ಮತರಮನುಭವರೂಪಮ್ ॥ ೫೪ ॥

೫೪. ಅದು ಗುಣಗಳಿಲ್ಲದ್ದು, ಆಶೆಯಿಲ್ಲದ್ದು, ಒಂದೊಂದು ಕ್ಷಣಕ್ಕೂ ಬೆಳೆಯುತ್ತಿರುವದು, ಕಡಿವಡೆಯದೆ ಇರುವದು, ಬಹಳ ಸೂಕ್ಷ್ಮವಾಗಿರುವದು, ಅನುಭವರೂಪವಾಗಿರುವದು.

### ಗುಣರಹಿತಮ್, ಕಾಮನಾರಹಿತಮ್

೧೦೧. ಭಗವದ್ವಿಷಯಕವಾದ ಪ್ರೇಮವು ಬಾಹ್ಯವಿಷಯಗಳಲ್ಲಿರುವ ಪ್ರೇಮದಂತೆ ಅಲ್ಲ. ಏಕೆಂದರೆ ಬಾಹ್ಯವಿಷಯಗಳು ಸತ್ತ್ವರಜಸ್ತಮೋರೂಪವಾದ ಮೂರು ಗುಣಗಳ ವಿಕಾರವಾಗಿರುತ್ತವೆ. ವಿಷಯಚಿಂತನೆಯನ್ನು ಮಾಡಿ ಸಾಕೆನ್ನಿಸಿದರೆ

* ಅಚ್ಚಿನಪುಸ್ತಕದಲ್ಲಿ 'ಪ್ರತಿಕ್ಷಣವರ್ಧಮಾನಂ' ಎಂದೇ ಇದೆ.

ನಿದ್ರೆಯನ್ನು ಮಾಡಬೇಕೆಂಬ ಅಥವಾ ಸುಮ್ಮನೆ ಇರಬೇಕೆಂಬ ಇಚ್ಛೆಯಾಗುವದು. ನಿದ್ರಾಲಸ್ಯಗಳಿಂದಾಗುವ ಸುಖದ ಪ್ರೇಮವು **ತಾಮಸವಾಗಿರುತ್ತದೆ.** ಕೆಲವು ವಿಷಯಗಳ ಪ್ರೇಮವು ಅವುಗಳನ್ನು ಒದಗಿಸುವದರಲ್ಲಿಯೋ, ರಕ್ಷಿಸಿಕೊಳ್ಳುವದ ರಲ್ಲಿಯೋ, ಅಥವಾ ಅವುಗಳು ಕಾಲಾಂತರದಲ್ಲಿ ನಮಗೆ ಬೇಡವಾದರೆ ಅವನ್ನು ತೊಲಗಿಸಿಕೊಳ್ಳುವದರಲ್ಲಿಯೋ ಪ್ರಯತ್ನಿಸುವ ವ್ಯಾಪಾರದಲ್ಲಿ ತೊಡಗಿಸುತ್ತದೆ. ಅದು **ರಾಜಸಪ್ರೇಮವು.** ಬಾಹ್ಯವಿಷಯಗಳ ತತ್ತ್ವವನ್ನು ಅರಿಯುಬೇಕೆಂದು ಅವುಗಳಲ್ಲಿ ಒಂದಾಗುವ ಪ್ರೇಮವು **ಸಾತ್ತ್ವಿಕವು.** ಆ ಪ್ರೇಮವೂ ಮತ್ತೊಂದು ವಿಷಯದಲ್ಲಿ ಪ್ರೇಮವುಂಟಾದಾಗ ಅಥವಾ ಪ್ರಕೃತವಿಷಯುವಲ್ಲಿಯೇ ಕಾರಣಾಂತರ ದಿಂದ ಔದಾಸೀನ್ಯವುಂಟಾದಾಗ ಹಾರಿಹೋಗುವದು, ಹೀಗೆ ರಾಜಸತಾಮಸಮಿಶ್ರ ವಾದ ಸುಖಜ್ಞಾನಗಳ ಸಂಗ, ಕರ್ಮಸಂಗ, ಪ್ರಮಾದಾಲಸ್ಯಗಳ ಸಂಗ- ಇವುಗಳ ನ್ನುಂಟುಮಾಡಿ ಬಿಗಿದುಕಟ್ಟುವ ಪ್ರೇಮವು ಗುಣಾತ್ಮಕವಾಗಿರುತ್ತದೆ.

ಆದರೆ ಭಗವಂತನಲ್ಲಿ ಉಂಟಾಗುವ ಭಕ್ತಿಯೆಂಬ ಪ್ರೇಮವು ಗುಣರಹಿತ ವಾಗಿರುತ್ತದೆ. ಏಕೆಂದರೆ ಭಕ್ತನಿಗೆ 'ಇದನ್ನು ಅರಿತುಕೊಳ್ಳಬೇಕು, ಅಥವಾ ಇಂಥ ಸುಖವನ್ನು ಸಂಪಾದಿಸಿಕೊಳ್ಳಬೇಕು' ಎಂಬ ತಹತಹವೇನೂ ಇರುವದಿಲ್ಲ; ಅದಕ್ಕಾಗಿ ಇಂಥ ಪ್ರಯತ್ನದಿಂದ ಇಂಥ ಕರ್ಮವನ್ನು ಮಾಡಬೇಕೆಂಬುದೂ ಇರುವದಿಲ್ಲ; ಪ್ರಮಾದನಿದ್ರಾಲಸ್ಯಗಳೆಂಬುವವಂತೂ ಅವನ ಹತ್ತಿರ ಸುಳಿದಾಡುವ ಸಂಭವವೇ ಇರುವದಿಲ್ಲ. ರಜಸ್ತಮಸ್ಸುಗಳ ಸಂಪರ್ಕವಿಲ್ಲದ ಶುದ್ಧಸತ್ತ್ವರೂಪ ವಾಗಿರುವ ಮನಸ್ಸಿನಲ್ಲಿಯೇ ಭಕ್ತಿಯು ತೋರಿಕೊಳ್ಳುವದು.

ಅವನು ಯಾವ ಕೆಲಸದಲ್ಲಿಯೂ ಕೈಹಾಕದೆ ಇರುವದಕ್ಕೆ ಅವನ ಪ್ರೇಮವು ಕಾಮರಹಿತವಾಗಿರುವದೇ ಕಾರಣ ಅವನಿಗೆ ಹೊರಗಿನ ಯಾವ ವಸ್ತುವಿನ ಪ್ರಾಪ್ತಿಯಾಗಲಿ ಪರಿಹಾರವಾಗಲಿ ಆಗಬೇಕಾದದ್ದಿರುವದಿಲ್ಲ.

**ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।**
**ಆತ್ಮನ್ಯೇವ ಚ ಸನ್ತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥** ಗೀ. ೩-೧೭

ಎಂದು ಭಗವಂತನು ಹೇಳಿರುವಂತೆ ಅವನು ಆತ್ಮನಲ್ಲಿಯೇ ರಮಣಮಾಡುತ್ತಿರು ವನು. ಬಾಹ್ಯವಿಷಯಸೇವನೆಯಿಂದ ಅವನಿಗೆ ಆಗಬೇಕಾದ ತೃಪ್ತಿಯ ಆವಶ್ಯಕತೆ ಯೂ ಇರುವದಿಲ್ಲ. ಆತ್ಮನಿಂದಲೇ ಅವನು ತೃಪ್ತನಾಗಿರುತ್ತಾನೆ. ಆ ಪರಮಾತ್ಮ ನಿಗಿಂತ ಬೇರೆಯಾದ ಮತ್ತೊಂದು ವಸ್ತುವೂ ಬೇಕೆಂಬುದು ಅವನಿಗೆ ಇರುವದಿಲ್ಲ; ಆತ್ಮನಲ್ಲಿಯೇ ಸಂತುಷ್ಟನಾಗಿರುತ್ತಾನೆ. ಆದ್ದರಿಂದ ಅವನಿಗೆ ಮಾಡಬೇಕಾದ ಕಾರ್ಯವು ಯಾವದೂ ಉಳಿದಿರುವದಿಲ್ಲ.

## ಪ್ರತಿಕ್ಷಣಂ ವರ್ಧಮಾನಮ್

ಆ ಪ್ರೇಮವು ಬೆಳೆಯಬೇಕೆಂಬ ಆಶೆಯಾದರೂ ಅವನಿಗೆ ಬೇಡವೆ? ಅದಕ್ಕಾಗಿ ಯಾದರೂ ಅವನು ಯಾವದಾದರೂ ಕ್ರಿಯೆಯನ್ನು ಮಾಡಬೇಕೊ, ಇಲ್ಲವೊ ?

ಎಂದರೆ ಹಾಗಿಲ್ಲ. ಮಿಕ್ಕ ವಿಷಯಗಳಲ್ಲಿರುವ ಪ್ರೇಮವು ಪ್ರೇಮಾಭಾಸವಾಗಿರುವ ಕಾಮವಾದ್ದರಿಂದ ಅದು ಮಾರ್ಪಡುತ್ತಲೇ ಇದ್ದು ಕೊನೆಗೆ ಕ್ಷಯಿಸಿ ನಾಶವಾಗಲೂ ಬಹುದು. ಭಗವಂತನ ವಿಷಯದ ಪ್ರೇಮವು ಅಂಥದ್ದಲ್ಲ. ಭಗವಂತನ ಸ್ವರೂಪವು ನಿತ್ಯಸತ್ಯಾನಂದವಾಗಿರುವದರಿಂದ ಆ ವಿಷಯದಲ್ಲಿ ಪ್ರೇಮವುಂಟಾಗುವದೇ ತಡ, ಅದು ತನಗೆತಾನೇ ಕ್ಷಣಕ್ಷಣಕ್ಕೂ ವೃದ್ಧಿಯಾಗುತ್ತಲೇ ಇರುವದು. ಅಂತಃಕರಣ ದಲ್ಲಿರುವ ರಜಸ್ತಮೋಗುಣಗಳು ಹೋದಮೇಲೆಯೇ ಶುದ್ಧಸತ್ತ್ವಗುಣದ ಮಹಿಮೆ ಯಿಂದ ಆತ್ಮಪ್ರೇಮವು ಬೆಳೆದುಕೊಳ್ಳುವದು. ಆತ್ಮನ ಆನಂದವನ್ನು ಕಂಡು ಕೊಳ್ಳುವದೊಂದೇ ತಡ, ಕೂಡಲೆ ಅದರಲ್ಲಿ ಕ್ಷಣಕ್ಷಣಕ್ಕೂ ಉಕ್ಕುತ್ತಿರುವ ಪ್ರೇಮವು ಕಾಣಿಸಿಕೊಳ್ಳುವದು.

**अथाकामयमानो योऽकामो निष्काम आप्तकाम आत्मकामः ॥**

ಬೃ. ೪-೪-೬

'ಈವರೆಗೆ ಕಾಮಿಯ ವಿಷಯವನ್ನು ಹೇಳಿದ್ದಾಯಿತು ಈಗ ಕಾಮವಿಲ್ಲದಾತನ ವಿಚಾರ : ಅವನು ಕಾಮರಹಿತನಾಗಿರುತ್ತಾನೆ. ಅವನಿಂದ ಕಾಮಗಳೆಲ್ಲವೂ ತೊಲಗಿರುತ್ತವೆ; ಏಕೆಂದರೆ ಅವನು ಎಲ್ಲಾ ಕಾಮಗಳನ್ನೂ ಪಡೆದುಕೊಂಡಿರುತ್ತಾನೆ. ಹೇಗೆಂದರೆ ಆತ್ಮಕಾಮನಾಗಿರುವದರಿಂದ; ಆತ್ಮನೇ ಎಲ್ಲಾ ಕಾಮಗಳ ರೂಪದಲ್ಲಿರು ವದರಿಂದ' ಎಂದು ಬೃಹದಾರಣ್ಯಕಶ್ರುತಿಯು ಸಾರುತ್ತಿದೆ. ಯಾವನಿಗೆ ಪರಮಾತ್ಮ ನಲ್ಲಿ ಪ್ರೇಮವುಂಟಾಗಿರುವದೋ ಅವನಿಗೆ ಸಕಲಕಾಮಗಳೂ ಪ್ರಾಪ್ತವಾದಂತೆ. ಆದ್ದರಿಂದಲೇ ಅವನು ಮತ್ತೇನನ್ನೂ ಬಯಸದೆ ಇರುತ್ತಾನೆ. ಅವನು ಪರಮಾತ್ಮ ಮಯನೇ ಆಗಿರುತ್ತಾನೆ; ಎಂದೆಂದಿಗೂ ಪರಮಾತ್ಮಸಾಯುಜ್ಯವನ್ನೇ ಹೊಂದು ವನು. '**ब्रह्मैव सन् ब्रह्माप्येति**' ಎಂದು ಮೇಲೆ ಉದಾಹರಿಸಿರುವ ಶ್ರುತಿಯೇ ವಾಕ್ಯಶೇಷದಲ್ಲಿ ಹೇಳುತ್ತಿದೆ.

## ಅವಿಚ್ಛಿನ್ನಮ್

೧೦೩. ಪರಮಾತ್ಮನು ಅನಂತನಾಗಿರುವದರಿಂದ ಅವನ ಪ್ರೇಮವೂ ಅನಂತವಾಗಿರುವದರಿಂದ 'ಅವಿಚ್ಛಿನ್ನ'-ಎಂದರೆ ಎಂದಿಗೂ ಕಡಿವಡೆಯದೆ ಇರುತ್ತದೆ. ಕಾಡಿನಲ್ಲಿ ಹೊತ್ತಿಕೊಂಡುರಿಯುವ ಬೆಂಕಿಯು ತನಗೆತಾನೇ ಬೆಳೆಯುತ್ತಿರುವಂತೆ- ಪ್ರೇಮವೂ ಬೆಳೆಯುತ್ತಿರುವದರಿಂದ ಇನ್ನು ಪ್ರೇಮವು ಸಾಕು ಎನಿಸುವದೇಇಲ್ಲ. ಆದ್ದರಿಂದ ತಮೋಗುಣದಿಂದ ಆದ ನಿದ್ರೆಯ ಸುಖವೇ ಮುಂತಾದದ್ದರಂತೆ ನಿಂತು ಬಿಡಬಹುದೆಂಬ ಭೀತಿಯಿಲ್ಲ.

## ಸೂಕ್ಷ್ಮತರಮ್

೧೦೪. ಇಂದ್ರಿಯಗೋಚರವಾದ ವಸ್ತುಗಳು ಸ್ಥೂಲವೆನಿಸುವವು; ಅತೀಂದ್ರಿಯವಾದ ಬುದ್ಧಿಯಿಂದ ಮಾತ್ರವೇ ತಿಳಿಯುವದಕ್ಕೆ ಬರುವ ಸುಖಗಳು

ಸೂಕ್ಷ್ಮವೆನಿಸುವವು. ಕಾವ್ಯರಸ, ಗಣಿತವಿದ್ಯೆಯ ಕೌಶಲದಿಂದಾಗುವ ಸುಖ- ಇಂಥವು ಹೀಗೆ ಸೂಕ್ಷ್ಮವಾಗಿರುವದರಿಂದಲೇ ಎಲ್ಲರಿಗೂ ಗೋಚರವಾಗುವದಿಲ್ಲ. ಭಗವತ್ಪ್ರೇಮವು ಅದಕ್ಕಿಂತಲೂ ಸೂಕ್ಷ್ಮವಾಗಿರುತ್ತದೆ. ಅದು ಬುದ್ಧಿಯನ್ನೂ ಮೀರಿರುವ ಆತ್ಮಸ್ವರೂಪದ ಪ್ರೇಮವಾದ್ದರಿಂದ ಅದನ್ನು ಇಂದ್ರಿಯಗಳಿಂದಲಾಗಲಿ ಮನಸ್ಸಿನಿಂದಲಾಗಲಿ ವಿಷಯೀಕರಿಸಿ ಹೇಳಲಾಗುವದಿಲ್ಲ. ಅದನ್ನು ಆತ್ಮಾನುಭವದಿಂದಲೇ ಭಕ್ತನು ಅನುಭವಿಸುತ್ತಿರುವನು, ಇದೂ ಆತ್ಮಾನಂದವೂ ಒಂದೇ.

## ಅನುಭವರೂಪಮ್

೧೦೫. ಭಗವತ್ಪ್ರೇಮವು ಅನುಭವಕ್ಕೆ ಗೋಚರವಾಗುವದು ಎಂದು ಹೇಳುವದುಕೂಡ ಒಳಹೊಕ್ಕುನೋಡಿದರೆ ಹಾಗೆ ಹೇಳುವದು ಸರಿಯಲ್ಲವೆಂದು ನಿಶ್ಚಯಿಸಬಹುದು. ಏಕೆಂದರೆ ಆತ್ಮಾನುಭವಕ್ಕೂ ಆತ್ಮನಿಗೂ ಹೇಗೆ ಭೇದವಿಲ್ಲವೋ ಹಾಗೆಯೇ ಆತ್ಮಪ್ರೇಮಕ್ಕೂ ಆತ್ಮನಿಗೂ ಯಾವ ಭೇದವೂ ಇರುವದಿಲ್ಲ. ಆತ್ಮನೇ ಪ್ರೇಮರೂಪನಾಗಿರುತ್ತಾನೆ. 'ಬೆಂಕಿಯ ಬಿಸಿ' ಎಂಬಂತೆ ಆತ್ಮನ ಪ್ರೇಮವು ಎಂಬ ಮಾತು ವ್ಯಪದೇಶಮಾತ್ರವಾಗಿರುತ್ತದೆ. ಪರಮಾತ್ಮನು ನಾವು ನಮ್ಮ ಆತ್ಮನೆಂದು ಕರೆದುಕೊಳ್ಳುತ್ತಿರುವ ಅನೇಕಾತ್ಮರುಗಳಿಗೆಲ್ಲ ಆತ್ಮನಾಗಿರುವದರಿಂದ ಸರ್ವಾನುಭವರೂಪನಾಗಿರುತ್ತಾನೆ. ಆದ್ದರಿಂದಲೇ ಶ್ರುತಿಯು

तदेतद् ब्रह्मापूर्वमनपरमनन्तरमबाह्यमयमात्मा ब्रह्म सर्वानुभूः ॥

ಬೃ. ೨-೫-೧೯

ಈ ಬ್ರಹ್ಮವು ಹಿಂದುಮುಂದುಗಳಿಲ್ಲದ ಕಾರ್ಯಕಾರಣಗಳಿಲ್ಲದ ಒಳಗು ಹೊರಗಿಲ್ಲದ ತಾನೊಂದೇ ಆಗಿರುತ್ತದೆ. ಈ ಆತ್ಮನೇ ಬ್ರಹ್ಮವು; ಸರ್ವಾನುಭವರೂಪವು- ಎಂದಿರುತ್ತದೆ. ಅನುಭವರೂಪವಾಗಿರುವ ಆತ್ಮನ ಅನುಭವದಿಂದಲೇ ಎಲ್ಲವನ್ನೂ ತಿಳಿಯುತ್ತಿರುವೆವು ವಸ್ತುಗಳ ಜ್ಞಾನವು ಈ ಅನುಭವದಲ್ಲಿಯೇ ಪರ್ಯವಸಾನವಾಗುತ್ತಿರುವದರಿಂದ ಆ ಹುಟ್ಟುವ ಜ್ಞಾನಕ್ಕೂ ಅನುಭವವೆಂದೇ ಹೆಸರು. ಇಂದ್ರಿಯಗಳಿಂದಾಗುವ ವಸ್ತುಗಳ ಅನುಭವವು- ಇಂದ್ರಿಯವಿಷಯಸಂಬಂಧವಾದ ಬಳಿಕ 'ಅನು' ಆಗುತ್ತಿರುವದರಿಂದ ಅದನ್ನು 'ಅನುಭವ'ವೆನ್ನುವದು ಅನ್ವರ್ಥವಾಗಿರುತ್ತದೆ. ಭಗವತ್ಪ್ರೇಮವೋ ಎಂದರೆ ಎಲ್ಲಕ್ಕೂ ಒಳಗೆ ಇದ್ದುಕೊಂಡು ಪರಮಾತ್ಮಸ್ವರೂಪವೇ ಆಗಿರುವದರಿಂದ ಅನುಭವರೂಪವಾದ ಈ ಪ್ರೇಮಕ್ಕೆ ಹುಟ್ಟುಹೊಂದುಗಳಿರುವದೇ ಇಲ್ಲ. ಇಂದ್ರಿಯಗಳನ್ನೇ ಒಳಸೆಳೆದುಕೊಂಡು ತನ್ನೊಳಗೆ ತಾನಿದ್ದು ಪಡೆಯುವ ಈ ಪ್ರೇಮವು ಎಲ್ಲರಿಗೂ ದಕ್ಕದೆ ಇರುವದಕ್ಕೆ ಇದೇ ಕಾರಣ.

ತತ್ಪ್ರಾಪ್ಯ ತದೇವಾವಲೋಕಯತಿ ತದೇವ ಶೃಣೋತಿ (ತದೇವ ಭಾಷಯತಿ) ತದೇವ ಚಿನ್ತಯತಿ ‖ ೫೫ ‖

೫೫. ಅದನ್ನು ಪಡೆದುಕೊಂಡಾಗ ಅದನ್ನೇ ನೋಡುತ್ತಿರುವನು; ಅದನ್ನೇ ಕೇಳುತ್ತಿರುವನು; ಅದನ್ನೇ (ಮಾತನಾಡುತ್ತಿರುವನು); ಅದನ್ನೇ ಚಿಂತಿಸುತ್ತಿರುವನು.

೧೦೬. ಈ ಪ್ರೇಮವನ್ನು ಪಡೆದುಕೊಂಡಾತನು ಪ್ರೇಮವೇ ಆಗಿಬಿಡುವದರಿಂದ ಅವನಿಗೆ ಸರ್ವವೂ ಪ್ರೇಮಮಯವೇ ಆಗಿಬಿಡುವದು.

'आत्मैवाधस्तादात्मोपरिष्टादात्मा पश्चादात्मा पुरस्तादात्मा दक्षिणत आत्मोत्तरत आत्मैवेदं सर्वमिति । स वा एष एवं पश्यन्नेवं मन्वान एवं विजानन्नात्मरतिरात्मक्रीड आत्ममिथुन आत्मानन्दः स स्वराड् भवति ॥'

ಛಾಂ. ೭-೨೫-೨

ಎಂಬ ಶ್ರುತಿಯಂತೆ ಅವನಿಗೆ ಕೆಳಗೆ, ಮೇಲೆ, ಹಿಂದೆ, ಮುಂದೆ, ಎಡಕ್ಕೆ, ಬಲಕ್ಕೆ ಎಲ್ಲವೂ ಆತ್ಮನೇ ಆಗಿರುವದರಿಂದ ಅವನು ಏನನ್ನು ಕಂಡರೂ ಏನನ್ನು ಆಲೋಚಿಸುತ್ತಿದ್ದರೂ ಏನನ್ನು ಅರಿತರೂ ಆತ್ಮರತಿಯಾಗಿ ಆತ್ಮಕ್ರೀಡನಾಗಿ ಆತ್ಮಮಿಥುನನಾಗಿ ಪರಮಾತ್ಮಪ್ರೇಮದಲ್ಲಿ ಮುಳುಗಿ ತೇಲುತ್ತಾ ಆನಂದಿಸುತ್ತಿರುವನು.

೧೦೭. **'ತದೇವ ಶೃಣೋತಿ'** ಎಂಬ ವಾಕ್ಯವಾದ ಬಳಿಕ **'ತದೇವ ಭಾಷಯತಿ'** (?) ಎಂಬ ವಾಕ್ಯವು ಕೆಲವು ಪಾಠಗಳಲ್ಲಿದೆ; ಆಗ ಅವನು ಯಾರನ್ನು ಕಂಡರೂ ಏನನ್ನು ಕೇಳಿದರೂ ಏನನ್ನು ಚಿಂತಿಸುತ್ತಿದ್ದರೂ ಅದೆಲ್ಲವೂ ಪ್ರೇಮದ ವಿಷಯವೇ ಆಗಿರುವಂತೆ ಅವನು ಯಾರೊಡನೆ ಮಾತನಾಡುತ್ತಿದ್ದರೂ ಅದರ ಮಾತನ್ನೇ ಆಡುತ್ತಿರುವನು ಎಂಬ ಅಭಿಪ್ರಾಯವನ್ನು ತೆಗೆಯಬೇಕು.

ಇದೇ ಪರಭಕ್ತಿಯ ಕೊನೆಯ ಹಂತವಾಗಿರುತ್ತದೆ.

## ೧೪. ಗೌಣಭಕ್ತಿ

ಗೌಣೀ ತ್ರಿಧಾ ಗುಣಭೇದಾದಾರ್ತಾದಿಭೇದಾದ್ವಾ ‖ ೫೬ ‖

೫೬. ಗೌಣಭಕ್ತಿಯು ಮೂರುವಿಧ. ಗುಣಗಳ ಭೇದದಿಂದಲೋ ಆರ್ತಭಕ್ತ ಮುಂತಾದ ಭೇದದಿಂದಲೋ (ಮೂರು ಬಗೆ).

### ಗುಣಭೇದಾತ್

೧೦೮. ಈಗ ಗೌಣಭಕ್ತಿಯ ವಿವರಣೆಗೆ ಹೊರಟಿರುತ್ತಾರೆ. ಗೌಣಭಕ್ತಿಯನ್ನು ಎರಡು ದೃಷ್ಟಿಗಳಿಂದ ಮೂರುಮೂರಾಗಿ ವಿಂಗಡಿಸಬಹುದು. ಭಗವದ್ಗೀತೆ

ಯಲ್ಲಿ ಹದಿನಾಲ್ಕು ,ಹದಿನೇಳು, ಹದಿನೆಂಟು- ಈ ಮೂರು ಅಧ್ಯಾಯಗಳಲ್ಲಿ ಸತ್ತ್ವರಜಸ್ತಮೋಗುಣಗಳ ವಿವರವನ್ನು ಕೊಟ್ಟಿದೆ. ಹದಿನಾಲ್ಕನೆಯ ಅಧ್ಯಾಯ ದಲ್ಲಿ ಗುಣಗಳು ಹೇಗೆ ಜೀವನನ್ನು ಬಂಧಕ್ಕೆ ಈಡುಮಾಡುತ್ತವೆ ಎಂಬುದನ್ನು ಹೇಳಿದ ಬಳಿಕ ಗುಣಗಳನ್ನೆಲ್ಲ ಮೀರಿದ ನಿಸ್ತ್ರೈಗುಣ್ಯನಾದ ಪರಭಕ್ತನ ವಿಚಾರ ವನ್ನು ಹೇಳಿದೆ. ಆದ್ದರಿಂದ ಅಲ್ಲಿ ಪರಭಕ್ತಿಯೇ ಪ್ರಧಾನವಾಗಿದ್ದರೂ ಅಲ್ಲಿ ಹೇಳಿರುವ ಪರಭಕ್ತನ ಲಕ್ಷಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸಾಧನವನ್ನು ಮಾಡುವವನ ಭಕ್ತಿಯು ಸಾತ್ತ್ವಿಕವೆನಿಸಬಹುದು. ಭಗವಂತನು ಕರ್ಮಯೋಗ ವನ್ನು ವಿವರಿಸುವಾಗ:

**ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ||**

ಗೀ ೨-೪೫

ಎಂಬ ಶ್ಲೋಕದಲ್ಲಿ ಹೇಳಿರುವಂತೆ ಸಂಸಾರಿಗಳು ಆಯಾ ಕಾಮದಿಂದ ಮಾಡುವ ಕರ್ಮಗಳು ರಾಜಸವಾಗಿವೆ ಎನ್ನಬಹುದು. ಆದ್ದರಿಂದ ಆ ಕರ್ಮಗಳನ್ನು ಮಾಡು ವಾತನ ಸಕಾಮಭಕ್ತಿಯನ್ನು ರಾಜಸವೆನ್ನಬಹುದು. ಹದಿನೇಳನೆಯ ಅಧ್ಯಾಯದಲ್ಲಿ ಯಜ್ಞದಾನತಪಸ್ಸುಗಳನ್ನು ಸಾತ್ತ್ವಿಕರಾಜಸತಾಮಸಗಳೆಂದು ಮೂರುಮೂರು ಪ್ರಕಾರದಿಂದ ವಿಂಗಡಿಸಿರುತ್ತದೆ. ತಾಮಸಶ್ರದ್ಧೆಯಿಂದ ಭಗವಂತನನ್ನು ಭಜಿಸು ವದನ್ನು ತಾಮಸಭಕ್ತಿಯೆನ್ನಬಹುದು. ಇವುಗಳು ಮೂರೂ ಗೌಣಭಕ್ತಿಯೇ, ಮುಖ್ಯಭಕ್ತಿಯಲ್ಲ. ಏಕೆಂದರೆ ಅವುಗಳಲ್ಲಿ ಭಗವಂತನಲ್ಲಿ ಪರಮಪ್ರೇಮವಿರುವದೆಂಬು ದಿಲ್ಲ. ಮನುಷ್ಯನ ಅಂತಃಕರಣವು ಯಾವ ಗುಣವನ್ನು ಪ್ರಧಾನವಾಗಿಟ್ಟು ಕೊಂಡು ಭಗವಂತನಲ್ಲಿ ಭಕ್ತಿಯನ್ನು ಮಾಡುವದೋ ಆಯಾ ಗುಣದಂತೆ ಈ ಗೌಣಭಕ್ತಿಗಳು ಇರುತ್ತವೆ.

## ಆರ್ತಾದಿಭೇದಾದ್ ವಾ

೧೮೯. ಅಥವಾ ಆರ್ತಾದಿಭೇದದಿಂದ ಗೌಣಭಕ್ತಿಯು ಮೂರು ವಿಧವಾಗಿರು ತ್ತದೆ ಎನ್ನಬಹುದು. ಭಗವದ್ಗೀತೆಯ ಏಳನೆಯ ಅಧ್ಯಾಯದಲ್ಲಿ:

**ಚತುರ್ವಿಧಾ ಭಜನ್ತೇ ಮಾಂ ಜನಾಃ ಸುಕೃತಿನೋಽರ್ಜುನ |**
**ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ |**
**ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ||**

ಗೀ. ೭-೧೬, ೧೭

ಭಕ್ತನು ಯಾವ ಪ್ರಯೋಜನವನ್ನು ಲಕ್ಷಿಸಿ ಭಕ್ತಿಸಾಧನವನ್ನು ಅನುಷ್ಠಾನ ಮಾಡುತ್ತಿರುತ್ತಾನೋ ಅದನ್ನವಲಂಬಿಸಿ ಭಕ್ತಿಯನ್ನು ನಾಲ್ಕು ವಿಧವಾಗಿ ವಿಂಗಡಿಸಿರುತ್ತಾರೆ. ಭಕ್ತಿಯು ಭಗವಂತನ ಪ್ರೇಮದ ಗುಣವನ್ನು ಅವಲಂಬಿ

ಹಿರುವದರಿಂದ ಸಾತ್ತ್ವಿಕಾದಿಭೇದಗಳಂತೆಯೇ ಇವೂ ಪರಭಕ್ತಿಯ ಗುಣವನ್ನವ ಲಂಬಿಸಿರುವದರಿಂದ ಗೌಣಭಕ್ತಿಗಳೇ.

ಕಳ್ಳಕಾಕರ, ಹುಲಿಕರಡಿ ಮುಂತಾದ ದುಷ್ಟಪ್ರಾಣಿಗಳ, ರೋಗರುಜಿನಾದಿಗಳ ನಿಮಿತ್ತದಿಂದ ಸಂಕಟಪಡುತ್ತಿರುವಾಗ ಆರ್ತಿಯ ಪರಿಹಾರಕ್ಕೆಂದು ಭಗವಂತನನ್ನು ಶರಣುಹೊಕ್ಕವನು **ಆರ್ತಭಕ್ತನು.** ಭಗವತ್ತತ್ತ್ವವನ್ನು ಅರಿತುಕೊಳ್ಳಬೇಕೆಂಬ ಇಚ್ಛೆಯಿಂದ ಭಕ್ತಿಯನ್ನು ಮಾಡುವಾತನು **ಜಿಜ್ಞಾಸುಭಕ್ತನು.** ಧನಧಾನ್ಯಾದಿಸಮೃದ್ಧಿಗಾಗಿ ಭಗವಂತನನ್ನು ಶರಣುಹೊಕ್ಕವನು **ಅರ್ಥಾರ್ಥಿ** ಎಂದು ಶಂಕರಾಚಾರ್ಯರು ಈ ಭಕ್ತಿಭೇದಗಳನ್ನು ವಿಂಗಡಿಸಿರುತ್ತಾರೆ. ಆದರೆ ಈ ಭಕ್ತ್ಯಾಚಾರ್ಯರು ಆರ್ತಭಕ್ತನೆಂದರೆ ಪರಮಪ್ರೇಮರೂಪವಾದ ಭಕ್ತಿಯ ಪ್ರಾಪ್ತಿಗೆಂದೇ ಪ್ರಯತ್ನಮಾಡುವವನು ; ಭಗವಂತನ ಪ್ರೇಮವೊಂದಿದ್ದರೆ ನನಗೆ ಸಾಕು ಎಂದೇ ಯಾವನು ಭಗವಂತನನ್ನು ಭಜಿಸುತ್ತಿರುವನೋ ಅವನನ್ನೇ ಆರ್ತಭಕ್ತನೆಂದು ಭಾವಿಸಿರುತ್ತಾರೆಂದು ತಿಳಿಯಬೇಕಾಗಿದೆ.

> **ನಾಸ್ಥಾ ಧರ್ಮೇ ನ ವಸುನಿಚಯೇ ನೈವ ಕಾಮೋಪಭೋಗೇ**
> **ಯದ್ಯದ್ಭವ್ಯಂ ಭವತು ಭಗವನ್ ಪೂರ್ವಕರ್ಮಾನುರೂಪಮ್ ।**
> **ಏತತ್ ಪ್ರಾರ್ಥ್ಯಂ ಮಮ ಬಹುಮತಂ ಜನ್ಮಜನ್ಮಾನ್ತರೇಽಪಿ**
> **ತ್ವತ್ಪಾದಾಮ್ಭೋರುಹಯುಗಗತಾ ನಿಶ್ಚಲಾ ಭಕ್ತಿರಸ್ತು ॥ ಮು. ಮಾಲಾ. ೬**

'ನನಗೆ ಧರ್ಮದಲ್ಲಿ ಆಸ್ಥೆಯಿಲ್ಲ, ಧನವನ್ನು ರಾಶಿಮಾಡಿಕೊಳ್ಳಬೇಕೆಂಬ ಹಂಬಲೂ ಇಲ್ಲ. ಎಲೈ ಭಗವಂತನೆ, ಹಿಂದಿನ ಕರ್ಮಕ್ಕನುಗುಣವಾಗಿ ಏನೇನು ಬರಲಿದೆಯೋ ಅದು ಬಂದುಕೊಳ್ಳಲಿ! ಆದರೆ ನನಗೆ ಇದೊಂದೇ ಎಲ್ಲಕ್ಕಿಂತಲೂ ಹೆಚ್ಚಾಗಿ ಬೇಕಾಗಿರುವದು ; ಅದೇನೆಂದರೆ ಮುಂದೆ ಬರುವ ಜನ್ಮಜನ್ಮದಲ್ಲಿಯೂ ನಿನ್ನ ಪಾದಕಮಲಯುಗದಲ್ಲಿ ನಿಶ್ಚಲವಾದ ಭಕ್ತಿಯೊಂದೇ ಇರಲಿ!' ಎಂದು ಮುಕುಂದಮಾಲಾಸ್ತೋತ್ರದಲ್ಲಿ ಹೇಳಿದೆ. ಧರ್ಮಾರ್ಥಕಾಮಗಳ ಆಳಿಯೊಂದೂ ಇಲ್ಲ, ನಿನ್ನ ಪಾದಭಕ್ತಿಯ ಆನಂದವೊಂದಿದ್ದರೆ ಸಾಕು! ಎಂಬ ಭಕ್ತಿಯ ಹಂಬಲಿರುವವನೇ ಇಲ್ಲಿ ಆರ್ತನು. ಅವನಿಗೆ ಜನ್ಮಮರಣಗಳೆಂಬ ಸಂಸಾರದ ಭೀತಿಯುಕೂಡ ಇರುವದಿಲ್ಲ ; ಭಗವಂತನ ಭಕ್ತಿಯೊಂದೇ ಬೇಕು. ಈ ಭಕ್ತಿಗೂ ಪರಭಕ್ತಿಗೂ ಇರುವ ಮುಖ್ಯ ವೈಲಕ್ಷಣ್ಯವೇನೆಂದರೆ : ಪರಮಾತ್ಮನ ಗುಣಗಳನ್ನೂ ಕಥೆಗಳನ್ನೂ ಕೇಳಿಕೇಳಿ ಆ ಭಗವಂತನ ಪ್ರೇಮದ ಆನಂದದ ಮುಂದೆ ಮತ್ತೆ ಯಾವದೊಂದೂ ನನಗೆ ರುಚಿಸುತ್ತಿಲ್ಲ ಎಂಬ ಹಂಬಲಿಕೆಯುಳ್ಳ ಪರೋಕ್ಷಜ್ಞಾನಿಯ ಭಕ್ತಿಯು **ಆರ್ತಭಕ್ತಿ ;** ಭಗವಂತನ ಸ್ವರೂಪವನ್ನೇ ನೇರಾಗಿ ಅರಿತುಕೊಂಡು ತನ್ಮಯನಾಗಿ ಅನುಸಂಧಾನ ಮಾಡುತ್ತಿರುವವನ ಭಕ್ತಿಯು **ಪರಭಕ್ತಿ.**

ಉತ್ತರಸ್ಮಾದುತ್ತರಸ್ಮಾತ್
ಪೂರ್ವಪೂರ್ವಾ ಶ್ರೇಯಾಯ ಭವತಿ ॥ ೫೭ ॥

೫೭. ಇವುಗಳೊಳಗೆ ಮುಂದುಮುಂದಿನದಕ್ಕಿಂತ ಹಿಂದು ಹಿಂದಿನದು ಶ್ರೇಯಸ್ಸಿಗೆ ಕಾರಣವಾಗಿರುತ್ತದೆ.

೧೧೦. ಸಾತ್ತ್ವಿಕರಾಜಸತಾಮಸ– ಈ ಮೂರರಲ್ಲಿ ತಾಮಸಕ್ಕಿಂತ ರಾಜಸವೂ ರಾಜಸಕ್ಕಿಂತ ಸಾತ್ತ್ವಿಕವೂ (ಪರ)ಭಕ್ತಿಗೆ ಹತ್ತಿರವಿರುವದು; ಅರ್ಥಾರ್ಥಿ ಭಕ್ತಿಗಿಂತ ಜಿಜ್ಞಾಸುವಿನ ಭಕ್ತಿಯೂ, ಜಿಜ್ಞಾಸುವಿನ ಭಕ್ತಿಗಿಂತ ಆರ್ತಭಕ್ತಿಯೂ ಹೆಚ್ಚಿನದಾಗಿರುವದು ; ಏಕೆಂದರೆ ಆರ್ತನು ಪರಮಾತ್ಮನ ಪ್ರೇಮಕ್ಕಾಗಿ ಸಕಲಾರ್ಥಗಳನ್ನೂ ಬಿಡುವದಕ್ಕೆ ಸಿದ್ಧನಾಗಿರುತ್ತಾನೆ, ಪರಮಾತ್ಮನ ಪ್ರೇಮದಲ್ಲಿಯೇ ನಲಿಯುತ್ತಿರಬೇಕೆಂದು ಹಂಬಲಿಸುತ್ತಿರುತ್ತಾನೆ. ಕೈಗೂಸು ತಾಯಿಯ ಮುಖವನ್ನೇ ನೋಡುತ್ತಾ ನಲಿಯುತ್ತಿರುವದೇ ಹೊರತು ತಾಯಿಯ ಸ್ವರೂಪವನ್ನು ಅರಿತುಕೊಳ್ಳಬೇಕೆಂಬ ಹಂಬಲು ಅದಕ್ಕೆ ಇರುವದಿಲ್ಲ. ಮುಖ್ಯಭಕ್ತಿಯ ಲಕ್ಷಣವನ್ನು ಹೇಳುವಾಗ ನಾರದರು **'ತದರ್ಪಿತಾಖಿಲಾಚಾರತಾ ತದ್ವಿಸ್ಮರಣೇ ಪರಮವ್ಯಾಕುಲತಾ ಚ'** (ಸೂ. ೧೯) ಎಂದು ಹೇಳಿರುವದರ ಮರ್ಮವೇ ಇದು. ಇಲ್ಲಿ ಜ್ಞಾನವೆಂದರೆ ಬಾಹ್ಯವಸ್ತುಗಳ ಜ್ಞಾನದಂತೆಯೇ ಪರಮಾತ್ಮನ ಸ್ವರೂಪವನ್ನು ಒಂದಾನೊಂದು ಪ್ರತ್ಯಯದಿಂದ ನಿಶ್ಚಯಿಸಿಕೊಳ್ಳುವದು. ಬುದ್ಧಿಪ್ರಧಾನರಾದ ಜನರು ತರ್ಕದಿಂದ ವಸ್ತುವಿನ ಸ್ವರೂಪವನ್ನು ನಿರ್ಧರಿಸುವದಕ್ಕೇ ಹವಣಿಸುತ್ತಿರುವರು. ಆದರೆ ಪ್ರೇಮಪ್ರಧಾನರಾದವರು ವಸ್ತುವಿನ ಸೌಂದರ್ಯಕ್ಕೇ ಮರುಳಾಗಿ ಅದರ ಚಿಂತನೆಯಲ್ಲಿಯೇ ನಲಿಯುತ್ತಿರುವರು. ಹೀಗೆಯೇ ಆರ್ತನಾದವನು ಭಗವಂತನ ತತ್ತ್ವವನ್ನು ನಿಶ್ಚಯಿಸಿಕೊಳ್ಳುವ ಬುದ್ಧಿಕೌಶಲವನ್ನು ಸಂಪಾದಿಸಿಕೊಳ್ಳುವದಕ್ಕೆ ಹವಣಿಸುವದಿಲ್ಲ. ಭಗವಂತನ ಮಾಹಾತ್ಮ್ಯವನ್ನು ಶಾಸ್ತ್ರದಿಂದಲೂ ಗುರುಗಳಿಂದಲೂ ಕೇಳಿದ ಬಳಿಕ–

**ತವ ತತ್ತ್ವಂ ನ ಜಾನಾಮಿ ಯಾದೃಶೋಽಸಿ ಜನಾರ್ದನ ।**
**ಯಾದೃಶೋಽಸಿ ಮಹಾದೇವ ತಾದೃಶಾಯ ನಮೋ ನಮಃ ॥**

ಎಂಬಂತೆ ದೇವ, ನಿನ್ನ ತತ್ತ್ವವನ್ನು ನಾನರಿಯೆ ; ನೀನು ಹೇಗಿರುವೆಯೋ ಹಾಗಿರುವ ನಿನಗೆ ನಮಸ್ಕಾರ ! ನಿನ್ನ ಪ್ರೇಮವನ್ನು ಕೊಟ್ಟು ನನ್ನನ್ನು ಅನುಗ್ರಹಿಸು !' ಎನ್ನುತ್ತಿರುವನು. ಆದ್ದರಿಂದ ಹೃದಯಪ್ರಧಾನವಾದ ಆರ್ತಭಕ್ತಿಯು ಮುಖ್ಯಭಕ್ತಿಗೆ ತೀರಸಮೀಪದಲ್ಲಿರುತ್ತದೆ. ಆದ್ದರಿಂದ ಗೌಣಭಕ್ತಿಗಳೊಳಗೆಲ್ಲ ಅದೇ ಸರ್ವಶ್ರೇಷ್ಠವು.

ಜ್ಞಾನಕ್ಕಾಗಿ ಭಕ್ತಿಯನ್ನು ಮಾಡುವ ಕ್ಕಿಂತ ಭಕ್ತಿಗಾಗಿಯೇ ಭಕ್ತಿಯನ್ನು ಮಾಡುವ ಆರ್ತಭಕ್ತಿಯಲ್ಲಿರುವ ಒಂದು ಹೆಚ್ಚುಗಾರಿಕೆಯೇನೆಂದರೆ : ಜಿಜ್ಞಾಸು ವಾದವನು ಜ್ಞಾನಕ್ಕೆ ಭಕ್ತಿಯು ಒಂದು ಸಾಧನವೆಂದು ಬಗೆಯುವನೇ ಹೊರತು ಅದಕ್ಕೆ ಇನ್ನೇನೂ ಹೆಚ್ಚಿನ ಬೆಲೆಯನ್ನು ಕೊಡುತ್ತಿರುವದಿಲ್ಲ. ಅವನ ಕಣ್ಣೆಲ್ಲವೂ ಜ್ಞಾನದ ಕಡೆಗೇ ಇರುತ್ತದೆ. ಆದ್ದರಿಂದ ಅವನದು ಅನನ್ಯಭಕ್ತಿಯಲ್ಲ.

**ಯಾ ನಿರ್ವೃತಿಸ್ತನುಭೃತಾಂ ತವ ಪಾದಪದ್ಮ**
**ಧ್ಯಾನಾದ್ ಭವಜ್ಜನಕಥಾಶ್ರವಣೇನ ವಾ ಸ್ಯಾತ್ ।**
**ಸಾ ಬ್ರಹ್ಮಣಿ ಸ್ವಮಹಿಮನ್ಯಪಿ ನಾಥ ಮಾ ಭೂತ್**
**ಕಿಂ ತ್ವಂತಕಾಸಿಲುಲಿತಾತ್ ಪತತಾಂ ವಿಮಾನಾತ್ ॥**

ಭಾಗ. ೪-೯-೧೦

ಎಂಬಂತೆ ಸ್ವರ್ಗಾದಿಗಳಲ್ಲಿ ಆಗುವ ಅಲ್ಪಕ್ಷಯಿಷ್ಣುಸುಖದ ಭೋಗವು ಹಾಗಿರಲಿ, ತನ್ನ ಮಹಿಮೆಯಲ್ಲಿಯೇ ಇರುವ ಬ್ರಹ್ಮಸ್ವರೂಪಪ್ರಾಪ್ತಿಯಲ್ಲಿಕೂಡ ಭಗವತ್ಪಾದ ಪದ್ಮಧ್ಯಾನದಿಂದಲಾಗಲಿ ಭಾಗವತಜನಕಥಾಶ್ರವಣದಿಂದಲಾಗಲಿ ಆಗುವ ಸುಖವು ದೊರಕಲಾರದು- ಎಂದು ಆರ್ತಭಕ್ತನ ಭಾವನೆಯಿರುತ್ತದೆ. ಜಿಜ್ಞಾಸುಭಕ್ತನು ಮಂಗನ ಮರಿಯು ತಾಯಿಯನ್ನು ಅಪ್ಪಿಕೊಳ್ಳದಿದ್ದರೆ ತಾನು ಎಲ್ಲಿ ಬಿದ್ದು ಹೋಗು ವೆನೋ ಎಂದುಕೊಂಡಿರುವಂತೆ- ಜ್ಞಾನವಿಲ್ಲದಿದ್ದರೆ ತಾನು ಕೆಟ್ಟೆನೆಂದು ಅದಕ್ಕಾಗಿ ಸ್ವಪ್ರಯತ್ನವನ್ನು ನಡೆಯಿಸುತ್ತಲೇ ಇರುವನು ; ಆದರೆ ಆರ್ತಭಕ್ತನು- ಬೆಕ್ಕಿನ ಮರಿಯು ಇದ್ದಲ್ಲಿಯೇ ಇದ್ದುಕೊಂಡು ಕೂಗಿದ ಮಾತ್ರದಿಂದ ತಾಯಿಯು ತಾನಿದ್ದ ಲ್ಲಿಗೆ ತಪ್ಪದೆ ಓಡಿಬರುವದೆಂದು ನಂಬಿರುವಂತೆ- ಭಗವಂತನು ತನ್ನನ್ನು ಎಂದಿಗೂ ಕೈಬಿಡನೆಂದು ನಂಬಿ ಅವನ ಭಕ್ತಿಯಲ್ಲಿಯೇ ನಿರತನಾಗಿರುತ್ತಾನೆ. ಆದ್ದರಿಂದ ಅವನದೇ ಅನನ್ಯಭಕ್ತಿ.

೧೧೧. ಇಲ್ಲಿಗೆ ಗೌಣಭಕ್ತಿಯ ವಿವರಣೆಯ ವಿಚಾರವು ಮುಗಿಯಿತು. ಭಕ್ತಿಗಾಗಿ ಮಾಡುವ ಸಾಧನಗಳೆಲ್ಲವೂ ಈ ಗೌಣಭಕ್ತಿಯಲ್ಲಿಯೇ ಅಡಕವಾಗಿರು ತ್ತವೆ.

**ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।**
**ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥**
**ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ ।**
**ಕ್ರಿಯೇತ ಭಗವತ್ಯದ್ಧಾ ತನ್ಮನ್ಯೇಽಧೀತಮುತ್ತಮಮ್ ॥**

-ಭಾಗ. ೭-೫-೨೪

ಎಂದು ಪ್ರಹ್ಲಾದನು ಹೇಳಿರುವ ನವವಿಧಭಕ್ತಿಗಳಲ್ಲಿ ಭಗವತ್ಪ್ರೇಮವು ಅನುಸ್ಯೂತವೇ ಆಗಿರುವದರಿಂದ ಅವೆಲ್ಲವೂ ಗೌಣಭಕ್ತಿಯಲ್ಲಿ ಸೇರಿವೆ. **ಅಧ್ಯಾತ್ಮರಾಮಾಯಣ** ದಲ್ಲಿ ಹೇಳಿರುವ

**ಸತಾಂ ಸಙ್ಗತಿರೇವಾತ್ರ ಸಾಧನಂ ಪ್ರಥಮಂ ಸ್ಮೃತಮ್ ।**
**ದ್ವಿತೀಯಂ ಮತ್ಕಥಾಲಾಪಸ್ತೃತೀಯಂ ಮದ್ಗುಣೇರಣಮ್ ॥**
**ವ್ಯಾಖ್ಯಾತೃತ್ವಂ ಮದ್ವಚಸಾಂ ಚತುರ್ಥಂ ಸಾಧನಂ ಭವೇತ್ ।**
**ಆಚಾರ್ಯೋಪಾಸನಂ ಭದ್ರೇ ಮದ್ಬುದ್ಧ್ಯಾಽಮಾಯಯಾ ಸದಾ ॥**
**ಪಞ್ಚಮಂ ಪುಣ್ಯಶೀಲತ್ವಂ ಯಮಾದಿ ನಿಯಮಾದಿ ಚ ।**
**ನಿಷ್ಠಾ ಮತ್ಪೂಜನೇ ನಿತ್ಯಂ ಷಷ್ಠಂ ಸಾಧನಮೀರಿತಮ್ ॥**
**ಮಮ ಮನ್ತ್ರೋಪಾಸಕತ್ವಂ ಸಾಙ್ಗಂ ಸಪ್ತಮಮುಚ್ಯತೇ ।**
**ಮದ್ಭಕ್ತೇಷ್ವಧಿಕಾ ಪೂಜಾ ಸರ್ವಭೂತೇಷು ಮನ್ಮತಿಃ ॥**
**ಬಾಹ್ಯಾರ್ಥೇಷು ವಿರಾಗಿತ್ವಂ ಶಮಾದಿಸಹಿತಂ ತಥಾ ।**
**ಅಷ್ಟಮಂ ನವಮಂ ತತ್ತ್ವವಿಚಾರೋ ಮಮ ಭಾಮಿನಿ ॥**

ಅಧ್ಯಾ. ರಾಮಾ. ಅರಣ್ಯ. ೧೦–೨೨ರಿಂದ ೨೬

ಎಂದು ಹೇಳಿರುವ ಒಂಬತ್ತು ಸಾಧನಗಳನ್ನು ಈ ಕಾರಣದಿಂದಲೇ ಗೌಣಭಕ್ತಿಯಲ್ಲಿಯೇ ಸೇರಿಸಿಕೊಳ್ಳಬೇಕು. ಹೆಚ್ಚೇಕೆ, ಸಾಧಕನು ಏನುಮಾಡಿದರೂ ಭಗವಂತನಿಗೆ ಸಂಬಂಧಿಸಿಬಿಟ್ಟರೆ ಅದೆಲ್ಲ ಗೌಣಭಕ್ತಿಯಾಗುವದು. ಏಕೆಂದರೆ ಅದರಿಂದಲೇ ಮುಖ್ಯಭಕ್ತಿಯು ಸಿದ್ಧಿಸುವದು.

## ೧೫. ಗೌಣಭಕ್ತಿಯ ಸೌಲಭ್ಯ

### ಅನ್ಯಸ್ಮಾತ್ ಸೌಲಭ್ಯಂ ಭಕ್ತೌ ॥ ೫೮ ॥

೫೮. ಭಕ್ತಿಯಲ್ಲಿ ಮಿಕ್ಕ ಸಾಧನಕ್ಕಿಂತ ಸೌಲಭ್ಯವಿದೆ.

೧೧೨. ಹಿಂದೆ (೨೫ ಸೂ.), ಪರಭಕ್ತಿಯು ಕರ್ಮ, ಜ್ಞಾನ, ಯೋಗ- ಇವೆಲ್ಲಕ್ಕಿಂತಲೂ ಹೆಚ್ಚಿನದು, ಏಕೆಂದರೆ ಅದೇ ಅವುಗಳೆಲ್ಲದರಿಂದಲೂ ಪಡೆದುಕೊಳ್ಳಬೇಕಾದ ಫಲವಾಗಿದೆ ಎಂದು ಹೇಳಿತ್ತು. ಇಲ್ಲಿ ಗೌಣಭಕ್ತಿಯು ಕರ್ಮಜ್ಞಾನ ಯೋಗಗಳಿಗಿಂತ ಸುಲಭವಾಗಿ ಅಳವಡುವ ಸಾಧನವಾಗಿದೆ ಎಂದು ತಿಳಿಸಿದೆ.

ಕರ್ಮಮಾರ್ಗವನ್ನು ಅನುಸರಿಸುವದು ಬಹಳ ಕಷ್ಟ. ಶಾಸ್ತ್ರದಲ್ಲಿ ಹೇಳಿದಂತೆಯೇ ಕರ್ಮವನ್ನು ಮಾಡಿದರೆ ಮಾತ್ರ ಕರ್ಮದ ಫಲವು ದೊರಕುವದು; ಹಾಗಿಲ್ಲದೆ ಸ್ವೇಚ್ಛೆಯಿಂದ ಕರ್ಮವನ್ನು ಮಾಡಿದರೆ ಪ್ರತ್ಯವಾಯ(ದೋಷ)ವೇ

ಬರುತ್ತದೆ. ವೇದದಲ್ಲಿಯೂ ಧರ್ಮಶಾಸ್ತ್ರಗಳಲ್ಲಿಯೂ ಯಾವ ಸಾಧನಕ್ಕೆ ಯಾವ ಯಾವ ಅಂಗಗಳಿರಬೇಕು? ಕರ್ಮವನ್ನು ಹೇಗೆ ಮಾಡಬೇಕು?- ಎಂಬುದನ್ನು ವಿಚಾರಮಾಡಿರುತ್ತದೆ. ಕಾಮ್ಯನಿಷಿದ್ಧಕರ್ಮಗಳನ್ನು ಬಿಟ್ಟು ಕೇವಲ ನಿತ್ಯಕರ್ಮಗಳನ್ನು ಮಾಡುತ್ತಿದ್ದರೂ ಅಲ್ಪವೂ ಕ್ಷಯಿಷ್ಣುವೂ ಆದ ಸ್ವರ್ಗವು ಮಾತ್ರ ಫಲವಾಗುವದು. ಅದಕ್ಕೂ ಅಧಿಕಾರಿಗಳಾದ ದ್ವಿಜರೇ ಆಗಬೇಕು. ಬರಿಯ ಸ್ವರ್ಗಕಾಮನೆಯಿಂದ ಮಾಡಿದರೂ ಅದಕ್ಕೆ ಪರಭಕ್ತಿಯೆಂಬ ಫಲವು ದೊರಕುವದಿಲ್ಲ. ಆದ್ದರಿಂದಲೇ ಭಗವಂತನು :

**ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾ**
**ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯನ್ತೇ ।**
**ತೇ ಪುಣ್ಯಮಾಸಾದ್ಯ ಸುರೇನ್ದ್ರಲೋಕ-**
**ಮಶ್ನನ್ತಿ ದಿವ್ಯಾನ್ ದಿವಿ ದೇವಭೋಗಾನ್ ॥**
**ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ**
**ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ ।**
**ಏವಂ ತ್ರಯೀಧರ್ಮಮನುಪ್ರಪನ್ನಾ**
**ಗತಾಗತಂ ಕಾಮಕಾಮಾ ಲಭನ್ತೇ ॥** ಗೀ. ೯-೨೦, ೨೧

"ಋಗ್ಯಜುಃಸಾಮಗಳನ್ನು ಅರಿತುಕೊಂಡ ಅಧಿಕಾರಿಗಳಾದ ದ್ವಿಜರು ಸೋಮಯಾಗವನ್ನು ಮಾಡಿ ನಿಷ್ಪಾಪರಾಗಿ ಸ್ವರ್ಗವನ್ನು ಬಯಸುತ್ತಾರೆ; ಆದರೆ ಅವರು ಅಲ್ಲಿ ಪುಣ್ಯಫಲವಾಗಿ ದೇವಭೋಗಗಳನ್ನು ಅನುಭವಿಸಿದ ಬಳಿಕ ಮತ್ತೆ ಈ ಮನುಷ್ಯಲೋಕಕ್ಕೆ ಹಿಂತಿರುಗಬೇಕಾಗುತ್ತದೆ." ಹೀಗೆ ಕಷ್ಟಪಟ್ಟು ಯಜ್ಞಾದಿ ಕರ್ಮಗಳನ್ನು ಮಾಡಿದಮೇಲೂ ಅಲ್ಪವಾದ ಕ್ಷಯವಾಗುವ ಫಲವನ್ನು ಕರ್ಮಿಗಳು ಪಡೆಯುತ್ತಾರೆ- ಎಂದು ಅವರನ್ನು ನಿಂದಿಸಿ ಪರಭಕ್ತಿಗೆ ಸಾಧನವಾಗಬೇಕಾದರೆ :

**ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।**
**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥** ಗೀ. ೧೮-೪೬

ಎಂದು ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರರು ತಮ್ಮತಮ್ಮ ಅಧಿಕಾರಕ್ಕೆ ತಕ್ಕ ಕರ್ಮವನ್ನು ಮಾಡಿ ಅದನ್ನು ಪರಮೇಶ್ವರನ ಅರ್ಚನೆಯಾಗಿ ಮಾರ್ಪಡಿಸಿಕೊಂಡರೆ ಅದರಿಂದ ಚಿತ್ತಶುದ್ಧಿಯ ಮೂಲಕವಾಗಿ ಪರಭಕ್ತಿಯನ್ನು ಪಡೆಯುತ್ತಾರೆ- ಎಂದು ಹೇಳಿರುತ್ತಾನೆ. ಹೀಗೆ ಕರ್ಮಮಾರ್ಗವನ್ನು ಅನುಸರಿಸಿ ಅನುಷ್ಠಾನಮಾಡುವ **ಗೌಣಭಕ್ತಿಯು** ಬಹಳ ಕಷ್ಟಸಾಧ್ಯ; ಅದರಿಂದ ಪರಭಕ್ತಿಯು ದೊರೆತರೂ ದೀರ್ಘಕಾಲಕ್ಕೆ ದೊರೆಯಬಹುದು.

ಇನ್ನು ಜ್ಞಾನಮಾರ್ಗದಿಂದ ಅನುಷ್ಠಾನಮಾಡುವಾತನು, ನಿತ್ಯಾನಿತ್ಯವಿವೇಕ, ಇಹಾಮುತ್ರಭೋಗವಿರಾಗ, ಶಮಾದಿಸಂಪತ್ತು, ಮುಮುಕ್ಷುತ್ವ- ಎಂಬ

ನಾಲ್ಕು ಸಾಧನಗಳನ್ನು ಅಳವಡಿಸಿಕೊಳ್ಳಬೇಕು. ಭಗವದ್ಗೀತೆಯಲ್ಲಿ ಜ್ಞಾನಮಾರ್ಗವನ್ನು ಅನುಸರಿಸುವಾತನಿಗೆ :-

ಅಮಾನಿತ್ವಮದಂಭಿತ್ವಮಹಿಂಸಾ ಕ್ಷಾನ್ತಿರಾರ್ಜವಮ್ ।
ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ ॥
ಇನ್ದ್ರಿಯಾರ್ಥೇಷು ವೈರಾಗ್ಯಮನಹಂಕಾರ ಏವ ಚ ।
ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಮ್ ॥
ಅಸಕ್ತಿರನಭಿಷ್ವಙ್ಗಃ ಪುತ್ರದಾರಗೃಹಾದಿಷು ।
ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು ॥
ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।
ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ ॥
ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಮ್ ।
ಏತಜ್ಜ್ಞಾನಮಿತಿ ಪ್ರೋಕ್ತಮಜ್ಞಾನಂ ಯದತೋಽನ್ಯಥಾ ॥

ಗೀ. ೧೩-೭ರಿಂದ ೧೧

ಈ ಶ್ಲೋಕಗಳಲ್ಲಿ, ಅಮಾನಿತ್ವವೇ ಮುಂತಾದ ಸಾಧನಗಳಿದ್ದರೇ ಜ್ಞಾನಮಾರ್ಗವು ದಕ್ಕುವದೆಂದೂ ಅದಕ್ಕೆ ವಿರುದ್ಧವಾಗಿ ನಡೆದರೆ ಅಜ್ಞಾನವೇ ಗಟ್ಟಿಯಾಗುವದೆಂದೂ ಹೇಳಿರುತ್ತದೆ. ಆದ್ದರಿಂದ ಈ ಮಾರ್ಗವೂ ಎಲ್ಲರಿಗೂ ದಕ್ಕುವಂತಿಲ್ಲ. ಈ ಮಾರ್ಗದಲ್ಲಿಯೂ ಅನನ್ಯಭಕ್ತಿಯೆಂಬ ಸಾಧನವು ಬೇಕೇಬೇಕು ಎಂದು (೧೩-೧೦) ಹೇಳಿರುವದನ್ನು ಲಕ್ಷಿಸಬೇಕು.

ಈಗ **ಯೋಗಮಾರ್ಗದತ್ತ** ತೆರಳಿದರೂ ಹೀಗೆಯೇ ಯಮ, ನಿಯಮ-ಮುಂತಾದ ಎಂಟು ಅಂಗಗಳನ್ನು ಸಾಧನಮಾಡಿಕೊಂಡಮೇಲೆಯೇ ಯೋಗವು ದಕ್ಕೀತೆಂದು ಯೋಗಸೂತ್ರದಲ್ಲಿ ಹೇಳಿದೆ. ಅದಕ್ಕೂ 'ಈಶ್ವರಪ್ರಣಿಧಾನ'ವೆಂಬ ಭಕ್ತಿಯಿರಬೇಕು.

೧೧೩. ಅಂತೂ ಹೀಗೆ ಮಿಕ್ಕ ಮಾರ್ಗದಲ್ಲಿ ಬಹಳ ಕಷ್ಟಪಟ್ಟು ಅನುಷ್ಠಾನವನ್ನು ಮಾಡಿದರೂ ಭಗವದ್ಭಕ್ತಿಯನ್ನು ಮೊದಲೊ, ನಡುವೆಯೊ, ಕೊನೆಗೊ, ಅನುಸರಿಸಲೇಬೇಕಾಗುತ್ತದೆ. ಆದರೆ ಭಕ್ತಿಮಾರ್ಗವು ಹೀಗಲ್ಲ. ಭಕ್ತಿಯೆಂದರೆ ಪ್ರೇಮವು. ಪ್ರೇಮವೃತ್ತಿಯಿಲ್ಲದ ಅಂತಃಕರಣದ ಪ್ರಾಣಿಯೇ ಇಲ್ಲ. ಸಹಜವಾಗಿಯೇ ಎಲ್ಲಾ ಪ್ರಾಣಿಗಳಿಗೂ ಯಾವದಾದರೊಂದು ವಸ್ತುವಿನಲ್ಲಿ ಅಥವಾ ಯಾರಾದರೊಬ್ಬರಲ್ಲಿ ಸ್ವಾಭಾವಿಕವಾಗಿಯೇ ಪ್ರೇಮವಿರುತ್ತದೆ. ಆ ಪ್ರೇಮವನ್ನು ಭಗವಂತನ ಕಡೆಗೆ ತಿರುಗಿಸಿದರೆ ಸಾಕು, ಅದು ತನ್ನನ್ನು ತಾನೇ ಬೆಳೆಯಿಸಿಕೊಳ್ಳುತ್ತಾ ಹೋಗುವದು. ಕರ್ಮಾದಿಗಳು ಭಕ್ತಿಗೆ ಸಾಧನವಾಗಿರುವದು ನಿಮಿತ್ತಮಾತ್ರದಿಂದ; ಅವು ಇಲ್ಲದಿದ್ದರೂ ತನಗೆ ಸಹಜವಾಗಿರುವ ಪ್ರೇಮವೃತ್ತಿಯಿಂದಲೇ ಭಕ್ತಿಯನ್ನು

ಸಾಧಕನು ಸಂಪಾದಿಸಿಕೊಳ್ಳಬಹುದಾಗಿರುತ್ತದೆ. ನಿಜವಾಗಿ ಭಗವಂತನು ನಮ್ಮ ಆತ್ಮನೇ ಆಗಿರುವದರಿಂದಲೂ ಆತ್ಮವಿಷಯವಾದ ಪ್ರೇಮವು- ತನ್ನನ್ನು ತಾನು ಪ್ರೀತಿಸುವನೆಂಬುದು – ಸಹಜವಾಗಿಯೇ ಇರುವದರಿಂದಲೂ ನಮ ಆತ್ಮಪ್ರೇಮವು ಭಕ್ತಿಗೆ ತೀರ ಹತ್ತಿರವಾಗಿರುವದು. ವಿಷಯಗಳ ಮೇಲಿನ ಪ್ರೇಮವು ಕಾಮಪರವಶರನ್ನಾಗಿ ಮಾಡಿ ದನಕರುಗಳನ್ನು ಗೂಟಕ್ಕೆ ಕಟ್ಟಿಹಾಕಿದಂತೆ ನಮ್ಮನ್ನು ವಿಷಯಗಳಿಗೆ ಕಟ್ಟಿಹಾಕಿಬಿಟ್ಟಿರುತ್ತದೆ. ಆ ಗಂಟನ್ನು ಕಡಿದುಹಾಕುವದಕ್ಕೆ ಭಗವಂತನ ಕಡೆಗೆ ತಿರುಗುವದೊಂದೇ ಸರಿಯಾದ ಸಾಧನವಾಗಿರುತ್ತದೆ. ಇದಕ್ಕೆ ಕಷ್ಟಪಡಬೇಕಾದದ್ದೇನೂ ಇರುವದಿಲ್ಲ. ಲೋಕದಲ್ಲಿ ಯಾವದಾದರೂ ವಸ್ತುವಿನ ಗುಣಗಳನ್ನು ಕೇಳಿದರೆ ಕೂಡಲೆ ಅವರ ಕಡೆಗೆ ಮನಸ್ಸು ಒಲಿಯುವದು ನಮಗೆ ಸ್ವಭಾವವಾಗಿಬಿಟ್ಟಿದೆ. ಇದರಂತೆ ಪರಮಾತ್ಮನ ಗುಣಗಳನ್ನು ಶ್ರವಣಮಾಡಿದರೆ ಸಾಕು, ನಮಗೆ ಆತನ ವಿಷಯಕ್ಕೆ ಆದರವು ಹುಟ್ಟುವದು. ಹಸಿವಾದ ಮಗು ತಾಯಿಯ ಬಳಿಗೆ ಓಡಿಬರುವಂತೆ ಯಾವ ನಿಮಿತ್ತದಿಂದಲಾದರೂ ನಮಗೆ ಏನಾದರೂ ಸಂಕಟವುಂಟಾದಾಗ ಭಗವಂತನಿಗೆ ಶರಣುಹೊಗುವದಕ್ಕೆ ಯತ್ನಿಸಬೇಕು. ಮಗು ತನ್ನ ಆಟದ ಸಾಮಾನುಗಳನ್ನೆಲ್ಲ ಬಿಸುಟು ತಾಯಿಯ ಬಳಿಗೆ ಓಡಿಬಿಡುವಂತೆ, ನಾವೂ ವಿಷಯುಗಳನ್ನು ಅತ್ತತಳ್ಳಿ ಆತನ ಕಡೆಗೇ ತಿರುಗಿಬಂದರೆ- ಅದರ ಯೋಚನೆಯನ್ನು ಹತ್ತಿಸಿಕೊಂಡು ತಾಯಿ ಅದರ ಕಡೆಗೆ ತಿರುಗುವಂತೆ ಭಗವಂತನು ಅವಶ್ಯವಾಗಿ ನಮ್ಮನ್ನು ಕಷ್ಟದಿಂದ ಪಾರುಮಾಡುವನು.

> ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।
> ಅನನ್ಯೇನೈವ ಯೋಗೇನ ಮಾಂ ಧ್ಯಾಯನ್ತ ಉಪಾಸತೇ ॥
> ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
> ಭವಾಮಿ ನ ಚಿರಾತ್ ಪಾರ್ಥ ಮಯ್ಯಾವೇಶಿತಚೇತಸಾಮ್ ॥
>
> ಗೀ. ೧೨-೬, ೭

"ಯಾರು ಸರ್ವಕರ್ಮಗಳನ್ನೂ ನನಗೇ ಅರ್ಪಿಸಿ ನನ್ನನ್ನೇ ಧ್ಯಾನಮಾಡುತ್ತಾ ಉಪಾಸನೆಮಾಡುವರೋ ಅವರು ನನ್ನಲ್ಲಿಯೇ ಚಿತ್ತವನ್ನಿಟ್ಟುಕೊಂಡಿರುವದರಿಂದ ಅವರನ್ನು ಮೃತ್ಯುಯುಕ್ತವಾದ ಈ ಸಂಸಾರದಿಂದ ಉದ್ಧಾರಮಾಡುವೆನು'' ಎಂದು ಭಗವಂತನು ವಾಗ್ದಾನಮಾಡಿರುತ್ತಾನೆ. ಭಕ್ತರು–

> ಸ್ಮರನ್ತಃ ಸ್ಮಾರಯನ್ತಶ್ಚ ಮಿಥೋಽಘೌಘಹರಂ ಹರಿಮ್ ।
> ಭಕ್ತ್ಯಾ ಸಞ್ಜಾತಯಾ ಭಕ್ತ್ಯಾ ಬಿಭ್ರತ್ಯುತ್ಪುಲಕಾಂ ತನುಮ್ ॥
>
> ಭಾಗ. ೧೧-೩-೩೧

ಎಂದಂತೆ ಪಾಪರಾಶಿಯನ್ನು ಕಳೆಯುವ ಭಗವಂತನನ್ನು ತಾವೂ ಸ್ಮರಿಸಿಕೊಳ್ಳುತ್ತಾ ಮತ್ತೊಬ್ಬರಿಗೂ ನೆನಪುಕೊಡುತ್ತಾ ಭಕ್ತಿಯಿಂದಾದ ಭಕ್ತಿಯಿಂದ ರೋಮಾಂಚಿತ

ರಾಗಿರುತ್ತಾರೆ. ಭಕ್ತಿಗೆ ಭಕ್ತಿಯೇ ಸಾಧನವಾಗಿರುವದರಿಂದ ಅದರಷ್ಟು ಸುಲಭವಾದ ಸಾಧನವು ಮತ್ತೊಂದಿಲ್ಲ.

ವಿಷಯಪ್ರೇಮವನ್ನು ಕುಗ್ಗಿಸುವದಕ್ಕೆ ಭಕ್ತಿಯೇ ಸಾಕಾಗಿರುತ್ತದೆ. ಹೇಗೆಂದರೆ ಲೋಕದಲ್ಲಿ ಒಂದು ವಸ್ತುವಿನಲ್ಲಿ ಪ್ರೀತಿಯು ಹೆಚ್ಚಾಯಿತೆಂದರೆ ಅದಕ್ಕಿಂತ ಮೊದಲು ನಾವು ಪ್ರೀತಿಸುತ್ತಿದ್ದ ವಸ್ತು ನಮ್ಮನ್ನು ತನ್ನ ಕಡೆಗೆ ಸೆಳೆಯುವದು ಕಡಿಮೆಯಾಗಿಬಿಡುತ್ತದೆ. ಹೆಚ್ಚು ಗುಣಗಳಿಂದ ಕೂಡಿರುವದೆಂದು ಕಾಣುವ ವಸ್ತುವಿನ ಕಡೆಗೆ ಪ್ರೀತಿಯನ್ನು ತಿರುಗಿಸುವದು ಮನಸ್ಸಿಗೆ ಸ್ವಾಭಾವಿಕವಾದ ಧರ್ಮವಾಗಿರುವದರಿಂದ ಭಗವಂತನ ಗುಣಗಳನ್ನು ಹೇಳುತ್ತಾ ಕೇಳುತ್ತಾ ಇರುವದೇ ವಿಷಯಗಳ ಆಕರ್ಷಣೆಯನ್ನು ಕಳೆದುಕೊಳ್ಳುವದಕ್ಕೆ ಮದ್ದು.

೧೧೪. ಭಗವಂತನ ತತ್ತ್ವಜ್ಞಾನವಾದರೂ ಭಕ್ತಿಯಿಂದಲೇ ದೊರಕಬೇಕಾಗಿರುತ್ತದೆ.

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥
ತೇಷಾಮೇವಾನುಕಮ್ಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥

ಗೀ. ೧೦-೧೦, ೧೧

ಎಂದಂತೆ 'ಸಂತತವೂ ನನ್ನನ್ನು ಭಜಿಸುತ್ತಿರುವವರನ್ನು ನನ್ನ ಕಡೆಗೇ ತಿರುಗಿಸಿ ಅವರ ಅಜ್ಞಾನದ ಕತ್ತಲೆಯನ್ನು ಜ್ಞಾನದೀಪದಿಂದ ತೊಲಗಿಸುವೆನು' ಎಂದು ಭಗವಂತನೇ ಹೇಳಿರುತ್ತಾನೆ. ಈ ಗುಟ್ಟನ್ನರಿಯದೆ ತರ್ಕಪ್ರಧಾನವಾದ ವಿಚಾರದಿಂದಲೇ ಭಗವತ್ತತ್ತ್ವವನ್ನು ಅರಿತುಕೊಳ್ಳುವದಕ್ಕೆ ಹವಣಿಸುವವರು ಮೂರ್ಖರು.

ಶ್ರೇಯಃಸ್ರುತಿಂ ಭಕ್ತಿಮುದಸ್ಯ ತೇ ವಿಭೋ
ಕ್ಲಿಶ್ಯನ್ತಿ ಯೇ ಕೇವಲಬೋಧಲಬ್ಧಯೇ ।
ತೇಷಾಮಸೌ ಕ್ಲೇಶಲ ಏವ ಶಿಷ್ಯತೇ
ನಾನ್ಯದ್ ಯಥಾ ಸ್ಥೂಲತುಷಾವಘಾತಿನಾಮ್ ॥

ಭಾಗ. ೧೦-೧೪-೪

ಎಂದು ಚತುರ್ಮುಖಬ್ರಹ್ಮನು ನುಡಿದಿರುವಂತೆ ಶ್ರೇಯೋದಾಯಕವಾದ ಭಕ್ತಿಯನ್ನು ಬಿಟ್ಟು ಬರಿಯ ಜ್ಞಾನಕ್ಕೆಂದು ಯಾರು ಹವಣಿಸುತ್ತಿರುವರೋ ಅವರಿಗೆ ಬರಿಯ ಹೊಟ್ಟನ್ನು ಕುಟ್ಟುವವರಿಗೆ ಹೇಗೋ ಹಾಗೆ ಬರಿಯ ಕ್ಲೇಶವೇ ಉಳಿದುಕೊಳ್ಳುವದು. ಆದ್ದರಿಂದ ಮಿಕ್ಕ ಸಾಧನಗಳು ಇರಲಿ, ಬಿಡಲಿ- ಸರ್ವಸುಲಭವಾದ ಭಕ್ತಿಯನ್ನೇ ಅವಲಂಬಿಸಬೇಕು.

## ಪ್ರಮಾಣಾನ್ತರಸ್ಯಾ[1]ನಪೇಕ್ಷತ್ವಾತ್, ಸ್ವಯಂಪ್ರಮಾಣತ್ವಾತ್ ॥ ೫೯ ॥

೫೯. ಏಕೆಂದರೆ ಇದಕ್ಕೆ ಮತ್ತೊಂದು ಪ್ರಮಾಣದ ಅಪೇಕ್ಷೆಯಿರುವದಿಲ್ಲ ; ತನಗೆತಾನೇ ಪ್ರಮಾಣವಾಗಿರುತ್ತದೆ.

೧೧೫. ಕರ್ಮ, ಜ್ಞಾನ, ಯೋಗ- ಇವುಗಳಿಗೆ ಶಾಸ್ತ್ರಾಚಾರ್ಯರ ಪ್ರಮಾಣದ ಅಪೇಕ್ಷೆಯಿದೆ. ಈ ಕರ್ಮವು ಇಂಥ ಫಲಕ್ಕೆ ಸಾಧನವೆ, ಅಲ್ಲವೆ ? ತತ್ತ್ವವಿಚಾರದಿಂದ ಮಾಡಿಕೊಂಡ ನಿಶ್ಚಯವೇ ಕೊನೆಯ ಮಾತೆ ? ಸಾಧನವನ್ನು ಮಾಡಿದ ಬಳಿಕ ಯೋಗವು ಸಿದ್ಧಿಸುವದೆ ?- ಎಂಬ ಸಂಶಯವುಂಟಾಗಬಹುದು. ಆಗ್ಗೆ ಶಾಸ್ತ್ರಾಚಾರ್ಯರ ಯುಕ್ತಿಯೇ ಅವಕ್ಕೆ ಪ್ರಮಾಣ ; ಅವುಗಳ ವಿಷಯಕ್ಕೆ ಅನುಷ್ಠಾನದ ಕೊನೆಯಲ್ಲಿ ಕಾಲಾಂತರದಲ್ಲಿಯೇ ಫಲವನ್ನು ಕಾಣಬೇಕಾಗಿರುತ್ತದೆ. ಭಕ್ತಿಯ ವಿಷಯದಲ್ಲಿ ಹಾಗಲ್ಲ. ಭಕ್ತಿಶಾಸ್ತ್ರದ ಶ್ರವಣಮನನಗಳಿಗಿಂತಲೂ ಮೊದಲೇ ಪ್ರತಿಯೊಬ್ಬನಿಗೂ ತನ್ನತನ್ನಲ್ಲಿ ಮಿಕ್ಕೆಲ್ಲದರಲ್ಲಿರುವದಕ್ಕಿಂತಲೂ ಹೆಚ್ಚಿನ ಪ್ರೇಮವು ಸ್ವತಃಸಿದ್ಧವಾಗಿರುತ್ತದೆ. ಶ್ರುತಿಯು ಕೂಡ :

'**न वा अरे पत्युः कामाय पतिः प्रियो भवत्यात्मनस्तु कामाय पतिः प्रियो भवति ॥** ಬೃ. ೪-೫-೬

ಗಂಡ, ಹೆಂಡತಿ, ಮಕ್ಕಳು, ಪಶುಗಳು, ವಿತ್ತ ಬ್ರಹ್ಮಕ್ಷತ್ರಾದಿಜಾತಿ, ದೇವತೆಗಳು, ಪ್ರಾಣಿಗಳು- ಇವೇ ಮುಂತಾಗಿ ಯಾವಯಾವದರಲ್ಲಿ ಪ್ರೇಮವಿರುವದೋ ಆ ಪ್ರೇಮವು ತನ್ನ ಮೇಲಿನ ಪ್ರೇಮನಿಮಿತ್ತದಿಂದಲೇ ಆಗಿರುತ್ತದೆ-ಎಂದು ಲೋಕಸಿದ್ಧವಾಗಿರುವ ಆತ್ಮಪ್ರೇಮವನ್ನು ಸ್ವಯಂಪ್ರಸಿದ್ಧವೆಂದು ಇಟ್ಟುಕೊಂಡ ಮೇಲೆಯೇ ಈ ಆತ್ಮನ ಪರಮಾರ್ಥಸ್ವರೂಪವೇ, ಪರಮಾತ್ಮನು ಎಂದು ತಿಳಿಸಿ ಈ ಕಾರಣದಿಂದಲೇ ಪರಮಾತ್ಮತತ್ತ್ವವನ್ನು ಶ್ರವಣಮನನಾದಿಗಳಿಂದ ಅರಿತುಕೊಳ್ಳಬೇಕು- ಎಂದು ಬೋಧಿಸುತ್ತಿದೆ. ಪರಮಾತ್ಮನ ಸ್ವರೂಪವನ್ನು ಅರಿತುಕೊಳ್ಳುವ ಮುಂಚೆಯೇ ನಮಗೆಲ್ಲರಿಗೂ ಆತನಲ್ಲಿ ಪ್ರೇಮವುಂಟಾಗಿರುತ್ತದೆ. ಆ ಪ್ರೇಮಕ್ಕೆ ಆಸ್ಪದವಾಗಿರುವ ವಸ್ತು ನಿಜವಾಗಿ ಯಾವದೆಂಬುದನ್ನು ಮಾತ್ರ ನಾವು ವಿಚಾರ ಮಾಡಬೇಕಾಗಿರುತ್ತದೆ. ಆದರೆ ನಮ್ಮ ಆತ್ಮನಲ್ಲಿ ನಮಗೆ ಪ್ರೇಮವಿದೆಯೊ, ಇಲ್ಲವೊ ?- ಎಂದು ವಿಚಾರಮಾಡಿ ನಿಶ್ಚಯಿಸಿಕೊಳ್ಳಬೇಕಾದದ್ದೇನೂ ಇಲ್ಲ.

---

1. ಈ ಸೂತ್ರದಲ್ಲಿ 'ಪ್ರಮಾಣಾನ್ತರಾನಪೇಕ್ಷತ್ವಾತ್' ಎಂಬ ಪಾಠವಿರಬೇಕಾಗಿತ್ತೆ ? ಲೇಖಕರ ಪ್ರಮಾದದಿಂದ ಹೀಗೆ ವ್ಯಸ್ತಪದಗಳು ಬಿದ್ದಿವೆಯೆ ?- ಎಂಬುದನ್ನು ವಿದ್ವಾಂಸರು ಪರಿಶೀಲಿಸಬೇಕು.

ಏಕೆಂದರೆ ಆತ್ಮಪ್ರೇಮವು ಸ್ವಯಂಸಿದ್ಧವಾಗಿರುತ್ತದೆ. ಆದ್ದರಿಂದಲೂ ಭಕ್ತಿಯು ಜ್ಞಾನಾದಿಗಳಿಗಿಂತಲೂ ಸುಲಭಸಾಧನವಾಗಿರುತ್ತದೆ ಎಂದಾಯಿತು.

## ಶಾನ್ತಿರೂಪಾತ್ ಪರಮಾನನ್ದರೂಪಾಚ್ಚ ॥ ೬೦ ॥

೬೦. ಶಾಂತಿರೂಪವಾಗಿರುವದರಿಂದಲೂ ಪರಮಾನಂದರೂಪವಾಗಿರುವದರಿಂದಲೂ (ಇದರಲ್ಲಿ ಹೆಚ್ಚಿನ ಸೌಲಭ್ಯವಿದೆ).

೧೧೬. ಭಕ್ತಿಯು ಹೆಚ್ಚು ಸುಲಭಸಾಧ್ಯವಾಗಿರುವದಕ್ಕೆ ಇನ್ನೊಂದು ಕಾರಣವಿದೆ. ಕರ್ಮವಾಗಲಿ, ಜ್ಞಾನಾರ್ಥವಿಚಾರವಾಗಲಿ ಯೋಗಸಿದ್ಧ್ಯರ್ಥವಾಗಿ ಮಾಡುವ ಯಮನಿಯಮಾದಿಗಳಾಗಲಿ ಸಾಧನವೆಂಬುದೆಲ್ಲವೂ ಆಯಾಸಸಾಧ್ಯವಾಗಿರುವದರಿಂದ ಅನುಷ್ಠಾನಮಾಡುವದಕ್ಕೆ ಬೇಸರವಾಗಿ ಅವುಗಳನ್ನು ಸಾಧಕನು ಕೈಬಿಡಬಹುದೆಂಬ ಅಪಾಯವಿದೆ. ಅವುಗಳನ್ನು ಅನುಷ್ಠಾನಮಾಡುವವನು ಕಾಯಕ್ಲೇಶಾದಿಗಳನ್ನು ಲೆಕ್ಕಿಸದೆ ಸ್ಥಿರಪ್ರಯತ್ನವನ್ನು ಮಾಡುವದು ಅತ್ಯವಶ್ಯ.

ಆದರೆ ಭಕ್ತಿಯ ವಿಷಯವು ಹಾಗಿಲ್ಲ. ಏಕೆಂದರೆ ಪ್ರೇಮವು ಸಹಜವಾಗಿಯೇ ಪ್ರಾಣಿಗಳಲ್ಲಿ ಎದ್ದುಕೊಂಡಿರುವದರಿಂದ ಅದಕ್ಕಾಗಿ ಸಂಭ್ರಮವೇನೂ ಬೇಕಿರುವದಿಲ್ಲ. ಪ್ರೇಮವು ಎಲ್ಲರನ್ನೂ ಒಂದುಮಾಡಿಕೊಳ್ಳುತ್ತದೆ; ಆದ್ದರಿಂದ ಇದಕ್ಕೆ ಯಾವ ಅಡಚಣೆಯೂ ಆಗುವಂತಿಲ್ಲ ಭಕ್ತನಾದವನಿಗೆ ಭಗವಂತನಲ್ಲದೆ ಮತ್ತೇನೂ ಬೇಕಾಗಿರುವದೇ ಇಲ್ಲ. ವಾಸನಾಬಲದಿಂದ ಯಾವದಾದರೂ ವಿಷಯಗಳ ನೆನಪುಂಟಾದರೂ ಯಾವ ವಸ್ತುವಿನ ಭೋಗವನ್ನು ಮಾಡಬೇಕಾಗಿಬಂದರೂ ಅದರಲ್ಲೆಲ್ಲ ಭಗವಂತನ ಸಂಬಂಧವನ್ನೇ ಕಾಣುತ್ತಿರುವನು. ಪರಭಕ್ತನಾದವನಂತೂ:

> ಆಪೂರ್ಯಮಾಣಮಚಲಪ್ರತಿಷ್ಠಂ
> ಸಮುದ್ರಮಾಪಃ ಪ್ರವಿಶನ್ತಿ ಯದ್ವತ್ ।
> ತದ್ವತ್ ಕಾಮಾ ಯಂ ಪ್ರವಿಶನ್ತಿ ಸರ್ವೇ
> ಸ ಶಾನ್ತಿಮಾಪ್ನೋತಿ ನ ಕಾಮಕಾಮೀ ॥ ಗೀ. ೨-೭೦

ಎಂದು ಭಗವಂತನು ಹೇಳಿರುವಂತೆ ನಿತ್ಯನಿರಂತರವಾಗಿ ಭಗವಂತನ ಚಿಂತನೆಯಲ್ಲಿಯೇ ಮುಳುಗಿ ಭಗವನ್ಮಯನಾಗಿರುತ್ತಾನೆ. ಅವನು ಯಾವ ವಿಷಯಗಳನ್ನು ಭೋಗಿಸಿದರೂ ರಾಗದ್ವೇಷಾದಿಗಳಿಲ್ಲದೆ ಅವುಗಳನ್ನು ಉಪಭೋಗಿಸುತ್ತಿರುವದರಿಂದ ಎಷ್ಟೋ ನದಿಗಳು ಬೇರೆಬೇರೆಯ ಕಡೆಗಳಿಂದ ಬಂದು ಧುಮುಕುತ್ತಿದ್ದರೂ ಸಮುದ್ರವು ತನ್ನೊಳಕ್ಕೇ ಅವನ್ನು ಸೇರಿಸಿಕೊಂಡು ಎಲ್ಲವನ್ನೂ ಸಮುದ್ರವಾಗಿಯೇ ಮಾಡಿಕೊಂಡು ಮೇರೆದಪ್ಪದೆ ಇರುವಂತೆ, ಭೋಗವಸ್ತುಗಳ ಸಂಬಂಧದಿಂದ ಅವನಲ್ಲಿ ಯಾವ ಕ್ಷೋಭೆಯೂ ಉಂಟಾಗದೆ ಸಮಚಿತ್ತದಲ್ಲಿಯೇ ಇದ್ದುಕೊಂಡಿರು

ವದರಿಂದ ಅವನ ಮನಃಸ್ಥಿತಿಯು ಶಾಂತವಾಗಿರುತ್ತದೆ. ಆನಂದಸ್ವರೂಪನಾದ ಭಗವಂತನೇ ಅವನ ಆತ್ಮನಾಗಿರುವದರಿಂದ ಅವನ ಮನೋವೃತ್ತಿಯು ಆನಂದಮಯವಾಗಿಯೂ ಇರುತ್ತದೆ.

ಗೌಣಭಕ್ತನೂ ಪರಭಕ್ತನ ಗುರಿಯನ್ನೇ ಇಟ್ಟು ಭಗವತ್ಕಥಾಶ್ರವಣಗುಣ ಚಿಂತನವೇ ಮುಂತಾದ ಕಾರ್ಯಗಳಲ್ಲಿಯೇ ನಿರತನಾಗಿರುವದರಿಂದ ಅವನ ಮನೋವೃತ್ತಿಯೂ ಶಾಂತಿರೂಪವಾಗಿಯೂ ಆನಂದರೂಪವಾಗಿಯೂ ಇರುತ್ತದೆ ಮಿಕ್ಕ ಸಾಧನಗಳು ಕ್ಲೇಶದಾಯಕವಾಗಿದ್ದು ಸಾಧಕನಿಗೆ ಅಳವಟ್ಟಹಾಗೆಲ್ಲ ಅವು ಶಾಂತಿಯನ್ನೂ ಸುಖವನ್ನೂ ಕೊಡುತ್ತವೆ. ಭಕ್ತಿಯು ಹಾಗಲ್ಲ. ಮೊದಲು, ನಡುವೆ, ಕೊನೆ– ಈ ಮೂರು ಹಂತಗಳಲ್ಲಿಯೂ ಅದು ಶಾಂತಿರೂಪವಾಗಿಯೂ ಆನಂದರೂಪವಾಗಿಯೂ ಇರುತ್ತದೆ. ಆದ್ದರಿಂದ ಭಕ್ತಿಯ ಸ್ವರೂಪದ ಜ್ಞಾನವು ಅತ್ಯಂತ ಸುಲಭವಾಗಿರುತ್ತದೆ; ಆದ್ದರಿಂದ ಅನುಭವಗಮ್ಯಪ್ರೇಮರೂಪವಾಗಿರುವ ಭಕ್ತಿಯ ಅನುಷ್ಠಾನವು ಮಿಕ್ಕ ಸಾಧನಗಳ ಅನುಷ್ಠಾನಕ್ಕಿಂತ ಸುಲಭವಾಗಿರುತ್ತದೆ ಎಂಬುದು ಸುಸ್ಪಷ್ಟ.

## ೧೬. ಸಾಧಕನು ನಡೆದುಕೊಳ್ಳಬೇಕಾದ ರೀತಿ

ಲೋಕಹಾನೌ ಚಿನ್ತಾ ನ ಕಾರ್ಯಾ ನಿವೇದಿತಾತ್ಮಲೋಕ
ವೇದತ್ವಾತ್ ॥ ೬೧ ॥

೬೧. ಲೋಕವು ಹಾಳಾದರೆ ಚಿಂತೆಮಾಡತಕ್ಕದ್ದಲ್ಲ. ಏಕೆಂದರೆ ತನ್ನನ್ನೂ ಲೋಕವನ್ನೂ ವೇದವನ್ನೂ ಅರ್ಪಣೆಮಾಡಿದ್ದಾಗಿದೆ.

೧೧೬. ಭಕ್ತನಾದವನು ಲೋಕದಲ್ಲಿ ತನ್ನ ಯೋಗಕ್ಷೇಮಗಳು ಕೆಟ್ಟು ಹೋಗುವವೆಂದು ಚಿಂತಿಸಬಾರದು. 'ಭಗವಚ್ಚಿಂತನೆಯೆಂದರೇನು ? ಇದೊಂದು ಬಗೆಯ ಹಗಲುಕನವರಿಕೆ. ಯಾವನೊಬ್ಬನೂ ಸುಮ್ಮನೆ ಕೂತಿರಬಾರದು. ಎಲ್ಲರೂ ಏನಾದರೂ ಕೆಲಸವನ್ನು ಮಾಡುತ್ತಲೇ ಇರಬೇಕು' ಎಂದು ಲೋಕ ವ್ಯವಹಾರಪ್ರಿಯರು ಹೇಳುವರು. 'ಲೋಕದಲ್ಲಿದ್ದುಕೊಂಡು ಅದಕ್ಕೆ ಅಂಟದೆ ಇರಬೇಕು; ಇಷ್ಟೇ ಹೊರತು ಭಕ್ತಿಯ ನೆಪದಿಂದ ಸೋಮಾರಿಗಳಾಗಿರುವದು ಸಮಾಜಕ್ಕೂ ದೇಶಕ್ಕೂ ದ್ರೋಹವೆನಿಸಿದಂತೆ' ಎಂದು ಕೆಲವರು ದೇಶಾಭಿಮಾನಿ ವೇಷಧಾರಿಗಳು ಕೂಗಾಡುತ್ತಿರುವದು ಈ ಕಾಲದಲ್ಲಂತೂ ಬಹಳ ಹೆಚ್ಚಾಗಿರುತ್ತದೆ. ಆದರೆ ವಸ್ತುಸ್ಥಿತಿಯೇನು? ನಿಜವಾಗಿ ಯಾವದು ಕಷ್ಟ? ಏನನ್ನೂ ಮಾಡದೆ ಸುಮ್ಮನೆ ಕುಳಿತಿರುವದು ಕಷ್ಟವೊ, ಕೆಲಸದಲ್ಲಿ ತೊಡಗುವದು ಕಷ್ಟವೊ ?

**ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।**
**ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥ ಗೀ. ೩-೫**

ಎಂಬ ಭಗವದುಕ್ತಿಯಂತೆ ಸಾಮಾನ್ಯಜನರಿಗೆ ಸುಮ್ಮನೆ ಕುಳಿತಿರುವದಕ್ಕೆ ಆಗುವದೇ ಇಲ್ಲ ; ಪ್ರಕೃತಿಯಿಂದೆದ್ದುಕೊಳ್ಳುವ ಸತ್ತ್ವರಜಸ್ತಮೋಗುಣಗಳು ಜನರಿಗೆ ಬೇಕಿಲ್ಲದೆ ಇದ್ದರೂ ಏನಾದರೊಂದು ಕೆಲಸದಲ್ಲಿ ತೊಡಗುವಂತೆ ಮಾಡುತ್ತಲೇ ಇರುವಂತೆ ಒತ್ತಾಯ ಮಾಡುತ್ತಿರುವವು. ಒಂದೂರಿನಲ್ಲಿ ಒಂದು ದೇವಾಲಯ ವಿತ್ತು. ಅಲ್ಲಿ ಬೇರೆಬೇರೆಯ ವೃತ್ತಿಗಳಿಗೆ ತಕ್ಕಂತೆ ವರಮಾನವು ಸಲ್ಲುತ್ತಿತ್ತು. ಒಬ್ಬ ಬ್ರಾಹ್ಮಣನಿಗೆ ಮಹಾತಪಸ್ವಿ ಎಂಬ ಕಾರಣದಿಂದ ದಿನಕ್ಕೆ ಒಂದುಸೇರು ಅಕ್ಕಿಯನ್ನು ಕೊಡುತ್ತಿದ್ದರು. ಆತನು ಪ್ರತಿದಿನವೂ ದೇವಾಲಯಕ್ಕೆ ಬಂದು ಕುಳಿತಬಳಿಯಿಂದ ಸ್ವಲ್ಪವೂ ಕದಲದೆ ಭಗವದ್ಧ್ಯಾನವನ್ನು ಮಾಡುತ್ತಿದ್ದನು. ತಪಸ್ವಿಗಳಿಗೂ ಬ್ರಹ್ಮಚಾರಿಗಳಿಗೂ ಸಿದ್ಧಾನ್ನದಲ್ಲಿ ಹಕ್ಕು ಉಂಟೆಂಬ ಶಾಸ್ತ್ರೋಕ್ತವಿಧಿಯನ್ನು ಮನ್ನಿಸಿ ಸರ್ವಾಧಿಕಾರಿಯು ಆ ಬ್ರಾಹ್ಮಣನನ್ನು ಗೌರವದಿಂದ ಕಾಣುತ್ತಿದ್ದನು. ಹೀಗೆ ಕೆಲವು ವರ್ಷಗಳು ಕಳೆದಮೇಲೆ ದೇವಸ್ಥಾನಕ್ಕೆ ಹೊಸ ಸರ್ವಾಧಿಕಾರಿಯನ್ನು ನಿಯಮಿಸಲಾಯಿತು. ಆತನು ದೇವಾಲಯದ ಆಯವ್ಯಯದ ಲೆಕ್ಕವನ್ನು ಶೋಧಿಸಿ 'ಸುಮ್ಮನೆ ಕೂತಿರುವವನಿಗೇಕೆ ಅಕ್ಕಿ ?' ಎಂದು ಆಕ್ಷೇಪಿಸಿ ಬ್ರಾಹ್ಮಣನಿಗೆ ಸಲ್ಲುತ್ತಿದ್ದ ಪಡಿಯನ್ನು ನಿಲ್ಲಿಸಿಬಿಟ್ಟನು. ಇದನ್ನು ಕೇಳಿದ ಬ್ರಾಹ್ಮಣನು ಸರ್ವಾಧಿಕಾರಿಯ ಬಳಿಗೆ ಬಂದು 'ಸ್ವಾಮಿ, ನನಗೆ ಬಹುಕಾಲದಿಂದ ಸಲ್ಲುತ್ತಿರುವ ಪಡಿಯನ್ನು ತಾವು ನಿಲ್ಲಿಸುವಂತೆ ಅಪ್ಪಣೆಮಾಡಿರುವದಾಗಿ ಕೇಳುತ್ತೇನೆ ; ಇದೇಕೆ? ಎಂದು ಕೇಳಿದನು. ಸರ್ವಾಧಿಕಾರಿಯು 'ಸುಮ್ಮನೆ ಕೂತಿರುವದಕ್ಕೇಕೆ ಅಕ್ಕಿಯನ್ನು ಕೊಡಬೇಕು ? ಅದನ್ನು ಯಾರುಬೇಕಾದರೂ ಮಾಡಬಹುದು. ನೀನೂ ಉಳಿದವರಂತೆ ಯಾವದಾದರೂ ಕೆಲಸವನ್ನು ಮಾಡುವದಕ್ಕೆ ಒಪ್ಪಿದರೆ ನಿನ್ನ ಜೀವನಕ್ಕೆ ಅಡ್ಡಿಯಿಲ್ಲದಂತೆ ಮಾಡುವೆನು' ಎಂದನು. ಆಗ ಬ್ರಾಹ್ಮಣನು 'ನನ್ನ ವೃತ್ತಿಯು ಎಲ್ಲರಿಗೂ ಅಷ್ಟು ಸುಲಭಸಾಧ್ಯವಲ್ಲ. ಯಾರಾದರೂ ಒಂದು ಕಾಲುಘಂಟೆ, ಸುಮ್ಮನೆ ಕುಳಿತುಕೊಂಡರೆ ಸಂತೋಷದಿಂದ ಈ ಅಕ್ಕಿಯ ಸಲಿಕೆಯನ್ನು ಬಿಟ್ಟುಬಿಡುತ್ತೇನೆ. ದಯವಿಟ್ಟು ಇಷ್ಟನ್ನಾದರೂ ಪರಿಶೀಲಿಸಿ ನೋಡಿ ಆ ಬಳಿಕ ಪಡಿಕೊಡುವದನ್ನು ನಿಲ್ಲಿಸೋಣಾಗಲಿ !' ಎಂದನು. ಸರ್ವಾಧಿಕಾರಿಯು ನಗುತ್ತಾ 'ಅವಶ್ಯವಾಗಿ ಆಗಲಿ ! ನಾನೇ ನಿನ್ನೆದುರಿಗೆ ಸುಮ್ಮನೆ ಕುಳಿತುಕೊಂಡು ನಿದರ್ಶನವನ್ನು ಮಾಡಿ ಕೊಡುವೆನು' ಎಂದನು. ಮಾರನೆಯದಿನ ದೇವಾಲಯದ ವೃತ್ತಿಯ ಬ್ರಾಹ್ಮಣರು ನೆರೆದಿರುವಾಗಲೇ ಸರ್ವಾಧಿಕಾರಿಯು ದೇವಾಲಯಕ್ಕೆ ಬಂದು ಆ ಬ್ರಾಹ್ಮಣನನ್ನು ಕರೆದು 'ನೀನೇ ನೋಡುತಿರು. ಕಾಲುಘಂಟೆಯೇಕೆ, ಅರ್ಧಘಂಟೆಯಕಾಲ ಸುಮ್ಮನೆ ಕುಳಿತಿದ್ದು ನಿನಗೆ ತೋರಿಸುತ್ತೇನೆ' ಎಂದು ಒಂದುಕಡೆ ಆಸನವನ್ನು ಹಾಕಿ

ಕೊಂಡು ಕುಳಿತನು. ಹತ್ತುನಿಮಿಷಗಳು ಆಗುವಹೊತ್ತಿಗೆ ಬ್ರಾಹ್ಮಣನು 'ನೋಡಿದಿರಾ ಸ್ವಾಮಿ ಸುಮ್ಮನೆ ಕುಳಿತುಕೊಳ್ಳುವನು ಎಷ್ಟುಕಷ್ಟವೆಂಬುದನ್ನ ? ತಾವು ಹತ್ತುನಿಮಿಷಗಳಾಗ ವದರೊಳಗೆ ಹಳ್ಳಿಯ ವಿಚಾರವನ್ನೂ ದೇವಾಲಯದ ಹಣಕಾಸುಗಳ ವಿಚಾರವನ್ನೂ ಮನಸ್ಸಿನಲ್ಲಿ ಹೊರಳಾಡಿಸುತ್ತಲೇ ಇದ್ದಿರಲ್ಲ !' ಎಂದನು. ಆಗ ಅಧಿಕಾರಿಯು ತನ್ನ ಸ್ಥಿತಿಯನ್ನ ಇದ್ದದ್ದು ಇದ್ದಂತೆ ಹೇಳಿದ ಬ್ರಾಹ್ಮಣನ ಮಹಿಮೆಯನ್ನು ಮನಗಂಡು ತಾನು ಮಾಡಿದ ಅಪಚಾರಕ್ಕೆ ಕ್ಷಮಾ ಪ್ರಾರ್ಥನೆಯನ್ನುಮಾಡಿ ಬ್ರಾಹ್ಮಣನ ವೃತ್ತಿಯನ್ನು ಖಾಯಂಮಾಡುವಂತೆ ಕೂಡಲೆ ಅಪ್ಪಣೆಮಾಡಿದನಂತೆ !

ಹೀಗೆ ಪರಭಕ್ತರಾದವರು ಭಗವಂತನ ಚಿಂತನೆಯಲ್ಲಿಯೇ ತಮ್ಮ ಜೀವಿತ ವನ್ನೆಲ್ಲ ಕಳೆಯುತ್ತಿರುವರು.

**ಅನನ್ಯಾಶ್ಚಿನ್ತಯನ್ತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥**
ಗೀ. ೯-೨೨

'ಅನನ್ಯಚಿಂತನೆಯಿಂದ ಭಗವನ್ಮಯರಾ ನಿತ್ಯನಿರಂತರವೂ ನನ್ನನ್ನೇ ಚಿಂತಿಸು ತ್ತಿರುವ ಭಕ್ತರ ಯೋಗಕ್ಷೇಮವನ್ನು ನಾನೇ ವಹಿಸುವೆನು' ಎಂದು ಭಗವಂತನು ವಾಗ್ದಾನಮಾಡಿರುತ್ತಾನೆ. ಇದನ್ನರಿ ಗೌಣಭಕ್ತನೂ- ನಮ್ಮ ಯೋಗಕ್ಷೇಮ ವನ್ನು ನಾವೇ ನೋಡಿಕೊಳ್ಳುತ್ತಿರುವೆವೆಂಬ ಹಮ್ಮಿನಿಂದ ಪ್ರಕೃತಿವಶರಾಗಿ ದುಡಿಯು ತ್ತಿರುವ ಪ್ರಾಕೃತರನ್ನನುಕರಿಸದೆ- ತನ್ನನ್ನೂ ತನ್ನ ಸಮಸ್ತಲೌಕಿಕವ್ಯಾಪಾರಗಳನ್ನೂ ಭಗವಂತನಿಗೆ ಅರ್ಪಣೆಮಾಡಿ ಎಂದೆಂದಿಗೂ ತನ್ನ ಯೋಗಕ್ಷೇಮದ ಚಿಂತೆಯನ್ನು ಹತ್ತಿಸಿಕೊಳ್ಳದೆ ಇರಬೇಕು. ಆದ್ದರಿಂದಲೇ ಭಗವಂತನು ಪರಭಕ್ತರು ತನ್ನನ್ನೇ ಉಪಾಸನೆಮಾಡುತ್ತಿರುವಂತೆ ನೀನೂ ಮಾಡು-ಎಂದು ಅರ್ಜುನನಿಗೆ ಹೇಳುವಾಗ-

**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।**
**ಯತ್ತಪಸ್ಯಸಿ ಕೌನ್ತೇಯ ತತ್ಕುರುಷ್ವ ಮದರ್ಪಣಮ್ ॥** ಗೀ. ೯-೨೭

"ನೀನು ಯಾವಯಾವ ಲೌಕಿಕಕಾರ್ಯಗಳನ್ನು ಮಾಡುತ್ತಿರುವೆಯೋ, ಯಾವ ಯಾವ ಕರ್ಮಫಲಗಳನ್ನು ಅನುಭವಿಸುತ್ತಿರುವೆಯೋ ಯಜ್ಞದಾನತಪಸ್ಸುಗಳೇ ಮುಂತಾದ ಯಾವಯಾವ ವೈದಿಕಕರ್ಮಗಳನ್ನು ಮಾಡುವೆಯೋ- ಅವೆಲ್ಲವನ್ನೂ ನನಗೆ ಅರ್ಪಿಸಿಬಿಡು. ಈ ಸಮರ್ಪಣಯೋಗದಿಂದ ನೀನು ಪಾಪಪುಣ್ಯಗಳ ಅಂಟಿಲ್ಲದೆ ನನ್ನನ್ನೇ ಸೇರುವೆ" ಎಂದು ಉಪದೇಶಿಸಿರುತ್ತಾನೆ.

೧೧೪. ಈ ಸೂತ್ರದಲ್ಲಿರುವ 'ಲೋಕಹಾನೌ' ಎಂಬ ಭಾಗಕ್ಕೆ ಕೆಲವರು 'ಭಕ್ತನಾದವನು ಲೋಕದ ಜನರ ಯೋಗಕ್ಷೇಮವನ್ನು ನೋಡಿಕೊಳ್ಳುವದಕ್ಕೆಂದು ತವಕಪಡುತ್ತಿರಬಹುದಾದರೂ ಲೋಕದಲ್ಲಿರುವವರ ಕಷ್ಟಸುಖಗಳ ಚಿಂತೆಯನ್ನು ಹತ್ತಿಸಿಕೊಳ್ಳುವದಿಲ್ಲ; ಏಕೆಂದರೆ ಭಗವಂತನೇ ಲೋಕದ ಸೃಷ್ಟಿಸ್ಥಿತಿಲಯಗಳಿಗೆ

ಕರ್ತನಾಗಿರುತ್ತಾನೆಂಬುದನ್ನೂ ಭಕ್ತರಿಗೂ ಈ ಕಾರ್ಯದಲ್ಲಿ ಭಾಗಿಗಳಾಗಿ ತನ್ನ ಸೇವೆಯನ್ನು ಮಾಡುವದಕ್ಕೆ ಅವಕಾಶವನ್ನು ಕಲ್ಪಿಸುತ್ತಾನೆಂಬುದನ್ನೂ ಅವನು ಬಲ್ಲನು'- ಎಂಬರ್ಥವನ್ನು ಕಲ್ಪಿಸಿರುತ್ತಾರೆ. ಇದು ಸರಿಯಲ್ಲ ; 'ಲೋಕಹಾನಿಯ ವಿಷಯಕ್ಕೆ ಚಿಂತೆಯನ್ನು ಮಾಡಬಾರದು' ಎಂಬ ಸೂತ್ರಾರ್ಥದ ಅಭಿಪ್ರಾಯಕ್ಕೆ ವಿರುದ್ಧವೂ ಆಗಿರುತ್ತದೆ. ಇದಲ್ಲದೆ ಇದು ಗೌಣಭಕ್ತಿಯ ಪ್ರಕರಣವೇ ಹೊರತು ಪರಭಕ್ತನ ಪ್ರಕರಣವೂ ಅಲ್ಲ. ಆದ್ದರಿಂದ ಇಲ್ಲಿ ನಾವು ವಿವರಿಸಿರುವಂತೆ ಗೌಣ ಭಕ್ತನ ವ್ಯವಹಾರದ ರೀತಿಯನ್ನು ವಿವರಿಸುವದಕ್ಕೆ ಸೂತ್ರವು ಬಂದಿದೆಯೆಂದು ಕಲ್ಪಿಸುವದೇ ಯುಕ್ತ.

ನ ತದಸಿದ್ಧೌ ಲೋಕವ್ಯವಹಾರೋ ಹೇಯಃ ; ಕಿಂ ತು ಫಲತ್ಯಾಗಸ್ತತ್ಸಾಧನಂ ಚ ಕಾರ್ಯಮೇವ ॥ ೬೨ ॥

೬೨. ಅದು ಸಿದ್ಧಿಯಾಗದೆ ಇರುವಾಗ ಲೋಕದ ವ್ಯವಹಾರವನ್ನು ಬಿಡಬಾರದು ; ಮತ್ತೇನೆಂದರೆ ಫಲತ್ಯಾಗವನ್ನೂ ಅದಕ್ಕೆ ಬೇಕಾದ ಸಾಧನಗಳನ್ನೂ ಮಾಡುತ್ತಲೇ ಇರಬೇಕು.

೧೧೯. ಗೌಣಭಕ್ತಿಯಾದರೂ ಕಾಲಕ್ರಮದಲ್ಲಿ ಭಗವಂತನ ಕೃಪೆಯಿಂದಲೂ ಸತ್ಸಂಗದ ಮಹಿಮೆಯಿಂದಲೂ ಲಭಿಸಬೇಕಾಗಿರುತ್ತದೆ. ಆದರೆ ಅದು ಇನ್ನೂ ಸಿದ್ಧವಾಗದೆ ಇರುವಾಗ ಲೋಕವ್ಯವಹಾರವನ್ನು -ಎಂದರೆ ತನ್ನ ವರ್ಣಾಶ್ರಮಗಳಿಗೆ ವಿಹಿತವಾಗಿರುವ ಕರ್ಮಗಳನ್ನು ಮಾಡುವದನ್ನು ಅನುಸರಿಸುವದನ್ನೂ ಸಮಾಜದಲ್ಲಿ ನಡೆದುಕೊಳ್ಳಬೇಕಾದ ನೀತಿಯನ್ನೂ ಎಂದಿಗೂ ಬಿಡಬಾರದು. ಹಾಗೆ ಶಾಸ್ತ್ರದಲ್ಲಿ ಶ್ರದ್ಧೆಯಿಲ್ಲದೆ ನೀತಿಯ ನಿಯಮಗಳನ್ನು ಲೆಕ್ಕಿಸದೆ ಇರುವವನು ಆಸುರಸಂಪತ್ತಿನವನಾಗುವನು.

ಭಕ್ತಿಯು ಮನಸ್ಸಿನಲ್ಲಿ ಮೊಳೆತುಕೊಳ್ಳುವವರೆಗೂ ಗುರುಹಿರಿಯರಲ್ಲಿ ಶ್ರದ್ಧೆ, ಸತ್ಯ ಶೌಚ, ಆಚಾರ- ಇವುಗಳನ್ನು ಎಚ್ಚರಿಕೆಯಿಂದ ಪಾಲಿಸುತ್ತಿರಬೇಕು. ಆಹಾರವಿಹಾರಗಳಲ್ಲಿ ವ್ಯವಸ್ಥೆಯನ್ನು ಮೀರದೆ ಅನುಸರಿಸುತ್ತಿರಬೇಕು. ಶಾಸ್ತ್ರೋಕ್ತಕರ್ಮಗಳನ್ನು ಸಂಗಫಲತ್ಯಾಗಪೂರ್ವಕವಾಗಿ ಮಾಡುತ್ತಿರಬೇಕು ; ಭಕ್ತಿಯು ಅಂಕುರಿಸುವದಕ್ಕೆ ಅವಶ್ಯವಾದ ಸಾಧನಗಳನ್ನು ತಪ್ಪದೆ ಮಾಡುತ್ತಿರಬೇಕು. ಹೀಗೆ ಸನ್ಮಾರ್ಗದಲ್ಲಿರುವವನಿಗೆ ಇಹಪರಸುಖಗಳು ಯಾವ ಅಡ್ಡಿಯೂ ಇಲ್ಲದೆ ಲಭಿಸುವವು. ಹಾಗಿಲ್ಲದೆ ಶಾಸ್ತ್ರದಲ್ಲಿಯೂ ಗುರುಹಿರಿಯರ ವಚನದಲ್ಲಿಯೂ ಶ್ರದ್ಧೆಯಿಲ್ಲದವನಾಗಿ ತನಗೆ ತಿಳಿದಂತೆ ಯಾವ ಕರ್ಮವನ್ನು ಎಷ್ಟೇ ಮಾಡಲಿ, ಅದರಿಂದ ಇಹಗತಿಯೂ ಇಲ್ಲದೆ, ಪರಗತಿಯೂ ಇಲ್ಲದೆ ಹೋಗುವದು. ಸ್ವೇಚ್ಛಾಚಾರವು ಆಸುರಸಂಪತ್ತನ್ನು ಬೆಳೆಯಿಸಿ ಅಧೋಗತಿಗೆ ಕಾರಣವಾಗುವದು.

## ಸ್ತ್ರೀಧನನಾಸ್ತಿಕಚರಿತ್ರಂ ನ ಶ್ರವಣೀಯಮ್ ॥ ೬೩ ॥

೬೩. ಹೆಂಗಸರ, ಧನದ, ಮತ್ತು ನಾಸ್ತಿಕರ ಸುದ್ದಿಯನ್ನು ಶ್ರವಣಮಾಡಬಾರದು.

೧೨೦. ಭಕ್ತಿಯ ಸಾಧನಗಳನ್ನು ಮಾಡುತ್ತಾ ಲೋಕನೀತಿಯನ್ನೂ ಶಾಸ್ತ್ರ ನಿಯಮವನ್ನೂ ಮೀರದೆ ನಡೆದುಕೊಳ್ಳುತ್ತಿರಬೇಕೆಂದು ಹೇಳಿದ್ದಾಯಿತು. ಭಕ್ತಿಯು ತಲೆದೋರುವದಕ್ಕೆ ಅಡ್ಡಿಯಾಗಿರುವ ಕಾರ್ಯಗಳನ್ನಂತೂ ಪೂರ ಬಿಟ್ಟುಬಿಡಬೇಕು. ಸ್ತ್ರೀಸಂಗದಿಂದಾಗುವ ದೋಷಗಳನ್ನು ಶಾಸ್ತ್ರದಲ್ಲಿ ಬಗೆಬಗೆಯಾಗಿ ವಿವರಿಸಿ ಹೇಳಿರುತ್ತದೆ. ಸಾಧಕನಾದವನು ಸ್ತ್ರೀಯರ ಸಹವಾಸಕ್ಕೆ ಹೋಗಬಾರದೆನ್ನುವದು ಹಾಗಿರಲಿ, ಅವರ ಸಂಬಂಧದ ಸುದ್ದಿಯನ್ನು ಕೂಡ ಕೇಳಬಾರದು. ಕೆಟ್ಟವರ ಸಹವಾಸದಿಂದ ಸತ್ಯ, ಶೌಚ, ದಯೆ, ಮೌನ, ಬುದ್ಧಿ, ಧನಸಂಪತ್ತು, ಲಜ್ಜೆ, ಕೀರ್ತಿ– ಮುಂತಾದವುಗಳೆಲ್ಲವೂ ಕ್ಷಯವಾಗುವವೆಂದು ಹೇಳಿದಬಳಿಕ ಸರ್ವಜ್ಞರಾದ **ಕಪಿಲರು :**

**ತೇಷ್ವಶಾನ್ತೇಷು ಮೂಢೇಷು ಖಣ್ಡಿತಾತ್ಮಸ್ವಸಾಧುಷು ।**
**ಸಙ್ಗಂ ನ ಕುರ್ಯಾಚ್ಛೋಚ್ಯೇಷು ಯೋಷಿತ್ಕ್ರೀಡಾಮೃಗೇಷು ಚ॥**
**ನ ತಥಾಽಸ್ಯ ಭವೇನ್ಮೋಹೋ ಬನ್ಧಶ್ಚಾನ್ಯಪ್ರಸಙ್ಗತಃ ।**
**ಯೋಷಿತ್ಸಙ್ಗಾದ್ಯಥಾ ಪುಂಸೋ ಯಥಾ ತತ್ಸಙ್ಗಿಸಙ್ಗತಃ ॥**

ಭಾಗ. ೩–೩೧, ೩೪, ೩೫

“ಅಂಥ ಅಶಾಂತರೂ ಮೂಢರೂ ಅಂತಃಕರಣವನ್ನು ಕೆಡಿಸಿಕೊಂಡವರೂ ಅಸತ್ಪುರುಷರೂ ಆದವರಲ್ಲಿಯೂ ಮತ್ತು ಸ್ತ್ರೀಯರ ಆಟದ ಮೃಗಗಳಾಗಿರುವವರಲ್ಲಿಯೂ ಸಂಗವನ್ನು ಮಾಡಬಾರದು. ಸ್ತ್ರೀಯರ ಸಂಗದಲ್ಲಿಯೂ ಸ್ತ್ರೀಯರ ಸಂಗವನ್ನಿಟ್ಟುಕೊಂಡಿರುವವರಲ್ಲಿಯೂ ಮಾಡುವ ಸಂಗಕ್ಕಿಂತ ಮತ್ತೆ ಯಾವ ಸಂಗವೂ ಅಷ್ಟು ಮೋಹವನ್ನುಂಟುಮಾಡುವದಿಲ್ಲ” ಎಂದು ಹೇಳಿರುತ್ತಾನೆ.

**ಮನುವು ಕೂಡ** “ಮನುಷ್ಯನು ತಿಳಿಯದವನಾಗಿರಲಿ ತಿಳಿದವನೇ ಆಗಿರಲಿ, ಕಾಮಕ್ರೋಧವಶನಾದವನನ್ನು ಸ್ತ್ರೀಸನ್ನಿಧಿಯು ಉನ್ಮಾರ್ಗಕ್ಕೆ ಎಳೆಯುವದು” ಎಂದು ಹೇಳಿ ಅನಂತರ :

**ಮಾತ್ರಾ ಸ್ವಸ್ರಾ ದುಹಿತ್ರಾ ವಾ ನ ವಿವಿಕ್ತಾಸನೋ ಭವೇತ್ ।**
**ಬಲವಾನಿನ್ದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ ॥**

ಮನು. ೨–೨೧೫

"ಗೃಹಸ್ಥನಾದವನು ತಾಯಿ, ಸಹೋದರಿ, ಮಗಳು-ಯಾರೇ ಆಗಿರಲಿ, ಸ್ತ್ರೀಯೊಡನೆ ಏಕಾಂತಸ್ಥಲದಲ್ಲಿ ಕುಳ್ಳಿ ಬಾರ ಇಂದ್ರಿಯಸಮೂಹವು ಪ್ರಬಲವಾಗಿರುವದರಿಂದ ಎಂಥ ವಿವೇಕಿಯನ್ನೂ ಸೆಳೆದುಬಿಟ್ಟೀತು !'' ಎಂದಿರುತ್ತಾನೆ.

ಸ್ತ್ರೀಯರ ಸಹವಾಸವನ್ನೂ ಸ್ತ್ರೀಸಂಗಿಗಳ ಸಹವಾಸವನ್ನು ಬಿಟ್ಟರೂ ಅಷ್ಟರಿಂದಲೇ ತೃಪ್ತನಾಗಬಾರದು. ಚಿತ್ತಾಕರ್ಷಕವಾದ ಸ್ತ್ರೀಯರ ಚಿತ್ರವನ್ನು ನೋಡುವ ಹವ್ಯಾಸವನ್ನಿಟ್ಟುಕೊಳ್ಳಬಾರದು ; ಸ್ತ್ರೀಯರ ಸಂಬಂಧವಾದ ಮಾತುಗಳನ್ನುಕೂಡ ಶ್ರವಣಮಾಡದೆ ಇರಬೇಕು.

ಇದರಂತೆ ಹಣದ ವಿಚಾರವನ್ನೂ ತಿಳಿಯಬೇಕು.

**ಪ್ರಾಯೇಣಾರ್ಥಾಃ ಕದರ್ಯಾಣಾಂ ನ ಸುಖಾಯ ಕದಾಚನ |**
**ಇಹ ಚಾತ್ಮೋಪತಾಪಾಯ ಮೃತಸ್ಯ ನರಕಾಯ ಚ ||**
**ಯಶೋ ಯಶಸ್ವಿನಾಂ ಶುದ್ಧಂ ಶ್ಲಾಘ್ಯಾ ಯೇ ಗುಣಿನಾಂ ಗುಣಾಃ |**
**ಲೋಭಃ ಸ್ವಲ್ಪೋಽಪಿ ತಾನ್ ಹನ್ತಿ ಶ್ವಿತ್ರೋ ರೂಪಮಿವೇಪ್ಸಿತಮ್ ||**

ಭಾಗ. ೧೧-೨೩-೧೫, ೧೬

ಅರ್ಥವೆಂಬುದು ಲೋಭಿಗಳಾದವರಿಗೆ ಯಾವ ಸುಖವನ್ನೂ ಉಂಟುಮಾಡುವದಿಲ್ಲ. ಇಲ್ಲಿ ಇರುವವರೆಗೆ ಅವನನ್ನು ಪರಿತಾಪಗೊಳಿಸುತ್ತಿರುವದು. ಸತ್ತಬಳಿಕ ನರಕಕ್ಕೆ ಈಡುಮಾಡುವದು. ಕೀರ್ತಿವಂತರ ಕೀರ್ತಿ, ಗುಣವಂತರ ಗುಣಗಳು- ಇವನ್ನೆಲ್ಲ ಲೋಭವು ಒಂದಿಷ್ಟಿದ್ದರೂ - ಬಿಳಿತೊನ್ನು ರೂಪವನ್ನು ಹಾಳುಮಾಡುವಂತೆ-ನಾಶಗೊಳಿಸುತ್ತಿರುವದು.

**ಅರ್ಥಸ್ಯ ಸಾಧನೇ ಸಿದ್ಧೇ ಉತ್ಕರ್ಷೇ ರಕ್ಷಣೇ ವ್ಯಯೇ |**
**ನಾಶೋಪಭೋಗ ಆಯಾಸಸ್ತ್ರಾಸಶ್ಚಿನ್ತಾ ಭ್ರಮೋ ನೃಣಾಮ್ ||**
**ಸ್ತೇಯಂ ಹಿಂಸಾಽನೃತಂ ದಮ್ಭಃ ಕಾಮಃ ಕ್ರೋಧಃ ಸ್ಮಯೋ ಮದಃ |**
**ಭೇದೋ ವೈರಮವಿಶ್ವಾಸಃ ಸಂಸ್ಪರ್ಧಾ ವ್ಯಸನಾನಿ ಚ ||**
**ಏತೇ ಪಞ್ಚದಶಾನರ್ಥಾ ಹ್ಯರ್ಥಮೂಲಾ ಮತಾ ನೃಣಾಮ್ |**
**ತಸ್ಮಾದನರ್ಥಮರ್ಥಾಖ್ಯಂ ಶ್ರೇಯೋಽರ್ಥೀ ದೂರತಸ್ತ್ಯಜೇತ್ ||**

ಭಾಗ. ೧೧-೨೩-೧೭, ೧೮, ೧೯

ಮನುಷ್ಯರಿಗೆ ಅರ್ಥವನ್ನು ಸಂಪಾದಿಸುವದರಲ್ಲಿ, ದೊರೆತರೆ ಅದನ್ನು ಇನ್ನೂ ಬೆಳೆಯಿಸಿಕೊಳ್ಳುವದರಲ್ಲಿ, ಅದನ್ನು ವೆಚ್ಚಮಾಡುವಲ್ಲಿ, ಮತ್ತು ಅದು ನಾಶವಾದಾಗ, ಭೋಗಿಸುವಾಗ, ಆಯಾಸ, ಚಿಂತೆ, ಭ್ರಮೆ- ಇವುಗಳಾಗುತ್ತಿರುವವು. ಕಳವು, ಹಿಂಸೆ, ಸುಳ್ಳು, ಜಂಭ, ಕಾಮ, ಕ್ರೋಧ, ಗರ್ವ, ಮದ, ಭೇದಬುದ್ಧಿ, ವೈರ

ಅವಿಶ್ವಾಸ, ಪೈಪೋಟಿ, ಹವ್ಯಾಸ- **ಈ ಹದಿನೈದು[1] ದೋಷಗಳು ಅರ್ಥದ ನಿಮಿತ್ತದಿಂದೆ** (ಜನರಿಗೆ) ಆಗುತ್ತಿರುವವು.

ಆದ್ದರಿಂದ ಧನದ ವಿಚಾರದ ಕಥೆಗಳನ್ನು ಕೂಡ ಕೇಳಬಾರದು. ಸ್ತ್ರೀಸಂಗಿಸಂಗದಂತೆಯೇ ಧನಸಂಗಕ್ಕಿಂತಲೂ **ಧನಸಂಗಿಗಳ ಸಂಗವು** ಇನ್ನೂ ಕೆಟ್ಟದ್ದು. ಆದ್ದರಿಂದ ಹಣವಂತರ ಚರಿತ್ರೆಯನ್ನು ಸಾಧಕನು ಕೇಳುತ್ತಿರಬಾರದು.

**ನಾಸ್ತಿಕರೆಂದರೆ** ಈಶ್ವರನ ಅಸ್ತಿತ್ವದಲ್ಲಿಯೂ ಶಾಸ್ತ್ರದ ಪ್ರಾಮಾಣ್ಯದ ವಿಷಯದಲ್ಲಿಯೂ ಅಶ್ರದ್ಧಾವಂತರು -ಎಂದರ್ಥ. ಅಂಥವರ ಸಹವಾಸವನ್ನು ಮಾಡಬಾರದು ; ಅವರ ಸಂಬಂಧದ ಕಥೆಗಳನ್ನೂ ಕೇಳಬಾರದು.

ಈ ಮೂರು ಶ್ರವಣಗಳ ದೋಷವು ತಟ್ಟದಂತೆ ಮಾಡುವದಕ್ಕೆ **ಭಗವತ್ಕಥಾ** ಶ್ರವಣವನ್ನು ಮಾಡುತ್ತಿರುವದೇ ಮದ್ದು. ಸತ್ಸಂಗದಿಂದ ಭಗವಂತನ ಕಥಾದಿ ಶ್ರವಣವು ದೊರೆತು ಸರ್ವಸಂಗಗಳ ದೋಷವೂ ಪರಿಹೃತವಾಗುವದೆಂದು ಹಿಂದೆಯೇ (ಸೂ. ೧೭) ಹೇಳಿದ್ದಾಗಿದೆ.

## ಅಭಿಮಾನದಮ್ಭಾದಿಕಂ ತ್ಯಾಜ್ಯಮ್ ॥ ೬೪ ॥

೬೪. ಅಭಿಮಾನ, ದಂಭ- ಮುಂತಾದದ್ದನ್ನು ಬಿಟ್ಟುಬಿಡಬೇಕು.

೧೨೧. ಇಲ್ಲಿ ಹೇಳಿರುವ ಅಭಿಮಾನಾದಿಗಳು ಯಾವದೆಂಬುದನ್ನು ನಿಶ್ಚಿತವಾಗಿ ಹೇಳುವದು ಕಷ್ಟ. ಭಕ್ತಿಗೆ ಅಡ್ಡಿಯಾಗಿರುವ ಅಸುರಸಂಪತ್ತಿನ ಧರ್ಮಗಳು ಎಂದು ಸಾಮಾನ್ಯವಾಗಿ ಅರ್ಥವನ್ನು ಮಾಡಿಕೊಂಡರೆ

**ದಮ್ಭೋ ದರ್ಪೋಽಭಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ ।**
**ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್॥** ಗೀ. ೧೬-೪

ಎಂಬ ಶ್ಲೋಕದಲ್ಲಿ ಹೇಳಿರುವ ದಂಭ, ದರ್ಪ, ಅಭಿಮಾನ, ಕ್ರೋಧ, ಪರುಷವಾಕ್ಯ, ಅಜ್ಞಾನ- ಎಂಬ ದೋಷಗಳನ್ನು ಬಿಡಬೇಕೆಂದು ಸೂತ್ರಕ್ಕೆ ಅರ್ಥವನ್ನು ಮಾಡಬಹುದು. ಆಗ ಈ ಶ್ಲೋಕವನ್ನು ಗೀತೆಯ ಹದಿನಾರನೆಯ ಅಧ್ಯಾಯದಲ್ಲಿ ವರ್ಣಿಸಿರುವ ಆಸುರಸಂಪತ್ತುಗಳಿಗೆಲ್ಲ ಉಪಲಕ್ಷಣವೆಂದು ಹಿಡಿಯಬಹುದಾಗುವದು. ಈ ದೋಷಗಳನ್ನು ಬಿಟ್ಟು ಇವಕ್ಕೆ ಪ್ರತಿಪಕ್ಷವಾಗಿರುವ :

---

1. ಇಲ್ಲಿ ಪಂಚದಶ (೧೫) ಎಂಬ ಸಂಖ್ಯೆ ಹೇಗೆ ಎಂಬುದು ತಿಳಿಯುವಂತಿಲ್ಲ ; ಇದು ಕೃಷ್ಣಾಚಾರ್ಯರಿಂದ ಮದ್ರಾಸಿನಲ್ಲಿ ಸಂಪಾದಿತವಾದ ಪುಸ್ತಕದ ಪಾಠ. 'ಏತೇ ತ್ರಯೋದಶಾನರ್ಥಾಃ'- ಎಂಬ ಪಾಠಭೇದವೂ ಇದೆ. ಕೊನೆಯ ಎರಡು ಶ್ಲೋಕಗಳನ್ನೇ ಇಟ್ಟುಕೊಂಡರೆ ಸ್ತೇಯದಿಂದ ಹಿಡಿದು ಲೆಕ್ಕಮಾಡಿದಾಗ ಹದಿಮೂರು ದೋಷಗಳೇನೋ ಆಗುತ್ತವೆ.

ಅಭಯಂ ಸತ್ತ್ವಸಂಶುದ್ಧಿಃ ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ॥
ಅಹಿಂಸಾ ಸತ್ಯಮಕ್ರೋಧಸ್ತ್ಯಾಗಃ ಶಾನ್ತಿರಪೈಶುನಮ್ ।
ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್ ॥
ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ ।
ಭವನ್ತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥

ಗೀ. ೧೬-೧, ೨, ೩

ಈ ಶ್ಲೋಕಗಳಲ್ಲಿ ವಿವರಿಸಿರುವಂಥ ದೈವಸಂಪತ್ತಿನ ಗುಣಗಳನ್ನು ಸಾಧನಮಾಡುತ್ತಾ ಆಸುರಸಂಪತ್ತಿನ ಸ್ವಭಾವವನ್ನು ತ್ಯಜಿಸುವದಕ್ಕೆ ಪ್ರಯತ್ನಿಸಬೇಕು- ಎಂದು ಅಭಿಪ್ರಾಯ.

ಅಥವಾ 'ಅಭಿಮಾನದಂಭಾದಿಕಂ' ಎಂಬುದಕ್ಕೆ ಭಗವದ್ಗೀತೆಯ ಹದಿಮೂರನೆಯ ಅಧ್ಯಾಯದಲ್ಲಿ ಹೇಳಿರುವ 'ಅಮಾನಿತ್ವಮದಂಭಿತ್ವಮ್' (೧೩-೭) ಎಂಬಲ್ಲಿಂದ 'ತತ್ತ್ವಜ್ಞಾನಾರ್ಥದರ್ಶನಮ್' -ಎಂಬವರೆಗಿನ ಜ್ಞಾನಸಾಧನಗಳಿಗೆ ವಿರುದ್ಧವಾದ ಮಾನಿತ್ವ, ದಂಭಿತ್ವ-ಮುಂತಾದವುಗಳೇ 'ಅಭಿಮಾನಾದಿಕಮ್' ಎಂಬುದರ ಅರ್ಥವೆಂದಾದರೂ ತಿಳಿಯಬಹುದು. ಆಪಸ್ತಂಬರು ತಮ್ಮ ಧರ್ಮಸೂತ್ರದಲ್ಲಿ ಪರಿಗಣಿಸಿರುವ

ಕ್ರೋಧೋ ಹರ್ಷೋ ರೋಷೋ ಲೋಭೋ ಮೋಹೋ ದಮ್ಭೋ ದ್ರೋಹೋ ಮೃಷೋದ್ಯಮತ್ಯಾಶಪರೀವಾದಾಸೂಯಾಕಾಮಮನ್ಯೂ ಅನಾತ್ಮ್ಯಮಯೋಗ ಸ್ತೇಷಾಂ ಯೋಗಮೂಲೋ ನಿರ್ಘಾತಃ ॥

ಆ.ಧ.ಸೂ. ೧-೨೩-೫

ಎಂದು ಬರೆದಿರುವ (ಸಿಟ್ಟು, ಹಿಗ್ಗುವದು, ರೋಷ, ಜಿಪುಣತನ, ತಪ್ಪುತಿಳಿವಳಿಕೆ, ಡಂಭ, ದ್ರೋಹ. ಸುಳ್ಳು, ಹೊಟ್ಟೆಬಾಕತನ, ಚಾಡಿ, ಹೊಟ್ಟೆಕಿಚ್ಚು, ಕಾಮ, ಬಹುಸಿಟ್ಟು, ವಿಷಯಲೋಲುಪತನ- ಎಂಬ) ಭೂತದಾಹೀಯದೋಷಗಳನ್ನೂ ಇಲ್ಲಿ ಸೇರಿಸಿಕೊಳ್ಳುವದಕ್ಕೆ ಬರುತ್ತದೆ. ಹೇಗೇ ಆಗಲಿ, ತಾಮಸರಾಜಸಗುಣಗಳ ಕಾರ್ಯವಾದ ಚಿತ್ತಧರ್ಮಗಳನ್ನು ಬಿಡಬೇಕು- ಎಂಬುದು ಸೂತ್ರದ ಅಭಿಪ್ರಾಯ.

ತದರ್ಪಿತಾಖಿಲಾಚಾರಃ ಸನ್
ಕಾಮಕ್ರೋಧಾಭಿಮಾನಾದಿಕಂ ತಸ್ಮಿನ್ನೇವ ಕರಣೀಯಮ್ ॥

೬೫. ತನ್ನ ಆಚಾರವನ್ನೆಲ್ಲ ಆತನಿಗೇ ಅರ್ಪಿಸಿ ಕಾಮಕ್ರೋಧಾಭಿಮಾನಾದಿಗಳನ್ನು ಆತನಲ್ಲಿಯೇ ಮಾಡಬೇಕು.

೧೨. ಈವರೆಗೆ ಹೇಳಿರುವಂತೆ ದುಷ್ಟವೃತ್ತಿಗಳನ್ನು ಬಿಡುವದೂ ಸದ್ಗುಣಗಳನ್ನು ಕೈಕೊಳ್ಳುವದೂ ಅಷ್ಟು ಸುಲಭಸಾಧ್ಯವಲ್ಲ, 'ಹೆಣ್ಣುಕೊಟ್ಟರೆ, ಹುಚ್ಚು ಬಿಡುವದು, ಹುಚ್ಚುಬಿಟ್ಟರೆ ಹೆಣ್ಣುಕೊಡುವರು' ಎಂಬಂತೆ ದುಷ್ಟವರ್ತನೆಯನ್ನು ಬಿಡುವದೂ ಸದ್ವರ್ತನೆಯನ್ನು ಆಚರಣೆಗೆ ತರುವದೂ ಒಂದನ್ನೊಂದು ಆಶ್ರಯಿಸಿಕೊಂಡಿರುತ್ತವೆ. ಹೀಗಿರುವದರಿಂದ ಭಕ್ತ್ಯಾಚಾರ್ಯರು ಈ ವಿಷಯಕ್ಕೆ ಒಂದು ಉಪಾಯವನ್ನು ಕಲ್ಪಿಸಿರುತ್ತಾರೆ. ಕಾಮಕ್ರೋಧಾದಿಗಳನ್ನು ಬಿಡುವದು ಕಷ್ಟವೆಂಬುದು ನಿಜವಾದರೂ ಅವನ್ನು ಆ ಪರಮಾತ್ಮನ ವಿಷಯಕ್ಕೇ ಮಾಡುತ್ತಾ ಹೋದರೆ ಆ ದೋಷಗಳು ತಮಗೆತಾವೇ ಹೋಗಿಬಿಡುವವು. ಗೋಪಿಯರು ಶ್ರೀಕೃಷ್ಣನ ಬಳಿಗೆ ಅವನು ಜಾರನೆಂಬ ಬುದ್ಧಿಯಿಂದ ಬಂದಿದ್ದರೂ ಅವರು ಗುಣತ್ರಯದಿಂದ ಮುಕ್ತರಾದದ್ದು ಹೇಗೆ? ಎಂದು ಪರೀಕ್ಷಿತನು ಕೇಳಿದ್ದಕ್ಕೆ **ಶುಕರು:**

**ಉಕ್ತಂ ಪುರಸ್ತಾದೇತತ್ತೇ ಚೈದ್ಯಃ ಸಿದ್ಧಿಂ ಯಥಾ ಗತಃ ।**
**ದ್ವಿಷನ್ನಪಿ ಹೃಷೀಕೇಶಂ ಕಿಮುತಾಧೋಕ್ಷಜಪ್ರಿಯಾಃ ॥**
**ನೃಣಾಂ ನಿಃಶ್ರೇಯಸಾರ್ಥಾಯ ವ್ಯಕ್ತಿರ್ಭಗವತೋ ನೃಪ ।**
**ಅವ್ಯಯಸ್ಯಾಪ್ರಮೇಯಸ್ಯ ನಿರ್ಗುಣಸ್ಯ ಗುಣಾತ್ಮನಃ ॥**
**ಕಾಮಂ ಕ್ರೋಧಂ ಭಯಂ ಸ್ನೇಹಮೈಕ್ಯಂ ಸೌಹೃದಮೇವ ಚ ।**
**ನಿತ್ಯಂ ಹರೌ ವಿದಧತೋ ಯಾನ್ತಿ ತನ್ಮಯತಾಂ ಹಿ ತೇ ॥**

ಭಾಗ. ೧೦-೨೯-೧೩, ೧೪, ೧೫

"ಎಲೈ ರಾಜನೆ, ಶಿಶುಪಾಲನು ಭಗವಂತನಲ್ಲಿ ದ್ವೇಷಭಾವನೆಯಿಂದಲೇ ಕೂಡಿದ್ದರೂ ಹೇಗೆ ಪುರುಷಾರ್ಥವನ್ನು ಪಡೆದುಕೊಂಡನೆಂಬುದನ್ನು ಆಗಲೆ ಹೇಳಿರುತ್ತೇನಷ್ಟೆ? ಹೀಗಿರುವಲ್ಲಿ ಭಗವಂತನಲ್ಲಿ ಪ್ರೇಮವನ್ನು ಮಾಡಿದವರಿಗೆ ಸಿದ್ಧಿಯಾದದ್ದರಲ್ಲಿ ಆಶ್ಚರ್ಯವೇನು? ಭಗವಂತನು ಅವ್ಯಯನೂ ಅಪ್ರಮೇಯನೂ ಗುಣಾತ್ಮನೂ ಆಗಿದ್ದರೂ ಮನುಷ್ಯರಿಗೆ ನಿಃಶ್ರೇಯಸವಾಗಲೆಂದೇ ಅವತರಿಸಿದ್ದನು. ಶ್ರೀಹರಿಯಲ್ಲಿ ಕಾಮ, ಕ್ರೋಧ, ಭಯ, ಸ್ನೇಹ, ಮತ್ತು ಸದ್ಭಾವ- ಇವನ್ನು ನಿತ್ಯವೂ ಮಾಡುತ್ತಿರುವವನಿಗೆ ಆ ಕಾಮಾದಿಗಳೆಲ್ಲವೂ ಭಗವನ್ಮಯವೇ ಆಗಿಬಿಡುತ್ತವೆ" ಎಂದು ಉತ್ತರವಿತ್ತಿರುತ್ತಾರೆ.

ಭಗವಂತನ ದಿವ್ಯಸುಂದರವಾದ ರೂಪವನ್ನು ನೋಡಬೇಕೆಂಬ ಹಂಬಲಿಕೆಯೂ ಆಸೆಯೇ ಆದರೂ, ಅದು ಕಾಮರೂಪವನ್ನು ಬಿಟ್ಟು ಭಗವನ್ಮಯವಾಗಿಬಿಡುತ್ತದೆ. ಭಗವಂತ, ನೀನು ದಯಾಮಯನೆಂಬುದೇ ನಿಜವಾಗಿದ್ದರೆ ನನ್ನ ವಿಷಯದಲ್ಲೇಕೆ ಒಲಿಯದೆ ಇರುವೆ?' ಎಂದು ಭಗವಂತನಮೇಲೆ ಸಿಟ್ಟುಮಾಡಿದರೆ ಆ ಸಿಟ್ಟಿನಲ್ಲಿರುವ ಸಿಟ್ಟಿನ ದೋಷವು ಮಾಯವಾಗಿಬಿಡುವದು. 'ನಾನು ಭಗವಂತನ ದಾಸ

ನಾಗಿರುತ್ತೇನೆ. ಹೀಗಿರುವಲ್ಲಿ ನಾನೇಕೆ ಪರದೇಶಿಯಾದೇನು ?' ಎಂದು ಮಾಡಿಕೊಳ್ಳುವ ಹೆಮ್ಮೆಯಲ್ಲಿ ಹೆಮ್ಮೆಯ ದೋಷವು ಉಳಿಯಲಾರದು. 'ನಾನು ಮಹಾ ಪಾತಕಿಯು, ಸರ್ವಗತನಾದ ಭಗವಂತನು ಯಾವಯಾವ ವೇಷದಿಂದ ನನ್ನ ಬಳಿಗೆ ಬಂದು ದಂಡಿಸುವನೋ' ಎಂಬ ಅಂಜಿಕೆಯಿಂದ ನಡುಗುತ್ತಿರುವವರಿಗೆ ಎಲ್ಲೆಲ್ಲಿಯೂ ಭಗವಂತನೇ ಇರುತ್ತಾನೆಂಬ ಭಾವನೆಯು ಬಲಿತು ಅಂಜಿಕೆಯೇ ಅಂಜಿಕೊಳ್ಳುವದು. 'ಭಗವಂತನು ಎಲ್ಲರಿಗೂ ಸ್ನೇಹಿತನು, ಸ್ನೇಹಿತನಾದ ನನ್ನಲ್ಲಿರುವ ದೋಷಗಳನ್ನು ಅವನು ಹೇಗೆತಾನೆ ಎತ್ತಿ ಎಣಿಸಿಯಾನು ?' ಎಂಬ ಭಾವನೆಯು ಬಲಿತುಕೊಂಡರೆ ಆ ಸ್ನೇಹಭಾವವೇ ಭಗವಂತನ ಸಾಮೀಪ್ಯವನ್ನು ಕೊಡುವದಕ್ಕೆ ಕಾರಣವಾಗಿಬಿಡುವದು. 'ಭಗವಂತನಲ್ಲಿ ನನ್ನ ಅಂತರಂಗರಹಸ್ಯವನ್ನು ಹೇಳಿಕೊಳ್ಳುವದರಲ್ಲಿ ನಾಚಿಕೆಯೇನು ? ಆತನು ಏನೆಂದುಕೊಂಡರೂ ಚಿಂತೆಯಿಲ್ಲ, ಆತನನ್ನೇ ಶರಣುಹೊಗುವೆನು' ಎಂಬ ಮಿತ್ರಭಾವದಿಂದ ಚಿತ್ತದಲ್ಲಿ ಭಕ್ತಿಯ ಆವೇಶವಾಗಿ ದೋಷಗಳೆಲ್ಲ ಮಾಯವಾಗುವವು. ಆದ್ದರಿಂದ ನಮ್ಮ ಕಾಮಕ್ರೋಧಾದಿಗಳನ್ನು ಮನುಷ್ಯರಲ್ಲಿ ಮಾಡುವದಕ್ಕಿಂತ ಭಗವಂತನ ವಿಷಯಕ್ಕೇ ಮಾಡಿದರೆ ಅವುಗಳು ನಮಗೆ ಯಾವ ತೊಂದರೆಯನ್ನೂ ಕೊಡಲಾರದೆ ಸಾತ್ತ್ವಿಕಭಾವಗಳ ಉದಯಕ್ಕೆ ಕಾರಣವಾಗಿ ಕೊನೆಗೆ ಇವೆಲ್ಲ ಭಗವದ್ಭಕ್ತಿಯೇ ಆಗಿಬಿಡುವವು.

ತ್ರಿರೂಪಭಙ್ಗಪೂರ್ವಕಂ ನಿತ್ಯದಾಸ್ಯನಿತ್ಯಕಾನ್ತಾ-
ಭಜನಾತ್ಮಕಂ ಪ್ರೇಮ ಕಾರ್ಯಂ ಪ್ರೇಮೈವ ಕಾರ್ಯಮ್॥

೬೬. ಮೂರು ರೂಪಗಳನ್ನೂ ನಾಶಮಾಡಿಕೊಂಡು ನಿತ್ಯದಾಸ್ಯ ನಿತ್ಯಕಾಂತಾಭಜನಾತ್ಮಕವಾದ ಪ್ರೇಮವನ್ನು ಮಾಡುತ್ತಿರಬೇಕು ಪ್ರೇಮವನ್ನೇ ಮಾಡುತ್ತಿರಬೇಕು.

## ತ್ರಿರೂಪಭಂಗವೆಂದರೇನು ?

೧೨೩. ಲೌಕಿಕರ ಭಕ್ತಿಯು ಈ ಮೂರರಲ್ಲಿ ಯಾವದಾದರೊಂದು ರೂಪವನ್ನು ತಳೆದುಕೊಂಡಿರುತ್ತದೆ. ಮೊದಲನೆಯದು ಭಯಭಕ್ತಿ. ದೇವರೆಂದರೆ ಯಾವದೋ ಭಯಂಕರವಾದ ರೂಪವನ್ನು ಧರಿಸಿರುತ್ತಾನೆಂದೂ ಆತನನ್ನು ಒಲಿಸಿಕೊಳ್ಳದೆ ಇದ್ದರೆ ತಮಗೆ ಏನಾದರೂ ತೊಂದರೆಯಾಗಬಹುದೆಂದೂ ಅಂಜಿಕೊಂಡು ಮಾರಿ, ಮಸಣಿ–ಮುಂತಾದ ದೇವತೆಗಳನ್ನು ಪೂಜಿಸುವದು, ತಮ್ಮನ್ನೂ ತಮ್ಮ ಮಕ್ಕಳನ್ನೂ ಯಾವ ಅಪಾಯವೂ ಇಲ್ಲದಂತೆ ಕ್ಷೇಮದಿಂದ ಇಂಸಲಿ ಎಂದು ಹರಕೆಹೊತ್ತು ನನಗೆ ಯಾವ ತೊಂದರೆಯೂ ಆಗದೆ ಇದ್ದರೆ ಇಂಥ ಉತ್ಸವಕಾಲದಲ್ಲಿ ನಿನಗೆ ಯಾವದಾದರೊಂದು ಕುರಿ, ಕೋಳಿ, ಕೋಣ– ಮುಂತಾದ ಪ್ರಾಣಿಯನ್ನು

ಬಲಿಕೊಡುವೆನು'– ಎಂದು ಬೇಡಿಕೊಳ್ಳುವರು. ಈ ಭಯಭಕ್ತಿಯು 'ಭಕ್ತಿ' ಎಂಬ ಹೆಸರಿಗೆ ಸರ್ವಥಾ ತಕ್ಕದ್ದಲ್ಲ. ಏಕೆಂದರೆ ಭಕ್ತಿಯೆಂದರೆ ಪ್ರೇಮವು, ಪ್ರೇಮವಿದ್ದಲ್ಲಿ ಅಂಜಿಕೆಗೆ ಸ್ಥಲವೆಲ್ಲಿರುತ್ತದೆ ? ಭಗವಂತನು ಹಿರಣ್ಯಕಶಿಪುವನ್ನು ದಂಡಿಸುವದಕ್ಕೆಂದು ಕಂಬದಿಂದ ನರಸಿಂಹರೂಪದಿಂದ ತೋರಿಕೊಂಡಾಗ ದೇವತೆಗಳುಕೂಡ ಅಂಜಿಕೊಂಡರು. ಬ್ರಹ್ಮರುದ್ರಾದಿಗಳ ಮಾತಂತಿರಲಿ, ಸಾಕ್ಷಾಲ್ಲಕ್ಷ್ಮೀದೇವಿಯುಕೂಡ ಆ ಉಗ್ರರೂಪನಾಗಿದ್ದ ಭಗವಂತನ ಬಳಿಗೆ ಹೋಗಲು ಅಂಜಿದಳು. ಆಗ ಬ್ರಹ್ಮದೇವನ ಆದೇಶದಂತೆ ಪ್ರಹ್ಲಾದನು ಆ ದೇವದೇವನ ಬಳಿಗೆ ಬಂದು ನಮಸ್ಕರಿಸಿದಮಾತ್ರದಿಂದ ಪ್ರಸನ್ನನಾಗಿ ಅವನನ್ನು ಪ್ರೇಮದಿಂದ ಹಿಡಿದೆತ್ತಿ ಮೈದಡವಿದನಂತೆ ! ಹೀಗಿರುತ್ತದೆ, ಪರಮಪ್ರೇಮರೂಪವಾದ ಭಕ್ತಿಯ ಮಹಿಮೆ !

ಲೌಕಿಕಭಕ್ತಿಗೆ **ಕಾಮವೆಂಬುದು ಎರಡನೆಯ ರೂಪ.** ಕೆಲವರು ಜನರು ಯಾವದಕ್ಕೂ ಅಂಜದೆ ಇದ್ದರೂ ದೇವರ ಸೇವೆಯಿಂದ ತಮ್ಮ ಇಷ್ಟಾರ್ಥಗಳು ಕೈಗೂಡುವವೆಂದು ಬಗೆದು ಬಗೆಬಗೆಯ ಉಪಚಾರಗಳಿಂದ ಭಗವಂತನನ್ನು ಆರಾಧಿಸುತ್ತಾರೆ. ಅವರಿಗೆ ದೇವರೆಂದರೆ ಸಕಲೇಷ್ಟಾರ್ಥಗಳನ್ನೂ ನೆರವೇರಿಸಬಲ್ಲ ಒಬ್ಬ ನಿರತಿಶಯೈಶ್ವರ್ಯಸಂಪನ್ನನಾದ ಚಕ್ರವರ್ತಿಯಿದ್ದಂತೆ ! ಇಂಥಿಂಥ ಯಜ್ಞಾದಿಗಳನ್ನು ಮಾಡಿದರೆ ತಮಗೆ ಕೆಲಕೆಲವು ಸತ್ಫಲಗಳು ದೊರೆಯುವವೆಂದೋ, ಅಥವಾ ಸತ್ತಬಳಿಕ ಕಲ್ಪವೃಕ್ಷ, ಕಾಮಧೇನು, ನಂದನವನ-ಮುಂತಾದವುಗಳ ಮೂಲಕ ತಮ್ಮ ಇಷ್ಟಭೋಗಗಳನ್ನು ಸಲ್ಲಿಸುವ ಸ್ವರ್ಗಲೋಕಪ್ರಾಪ್ತಿಯಾಗುವದೆಂದೋ ಆಶೆಗೆ ಒಳಗಾಗಿ ಭಗವಂತನ ಪೂಜೆಗೆ ಎಳಸುತ್ತಾರೆ. ಅದೊಂದು ಬಗೆಯ ಅಂಗಡಿಯಿಟ್ಟವರ ಪ್ರೇಮ. ಇಂಥದ್ದೊಂದು ದೇವರ ಸೇವೆಯನ್ನು ಮಾಡಿದರೆ ಇಂಥ ಫಲವು ದೊರಕುವದು– ಎಂಬುದೇ ಆರಾಧಕರ ಮನೋಭಾವ. ಹೀಗೆ ತಮಗೆ ಬೇಕಾದ ಫಲವು ದೊರಕುವದಕ್ಕೆಂದು ಪೂಜೆಯೆಂಬ ಕ್ರಯವನ್ನು ಕೊಡುವವರ ಶ್ರದ್ಧೆಯನ್ನು ಪ್ರೇಮರೂಪವಾದ ಭಕ್ತಿಯೆಂಬ ಹೆಸರಿನಿಂದ ಎಂದಿಗೂ ಕರೆಯುವದಕ್ಕಾಗುವದಿಲ್ಲ. ನಿಜವಾದ ಭಕ್ತಿಯಲ್ಲಿ ಆಸೆಯ ರೂಪವು ಲೇಶಮಾತ್ರವೂ ಇರಲಾರದು.

ಇನ್ನು ಲೌಕಿಕಭಕ್ತಿಗೆ **ಸಾತಿಶಯತ್ವವೆಂಬ ಮೂರನೆಯ ರೂಪವೂ** ಇರುವದುಂಟು. ಭಗವಂತನು ಇಂಥಿಂಥ ಗುಣವುಳ್ಳವನು, ಇಂಥ ರೂಪಿನವನು, ಇಂಥ ಲೋಕದಲ್ಲಿ ಹೆಂಡಿರುಮಕ್ಕಳೊಡನೆ ಇರುವ ಮಹಾಕುಟುಂಬಿ–ಎಂಬ ಭಾವನೆಯಿಂದ ಕೆಲಪರು ಗೌರವಿಸುವರು. ಮೊದಮೊದಲು ಮಾಡಿಕೊಂಡಿರುವ ಈ ಭಾವನೆಗೆ ಭಕ್ತಿಯು ಅರಳುತ್ತಾ ಹೋದಹಾಗೆಲ್ಲ, ಸರ್ವಶಕ್ತನಾದ ಭಗವಂತನು ತನ್ನ ಸ್ವೇಚ್ಛೆಯಿಂದ ಭಕ್ತರಿಗೆ ಒಪ್ಪಾದ ಆಕಾರಗುಣಾದಿಗಳಿಂದೊಡಗೂಡಿ ಒಂದು ಸ್ಥಾನದಲ್ಲಿದ್ದು ಅನುಗ್ರಹಿಸಬಲ್ಲನಾದರೂ, ಅವನಿಗೆ ಆ ಸಾಮರ್ಥ್ಯವಿರುವದೇನೂ ಹೆಚ್ಚಲ್ಲವಾದರೂ ಸರ್ವವ್ಯಾಪಿಯೂ ಸರ್ವಕ್ಕೂ ಆತ್ಮನೂ ಆಗಿರುವ ಆತನಿಗೆ

ಒಂದು ಸ್ಥಾನ, ಒಂದು ರೂಪು, ಕೆಲವು ಗುಣಗಳು, ಪರಿವಾರ- ಮುಂತಾದವು ಗಳನ್ನು ಕಲ್ಪಿಸಿರುವದು ಒಂದು ಅಪರಾಧವೇ ಆದೀತು ! ಭಗವಂತನ ಪ್ರದಕ್ಷಿಣೆ, ಭಗವಂತನ ಸ್ಥಾನಕ್ಕೆ ಯಾತ್ರೆ, ಭಗವಂತನ ಗುಣಗಾನ- ಇವೇ ಮುಂತಾದವು ಗಳಿಂದ ಭಕ್ತರು ಧನ್ಯರಾಗಬಹುದಾದರೂ ಆ ರೂಪವನ್ನೂ ರೂಪಸ್ಥಾನಪರಿಮಿತ ಗುಣಗಳಿಂದ ಅವನು ಪರಿಚ್ಛಿನ್ನನಾಗಿದ್ದಾನೆಂದೂ ಎಣಿಸುವದು ಎಂದಿಗೂ ಯುಕ್ತ ವಾಗಲಾರದು.

ಹೀಗೆ **ಭಯಕಾಮಪರಿಚ್ಛೇದಕಬುದ್ಧಿಗಳೆಂಬ ಮೂರುರೂಪವನ್ನೂ** ಮೀರಿದ ಪರಮಪ್ರೇಮವನ್ನೇ ಪರಭಕ್ತರು ಮಾಡುತ್ತಿರುವರು. ಗೌಣಭಕ್ತನುಕೂಡ ನನ್ನ ಯೋಗ್ಯತೆಗೆ ತಕ್ಕಂತೆ ನಾನು ಭಗವಂತನನ್ನು ಆರಾಧಿಸುವೆನಾದರೂ ಇದೇ ನಿಜವಾದ ಭಕ್ತಿಯೆನಿಸಲಾಗದು ; ಭಗವಂತ, ನಿನ್ನ ಯಥಾರ್ಥವಾದ ಮಹಿಮೆ ಯನ್ನರಿತು ಪ್ರೀತಿಸುವ ಭಕ್ತಿಯನ್ನು ನನಗೆ ಕೊಡು' -ಎಂದು ಪ್ರೇಮವೊಂದನ್ನೇ ಪ್ರಾರ್ಥನೆಮಾಡಬೇಕು.

ಅಥವಾ **'ತ್ರಿರೂಪಭಂಗಪೂರ್ವಕಮ್'** ಎಂಬ ಮಾತಿಗೆ **ಮತ್ತೊಂದು ರೀತಿಯಿಂದಲೂ ಅರ್ಥವನ್ನು ಕಲ್ಪಿಸಬಹುದು.** ಲೋಕದ ಪ್ರೇಮದಲ್ಲಿ ಪ್ರೇಮ, ಪ್ರೇಮವನ್ನು ಮಾಡುವವನು, ಪ್ರೇಮಕ್ಕೆ ವಿಷಯ-ಎಂಬ ಮೂರು ವಿಭಕ್ತ ರೂಪಗಳಿರುವವು. ಆದ್ದರಿಂದ ಆ ಪ್ರೇಮವು ಎಷ್ಟೇ ಹೆಚ್ಚಿನದಾಗಿರಲಿ ಅಳತೆಯ ಪ್ರೇಮವೇ ಆಗಿರುತ್ತದೆ. ಆದರೆ ಪ್ರೇಮವನ್ನು ಮಾಡುವ ತಾನು, ಪ್ರೇಮಕ್ಕೆ ಪಾತ್ರ ನಾದ ಭಗವಂತ, ಪ್ರೇಮ- ಎಂಬ ಈ ಮೂರು ವಿಧವಾದ ವಿಭಾಗವನ್ನು ಅರಿಯದೆ ಪ್ರೇಮದಲ್ಲಿಯೇ ಮುಳುಗಿರುತ್ತಾ ಎಲ್ಲೆಲ್ಲಿಯೂ ಭಗವಂತನಿರುವದರಿಂದ ಎಲ್ಲಕ್ಕೂ ಆತ್ಮನಾಗಿರುವ ಆತನ ಪ್ರೇಮದಲ್ಲಿಯೇ ನೆಲೆನಿಂತಿರುವ ಪ್ರೇಮವು ಇದಕ್ಕಿಂತಲೂ ಹೆಚ್ಚಿನದಾಗಿರುತ್ತದೆ. ಆದ್ದರಿಂದ ಪ್ರೇಮಾದಿತ್ರಿರೂಪವನ್ನು ಮೀರಿ ಕೇವಲ ಪ್ರೇಮವನ್ನೇ ಮಾಡುತ್ತಾ ಪ್ರೇಮಮಯನಾಗಿರಬೇಕು ಎಂಬುದು ಸೂತ್ರಾರ್ಥ.

## ಪ್ರೇಮಕ್ಕಾಗಿ ಪ್ರೇಮವೆಂಬುದು ಎಂಥದ್ದು ?

೧೨೪. ಪ್ರೇಮಕ್ಕಾಗಿ ಪ್ರೇಮವನ್ನು ಮಾಡುವದು ಪರಭಕ್ತರಿಗೆ ಮಾತ್ರವೇ ಸಾಧ್ಯ. ಆದ್ದರಿಂದ ಸಾಮಾನ್ಯರಿಗೂ ಅದನ್ನು ಮನಗಾಣಿಸಬೇಕೆಂಬ ಉದ್ದೇಶ ದಿಂದ ಸೂತ್ರದಲ್ಲಿ ಎರಡು ದೃಷ್ಟಾಂತಗಳನ್ನು ಕೊಟ್ಟಿದೆ.

ಮೊದಲನೆಯ ದೃಷ್ಟಾಂತವು **ನಿತ್ಯದಾಸ್ಯ.** ಹಿಂದಿನ ಕಾಲದಲ್ಲಿ ಜೀತಗಾರ ರೆಂದು ಕೆಲವರನ್ನು ಕೊಂಡುಕೊಂಡು ನಿತ್ಯದಾಸ್ಯಕ್ಕೆ ಇಟ್ಟುಕೊಂಡುಬಿಡುತ್ತಿದ್ದರು. ಇವರನ್ನು 'ಗುಲಾಮರು' ಎಂದು ಕರೆಯುತ್ತಿದ್ದರು. ಈಗಿನ ಕಾಲಕ್ಕೆ ದನಗಳನ್ನು ಕೊಂಡಾಗ ಮನೆಯಲ್ಲಿರುವ ಹಸು ಯಜಮಾನನು ಮೇಯಿಸಿದ ಮೇವನ್ನು ತಿಂದು

ಮನೆಗೆ ಹಾಲು, ಗೊಬ್ಬರ- ಮುಂತಾದವುಗಳನ್ನು ಒದಗಿಸುತ್ತಾ ಅವನ ಮನೆಯಲ್ಲಿ ತಾನಿರುವ ಜಾಗವೇ ತನ್ನ ಮನೆ ಎಂದು ಭಾವಿಸುವಂತೆ ದಾಸನಾದವನು ಹಿಂದೆ ಮನೆಯ ಯಜಮಾನನ ಸುಖಕ್ಕೇ ತನ್ನ ಜೀವವನ್ನೆಲ್ಲ ಮೀಸಲಾಗಿಟ್ಟುಕೊಂಡು ದುಡಿಯುತ್ತಿದ್ದನು. ಅವನ ಮಕ್ಕಳೂ ಆ ಮನೆಗೇ ಸೇರಿದವರಾಗಿರುತ್ತಿದ್ದರು. ಒಡೆಯನೂ ಆಳಿನ ಯೋಗಕ್ಷೇಮಗಳನ್ನು ನೋಡಿಕೊಳ್ಳುತ್ತಿದ್ದನು. ಒಡೆಯನನ್ನು ಬಿಟ್ಟರೆ ದಾಸನಿಗೆ ತನ್ನದೆಂಬ ಜೀವನವೇ ಇರುತ್ತಿರಲಿಲ್ಲ. ದಾಸನಿಗೂ ಧಣಿಗೂ ಒಂದೇ ಕುಟುಂಬದವರೆಂಬ ಭಾವನೆಯುಂಟಾಗಿಬಿಡುತ್ತಿತ್ತು. ಹೀಗೆಯೇ ಗೌಣಭಕ್ತಿಯನ್ನು ಅಳವಡಿಸಿಕೊಳ್ಳುವದಕ್ಕೆ ಪ್ರಯತ್ನಿಸುವವನು 'ಭಗವಂತನ ನಿತ್ಯದಾಸನು ನಾನು, ನನಗೆ ಆತನೇ ಗತಿ, ನನ್ನ ಸ್ಥಿತಿಗತಿಗಳಿಗೆ ಆತನೊಬ್ಬನೇ ಕಾರಣನಾಗಿರುತ್ತಾನೆ' ಎಂಬ ಭಾವನೆಯಿಂದ ಭಗವಂತನಲ್ಲಿ ಪ್ರೇಮವನ್ನು ಮಾಡುತ್ತಾ ತನ್ನ ತನ್ನತನವನ್ನು ಕಳೆದುಕೊಳ್ಳಬೇಕು.

ಇನ್ನು **ನಿತ್ಯಕಾಂತಾಭಾವನೆಯ** ದೃಷ್ಟಾಂತದಿಂದ ಮನದಂದುಕೊಳ್ಳಬೇಕಾದ ಅಂಶವೇನೆಂದರೆ, ಪಾಣಿಗ್ರಹಣದಿಂದ ಧರ್ಮಪತ್ನಿಯಾದವಳು ಪತಿಯೇ ತನ್ನ ಸರ್ವಸ್ವವೆಂದೂ ಆತನ ಸುಖವೇ ತನ್ನ ಸುಖವೆಂದೂ ಅವನಲ್ಲಿ ಐಕ್ಯವನ್ನು ಹೊಂದಿಬಿಡುವದು ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ. ತವರುಮನೆಯಲ್ಲಿ ತಂದೆ ತಾಯಿಗಳ ಸೇವೆಯಲ್ಲಿ ಕಾಲವನ್ನು ಕಳೆಯುತ್ತಿದ್ದದ್ದಕ್ಕಿಂತಲೂ ಹೆಚ್ಚಿನ ಲವಲವಿಕೆಯಿಂದ ಗಂಡನ ಕುಟುಂಬಭರಣವನ್ನು ಮಾಡುತ್ತಾ ತನ್ನ ವ್ಯಕ್ತಿತ್ವವನ್ನು ಆ ಕುಟುಂಬದಲ್ಲಿಯೇ ಲಯಮಾಡಿಕೊಂಡುಬಿಡುವಳು. ಅಲ್ಲವೆ? ಹಾಗೆಯೇ ಭಕ್ತನಾದವನು ಭಗವಂತನ ಪ್ರೇಮವೊಂದನ್ನು ಬಿಟ್ಟರೆ ತನ್ನ ಜೀವನಕ್ಕೆ ಮತ್ತೆಯಾವ ಧ್ಯೇಯವೂ ಇಲ್ಲವೆಂಬ ಭಾವನೆಯನ್ನು ಸಂಪಾದಿಸಿಕೊಳ್ಳಬೇಕು.

ನಿತ್ಯದಾಸ್ಯಭಾವನೆಗೂ ನಿತ್ಯಕಾಂತಾಭಾವನೆಗೂ ಆದರ್ಶಗಳು ಶ್ರೀಮದ್ರಾಮಾಯಣದಲ್ಲಿ ಸಿಕ್ಕುತ್ತವೆ. ಶ್ರೀರಾಮನು ಅಯೋಧ್ಯೆಗೆ ಹಿಂತೆರಳಿದಮೇಲೆ ತನಗೆ ಪಟ್ಟಾಭಿಷೇಕವಾದ ಅನಂತರ ಹನ್ನೊಂದುಸಾವಿರವರ್ಷಗಳಕಾಲ ರಾಜ್ಯಭಾರವನ್ನು ಮಾಡಿ ಮಹಾಪ್ರಸ್ಥಾನಕ್ಕೆ ತೆರಳುವ ಸಂದರ್ಭದಲ್ಲಿ ಇಷ್ಟಮಿತ್ರರಿಗೆಲ್ಲ ಆದೇಶವನ್ನು ಯಥೋಚಿತವಾಗಿ ಮಾಡಿದಬಳಿಕ ಮಾರುತಿಯನ್ನು ನೋಡಿ "ಎಲೈ ಧೀರನಾದ ಹನುಮಂತನೆ, ನೀನು ನನಗೆ ಮಾಡಿರುವ ಉಪಕಾರಕ್ಕೆ ಪ್ರತಿಯಾಗಿ ನಾನು ಯಾವ ಪ್ರತ್ಯುಪಕಾರವನ್ನು ಮಾಡಲಿ? ಅಥವಾ ನನಗೆ ನೀನು ಮಾಡಿರುವಂತೆಯೇ ಉಪಕಾರವನ್ನು ಮಾಡಬೇಕೆಂದರೆ ನಿನಗೆ ಕಷ್ಟಪ್ರಾಪ್ತಿಯನ್ನು ಬಯಸಬೇಕಾದೀತು; ಆದ್ದರಿಂದ ನನ್ನಿಂದ ನಿನಗೆ ಉಪಕಾರವಾಗಬೇಕಾದ ಆವಶ್ಯಕತೆಯೇ ಉಂಟಾಗದಿರಲಿ!- ಎಂದು ಹಾರೈಸುತ್ತೇನೆ' ಎಂದನಂತೆ! ಆಗ ಮಾರುತಿಯು ತನ್ನ ಇಷ್ಟಾರ್ಥವನ್ನು ಕೇಳಿಕೊಂಡ ರೀತಿಯು ನೆನಪಿನಲ್ಲಿಡುವದಕ್ಕೆ ತಕ್ಕಂತೆ ಇರುತ್ತದೆ.

**ಯಾವತ್ತವ ಕಥಾ ಲೋಕೇ ವಿಚರಿಷ್ಯತಿ ಪಾವನೀ ।**
**ತಾವತ್ ಸ್ಥಾಸ್ಯಾಮಿ ಮೇದಿನ್ಯಾಂ ತವಾಜ್ಞಾಮನುಪಾಲಯನ್ ॥**
ವಾ. ರಾ. ಉತ್ತರ ೧೦೮-೩೬

'ಭಗವಂತ, ಪವಿತ್ರವಾದ ನಿನ್ನ ಕಥೆಯು ಎಲ್ಲಿಯವರೆಗೆ ಪ್ರಚಾರದಲ್ಲಿರುವದೋ ಅಲ್ಲಿಯವರೆಗೆ ನಿನ್ನ ಆಜ್ಞೆಯನ್ನು ಪಾಲಿಸುತ್ತಾ ನಾನು ಭೂಮಿಯಮೇಲೆ ಬದುಕಿರುವಂತೆ ಅನುಗ್ರಹಿಸು!' ಎಂದು ಆತನು ಕೇಳಿಕೊಂಡನಂತೆ !

ಇದರಂತೆ **ನಿತ್ಯಕಾಂತಾಸಕ್ತಿಗೆ** ಜಗನ್ಮಾತೆಯಾದ ಸೀತಾದೇವಿಯ ದೃಷ್ಟಾಂತವನ್ನು ಸ್ಮರಿಸಿಕೊಳ್ಳಬಹುದು. ರಾಮನು ತನ್ನ ಪಾಣಿಗ್ರಹಣವನ್ನು ಮಾಡಿದಂದಿನಿಂದ ಅಯೋಧ್ಯೆಯಲ್ಲಿ ಸುಖವಾಗಿ ವಾಸಮಾಡುತ್ತಿದ್ದು, ವನವಾಸ, ರಾವಣನಿಂದಾದ ಅಪಚಾರ, ಇವುಗಳಿಂದಾದ ದುಃಖದ ಕಾಲದಲ್ಲಿಯೂ ಮುಂದೆ ಯುದ್ಧವಾಗಿ ರಾವಣಾದಿಗಳ ವಧೆಯಾದ ಬಳಿಕ ಅಯೋಧ್ಯೆಗೆ ಹಿಂತೆರಳಿದಮೇಲೆ ಶ್ರೀರಾಮನು ಪಟ್ಟಾಭಿಷೇಕವಾಗುವ ಕಾಲದವರೆಗೂ ಸಂತೋಷದಿಂದಿರುವಾಗಲೂ ಶ್ರೀರಾಮನ ಸ್ಮರಣೆಯೊಂದೇ ಹೊರತು ಮತ್ತೆ ಯಾವದನ್ನೂ ಆ ಮಹಾಮಾತೆಯ ಮನಸ್ಸಿಗೆ ಹತ್ತಿಸಿಕೊಂಡೇ ಇರಲಿಲ್ಲ. ಸೂರ್ಯನಿಗೆ ಛಾಯಾದೇವಿಯಂತೆ ರಾಮನು ನೆರಳಾಗಿರುತ್ತಿದ್ದಳು !

ಹೀಗೆ ನಿತ್ಯದಾಸ್ಯನಿತ್ಯಕಾಂತಾಭಾವನೆಯಲ್ಲಿ ಸಂತತವಾಗಿ ಮುಳುಗಿರುವದಕ್ಕೆ ಪ್ರಯತ್ನಿಸುವಾತನಿಗೆ ಮೂರು ರೂಪಗಳನ್ನೂ ತೊಲಗಿಸಿಕೊಂಡ ಪ್ರೇಮವೊಂದೇ ಜೀವನವಾಗಿಬಿಡುವದು.

### ದ್ವಿರುಕ್ತಿಯ ಅಭಿಪ್ರಾಯ

೧೨೫. ಗೌಣಭಕ್ತಿಯ ವಿವರಣೆಯು ಇಲ್ಲಿಗೆ ಮುಗಿಯಿತೆಂಬ ಉಪಸಂಹಾರ ಸೂಚಕವಾಗಿ ಇಲ್ಲಿ **'ಪ್ರೇಮ ಕಾರ್ಯಂ ಪ್ರೇಮ್ಣೈವ ಕಾರ್ಯಮ್'** ಎಂಬ ದ್ವಿರುಕ್ತಿಯನ್ನು ಪ್ರಯೋಗಿಸಿರುತ್ತದೆ. ಇನ್ನುಮುಂದೆಯೂ ಭಕ್ತಿಯ ಸಾಧನವನ್ನೇನೋ ಹೇಳಿಯೇ ಇರುತ್ತದೆಯಾದರೂ ಹಿಂದೆ (೫೬ನೆಯ ಸೂತ್ರದಲ್ಲಿ) ಪ್ರಾರಂಭಿಸಿದ ಗೌಣಭಕ್ತಿಯ ಪ್ರಕರಣವನ್ನು ಮುಗಿಸಿ ಮುಖ್ಯಭಕ್ತಿಯ ವಿಷಯದ ವಿವರಣೆಯನ್ನು ಪ್ರಾರಂಭಿಸಲಾಗುವದೆಂಬ ಸೂಚನೆಯು ಈ ದ್ವಿರುಕ್ತಿಯಲ್ಲಿದೆ.

## ೧೭. ಮುಖ್ಯಭಕ್ತರು

ಭಕ್ತಾ ಏಕಾನ್ತಿನೋ ಮುಖ್ಯಾಃ ॥ ೬೭ ॥

೬೭. ನಿಯತವಾದ ಭಕ್ತಿಯುಳ್ಳವರು ಮುಖ್ಯರು.

೧೨೬. ಹಿಂದೆ (ಸೂ. ೫೬ರಲ್ಲಿ) ಹೇಳಿರುವ ಗೌಣಭಕ್ತರೂ ಮಿಕ್ಕ ಕರ್ಮಿಗಳಿಗಿಂತಹೆಚ್ಚಿನ ಭಾಗ್ಯವಂತರೇ ಸರಿ. ಆದರೆ :

**ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।**
**ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥**
**ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಮ್ ।**
**ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಮ್ ॥**

ಗೀ. ೭-೧೭, ೧೮

"ಈ ನಾಲ್ವರಲ್ಲಿ ಜ್ಞಾನಿಯು ನಿತ್ಯನಿರಂತರವಾಗಿ ನನ್ನಲ್ಲಿ ಚಿತ್ತಸಮಾಧಾನವನ್ನು ಪಡೆದುಕೊಂಡಿರುತ್ತಾನೆ. ಅವನಿಗೆ ನಾನು ಅತ್ಯಂತಪ್ರಿಯನು, ಅವನೂ ನನಗೆ ಅತ್ಯಂತಪ್ರಿಯನು. ನನಗಿಂತ ಭಜನೀಯನಾದ ಮತ್ತೆ ಯಾರೂ ಅವನ ಪಾಲಿಗೆ ಇರುವದಿಲ್ಲ. ಆರ್ತಾದಿಭಕ್ತರು ಹೆಚ್ಚಿನವರೇ ಆಗಿರುತ್ತಾರೆ. ಆದರೆ ಜ್ಞಾನಿಯು ನನ್ನ ಆತ್ಮನೇ; ನನ್ನನ್ನೇ ಕಟ್ಟಕಡೆಯ ಗತಿಯೆಂದು ಆತನು ನಂಬಿರುತ್ತಾನೆ" ಎಂದು ಭಗವಂತನು ನುಡಿದಿರುತ್ತಾನೆ.

ಆರ್ತಭಕ್ತನಿಗೆ ಅರ್ಥಾರ್ಥಿಜಿಜ್ಞಾಸುಗಳಂತೆ ಮತ್ತೆಯಾವದೊಂದು ನಿಮಿತ್ತವೂ ಇಲ್ಲದ ಭಕ್ತಿಯಿರುವದೆಂಬುದು ನಿಜ. ಆದರೂ ಅವನಿಗೆ ಭಗವಂತನ ಯಥಾರ್ಥಸ್ವರೂಪದ ಜ್ಞಾನವು ಇರುವದಿಲ್ಲ. ಅವನಿಗೆ ಭಗವಂತನು ತನ್ನ ತತ್ತ್ವದ ಜ್ಞಾನವನ್ನು ಅನುಗ್ರಹಿಸಿದ ಬಳಿಕವೇ ನಿರತಿಶಯವಾದ ಪ್ರೇಮದ ಆಳವು ಮನದಟ್ಟಾಗುವದು. ಜ್ಞಾನಿಭಕ್ತನು ಹಾಗಲ್ಲ, ಏಕೆಂದರೆ ಅವನು ಸ್ವಭಾವದಿಂದಲೇ ಮತ್ತೊಂದು ಕಡೆಗೆ ಹರಿಯದ ಪ್ರೇಮವನ್ನು ಸಂಪಾದಿಸಿಕೊಂಡಿರುತ್ತಾನೆ.

ಮಹಾಭಾರತದಲ್ಲಿ ಏಕಾಂತಿಭಕ್ತರ ಮಹಿಮೆಯನ್ನು ಹೀಗೆ ಕೊಂಡಾಡಿರುತ್ತದೆ :

**ಅಹೋ ಹ್ಯೇಕಾನ್ತಿನಃ ಸರ್ವಾನ್ ಪ್ರೀಣಾತಿ ಭಗವಾನ್ ಹರಿಃ ।**
**ವಿಧಿಪ್ರಯುಕ್ತಾಂ ಪೂಜಾಂ ಚ ಗೃಹ್ಣಾತಿ ಭಗವಾನ್ ಸ್ವಯಮ್ ॥**
**ಯೇ ತು ದಗ್ಧೇನ್ಧನಾ ಲೋಕೇ ಪುಣ್ಯಪಾಪವಿವರ್ಜಿತಾಃ ।**
**ತೇಷಾಂ ತ್ವಯಾಭಿನಿರ್ದಿಷ್ಟಾ ಪಾರಮ್ಪರ್ಯಾಗತಾ ಗತಿಃ ॥**
**ಚತುರ್ಥ್ಯಾಂ ಚೈವ ತೇ ಗತ್ಯಾಂ ಗಚ್ಛನ್ತಿ ಪುರುಷೋತ್ತಮಮ್ ।**
**ಏಕಾನ್ತಿನಸ್ತು ಪುರುಷಾ ಗಚ್ಛನ್ತಿ ಪರಮಂ ಪದಮ್ ॥**
**ನೂನಮೇಕಾನ್ತಧರ್ಮೋಽಯಂ ಶ್ರೇಷ್ಠೋ ನಾರಾಯಣಪ್ರಿಯಃ ।**
**ಅಗತ್ವಾ ಗತಯಸ್ತಿಸ್ರೋ ಯದ್ಗಚ್ಛನ್ತ್ಯವ್ಯಯಂ ಹರಿಮ್ ॥**
**ಸಹೋಪನಿಷದಾನ್ ವೇದಾನ್ ಯೇ ವಿಪ್ರಾಃ ಸಮ್ಯಗಾಸ್ಥಿತಾಃ ।**
**ಪಠನ್ತಿ ವಿಧಿಮಾಸ್ಥಾಯ ಯೇ ಚಾಪಿ ಯತಿಧರ್ಮಿಣಃ ॥**
**ತೇಭ್ಯೋ ವಿಶಿಷ್ಟಾಂ ಜಾನಾಮಿ ಗತಿಮೇಕಾನ್ತಿನಾಂ ನೃಣಾಮ್ ॥**

ಮೋ. ಧ. ೩೪೮-೧ರಿಂದ ೫

ಏಕಾಂತಿಭಕ್ತರ ಧರ್ಮದ ಉತ್ಪತ್ತಿಯ ವೃತ್ತಾಂತವನ್ನು ಕೇಳುವ ಸಂದರ್ಭದಲ್ಲಿ ಜನಮೇಜಯನು ಆಡಿದ ಮಾತುಗಳಿವು. ಅವನು ಹೇಳಿರುವದೇನೆಂದರೆ .

"ಆಹಾ ! ಏಕಾಂತಿಗಳೆಲ್ಲರನ್ನೂ ಭಗವಂತನಾದ ಹರಿಯು ಪ್ರೀತಿಸುತ್ತಾನೆ. ಅವರು ಮಾಡುವ ಯಥಾವಿಧಿಪೂಜೆಯನ್ನು ತಾನೇ ಸ್ವೀಕರಿಸುತ್ತಾನಲ್ಲ ! ಯಾರು ಮನೋವಾಸನೆಗಳನ್ನೆಲ್ಲ ಸುಟ್ಟು ಪುಣ್ಯಪಾಪರಹಿತರಾಗಿರುವರೋ ಅವರಿಗೆ ಆಗುವ ಉತ್ತಮಗತಿಯನ್ನು ನೀನು ಹೇಳಿರುವೆ. ಈ ಏಕಾಂತಿಭಕ್ತರು ನಾಲ್ಕನೆಯ ಗತಿಯಾದ ಪುರುಷೋತ್ತಮನನ್ನು ಸೇರಿ ಪರಮಪದವನ್ನೇ ಹೊಂದುವರು. ನಿಜವಾಗಿಯೂ ನಾರಾಯಣನಿಗೆ ಪ್ರಿಯವಾದ ಈ ಏಕಾಂತಧರ್ಮವು ಸರ್ವಶ್ರೇಷ್ಠವೇ ಸರಿ; ಏಕಾಂತಿಗಳು ಮೂರು ಗತಿಗಳನ್ನೂ ಮೀರಿ ಅವ್ಯಯನಾದ ಶ್ರೀಹರಿಯನ್ನೇ ಸೇರುವರಲ್ಲವೆ ? ಉಪನಿಷತ್ಸಹಿತವಾದ ವೇದಗಳನ್ನನುಸರಿಸುವ ನಿಷ್ಠರಾದ ವಿಪ್ರರಿಗಿಂತಲೂ ಯತಿಧರ್ಮವನ್ನು ಉತ್ತಮವಾಗಿ ಆಚರಿಸುವವರಿಗಿಂತಲೂ ಏಕಾಂತಿಗಳಿಗೆ ದೊರಕುವ ಗತಿಯು ಶ್ರೇಷ್ಠವೆಂದು ನಾನು ಎಣಿಸುತ್ತೇನೆ."

ಕಣ್ಠಾವರೋಧರೋಮಾಞ್ಚಾಶ್ರುಭಿಃ ಪರಸ್ಪರಂ
ಲಪಮಾನಾಃ ಪಾವಯನ್ತಿ ಕುಲಾನಿ ಪೃಥಿವೀಂ ಚ ॥ ೬೮ ॥

೬೮. ಗಂಟಲು ಕಟ್ಟುವದು, ಹೋಂಪುಳಿಯಾಗುವದು, ಆನಂದದಿಂದ ಕಂಬನಿಯನ್ನು ಸುರಿಸುವದು- ಇವುಗಳಿಂದೊಡಗೂಡಿ ಒಬ್ಬರೊಡನೊಬ್ಬರು ಮಾತನಾಡುತ್ತಾ ಕುಲಗಳನ್ನೂ ಪೃಥಿವಿಯನ್ನೂ ಪಾವನಗೊಳಿಸುವರು.

೧೨೭. ಈಗ ಏಕಾಂತಿಭಕ್ತರ ಲಕ್ಷಣಗಳನ್ನೂ ಮಹಿಮೆಯನ್ನೂ ಹೇಳುತ್ತಾರೆ- ಇದರಿಂದ ಸಾಧಕರಾದ ಭಕ್ತರಿಗೆ ಮುಖ್ಯಭಕ್ತರಲ್ಲಿ ಗೌರವವುಂಟಾಗುವದಲ್ಲದೆ ಅವರನ್ನು ಅನುಕರಿಸಿ ಸಾಧನವನ್ನು ಮಾಡುವದರಲ್ಲಿ ಆದರವುಂಟಾಗುತ್ತದೆ.

ಕಥಂ ವಿನಾ ರೋಮಹರ್ಷಂ ದ್ರವತಾ ಚೇತಸಾ ವಿನಾ ।
ವಿನಾಽಽನನ್ದಾಶ್ರುಕಲಯಾ ಶುದ್ಧ್ಯೇದ್ಭಕ್ತ್ಯಾ ವಿನಾಶಯಃ ॥
ಭಾಗ. ೧೧-೧೪-೨೩

"ರೋಮಾಂಚವಾಗದೆ ಕರಗಿದ ಚಿತ್ತ, ಆನಂದಬಾಷ್ಪದ ಕಲೆಯಿಲ್ಲದೆ ಭಕ್ತಿಯಿಲ್ಲದೆ ಚಿತ್ತವು ಹೇಗೆತಾನೆ ಶುದ್ಧಿಯಾದೀತು ?" ಎಂಬ ಭಗವದುಕ್ತಿಯಂತೆ ಪರಭಕ್ತರು ಸ್ವಭಾವದಿಂದಲೇ ಭಕ್ತಿಯ ಭರದಿಂದ ರೋಮಾಂಚಿತರಾಗುತ್ತಿರುವರು. ಹೀಗೆ ಪರಿಶುದ್ಧಚಿತ್ತರಾಗಿ-

ವಾಗ್ಗದ್ಗದಾ ದ್ರವತೇ ಯಸ್ಯ ಚಿತ್ತಂ
ರುದತ್ಯಭೀಕ್ಷ್ಣಂ ಹಸತಿ ಕ್ವಚಿಚ್ಚ ।
ವಿಲಜ್ಜ ಉದ್ಗಾಯತಿ ನೃತ್ಯತೇ ಚ
ಮದ್ಭಕ್ತಿಯುಕ್ತೋ ಭುವನಂ ಪುನಾತಿ ॥

ಭಾಗ. ೧೧-೧೪-೨೪

"ನನ್ನಲ್ಲಿ ಭಕ್ತಿಯನ್ನು ಪಡೆದಾತನ ಮಾತು ಗಂಟಲುಕಟ್ಟಿಕೊಂಡು ಗದ್ಗದರೂಪ ವುಳ್ಳದ್ದಾಗಿರುತ್ತದೆ. ಬಹಳವಾಗಿ ಅಳುತ್ತಿರುವನು, ಒಮ್ಮೊಮ್ಮೆ ನಗುತ್ತಿರುವನು. ನಾಚಿಕೆಯನ್ನು ಬಿಟ್ಟು ಗಟ್ಟಿಯಾಗಿ ಹಾಡುತ್ತಿರುವನು, ಕುಣಿಯುತ್ತಿರುವನು, ಇದರಿಂದ ಭೂಲೋಕವೇ ಅವನಿಂದ ಪವಿತ್ರವಾಗುವದು"- ಎಂದು ಭಾಗವತದಲ್ಲಿ ಒಂದು ಕಡೆಯಲ್ಲಿ ಪರಭಕ್ತನ ಲಕ್ಷಣವನ್ನು ವರ್ಣಿಸಿರುತ್ತದೆ. ಇನ್ನೊಂದು ಕಡೆಯಲ್ಲಿ-

ಸ್ಮರನ್ತಃ ಸ್ಮಾರಯನ್ತಶ್ಚ ಮಿಥೋಽಘೌಘಹರಂ ಹರಿಮ್ ।
ಭಕ್ತ್ಯಾ ಸಞ್ಜಾತಯಾ ಭಕ್ತ್ಯಾ ಬಿಭ್ರತ್ಯುತ್ಪುಲಕಾಂ ತನುಮ್ ।
ಕ್ವಚಿದ್ರುದನ್ತ್ಯಚ್ಯುತಚಿನ್ತಯಾ ಕ್ವಚಿದ್
ಹಸನ್ತಿ ನನ್ದನ್ತಿ ವದನ್ತ್ಯಲೌಕಿಕಾಃ ।
ನೃತ್ಯನ್ತಿ ಗಾಯನ್ತ್ಯನುಶೀಲಯನ್ತ್ಯಜಂ
ಭವನ್ತಿ ತೂಷ್ಣೀಂ ಪರಮೇತ್ಯ ನಿರ್ವೃತಾಃ ॥

ಭಾಗ. ೧೧-೩-೩೧, ೩೨

''ಪಾಪರಾಶಿಯನ್ನು ಕಳೆಯುವ ಶ್ರೀಹರಿಯನ್ನು ಸ್ಮರಿಸಿಕೊಳ್ಳುತ್ತಲೂ ಮತ್ತೊಬ್ಬರ ನೆನಪಿಗೆ ತರುತ್ತಲೂ ಭಕ್ತಿಯಿಂದುಂಟಾದ ಭಕ್ತಿಯಿಂದ ಶರೀರದಲ್ಲಿ ರೋಮಾಂಚ ವನ್ನು ಅನುಭವಿಸುತ್ತಿರುವರು. ಆ ಅಚ್ಯುತನ ಚಿಂತನೆಯಿಂದ ಒಮ್ಮೊಮ್ಮೆ ಅಳುತ್ತಿರುವರು, ಒಮ್ಮೊಮ್ಮೆ ನಗುತ್ತಿರುವರು, ಆನಂದಿಸುತ್ತಿರುವರು, ಲೋಕದ ಜನರ ವರ್ತನೆಯನ್ನು ಮೀರಿ, ಹೇಗೆ ಹೇಗೋ ಮಾತನಾಡುತ್ತಿರುವರು, ಕುಣಿಯು ತ್ತಿರುವರು, ಹಾಡುತ್ತಿರುವರು, ಮತ್ತೆಮತ್ತೆ ಆ ಜನ್ಮರಹಿತನಾದ ಪರಮಾತ್ಮನನ್ನು ಮನಸ್ಸಿನಲ್ಲಿ ಬಗೆಬಗೆಯಾಗಿ ವಿಮರ್ಶಿಸುತ್ತಿರುವರು, ಒಮ್ಮೊಮ್ಮೆ ಪರಮಾನಂದ ದಿಂದ ಸುಮ್ಮನೆ ಇರುತ್ತಿರುವರು'' ಎಂದಿರುತ್ತದೆ. ಭಗವದ್ಗೀತೆಯಲ್ಲಿ ಗೌಣ ಭಕ್ತರು ಹೀಗೆಯೇ ಪರಭಕ್ತರನ್ನು ಅನುಸರಿಸಿ ನಡೆಯುತ್ತಾರೆಂದೂ ಅವರಿಗೆ ಭಗವಂತನು ತತ್ತ್ವಜ್ಞಾನವನ್ನು ಅನುಗ್ರಹಿಸುವದಕ್ಕೆ ಇದೇ ಕಾರಣವೆಂದೂ ತಿಳಿಯಿ ಸುವ ಸಂದರ್ಭದಲ್ಲಿ ಹೀಗೆಂದಿದೆ :

ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯನ್ತಃ ಪರಸ್ಪರಮ್ ।
ಕಥಯನ್ತಶ್ಚ ಮಾಂ ನಿತ್ಯಂ ತುಷ್ಯನ್ತಿ ಚ ರಮನ್ತಿ ಚ ॥ ಗೀ. ೧೦-೯

(ನನ್ನಲ್ಲಿಯೇ ಚಿತ್ತವನ್ನಿಟ್ಟು, ತಮ್ಮ ಕರಣಗಳೆಲ್ಲವನ್ನೂ ಭಕ್ತಿಗೇ ವಿನಿಯೋಗಿಸಿಕೊಂಡು ಒಬ್ಬರಿಗೊಬ್ಬರು ಭಗವನ್ಮಹಿಮೆಯನ್ನು ಬೋಧಿಸುತ್ತಾ ಅದರಿಂದಲೇ ತುಷ್ಟರಾಗಿ ಅದರಲ್ಲಿಯೇ ನಿರತರಾಗಿರುತ್ತಾರೆ.)

ಇಲ್ಲಿ ಹೇಳಿರುವಷ್ಟನ್ನೇ ಭಕ್ತರ ಮನೋಭಾವಗಳಿಗೆ ಪರಿಮಿತಿಯಾಗಿ ಹಾಕಿಕೊಳ್ಳಬಾರದು.

ಸ್ತಮ್ಭಪ್ರಲಯರೋಮಾಞ್ಚಸ್ವೇದೋವೈವರ್ಣ್ಯವೇಪಥುಃ ।
ಅಶ್ರುವೈಸ್ವರ್ಯಮಿತ್ಯಷ್ಟೌ ಸಾತ್ತ್ವಿಕಾಃ ಪರಿಕೀರ್ತಿತಾಃ ॥

ಎಂಬಂತೆ ನಿಂತಲ್ಲಿ ನಿಲ್ಲುವದು, ಮೈಮರೆತುಬಿಡುವದು, ನವಿರೇಳುವದು, ಮೈಬೆವರುವದು, ಮುಖದ ವರ್ಣವೇ ಮಾರ್ಪಡುವದು, ನಡುಕು, ಆನಂದದ ಕಣ್ಣೀರು ಸುರಿಯುವದು, ಮಾತಿನ ಸ್ವರವು ಮಾರ್ಪಡುವದು- ಎಂಬ ಎಂಟು ಬಗೆಯ ಸಾತ್ತ್ವಿಕಭಾವಗಳೂ ಭಗವಂತನ ಸ್ಮರಣೆಯಿಂದ ಭಕ್ತರಿಗೆ ಆಗುತ್ತಿರುವವು.

ಕುಲಂ ಪವಿತ್ರಂ ಜನನೀ ಕೃತಾರ್ಥಾ
ವಿಶ್ವಂಭರಾ ಪುಣ್ಯವತೀ ಚ ತೇನ ।
ಅಪಾರಸಂವಿತ್ಸುಖಸಾಗರೇ ಸದಾ
ವಿಲೀಯತೇ ಯಸ್ಯ ಮನಃಪ್ರಚಾರಃ ॥

ಸೂ. ಸಂ. ೭-೨೦-೪೫

ಎಂಬ ಪ್ರಮಾಣೋಕ್ತಿಯಂತೆ ಪರಮಾನಂದಸಾಗರನಾದ ಭಗವಂತನಲ್ಲಿ ಯಾವ ಭಕ್ತನ ಚಿತ್ತವು ಲಯವಾಗಿರುವದೋ ಆ ತಾಯಿತಂದೆಗಳ ಕುಲಗಳು ಪವಿತ್ರವಾಗುವವು, ಆತನ ತಾಯಿಯು ಕೃತಾರ್ಥಳಾಗುವಳು. ಇಡಿಯ ಭೂಮಂಡಲವೇ ಅವನಿಂದ ಪುಣ್ಯಭೂಮಿಯೆನಿಸುವದು.

ತೀರ್ಥೀಕುರ್ವನ್ತಿ ತೀರ್ಥಾನಿ ಸುಕರ್ಮೀಕುರ್ವನ್ತಿ
ಕರ್ಮಾಣಿ ಸಚ್ಛಾಸ್ತ್ರೀಕುರ್ವನ್ತಿ ಶಾಸ್ತ್ರಾಣಿ ॥ ೬೯ ॥

೬೯. (ಆ ಭಕ್ತರು) ತೀರ್ಥಗಳನ್ನು ತೀರ್ಥವಾಗಿ ಮಾಡುವರು, ಕರ್ಮಗಳನ್ನು ಸತ್ಕರ್ಮಗಳನ್ನಾಗಿ ಮಾಡುವರು, ಶಾಸ್ತ್ರಗಳನ್ನು ಸಚ್ಛಾಸ್ತ್ರಗಳೆನಿಸುವರು.

೧೫೮. ತೀರ್ಥಗಳಲ್ಲಿ ಪರಮಾತ್ಮನ ಸಾಂನಿಧ್ಯವಿರುವದರಿಂದ ಅವುಗಳಲ್ಲಿ ಸ್ನಾನಾದಿಗಳನ್ನು ಮಾಡಿದವರಿಗೆ ಪಾಪಪರಿಹಾರವೂ ಮನೋನೈರ್ಮಲ್ಯವೂ ಆಗುವವೆಂದು ಆಸ್ತಿಕರ ನಂಬಿಕೆಯಿದೆ. ಆದರೆ ಅವು ತೀರ್ಥವೆನಿಸಿಕೊಳ್ಳುವದಕ್ಕೆ ಭಕ್ತರು ಅವುಗಳಲ್ಲಿ ಸ್ನಾನಮಾಡಿರುವದೇ ಕಾರಣವಾಗಿರುತ್ತದೆ.

**ಭವದ್ವಿಧಾ ಭಾಗವತಾಸ್ತೀರ್ಥಭೂತಾಃ ಸ್ವಯಂ ವಿಭೋ ।**
**ತೀರ್ಥೀಕುರ್ವನ್ತಿ ತೀರ್ಥಾನಿ ಸ್ವಾನ್ತಸ್ಥೇನ ಗದಾಭೃತಾ ॥**

ಭಾಗ. ೧-೧೩-೧೦

ಯುಧಿಷ್ಠಿರನು ದ್ವಾರಕೆಯಿಂದ ಬಂದ ವಿದುರನನ್ನು ಕುರಿತು ಹೇಳಿದ ಮಾತಿದು. ''ನಿನ್ನಂಥ ಭಗವದ್ಭಕ್ತರು ತಾವೇ ತೀರ್ಥರೂಪರಾಗಿರುತ್ತಾರೆ. ಅವರು ತಮ್ಮ ಹೃದಯದಲ್ಲಿ ನೆಲಸಿರುವ ಶ್ರೀಹರಿಯ ಸಾಂನಿಧ್ಯದಿಂದ ತೀರ್ಥಗಳನ್ನು ತೀರ್ಥವಾಗಿಸುವರು.'' ಪರೀಕ್ಷಿತನು ಗಂಗೆಯಲ್ಲಿ ಪ್ರಾಯೋಪವೇಶವನ್ನು ಮಾಡುವೆನೆಂದು ನಿಶ್ಚಯಿಸಿರುವಲ್ಲಿ–

**ತತ್ರೋಪಜಗ್ಮುರ್ಭುವನಂ ಪುನಾನಾ**
**ಮಹಾನುಭಾವಾ ಮುನಯಃ ಸಶಿಷ್ಯಾಃ ।**
**ಪ್ರಾಯೇಣ ತೀರ್ಥಾಭಿಗಮಾಪದೇಶೈಃ**
**ಸ್ವಯಂ ಹಿ ತೀರ್ಥಾನಿ ಪುನನ್ತಿ ಸನ್ತಃ ॥**

ಭಾಗ. ೧-೧೯-೮

''ಅಲ್ಲಿಗೆ ಭೂಮಿಯನ್ನೆಲ್ಲ ಪವಿತ್ರಗೊಳಿಸುವ ಮಹಾನುಭಾವರಾದ ಮುನಿಗಳು ಶಿಷ್ಯಸಮೇತರಾಗಿ ಬಂದರು. ತೀರ್ಥಗಳ ದರ್ಶನವನ್ನು ಮಾಡಬೇಕೆಂಬ ನೆಪದಿಂದ ಮಹಾತ್ಮರು ತೀರ್ಥಗಳನ್ನು ಪವಿತ್ರಗೊಳಿಸುತ್ತಾರಲ್ಲವೆ?" ಎಂದು ಸೂತರು ಹೇಳಿರುತ್ತಾರೆ. ಭಗವದ್ಭಕ್ತರಾದ ಮಹನೀಯರು ಆಯಾ ಸ್ಥಲಗಳಲ್ಲಿ ಸ್ನಾನ ಮಾಡಿದ್ದರ ಪ್ರಭಾವದಿಂದಲೇ ತೀರ್ಥಗಳ ಮಹಿಮೆಯು ಇನ್ನಷ್ಟು ಹೆಚ್ಚುವದು. ಹೀಗೆ ಭಕ್ತರ ಸ್ನಾನದಿಂದ ತೀರ್ಥಗಳಿಗೆ ಗೌರವವು ಬರುವದೇ ಹೊರತು ಭಕ್ತರಿಗೆ ಅವುಗಳಿಂದ ಆಗಬೇಕಾದ ಪಾವಿತ್ರ್ಯವು ಅಷ್ಟೇನೂ ಇರುವದಿಲ್ಲ. ಆಗಸ್ತ್ಯತೀರ್ಥ, ಗೌತಮತೀರ್ಥ– ಎಂದು ಮಹರ್ಷಿಗಳ ಹೆಸರಿನಿಂದ ಈಗಲೂ ಪ್ರಸಿದ್ಧವಾಗಿರುವ ತೀರ್ಥಗಳು ಇದಕ್ಕೆ ನಿದರ್ಶನವಾಗಿವೆ.

ಹೀಗೆಯೇ ಸ್ವಯಂಪರಿಶುದ್ಧಚಿತ್ತರಾಗಿರುವ ಭಕ್ತರಿಗೆ ಯಾವ ಕರ್ಮಗಳನ್ನಾದರೂ ಮಾಡಿ ಚಿತ್ತಶುದ್ಧಿಯನ್ನು ಸಂಪಾದನೆಮಾಡಿಕೊಳ್ಳಬೇಕಾದದ್ದೇನೂ ಇರುವದಿಲ್ಲ. ಆದರೆ ಅವರು ಶಿಷ್ಟಾಚಾರವನ್ನು ಪರಿಪಾಲಿಸುತ್ತಾ ಹಿಂದಿನವರು ಮಾಡಿದ ಕರ್ಮಗಳ ಮೇಲುಪಙ್ಕ್ತಿಯನ್ನು ಅನುಸರಿಸಿಕೊಂಡಿರುವರು. ಇಂಥಿಂಥ

ಮಹನೀಯರು ಇಲ್ಲಿ ಇಂಥಿಂಥ ಕರ್ಮಗಳನ್ನು ಆಚರಿಸುತ್ತಾರೆ ಎಂದು ಪುರಾಣೋಕ್ತಿಗಳನ್ನು ಕೇಳಿ ಅಥವಾ ಇಂಥ ಭಕ್ತರು ಮಾಡುವ ಕರ್ಮಗಳನ್ನು ಕಂಡು, ಮಿಕ್ಕ ಜನರೂ ತಾವೂ ಅವನ್ನು ಮಾಡುತ್ತಾರೆ.

**ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।**
**ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥** ಗೀ. ೩-೨೧

ಎಂಬಂತೆ ಶ್ರೇಷ್ಠರಾದವರು ಆಚರಿಸಿದ ಕರ್ಮಗಳನ್ನೇ ಇತರರು ಆಚರಿಸುತ್ತಾರೆ. ಆದ್ದರಿಂದ ಭಕ್ತರು ಮಾಡಿದ ಕರ್ಮಗಳೇ ಸತ್ಕರ್ಮಗಳೆನಿಸುವವು.

ಹೀಗೆಯೇ ಅವರು ಯಾವಯಾವ ಶಾಸ್ತ್ರೋಕ್ತಿಗಳನ್ನು ಪ್ರಮಾಣವೆಂದು ಭಾವಿಸುತ್ತಾರೋ ಅವು ಸಚ್ಛಾಸ್ತ್ರಗಳೆನಿಸುತ್ತವೆ. 'ದೊಡ್ಡವರು ಹೀಗೆ ಮಾಡಿರುತ್ತಾರೆ, ಅವರು ಈ ವಚನವನ್ನು ಪ್ರಮಾಣವೆಂದು ಉದಾಹರಿಸಿರುತ್ತಾರೆ'- ಎಂದು ಜನರು ಈಗಲೂ ಆಯಾ ಕರ್ಮಗಳನ್ನೂ ಶಾಸ್ತ್ರಗಳನ್ನೂ ಸತ್ಕರ್ಮಗಳೆಂದೂ ಸಚ್ಛಾಸ್ತ್ರಗಳೆಂದೂ ನಂಬುವದು ಪ್ರಸಿದ್ಧವಾಗಿಯೇ ಇರುತ್ತದೆ.

## ತನ್ಮಯಾಃ ॥ ೭೦ ॥

೭೦. (ಅವರು) ಭಗವನ್ಮಯರಾಗಿರುತ್ತಾರೆ.

೧೨೯. ಭಕ್ತರಿಗೆ ಇಂಥದ್ದೊಂದು ತೀರ್ಥವೇ ಪವಿತ್ರತೀರ್ಥ, ಇಂಥದ್ದೊಂದು ಕರ್ಮವೇ ಸತ್ಕರ್ಮ, ಇಂಥ ಶಾಸ್ತ್ರವೇ ಸಚ್ಛಾಸ್ತ್ರ- ಎಂಬ ಆಗ್ರಹವೇನೂ ಇರುವದಿಲ್ಲ.

**ವೀತರಾಗಭಯಕ್ರೋಧಾ ಮನ್ಮಯಾ ಮಾಮುಪಾಶ್ರಿತಾಃ ।**
**ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ ॥** ಗೀ. ೪-೧೦

ಎಂದು ಭಗವಂತನೇ ಹೇಳಿರುವಂತೆ ಅವರು ಭಗವತ್ತತ್ತ್ವವನ್ನರಿತು 'ಭಗವಂತನನ್ನೇ ಆಶ್ರಯಿಸಿಕೊಂಡು ರಾಗ, ಭಯ, ಕ್ರೋಧ- ಮುಂತಾದ ಚಿತ್ತದೋಷವು ಒಂದೂ ಇಲ್ಲದೆ ಭಗವನ್ಮಯರಾಗಿಬಿಟ್ಟಿರುತ್ತಾರೆ.' ವ್ಯವಹಾರದಲ್ಲಿಕೂಡ ಅವರಿಗೆ ಬಾಹ ಜಗತ್ತಿನಲ್ಲಿ ಯಾವ ಗುಣದೋಷಗಳೂ ಕಾಣಿಸುತ್ತಿರುವದಿಲ್ಲ.

**ಸಂಪೂರ್ಣಂ ಜಗದೇವ ನನ್ದನವನಂ ಸರ್ವೇಽಪಿ ಕಲ್ಪದ್ರುಮಾಃ ।**
**ಗಾಙ್ಗಂ ವಾರಿ ಸಮಸ್ತವಾರಿನಿವಹಾಃ ಪುಣ್ಯಾಃ ಸಮಸ್ತಾಃ ಕ್ರಿಯಾಃ ॥**
**ವಾಚಃ ಪ್ರಾಕೃತಸಂಸ್ಕೃತಾಃ ಶ್ರುತಿಶಿರೋ ವಾರಾಣಸೀ ಮೇದಿನೀ ।**
**ಸರ್ವಾವಸ್ಥಿತಿರಸ್ಯ ವಸ್ತುವಿಷಯಾ ದೃಷ್ಟೇ ಪರಬ್ರಹ್ಮಣಿ ॥**

ಎಂಬಂತೆ ಅವರಿಗೆ ಜಗತ್ತೆಲ್ಲವೂ ನಂದನವನವೇ; ಎಲ್ಲಾ ಮರಗಳೂ ಕಲ್ಪವೃಕ್ಷಗಳೇ, ಎಲ್ಲಾ ನದಿಗಳೂ ಗಂಗಾನದಿಗಳೇ, ಎಲ್ಲಾ ಕರ್ಮಗಳೂ ಪುಣ್ಯಕರ್ಮಗಳೇ. ಪ್ರಾಕೃತವಾಗಲಿ ಸಂಸ್ಕೃತವಾಗಲಿ ಯಾವ ಭಾಷೆಯ ವಾಕ್ಯವಾದರೂ ಶ್ರುತಿವಾಕ್ಯವೇ. ಭೂಮಿಯೆಲ್ಲ ಕಾಶೀಕ್ಷೇತ್ರವೇ. ಹೆಚ್ಚೇಕೆ, ಅವರು ಯಾವ ಅವಸ್ಥೆಯಲ್ಲಿದ್ದರೂ ಅಲ್ಲಿಯೇ ಪರಬ್ರಹ್ಮಾನುಭವದ ಆನಂದವನ್ನೇ ಹೊಂದುತ್ತಿರುವರು. ಹೀಗಿರುವದರಿಂದ ಅವರು ಸ್ವತಃ ಪವಿತ್ರರಾಗಿರುತ್ತಾರೆ, ಎಲ್ಲವನ್ನೂ ಪವಿತ್ರಗೊಳಿಸುವ ಮಹಿಮೆಯುಳ್ಳವರಾಗಿರುತ್ತಾರೆ- ಎಂಬುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಮೋದನ್ತೇ ಪಿತರೋ, ನೃತ್ಯನ್ತಿ ದೇವತಾಃ, ಸನಾಥಾ ಚೇಯಂ ಭೂರ್ಭವತಿ ॥ ೭೧ ॥

೭೧. (ಇವರಿಂದ) ಪಿತೃಗಳು ಹರ್ಷವನ್ನು ಪಡೆಯುತ್ತಾರೆ, ದೇವತೆಗಳು ಕುಣಿದಾಡುತ್ತಾರೆ, ಭೂಮಿಯು ಸನಾಥವೆನಿಸುವದು.

೧೩೦. ಇಲ್ಲಿ ಯಾರಾದರೂ ಹೀಗೆಂದು ಆಕ್ಷೇಪಿಸಬಹುದು : ಶ್ರುತಿಯಲ್ಲಿ ಹೀಗೆಂದು ಹೇಳಿದೆ .

" जायमानो वै ब्राह्मणस्त्रिभिर्ऋणवा जायते, ब्रह्मचर्येण ऋषिभ्यो यज्ञेन देवेभ्यः प्रजया पितृभ्यः एष वा अनृणो यः पुत्री यज्वा ब्रह्मचारिवासी ॥ " ತೈ. ಸಂ. ೬-೩-೧೦-೫

'ಹುಟ್ಟಿದಮಾತ್ರಕ್ಕೇ ಒಬ್ಬೊಬ್ಬನೂ ಮೂರು ಋಣಗಳಿಂದ ಬದ್ಧನಾಗಿ ಹುಟ್ಟುತ್ತಾನೆ. ಬ್ರಹ್ಮಚರ್ಯೆಯಲ್ಲಿದ್ದುಕೊಂಡು ಶಾಸ್ತ್ರಾಭ್ಯಾಸವನ್ನು ಮಾಡಿ ಋಷಿಗಳ ಸಾಲವನ್ನು ತೀರಿಸಬೇಕು; ಯಜ್ಞಾದಿಗಳನ್ನು ಮಾಡಿ ದೇವತೆಗಳ ಸಾಲವನ್ನು ತೀರಿಸಬೇಕು; ಮಕ್ಕಳನ್ನು ಪಡೆದು ಪಿತೃಗಳ ಸಾಲವನ್ನು ತೀರಿಸಬೇಕು.' ಈ ಶ್ರುತಿವಚನದಂತೆ ಋಣತ್ರಯವನ್ನು ತೀರಿಸದೆ ಇರುವ ಭಕ್ತರು ಹೇಗೆ ಹೊಗಳಿಕೆಗೆ ಪಾತ್ರರಾದಾರು ?

ಋಣಾನಿ ತ್ರೀಣ್ಯಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್ ।
ಮನು. ೬-೩೫

ಎಂದು ಸ್ಮೃತಿಯೂ ಇದೆ. ಹೀಗಿರುವಲ್ಲಿ ಈ ಮೂರು ಋಣವನ್ನೂ ತೀರಿಸದೆ ಇದ್ದರೆ ಪರಮಪುರುಷಾರ್ಥವು ದೊರಕೀತೆ ?

ಈ ಆಕ್ಷೇಪಣೆಗೆ ಇಲ್ಲಿ ಸಮಾಧಾನವನ್ನು ಹೇಳಿದೆ: ಬ್ರಹ್ಮಚರ್ಯವಿಷಯದಲ್ಲಿಯೂ ಶಾಸ್ತ್ರಾಧ್ಯಯನವಿಷಯದಲ್ಲಿಯೂ ಹೇಳಬೇಕಾದದ್ದನ್ನು ಮೊದಲೇ

ಹೇಳಿದ್ದಾಗಿದೆ. ಪರಬ್ರಹ್ಮವಾದ ಭಗವಂತನಲ್ಲಿಯೇ ನಿಷ್ಠರಾಗಿರುವ ಭಕ್ತರಿಗಿಂತ ಹೆಚ್ಚಾದ ಬ್ರಹ್ಮಚಾರಿಗಳು ಮತ್ತೆ ಯಾರಿರುವರು? ಭಕ್ತರ ಮಾತುಗಳೆಲ್ಲ ಶಾಸ್ತ್ರಗಳೇ ಆಗಿರುತ್ತವೆ; ಇವರ ಮನ್ನಣೆಯಿಂದ ಶಾಸ್ತ್ರಗಳು ಸಚ್ಛಾಸ್ತ್ರಗಳೆನಿಸುತ್ತವೆ. ಹೀಗಿರುವದರಿಂದ ಭಕ್ತರಿಗೆ **ಋಷಿಋಣವಿಲ್ಲ.**

**ದೇವಋಣ**ವನ್ನು ಯಜ್ಞವೇ ಮುಂತಾದವುಗಳಿಂದಲೂ ಪೂಜಾದಿಗಳಿಂದಲೂ ತೀರಿಸಬೇಕಷ್ಟೆ? ಹಾಗೆ ತಮ್ಮನ್ನು ಸತ್ಕರಿಸದೆ ಇರುವವರು ಮೋಕ್ಷಮಾರ್ಗಕ್ಕೆ ಹೋಗದಂತೆ ದೇವತೆಗಳು ಅಡ್ಡಿಯನ್ನು ಮಾಡುವರೆಂದು

'**तस्मादेषां तन्न प्रियं यदेतन्मनुष्या विद्युः ।**' ಬೃ. ೧-೪-೧೦

ಎಂಬ ಶ್ರುತಿಯು ಸಾರುತ್ತಿರುವದು. ಆದರೆ ಭಕ್ತರಿಗೂ ಪರಮಾತ್ಮನಿಗೂ ಭೇದವಿಲ್ಲವೆಂದು ಹಿಂದೆಯೇ (ಸೂ. ೪೧, ೭೦) ಹೇಳಿದ್ದಾಗಿದೆ. ಹೀಗಿರುವದರಿಂದ ಭಕ್ತರು ದೇವತೆಗಳಿಗೂ ಆತ್ಮನೇ ಆಗಿರುತ್ತಾರೆ.

'**तस्य ह न देवाश्च नाभूत्या ईशते । आत्मा ह्येषां स भवति ॥**' ಬೃ. ೧-೪-೧೦

ಎಂಬ ಶ್ರುತಿಯಂತೆ ಪರಮಾತ್ಮಾಭಿನ್ನರಾದ ಭಕ್ತರು ಸಾರ್ವಾತ್ಮ್ಯವನ್ನು ಹೊಂದಿರುವದಕ್ಕೆ ದೇವತೆಗಳೂ ಅಡ್ಡಿಮಾಡಲಾರರು. ಅವರು ಅಡ್ಡಿಮಾಡುವದಿಲ್ಲವೆಂಬುದು ಹಾಗಿರಲಿ, ಭಕ್ತನು ಭೋಜನಾದಿಗಳಿಂದ ತೃಪ್ತನಾದರೆ ತಮಗೂ ತೃಪ್ತಿಯಾಗುವದಲ್ಲ! ಎಂಬ ಸಮಾಧಾನದಿಂದ ಸಂತುಷ್ಟರಾಗಿ ಪರಭಕ್ತರಾದವರನ್ನು ಕಂಡು ಸಂತೋಷದಿಂದ ಕುಣಿದಾಡುವರು.

ಲೋಕದಲ್ಲಿ ಆಸ್ತಿಕರಾದ ತಂದೆತಾಯಿಗಳು ತಾವು ಮಾಡುತ್ತಿರುವ ಕರ್ಮಗಳನ್ನು ಮಗನು ಮಾಡಿದರೆ ತಮಗೆ ಪಿತೃಲೋಕಜಯವು ಲಭಿಸುವದೆಂದು ಪ್ರಜಾಸಂತತಿಗಾಗಿ ಹಾತುವರಿಯುವರು. ಹಾಗಿಲ್ಲದೆ ಸತ್ಕರ್ಮಗಳನ್ನು ಮಾಡದೆ ಇರುವ ಮೂರ್ಖರಾದ ಮಕ್ಕಳು ಹುಟ್ಟಿದರೆ ಪಿತೃಗಳು ದುಃಖದಿಂದ ಅವರನ್ನು ಶಪಿಸುವರು. ಆದ್ದರಿಂದ ಪ್ರಜಾಸಂತತಿಯಿಂದ ಪಿತೃಋಣವನ್ನು ತೀರಿಸಬೇಕೆಂದು ಶ್ರುತಿಯಿರುವದು ಯುಕ್ತವೇ ಆಗಿದೆ. ಆದರೆ ಭಕ್ತರಾದವರು ಯಾವ ಕುಲದಲ್ಲಿ ಹುಟ್ಟುವರೋ ಆ. ಕುಲವೇ ಪವಿತ್ರವಾಗುವದೆಂದೂ (ಸೂ. ೬-೮ರಲ್ಲಿ) ಹೇಳಿದೆ. ಪಿತೃಗಳ ಋಣವನ್ನು ಭಕ್ತರು ಹೊರುವದಕ್ಕೆ ಬದಲು ಪಿತೃಗಳೇ ಭಕ್ತರ ಋಣದಲ್ಲಿ ಬಿದ್ದಿರುತ್ತಾರೆನ್ನಬಹುದು. ಆದ್ದರಿಂದ ತಮ್ಮ ಕುಲದಲ್ಲಿ ಒಬ್ಬ ಭಕ್ತನು ಹುಟ್ಟಿದನಲ್ಲ! ಎಂದು ಪಿತೃಗಳೂ ಹೃಷ್ಟರಾಗುವರು. ಅಗ್ನಿಷ್ವಾತ್ತಾದಿಪಿತೃದೇವತೆಗಳಿಗೂ ಭಕ್ತನು ಆತ್ಮನೇ ಆಗಿರುವದರಿಂದ ಅವರ ಸಂತೋಷಕ್ಕೂ ಅವನು ಕಾರಣನಾಗಿರುತ್ತಾನೆ. ಆದ್ದರಿಂದ **ಭಕ್ತರಿಗೆ ಪಿತೃಋಣವೂ ಇರುವದಿಲ್ಲ.** ಆದ್ದರಿಂದಲೇ ನಿಮಿರಾಜನನ್ನು ಕುರಿತು **ಕರಭಾಜನಋಷಿ**ಗಳು ಹೀಗೆಂದು ನುಡಿದಿರುತ್ತಾರೆ:

**ದೇವರ್ಷಿಭೂತಾಪ್ತನೃಣಾಂ ಪಿತ್ಯಾಣಾಂ**
**ನ ಕಿಙ್ಕರೋ ನಾಯಮೃಣೀ ಚ ರಾಜನ್ ।**
**ಸರ್ವಾತ್ಮನಾ ಯಃ ಶರಣಂ ಶರಣ್ಯಂ**
**ಗತೋ ಮುಕುನ್ದಃ ಪರಿಹೃತ್ಯ ಕರ್ತವ್ ॥**

ಭಾಗ. ೧೧-೫-೪೧

'ಎಲೈ ರಾಜನೆ, ದೇವತೆಗಳು, ಋಷಿಗಳು, ಪ್ರಾಣಿಗಳು, ಆಪ್ತಜನರು ಪಿತೃಗಳು, ಇವರಿಗೆ ಸರ್ವಕರ್ಮವನ್ನೂ ಬಿಟ್ಟು ಭಗವಂತನನ್ನೇ ಶರಣುಹೊಂದಿದ ಭಕ್ತನು ಎಂದಿಗೂ ಕಿಂಕರನಲ್ಲ, ಋಣಿಯೂ ಅಲ್ಲ.'

೧೩೧. ಇಂಥ ಭಕ್ತರು ಇರುವದರಿಂದಲೇ ಭೂಮಿಯು ಅನಾಯಕವಾಗದೆ ಇರುತ್ತದೆ. ಲೋಕದಲ್ಲಿ ಎಲ್ಲಿಯೂ ಭಕ್ತರಿಲ್ಲದ ಕಾಲವೇ ಇರುವದಿಲ್ಲ. ಯಾವ ದಾದರೂ ಕಾರಣದಿಂದ ಪಾಪವು ಹೆಚ್ಚಿ ಭಕ್ತರಿಗೆ ತೊಂದರೆಯಾದರೆ-

**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।**
**ಧರ್ಮಸಂಸ್ಥಾಪನಾರ್ಥಾಯ ಸಮ್ಭವಾಮಿ ಯುಗೇ ಯುಗೇ ॥**

ಗೀ. ೪-೮

'ಸಾಧುಗಳಾದ ಭಕ್ತರನ್ನು ಕಾಪಾಡುವದಕ್ಕೂ ಪಾಪಿಜನರನ್ನು ನಾಶಗೊಳಿಸು ವದಕ್ಕೂ ಧರ್ಮವನ್ನು ಸ್ಥಾಪನೆಮಾಡುವದಕ್ಕೂ ನಾನು ಯುಗಯುಗದಲ್ಲಿಯೂ ಅವತರಿಸುವೆನು' ಎಂದು ಭಗವಂತನು ವಾಗ್ದಾನಮಾಡಿರುತ್ತಾನೆ.

ಈವರೆಗೆ ಮುಖ್ಯಭಕ್ತರ ಹೆಚ್ಚುಗಾರಿಕೆಯನ್ನು ಹೊಗಳಿರುವದರಿಂದ ತಿಳಿದು ಕೊಳ್ಳಬೇಕಾದದ್ದೇನೆಂದರೆ :

**ಸ್ನಾತಂ ತೇನ ಸಮಸ್ತತೀರ್ಥಸಲಿಲೇ ಸರ್ವಾಪಿ ದತ್ತಾವನಿ-**
**ರ್ಯಜ್ಞಾನಾಂ ಚ ಸಹಸ್ರಮಿಷ್ಟಮಖಿಲಾ ದೇವಾಶ್ಚ ಸಂಪೂಜಿತಾಃ ।**
**ಸಂಸಾರಾಚ್ಚ ಸಮುದ್ಧೃತಾಃ ಸ್ವಪಿತರಸ್ತ್ರೈಲೋಕ್ಯಪೂಜ್ಯೋಽಪ್ಯಸೌ**
**ಯಸ್ಯ ಬ್ರಹ್ಮವಿಚಾರಣೇ ಕ್ಷಣಮಪಿ ಸ್ಥೈರ್ಯಂ ಮನಃ ಪ್ರಾಪ್ನುಯಾತ್ ॥**

**ಭಗವಚ್ಚಿಂತನೆಯಲ್ಲಿ ಒಂದು ಕ್ಷಣಮಾತ್ರವಾದರೂ ಮನಸ್ಸು ನಿಂತರೆ ಸಾಕು, ಅದಕ್ಕಿಂತ ಮಾಡಬೇಕಾಗಿರುವ ಯಾವ ಕೃತ್ಯವೂ ಉಳಿದಿರು ವದಿಲ್ಲ.** ಅಷ್ಟುಮಾತ್ರದಿಂದಲೇ ಭಕ್ತನು ಸಮಸ್ತತೀರ್ಥಗಳಲ್ಲಿಯೂ ಸ್ನಾನಮಾಡಿ ದಂತೆ ಆಗಿರುವದು, ಸಮುದ್ರಪರ್ಯಂತವಾಗಿರುವ ಸರ್ವಭೂಮಿಯನ್ನೂ ದಾನ ಮಾಡಿದ ಫಲವು ಪ್ರಾಪ್ತವಾಗಿರುವದು, ಸಾವಿರ ಯಜ್ಞಗಳನ್ನು ಮಾಡಿದ ಫಲವು ಅದರಿಂದ ಲಭಿಸಿರುವದು. ಎಲ್ಲಾ ದೇವತೆಗಳನ್ನೂ ಅಷ್ಟರಿಂದಲೇ ವಿಧಿವತ್ತಾಗಿ

ಪೂಜಿಸಿದಂತಾಗಿರುತ್ತದೆ. ಅಂಥ ಭಕ್ತನು ತನ್ನ ಪಿತೃಗಳನ್ನೆಲ್ಲ ಸಂಸಾರದಿಂದ ಉದ್ಧಾರನಾಧಿದವನಾಗುವನು. ಹೆಚ್ಚೇಕೆ ? ಅವನು ಮೂರು ಲೋಕಕ್ಕೂ ಪೂಜ್ಯನಾಗಿರುತ್ತಾನೆ !

ನಾಸ್ತಿ ತೇಷು ಜಾತಿವಿದ್ಯಾರೂಪಕುಲಧನಕ್ರಿಯಾದಿಭೇದಃ॥

೭೨. ಅವರುಗಳಲ್ಲಿ ಜಾತಿ, ವಿದ್ಯೆ, ರೂಪ, ಕುಲ, ಧನ, ಕರ್ಮ– ಮುಂತಾದವುಗಳಿಂದಾದ ಭೇದವು ಇರುವದಿಲ್ಲ.

ಯತಸ್ತದೀಯಾಃ ॥ ೭೩ ॥

೭೩. ಏಕೆಂದರೆ ಅವರು ಆತನವರು.

೧೩೨. ಭಕ್ತರು ಇಂಥ ಮಹಾಮಹಿಮರೆನ್ನಿಸಿಕೊಳ್ಳುವದಕ್ಕೆ ಅವರಲ್ಲಿ ಮಿಕ್ಕವರಿಗಿಂತ ಯಾವದಾದರೊಂದು ಶ್ರೇಷ್ಠವಾದ ಜಾತಿ, ಅಥವಾ ಯಾವದಾದರೊಂದು ಶಾಸ್ತ್ರದಲ್ಲಿ ಪಾರಂಗತರಾಗಿರುವಿಕೆ, ಯಾವದಾದರೊಂದು ಉತ್ಕೃಷ್ಟವಾದ ಕುಲದವರಾಗಿರುವಿಕೆ– ಇರಬೇಕು. ಅಥವಾ ಮಿಕ್ಕವರಿಗಿಂತ ಅವರು ಕೂಡಿಹಾಕಿಕೊಂಡಿರುವ ಧನರಾಶಿ, ಇಲ್ಲವೆ ಯಾವದೋ ಒಂದು ಉತ್ಕೃಷ್ಟವಾದ ಕರ್ಮದ ಅನುಷ್ಠಾನ– ಇವುಗಳಲ್ಲಿ ಯಾವದಾದರೊಂದು ನಿಮಿತ್ತವು ಇದ್ದಿರಬಹುದು ಎಂದು ಮೂಢರು ಭಾವಿಸಿಯಾರೆಂದು ಇಲ್ಲಿ ಆ ಭಾವನೆಯನ್ನು ತಿರಸ್ಕರಿಸಿರುತ್ತದೆ.

ಇಲ್ಲಿ ವಿವರಿಸಿರುವಂಥ ವಿಶೇಷಗಳು ಯಾವವೂ ಈ ಭಕ್ತರಲ್ಲಿರುವದಿಲ್ಲ.

(೧) ಗಜೇಂದ್ರ, ಹನುಮಂತ, ವಿಭೀಷಣ, ವಿದುರ, ಶಬರಿ– ಇವರು ಆನೆ, ಕಪಿ, ರಾಕ್ಷಸ, ಶೂದ್ರ, ಕಿರಾತ– ಈ ಯೋನಿಗಳಲ್ಲಿ ಹುಟ್ಟಿದ ಪರಮಭಕ್ತರಾಗಿದ್ದರು. (೨) ವಿದ್ಯೆಯೇ ಅವರಲ್ಲಿ ಹೆಚ್ಚುಗಾರಿಕೆಯೆನ್ನೋಣ ಎಂದರೆ ಗಜೇಂದ್ರನಿಗೆ ವಿದ್ಯೆಯೆಲ್ಲಿಯದು ? ಆದರೂ ಉತ್ತಮಭಕ್ತನಾಗಿದ್ದನಲ್ಲ ! (೩) ರೂಪವನ್ನು ತೆಗೆದುಕೊಂಡರೆ ಕುಬ್ಜೆಗೆ ರೂಪವೆಲ್ಲಿತ್ತು ? ಆದರೂ ಭಗವಂತನಿಗೆ ಮೆಚ್ಚಾದಳಲ್ಲ ! (೪) ಧನದ ದೃಷ್ಟಿಯಿಂದ ನೋಡಿದರೆ ಕುಚೇಲನಿಗಿಂತ ದರಿದ್ರನು ಯಾರು ? ಅವನು ಭಗವಂತನಿಗೆ ಸ್ನೇಹಿತನೆನಿಸಿಕೊಂಡಿರುತ್ತಾನೆ. (೫) ಕರ್ಮವನ್ನು ತೆಗೆದುಕೊಂಡರೆ ಧರ್ಮವ್ಯಾಧನಿಗೆ ಯಾವ ಆಚಾರವಿತ್ತು ? ಸೂತ್ರದಲ್ಲಿ 'ಮುಂತಾದವು' ಎಂದಿರುವದರಿಂದ (೬) ವಯಸ್ಸೂ ಪ್ರಧಾನವಲ್ಲ ಎಂದು ತಿಳಿಯಬೇಕು. ಧ್ರುವನು ಎಷ್ಟು ಚಿಕ್ಕವನಾದರೂ ಭಗವತ್ಪ್ರಿಯನಾಗಲಿಲ್ಲವೆ ? (೭) ಉಗ್ರಸೇನನಿಗೆ ಪೌರುಷವಿಲ್ಲದಿದ್ದರೂ ಭಕ್ತನೆನಿಸಿಲ್ಲವೆ ? ಇವೆಲ್ಲವನ್ನೂ ಈ ಶ್ಲೋಕದಲ್ಲಿ ಸಂಗ್ರಹಿಸಿದೆ :

ವ್ಯಾಧಸ್ಯಾಚರಣಂ ಧ್ರುವಸ್ಯ ಚ ವಯಃ ವಿದ್ಯಾ ಗಜೇನ್ದ್ರಸ್ಯ ಕಾ ।
ಕಾ ಜಾತಿರ್ವಿದುರಸ್ಯ ಯಾದವಪತೇರುಗ್ರಸ್ಯ ಕಿಂ ಪೌರುಷಮ್ ॥
ಕುಬ್ಜಾಯಾಃ ಕಮನೀಯರೂಪಮಧಿಕಂ ಕಿಂ ತತ್ ಸುಧಾಮ್ನೋ ಧನಮ್
ಭಕ್ತ್ಯಾ ರಕ್ಷತಿ ಕೇವಲಂ ನ ತು ಗುಣೈರ್ಭಕ್ತಿಪ್ರಿಯಃ ಶ್ರೀಹರಿಃ ॥

(ವ್ಯಾಧನಿಗೆ ಆಚಾರವೆಲ್ಲಿಯದು ? ಧ್ರುವನಿಗೆ ವಯಸ್ಸು, ಗಜೇಂದ್ರನಿಗೆ ವಿದ್ಯೆ ಯಾವದು ? ವಿದುರನ ಜಾತಿಯು ಯಾವದು ? ಯಾದವರಾಜನಾದ ಉಗ್ರಸೇನನ ಪೌರುಷವಾದರೂ ಯಾವದು ? ಕುಬ್ಜೆಗೆ ಹೆಚ್ಚಿನ ಸೌಂದರ್ಯವು ಯಾವದು ? ಕುಚೇಲನಿಗಿದ್ದ ಧನವು ಯಾವದು ? ಭಕ್ತಿಪ್ರಿಯನಾದ ಮಾಧವನು ಭಕ್ತಿಯಿಂದ ತುಷ್ಟನಾಗುತ್ತಾನೆಯೇ ಹೊರತು ಗುಣಗಳಿಂದಲ್ಲ). ಈ ಕೆಳಗಿನ ಭಾಗವತೋಕ್ತಿಗಳೂ ಈ ಅಭಿಪ್ರಾಯಕ್ಕೆ ಪೋಷಕಗಳಾಗಿರುತ್ತವೆ :

ನಾಲಂ ದ್ವಿಜತ್ವಂ ದೇವತ್ವಮೃಷಿತ್ವಂ ವಾಽಸುರಾತ್ಮಜಾಃ ।
ಪ್ರೀಣನಾಯ ಮುಕುನ್ದಸ್ಯ ನ ವೃತ್ತಂ ನ ಬಹುಜ್ಞತಾ ॥
ನ ದಾನಂ ನ ಜಪೋ ನೇಜ್ಯಾ ನ ಶೌಚಂ ನ ವ್ರತಾದಿ ಚ ।
ಪ್ರೀಯತೇಽಮಲಯಾ ಭಕ್ತ್ಯಾ ಹರಿರನ್ಯದ್ ವಿಡಮ್ಬನಮ್ ॥

ಭಾಗ. ೭-೭-೫೧, ೫೨

"(ಪ್ರಹ್ಲಾದನು ಹೇಳುತ್ತಿದಾನೆ) : ಎಲೈ ಅಸುರಬಾಲಕರೆ, ದ್ವಿಜನಾಗಿರುವದಾಗಲಿ ದೇವತೆಯಾಗಿರುವದಾಗಲಿ ಋಷಿಯಾಗಿರುವದಾಗಲಿ ಮುಕುಂದನನ್ನು ಪ್ರೀತಿಗೊಳಿಸುವದಕ್ಕೆ ಸಾಕಾಗಲಾರದು ; ನಡತೆಯೂ ಸಾಲದು. ಬಹಳ ಶಾಸ್ತ್ರಜ್ಞಾನವಿದ್ದರೂ ಸಾಲದು. ದಾನವಾಗಲಿ, ಜಪವಾಗಲಿ, ಯಜ್ಞವಾಗಲಿ, ಶೌಚವಾಗಲಿ, ವ್ರತವಾಗಲಿ, ಸಾಲದು. ನಿರ್ಮಲವಾದ ಭಕ್ತಿಯಿಂದಲೇ ಶ್ರೀಹರಿಯು ಪ್ರೀತನಾಗುವನು. ಮಿಕ್ಕದ್ದೆಲ್ಲ ಬರಿಯ ಆಟ.

ಮನ್ಯೇ ಧನಾಭಿಜನರೂಪತಪಃಶ್ರುತೌಜ-
ಸ್ತೇಜಃ ಪ್ರಭಾವಬಲಪೌರುಷಬುದ್ಧಿಯೋಗಾಃ ।
ನಾರಾಧನಾಯ ಹಿ ಭವನ್ತಿ ಪರಸ್ಯ ಪುಂಸೋ
ಭಕ್ತ್ಯಾ ತುತೋಷ ಭಗವಾನ್ ಗಜಯೂಥಪಾಯ ॥

ಭಾಗ. ೭-೯-೯

ಧನ, ಆಪ್ತಜನರು, ರೂಪ, ತಪಸ್ಸು, ಓದು, ಬಲ, ಕಾಂತಿ, ಶಕ್ತಿ, ದೊಡ್ಡಸ್ತಿಕೆ, ಪರಾಕ್ರಮ, ಜ್ಞಾನ– ಇವು ಯಾವವೂ ಭಗವಂತನು ಪ್ರೀತನಾಗಲು ಮುಖ್ಯವಲ್ಲ. ಗಜೇಂದ್ರನ ಭಕ್ತಿಯೊಂದರಿಂದಲೇ ಭಗವಂತನು ತುಷ್ಟನಾದನಲ್ಲವೆ ?

## ತದೀಯತ್ವ

೧೩೩. ಭಕ್ತರ ಜಾತಿಯೇ ಮುಂತಾದ ವಿಶೇಷಗುಣಗಳೇನೂ ಅವರ ಹೆಚ್ಚಿಕೆಗೆ ಕಾರಣವಲ್ಲವೆಂದು ಹೇಳಿದ್ದಾಯಿತಷ್ಟೆ? ಇದಕ್ಕೆ ಕಾರಣವೇನೆಂದರೆ ಭಕ್ತರು ಯಾವ ಜಾತಿಗೇ ಸೇರಿರಲಿ, ಯಾವ ಕುಲದವರೇ ಆಗಿರಲಿ, ಯಾವ ರೂಪದವರೇ ಆಗಿರಲಿ, ಎಷ್ಟೇ ವಿದ್ಯಾವಿಹೀನರಾಗಿರಲಿ ಅಥವಾ ದರಿದ್ರರಾಗಿರಲಿ–ಭಗವಂತನು ಅದು ಯಾವದನ್ನೂ ಲೆಕ್ಕಕ್ಕೆ ಹಿಡಿಯುವದಿಲ್ಲ. ಈ ಜಾತ್ಯಾದಿಗಳಲ್ಲಿ ಅವರು ಮೇಲಾಗಿರಲಿ, ಕೀಳಾಗಿರಲಿ, ಅದನ್ನು ಲಕ್ಷ್ಯದಲ್ಲಿಡದೆ ಪ್ರೇಮದಿಂದ ಯಾರುಯಾರು ತನ್ನನ್ನು ಭಜಿಸುವರೋ ಅವರೆಲ್ಲರನ್ನೂ ತನ್ನವರೆಂದೇ ಆತನು ಎಣಿಸುತ್ತಾನೆ.

**ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।**
**ಯೇ ಭಜನ್ತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥**
ಗೀ. ೯–೨೯

'ನಾನು ಎಲ್ಲಾ ಪ್ರಾಣಿಗಳಲ್ಲಿಯೂ ಸಮನಾಗಿಯೇ ಇರುತ್ತೇನೆ. ಜೀವರುಗಳಲ್ಲಿ ಯಾವನೊಬ್ಬನೂ ನನಗೆ ಹಗೆಯಲ್ಲ, ಯಾವನೊಬ್ಬನೂ ತನಗೆತಾನೇ ಪ್ರಿಯನಾಗಿರುವದಿಲ್ಲ. ಯಾರು ನನ್ನನ್ನು ಭಕ್ತಿಯಿಂದ ಭಜಿಸುತ್ತಿರುವರೋ ಅವರು ನನ್ನಲ್ಲಿರುವರು, ಅವರಲ್ಲಿ ನಾನಿರುವೆನು' ಎಂದು ಭಗವಂತನು ತನ್ನ ನಿಷ್ಪಕ್ಷಪಾತವಾದ ಭಕ್ತಿಪ್ರೇಮವನ್ನು ಪ್ರಕಟಿಸಿರುತ್ತಾನೆ. ಹೀಗಿರುವದರಿಂದ ಭಕ್ತರ ಜಾತಿವಿದ್ಯಾರೂಪಕುಲಧನಕರ್ಮಾದಿಗಳ ಹೆಚ್ಚುಗಾರಿಕೆಯನ್ನಾಗಲಿ ಕುಂದನ್ನಾಗಲಿ ಎತ್ತಿಎಣಿಸಬಾರದು. ಅವರೆಲ್ಲರೂ ಭಕ್ತರೆಂಬುದೇ ಹೆಚ್ಚುಗಾರಿಕೆ.

## ಸೂತ್ರಗಳಿಗೆ ಇನ್ನೊಂದು ಅರ್ಥ

೧೩೪. ಈ ಎರಡು ಸೂತ್ರಗಳಿಗೆ ಬೇರೆ ಒಂದು ಅರ್ಥವನ್ನೂ ಹೇಳಬಹುದು. ಭಕ್ತರುಗಳ ಕಣ್ಣಿನಲ್ಲಿ ಜಾತಿಯೇ ಮುಂತಾದ ಭೇದವಿರುವದಿಲ್ಲ.

**ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।**
**ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ ॥** ಗೀ. ೫–೧೮

'ವಿದ್ಯಾವಿನಯಗಳಿಂದೊಡಗೂಡಿರುವ, ಬ್ರಾಹ್ಮಣ, ಎತ್ತು, ಆನೆ, ನಾಯಿ, ಚಂಡಾಲ– ಇವರು ಜನ್ಮದಿಂದ ಸಾತ್ತ್ವಿಕರಾಜಸತಾಮಸಗುಣಗಳಿಂದ ಭಿನ್ನಭಿನ್ನರಾಗಿ ವ್ಯವಹಾರದಲ್ಲಿ ಕಾಣಿಸುತ್ತಿರಬಹುದು. ಹೊರಗೆ ಕಾಣುವ ಪ್ರಾಣಿಗಳಲ್ಲಿ ಜಾತ್ಯಾದಿಕೃತವಾದ ಯಾವ ಭೇದವೇ ಇರಲಿ, ಎಲ್ಲರಲ್ಲಿಯೂ ಒಬ್ಬನೇ ಭಗವಂತನೇ ಅವುಗಳಲ್ಲೆಲ್ಲ ಇರುತ್ತಾನೆಂಬ ಸಮಬುದ್ಧಿಯನ್ನೇ ಅವರು ಅವಲಂಬಿಸಿರುತ್ತಾರೆ– ಎಂಬುದು ಮೊದಲನೆಯ ಸೂತ್ರದ ಅಭಿಪ್ರಾಯ.

**ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ ।**
**ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ ಬ್ರಹ್ಮಣಿ ತೇ ಸ್ಥಿತಾಃ ॥**
ಗೀ. ೫–೧೯

ಎಂದಿರುವಂತೆ ಪರಮಾತ್ಮನು ಯಾವ ದೋಷವೂ ಇಲ್ಲದವನಾಗಿರುವದರಿಂದಲೂ ಆತನು ಸರ್ವರನ್ನೂ ಸಮನಾಗಿಯೇ ಕಾಣುತ್ತಿರುವದರಿಂದಲೂ ಕೀಳುಮೇಲುಗಳು ಆತನಿಗೆ ಸಂಬಂಧಪಡದೆ ಇರುವದರಿಂದಲೂ ಆತನವರೇ ಆಗಿ ಆತನಲ್ಲಿಯೇ ಮನಸ್ಸನ್ನಿಟ್ಟುಕೊಂಡಿರುವ ಭಕ್ತರಿಗೂ ಇವುಗಳ ಸಂಬಂಧವಿಲ್ಲದಿರುವದರಿಂದ ಅವರಿಗೆ ಈ ಸಮಬುದ್ಧಿಯು ಸಾಧ್ಯವಾಗಿರುತ್ತದೆ ಎಂಬುದು ಎರಡನೆಯ ಸೂತ್ರದ ಅರ್ಥ.

ಅಂತೂ ಹೀಗೆ ಭಕ್ತರು ಪ್ರಾಣಿಗಳಲ್ಲಿ ಜಾತಿ ಮುಂತಾದವುಗಳ ಭೇದವು ಯಾವದೇ ಇದ್ದರೂ ಅದನ್ನು ಲೆಕ್ಕಿಸದೆ ಸಮದೃಷ್ಟಿಯಿಂದ ಸರ್ವರಲ್ಲಿಯೂ ಒಬ್ಬ ಪರಮಾತ್ಮನನ್ನೇ ಕಾಣುತ್ತಿರುವರೆಂದೂ ಅವರು ತಾವೂ ಜಾತಿಯೇ ಮುಂತಾದ ಯಾವ ಹೆಚ್ಚುಗಾರಿಕೆಯಿಂದಲೂ ಪ್ರಸಿದ್ಧರಾಗದೆ ಭಗವದ್ಭಕ್ತಿಯಿಂದಲೇ ಸರ್ವರಿಗೂ ಪೂಜ್ಯರಾಗಿರುವರೆಂದೂ ಈ ಸೂತ್ರಗಳ ಒಟ್ಟರ್ಥವೆಂದು ಹೇಳಬಹುದು.

ಹೀಗಿರುವದರಿಂದ ಭಕ್ತಿಗೆ ಎಲ್ಲರೂ ಅಧಿಕಾರಿಗಳೆಂದು ತಿಳಿಯಬೇಕು. ಸಾಧಕರಾದವರು ತಮ್ಮ ಜಾತಿಯೇ ಮುಂತಾದವುಗಳ ಕಡೆಗೆ ಮನಸ್ಸನ್ನು ಹಾಕದೆ ಭಕ್ತಿಯೊಂದಕ್ಕೇ ಬೆಲೆಯನ್ನು ಕೊಡಬೇಕು–ಎಂಬುದೇ ಇಲ್ಲಿ ತಿಳಿಯಬೇಕಾದದ್ದು.

## ೧೮. ಸಾಧಕರು ಹೇಗೆ ವರ್ತಿಸಬೇಕು ?

ವಾದೋ ನಾವಲಮ್ಬ್ಯಃ ॥ ೭೪ ॥

೭೪. ಚರ್ಚೆಯನ್ನು ಆಶ್ರಯಿಸಬಾರದು.

ಬಾಹುಲ್ಯಾವಕಾಶತ್ವಾದನಿಯತತ್ವಾತ್ ॥ ೭೫ ॥

೭೫. ಏಕೆಂದರೆ ಅದು ಬೆಳೆಯುವದಕ್ಕೆ ಎಡೆಯನ್ನು ಕೊಡುತ್ತದೆ, ಮತ್ತು ಅದು ನಿಲುಗಡೆಯಿಲ್ಲದ್ದಾಗಿರುತ್ತದೆ.

೧೩೫. ಈಗ ಸಾಧಕನು ಲಕ್ಷ್ಯದಲ್ಲಿಡಬೇಕಾಗುವ ಕೆಲವು ಅಂಶಗಳನ್ನು ತಿಳಿಯಿಸುವದಕ್ಕೆ ಹೊರಟಿರುತ್ತಾರೆ. ಭಕ್ತಿಯನ್ನು ಸಂಪಾದಿಸಿಕೊಳ್ಳಬೇಕೆನ್ನುವವನು ಮೊಟ್ಟಮೊದಲು ವಾದವನ್ನು ಬಿಟ್ಟುಬಿಡಬೇಕು. ಇಲ್ಲಿ ವಾದಶಬ್ದದ ಅರ್ಥದಲ್ಲಿ ರಾಗದ್ವೇಷಾದಿಗಳಿಲ್ಲದವರು ತತ್ತ್ವನಿರ್ಣಯಕ್ಕಾಗಿ ಮಾಡುವ ಪರಸ್ಪರವಿಚಾರವಿನಿಮಯವನ್ನು ಸೇರಿಸಿಲ್ಲ. ಏಕೆಂದರೆ ಭಗವಂತನು 'ವಾದಃ ಪ್ರವದತಾಮಹಮ್'

(ಗೀ. ೧೦-೩೨) ಎಂದು ಇಂಥ ವಾದವನ್ನು ತನ್ನ ವಿಭೂತಿಯೆಂದೇ ಕರೆದಿರುತ್ತಾನೆ. ಪ್ರತ್ಯಕ್ಷವೆಂಬ ಪ್ರಮಾಣಕ್ಕೆ ಕಾರಣವಾಗಿರುವ ಇಂದ್ರಿಯಗಳು, ಪ್ರತ್ಯಕ್ಷದಿಂದ ಮತ್ತು ಅಸಾಧಾರಣವಾದ ಲಿಂಗದ (ಎಂದರೆ ಸಾಹಚರ್ಯವಿರುವ ಗುರುತಿನ) ತಿಳಿವಳಿಕೆಯಿಂದ ಮಾಡಿಕೊಳ್ಳುವ ಅನುಮಿತಿಯೆಂಬ ಜ್ಞಾನಕ್ಕೆ ಸಾಧನವಾಗಿರುವ **ವ್ಯಾಪ್ತಿಪರಾಮರ್ಶ**, ಹೋಲಿಕೆಯಿಂದಾಗುವ ಉಪಮಿತಿಗೆ ಸಾಧನವಾಗಿರುವ **ಉಪಮಾನ**, ಪರೋಕ್ಷವಾಗಿರುವ ವಸ್ತುಜ್ಞಾನಕ್ಕೆ ಸಾಧನವಾಗಿರುವ **ಆಪ್ತವಾಕ್ಯ**-ಮುಂತಾದ ಪ್ರಮಾಣಗಳು ಜ್ಞಾನಕ್ಕೆ ಸಾಧನವಾಗಿರುತ್ತವೆಯಷ್ಟೆ ? ಈ ಪ್ರಮಾಣಗಳು ಸರಿಯಾಗಿವೆಯೊ, ಇಲ್ಲವೊ ? ಎಂಬುದನ್ನು ಗೊತ್ತುಪಡಿಸುವದಕ್ಕಾಗಿ ಶೋಧಕವಾಗಿರುವ **ತರ್ಕ**ವನ್ನು ಉಪಯೋಗಿಸುವದು ಲೋಕದಲ್ಲಿ ಪ್ರಸಿದ್ಧವಾಗಿದೆ. ಆದರೆ ಬರಿಯ ತರ್ಕದಿಂದಲೇ ಯಾವ ಜ್ಞಾನವೂ ಉಂಟಾಗಲಾರದು. ಪ್ರಮಾಣದಿಂದ ಸುನಿಶ್ಚಿತವಾಗಿ ತಿಳಿದಮೇಲೂ ಆ ವಿಷಯಕ್ಕೆ ಸಂಶಯವೇ ಇರುವದಿಲ್ಲವಾದ್ದರಿಂದ ಅಲ್ಲಿಯೂ ತರ್ಕಕ್ಕೆ ಅವಕಾಶವಿರುವದಿಲ್ಲ; ನಮಗೆ ಆಗುವ ಬೇರೆ ಬೇರೆಯ ಬರಿಯ ಅನುಭವಗಳನ್ನು ಒಂದಕ್ಕೊಂದನ್ನು ಹೊಂದಿಸಿಕೊಂಡು ತತ್ತ್ವವನ್ನು ನಿಶ್ಚಯಿಸುವದಕ್ಕಾಗಿಯೂ ತರ್ಕವನ್ನು ಮಾಡಬೇಕಾಗಿಬರಬಹುದು. ಆದರೆ ಸಂದೇಹವಿಲ್ಲದಂತೆ ವಿಷಯದ ಅನುಭವವಾದಮೇಲೆ ತರ್ಕಕ್ಕೆ ಅವಕಾಶವಾದರೂ ಎಲ್ಲಿರುತ್ತದೆ ? ಈ ಕಾರಣದಿಂದಲೇ ಪರಭಕ್ತಿಯು ಅನುಭವರೂಪವಾಗಿರುವದರಿಂದ (ಸೂ. ೫೪) ಸಿದ್ಧರಾದ ಭಕ್ತರಿಗೆ ಯಾವ ತರ್ಕವೂ ಬೇಕೇ ಇರುವದಿಲ್ಲ. ಸಾಧಕರಾದವರು ಶಾಸ್ತ್ರವಾಕ್ಯಗಳ ಅರ್ಥವನ್ನು ನಿರ್ಣಯಮಾಡಿಕೊಳ್ಳುವದಕ್ಕೆ ಒಬ್ಬರೊಡನೊಬ್ಬರು ತರ್ಕವನ್ನವಲಂಬಿಸಿ ಚರ್ಚಿಸುವದಕ್ಕೆ ಅಡ್ಡಿಯಿಲ್ಲ. ಆದರೆ

**ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।**
**ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥**

ಮ. ಭಾ.

ಎಂಬ ವ್ಯಾಸೋಕ್ತಿಯಂತೆ ಶಾಸ್ತ್ರಗಳನ್ನೆಲ್ಲ ಕಡೆದುಕಡೆದು ಮತ್ತೆಮತ್ತೆ ವಿಚಾರಮಾಡಿದ್ದರಲ್ಲಿ ಒಂದೇಒಂದು ಸಿದ್ಧಾಂತವು ಏರ್ಪಡುವದು ; ಅದೇನೆಂದರೆ ಶ್ರೀಮನ್ನಾರಾಯಣನನ್ನು ಯಾವಾಗಲೂ ಚಿಂತಿಸುತ್ತಿರಬೇಕು. ಇಷ್ಟು ಗೊತ್ತಾದಮೇಲೂ ಯಾವನುತಾನೆ ಒಣಚರ್ಚೆಗೆ ಹೋದಾನು ? ಸರ್ವಕರ್ಮವನ್ನೂ ಸಂನ್ಯಾಸಮಾಡಿ ಪರಮಾತ್ಮಚಿಂತನೆಯಲ್ಲಿಯೇ ನಿಂತವರ ಧರ್ಮಗಳನ್ನು ಉಪದೇಶಿಸುವಾಗ ಭಗವಂತನು ಹೀಗೆಂದು ಹೇಳಿರುತ್ತಾನೆ :

**ವೇದವಾದರತೋ ನ ಸ್ಯಾನ್ನ ಪಾಖಣ್ಡೀ ನ ಹೈತುಕಃ ।**
**ಶುಷ್ಕವಾದವಿವಾದೇ ನ ಕಿಞ್ಚಿತ್ ಪಕ್ಷಂ ಸಮಾಶ್ರಯೇತ್ ॥**

ಭಾಗ. ೧೧-೧೮-೩೦

'ವೇದದ ಅರ್ಥವಾದದಲ್ಲಿಯೇ ನಿರತನಾಗಿರಬಾರದು, ಪಾಖಂಡಿತನದಿಂದ ನಾಸ್ತಿಕನಾಗಬಾರದು, ಎಲ್ಲಕ್ಕೂ ಹೇತುಪಕ್ಷಸಾಧ್ಯವೆಂಬ ಅನುಮಾನವನ್ನೇ ಸೇವಿಸುತ್ತಾ ಕೂರಬಾರದು. ಒಣವಾದವಿವಾದಗಳನ್ನು ಅವಲಂಬಿಸಿ ಯಾವದೊಂದು ಪಕ್ಷವನ್ನೂ ಆಶ್ರಯಿಸಬಾರದು.' ಆದ್ದರಿಂದ ತರ್ಕವನ್ನು ಬದಿಗಿಟ್ಟು ಸಂತತವಾಗಿ ಶ್ರೀಹರಿಯನ್ನೇ ಚಿಂತಿಸುತ್ತಿದ್ದರೆ :

**ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।**
**ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥**
**ತೇಷಾಮೇವಾನುಕಮ್ಪಾರ್ಥಮಹಮಜ್ಞಾನಜಂ ತಮಃ ।**
**ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥**

ಗೀ. ೧೦-೧೦, ೧೧

ಎಂದು ಭಗವಂತನು ವಾಗ್ದಾನವಿತ್ತಿರುವಂತೆ ನಮ್ಮ ಬುದ್ಧಿಗೆ ದಿಗ್ದರ್ಶನವನ್ನುಮಾಡಿ ನಮ್ಮ ಮೇಲಿನ ಮರುಕದಿಂದ ಅಜ್ಞಾನದ ಕಗ್ಗತ್ತಲೆಯನ್ನು ಝಗಝಗಿಸುತ್ತಿರುವ ಜ್ಞಾನದೀಪದಿಂದ ತಾನೇ ಕಳೆಯುವನು. ಹೀಗಿರುವದರಿಂದ ಸಾಧಕನಾದವನು ಎಂದಿಗೂ ಒಣವಾದಕ್ಕೆ ಒಲಿಯಬಾರದು ; ಎಂದಿಗೂ ಯಾರನ್ನೂ ವಾದ ವಿವಾದಗಳೊಳಗೆ ಸಿಕ್ಕಿಸಬಾರದು, ಒಂದುವೇಳೆ ಮತ್ತೊಬ್ಬರು ನಮ್ಮನ್ನು ಚರ್ಚೆಗೆ ಕರೆದರೂ ಸುಮ್ಮನಿರಬೇಕು, ಇಲ್ಲವೆ ತನ್ನ ದಾರಿಯನ್ನು ಹಿಡಿದುಕೊಂಡುಹೋಗಿ ಬಿಡಬೇಕು.

೧೩೭. ಬರಿಯ ತರ್ಕಕ್ಕೆ ಸಿಕ್ಕಿಕೊಳ್ಳಬಾರದೆಂಬುದಕ್ಕೆ ಅದರಿಂದ ತತ್ತ್ವವು ಅನುಭವಕ್ಕೆ ಬರಲಾರದೆಂಬುದೇ ಅಲ್ಲದೆ ಇನ್ನೂ ಎರಡು ದೋಷಗಳು ಅದರಲ್ಲಿರುವದು ಕಾರಣವಾಗಿದೆ. ಮೊದಲನೆಯದಾಗಿ ಚರ್ಚೆಯನ್ನು ಮಾಡಿದಹಾಗೆಲ್ಲ ಮಾತಿಗೆಮಾತುಸೇರಿ ಚರ್ಚೆಯು ಬೆಳೆಯುತ್ತಾಹೋಗುವದು. ಬರಿಯ ಶಬ್ದ ಜಾಲಕ್ಕೆ ಸಿಕ್ಕಿದವನಿಗೆ ಮಾತನ್ನು ಎಲ್ಲಿಗೆ ನಿಲ್ಲಿಸಬೇಕೆಂಬುದೇ ತಿಳಿಯದೆಹೋಗುವದು, ಮನಸ್ಸಿಗೆ ವಿಕ್ಷೇಪವುಂಟಾಗುವದು. ಎರಡನೆಯದಾಗಿ ಒಣತರ್ಕಕ್ಕೆ ನಿಲುಗಡೆಯೇಇರುವದಿಲ್ಲ. ಈಗ ಒಬ್ಬನು ಒಂದು ಬಲವಾದ ಹೇತುವಾದವನ್ನು ಹೂಡಿ ಎಲ್ಲರನ್ನೂ ಜಯಿಸಿದ್ದರೂ ಇನ್ನುಮೇಲೆ ಪ್ರತಿವಾದಿಯೇ ಆಗಲಿ, ಮತ್ತೊಬ್ಬರಾಗಲಿ ಮೊದಲನೆಯ ವಾದಿಯು ಮುಂದಿಟ್ಟಿದ್ದ ತರ್ಕವನ್ನು ಖಂಡಿಸುವದಕ್ಕೆ ಆಗುವದಿಲ್ಲವೆಂಬ ನಿಶ್ಚಯವು ಎಂದಿಗೂ ಆಗುವಂತಿಲ್ಲ. ಆದ್ದರಿಂದ ಅಧ್ಯಾತ್ಮವಿಚಾರವನ್ನು ಅನುಭವದಿಂದ ನಿಶ್ಚಯಿಸಬೇಕೇ ಹೊರತು ಒಣಹರಟೆಯಿಂದ ನಿಶ್ಚಯಿಸಿಕೊಳ್ಳುವದಕ್ಕೆ ಹೋಗಿ ಮನಸ್ಸಿಗೆ ಅಶಾಂತಿಯನ್ನುಂಟುಮಾಡಿಕೊಳ್ಳಬಾರದು.

ಭಕ್ತಿಶಾಸ್ತ್ರಾಣಿ ಮನನೀಯಾನಿ
ತದುದ್ಬೋಧಕಕರ್ಮಾಣಿ ಕರಣೀಯಾನಿ ॥ ೭೬ ॥

೭೬. ಭಕ್ತಿಶಾಸ್ತ್ರಗಳನ್ನು ಮನನಮಾಡಬೇಕು, ಭಕ್ತಿಯನ್ನು ಎಚ್ಚರಗೊಳಿಸುವ ಕರ್ಮಗಳನ್ನು ಮಾಡುತ್ತಿರಬೇಕು.

೧೩೭. ಶಾಸ್ತ್ರಕ್ಕಾಗಿ ಶಾಸ್ತ್ರವನ್ನು ಪಠಿಸುವದನ್ನೂ ತರ್ಕಕ್ಕಾಗಿ ತರ್ಕವನ್ನು ಮಾಡುವದನ್ನೂ ಬಿಡಬೇಕೆಂದು ಹೇಳಿದಮಾತ್ರದಿಂದ ಅನುಭವಕ್ಕೆ ಬೇಕಾದ ಶಾಸ್ತ್ರಗಳನ್ನು ಓದಿ ಅವುಗಳ ಅರ್ಥವನ್ನು ನಿರ್ಣಯಮಾಡಿಕೊಳ್ಳುವದನ್ನೂ ಕೈಬಿಡಬೇಕೆಂದು ಎಂದಿಗೂ ತಿಳಿಯಬಾರದು. ಭಕ್ತಿಯ ವಿಷಯವಾಗಿರುವ ಶಾಸ್ತ್ರಗಳನ್ನು ಅವಶ್ಯವಾಗಿ ಓದಿ ಮನಸ್ಸಿನಲ್ಲಿ ಅವುಗಳ ಅರ್ಥವನ್ನು ಮೆಲುಕುಹಾಕುತ್ತಿರಬೇಕು. ಭಗವದ್ಗೀತೆ, ವಿಷ್ಣುಪುರಾಣ– ಮುಂತಾದ ಭಕ್ತಿಪ್ರಧಾನವಾದ ಗ್ರಂಥಗಳನ್ನು ಓದುವದರಿಂದ ಹೃದಯದಲ್ಲಿ ಭಕ್ತಿಯು ಉಕ್ಕೇರುವದು. ಈಗಿನ ಕಾಲದ ಸಾಧಕರು ಭರತಖಂಡದಲ್ಲಿ ಈಚೆಗೆ ಆಗಿಹೋಗಿರುವ ಸಾಧುಸಂತರ ಚರಿತ್ರೆಗಳನ್ನೂ ಅವರ ಉಪದೇಶಗಳನ್ನೂ ಪಠಿಸುವದರಿಂದಲೂ ಅವುಗಳ ಅರ್ಥವನ್ನು ಮನಸ್ಸಿನಲ್ಲಿ ಚಿಂತನೆ ಮಾಡಿ ಸಾಧುಮಾರ್ಗದಲ್ಲಿರುವ ಮಹನೀಯರ ಸಹಾಯದಿಂದ ಭಕ್ತಿಶಾಸ್ತ್ರಗಳ ತಾತ್ಪರ್ಯವನ್ನು ಚಿಂತಿಸುವದರಿಂದಲೂ ಪ್ರಯೋಜನವುಂಟು. ಶಾಸ್ತ್ರಗಳ ಶಾಸ್ತ್ರತ್ವವೂ ಮನನದ ಮನನತ್ವವೂ ಭಗವಂತನಿಗೆ ಸಂಬಂಧಪಟ್ಟಿರುವದರಿಂದಲೇ ಆಗಿರುವದೆಂಬುದನ್ನು ಇಲ್ಲಿ ನೆನಪಿಡಬೇಕು.

ಭಕ್ತಿಯನ್ನು ಎಚ್ಚರಿಸುವ ಕರ್ಮಗಳು ಎಂದರೆ ಸ್ವಧರ್ಮವನ್ನು ಭಗವಂತನ ಅರ್ಚನೆಯೆಂಬ ಭಾವನೆಯಿಂದ ಮಾಡುತ್ತಿರುವದು, ಭಗವಂತನ ಮಹಿಮೆಯನ್ನೂ ಭಕ್ತರ ಉಪದೇಶಗಳನ್ನೂ ಒಳಗೊಂಡಿರುವ ಗ್ರಂಥಗಳನ್ನು ಪಾರಾಯಣಮಾಡುತ್ತಿರುವದು, ಭಗವನ್ನಾಮದ ಜಪ, ಕೀರ್ತನೆ, ತೀರ್ಥಕ್ಷೇತ್ರಾದಿಗಳ ದರ್ಶನ, ಮಹಾತ್ಮರ ದರ್ಶನಸೇವಾದಿಗಳು– ಇಂಥ ಕರ್ಮಗಳು. ಅವುಗಳನ್ನು ಅವಶ್ಯವಾಗಿ ಮಾಡುತ್ತಿರಬೇಕು.

ಸುಖದುಃಖೇಚ್ಛಾಲಾಭಾದಿತ್ಯಕ್ತೇ ಕಾಲೇ ಪ್ರತೀಕ್ಷ್ಯಮಾಣೇ
ಕ್ಷಣಾರ್ಧಮಪಿ ವ್ಯರ್ಥಂ ನ ನೇಯಮ್ ॥ ೭೭ ॥

೭೭. ಸುಖದುಃಖಗಳು, ಇಚ್ಛೆ, ಲಾಭ– ಮುಂತಾದವುಗಳಿಲ್ಲದ ಕಾಲವನ್ನೇ ಕಾಯ್ದುಕೊಂಡಿರುವದರಿಂದ (ಅದು ಸಿಕ್ಕಿದಾಗ) ಅರ್ಧಕ್ಷಣವನ್ನುಕೂಡ ವ್ಯರ್ಥವಾಗಿ ಕಳೆಯಬಾರದು.

೧೩೮. ವ್ಯವಹಾರದಲ್ಲಿರುವವರೆಗೆ ಮನಸ್ಸು ಸುಖ, ದುಃಖ, ಇಚ್ಛೆ, ದ್ವೇಷ, -ಮುಂತಾದ ದ್ವಂದ್ವಗಳ ಹೊಡೆತಕ್ಕೆ ಸಿಕ್ಕಿರುವದು ಎಲ್ಲರಿಗೂ ಸ್ವಭಾವವಾಗಿರುತ್ತದೆ. ಒಮ್ಮೊಮ್ಮೆ ಯಾವದಾದರೂ ನಿಮಿತ್ತದಿಂದ ಸುಖವುಂಟಾದಾಗ 'ಇನ್ನೇನು ? ನನಗೆ ಏತಕ್ಕೂ ಕಡಿಮೆಯಿಲ್ಲ' ಎಂಬ ಹರ್ಷವುಂಟಾಗುವದು ; ಇನ್ನೊಮ್ಮೆ 'ಅಯ್ಯೋ ! ಇಂಥ ಕಷ್ಟಕ್ಕೆ ಸಿಕ್ಕಿಕೊಂಡೆನಲ್ಲ ! ನನಗಿನ್ನೇನುಗತಿ ? ಇನ್ನು ನಾನು ಏನುಮಾಡಿದರೆತಾನೆ ಏನು ಪ್ರಯೋಜನ ?' ಎಂಬ ವಿಷಾದವು ಬಂದು ಕುಗ್ಗಿಸಿ ಬಿಡುತ್ತದೆ. ಒಂದೊಂದು ಸಲ, 'ಇದು ಬೇಕು ಇದಕ್ಕಾಗಿ ಯಾವದಾದರೂ ಪ್ರಯತ್ನ ವನ್ನು ಮಾಡಿಯೇತೀರಬೇಕು' ಎಂಬ ಇಚ್ಛೆಯು ಮನುಷ್ಯನನ್ನು ಕಾಡುತ್ತಿರು ವದು ; ಇನ್ನೊಮ್ಮೆ 'ಈ ಅಪ್ರಿಯವಾದ ಘಟನೆ ಉಂಟಾಯಿತಲ್ಲ ! ಇದನ್ನು ಹೇಗೆ ತಪ್ಪಿಸಿಕೊಳ್ಳಲಿ ?' ಎಂಬ ದ್ವೇಷವು ಎದ್ದುಕೊಳ್ಳುತ್ತಿರುವದು. ಹೀಗೆಯೇ 'ಈಗ ಒಳ್ಳೆಯ ಲಾಭವಾಯಿತು ?' ಎಂಬ ಹರ್ಷವೂ ಇನ್ನೊಮ್ಮೆ 'ಅಯ್ಯೋ ! ಎಂಥ ಭಾರಿಯ ನಷ್ಟವಾಯಿತು ! ಎಂಬ ವಿಷಾದವೂ ಉಂಟಾಗುತ್ತವೆ. ಹೀಗೆಯೇ ಗೆಲವು, ಸೋಲು- ಎಂಬಿವೇ ಮುಂತಾದ ದ್ವಂದ್ವಗಳನ್ನೂ ತಿಳಿಯ ಬೇಕು.

ಇಚ್ಛಾದ್ವೇಷಸಮುತ್ಥೇನ ದ್ವನ್ದ್ವಮೋಹೇನ ಭಾರತ ।
ಸರ್ವಭೂತಾನಿ ಸಮ್ಮೋಹಂ ಸರ್ಗೇ ಯಾನ್ತಿ ಪರನ್ತಪ ॥ ಗೀ. ೭-೨೭

ಎಂಬ ಗೀತೋಕ್ತಿಯಂತೆ ಮನುಷ್ಯನಿಗೆ ಹುಟ್ಟುವಾಗಲೇ ರಾಗದ್ವೇಷಗಳು ಇದ್ದು ಕೊಂಡಿರುತ್ತವೆ. 'ಇದು ಒಳ್ಳೆಯದು', 'ಇದು ಕೆಟ್ಟದ್ದು', 'ಇದು ಬೇಕು, ಇದು' ಬೇಡ- ಎಂಬ ಬುದ್ಧಿಯಿಂದಲೇ ಸಂಸಾರವು ಬೆಳೆಯುತ್ತಿರುವದು.

ಯೇಷಾಂ ತ್ವನ್ತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್ ।
ತೇ ದ್ವನ್ದ್ವಮೋಹನಿರ್ಮುಕ್ತಾ ಭಜನ್ತೇ ಮಾಂ ದೃಢವ್ರತಾಃ ॥
ಗೀ. ೭-೨೮

ಎಂಬಂತೆ ಇಚ್ಛಾದ್ವೇಷಾದಿಗಳ ಕಾಟವಿಲ್ಲದ ಕಾಲಾವಕಾಶವು ಯಾವದೋ ಪುಣ್ಯ ವಶದಿಂದ ದೊರೆತಾಗ ಭಗವಂತನ ಭಕ್ತಿಯು ತೋರಿಕೊಂಡು ಪರಮಾತ್ಮನ ಕಡೆಗೆ ಮನಸ್ಸುಹಾಕುವ ಒಲವು ಉಂಟಾಗುತ್ತದೆ. ಆದ್ದರಿಂದ 'ಇಂಥ ಕಾಲವು ಯಾರಿಗೋ ಪುಣ್ಯಶಾಲಿಗಳಿಗೆ ಮಾತ್ರ ದೊರಕುತ್ತದೆ' ಎಂದು ಸೋಮಾರಿತನದಿಂದ ಭಕ್ತಿಭಾವ ವನ್ನು ಎಬ್ಬಿಸುವ ಸಾಧನಗಳನ್ನು ಮಾಡದೆ ಸುಮ್ಮನೆ ಕೂರಬಾರದು. ಯಾವ ಚಿಂತೆಯೂ ಇಲ್ಲದ ಕಾಲವು ಯಾವಾಗ ಸಿಕ್ಕಿದರೆ ಆಗ ಕೂಡಲೆ ಭಗವಂತನ ನಾಮಸ್ಮರಣೆಯೇ ಮುಂತಾದವುಗಳನ್ನು ಮಾಡುವದಕ್ಕೆ ಆರಂಭಿಸಿಬಿಡಬೇಕು. ಭಗವಚ್ಚಿಂತನೆಯಿಲ್ಲದೆ ಒಂದು ಅರ್ಧಕ್ಷಣವು ಇದ್ದರೂ ಅದೇ ಈ ದ್ವಂದ್ವಮೋಹಕ್ಕೆ ಅವಕಾಶವನ್ನು ಕಲ್ಪಿಸುತ್ತದೆ ಎಂದು ತಿಳಿಯಬೇಕು.

## ಅಹಿಂಸಾಸತ್ಯಶೌಚದಯಾಸ್ತಿಕ್ಯಾದಿಚರಿತ್ರಾಣಿ ಪಾಲನೀಯಾನಿ ॥ ೭೮ ॥

೭೮. ಅಹಿಂಸೆ, ಸತ್ಯ, ಶುಚಿತ್ವ, ದಯೆ, ಶ್ರದ್ಧೆ- ಮುಂತಾದ ನಡತೆಗಳನ್ನು ಕಾಪಾಡಿಕೊಳ್ಳಬೇಕು.

೧೩೯. ಅಹಿಂಸೆಯೇ ಮುಂತಾದವುಗಳೂ ಭಕ್ತಿಯನ್ನು ಎಬ್ಬಿಸುವ ಕರ್ಮಗಳಲ್ಲಿಯೇ (ಸೂ. ೩೬) ಸೇರಿಕೊಂಡಿವೆಯಾದರೂ ಇಲ್ಲಿ ಇವುಗಳನ್ನು ಬೇರೆಯಾಗಿ ಎತ್ತಿಹೇಳಿರುವದಕ್ಕೆ ಕಾರಣವೇನೆಂದರೆ, ಇಂಥ ಕರ್ಮಗಳಲ್ಲಿ ಶರೀರಪ್ರಧಾನವಾದ **ನಿಯಮ**ಗಳೆಂದೂ ಮನಃಪ್ರಧಾನವಾದ **ಯಮ**ಗಳೆಂದೂ ಎರಡುಬಗೆ. ಇವುಗಳೊಳಗೆ

**ಯಮಾನ್ ಪತತ್ಯಕುರ್ವಾಣೋ ನಿಯಮಾನ್ ಕೇವಲಾನ್ ಭಜನ್ ।**

ಎಂಬ ಸ್ಮೃತಿವಾಕ್ಯದಂತೆ **ಯಮ**ವೆಂಬ ಹೆಸರಿನಿಂದ ಹೇಳಿರುವ ಸಾಧನಗಳನ್ನು ಅವಶ್ಯವಾಗಿ ಮಾಡಬೇಕು ; ಇಲ್ಲದಿದ್ದರೆ ಪತಿತನಾಗುತ್ತಾನೆ. ಯಮಗಳನ್ನು ಬಿಟ್ಟು ನಿಯಮಗಳನ್ನು ಅನುಷ್ಠಾನಮಾಡಿದರೆ ಅವಕ್ಕೇನೂ ಬೆಲೆಯಿರುವದಿಲ್ಲ. ಇದನ್ನು ಸೂಚಿಸುವದಕ್ಕಾಗಿ ಇಲ್ಲಿ 'ಯಮ'ಗಳಲ್ಲಿ ಸೇರಿರುವ ಅಹಿಂಸೆಯೇ ಮುಂತಾದವುಗಳನ್ನು ಬೇರೆಯಾಗಿ ಹೇಳಿರುತ್ತದೆ.

**ಅಹಿಂಸೆ**ಯೆಂದರೆ ಯಾವ ಪ್ರಾಣಿಯನ್ನೂ ನೋಯಿಸದೆ ಇರುವದು, ನಿಷ್ಕಾರಣವಾಗಿ ಯಾವ ಪ್ರಾಣಿಯ ಶರೀರಕ್ಕಾಗಲಿ ಮನಸ್ಸಿಗಾಗಲಿ ನಮ್ಮಿಂದ ಹಿಂಸೆಯಾಗದಂತೆ ನೋಡಿಕೊಳ್ಳುವದು- ಬಲುಕಷ್ಟ. ತೋರುಗಾಣಿಕೆಗಾಗಿ ಪ್ರಾಣಿಗಳಿಗೆ ಅನ್ನವನ್ನು ಹಾಕುವದೂ ಬಡಬಗ್ಗರಿಗೆ ಬಟ್ಟೆಬರೆಗಳನ್ನು ಕೊಡುವದೂ ಸರ್ವಭೂತಹಿತವನ್ನು ಕೋರುವವರ ಗುರುತಲ್ಲ. ಮನಸ್ಸಿನಲ್ಲಿ ಯಾರೊಬ್ಬರಿಗೂ ತನ್ನಿಂದ ಯಾವ ತೊಂದರೆಯೂ ಆಗದೆ ಇರಲೆಂಬ ದೃಢಸಂಕಲ್ಪವಿರಬೇಕು. ತನ್ನ ಶತ್ರುವೇ ಆಗಿದ್ದರೂ ಅವನಿಗೆ ಕೇಡನ್ನು ಬಗೆಯದೆ ಇರುವವರೆಗೂ ಅಹಿಂಸೆಯ ವ್ಯಾಪ್ತಿಯಿರಬೇಕು.

**ಸತ್ಯವೆಂದರೆ** ಕಂಡದ್ದನ್ನು ಕಂಡಂತೆ ಕೇಳಿದ್ದನ್ನು ಕೇಳಿದಂತೆ ಹೇಳುವದು. ಮನಸ್ಸಿನಲ್ಲಿದ್ದಂತೆ ಮಾತಿನಲ್ಲಿಯೂ ನಡತೆಯಲ್ಲಿಯೂ ನಡೆಯುವದೇ ಇದು. **'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಮಪ್ರಿಯಮ್ । ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮಃ ಸನಾತನಃ ॥'** ಎಂಬ ಬಲ್ಲವರ ನುಡಿಯಂತೆ ಸತ್ಯವನ್ನೇ ಹೇಳಬೇಕು, ಪ್ರಿಯವಾಗಿಯೂ ಇರಬೇಕು. ಅಪ್ರಿಯವಾಗಿರುವ ಸತ್ಯವನ್ನು ಅನವಶ್ಯವಾಗಿ ಹೇಳುವದಕ್ಕೆ ಹವಣಿಸಬಾರದು,

ಒಬ್ಬರಿಗೆ ಪ್ರಿಯವಾದೀತೆಂಬ ಕಾರಣದಿಂದ ಸುಳ್ಳನ್ನು ಆಡಬಾರದು. ಹೀಗೆ ಸತ್ಯವನ್ನು ಪಾಲಿಸಿಕೊಂಡುಬರಬೇಕು.

**ಶೌಚ**ವೆಂದರೆ ಶರೀರವನ್ನೂ ವಸ್ತ್ರಾದಿಗಳನ್ನೂ ಶುಚಿಯಾಗಿಟ್ಟುಕೊಳ್ಳುವದು, ಅಶುಚಿಯಾದಾಗ ಮೃಜ್ಜಲಾದಿಗಳಿಂದ ಅವನ್ನು ತೊಳೆದುಕೊಂಡು ಶರೀರದ ಕೊಳೆಯನ್ನು ಕಳೆದುಕೊಳ್ಳುತ್ತಿರುವದು, ಮನಸ್ಸಿನಲ್ಲಿ ಕೆಟ್ಟಯೋಚನೆಯನ್ನು ಮಾಡದೆ ಇರುವದು. ಭಗವಂತನ ನಾಮಸ್ಮರಣೆಯೇ ಮುಂತಾದವುಗಳಿಂದ ಮನಸ್ಸಿನ ನೈರ್ಮಲ್ಯವನ್ನು ಸಂಪಾದಿಸಿಕೊಳ್ಳುತ್ತಿರುವದು.

**ದಯೆ** ಎಂದರೆ ಎಲ್ಲಾ ಪ್ರಾಣಿಗಳನ್ನೂ ಕನಿಕರದಿಂದ ಕಾಣುತ್ತಿರುವದು.

**ಆಸ್ತಿಕ್ಯ**ವೆಂದರೆ ಈಶ್ವರನ ಅಸ್ತಿತ್ವದಲ್ಲಿಯೂ ಶಾಸ್ತ್ರಗುರುವಚನದಲ್ಲಿಯೂ ಇದೇ ಪ್ರಮಾಣವೆಂಬ ಶ್ರದ್ಧೆ.

ಆಸುರಸಂಪತ್ತಿನ ಸಾರಸಂಗ್ರಹವಾಗಿ ಹೇಳಿರುವ ಕಾಮಕ್ರೋಧಲೋಭ ಗಳನ್ನು ಜಯಿಸುವದಕ್ಕೆ ಬೇಕಾದ ಮನಃಪ್ರಧಾನವಾದ **ಯಮ**ಗಳನ್ನೆಲ್ಲ ಇಲ್ಲಿ 'ಆದಿ' ಎಂಬ ಶಬ್ದದಿಂದ ಗ್ರಹಿಸಬೇಕು.

ಸರ್ವದಾ ಸರ್ವಭಾವೇನ ನಿಶ್ಚಿನ್ತೈರ್ಭಗವಾನೇವ
ಭಜನೀಯಃ ॥ ೭೯ ॥

೭೯. ನಿಶ್ಚಿಂತರಾಗಿ ಯಾವಾಗಲೂ ಸರ್ವಭಾವದಿಂದ ಭಗವಂತನನ್ನೇ ಭಜಿಸುತ್ತಿರಬೇಕು.

೧೪೦. ಇದು ಮುಖ್ಯವಾದ ಸಾಧನ. **ಸರ್ವಭಾವ**ವೆಂಬ ಶಬ್ದಕ್ಕೆ ಎರಡರ್ಥಗಳಿವೆ.

**ಯಸ್ಮಿನ್ ಸರ್ವಂ ಯತಃ ಸರ್ವಂ ಯಃ ಸರ್ವಂ ಸರ್ವತಶ್ಚ ಯಃ ।**
**ಯಶ್ಚ ಸರ್ವಮಯೋ ನಿತ್ಯಂ ತಸ್ಮೈ ಸರ್ವಾತ್ಮನೇ ನಮಃ ॥**

ಭೀಷ್ಮಸ್ತವರಾಜ ೮೩

ಎಂಬ ಭೀಷ್ಮವಾಕ್ಯದಂತೆ ಯಾವಾತನಿಂದಲೇ ಎಲ್ಲವೂ ಬಂದಿರುತ್ತದೆಯೋ, ಯಾವಾತನಲ್ಲಿಯೇ ಎಲ್ಲವೂ ನಿಂತಿರುತ್ತದೆಯೋ ಯಾವಾತನೇ ಎಲ್ಲವೂ ಆಗಿರುವನೋ ಯಾವಾತನು ಎಲ್ಲೆಲ್ಲಿಯೂ ಇರುತ್ತಾನೋ ಯಾವಾತನೇ ಎಲ್ಲದರ ರೂಪದಿಂದಲೂ ತೋರುತ್ತಿರುವನೋ ಅವನೇ ಭಗವಂತನು ಎಂಬ ಪರಭಕ್ತನ ಭಾವವೇ ಸರ್ವಭಾವವು. ಈ ಸರ್ವಭಾವವನ್ನು :

**ಯೋ ಮಾಮೇವಮಸಮ್ಮೂಢೋ ಜಾನಾತಿ ಪುರುಷೋತ್ತಮಮ್ ।**
**ಸ ಸರ್ವವಿದ್ ಭಜತಿ ಮಾಂ ಸರ್ವಭಾವೇನ ಭಾರತ ॥** ಗೀ. ೧೫-೧೬

(ಯಾವನು ನಾನು ಕ್ಷರಾಕ್ಷರಗಳನ್ನು ಮೀರಿದ ಪುರುಷೋತ್ತಮನೆಂದು ಅರಿತು ಕೊಂಡಿರುವನೋ ಆತನು ಎಲ್ಲವೂ ನಾನೇ ಎಂದು ಅರಿತಿರುವದರಿಂದ ಸರ್ವಭಾವ ದಿಂದ ನನ್ನನ್ನು ಭಜಿಸುತ್ತಾನೆ) ಎಂಬ ಗೀತೋಕ್ತಿಯಲ್ಲಿ ಪರಾಮರ್ಶಿಸಿರುತ್ತದೆ. ಈ ಭಾವವು ಸಾಧಕನಿಗೆ ಇನ್ನೂ ಬಂದಿರುವದಿಲ್ಲವಾದ್ದರಿಂದ ಅದು ದೊರಕುವದಕ್ಕಾಗಿ 'ಇಂದ್ರಿಯಗಳಿಗೂ ಮನಸ್ಸಿಗೂ ಯಾವಯಾವದು ತೋರುತ್ತಿರುವದೋ ಅದೆಲ್ಲವೂ ಭಗವಂತನ ವಿಭೂತಿಯೇ, ಆದ್ದರಿಂದ ಆತನೇ ನನಗೆ ಗತಿ' ಎಂಬ ಭಾವನೆಯಿಂದ ಭಜಿಸುತ್ತಿರಬೇಕು. ಇದು ಸರ್ವಭಾವಶಬ್ದಕ್ಕೆ ಎರಡನೆಯ ಅರ್ಥ.

**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।**
**ಭ್ರಾಮಯನ್ ಸರ್ವಭೂತಾನಿ ಯನ್ತ್ರಾರೂಢಾನಿ ಮಾಯಯಾ ॥**
**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।**
**ತತ್ಪ್ರಸಾದಾತ್ ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥**
ಗೀ. ೧೮-೬೧, ೬೨

"ಅರ್ಜುನನೆ, ಈಶ್ವರನು ಸರ್ವಪ್ರಾಣಿಗಳ ಹೃದಯದಲ್ಲಿಯೂ ಇರುತ್ತಿರುವನು. ಆತನೇ ತನ್ನ ಮಾಯಾಶಕ್ತಿಯಿಂದ ಸಕಲಜೀವರನ್ನೂ ಗೊಂಬೆಗಳನ್ನು ಯಂತ್ರದ ಮೇಲೆ ಕುಳ್ಳಿರಿಸಿ ಸುತ್ತಿಸುತ್ತಿರುವಂತೆ ಅವರವರ ಕರ್ಮಕ್ಕನುಗುಣವಾಗಿ ಈ ಸಂಸಾರದಲ್ಲಿ ತೊಳಲುವಂತೆ ಮಾಡಿರುತ್ತಾನೆ. ಆತನನ್ನೇ ಸರ್ವಭಾವದಿಂದಲೂ ಶರಣುಹೊಂದು. ಆಗ ಆತನ ಪ್ರಸಾದದಿಂದ ಪರಮಶಾಂತಿಯನ್ನೂ ಶಾಶ್ವತಸ್ಥಾನ ವನ್ನೂ ಪಡೆಯುವೆ'' ಎಂದು ಭಗವಂತನು ನುಡಿದಿರುವಲ್ಲಿ ಈ ಎರಡನೆಯರ್ಥದ **ಸರ್ವಭಾವವನ್ನು** ಪರಾಮರ್ಶಿಸಿರುತ್ತದೆ.

ಆದ್ದರಿಂದ ಸಾಧಕಭಕ್ತನು ಈ ಸರ್ವಭಾವವನ್ನು ಅವಲಂಬಿಸಿ ತನ್ನ ಸಕಲೇಂದ್ರಿಯಗಳನ್ನೂ ಪರಮಾತ್ಮನ ಭಜನೆಗೆ ವಿನಿಯೋಗಿಸಬೇಕು.

**ಸಾ ವಾಗ್ಯಯಾ ತಸ್ಯ ಗುಣಾನ್ ಗೃಣೀತೇ**
**ಕರೌ ಚ ತತ್ಕರ್ಮಕರೌ ಮನಶ್ಚ ।**
**ಸ್ಮರೇದ್ವಸನ್ತಂ ಸ್ಥಿರಜಙ್ಗಮೇಷು**
**ಶೃಣೋತಿ ತತ್ಪುಣ್ಯಕಥಾಃ ಸ ಕರ್ಣಃ ॥**
**ಶಿರಸ್ತು ತಸ್ಯೋಭಯಲಿಙ್ಗಮಾನಮೇತ್-**
**ತ್ತದೇವ ಯತ್ ಪಶ್ಯತಿ ತದ್ಧಿ ಚಕ್ಷುಃ ।**
**ಅಙ್ಗಾನಿ ವಿಷ್ಣೋರಥ ತಜ್ಜನಾನಾಂ**
**ಪಾದೋದಕಂ ಯಾನಿ ಭಜನ್ತಿ ನಿತ್ಯಮ್ ॥**
ಭಾಗ. ೧೦-೮೦-೩, ೪

ಎಂಬ ಭಾಗವತೋಕ್ತಿಯಂತೆ ಯಾವದರಿಂದ ಆತನ ಗುಣಗಳನ್ನು ಹೊಗಳುತ್ತಿರುವರೋ ಅದೇ ನಿಜವಾದ ವಾಕ್ಕು; ಆ ಭಗವಂತನ ಕರ್ಮವನ್ನು ಮಾಡುವವೇ ಕೈಗಳು; ಆತನು ಸ್ಥಾವರಜಂಗಮಗಳಲ್ಲಿ ವಾಸವಾಗಿರುತ್ತಾನೆಂದು ಸ್ಮರಿಸಿಕೊಳ್ಳುವದಲ್ಲ, ಅದೇ ಮನಸ್ಸು; ಆತನ ದಿವ್ಯವಾದ ಮಾತುಕಥೆಗಳನ್ನು ಕೇಳುತ್ತಿರುವವೇ ನಿಜವಾದ ಕಿವಿಗಳು; ಚರಾಚರಪ್ರಾಣಿಗಳೆಲ್ಲವೂ ಭಗವದ್ವಿಭೂತಿಯೆಂದು ಬಾಗುತ್ತಿರುವದೇ ಶಿರಸ್ಸು, ಹಾಗೆಂದು ಎರಡನ್ನೂ ನೋಡುತ್ತಿರುವವೇ ಕಣ್ಣುಗಳು; ನಿತ್ಯವೂ ಆ ವಿಷ್ಣುಭಗವಂತನ ಭಕ್ತರ ಪಾದೋದಕವನ್ನು ಸೇವನೆಮಾಡುತ್ತಿರುವವೇ ಅಂಗಗಳು; ಹೀಗೆ ಶರೀರದ ಅಂಗಾಂಗಗಳನ್ನೆಲ್ಲ ಆತನ ಸೇವೆಗೇ ವಿನಿಯೋಗಿಸುತ್ತಿರಬೇಕು.

'ನಿಶ್ಚಿಂತನಾಗಿ ಭಜಿಸಬೇಕು' ಎಂದರೆ ಈ ಲೋಕದಲ್ಲಿ ತನ್ನ ಯೋಗಕ್ಷೇಮಕ್ಕಾಗಿ ಮಾಡಬೇಕಾಗಿರುವ ಕಾರ್ಯಗಳನ್ನೂ ಪುಣ್ಯಪಾಪಕರ್ಮಗಳಿಂದ ಪರಲೋಕದಲ್ಲಿ ತನಗೆ ಬಂದೊದಗಬಹುದಾದ ಸುಖದುಃಖಗಳ ಚಿಂತೆಯನ್ನೂ ಮನಸ್ಸಿಗೆ ಹತ್ತಿಸಿಕೊಳ್ಳದೆ ನಿರಂತರವಾಗಿ ಚಿಂತಿಸಬೇಕು ಎಂದರ್ಥ.

'ಸದಾ ಸೇವಿಸುತ್ತಿರಬೇಕು' ಎಂಬುದರ ಅಭಿಪ್ರಾಯವೇನೆಂದರೆ. ಯಾವಾಗಲೂ ಭಗವಂತನನ್ನೇ ಭಜಿಸುವದು ಸಾಧ್ಯವಾದೀತೆ? ಇದಕ್ಕೆ ಹಿಂದೆ (೭೧ನೆಯ ಸೂತ್ರದಲ್ಲಿ)ಯೇ ಉತ್ತರವನ್ನು ಹೇಳಿದೆ. ಭಕ್ತರ ಯೋಗಕ್ಷೇಮವನ್ನು ಭಗವಂತನೇ ವಹಿಸುತ್ತಾನಾದ್ದರಿಂದ ಇಹಲೋಕದ ಯೋಗಕ್ಷೇಮಗಳ ಯೋಚನೆಗೆ ಕಾರಣವಿಲ್ಲ. ಇದೇ ಕಾರಣದಿಂದ ಪರಲೋಕದಲ್ಲಿ ಆಗಬಹುದಾದ ಪೂರ್ವಕೃತ ಪಾಪಗಳ ನಿಮಿತ್ತದಿಂದ ಒದಗಬಹುದಾದ ದುಃಖಗಳನ್ನೂ ಯೋಚನೆಗೆ ತಂದುಕೊಳ್ಳಬೇಕಾದದ್ದಿರುವದಿಲ್ಲ. ಏಕೆಂದರೆ ಸ್ವರ್ಗವೇ ಮುಂತಾದ ಆಮುಷ್ಮಿಕಫಲಗಳು ಬೇಕೆಂಬ ಇಚ್ಛೆಯಿಂದ ಸಾಧಕನು ಪುಣ್ಯಕರ್ಮಗಳನ್ನು ಮಾಡುವಂತೆಯೇ ಇಲ್ಲ. ಇನ್ನು ಪಾಪಕರ್ಮಗಳ ವಿಷಯದಲ್ಲಿಯೋ, ಎಂದರೆ :

> ಕಿಙ್ಕರಾಃ ಪಾಶದಣ್ಡಾಶ್ಚ ನ ಯಮೋ ನ ಚ ಯಾತನಾಃ ।
> ಸಮರ್ಥಾಸ್ತಸ್ಯ ಯಸ್ಯಾಽಽತ್ಮಾ ಕೇಶವಾಲಮ್ಬನಃ ಸದಾ ॥
>
> ವಿ. ಪು. ೩-೭-೩೮

ಎಂಬಂತೆ ಯಾವನ ಅಂತಃಕರಣವು ಶ್ರೀಕೇಶವನನ್ನೇ ಆಶ್ರಯಿಸಿಕೊಂಡಿರುವದೋ ಅವನಿಗೆ ಯಮನಾಗಲಿ, ಯಮದೂತರಾಗಲಿ, ಯಮಪಾಶವಾಗಲಿ, ಯಮದಂಡನೆಯಾಗಲಿ ಅಥವಾ ಯಮಯಾತನೆಗಳಾಗಲಿ ಯಾವ ದುಃಖವನ್ನೂ ಉಂಟುಮಾಡುವ ಶಕ್ತಿಯಿಲ್ಲದವುಗಳಾಗಿರುತ್ತವೆ. ಇದುವರೆಗೆ ಮಾಡಿದ ಪಾಪಗಳು ಭಗವಚ್ಚಿಂತನೆಯಿಂದಲೇ ನಾಶವಾಗಿರುವವು.

ಸಙ್ಕೀರ್ತ್ಯಮಾನಃ ಶೀಘ್ರಮೇವಾವಿರ್ಭವತ್ಯನುಭಾವಯತಿ ಭಕ್ತಾನ್ ॥ ೮೦ ॥

೮೦. (ಯಾವಾಗಲೂ) ಸಂಕೀರ್ತನೆಮಾಡುತ್ತಿದ್ದರೆ ಶೀಘ್ರವಾಗಿಯೇ ಭಗವಂತನು ಮೈದೋರಿ ಭಕ್ತರನ್ನು ಅನುಭವವಿತ್ತು ಅನುಗ್ರಹಿಸುತ್ತಾನೆ.

೧೮೧. ಹಿಂದೆ 'ಭಜಿಸಬೇಕು' ಎಂದು ಸಾಮಾನ್ಯವಾಗಿ ಹೇಳಿ 'ಸಂಕೀರ್ತ್ಯಮಾನಃ' ಎಂಬ ವಿಶೇಷವಾಚಕವನ್ನು ಇಲ್ಲಿ ಪ್ರಯೋಗಿಸಿರುವದರಿಂದ ಭಗವಂತನ ಗುಣಗಳನ್ನು ನಾಮಕೀರ್ತನೆಯಮೂಲಕ ಸ್ಮರಿಸಿಕೊಳ್ಳುವದು ಭಗವಂತನ ಅನುರಾಗಕ್ಕೂ ಆತನ ಅನುಗ್ರಹಕ್ಕೂ ವಿಶಿಷ್ಟಕಾರಣವೆಂದು ಹೇಳಿದಂತೆ ಆಯಿತು.

**ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ ಜಗತ್ ಪ್ರಹೃಷ್ಯತ್ಯನುರಜ್ಯತೇ ಚ॥**
ಗೀ. ೧೧-೩೬

ಎಂದಿರುವಂತೆ ಭಗವಂತನ ಮಾಹಾತ್ಮ್ಯವನ್ನು ಕೀರ್ತನೆಮಾಡುವದರಿಂದಲೂ ಶ್ರವಣಮಾಡುವದರಿಂದಲೂ ಭಕ್ತರಿಗೆ ಹರ್ಷವುಂಟಾಗುವದು, ಭಗವಂತನಲ್ಲಿ ಅನುರಾಗವುಂಟಾಗುವದು.

**ಸತತಂ ಕೀರ್ತಯನ್ತೋ ಮಾಂ ಯತನ್ತಶ್ಚ ದೃಢವ್ರತಾಃ ।**
**ನಮಸ್ಯನ್ತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥** ಗೀ. ೯-೧೪

ಯಾವಾಗಲೂ ನನ್ನ ಕೀರ್ತನೆಯನ್ನು ಮಾಡುತ್ತಾ ಇಂದ್ರಿಯೋಪಸಂಹಾರಶಮದಮಾಹಿಂಸಾದಿರೂಪವಾದ ನಿಯಮಗಳಿಂದ ನನ್ನನ್ನು ಬಿಡದೆ ಯತ್ನಪೂರ್ವಕವಾಗಿ ಭಜಿಸುತ್ತಾ ನಮಸ್ಕರಿಸುತ್ತಾ ಭಕ್ತರು ನಿತ್ಯಯುಕ್ತರಾಗಿ ಉಪಾಸನೆಮಾಡುತ್ತಿರುವರು– ಎಂದು ಭಗವಂತನು ಭಕ್ತರನ್ನು ಕೊಂಡಾಡಿರುತ್ತಾನೆ.

**ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।**
**ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥**
**ತೇಷಾಮೇವಾನುಕಮ್ಪಾರ್ಥಮಹಮಜ್ಞಾನಜಂ ತಮಃ ।**
**ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ।**
ಗೀ. ೧೦-೧೦, ೧೧

ಈ ಶ್ಲೋಕಗಳನ್ನು ಹಿಂದೆಯೇ (ಪು. ೭೫) ಉದಾಹರಿಸಿದ್ದಾಗಿದೆ. ಯಾವಾಗಲೂ ಭಗವಂತನ ಗುಣಗಳನ್ನು ಪ್ರಕಟಿಸುವ ನಾಮಗಳನ್ನು ಕೀರ್ತನೆಮಾಡುತ್ತಾ ಆತನನ್ನೇ ಚಿಂತಿಸುತ್ತಾ ಮನಸ್ಸು ಮತ್ತೊಂದು ಕಡೆಗೆ ಹೋಗದಂತೆ ಆ ಭಗವಂತನೊಬ್ಬನನ್ನೇ ಭಜಿಸುತ್ತಿರುವದು ಸಾಧಕನು ಮಾಡಬೇಕಾದ ಕೆಲಸ. ಹೀ

ಸಂಕೀರ್ತನಪೂರ್ವಕವಾಗಿ ಭಜಿಸುತ್ತಿರುವವರಿಗೆ ಭಗವಂತನು ಅವರ ಹೃದಯದಲ್ಲಿಯೇ ದರ್ಶನವನ್ನು ಕೊಟ್ಟು ಅನುಗ್ರಹಿಸುವನು.

**'ಶೀಘ್ರವಾಗಿಯೇ ವ್ಯೈದೋರುತ್ತಾನೆ'** ಎಂಬದ್ದರಿಂದ ಭಕ್ತನು ಹೊಂದುವ ಗತಿಯೆಂಬುದು ಸತ್ತಮೇಲೆ ಪಡೆಯುವ ಅದೃಷ್ಟಫಲವಲ್ಲವೆಂದಂತೆ ಆಯಿತು. 'ಅನುಭವವನ್ನು ಕೊಡುತ್ತಾನೆ' ಎಂದಿರುವದರಿಂದ ಆ ಫಲವು ಅನುಭವಗಮ್ಯವೆಂದೂ ಹೇಳಿದಂತೆ ಆಯಿತು.

ಭಗವಂತನನ್ನು ಎಡೆಬಿಡದೆ ಭಜಿಸುವವರಿಗೆ ಆಗುವ ಫಲವನ್ನು ನಾರದರು ಸ್ವವೃತ್ತಾಂತದಿಂದಲೇ ವ್ಯಾಸರಿಗೆ ಹೇಳಿದಂತೆ ಭಾಗವತದಲ್ಲಿ ವರ್ಣಿಸಲಾಗಿದೆ. ನಾರದರು ಪೂರ್ವಜನ್ಮದಲ್ಲಿ ದಾಸೀಪುತ್ರರಾಗಿ ಹುಟ್ಟಿದ್ದರು ; ಅವರಿಗೆ ಮಹರ್ಷಿಗಳ ಶುಶ್ರೂಷೆಯಿಂದ ಜ್ಞಾನೋಪದೇಶವು ಲಭಿಸಿತು. ತಾಯಿಯು ಲೋಕಾಂತರವನ್ನೈದಿದ ಬಳಿಕ ಅವರು ಅರಣ್ಯಕ್ಕೆ ಹೋಗಿ ಅಶ್ವತ್ಥವೃಕ್ಷದ ಕೆಳಗೆ ಕುಳಿತು ಭಗವಂತನನ್ನು ಧ್ಯಾನಿಸಲಾಗಿ :

**ಧ್ಯಾಯತಶ್ಚರಣಾಮ್ಭೋಜಂ ಭಾವನಿರ್ಜಿತಚೇತಸಾ ।**
**ಔತ್ಕಣ್ಠ್ಯಾಶ್ರುಕಲಾಕ್ಷಸ್ಯ ಹೃದ್ಯಾಸೀನ್ಮೇ ಶನೈರ್ಹರಿಃ ॥**
**ಪ್ರೇಮಾತಿಭರನಿರ್ಭಿನ್ನಪುಲಕಾಙ್ಗೋಽತಿನಿರ್ವೃತಃ ।**
**ಆನನ್ದಸಂಪ್ಲವೇ ಲೀನೋ ನಾಪಶ್ಯಮುಭಯಂ ಮುನೇ ॥**

ಭಾಗ. ೧-೬-೧೭, ೧೮

ಅವರಿಗೆ ಭಗವಂತನ ದರ್ಶನವಾಗಿ ಕುತೂಹಲಾನಂದಬಾಷ್ಪಸಹಿತ ಭಾವಸಮಾಧಿಯಿಂದ ಆನಂದದಲ್ಲಿಯೇ ಮುಳುಗಿಬಿಟ್ಟರಂತೆ !

## ತ್ರಿಸತ್ಯಸ್ಯ ಭಕ್ತಿರೇವ ಗರೀಯಸೀ ಭಕ್ತಿರೇವ ಗರೀಯಸೀ॥೮೧॥

೮೧. ಮೂರು ಸತ್ಯಕ್ಕೂ ಭಕ್ತಿಯೇ ದೊಡ್ಡದು, ಭಕ್ತಿಯೇ ದೊಡ್ಡದು.

೧೪೩. ಇಲ್ಲಿ 'ತ್ರಿಸತ್ಯ'ವೆಂದರೇನೆಂಬುವನ್ನು ನಿರ್ಣಯಿಸುವದು ಕಷ್ಟ. ಕೆಲವರು ಮೂರು ಗುಣಗಳನ್ನೂ ಮೂರು ಅವಸ್ಥೆಗಳನ್ನೂ ತ್ರಿಪುಟಿಯನ್ನೂ ಭಕ್ತಿಯು ಮೀರಿರುತ್ತದೆ- ಎಂದು ಅರ್ಥವನ್ನು ಮಾಡಿರುತ್ತಾರೆ. ಆದರೆ ಪರಭಕ್ತಿಯನ್ನು ವರ್ಣಿಸುವ ಸಂದರ್ಭವಿದಲ್ಲ. ಆದ್ದರಿಂದ ಆ ವ್ಯಾಖ್ಯಾನಗಳು ಸರಿಯೆಂದು ನಮಗೆ ತೋರುವದಿಲ್ಲ. ಕರ್ಮ, ಧ್ಯಾನ, ಜ್ಞಾನ- ಎಂಬ ಮೂರು ಮಾರ್ಗಗಳನ್ನು ಶಾಸ್ತ್ರದಲ್ಲಿ ಉಪದೇಶಿಸಿರುತ್ತದೆಯಾದರೂ ಅವುಗಳೂ ಸತ್ಯಮಾರ್ಗವನ್ನೇ ಬೋಧಿಸುತ್ತವೆಯಾದರೂ ಭಕ್ತಿಯೇ ಅವೆಲ್ಲಕ್ಕಿಂತಲೂ ದೊಡ್ಡದು- ಎಂದು ಈ ವಾಕ್ಯಕ್ಕೆ ಅರ್ಥವನ್ನು ಮಾಡಬಹುದು. ನಿಮಿರಾಜನು :

ಧರ್ಮಾನ್ ಭಾಗವತಾನ್ ಬ್ರೂತ ಯದಿ ನಃ ಶ್ರುತಯೇ ಕ್ಷಮಮ್।
ಯೈಃ ಪ್ರಸನ್ನಃ ಪ್ರಪನ್ನಾಯ ದಾಸ್ಯತ್ಯಾತ್ಮಾನಮಪ್ಯಜಃ ॥
ಭಾಗ. ೧೧-೨-೩೧

'ಯಾವ ಭಾಗವತಧರ್ಮಗಳಿಂದ ಭಗವಂತನು ಪ್ರಸನ್ನನಾಗಿ ತನ್ನ ಆತ್ಮಸ್ವರೂಪವನ್ನೂ ಕೊಟ್ಟುಬಿಡುತ್ತಾನೋ ಅಂಥ ಧರ್ಮಗಳನ್ನು ನನಗೆ ಹೇಳಿರಿ' ಎಂದು ಕೇಳಿದಾಗ ಕವಿಯೆಂಬ ಋಷಿಯು ಹೀಗೆಂದಿರುತ್ತಾನೆ :

ಯೇ ವೈ ಭಗವತಾ ಪ್ರೋಕ್ತಾ ಉಪಾಯಾ ಹ್ಯಾತ್ಮಲಬ್ಧಯೇ ।
ಅಞ್ಜಃ ಪುಂಸಾಮವಿದುಷಾಂ ವಿದ್ಧಿ ಭಾಗವತಾನ್ ಹಿ ತಾನ್ ॥ ೩೪ ॥

'ಎಲೈ ರಾಜನೆ, ಭಗವಂತನು ಅಜ್ಞರಿಗೆ ಆತ್ಮಪ್ರಾಪ್ತಿಗೆಂದು ಮುಖ್ಯವಾಗಿ ಯಾವ ಯಾವ ಉಪಾಯಗಳನ್ನು ಹೇಳಿರುತ್ತಾನೋ ಅವುಗಳೆಲ್ಲ ಭಾಗವತಧರ್ಮಗಳೆಂದು ತಿಳಿ.

ಯಾನಾಸ್ಥಾಯ ನರೋ ರಾಜನ್ ನ ಪ್ರಮಾದ್ಯೇತ ಕರ್ಹಿಚಿತ್ ।
ಧಾವನ್ ನಿಮೀಲ್ಯ ವಾ ನೇತ್ರೇ ನ ಸ್ಖಲೇನ್ನ ಪತೇದಿಹ ॥ ೩೫ ॥

'ಈ ಭಾಗವತಧರ್ಮಗಳನ್ನು ಅನುಸರಿಸಿದರೆ ಎಂದಿಗೂ ಎಚ್ಚರಿಕೆಯಿಂದ ಚ್ಯುತನಾಗುವದಿಲ್ಲ ; ಕಣ್ಣುಮುಚ್ಚಿಕೊಂಡು ಓಡುತ್ತಿದ್ದರೂ ಬೀಳುವದಿಲ್ಲ, ಎಡಹುವದಿಲ್ಲ.'

ಭಗವಂತನು ಉದ್ಧವನಿಗೆ ಹೀಗೆಂದು ಉಪದೇಶಿಸಿರುತ್ತಾನೆ :

ತಸ್ಮಾನ್ಮದ್ಭಕ್ತಿಯುಕ್ತಸ್ಯ ಯೋಗಿನೋ ವೈ ಮದಾತ್ಮನಃ ।
ನ ಜ್ಞಾನಂ ನ ಚ ವೈರಾಗ್ಯಂ ಪ್ರಾಯಃ ಶ್ರೇಯೋ ಭವೇದಿಹ ॥
ಯತ್ಕರ್ಮಭಿರ್ಯತ್ತಪಸಾ ಜ್ಞಾನವೈರಾಗ್ಯತಶ್ಚ ಯತ್ ।
ಯೋಗೇನ ದಾನಧರ್ಮೇಣ ಶ್ರೇಯೋಭಿರಿತರೈರಪಿ ।
ಸರ್ವಂ ಮದ್ಭಕ್ತಿಯೋಗೇನ ಮದ್ಭಕ್ತೋ ಲಭತೇಽಞ್ಜಸಾ ॥
ಭಾಗ. ೧೧-೨೦-೩೧, ೩೨, ೩೩

"ಆದ್ದರಿಂದ ನನ್ನ ಭಕ್ತಿಯಿಂದೊಡಗೂಡಿದ ಯೋಗಿಯು ನನ್ನಲ್ಲಿಯೇ ಮನಸ್ಸನ್ನಿಟ್ಟುಕೊಂಡಿರುವದರಿಂದ ಅವನಿಗೆ ಜ್ಞಾನವಾಗಲಿ ವೈರಾಗ್ಯವಾಗಲಿ ಬಲುಮಟ್ಟಿಗೆ ಶ್ರೇಯಸ್ಕರವಾಗಲಾರದು. ಕರ್ಮಗಳಿಂದಲಾಗಲಿ, ತಪಸ್ಸಿನಿಂದಾಗಲಿ, ಜ್ಞಾನವೈರಾಗ್ಯಗಳಿಂದಾಗಲಿ, ಯೋಗದಿಂದಲಾಗಲಿ, ದಾನಧರ್ಮದಿಂದಲಾಗಲಿ ಮಿಕ್ಕ ಶ್ರೇಯಸ್ಸಾಧನಗಳಿಂದಲಾಗಲಿ ಏನೇನನ್ನು ಪಡೆಯಬಹುದೋ ಅದೆಲ್ಲವನ್ನೂ ನನ್ನ ಭಕ್ತನು ಭಕ್ತಿಯೋಗದಿಂದಲೇ ಪಡೆದುಕೊಳ್ಳುತ್ತಾನೆ."

೧೪೩. ಅಥವಾ 'ತ್ರಿಸತ್ಯಸ್ಯ' ಎಂದರೆ ಮೂರು ಕಾಲಕ್ಕೂ ಎಂದರ್ಥ. ಭಕ್ತಿಯು ದೊರೆಯುವದಕ್ಕೆ ಮುಂಚೆ, ಗೌಣಭಕ್ತಿಯನ್ನು ಅನುಷ್ಠಾನದಲ್ಲಿಟ್ಟು ಕೊಂಡಿರುವಾಗ, ಮತ್ತು ಪರಭಕ್ತಿಯು ಪ್ರಾಪ್ತವಾದಬಳಿಕ– ಈ ಮೂರು ಅವಸ್ಥೆಗಳಲ್ಲಿಯೂ ಭಕ್ತಿಯೇ ಎಲ್ಲಕ್ಕೂ ಹೆಚ್ಚಿನದಾಗಿರುವದು. ಮೊದಲು ಶಾಸ್ತ್ರೋಕ್ತ ಕರ್ಮಗಳನ್ನು ವಿಹಿತವೆಂಬ ಕಾರಣದಿಂದ ಮಾಡುತ್ತಿರುತ್ತಾನೆ; ಆ ಬಳಿಕ ಭಕ್ತಿಯ ಸಾಧನವಿವು– ಎಂದುಕೊಂಡು ಮಾಡುತ್ತಿರುತ್ತಾನೆ; ಪರಭಕ್ತಿಯು ಬಂದ ಮೇಲಂತೂ ಭಕ್ತಿಯಲ್ಲಿಯೇ ನೆಲೆಸಿಂತಿರುತ್ತಾನೆ. ಯಾವ ಸ್ಥಿತಿಯಲ್ಲಿಯೇ ಇರಲಿ, ಭಗವಂತನಿಗೆ ಸಂಬಂಧಿಸಿದ ಹೊರತು ಯಾವದೊಂದು ಅನುಷ್ಠಾನವೂ ಪರಮ ಪುರುಷಾರ್ಥಕ್ಕೆ ಹೇತುವಾಗಲಾರದು. ಆದ್ದರಿಂದ ಮೂರು ಸ್ಥಿತಿಯಲ್ಲಿಯೂ ಭಕ್ತಿಯೊಂದೇ ಶ್ರೇಯಃಸಾಧನವಾಗಿರುತ್ತದೆ ಎಂಬುದು ಸೂತ್ರದ ಅಭಿಪ್ರಾಯ.

೧೪೪. ಕೆಲವರು :

**ಕಲೌ ಕಲ್ಮಷಚಿತ್ತಾನಾಂ ಪಾಪದ್ರವ್ಯೋಪಜೀವಿನಾಮ್ ।**
**ವಿಧಿಕ್ರಿಯಾವಿಹೀನಾನಾಂ ಗತಿರ್ಗೋವಿಂದಕೀರ್ತನಮ್ ॥**

ಎಂಬ ವಾಕ್ಯವನ್ನು ಆಧಾರವಾಗಿಟ್ಟುಕೊಂಡು ಕಲಿಯುಗದಲ್ಲಿ ಜನರು ಪಾಪಚಿತ್ತರಾಗಿರುತ್ತಾರೆ, ಪಾಪದ್ರವ್ಯದಿಂದಲೇ ಉಪಜೀವನವನ್ನು ಮಾಡುತ್ತಿರುವರು, ವಿಧಿಕ್ರಿಯೆಗಳನ್ನು ಬಿಟ್ಟಿರುತ್ತಾರೆ. ಆದ್ದರಿಂದ ಅಂಥವರಿಗೆ ಗೋವಿಂದಕೀರ್ತನವೇ ಗತಿ– ಎಂದು ಹೇಳುತ್ತಾ ಪಾಪಿಗಳಿಗೆ ಮಾತ್ರ ಕಲಿಯುಗದಲ್ಲಿ ಕೀರ್ತನಾದಿರೂಪವಾದ ಭಕ್ತಿಯು ಅಗತಿಕಗತಿಯಾಗಿರುತ್ತದೆ. ಧ್ಯಾನಾದಿಗಳಲ್ಲಿ ನಿರತರಾಗಿರುವ ಮಹಾತ್ಮರಿಗಲ್ಲ– ಎಂದು ಅರ್ಥವನ್ನು ಮಾಡುತ್ತಿರುವರು. ಇದು ಸರಿಯಲ್ಲ. ಘೋರವಾದ ಪಾಪಿಷ್ಠಬಹುಲವಾದ ಕಲಿಯುಗದಲ್ಲಿ ಭಗವತ್ಕೀರ್ತನೆಯೊಂದೇ ಉಳಿದಿರುವ ಸಾಧನವು. ಈ ಯುಗದಲ್ಲಿಯೂ ಭಕ್ತಿಯು ಇಂಥದ್ದಾಗಿರುವಲ್ಲಿ ಸದಾಚಾರ ಸತ್ಕರ್ಮಗಳಲ್ಲಿ ನಿರತರಾಗಿರುವವರಿಗೆ ಭಕ್ತಿಯಿಂದಾಗುವ ಮಹಾಫಲವನ್ನು ಹೇಳತಕ್ಕದ್ದೇನಿದೆ ?

**ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ॥** ಗೀ. ೯–೩೩

ಎಂಬ ಗೀತೋಕ್ತಿಯಂತೆ ವರ್ಣಾಶ್ರಮಧರ್ಮಗಳನ್ನು ಮಾಡಿಕೊಂಡಿರುವವರಿಗೆ ಭಗವದ್ಭಕ್ತಿಯಿಂದ ದೊರಕುವ ಮಹಾಫಲವನ್ನು ಹೇಳತಕ್ಕದ್ದೇನಿದೆ ?– ಎಂದು ಭಗವದ್ಭಕ್ತಿಯನ್ನು ಹೊಗಳುವ ವಾಕ್ಯವಿದು. ಹೀಗಿರುವದರಿಂದ ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ಮುಂದಿನ ಕಾಲಕ್ಕೂ –ಹೀಗೆ ಮೂರು ಕಾಲಕ್ಕೂ– ಭಕ್ತಿಯೇ ಹೆಚ್ಚಿನ ಸಾಧನವು ಎಂಬುದೂ 'ತ್ರಿಸತ್ಯಸ್ಯ'ಶಬ್ದದ ಅರ್ಥವು.

'ಭಕ್ತಿರೇವ ಗರೀಯಸೀ' ಎಂಬುದನ್ನು ಎರಡುಸಲ ಹೇಳಿರುವದು ಸಾಧನದ ಮತ್ತು ಫಲದ ಪ್ರಕರಣವು ಮುಗಿಯಿತೆಂಬುದನ್ನು ಸೂಚಿಸುತ್ತದೆ.

# ೧೯. ಭಕ್ತಿಯು ಹನ್ನೊಂದು ಬಗೆ

**ಗುಣಮಾಹಾತ್ಮ್ಯಾಸಕ್ತಿ-ರೂಪಾಸಕ್ತಿ-ಪೂಜಾಸಕ್ತಿ-ಸ್ಮರಣಾ-ಸಕ್ತಿ-ದಾಸ್ಯಾಸಕ್ತಿ - ಸಖ್ಯಾಸಕ್ತಿ - ವಾತ್ಸಲ್ಯಾಸಕ್ತಿ-ಕಾನ್ತಾಸಕ್ತಿ ಆತ್ಮನಿವೇದನಾಸಕ್ತಿ - ತನ್ಮಯತಾಸಕ್ತಿ - ಪರಮವಿರಹಾಸಕ್ತಿ-ರೂಪೈಕಧಾಪ್ಯೇಕಾದಶಧಾ ಭವತಿ ॥ ೮೨ ॥**

೮೨. (ಭಕ್ತಿಯು) ಒಂದೇ ಆದರೂ ಗುಣಮಾಹಾತ್ಮ್ಯಾ ಸಕ್ತಿ, ರೂಪಾಸಕ್ತಿ, ಪೂಜಾಸಕ್ತಿ, ಸ್ಮರಣಾಸಕ್ತಿ, ದಾಸ್ಯಾಸಕ್ತಿ, ಸಖ್ಯಾಸಕ್ತಿ, ವಾತ್ಸಲ್ಯಾಸಕ್ತಿ, ಕಾನ್ತಾಸಕ್ತಿ, ಆತ್ಮನಿವೇದನಾಸಕ್ತಿ, ತನ್ಮಯತಾಸಕ್ತಿ, ಪರಮವಿರಹಾಸಕ್ತಿ– ಎಂಬ ರೂಪದ ಹನ್ನೊಂದು ಬಗೆಯದಾಗಿರುತ್ತದೆ.

೧೪೫. ಸರಿಯಾಗಿ ನೋಡಿದರೆ ಭಕ್ತಿಯು ಒಂದೇ ಆದರೂ ಲೋಕದಲ್ಲಿ ನಾನಾರೂಪಗಳಿಂದ ತೋರುತ್ತಿರುವದು. ಇಲ್ಲಿ ಹನ್ನೊಂದು ಬಗೆಗಳನ್ನು ವಿಂಗಡಿಸಿ ಹೇಳಿರುವದು ಸುಪ್ರಸಿದ್ಧಪ್ರಕಾರಗಳಿವು– ಎಂಬ ಅಭಿಪ್ರಾಯದಿಂದ. ಈ ವಿಶೇಷಗಳ ವಿವರಣೆಯಿಂದ ಒಂದೇ ಭಕ್ತಿಯು ಹೇಗೆ ಬೇರೆಬೇರೆಯ ರೂಪಗಳನ್ನು ಪಡೆಯುತ್ತಿರುವದೆಂಬುದು ವ್ಯಕ್ತವಾಗುತ್ತದೆ. ಭವಭೂತಿ ಎಂಬ ಕವಿಯು ಕರುಣಾರಸ ಪ್ರಧಾನವಾದ ತನ್ನ ಉತ್ತರರಾಮಚರಿತ್ರೆಯೆಂಬ ನಾಟಕದಲ್ಲಿ–

> **ಏಕೋ ರಸಃ ಕರುಣ ಏವ ನಿಮಿತ್ತಭೇದಾದ್**
> **ಭಿನ್ನಃ ಪೃಥಕ್ಪೃಥಗಿವಾಶ್ರಯತೇ ವಿವರ್ತಾನ್ ।**
> **ಆವರ್ತಬುದ್ಬುದತರಙ್ಗಮಯಾನ್ ವಿಕಾರಾ-**
> **ನಮ್ಭೋ ಯಥಾ ಸಲಿಲಮೇವ ತು ತತ್ಸಮಗ್ರಮ್ ॥**
>
> ಉತ್ತರರಾಮಚರಿತ ೩–೪೭

ಕರುಣವೆಂಬುದೊಂದೇ ನಿಜವಾಗಿ ರಸವು; ನೀರೆಂಬುದೊಂದೇ ಸುಳಿ, ಗುಳ್ಳೆ, ತೆರೆ– ಮುಂತಾದ ರೂಪಗಳನ್ನು ಹೊಂದಿದಾಗಲೂ ನಿಜವಾಗಿ ಹೇಗೆ ನೀರೇ ಆಗಿರುವದೋ ಹಾಗೆಯೇ ಉಳಿದ ರಸಗಳೆಲ್ಲ ಕರುಣಾರಸದಲ್ಲಿಯೇ ಅಡಗಿರುವವು–ಎಂದಿರುತ್ತಾನೆ. ಈ ವರ್ಣನೆಯು ಭಕ್ತಿಯ ವಿಷಯಕ್ಕೆ ಇನ್ನೂ ಹೆಚ್ಚಾಗಿ ಒಪ್ಪುತ್ತದೆ. ಏಕೆಂದರೆ ಭಕ್ತಿಯೆಂದರೆ ಪ್ರೇಮ, ಪ್ರೇಮವೇ ರಸ-ಎಂಬುದು ಎಲ್ಲರಿಗೂ ಅನುಭವದಲ್ಲಿರುತ್ತದೆ. ಪ್ರೇಮ, ರಸ, ರಾಗ– ಇವೆಲ್ಲ ಸಂಸ್ಕೃತಭಾಷೆಯಲ್ಲಿ– 'ತಂಬಿಗೆ',

'ಚೆಂಬು' -ಎಂಬಂತೆ ಒಂದೇ ಅರ್ಥದ ಶಬ್ದಗಳು. ಪರೀಕ್ಷಿಸಿನೋಡಿದರೆ ಈ ಪ್ರೇಮವು ಬಗೆಬಗೆಯ ರೂಪಗಳನ್ನು ತಳೆಯುತ್ತಿರುತ್ತದೆ.

ಹೇಗೆಂದರೆ ಪ್ರೇಮವು ಎಲ್ಲಾ ಕಡೆಗೂ ಹರಿಯದೆ ತನ್ನ ಕಡೆಗೇ ಇದ್ದುಬಿಟ್ಟರೆ ಆ ಸ್ವಾರ್ಥತೆಯೇ ಇನ್ನೊಬ್ಬರನ್ನು ಹಗೆಮಾಡುವದಕ್ಕೆ ಕಾರಣವಾಗುವದರಿಂದ ಪ್ರೇಮದ ರೂಪಾಂತರವೇ **ಹಗೆತನ**ವೆನ್ನಬಹುದು. **ಹೆದರಿಕೆ** ಎಂಬುದು ಅನವಶ್ಯವಾಗಿ ಒಂದೇ ಕಡೆಯಲ್ಲಿ ನಿಂತ ಪ್ರೇಮವೇ ; ಹಾಗಿಲ್ಲದಿದ್ದರೆ ಪ್ರೇಮದಿಂದ ಹೆದರಿಕೆಯನ್ನು ಗೆಲ್ಲುವದಕ್ಕಾಗುತ್ತಿತ್ತೆ ? ನಮ್ಮಲ್ಲಿರುವ ಚಿನ್ನಬೆಳ್ಳಿಯ ಮೇಲಿನ ಪ್ರೇಮವೇ ದಾರಿಯಲ್ಲಿ ಹೋಗುತ್ತಿರುವ ಕಳ್ಳಕಾರರ ಹೆದರಿಕೆಗೆ ಕಾರಣವಾಗುವದು. ವಿಷಯಗಳಲ್ಲಿಟ್ಟ ಪ್ರೇಮವೇ **ರಾಗವು** ; ರಾಗಕ್ಕೆ ವಿಷಯವಾದ ವಸ್ತುಗಳು ಸಿಕ್ಕದಂತೆ ಏನಾದರೂ ಅಡ್ಡಿಯಾದರೆ ಅಡ್ಡಿಗೆ ಕಾರಣವಾದ ವಸ್ತುವಿನಮೇಲೆ **ದ್ವೇಷವೂ ಕ್ರೋಧವೂ** ಉಂಟಾಗುವವು. ಮಕ್ಕಳಲ್ಲಿರುವ ಪ್ರೇಮವು **ವಾತ್ಸಲ್ಯ**ವೆನಿಸಿಕೊಳ್ಳುವದು. ದೊಡ್ಡವರ ಉಪದೇಶವನ್ನು ನಂಬುವ ಪ್ರೇಮವೇ **ಶ್ರದ್ಧೆ.** ನಮ್ಮ ದೋಷಗಳ ಮೇಲಿರುವ ಪ್ರೇಮವೇ ಅವನ್ನು ಮತ್ತೊಬ್ಬರು ಕಂಡುಕೊಂಡಾಗ **ನಾಚಿಕೆಗೆ** ಕಾರಣವಾಗುವದು. ಒಂದೇ ವಸ್ತುವಿನಲ್ಲಿ ಕೇಂದ್ರೀಕೃತವಾದ ಪ್ರೇಮವು ಮತ್ತೆ ಬೇರೆ ವಸ್ತುಗಳ **ಮರವಿಗೆ** ಕಾರಣ ; ಸಂಕಟಪಡುತ್ತಿರುವವರ ಮೇಲಿನ ಪ್ರೇಮವೇ **ಕರುಣೆ.** ಮತ್ತೊಬ್ಬರು ಸಂಕಟಪಡುತ್ತಿರುವಾಗ ತನ್ನಮೇಲೆ ಹೆಚ್ಚು ಪ್ರೇಮವನ್ನು ಮಾಡಿಕೊಂಡಿರುವದು **ಕ್ರೌರ್ಯವು.** ಶತ್ರುಗಳನ್ನು ಹೊಡೆಯುವದರಲ್ಲಿರುವ ಪ್ರೇಮವು **ಶೌರ್ಯವು.** ದರಿದ್ರರಲ್ಲಿರುವ ಪ್ರೇಮವೇ **ಔದಾರ್ಯವು.** ಹೀಗೆಯೇ ನೋಡುತ್ತಾ ಹೋದರೆ ಪ್ರೇಮವು ಎಷ್ಟು ಅಗಣಿತರೂಪಗಳನ್ನು ಧರಿಸುತ್ತದೆಯೆಂದು ನಿರ್ಧರಿಸಿ ಹೇಳುವದು ಯಾರಿಂದಹಾನೆ ಆದೀತು ? ಒಂದು ದೃಷ್ಟಿಯಿಂದ ಪ್ರೇಮವು ಜಗತ್ತೆಲ್ಲವನ್ನೂ ಆಳುವದಕ್ಕೆ ತಕ್ಕ ಸಾರ್ವಭೌಮನು. **ಭಕ್ತಿಶಾಸ್ತ್ರವೆಂಬುದು ಪ್ರೇಮವಿದ್ಯೆ.**

## ೧. ಗುಣಮಾಹಾತ್ಮ್ಯಾಸಕ್ತಿ

೧೪೬. ಭಗವಂತನಲ್ಲಿರುವ ಪ್ರೇಮವು ಮುಖ್ಯವಾಗಿ ಹನ್ನೊಂದು ಬಗೆಗಳಲ್ಲಿ ತೋರಿಕೊಳ್ಳುತ್ತದೆ. ಇವುಗಳಲ್ಲಿ ಮೊದಲನೆಯದು **ಗುಣಮಾಹಾತ್ಮ್ಯಾಸಕ್ತಿ.** ಲೋಕದಲ್ಲಿ ಯಾವದಾದರೊಂದು ವಸ್ತುವಿನ ಗುಣಗಳನ್ನು ಹೇಳಿದ್ದನ್ನು ಕೇಳಿದರೆ ಅದರ ಮೇಲಿನ ಪ್ರೇಮದಿಂದ ಜನರಿಗೆ ಹೆಚ್ಚಾಗಿ ಮನಸ್ಸು ಅದರಲ್ಲಿಯೇ ನಿಲ್ಲುವಂತೆ ಆಗುವದು. ಅನಂತಗುಣಗಳಿಗೆ ಆಕರನಾಗಿರುವ ಭಗವಂತನ ಗುಣಗಳನ್ನು ಕೇಳಿದರೆ ಭಕ್ತರಿಗೂ ಹೀಗೆಯೇ ಆತನಲ್ಲಿಯೇ ಮನಸ್ಸು ನೆಲೆನಿಲ್ಲುವದು.

ನಿವೃತ್ತತರ್ಷೈರುಪಗೀಯಮಾನಾದ್
ಭವೌಷಧಾಚ್ಛ್ರೋತ್ರಮನೋಽಭಿರಾಮಾತ್ ।
ಕ ಉತ್ತಮಶ್ಲೋಕಗುಣಾನುವಾದಾತ್
ಪುಮಾನ್ ವಿರಜ್ಯೇತ ವಿನಾ ಪಶುಘ್ನಾತ್ ॥

ಭಾಗ. ೧೦-೧-೪

ಭಗವಂತನು ಶ್ರೀಕೃಷ್ಣಾವತಾರದಲ್ಲಿ ತೋರಿಸಿದ ವೀರ್ಯಗಳನ್ನು ಕೇಳಬೇಕೆಂಬ ಆಶೆಯಿಂದ ಪರೀಕ್ಷಿತನು ಹೀಗೆಂದಿರುತ್ತಾನೆ : ಎಲ್ಲಾ ಆಸೆಗಳನ್ನೂ ಬಿಟ್ಟವರು ಕೂಡ ಹಾಡಿಹೊಗಳುತ್ತಿರುವ ಸಂಸಾರರೋಗಕ್ಕೆ ದೊಡ್ಡ ಔಷಧವಾಗಿರುವ, ಕೇಳುವವರ ಮನಸ್ಸನ್ನು ತನ್ನತ್ತ ಎಳೆದು ಅಲ್ಲಿಯೇ ರತವಾಗಿರುವಂತೆ ಮಾಡುವ, ಪರಮಯಶಸ್ವಿಯಾಗಿರುವ ಗುಣಾನುವಾದದಿಂದ ಕಟುಕನೊಬ್ಬನ ಹೊರತು ಮತ್ತೆ ಯಾವನುತಾನೆ ವಿರಕ್ತನಾದಾನು ?

'ಭಗವಂತನಿಗೆ ಕರ್ಮಗಳೇ ಇಲ್ಲವಲ್ಲ ! ಆತನು ನಿರ್ಗುಣನೆಂದು ಶಾಸ್ತ್ರಗಳಲ್ಲಿ ಹೇಳಿರುವಾಗ ಆತನ ಗುಣಗಳಲ್ಲಿ ಆಸಕ್ತನಾಗಿರುವದೆಂದರೆಂತು ?' ಎಂದು ಕೆಲವರು ಕೇಳುವದುಂಟು. ಆದರೆ ಲೋಕದಲ್ಲಿ ತೋರುತ್ತಿರುವ ಗುಣಗಳೆಲ್ಲ ಯಾವವು ? ಭಗವಂತನನ್ನು ಬಿಟ್ಟು ಪ್ರಪಂಚದ ವಸ್ತುಗಳಿಗೆ ಗುಣಗಳು ಎಲ್ಲಿಂದ ಬಂದಾವು ? ದೀಪವನ್ನು ಬಿಟ್ಟು ಬೆಳಕು ಇರುವದಾದೀತೆ ?

ಬುದ್ಧಿರ್ಜ್ಞಾನಮಸಮ್ಮೋಹಃ ಕ್ಷಮಾ ಸತ್ಯಂ ದಮಃ ಶಮಃ ।
ಸುಖಂ ದುಃಖಂ ಭವೋಽಭಾವೋ ಭಯಂ ಚಾಭಯಮೇವ ಚ ॥
ಅಹಿಂಸಾ ಸಮತಾ ತುಷ್ಟಿಸ್ತಪೋ ದಾನಂ ಯಶೋಽಯಶಃ ।
ಭವನ್ತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ ॥

ಗೀ. ೧೦-೪, ೫

ಸೂಕ್ಷ್ಮಾರ್ಥಗಳನ್ನು ತಿಳಿಯುವ ಸಾಮರ್ಥ್ಯವೆಂಬ **ಬುದ್ಧಿ** ; ಆತ್ಮಾದಿಪದಾರ್ಥಗಳನ್ನು ಅರಿಯುವ ಶಕ್ತಿಯಾದ **ಜ್ಞಾನ**; ಯಾವ ಪ್ರವೃತ್ತಿಯ ವಿಷಯದಲ್ಲಾದರೂ ಥಟ್ಟನೆ ಹೇಗೆ ವರ್ತಿಸಬೇಕೋ ಆ ಗುಣವಾದ **ಅಸಮ್ಮೋಹ**, ತನ್ನನ್ನು ಬೈದರೂ ಹೊಡೆದರೂ ತಡೆದುಕೊಂಡು ಮನಸ್ಸಿನಲ್ಲಿ ವಿಕಾರವಿಲ್ಲದೆ ಇರುವ ಚಿತ್ತಧರ್ಮವಾದ **ಕ್ಷಮೆ**; ಕಂಡದ್ದನ್ನು ಕಂಡಂತೆ ಕೇಳಿದ್ದನ್ನು ಕೇಳಿದ್ದಂತೆ, ಸ್ವಲ್ಪವೂ ಮಾರ್ಪಡಿಸದೆ ಮತ್ತೊಬ್ಬರಿಗೆ ತಿಳಿಯಿಸುವ **ಸತ್ಯ**, ಹೊರಗಿನ ಇಂದ್ರಿಯಗಳನ್ನು ಬಿಗಿಹಿಡಿದುಕೊಳ್ಳುವ **ದಮ**, ಅಂತಃಕರಣವನ್ನು ವಶದಲ್ಲಿಟ್ಟುಕೊಳ್ಳುವ **ಶಮ**, **ಸುಖ**, **ದುಃಖ**, ಉಂಟಾಗುವ **ಭವ**, ಇಲ್ಲದಂತಾಗುವ **ಅಭಾವ**, **ಭಯ**, **ಅಭಯ**, ಪ್ರಾಣಿಗಳನ್ನು ಪೀಡಿಸದ **ಅಹಿಂಸೆ**, ಮನಸ್ಸಿನಲ್ಲಿ ಏರುಪೇರಿಲ್ಲದ **ಸಮತೆ**,

ಸಿಕ್ಕಿದಷ್ಟೇ ಸಾಕೆನ್ನುವ ತುಷ್ಟಿ, ತಪಸ್ಸು, ದಾನ, ಕೀರ್ತಿ, ಅಕೀರ್ತಿ- ಇವೆಲ್ಲ ಗುಣಗಳೂ ಪ್ರಾಣಿಗಳಿಗೆ ನನ್ನಿಂದಲೇ ಆಗುತ್ತಿರುವವು' –ಎಂದು ಭಗವಂತನು ಹೇಳಿರುತ್ತಾನೆ.

ಹಾಗಾದರೆ ಗುಣಗಳಿಗೆ ಹೇಗೋಹಾಗೆ ದೋಷಗಳಿಗೂ ಭಗವಂತನೇ ಆಧಾರನಾಗಿರುವದರಿಂದ ಆತನು ಸದೋಷನೆಂದೂ ಹೇಳಬೇಕಾಗುವದಲ್ಲ ! ಎಂದರೆ ಇದಕ್ಕೆ ಉತ್ತರವೇನೆಂದರೆ : ಗುಣಗಳಂತೆ ದೋಷಗಳೂ ಪರಮಾತ್ಮನಿಗೇ ಸಂಬಂಧಪಟ್ಟಿರುವವೆಂದು ಹೇಳಬಹುದಾದರೂ ಆತನನ್ನು ಸಗುಣನೆಂದು ಕರೆಯುವದರಲ್ಲಿಯೇ ಹೆಚ್ಚಿನ ಔಚಿತ್ಯವಿದೆ. ಅದೇಕೆಂದರೆ: ಭಗವಂತನು ಪರಮಪ್ರೇಮಾಸ್ಪದನಾಗಿ ಆನಂದರೂಪನಾಗಿರುವದರಿಂದ ಲೋಕದಲ್ಲಿ ಎಲ್ಲೆಲ್ಲಿ ಗುಣಗಳಿರುವವೋ ಅಲ್ಲಿ ಪ್ರೇಮವು ತೋರಿಕೊಳ್ಳುವಂತೆ ದೋಷಗಳಲ್ಲಿ ತೋರುವದಿಲ್ಲ. ಕೆಟ್ಟವರಲ್ಲಿಯೂ ಪರಮಾತ್ಮನು ಇದ್ದೇಇರುವನಾದರೂ ಮಡಕೆಯೊಳಗಿನ ದೀಪದ ಬೆಳಕಿನಂತೆ ಪರಮಾತ್ಮಪ್ರೇಮವು ಅಲ್ಲಿ ಬೆಳಗಿ ತೋರಿಕೊಳ್ಳುವದಿಲ್ಲ ; ಆದರೆ ಗುಣವಂತರಲ್ಲಿ- ಗಾಜಿನ ಪಾತ್ರೆಯೊಳಗಿರುವ ದೀಪದಂತೆ–ಒಳಗೂ ಹೊರಗೂ ಪ್ರೇಮವು ತೋರಿಕೊಳ್ಳಬಲ್ಲದ್ದಾಗಿರುತ್ತದೆ. ಆದ್ದರಿಂದ ಭಗವಂತನನ್ನು ಸಗುಣನೆಂದೇ ಹೇಳುವದು ಹೆಚ್ಚು ಒಪ್ಪುತ್ತದೆ.

ಇನ್ನೊಂದು ಮಾತು : ಪರಮಾತ್ಮನು ಸತ್ತ್ವರಜಸ್ತಮೋಗುಣಗಳಿಗೆ ಆಧಾರನಾಗಿರುವದರಿಂದ ಅವನಲ್ಲಿ ಆ ಗುಣಗಳು ತೋರಿಕೊಳ್ಳುತ್ತಿದ್ದರೂ ಅವನೇನೂ ಆ ಗುಣಗಳಿಗೆ ಸಂಬಂಧಪಟ್ಟಿರುವದಿಲ್ಲ.

**ಯೇ ಚೈವ ಸಾತ್ತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ ।**
**ಮತ್ತ ಏವೇತಿ ತಾನ್ ವಿದ್ಧಿ ನ ತ್ವಹಂ ತೇಷು ತೇ ಮಯಿ ॥**
**ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್ ।**
**ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥**

ಗೀ ೭–೧೨, ೧೩

ಎಂದಿರುವಂತೆ ಗುಣಮಯವಾಗಿರುವ ಬುದ್ಧಿಯ ಜನರು ಗುಣಗಳಿಗೆಲ್ಲ ಆಧಾರನಾಗಿದ್ದರೂ ಅವುಗಳನ್ನು ಮಿಾರಿರುವ ನಿರ್ಗುಣಸ್ವರೂಪನಾದ ಆತನನ್ನು ಅರಿಯಲಾರದೆ ಇರುವರು. ಯಾವ ಮಹಾತ್ಮರು ಗುಣಾತೀತರೇ ಆಗಿರುವರೋ ಅವರು ಆತನನ್ನು ನಿರ್ಗುಣನೆಂದೇ ಭಾವಿಸುವರು. ಆದರೂ ವ್ಯವಹಾರದಲ್ಲಿ ಸಾಧಕರಾಗಿರುವವರು

**ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।**
**ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥**

ಗೀ. ೧೪–೨೬

ಎಂಬ ಭಗವದುಕ್ತಿಯಂತೆ ಅವ್ಯಭಿಚರಿತವಾದ ಸಗುಣಭಕ್ತಿಯಿಂದ ಭಜಿಸುತ್ತಿರುವವರು ಮೂರೂ ಗುಣಗಳನ್ನು ಮೀರಿ ಗುಣಾತೀತನಾದ ಪರಬ್ರಹ್ಮವೇ ಆಗಿರುವ ಭಗವಂತನ ಸಾಯುಜ್ಯವನ್ನೇ ಪಡೆದು ತನ್ಮಯರಾಗುವರು.

**ಯಃ ಸೇವತೇ ಮಾಮಗುಣಂ ಗುಣಾತ್ಪರಂ**
**ಹೃದಾ ಕದಾ ವಾ ಯದಿ ವಾ ಗುಣಾತ್ಮಕಮ್ ।**
**ಸೋಽಹಂ ಸ್ವಪಾದಾಞ್ಚಿತರೇಣುಭಿಃ ಸ್ಪೃಶನ್**
**ಪುನಾತಿ ಲೋಕತ್ರಿತಯಂ ಯಥಾ ರವಿಃ ॥**

**ಅಧ್ಯಾ. ರಾಮಾ. ಉತ್ತರಕಾಂಡ ೫-೬೧**

'ಯಾವನು ನಿರ್ಗುಣನಾದ ನನ್ನನ್ನು ಗುಣಗಳನ್ನು ಮೀರಿದವನೆಂದಾಗಲಿ ಗುಣಾತ್ಮಕನೆಂದಾಗಲಿ ಹೃದಯದಲ್ಲಿ ಸೇವಿಸುತ್ತಿರುವನೋ, ಆತನು ನನ್ನ ರೂಪನೇ ಆಗಿದ್ದಾನೆ. ಆತನು ತನ್ನ ಪಾದಧೂಳಿಯಿಂದ ಮೂರು ಲೋಕವನ್ನೂ ಸೂರ್ಯನಂತೆ ಪವಿತ್ರಗೊಳಿಸುವನು' ಎಂದು ಶ್ರೀರಾಮಚಂದ್ರನು ನುಡಿದಿರುತ್ತಾನೆ.

ಇಷ್ಟೆಲ್ಲ ಹೇಳಿದಮೇಲೂ ಗುಣಮಾಹಾತ್ಮ್ಯಾಸಕ್ತಿಯಲ್ಲಿರುವ ಒಂದು ವಿಶೇಷವನ್ನು ಬಿಡಿಸಿ ಹೇಳಬೇಕಾಗಿರುತ್ತದೆ. ಲೋಕದಲ್ಲಿ ಸದ್ಗುಣಗಳೆಂದು ನಾವು ತಿಳಿಯುವ ಗುಣಗಳು ಒಬ್ಬೊಬ್ಬ ಮಹಾಪುರುಷನಲ್ಲಿ ನಿರತಿಶಯವಾಗಿರುವದು ತೋರಿಕೊಂಡಂತೆಯೇ ಅವುಗಳ ಮಾಹಾತ್ಮ್ಯೆಯು ನಮಗೆ ಮನಸ್ಸಿಗೆ ತಾಕುವದು. ಬುದ್ಧನಲ್ಲಿ ತೋರಿದ **ಅಹಿಂಸೆ,** ಹರಿಶ್ಚಂದ್ರನಲ್ಲಿ ತೋರಿದ **ಸತ್ಯಸಂಧತೆ** ಇವುಗಳನ್ನು ಕಂಡವರಿಗೆ (ಅಥವಾ ಅವರ ಚರಿತ್ರೆಗಳನ್ನು ಕೇಳಿದವರಿಗೆ) ಮಾತ್ರವೇ ಅಹಿಂಸೆ ಎಂದರೇನು, ಸತ್ಯವೆಂದರೇನು?–ಎಂಬುದರ ಪೂರ್ಣಭಾವನೆಯು ಮನಸ್ಸಿಗೆ ಹತ್ತೀತು. ಆದರೆ ಮನುಷ್ಯರಿಗೆ ಸದ್ಗುಣಗಳನ್ನೆಲ್ಲ ನಡತೆಯಿಂದ ತೋರಿಸಿ ಕೊಡುವದಕ್ಕೆ ಈಶ್ವರನೊಬ್ಬನಲ್ಲದೆ ಮತ್ತೆ ಯಾರು ಸಮರ್ಥರಾದಾರು? ವಾಲ್ಮೀಕಿ ಋಷಿಗಳು ಎಲ್ಲಾ ಬಗೆಯ ಸದ್ಗುಣಗಳನ್ನೂ ಒಂದು ಕಾವ್ಯದಲ್ಲಿ ಬರೆದು ಲೋಕೋಪಕಾರವನ್ನು ಮಾಡಬೇಕೆಂದು ಬಯಸಿ ಅಂಥ ಪುರುಷನು ಭೂಲೋಕದಲ್ಲಿ ಎಲ್ಲಿಯೂ ಸಿಕ್ಕದೆ ಇರುವಲ್ಲಿ ನಾರದರು ಹೇಳಿದ ಶ್ರೀರಾಮನ ಚರಿತ್ರೆಯನ್ನು ಕೇಳಿದ ಮೇಲೆ ಸದ್ಗುಣಗಳೆಲ್ಲ ಶ್ರೀರಾಮನೊಬ್ಬನಲ್ಲಿಯೇ ಇರುವವೆಂದು ನಿಶ್ಚಯಿಸಿ ಕೊನೆಗೆ ಶ್ರೀಮದ್ರಾಮಾಯಣವನ್ನು ಬರೆದರೆಂಬುದು ರಾಮಾಯಣವನ್ನು ಪಾರಾಯಣ ಮಾಡಿದವರಿಗೆಲ್ಲ ತಿಳಿದ ಮಾತು. ಭಗವಂತನ ಗುಣಗಳು ಎಷ್ಟೆಂಬುದು ಯಾರೊಬ್ಬರಿಗೂ ಲೆಕ್ಕಕ್ಕೆ ಬರುವಂತಿಲ್ಲ.

**ಅಸಿತಗಿರಿಸಮಂ ಸ್ಯಾತ್ ಕಜ್ಜಲಂ ಸಿನ್ಧುಪಾತ್ರೇ ।**
**ಸುರತರುವರಶಾಖಾ ಲೇಖಿನೀ ಪತ್ರಮುರ್ವೀ ॥**

**ಲಿಖತಿ ಯದಿ ಗೃಹೀತ್ವಾ ಶಾರದಾ ಸರ್ವಕಾಲಂ**
**ತದಪಿ ತವ ಗುಣಾನಾಮೀಶ ಪಾರಂ ನ ಯಾತಿ ||**

ಶಿವಮಹಿಮ್ನಸ್ತೋತ್ರ, ೩೨

ಎಂಬಂತೆ 'ಅಂಜನಾದ್ರಿಯಷ್ಟು ಕಾಡಿಗೆಯನ್ನು ಸಮುದ್ರವೆಂಬ ಮಶೀಕುಡಿಕೆಯಲ್ಲಿ ಹಾಕಿ ಕಲ್ಪತರುವೃಕ್ಷದಕೊಂಬೆಯನ್ನು ಲೇಖನಿಯಾಗಿಟ್ಟುಕೊಂಡು ಸರಸ್ವತಿಯೇ ಭೂಮಿಯನ್ನೇ ಬರೆಯುವ ಕಾಗದವನ್ನಾಗಿ ಮಾಡಿಕೊಂಡು ಎಲ್ಲೆಲ್ಲಿಯೂ ಯಾವಾಗಲೂ ಬರೆಯುತ್ತಿದ್ದರೂ ಆ ಪರಮೇಶ್ವರನ ಗುಣಗಳು ಮುಗಿಯುವವೆಂಬ ನಿರೀಕ್ಷಣೆಯಿಲ್ಲ.' ಪರಮಾತ್ಮನ ಗುಣಗಳು ಎಂಥವರ ಮನಸ್ಸನ್ನಾದರೂ ಸೆಳೆಯುವಂಥವು. ಅಂಥ ಗುಣಗಳಲ್ಲಿ ಒಂದೊಂದು ಗುಣದ ಒಂದೊಂದು ತುಣುಕು ಇದ್ದರೂ ಮನಸೋತು ಅವುಗಳಿಗೆ ದಾಸರಾಗುವೆವು. ಪರಮಾತ್ಮನ ಗುಣಗಳ ನೆರಳಿನಲ್ಲಿ ನಮಗೆ ತೋರುವ ಗುಣಲೇಶಗಳುಳ್ಳ ವಸ್ತುಗಳಿಗೇ ಹೀಗೆ ನಾವು ಮರುಳಾಗುತ್ತಿರುವಾಗ ಪರಮಾತ್ಮನ ಗುಣಗಳನ್ನೇ ಮನಸ್ಸಿನಲ್ಲಿ ಹೊರಳಾಡಿಸಿದರೆ, ಮತ್ತು ಅವುಗಳ ವರ್ಣನೆಯನ್ನು ದೊಡ್ಡವರ ಬಾಯಿಂದ ಕೇಳಿದರೆ, ಆಗ ನಮ್ಮಮೇಲೆ ಎಂಥ ಪರಿಣಾಮವು ಆಗಬೇಕು ! ನಮ್ಮ ಮನಸ್ಸನ್ನು ಸೆಳೆಯುತ್ತಿರುವವು ಬಾಹ್ಯವಸ್ತುಗಳ ಗುಣಗಳು- ಎಂಬುದು ಅವಿವೇಕಿಗಳ ಅಭಿಪ್ರಾಯ. ನಿಜವಾಗಿ ಅವು ಭಗವಂತನ ಗುಣಗಳ ಅಂಶದ ನೆಳಲುಮಾತ್ರವಾಗಿರುವವು. ಅಂತೂ ನಮ್ಮ ಮನಸ್ಸನ್ನು ತನ್ನ ಗುಣಗಳಿಂದ ಅಥವಾ ಗುಣಗಳ ಆಭಾಸದಿಂದ ಸೆಳೆಯುತ್ತಿರುವ ಆತನಿಗೆ '**ಹರಿ**' ಎಂಬ ನಾಮವು ಅನ್ವರ್ಥವಾಗಿರುತ್ತದೆ.

## ೨. ರೂಪಾಸಕ್ತಿ

೧೪೭. ಭಕ್ತಿಯ ಎರಡನೆಯ ಪ್ರಕಾರವು **ರೂಪಾಸಕ್ತಿ**. ಯಾವ ಗುಣವೇ ಆಗಲಿ ರೂಪವುಳ್ಳ ವಸ್ತುವಿನಲ್ಲಿಯೇ ತೋರಿಕೊಳ್ಳಬೇಕಾಗಿರುವದರಿಂದ ಭಗವಂತನ ಗುಣಗಳನ್ನು ನಾವು ಅರಿತುಕೊಳ್ಳುವದಕ್ಕೆ ಆತನ ರೂಪದಲ್ಲಿ ಮೊದಲು ಆಸಕ್ತಿಯನ್ನಿಡಬೇಕಾಗುವದು. ಪರಮಾತ್ಮನು ನಿರ್ಗುಣನೂ ನೀರೂಪನೂ ಆಗಿರುತ್ತಿದ್ದರೂ ಆತನಿಂದಲೇ ಎಲ್ಲಾ ಗುಣಗಳೂ ರೂಪಗಳೂ ಹೊರತೋರಿಕೊಂಡಿರುವವು. ಇದರಲ್ಲಿ ಏನೂ ಆಶ್ಚರ್ಯವಿಲ್ಲ. ಪರಮಾತ್ಮನು ತನ್ನ ಪರಭಾವದಿಂದ ನೀರೂಪನಾದರೂ ಭಕ್ತರನ್ನು ಅನುಗ್ರಹಿಸುವದಕ್ಕಾಗಿ ಮಾಯಾಮಯವಾದ ರೂಪವನ್ನು ಧರಿಸುವನು. ಹಿಂದಕ್ಕೆ ಶ್ವೇತದ್ವೀಪದಲ್ಲಿ ಭಗವಂತನನ್ನು ನಾರದರು ವಿವಿಧನಾಮಗಳಿಂದ ಸ್ತುತಿಸಿದಾಗ **ಶ್ರೀಮನ್ನಾರಾಯಣನು** ದಿವ್ಯಸುಂದರವಾದ ರೂಪನ್ನು ಧರಿಸಿ ಆ ದೇವರ್ಷಿಗೆ ತೋರಿಕೊಂಡನು.

**ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ |**
**ಸರ್ವಭೂತಗುಣೈರ್ಯುಕ್ತಂ ನೈವಂ ಮಾಂ ಜ್ಞಾತುಮರ್ಹಸಿ ||**

ಮೋ. ಧ. ೩೩೯-೪೫

ಭಗವಂತನು 'ಎಲೈ ನಾರದನೆ, ನೀನು ಕಾಣುತ್ತಿರುವೆಯಲ್ಲ, ಇದು ನನ್ನ ಮಾಯೆ; ನಾನು ಸರ್ವಭೂತಗುಣಗಳಿಂದ ಕೂಡಿದ ಒಬ್ಬ ದೇಹಿಯೇ– ಎಂದು ನನ್ನನ್ನು ತಿಳಿಯದಿರು' ಎಂದನು. ಭಕ್ತನಾದ ನಾರದನನ್ನು ಅನುಗ್ರಹಿಸುವದಕ್ಕಾಗಿಯೇ ಆ ದಿವ್ಯರೂಪವನ್ನು ತನ್ನ ಇಚ್ಛಾಮಾತ್ರದಿಂದ ಭಗವಂತನು ನಿರ್ಮಿಸಿಕೊಂಡನು. ಲೋಕದಲ್ಲಿ ವಾಯುವಿಗೆ ರೂಪವಿಲ್ಲವಾದರೂ ಅದಕ್ಕಿರುವ ಮಹಾಶಕ್ತಿಯನ್ನು ತೋರಿಸಿಕೊಳ್ಳಬೇಕಾದರೆ ಬಿರುಗಾಳಿಯಾಗಿ ದೊಡ್ಡದೊಡ್ಡ ಮರಗಳೇ ಮುಂತಾದವನ್ನು ಕಿತ್ತುರುಳಿಸಿದರೆ ಅವುಗಳ ರೂಪವನ್ನು ಅನುಸರಿಸಿಕೊಂಡೇ ಆ ಶಕ್ತಿಯನ್ನು ಕಲ್ಪಿಸಿಕೊಳ್ಳಬೇಕಾಗುವದು. ನೀರಿನ ಹಬೆಯ ಮಹಿಮೆಯನ್ನು ಅದು ಜಹಜುಗಳನ್ನೂ ಹೊಗೆಬಂಡಿಗಳನ್ನೂ ನಡೆಯಿಸುವಾಗಲೇ ಗೊತ್ತುಮಾಡಿಕೊಳ್ಳಬೇಕಾಗುವದು. ಭೂಮಂಡಲದಲ್ಲೆಲ್ಲ ವ್ಯಾಪಿಸಿಕೊಂಡಿರುವ ವಿದ್ಯುಚ್ಛಕ್ತಿಯ ಮಹಿಮೆಯನ್ನು ವಿದ್ಯುದ್ದೀಪಗಳಿಂದಲೂ ಮಿಂಚು, ಗುಡುಗು–ಮುಂತಾದ ರೂಪಗಳಿಂದಲೂ ಅದರಿಂದ ಚಲಿಸುವ ದೊಡ್ಡದೊಡ್ಡ ಯಂತ್ರಗಳಿಂದಲೂ ಅರಿಯಬೇಕಾಗಿದುವದು. ಇದರಂತೆ ನಿರ್ಗುಣನೂ ನಿರಾಕಾರನೂ ಆಗಿರುವ ಪರಮಾತ್ಮನ ಮಹಿಮೆಯನ್ನೂ ಅನೇಕ ಕಲ್ಯಾಣಗುಣಗಳಿಂದೊಡಗೂಡಿದ ಬಗೆಬಗೆಯ ರೂಪಗಳನ್ನು ಧರಿಸಿ ನಮಗೆ ಆತನು ಕೊಡುವ ದರ್ಶನದಿಂದಲೇ ಅರಿತುಕೊಳ್ಳಬೇಕಾಗಿರುತ್ತದೆ.

ಪರಮಾತ್ಮನು ನಿರ್ಗುಣನಾಗಿದ್ದರೂ ನೀರೂಪನಾಗಿದ್ದರೂ ಸಗುಣವಾದ ಸರೂಪವಾದ ಜಗತ್ತಿನ ಸೃಷ್ಟಿಸ್ಥಿತಿಲಯಗಳು ಆತನಿಂದಲೇ ಉಂಟಾಗುತ್ತಿರುವದು ಹೇಗೆಂಬುದನ್ನು ತಿಳಿಯಿಸುವದಕ್ಕೆ ಪರಾಶರರು ಮೈತ್ರೇಯನಿಗೆ ಹೇಳಿದ ವಾಕ್ಯವಿದು:

**ಶಕ್ತಯಃ ಸರ್ವಭಾವಾನಾಮಚಿನ್ತ್ಯಜ್ಞಾನಗೋಚರಾಃ ।**
**ಯತೋಽತೋ ಬ್ರಹ್ಮಣಸ್ತಾಸ್ತು ಸರ್ಗಾದ್ಯಾ ಭಾವಶಕ್ತಯಃ ॥**
**ಭವನ್ತಿ ತಪತಾಂ ಶ್ರೇಷ್ಠ ಪಾವಕಸ್ಯ ಯಥೋಷ್ಣತಾ ।**
**ತನ್ನಿಬೋಧ ಯಥಾ ಸರ್ಗೇ ಭಗವಾನ್ ಸಂಪ್ರವರ್ತತೇ ॥**

ವಿ. ಪು. ೧-೩-೨, ೩

'ಎಲೈ ತಪಸ್ವಿಶ್ರೇಷ್ಠನೆ, ಸರ್ವಭಾವಗಳಿಗೂ ಅಚಿಂತ್ಯಜ್ಞಾನಕ್ಕೆ ಮಾತ್ರ ಗೋಚರವಾಗುವ ಶಕ್ತಿಗಳುಂಟು; ಬೆಂಕಿಗೆ ಬಿಸಿಯಿರುವದಿಲ್ಲವೆ? ಹಾಗೆಯೇ ಬ್ರಹ್ಮಕ್ಕೂ ಸೃಷ್ಟಿಶಕ್ತಿಯೇ ಮುಂತಾದ ಶಕ್ತಿಗಳುಂಟು. ಆದ್ದರಿಂದ ಆ ಭಗವಂತನು ನಿರ್ಗುಣನಾದರೂ ಸೃಷ್ಟ್ಯಾದಿಗಳಲ್ಲಿ ಪ್ರವರ್ತಿಸುತ್ತಾನೆ.'

ಇದರಂತೆ ಕೇಶಿಧ್ವಜನು ಹೇಳಿರುವ ವಾಕ್ಯವೂ ಇದೆ:

**ವಿಷ್ಣುಶಕ್ತಿಃ ಪರಾ ಪ್ರೋಕ್ತಾ ಕ್ಷೇತ್ರಜ್ಞಾಖ್ಯಾ ತಥಾಪರಾ ।**
**ಅವಿದ್ಯಾ ಕರ್ಮಸಂಜ್ಞಾಽನ್ಯಾ ತೃತೀಯಾ ಶಕ್ತಿರಿಷ್ಯತೇ ॥**

ವಿ. ಪು. ೬-೭-೬೧

‘ವಿಷ್ಣುಶಕ್ತಿ ಎಂಬ ಪರಶಕ್ತಿ, ಕ್ಷೇತ್ರಜ್ಞಶಕ್ತಿ ಎಂಬ ಅಪರಶಕ್ತಿ, ಕರ್ಮವೆಂಬ ಹೆಸರಿನ ಅವಿದ್ಯಾಶಕ್ತಿಯು ಮೂರನೆಯದು.’

**ತಯಾ ತಿರೋಹಿತತ್ವಾಚ್ಚ ಶಕ್ತಿಃ ಕ್ಷೇತ್ರಜ್ಞಸಂಜ್ಞಿತಾ ।**
**ಸರ್ವಭೂತೇಷು ಭೂಪಾಲ ತಾರತಮ್ಯೇನ ಲಕ್ಷ್ಯತೇ ॥ ೬೩ ॥**

‘ಅವಿದ್ಯೆಯು ಮುಸುಕಿರುವದರಿಂದ ಕ್ಷೇತ್ರಜ್ಞಶಕ್ತಿಯು ಸರ್ವಭೂತಗಳಲ್ಲಿಯೂ ತಾರತಮ್ಯದಿಂದ ಕಾಣಿಸುತ್ತಿರುವದು.’

**ಶಕ್ರಸ್ಸಮಸ್ತದೇವೇಭ್ಯಸ್ತತಶ್ಚಾತಿ ಪ್ರಜಾಪತಿಃ ।**
**ಹಿರಣ್ಯಗರ್ಭೋಽಪಿ ತತಃ ಪುಂಸಃ ಶಕ್ತ್ಯುಪಲಕ್ಷಿತಃ ॥ ॥ ೬೭ ॥**
**ಏತಾನ್ಯಶೇಷರೂಪಾಣಿ ತಸ್ಯ ರೂಪಾಣಿ ಪಾರ್ಥಿವ ।**
**ಯತಸ್ತಚ್ಛಕ್ತಿಯೋಗೇನ ಯುಕ್ತಾನಿ ನಭಸಾ ಯಥಾ ॥ ೬೮ ॥**

“ಇಂದ್ರನು ದೇವತೆಗಳೆಲ್ಲರಿಗಿಂತಲೂ, ಪ್ರಜಾಪತಿಯು ಅವನಿಗಿಂತಲೂ, ಹಿರಣ್ಯಗರ್ಭನು ಅವನಿಗಿಂತಲೂ– ಆ ಪುರುಷನ ಶಕ್ತಿಯಿಂದ ಉಪಲಕ್ಷಿತರಾಗಿರುತ್ತಾರೆ. ಈ ಎಲ್ಲವೂ ಆತನ ರೂಪಗಳೇ ; ಏಕೆಂದರೆ– ಆಕಾಶದಿಂದ ಮಿಕ್ಕ ಭೂತಗಳೆಲ್ಲವೂ ವ್ಯಾಪ್ತವಾಗಿರುವಂತೆ– ಇದೆಲ್ಲಕ್ಕೂ ಆತನ ಶಕ್ತಿಯ ಸಂಬಂಧವೇ ಇರುತ್ತವೆ.”

**ದ್ವಿತೀಯಂ ವಿಷ್ಣುಸಂಜ್ಞಸ್ಯ ಯೋಗಿಧ್ಯೇಯಂ ಮಹಾಮತೇ ।**
**ಅಮೂರ್ತಂ ಬ್ರಹ್ಮಣೋ ರೂಪಂ ಯತ್ಸದಿತ್ಯುಚ್ಯತೇ ಬುಧೈಃ ॥೬೯॥**
**ಸಮಸ್ತಾಃ ಶಕ್ತಯಶ್ಚೈತಾ ನೃಪ ಯತ್ರ ಪ್ರತಿಷ್ಠಿತಾಃ ।**
**ತದ್ವಿಶ್ವರೂಪವೈರೂಪ್ಯಂ ರೂಪಮನ್ಯದ್ಧರೇರ್ಮಹತ್ ॥ ೭೦ ॥**

“ಆ ವಿಷ್ಣುವೆಂಬ ಹೆಸರಿನ ಪರಮಾತ್ಮನ ಎರಡನೆಯ ರೂಪವನ್ನು ಯೋಗಿಗಳು ಧ್ಯಾನಿಸುವರು. ಅದು ಬ್ರಹ್ಮದ ಅಮೂರ್ತರೂಪವು, ಅದನ್ನು ಬಲ್ಲವರು ‘**ಸತ್**’ ಎಂದು ಕರೆಯುತ್ತಾರೆ. ಈ ಶಕ್ತಿಗಳೆಲ್ಲವೂ ಅದನ್ನೇ ಆಶ್ರಯಿಸಿಕೊಂಡಿರುತ್ತವೆ. ಅದು ವಿಶ್ವರೂಪಕ್ಕಿಂತ ವಿಲಕ್ಷಣವಾಗಿರುವ ಆ ಹರಿಯ ಇನ್ನೊಂದು ಮಹಾ ರೂಪವು.”

ಇದೇ ಕೇಶಿಧ್ವಜನು ಖಾಂಡಿಕ್ಯನಿಗೆ ಯೋಗಿಯಾದವನು ಚಿತ್ತವನ್ನು ಶ್ರೀಹರಿಯ ರೂಪದಲ್ಲಿ ಧಾರಣೆಮಾಡಬೇಕೆಂದು ವರ್ಣಿಸಿರುವ ಬಗೆಹೀಗಿದೆ :

**ಯಚ್ಚ ಮೂರ್ತಂ ಹರೇ ರೂಪಂ ಯಾದೃಕ್ಚಿಂತ್ಯಂ ನರಾಧಿಪ ।**
**ತಚ್ಛ್ರೂಯತಾಮನಾಧಾರಾ ಧಾರಣಾ ನೋಪಪದ್ಯತೇ ॥**

ವಿ. ಪು. ೬–೭–೭೯

ಪ್ರಸನ್ನವದನಂ ಚಾರು ಪದ್ಮಪತ್ರೋಪಮೇಕ್ಷಣಮ್ ।
ಸುಕಪೋಲಂ ಸುವಿಸ್ತೀರ್ಣಲಲಾಟಫಲಕೋಜ್ಜ್ವಲಮ್ ॥
ಸಮಕರ್ಣಾನ್ತವಿನ್ಯಸ್ತಚಾರುಕುಣ್ಡಲಭೂಷಣಮ್ ।
ಕಂಬುಗ್ರೀವಂ ಸುವಿಸ್ತೀರ್ಣಶ್ರೀವತ್ಸಾಂಕಿತವಕ್ಷಸಮ್ ॥
ವಲಿತ್ರಿಭಙ್ಗಿನಾ ಮಗ್ನನಾಭಿನಾ ಹ್ಯುದರೇಣ ಚ ।
ಪ್ರಲಮ್ಬಾಷ್ಟಭುಜಂ ವಿಷ್ಣುಮಥವಾಪಿ ಚತುರ್ಭುಜಮ್ ॥
ಸಮಸ್ಥಿತೋರುಜಙ್ಘಂ ಚ ಸುಸ್ಥಿತಾಙ್ಘ್ರಿವರಾಮ್ಬುಜಮ್ ।
ಚಿನ್ತಯೇದ್ ಬ್ರಹ್ಮಭೂತಂ ತಂ ಪೀತನಿರ್ಮಲವಾಸಸಮ್ ॥
ಕಿರೀಟಹಾರಕೇಯೂರಕಟಕಾದಿವಿಭೂಷಿತಮ್ ।
ಶಾರ್ಙ್ಗಶಙ್ಖಗದಾಖಡ್ಗಚಕ್ರಾಕ್ಷವಲಯಾನ್ವಿತಮ್ ॥
ವರದಾಭಯಹಸ್ತಂ ಚ ಮುದ್ರಿಕಾರತ್ನಭೂಷಿತಮ್ ।
ಚಿನ್ತಯೇತ್ತನ್ಮಯೋ ಯೋಗೀ ಸಮಾಧಾಯಾತ್ಮಮಾನಸಮ್ ॥
ತಾವದ್ ಯಾವದ್ದೃಢೀಭೂತಾ ತತ್ರೈವ ನೃಪ ಧಾರಣಾ ॥

ವಿ. ಪು. ೬-೭-೮೦ರಿಂದ ೮೬ರವರೆಗೆ

"ಎಲೈ ನರಾಧಿಪನೆ, ಯಾವದೊಂದೂ ಆಧಾರವಿಲ್ಲದೆ ಧಾರಣೆಯನ್ನು ಮಾಡುವ ದಾಗಲಾರದಾದ್ದರಿಂದ ಧಾರಣೆಗೆ ಯೋಗ್ಯವಾದ ಆ ಶ್ರೀಹರಿಯ ರೂಪವನ್ನು ಹೇಳುವೆನು ಕೇಳು. ಪ್ರಸನ್ನವಾದ ಮುಖ, ಸುಂದರವಾದ ಕಮಲದಳದಂತಿರುವ ಕಣ್ಣುಗಳು, ಸುಂದರವಾದ ಕೆನ್ನೆ, ಅಗಲವಾಗಿರುವ ಹಣೆಯಿಂದ ಹೊಳೆಯುತ್ತಿರ ಬೇಕು. ಸಮನಾಗಿರುವ ಕುಂಡಲಗಳಿಂದಲಂಕೃತವಾಗಿರುವ ಕರ್ಣಗಳು, ಶಂಖ ದಂತಿರುವ ಮತ್ತು ವಿಶಾಲವಾಗಿರುವ ಶ್ರೀವತ್ಸಾಂಕಿತವಾದ ಎದೆ, ತ್ರಿವಲಿಗಳಿಂದಲೂ ನಾಭಿಯಿಂದಲೂ ಕೂಡಿದ ಹೊಟ್ಟೆ, ನೀಳಾಗಿರುವ ಎರಡು ಅಥವಾ ನಾಲ್ಕು ತೋಳುಗಳು, ಸಮವಾಗಿರುವ ತೊಡೆಗಳು ಮತ್ತು ಜಂಘೆಗಳು, ಸುಸ್ಥಿತವಾಗಿರುವ ಪಾದಕಮಲ- ಇವುಗಳಿಂದೊಡಗೂಡಿರುವ ಪೀತಾಂಬರಧಾರಿಯಾದ ಆ ಬ್ರಹ್ಮ ಭೂತನಾದ ಹರಿಯನ್ನು ಧ್ಯಾನಿಸಬೇಕು. ಕಿರೀಟ, ಹಾರ, ಭುಜಕೀರ್ತಿ, ಕಡಗ-ಮುಂತಾದವುಗಳಿಂದಲಂಕೃತನಾಗಿ ಶಾರ್ಙ್ಗಧನುಸ್ಸು, ಶಂಖ, ಗದೆ, ಖಡ್ಗ, ಚಕ್ರ, ಅಕ್ಷವಲಯ, ವರದಾಭಯಹಸ್ತ[1], ರತ್ನಖಚಿತವಾದ ಉಂಗುರಭೂಷಣ- ಇವು ಗಳಿಂದೊಡಗೂಡಿದ ರೂಪವನ್ನು ಒಂದೇಸಮನೆ ಧ್ಯಾನಿಸುತ್ತಿದ್ದು ಅಲ್ಲಿಯೇ ಧಾರಣೆ ಯನ್ನು ದೃಢಗೊಳಿಸಿಕೊಳ್ಳಬೇಕು."

---

1. ಚತುರ್ಭುಜಗಳನ್ನು ಧ್ಯಾನಿಸುವಾಗ ಶಂಖ, ಚಕ್ರ, ಗದೆ, ಪದ್ಮ; ಅಷ್ಟಭುಜ ಳನ್ನು ಧ್ಯಾನಿಸುವಾಗ ಆರು ಕೈಗಳಲ್ಲಿ ಆರು ಆಯುಧಗಳು, ಉಳಿದ ಎರಡು ವರದಾಗ ಭಯಹಸ್ತ –ಹೀಗೆ.

ಈ ರೂಪಾಸಕ್ತಿಯು ಎಷ್ಟರವರೆಗೆ ದೃಢವಾಗಬೇಕೆಂದರೆ .

**ವ್ರಜತಸ್ತಿಷ್ಠತೋಽನ್ಯದ್ವಾ ಸ್ವೇಚ್ಛಯಾ ಕರ್ಮ ಕುರ್ವತಃ ।**
**ನಾಪಯಾತಿ ಯದಾ ಚಿತ್ತಾತ್ ಸಿದ್ಧಾಂ ಮನ್ಯೇತ ತಾಂ ತದಾ ॥**

ವಿ. ಪು. ೬–೭–೮೭

ನಡೆದಾಡುತ್ತಿರಲಿ, ನಿಂತುಕೊಂಡಿರಲಿ ಮತ್ತೆ ಯಾವದೇ ಕರ್ಮವನ್ನು ಮಾಡುತ್ತಿರಲಿ, ರೂಪದ ಸಾಕ್ಷದ್ದರ್ಶನವು ಚಿತ್ತವನ್ನು ಬಿಟ್ಟು ಹೋಗಬಾರದು. ಅಲ್ಲಿಯವರೆಗೂ ನೆಲೆನಿಂತಿದ್ದರೆ ಧಾರಣೆಯು ಸಿದ್ಧವಾದಂತೆ.

## ಗುಣಮಾಹಾತ್ಮ್ಯಾಸಕ್ತಿ–ರೂಪಾಸಕ್ತಿಗಳ ವರ್ಣನೆಯ ಉಪಸಂಹಾರ

೧೮೮. ಭಗವಂತನು ನಾನಾರೂಪದ ನಾನಾಗುಣಗಳುಳ್ಳ ಸರ್ವಭೂತಗಳಲ್ಲಿಯೂ ಇದ್ದುಕೊಂಡು ಆಯಾ ಗುಣರೂಪಗಳಿಂದೊಡಗೂಡಿದವನಂತೆ ತೋರಿಸಿಕೊಳ್ಳುತ್ತಿರುತ್ತಾನೆ.

**ಭೂತೇಷು ವಸತೇ ಸೋಽನ್ತರ್ವಸನ್ತ್ಯತ್ರ ಚ ತಾನಿ ಯತ್ ।**
**ಧಾತಾ ವಿಧಾತಾ ಜಗತಾಂ ವಾಸುದೇವಸ್ತತಃ ಪ್ರಭುಃ ॥**

ವಿ. ಪು. ೬–೫–೮೨

"ಭೂತಗಳೊಳಗೆ ತಾನು ವಾಸವಾಗಿರುವದರಿಂದಲೂ ಅವುಗಳೂ ತನ್ನಲ್ಲಿ ವಾಸಮಾಡಿಕೊಂಡಿರುವದರಿಂದಲೂ ಜಗತ್ತಿನ ಪ್ರಾಣಿಗಳನ್ನು ರಚಿಸಿ ರಕ್ಷಿಸುತ್ತಿರುವನಾದ್ದರಿಂದ ಆತನಿಗೆ '**ವಾಸುದೇವ**'ನೆಂದು ಹೆಸರು.

**ಸ ಸರ್ವಭೂತಪ್ರಕೃತಿಂ ವಿಕಾರಾನ್**
**ಗುಣಾದಿದೋಷಾಂಶ್ಚ ಮುನೇ ವ್ಯತೀತಃ ।**
**ಅತೀತಸರ್ವಾವರಣೋಽಖಿಲಾತ್ಮಾ**
**ತೇನಾಸ್ತೃತಂ ಯದ್ಭುವನಾನ್ತರಾಲೇ ॥**

ವಿ. ಪು. ೬–೫–೮೩

"ಆತನು ಸರ್ವಭೂತಗಳ ಪ್ರಕೃತಿಯನ್ನೂ ಪ್ರಕೃತಿಯ ವಿಕಾರಗಳನ್ನೂ ಅವುಗಳ ಗುಣಾದಿಗಳನ್ನೂ ದೋಷಗಳನ್ನೂ ಮೀರಿರುತ್ತಾನೆ. ಆತನಿಗೆ ಏತರ ಆವರಣವೂ ಇಲ್ಲ; ಎಲ್ಲರಿಗೂ ಆತ್ಮನಾಗಿರುತ್ತಾನೆ. ಜಗತ್ತಿನೊಳಗೆ ಇರುವದೆಲ್ಲವೂ ಆತನಿಂದಲೇ ವ್ಯಾಪ್ತವಾಗಿರುತ್ತದೆ."

**ಸಮಸ್ತಕಲ್ಯಾಣಗುಣಾತ್ಮಕೋಽಸೌ**
**ಸ್ವಶಕ್ತಿಲೇಶಾವೃತಭೂತವರ್ಗಃ ।**
**ಇಚ್ಛಾಗೃಹೀತಾಭಿಮತೋರುದೇಹಃ**
**ಸಂಸಾಧಿತಾಶೇಷಜಗದ್ಧಿತೋ ಯಃ ॥** ವಿ. ಪು. ೬-೫-೮೪

"ಸಮಸ್ತಕಲ್ಯಾಣಗುಣಗಳ ಸ್ವರೂಪವಾಗಿರುತ್ತಾನೆ, ತನ್ನ ಶಕ್ತಿಯ ಒಂದಂಶದಿಂದ ಪ್ರಾಣಿವರ್ಗವನ್ನೆಲ್ಲ ಆವರಿಸಿಕೊಂಡಿರುತ್ತಾನೆ. ಇಚ್ಛಾಮಾತ್ರದಿಂದ ತನಗೆ ಬೇಕಾದ ಮಹಾಶರೀರವುಳ್ಳವನು, ಅಖಿಲಜಗತ್ತಿನ ಹಿತವನ್ನು ಸಾಧಿಸುತ್ತಿರುತ್ತಾನೆ."

**ತೇಜೋಬಲೈಶ್ವರ್ಯಮಹಾವಬೋಧ**
**ಸುವೀರ್ಯಶಕ್ತ್ಯಾದಿಗುಣೈಕರಾಶಿಃ ।**
**ಪರಃ ಪರಾಣಾಂ ಸಕಲಾ ನ ಯತ್ರ**
**ಕ್ಲೇಶದಯಃ ಸನ್ತಿ ಪರಾವರೇಶೇ ॥** ವಿ. ಪು. ೬-೫-೮೫

"ಆ ಭಗವಂತನು ತೇಜ, ಬಲ, ಐಶ್ವರ್ಯ, ಮಹಾಜ್ಞಾನ, ಸುವೀರ್ಯ, ಶಕ್ತಿ-ಮುಂತಾದ ಗುಣಗಳಿಗೆ ಏಕತ್ರಿಕವಾಗಿರುವ ರಾಶಿಯಾಗಿರುತ್ತಾನೆ. ಎಲ್ಲಕ್ಕೂ ಹೆಚ್ಚಿನ ಪ್ರಕೃತಿಯೇ ಮುಂತಾದವುಗಳಿಗಿಂತಲೂ ಹೆಚ್ಚಿನವನಾಗಿರುತ್ತಾನೆ. ಆ ಪರಮೇಶ್ವರನಲ್ಲಿ ಯಾವ ಕ್ಲೇಶಾದಿಗಳೂ ಇರುವದಿಲ್ಲ."

**ಸ ಈಶ್ವರೋ ವ್ಯಷ್ಟಿಸಮಷ್ಟಿರೂಪೋ**
**ವ್ಯಕ್ತಸ್ವರೂಪೋಽಪ್ರಕಟಸ್ವರೂಪಃ ।**
**ಸರ್ವೇಶ್ವರಃ ಸರ್ವದೃಕ್ ಸರ್ವವಿಚ್ಚ**
**ಸಮಸ್ತಶಕ್ತಿಃ ಪರಮೇಶ್ವರಾಖ್ಯಃ ॥** ವಿ. ಪು. ೬-೫-೮೬

"ಆ ಈಶ್ವರನು ವ್ಯಷ್ಟಿಗಳ ರೂಪದಲ್ಲಿಯೂ ಸಮಷ್ಟಿಗಳ ರೂಪದಲ್ಲಿಯೂ ಇರುತ್ತಾನೆ; ವ್ಯಕ್ತಸ್ವರೂಪನೂ ಅವ್ಯಕ್ತಸ್ವರೂಪನೂ ಆಗಿರುತ್ತಾನೆ. ಎಲ್ಲರಿಗೂ ಒಡೆಯನು. ಎಲ್ಲವನ್ನೂ ನೋಡುತ್ತಿರುವಾತನು, ಎಲ್ಲವನ್ನೂ ಬಲ್ಲವನು, ಸಮಸ್ತ ಶಕ್ತಿಗಳಿಂದಲೂ ಕೂಡಿರುವಾತನು ; ಆತನಿಗೆ **ಪರಮೇಶ್ವರ** ಎಂಬ ಹೆಸರು"--ಎಂದು ಖಾಂಡಿಕ್ಯಜನಕನಿಗೆ **ಕೇಶಿಧ್ವಜನು** ಹೇಳಿರುವಂತೆ ತಾನು ನಿರ್ಗುಣನೂ ನೀರೂಪನೂ ಆಗಿದ್ದರೂ ಭಗವಂತನು ಎಲ್ಲಾ ಗುಣಗಳನ್ನೂ ಎಲ್ಲಾ ರೂಪಗಳನ್ನೂ ಇಚ್ಛಾಮಾತ್ರದಿಂದ ಪ್ರಕಟಿಸಬಲ್ಲ ಮಹಾಮಹಿಮನಾಗಿರುತ್ತಾನೆ. ಎಲ್ಲೆಲ್ಲಿ ಭಕ್ತರು ಪ್ರೇಮದಿಂದ ಕರೆಯುವರೋ ಅಲ್ಲಲ್ಲಿ ಅವರು ಬಯಸುವ ರೂಪದಿಂದ ಪ್ರಕಟನಾಗುವನು.

ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾನ್ತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ।
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋಽಯಂ ವೋ ವಿದಧಾತು ವಾಞ್ಛಿತಫಲಂ
ತ್ರೈಲೋಕ್ಯನಾಥೋ ಹರಿಃ ॥

ಎಂಬಂತೆ ಆ ಭಗವಂತನೇ ಶೈವರಿಗೆ ಶಿವನೂ ವೇದಾಂತಿಗಳಿಗೆ ಬ್ರಹ್ಮವೂ ಬೌದ್ಧರಿಗೆ ಬುದ್ಧನೂ ಪ್ರಮಾಣವಾದಿಗಳಾದ ನೈಯಾಯಿಕರಿಗೆ ಕರ್ತನೂ ಜೈನಶಾಸ್ತ್ರಜ್ಞರಿಗೆ ಅರ್ಹಂತನೂ ಮೀಮಾಂಸಕರಿಗೆ ಕರ್ಮವೂ ಆಗಿರುತ್ತಾನೆ. ಗಾಣಾಪತ್ಯರ ಗಣಪತಿಯೂ ಆತನೇ, ಸೌರರಿಗೆ ಆದಿತ್ಯನಾಗಿರುವಾತನ ಆತನೇ, ಶಾಕ್ತರಿಗೆ ಮಹಾಶಕ್ತಿ, ಮುಸಲ್ಮಾನರಿಗೆ ಅಲ್ಲಾಹ, ಯಹೂದ್ಯರಿಗೆ ಜೆಹೋವ, ಕ್ರೈಸ್ತರಿಗೆ.ಪರಲೋಕದಲ್ಲಿರುಪ ಪಿತ, ಪಾರ್ಸಿಯವರಿಗೆ ಆರ್ಮಸ್ಡ್ (ಪ್ರಕಾಶಾತ್ಮ) –ಹೀಗೆ ಬಗೆಬಗೆಯ ನಾಮರೂಪಗಳಿಂದ ಪ್ರಖ್ಯಾತನಾಗಿರುತ್ತಾನೆ.

## ಪೂಜಾಸಕ್ತಿ

೧೪೯. **ಪೂಜಾಸಕ್ತಿ** ಎಂಬುದು ಭಕ್ತಿಯ **ಮೂರನೆಯ** ರೂಪವು. ಭಗವಂತನ ಮನಮೋಹಕರೂಪವನ್ನು ಚಿಂತಿಸುತ್ತಾ ಚಿಂತಿಸುತ್ತಾ ಸುಮ್ಮನೆ ಕುಳಿತಿರುವದು ಯಾರಿಂದಲಾದೀತು? ಪರಮಾತ್ಮನು ಅನುಗ್ರಹಿಸಿ ತೋರಿಸಿ ಕೊಟ್ಟ ರೂಪದಿಂದ ಆತನನ್ನು ಒಂದು ಉಚ್ಚಾಸನದಲ್ಲಿ ಕುಳ್ಳಿರಿಸಿ ಕೈಗೆ ಅರ್ಘ್ಯ, ಕಾಲಿಗೆ ಪಾದ್ಯ, ಮುಖಶುದ್ಧಿಗೆ ಆಚಮನ– ಇವುಗಳನ್ನು ಕೊಟ್ಟು ಒಳ್ಳೆಯ ಪರಿಮಳದ ಎಣ್ಣೆಯನ್ನು ಮೈಗೆಲ್ಲ ಸವರಿ ಬಿಸಿನೀರೆರೆದು ಸ್ನಾನವಾದ ಬಳಿಕ ಪಟ್ಟೆವಸ್ತ್ರವನ್ನೂ ಯಜ್ಞೋಪವೀತವನ್ನೂ ಧಾರಣೆಮಾಡಿಸಿ, ಗಂಧ, ಅಕ್ಷತೆ, ಹೂತುಲಸಿ, ಬಿಲ್ವ –ಮುಂತಾದವುಗಳನ್ನು ಅರ್ಪಿಸಿ ನಾನಾಭೂಷಣಗಳಿಂದ ಅಲಂಕರಿಸಿ ಧೂಪವನ್ನು ಆಘ್ರಾಣಿಸುವಂತೆ ಹತ್ತಿಸಿ ಎತ್ತೆತ್ತಲೂ ಬೆಳಗುವಂತೆ ದೀಪಗಳನ್ನು ಹತ್ತಿಸಿ, ಉತ್ತಮವಾದ ತಟ್ಟೆಯಲ್ಲಿ ಅಥವಾ ಎಲೆಯಮೇಲೆ ತಾನು ಸಿದ್ಧಪಡಿಸಿರುವ ಭಕ್ಷ್ಯಭೋಜ್ಯಾದಿಗಳನ್ನು ಬಡಿಸಿಟ್ಟು ಪ್ರೀತಿಯಿಂದ ನಿವೇದನಮಾಡಿ, ಆಪೋಶನಾದಿಗಳಾದಮೇಲೆ ಕೈತೊಳೆದು ಪಚ್ಚಕರ್ಪೂರದಿಂದ ಕೂಡಿದ ಪರಿಮಳತಾಂಬೂಲವನ್ನು ಮಡಿಸಿಕೊಟ್ಟು, ವಾದ್ಯಗಳ ಧ್ವನಿಯೊಡನೆಯೂ ವೇದಮಂತ್ರದಿಂದಲೂ ದೇಶಭಾಷೆಯ ಹಾಡುಗಳಿಂದಲೂ ಆರತಿಯನ್ನು ಬೆಳಗಿ, ಪುಷ್ಪಾಂಜಲಿಯನ್ನು ಸಮರ್ಪಿಸಿ, ಪ್ರದಕ್ಷಿಣಪೂರ್ವಕವಾಗಿ ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಪೂಜೆಯಲ್ಲಿ ಆಗಿರಬಹುದಾದ ನ್ಯೂನಾತಿರಿಕ್ತಗಳನ್ನು ಕ್ಷಮಿಸಬೇಕೆಂದು ಸೆರಗೊಡ್ಡಿ ಬೇಡಿಕೊಂಡು, ಪೂಜಿಸುವವರು ಎಂಥ ಧನ್ಯರು!

ಬಾಹ್ಯಪೂಜೆಗೆ ಬಡತನದಿಂದ ಅಥವಾ ದೇಹಾದಿಗಳ ಅಶಕ್ತಿಯಿಂದ ಸಾಧನಗಳು ಕಡಿಮೆಯಾಗಿದ್ದರೂ ಮಾನಸಪೂಜೆಯಿಂದ ಸಾಂಗವಾಗಿ ಪೂಜೆಮಾಡಬೇಕೆನ್ನುವವರಿಗೆ ಏನುತಾನೆ ಕಡಿಮೆ? ಪರಿಶುದ್ಧವಾದ ಮನಸ್ಸಿನಿಂದ ಶಬರಿಯು ಸಿದ್ಧಪಡಿಸಿಟ್ಟುಕೊಂಡಿದ್ದ ಹಣ್ಣುಹಂಪಲುಗಳನ್ನು ಶ್ರೀರಾಮಚಂದ್ರನು ಎಷ್ಟು ಆದರದಿಂದ ಸ್ವೀಕರಿಸಿರುತ್ತಾನೆ! ಹೀಗಿರುವದರಿಂದ ಭಕ್ತರು ಭಗವಂತನನ್ನು ಬಗೆಬಗೆಯಿಂದ ಪೂಜಿಸಿಯೂ ಮನದಣಿಯದೆ ಇರುತ್ತಾರೆ. ಭಗವಂತನುಕೂಡ :

**ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।**
**ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥** ಗೀ. ೯–೨೬

ಭಕ್ತರು ಪ್ರೇಮಪೂರ್ವಕವಾಗಿ ಕೊಟ್ಟ ಒಂದು ಎಲೆ, ಹೂವು, ಹಣ್ಣು, ನೀರು–ಯಾವದೇ ಆದರೂ ಶುದ್ಧಾಂತಃಕರಣದಿಂದ ಕೊಟ್ಟರೆಂಬ ಕಾರಣದಿಂದ ಅದನ್ನೇ ಸ್ವೀಕರಿಸುತ್ತೇನೆ– ಎಂದಿರುತ್ತಾನೆ.

## ಸ್ಮರಣಾಸಕ್ತಿ

೧೫೦. **ಸ್ಮರಣಾಸಕ್ತಿಯು** ಭಕ್ತಿಯ **ನಾಲ್ಕನೆಯ** ರೂಪವು. ಶರೀರದಿಂದ ಮಾಡುವ ಪೂಜೆಗಿಂತಲೂ ಮನಸ್ಸಿನಿಂದ ಮಾಡುವ ಸ್ಮರಣೆಯೇ ಹೆಚ್ಚು ಕೆಲಸವನ್ನು ಮಾಡುತ್ತದೆ. ಮಾನಸಪೂಜೆಯ ವಿಷಯವಾಗಿ ಆಗಲೆ ಹೇಳಿದ್ದೇ ಆಗಿದೆ ಯಾದರೂ ಸಾಕಾರಪೂಜೆಯನ್ನು ಕಲ್ಪಿಸುವ ಮಾನಸವ್ಯಾಪಾರವಿಲ್ಲದಿದ್ದರೂ ಸ್ಮರಣಮಾತ್ರದಿಂದಲೇ ಭಕ್ತರಿಗೆ ಪುರುಷಾರ್ಥವು ಲಭಿಸುವದು.

**ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ ।**
**ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ ॥**

ಎಂದಿರುವಂತೆ ಎಂಥ ಪಾಪಿಗಳು ಶ್ರೀಹರಿಯನ್ನು ಸ್ಮರಿಸಿದರೂ ಆತನ ಕೃಪೆಯಿಂದ ಪಾಪಗಳು ನಾಶವಾಗುವವು; ಸುಮ್ಮನೆ ಮುಟ್ಟಿದರೂ ಬೆಂಕಿಯು ಸುಟ್ಟೇಸುಡುವದಷ್ಟೆ? ಮಹಾಪಾತಕಿಗಳು ಆತನನ್ನು ಸ್ಮರಿಸಿದ್ದರಿಂದ ಆದ ಫಲವು ತಟ್ಟನೆ ಕಾಣದೆಹೋಗಬಹುದು; ದಾರಿಯಲ್ಲಿ ನಡೆಯುತ್ತಿರುವಾಗ ಒಂದು ಸಣ್ಣಕಿಡಿಯನ್ನು ತುಳಿದರೂ ಕಾಲಚರ್ಮವು ದಪ್ಪವಾಗಿರುವದರಿಂದ ಬಿಸಿಯು ಬೇಗನೆ ಕಾಣದೆ ಇರಬಹುದಲ್ಲವೆ? ಹಾಗೆ. ಆದರೆ

**ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।**
**ಸಾಧುರೇವ ಸ ಮನ್ತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥**
**ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾನ್ತಿಂ ನಿಗಚ್ಛತಿ ।**
**ಕೌನ್ತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥**

**ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।**
**ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾನ್ತಿ ಪರಾಂ ಗತಿಮ್ ॥**
**ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ ।**

ಗೀ. ೯–೩೦ರಿಂದ ೩೩

ಎಂಬ ಭಗವದುಕ್ತಿಯಂತೆ ಎಂಥ ದುರಾಚಾರದವನೂ ಪಾಪವೃತ್ತಿಗೆ ಅವಕಾಶವಿರುವವನೂ ಆಗಿದ್ದರೂ ತನ್ನ ಪಾಪಕ್ಕೆ ಪಶ್ಚಾತ್ತಾಪವನ್ನು ಹೊಂದಿ 'ನೀನೇ ಶರಣು' ಎಂದು ಮನಃಪೂರ್ವಕವಾಗಿ ಭಜಿಸಿದರೆ ಅಂಥವನುಕೂಡ ಕಾಲಕ್ರಮದಿಂದ ಧರ್ಮಮಾರ್ಗಕ್ಕೆ ಬಂದು ಭಕ್ತಿಯ ಮಹಿಮೆಯಿಂದ ಪರಮಪುರುಷಾರ್ಥಕ್ಕೆ ತಕ್ಕವನಾಗುವನು. ಆದರೆ, ಭಗವಂತನನ್ನು ಭಜಿಸುತ್ತೇನಾದ್ದರಿಂದ ನಾನು ಎಂಥ ದುರಾಚಾರಿಯಾದರೂ ಚಿಂತೆಯಿಲ್ಲ– ಎಂದು ಮಾತ್ರ ತಪ್ಪುಭಾವನೆಯನ್ನು ಮಾಡಿಕೊಳ್ಳಬಾರದು. ತನ್ನದು ತಪ್ಪುಹಾದಿಯೆಂಬುದು ತಿಳಿದಕೂಡಲೆ ಭಗವಂತನ ಸ್ಮರಣೆಗೆ ತಿರುಗಬೇಕು. ಭಗವಂತನ ಭಕ್ತರು ಎಂದಿಗೂ ಅಧೋಗತಿಯನ್ನು ಪಡೆಯುವದಿಲ್ಲ– ಎಂದು ನಂಬಿ ಭಗವಂತನ ಕಡೆಗೆ ಚಿತ್ತವನ್ನು ತಿರುಗಿಸಬೇಕು. ಮನಃಪೂರ್ವಕವಾಗಿ ಮಾಡಿದ ಸ್ಮರಣೆಗೆ ಅನಂತವಾದ ಸತ್ಫಲವು ತಪ್ಪದೆ ಆಗುವದು. ಭಗವಂತನ ಸ್ಮರಣೆಯು ಸ್ವರೂಪಸ್ಮರಣೆ, ರೂಪಸ್ಮರಣೆ, ನಾಮಸ್ಮರಣೆ– ಎಂದು ಮೂರು ವಿಧವಾಗಿದೆ. ಇಲ್ಲಿ ಭಗವಂತನ ಸ್ವರೂಪವನ್ನು ಸ್ಮರಣೆಯಲ್ಲಿಟ್ಟಿರುವದು ಕಠಿನವಾಗಿ ತೋರಿದವರು ಆತನ ರೂಪಸ್ಮರಣೆಯನ್ನು, ಅದೂ ಆಗದವರು ಕೇವಲ ನಾಮಸ್ಮರಣೆಯನ್ನು ಮಾಡಬಹುದು. ಆದರಿಂದ ಕ್ರಮಕ್ರಮವಾಗಿ ಪರಭಕ್ತಿಯ ಅಂತಸ್ತಿಗೆ ಚಿತ್ತವು ಏರುವದಕ್ಕೆ ಸಹಾಯಕವಾಗುವದು.

## ದಾಸ್ಯಾಸಕ್ತಿ

೧೫೧. ದಾಸ್ಯಾಸಕ್ತಿಯೆಂಬುದು ಭಕ್ತಿಯ ಐದನೆಯ ಬಗೆ. ದಾಸ್ಯಾಸಕ್ತಿಯೆಂದರೆ ಕೂಲಿಯ ಆಳು ಮಾಡುವಂತೆ ಸಂಬಳಕ್ಕೆ ತಕ್ಕಷ್ಟು ಕೆಲಸಮಾಡುವದೆಂದು ಅರ್ಥವಲ್ಲ. ಆಳಾದವನು 'ಇಷ್ಟು ಕೆಲಸವನ್ನು ಮಾಡಿದೇನೆ; ಇಷ್ಟು ಸಂಬಳವನ್ನು ಕೊಡಬೇಕು' ಎಂದು ಕೇಳಿದರೆ ಧನಿಗೆ ಅಷ್ಟನ್ನು ಕೊಟ್ಟುಬಿಡುವದು ಬಹುಸುಲಭ. ಇದರಂತೆ ಎಷ್ಟೋ ಜನರು ದೇವರ ಸೇವೆಯನ್ನು ಮಾಡಿ ಇಂಥದ್ದೊಂದು ವರವನ್ನು ತಮಗೆ ಕೊಡಬೇಕೆಂದು ಬೇಡುತ್ತಾರೆ. ಹೀಗೆ ಹರಕೆಹೊತ್ತು ಮಾಡುವ ಸೇವೆಯು ದಾಸ್ಯಭಕ್ತಿಯಲ್ಲ. ಹಗಲೂಇರುಳೂ ಕೆಲಸವನ್ನು ಮಾಡುತ್ತಾ ಏನನ್ನು ಕೊಟ್ಟರೂ 'ಬೇಡ' ಎನ್ನುವವನಿಗೆ 'ಇವನ ಪ್ರತ್ಯುಪಕಾರವನ್ನು ಹೇಗೆ ತೀರಿಸಲಿ!' ಎಂಬ ಚಿಂತೆಯು ಕೆಲಸಮಾಡಿಸಿಕೊಂಡವನಿಗೆ ಹತ್ತಿಕೊಳ್ಳುವದಲ್ಲವೆ? ಲೌಕಿಕನಾದ ಧಣಿಗೇ ಇಷ್ಟು ಹೃದಯದಮೇಲೆ ಪರಿಣಾಮವನ್ನು ಮಾಡುವ ನಿತ್ಯ

ದಾಸ್ಯವು ಲೋಕಕ್ಕೆಲ್ಲ ಒಡೆಯನಾದ ದಯಾಮಯನಾದ ಭಗವಂತನಮೇಲೆ ಎಂಥ ಪರಿಣಾಮವನ್ನು ಮಾಡಬೇಕಾಯಿತು ! ಭಗವಂತನ ಮಹಿಮೆಯು ಪರಮತ್ವ ವನ್ನೂ ಆತನ ಸೇವೆಯಿಂದಾಗುವ ಧನ್ಯತೆಯನ್ನೂ ಬಲ್ಲ ಪರಭಕ್ತರು ಹೇಳುವ ದೇನೆಂದರೆ :

ಮಜ್ಜನ್ಮನಃ ಫಲಮಿದಂ ಮಧುಕೈಟಭಾರೇ
ಮತ್ಪ್ರಾರ್ಥನೀಯಮದನುಗ್ರಹ ಏಷ ಏವ ।
ತ್ವದ್ಭೃತ್ಯಭೃತ್ಯಪರಿಚಾರಕಭೃತ್ಯಭೃತ್ಯ
ಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ ॥

ಮು. ಮಾ. ಶ್ಲೋ. ೨೫

"ಎಲೈ ಮಧುಕೈಟಭಾರಿಯಾದ ಶ್ರೀಹರಿಯೆ, ನನ್ನ ಜನ್ಮಕ್ಕೆ ಇದೊಂದೇ ಫಲವು; ನಾನು ಕೇಳಿಕೊಳ್ಳತಕ್ಕ ಅನುಗ್ರಹವೆಲ್ಲ ಇದೊಂದೇ. ಅದೇನೆಂದರೆ ನಿನ್ನ ದಾಸರ ದಾಸರ ಪರಿಚಾರಕರ ದಾಸರದಾಸರ ದಾಸನದಾಸನು ನಾನು ಎಂದು ನನ್ನನ್ನು ನಿನ್ನ ಮನಸ್ಸಿನಲ್ಲಿ ಎಣಿಸಿದರೆ ಸಾಕು !" ಭಗವಂತನ ನೇರಾದ ಆಳಾಗಬೇಕೆನ್ನು ವದು ಹಾಗಿರಲಿ, ಆತನ ಆಳುಗಳ ಪರಂಪರೆಯಲ್ಲಿ ಕೊನೆಯ ಆಳಿನ ಆಳು ನಾನು ಎಂಬ ನೆನಪು ಭಗವಂತನಿಗೆ ಬಂದರೆ ಸಾಕು ! -ಎಂಬುದೂ, ಭಗವಂತನ ಭಕ್ತಿ ಯೊಂದಿದ್ದರೆ ನಮಗೆ ಆಗತಕ್ಕದ್ದು ಮತ್ತೇನೂ ಇಲ್ಲ- ಎಂಬುದೂ ಅವರ ಮನೋ ಭಾವ. 'ಆಳಾಗಬಲ್ಲವನು ಅರಸಾಗಬಲ್ಲ ಎಂಬ ನಾಣ್ಣುಡಿಯು ಇಲ್ಲಿ ಅನ್ವರ್ಥ ವಾಗಿರುತ್ತದೆ; ಏಕೆಂದರೆ ಭಗವಂತನ ದಾಸರದಾಸರೇ ಎಲ್ಲರಿಗೂ ವಂದನೀಯ ರಾಗಿರುತ್ತಾರೆ.

## ಸಖ್ಯಾಸಕ್ತಿ

೧೫೨. ಸಖ್ಯಾಸಕ್ತಿಯೆಂಬುದು ಮತ್ತೊಂದು ಬಗೆ. ಈ ಬಗೆಯನ್ನು ಸ್ವೀಕರಿಸಿದವರು ಭಗವಂತನನ್ನು ತಮ್ಮ ಆಟದ ಗೆಳೆಯನನ್ನಾಗಿ ಮಾಡಿಕೊಳ್ಳು ವರು. ಗೆಳೆಯರಲ್ಲಿ ತಮ್ಮ ತಪ್ಪುಗಳನ್ನು ಜನರು ಮುಚ್ಚುಮರೆಯಿಲ್ಲದೆ ಧಾರಾಳ ವಾಗಿ ಹೇಳಿಬಿಡುವಂತೆ, ತಮ್ಮ ದುಷ್ಕೃತ್ಯಗಳನ್ನು ಒಪ್ಪಿಕೊಂಡು ದಯಾಘನನಾದ ಆತನು ಇವನ್ನೆಲ್ಲ ಮನ್ನಿಸುವನೆಂದೇ ನಂಬುತ್ತಾರೆ. ಪರಮಾತ್ಮನು ಲೋಕದಲ್ಲಿ ಒಂದು ಆಟವನ್ನು ಹೂಡಿರುತ್ತಾನೆ. ನಾವೆಲ್ಲ ಈ ಆಟಕ್ಕೆ ಸಹಾಯಕರಾಗಬೇಕು. ಇಗೋ ! ಆತನು ಇಲ್ಲಿ ಸಂಸಾರವೆಂಬ ಆಟದ ಡೇರೆಯೊಂದನ್ನು ಹೊಡೆದಿಟ್ಟಿರು ತ್ತಾನೆ. ಇದರಲ್ಲಿ ಬಗೆಬಗೆಯ ಬಣ್ಣದ ಕುದುರೆಗಳು ತೂಗುಬಿಟ್ಟಿವೆ. ಅವುಗಳ ಮೇಲೆ ನಾನಾಜೀವರು ಕುಳಿತಿರುವರು; ರಾಟೆಯ ಯಂತ್ರಕ್ಕೆ ತಿರುಪುಕೊಟ್ಟನೆಂದರೆ ಕುದುರೆಗಳು ಗರ್ರನೆ ತಿರುಗುತ್ತಾ ಒಂದರಹಿಂದೊಂದು ಸುತ್ತುವುವು. ಕೆಲವು ಮೇಲಕ್ಕೆ

ಹೋಗುತ್ತಿವೆ, ಇನ್ನು ಕೆಲವು ಕೆಳಕ್ಕೆ ಇಳಿಯುತ್ತಿವೆ. ಕೆಲವರು ಸವಾರರು 'ನನ್ನ ಕುದುರೆಯು ಮೇಲಕ್ಕೇರಿದೆ !' ಎಂದು ಉಬ್ಬುತ್ತಾರೆ, ನಗುತ್ತಾರೆ ; ಮತ್ತೆ ಕೆಲವರು ಪವನತಪ್ಪಿ ದೊಪ್ಪೆಂದು ಬೀಳುತ್ತಿದಾರೆ. ಇದನ್ನು ನೋಡುವ ಕೆಲವರು ನಗುತ್ತಾರೆ, ಕೆಲವರು ಮರುಗುತ್ತಾರೆ. ಹೀಗೆ ಆಗುತ್ತಿರುವ ಗದ್ದಲದ ನಡುವೆ ರಾಟೆಯು ತಿರುಗುತ್ತಲೇಇದೆ. ಇಗೊ, ಆಟವು ಮುಗಿಯಿತು. ಒಂದು ಕಲ್ಪವಾಯಿತು. ಹೀಗೆ ಆಡುತ್ತಿರುವ ಆಟದಲ್ಲಿ ಭಕ್ತನಾದವನು ತಾನೂ ಒಬ್ಬ ಆಟಗಾರನೆಂಬುದನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡಿರುತ್ತಾನೆ. ಆಟದಲ್ಲಿ ಸೋತರೇನು, ಗೆದ್ದರೇನು ? ಎರಡೂ ಒಂದೇ. ವಿವೇಕಿಯಾದವನು ಸೋತೆನೆಂದು ಸಿಟ್ಟಗೇಳುವದುಂಟೆ ? ನಮ್ಮ ಗೆಳೆಯನಾದ ಭಗವಂತನು ಬಗೆಬಗೆಯ ಆಟಗಳನ್ನು ಕಟ್ಟುತ್ತಿದಾನೆ. ಕೆಲವುಸಲ ನಾಟಕಗಳನ್ನು ಏರ್ಪಡಿಸಿ ಕೆಲವರನ್ನು ದೊರೆಗಳ ನ್ನಾಗಿಯೂ ಕೆಲವರನ್ನು ಮಂತ್ರಿಗಳನ್ನಾಗಿಯೂ ಇನ್ನು ಕೆಲವರನ್ನು ಸೇನಾಧಿಪತಿ ಗಳನ್ನಾಗಿಯೂ ಏರ್ಪಡಿಸುವನು. ಮಿಕ್ಕವರು ಸೈನಿಕರೂ ಪ್ರಜೆಗಳೂ ಆಗಿ ವೇಷ ವನ್ನು ಧರಿಸಿರುತ್ತಾರೆ. ಆಟದಲ್ಲಿ ಆಳಾದರೇನು, ಅರಸಾದರೇನು ? ವಿನೋದವಾಗಿ ಕಾಲವನ್ನು ಕಳೆದರಾಯಿತು. ಬಡವನ ವೇಷವನ್ನು ಹಾಕಿದರೂ ಆಟ, ಬಲ್ಲಿದನ ವೇಷವನ್ನು ಹಾಕಿದರೂ ಆಟ ; ಕುರೂಪಿಯಾದರೇನು, ಸುಂದರನಾದರೇನು, ನೋಟಕರು ನಮ್ಮನ್ನು ಹೊಗಳಿದರೂ ತೆಗಳಿದರೂ ಒಂದೇ. ಎಲ್ಲವೂ ಆಟವೇ ಅಲ್ಲವೆ ? ನೋಟಕರು ನನ್ನನ್ನು ತೆಗಳುವಂತೆ ಆಡಿದ್ದೇನಲ್ಲ ! ಅಭಿನಯದಲ್ಲಿ ಜಯಶೀಲನಾದಂತಾಯಿತು, ಎನ್ನುವವನು ನಿಜವಾದ ಅಭಿನಯಕಾರ. ಈ ಆಟಕ್ಕೆ ಭಗವಂತನೇ ಸೂತ್ರಧಾರನೆಂಬುದನ್ನು ನೆನಪಿನಲ್ಲಿಟ್ಟರಾಯಿತು, ಆಗ ನಮಗೆ ಎಲ್ಲಾ ಸಂದರ್ಭಗಳಲ್ಲಿಯೂ ಆನಂದವೇ ಆಗುವದು. ಒಂದೊಂದು ಆಟದಲ್ಲಿ ಕಣ್ಣುಮುಚ್ಚಾಲೆಯನ್ನಾಡುವನು. ನಾವು ಅಥವಾ ಅವನು ಒಮ್ಮೊಮ್ಮೆ ಬಚ್ಚಿಟ್ಟುಕೊಳ್ಳುವದು, ಮತ್ತೊಬ್ಬರು ಹುಡುಕುವದು, ಆತನು ಸಿಕ್ಕಲಿಲ್ಲವಲ್ಲ !– ಎಂದು ಅಳುವದು, ಸಿಕ್ಕಿದರೆ ಉಬ್ಬಿ ನಗುವದು. ಎಲ್ಲಾ ಆಟವೇ. ಏನಾನಂದ !

## ವಾತ್ಸಲ್ಯಾಸಕ್ತಿ

೧೫೩. ಏಳನೆಯ ರೂಪವು ವಾತ್ಸಲ್ಯಾಸಕ್ತಿ. ಪರಮಾತ್ಮನು ನಮ್ಮ ಮಗುವೆಂದು ಮಾಡಿಕೊಂಡು ಆತನಲ್ಲಿ ತಂದೆತಾಯಿಗಳು ಮಕ್ಕಳಲ್ಲಿಟ್ಟಿರುವ ಪ್ರೇಮ ವನ್ನೇ ತೋರಿಸುವದು ಈ ಆಸಕ್ತಿವಿಶೇಷದ ರೂಪ.

ಕುಞ್ಚಿತೈಃ ಕುನ್ತಲೈರ್ಭ್ರಾಜಮಾನಾನನಂ
ರತ್ನಮೌಳಿಂ ಲಸತ್ಕುಣ್ಡಲಂ ಗಣ್ಡಯೋಃ ।
ಹಾರಕೇಯೂರಿಣಂ ಕಙ್ಕಣಪ್ರೋಜ್ಜ್ವಲಂ
ಕಿಙ್ಕಿಣೀಮಞ್ಜುಲಂ ಶ್ಯಾಮಲಂ ತಂ ಭಜೇ ॥ ಅಚ್ಯುತಾಷ್ಟಕ ೮

ಸಣ್ಣಸಣ್ಣ ಮುಂಗುರುಳುಗಳು ಮುಖದ ಕಾಂತಿಯನ್ನು ಹೆಚ್ಚಿಸುತ್ತಿರಲು, ರತ್ನಖಚಿತ ಕಿರೀಟದ ಕಾಂತಿಯು ಇದಕ್ಕೆ ಸೇರಿ ಕೆನ್ನೆಗಳಮೇಲೆ ಕಿವಿಯ ಹತ್ತೊಂಟೆಗಳು ಜೋಲುಬಿದ್ದು ಅದರ ಹೊಳಪನ್ನು ಹೆಚ್ಚಿಸುತ್ತಿರಲು, ಕೊರಳಲ್ಲಿ ಕಂಠಿಯಸರಗಳೂ ತೋಳಲ್ಲಿ ಭುಜಕೀರ್ತಿಯೂ ಕೈಗಳಲ್ಲಿ ಕಡಗಗಳೂ ಕಾಲಲ್ಲಿರುವ ಅಂದುಗೆ ಗೆಜ್ಜೆ-ಮುಂತಾದ ಒಡವೆಗಳನ್ನೂ ಧರಿಸಿರುವ ಶ್ಯಾಮಲವರ್ಣದ ಶ್ರೀಕೃಷ್ಣನೇ ನಮ್ಮ ಹಸುಗೂಸು- ಎಂದು ಭಾವಿಸುವ ಈ ಪ್ರೇಮವಿಶೇಷದಲ್ಲಿ ಭಕ್ತರಿಗೆ ಉತ್ಸಾಹವು ಉಕ್ಕೇರುತ್ತಿರುವದು.

ಮಕ್ಕಳಲ್ಲಿ ನಮಗೆ ಅನಿಮಿತ್ತವಾಗಿಯೇ ಪ್ರೇಮವಿರುತ್ತದೆ. ಅವನ್ನು ಕಂಡರೆ ಯಾರಿಗೂ ಅಂಜಿಕೆಯಾಗುವ ಸಂಭವವಿಲ್ಲ, ಶಾಸ್ತ್ರಾದಿಗಳ ಪಾಂಡಿತ್ಯವನ್ನು ಪ್ರದರ್ಶಿಸುವವರಮೇಲೆ ಇರುವ ಪೂಜ್ಯಬುದ್ಧಿಯೇನೂ ಯಾರಿಗೂ ಅವುಗಳಲ್ಲಿ ಉಂಟಾಗುತ್ತಿರುವದಿಲ್ಲ. ಮಕ್ಕಳು ನಮಗೆ ಏನನ್ನಾದರೂ ಪ್ರತಿಯಾಗಿ ಮಾಡಿ ಕೊಟ್ಟಾವೆಂಬ ಪ್ರತ್ಯಾಶೆಯೂ ಇರುವದಿಲ್ಲ. ಹೀಗಿದ್ದರೂ ತಂದೆತಾಯಿಗಳು ತಮ್ಮ ಮಕ್ಕಳಿಗಾಗಿ ಎಷ್ಟು ಕಷ್ಟವನ್ನಾದರೂ ಪಡುವದಕ್ಕೆ ಸಿದ್ಧರಾಗಿರುವರಲ್ಲ! ಮಗನು ಬದುಕಿದರೆ ತನ್ನ ಪ್ರಾಣವನ್ನೇ ಒಪ್ಪಿಸುವೆನೆಂದು ದೇವರಿಗೆ ಹರಕೆಹೊತ್ತ ತಂದೆತಾಯಿಗಳ ಪ್ರೇಮದ ಉದಾಹರಣೆಗಳೂ ಇತಿಹಾಸದಲ್ಲಿವೆ. ತೊದಲುನುಡಿ ಗಳನ್ನಾಡುತ್ತಾ ಓಡಿಬಂದು ಮೈಮೇಲೆ ಬಿದ್ದು ಹೊರಳಾಡುತ್ತಾ ಕಿರುನಗೆಯಿಂದ ಮುಖವನ್ನು ನೋಡುತ್ತಾ ಹರ್ಷದ ಕಡಲಿನಲ್ಲಿ ತಾಯಿಯನ್ನು ಅದ್ದುವ ಮಕ್ಕಳ ಮೇಲೆ ಯಾರಿಗೆತಾನೆ ಪ್ರೀತಿಯಾಗುವದಿಲ್ಲ? ಆ ಪ್ರೀತಿಯನ್ನು ಮತ್ತೆ ಯಾವದಕ್ಕೆ ಹೋಲಿಸುವದಕ್ಕಾದೀತು? ಮಕ್ಕಳನ್ನು ನೋಡಿದಮಾತ್ರಕ್ಕೆ ಎಂಥವನ ಮನಸ್ಸಾ ದರೂ ಕರಗಿಬಿಡುವದು. ಆದ್ದರಿಂದಲೇ 'ಮಕ್ಕಳಿಲ್ಲದ ಮನೆಯು ಮಸಣ'ವೆಂದು ಹೇಳುವರು. ಹೀಗೆ ಮಕ್ಕಳನ್ನು ಮುದ್ದಿಸುವ ಪ್ರೇಮವನ್ನು ಭಗವಂತನ ಕಡೆಗೆ ಇಡುವದೇ **ವಾತ್ಸಲ್ಯಭಕ್ತಿ.**

ನಿಜವಾಗಿಯೂ ಭಗವಂತನು ತನ್ನ ಭಕ್ತರ ವಿಷಯಕ್ಕೆ ಹಸುಗೂಸಿನಂತೆ ಯೇ ನಡೆದುಕೊಳ್ಳುತ್ತಿರುತ್ತಾನೆ. ತಾನು ಸರ್ವಶಕ್ತನಾದರೂ ಭಕ್ತರಿಂದ ಕೈಹಿಡಿಸಿಕೊಂಡು ನಡೆಯುವನು. ತಾನು ಅತ್ತಹೋಗುವದೂ ಇತ್ತಬರುವದೂ ಯಾವದೂ ಇಲ್ಲದೆ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವವನಾದರೂ ಭಕ್ತರಿಗಾಗಿ ತೂಗುತೊಟ್ಟಿಲಲ್ಲಿ ಮಲ್ಲಗುವನು. ಇವೇ ಮುಂತಾದ ಮಕ್ಕಳಾಟಕೆಯನ್ನು ಕಣ್ಣಾರೆ ನೋಡಿ ಒಡವೆಗಳನ್ನಿಟ್ಟು ಬಟ್ಟೆಗಳನ್ನು ತೊಡಿಸಿ ತಲೆಬಾಚಿ ರುಚಿರುಚಿಯಾದ ಭಕ್ಷ್ಯಗಳನ್ನು ಮಾಡಿಕೊಟ್ಟು ನನ್ನ ಇದಿರಿನಲ್ಲಿಯೇ ಇರಬೇಕೆಂದು ಭಕ್ತರು ಬಯಸುವರು.

ಮತ್ಸರ್ವಸ್ವ ಮದೀಯಜೀವಿತ ಮಮ ಪ್ರಾಣಾಪ್ಪ ತಾತೇತಿ ತಂ
ಪ್ರೇಮ್ಣಾ ಯೇನ ಮುಹುಶ್ಚುಚುಮ್ಬ ಜನನೀ ಯೋ ವಾ ಹರಿರ್ಬಾಲಿಶಃ ।
ಸ್ಮೇರಾಸ್ಯಃ ಕಿಮಪಿ ಬ್ರುವನ್ ನಿಜಜನನ್ಯಾಲೋಕನಾದುಲ್ಲಲ-
ಲ್ಲೀಲಾಜಾಲಸಮೂಲಮಾದಿತನಯಃ ತಸ್ಯೈ ಚ ತಸ್ಮೈ ನಮಃ ॥
ಚಂ. ಭಾಗ. ೨-೧

ಎಂದಿರುವಂತೆ 'ನನ್ನ ಸರ್ವಸ್ವವೆ, ನನ್ನ ಜೀವನವೆ, ನನ್ನ ಪ್ರಾಣವೆ, ನನ್ನಮ್ಮ, ನನ್ನಪ್ಪ !' ಎನ್ನುತ್ತಾ, ಬಿಗಿದಪ್ಪಿ ಮತ್ತೆಮತ್ತೆ ಮುದ್ದಾಡಿದ ತಾಯಿಯ ಪ್ರೇಮದ ಮತ್ತು ನಗುನಗುತ್ತಾ ಏನೋ ಹೇಳುವವನಂತೆ ತಾಯಿಯನ್ನು ನೋಡುತ್ತಾ ಬಗೆಬಗೆಯ ಲೀಲಾಜಾಲವನ್ನು ತೋರಿಸಿದ ಶ್ರೀಹರಿಯ ಅನುಗ್ರಹವೆಷ್ಟೊ ! ಅದನ್ನೆಲ್ಲಾ ಭಾಗವತದಲ್ಲಿ ವರ್ಣಿಸಿದ ಶುಕಮುನಿಗಳ ಹೃದಯದಲ್ಲಿದ್ದ ಪ್ರೇಮದ ಆಳವೆಷ್ಟೊ ! ನಮ್ಮಂಥ ವಿಷಯಾಸಕ್ತರಿಗೆ ತಿಳಿಯಲಾರದು. ಈಗಿನ ಕಾಲದಲ್ಲಿ ನಮ್ಮಗಳಿಗೆ ಅಂಥ ಯೋಗವು ದೊರಕುವದೆ ?- ಎಂದು ತಾಯಿತಂದೆಗಳು ಎಣಿಸ ಬೇಕಾದದ್ದಿಲ್ಲ. ಲೋಕದಲ್ಲಿ ಸುಂದರವಾದ ಮಕ್ಕಳು ಎಷ್ಟೋ ಇವೆ. ಅವುಗಳಲ್ಲೆಲ್ಲ ಪರಮಾತ್ಮದೃಷ್ಟಿಯಿಡುವದನ್ನು ನಾವುಗಳು ಅಭ್ಯಾಸಮಾಡಬೇಕು. ಅವುಗಳ ಆಟವನ್ನು ಕಂಡು ಹಿಗ್ಗುವದನ್ನು ಕಲಿಯಬೇಕು. ತಮ್ಮ ಮಗನು ಎಲ್ಲಾ ಹುಡುಗರಿಗಿಂತಲೂ ಸುಂದರನೆಂದು ಆಡಿಕೊಳ್ಳುವ ದುರಭಿಮಾನವನ್ನು ಬಿಡಬೇಕು. ಅದೇ ಬಾಲಕೃಷ್ಣನೇ ಹಿಂದೆ ಹಸು, ಕರು, ದನಕಾಯುವವರು- ಇವರೆಲ್ಲರ ವೇಷವನ್ನು ತಳೆದಿದ್ದಂತೆ ಈಗ ನಮ್ಮೆಲ್ಲರ ಸಲುವಾಗಿ ಎಲ್ಲಾ ಮಕ್ಕಳ ರೂಪನಾಗಿರುತ್ತಾನೆಂಬ ಭಾವನೆಯನ್ನು ಅಭ್ಯಾಸಮಾಡಬೇಕು. ಆಗ ನಮ್ಮ ಮನಸ್ಸೇ ಬೇರೊಂದು ಪರಿಣಾಮವನ್ನು ಪಡೆಯುವದು, ಪ್ರೇಮಕ್ಕಾಗಿ ಪ್ರೇಮವನ್ನು ಮಾಡುವದೆಂದರೇನೆಂಬುದು ಗೊತ್ತಾಗುವದು. ಭಗವಂತನಲ್ಲಿ ಗೌರವ, ಭೀತಿ- ಮುಂತಾದವುಗಳ ಬದಲು ಪ್ರೇಮವೊಂದೇ ಊಡಕೊಳ್ಳುವದು. 'ದೇವರು ಸರ್ವಜ್ಞನು, ಸರ್ವಶಕ್ತನು, ನಿತ್ಯಶುದ್ಧಬುದ್ಧಮುಕ್ತಸ್ವಭಾವನು' ಎಂದು ಯೋಚಿಸುವವರಲ್ಲಿ ತನ್ನನ್ನು ಕೀಳುಮಾಡಿಕೊಳ್ಳುವದಲ್ಲದೆ, ಅಂಜಿಕೆ, ದೀನತೆ- ಮುಂತಾದ ಭಾವನೆಗಳಿಂದಲೇ ಆತನನ್ನು ಕಾಣಬೇಕಾಗುವದು. ಆತನು ದಿವ್ಯಸುಂದರನಾಗಿ ಸರ್ವಗುಣಸಂಪನ್ನನಾದ ನಮ್ಮ ಮುದ್ದುಕುಮಾರನೆಂಬ ಭಾವನೆಯು ತಲೆದೋರಿಕೊಂಡ ಕ್ಷಣದಲ್ಲಿ ಆ ಭಾವನೆಗಳೆಲ್ಲವೂ ಪ್ರೇಮವೆಂಬ ಒಂದೇ ರೂಪದಲ್ಲಿ ಅಡಕವಾಗಿ ಪರಭಕ್ತಿಯೆಂದರೇನೆಂಬುದು ನಮ್ಮ ಮನಸ್ಸಿನಲ್ಲಿ ಮಿಂಚುವದು.

## ಕಾಂತಾಸಕ್ತಿ

೧೫೪. ಭಕ್ತಿಯ ಎಂಟನೆಯ ರೂಪವಿಶೇಷವು ಕಾಂತಾಸಕ್ತಿ. ಇದರಲ್ಲಿರುವ ವಿಶೇಷವೇನೆಂದರೆ ಹಿಂದೆ ಹೇಳಿದ ಯಾವ ರೂಪದಲ್ಲಿಯೂ ಇದರಲ್ಲಿ

ತೋರುವಷ್ಟು ಬಲವಾಗಿ ಪ್ರೇಮವು ತೋರಿಕೊಳ್ಳಲಾರದು. ಇದಕ್ಕಿಂತ ಬಲವಾಗಿರುವ ಪ್ರೇಮವು ಜನರಿಗೆ ತಿಳಿಯದು. ಶೃಂಗಾರರಸವು ಪ್ರಧಾನವಾಗಿರುವ ಕಲ್ಪನಾಕಥೆಗಳಲ್ಲಿ ಗಂಡಹೆಂಡಿರ ಪ್ರೇಮವನ್ನು ವರ್ಣಿಸಿರುವದನ್ನು ಓದುವಾಗ ಅವು ಕಟ್ಟುಕಥೆಗಳೆಂಬುದನ್ನುಕೂಡ ಮರೆತು ಊಟಪಾಠಗಳನ್ನೂ ಬಿಟ್ಟು ನಿದ್ದೆಗೆಟ್ಟು ಅವನ್ನು ಓದುತ್ತಿರುವದನ್ನು ನೋಡಿದರೆ ಈ ಪ್ರೇಮರೂಪದ ಬಲವು ಎಷ್ಟೆಂಬುದರ ಅರಿವು ಸ್ವಲ್ಪಮಟ್ಟಿಗೆ ನಮಗೆ ಆಗಬಹುದು. ಈ ಪ್ರೇಮದಿಂದ ಮನುಷ್ಯನ ಸ್ವಭಾವವೇ ಬೇರೆಯಾಗಿಬಿಡುವದು. ಗಂಡನು ತನ್ನ ಹೆಂಡತಿಗಾಗಿ ಒಂದೊಂದುವೇಳೆ ಎಂಥ ಕೆಟ್ಟಕೆಲಸಗಳನ್ನಾದರೂ ಮಾಡುವದಕ್ಕೆ ಹೇಸುವದಿಲ್ಲ. ಎಂಥ ಕಷ್ಟಸಾಧ್ಯವಾದ ಕೆಲಸಗಳನ್ನು ಮಾಡುವದಕ್ಕೂ ಹಿಂಜರಿಯುವದಿಲ್ಲ. ಹೀಗೆಯೇ ಹೆಂಡತಿಯು ತನ್ನ ಗಂಡನಿಗಾಗಿ ತನ್ನ ಮೈಯನ್ನೇ ತೇದು ಕೆಲಸಮಾಡುವದಕ್ಕೆ ಸಿದ್ಧಳಾಗುವಳು. ಈ ಕಾಂತಾಸಕ್ತಿಯ ಪ್ರೇಮವನ್ನು ಪರಮಾತ್ಮನಲ್ಲಿ ಮಾಡಬೇಕು. ನಾವೆಲ್ಲರೂ ಆತನ ಪತ್ನಿಯರು ; ಆತನೇ ಪತಿಯು.

ಕಾಂತಾಭಕ್ತಿ ಎಂದರೆ ಹೆಂಗಸರಂತೆಯೇ ಉಡಿಗೆತೊಡಿಗೆಗಳನ್ನು ಧರಿಸಿ ಶೃಂಗಾರಪ್ರಿಯರಾಗಿ ನೈಜವಾಗಿರುವ ಧೈರ್ಯವೇ ಮುಂತಾದ ಪೌರುಷಗುಣಗಳನ್ನು ಒಂದು ಮೂಲೆಯಲ್ಲಿ ಮುದಿರಿಟ್ಟುಕೊಳ್ಳುವದೆಂದೇನೂ ಅರ್ಥವಲ್ಲ. ವ್ಯವಹಾರದಲ್ಲೆಲ್ಲ ಗಂಡಸರೇ ಆಗಿದ್ದು ಹೃದಯದಲ್ಲಿ ಹೆಂಗಸರ ಪ್ರೇಮವನ್ನು ಎಬ್ಬಿಸಿಕೊಳ್ಳುವದಕ್ಕೂ ಆಗುತ್ತದೆ. ಹೆಂಡತಿಯು ತನ್ನ ಹೃದಯವನ್ನೆಲ್ಲ ಗಂಡನಿಗೆ ಧಾರೆಯೆರೆದಿರುತ್ತಾಳೆ. ಅವಳ ಹೃದಯವು ಗಂಡನನ್ನು ಬಿಟ್ಟು ಮತ್ತೆತ್ತಲೂ ಕದಲುವಂತಿರುವದಿಲ್ಲ. ಅವಳ ಯೋಚನೆಗಳೆಲ್ಲ ಅವನ ವಿಷಯವಾಗಿಯೇ ಇರುತ್ತವೆ. ಅವನು ಮನೆಯಲ್ಲಿಯೇ ಇರಲಿ, ಇಲ್ಲದಿರಲಿ, ಒಂದೇ ಬಗೆಯಿಂದ ಮನೆಗೆಲಸಗಳನ್ನು ರೀತಿಯಲ್ಲಿ ಮುಗಿಸಿರುತ್ತಾಳೆ. ಗಂಡನು ಎಂದಿಗೆ ಬರುವನೊ !– ಎಂದು ಅವನನ್ನು ಬಾಗಿಲಲ್ಲಿ ಕಾದುಕೊಂಡಿದ್ದು ಕಾಲಿಗೆ ನೀರಿತ್ತು ಫಲಹಾರವೇ ಮುಂತಾದವುಗಳನ್ನು ಕೊಟ್ಟು ಯಾವಾಗ ಸಂತೋಷಪಟ್ಟೇನು ?– ಎಂದು ಹಂಬಲಿಸುತ್ತಿರುತ್ತಾಳೆ. ಅವಳಿಗೆ ಬೇಕಾದದ್ದೆಲ್ಲ ಗಂಡನ ಸುಖ. ಅವನು ಯಾವಾಗಲೂ ತನ್ನನ್ನು ಪತ್ನಿ ಎಂದು ತಿಳಿದು ತಾನು ಮಾಡುವ ಪ್ರೀತಿಯನ್ನು ಸ್ವೀಕರಿಸಿದರೆ ಸಾಕು, ಅಷ್ಟೇ ಅವಳಿಗೆ ಬೇಕಾಗಿರುವದೆಲ್ಲ– ಎಂಬುದು ಪ್ರಸಿದ್ಧವಾಗಿದೆ. ಹೀಗೆ ಭಗವಂತನ ವಿಷಯದಲ್ಲಿರುವದೇ ಕಾಂತಾಸಕ್ತಿ.

ಈ ಕಾಂತಾಸಕ್ತಿಯ ರಹಸ್ಯವನ್ನು ಮನಗಂಡವನು 'ದೇವ, ನನಗೆ ಮತ್ತೇನೂ ಬೇಕಿಲ್ಲ, ನಿನ್ನ ಪ್ರೀತಿಯು ಎಂದೆಂದಿಗೂ ನನ್ನ ಮೇಲಿರಲಿ ! ಮಿಕ್ಕದ್ದೆಲ್ಲದರ ಮೇಲಿನ ರಾಗವನ್ನು ಮರೆಯುವಂತೆ ಮಾಡುವ ನಿನ್ನ ಪ್ರೇಮವನ್ನು ಮಾತ್ರ ನನಗೆ ಕೊಡು' ಎಂದು ಬೇಡಿಕೊಳ್ಳುತ್ತಿರುವನು. ಭೂಮಿಯಮೇಲೆ ನಾವು ಮಾಡಿಕೊಂಡಿ

ರುವ ಮದುವೆಯ ಸುಖವು ನಮಗೆ ಎಷ್ಟುದೂರ ನಿಂತಿದ್ದೀತು ? ಕೇವಲ ದೇಹ ಸಂಬಂಧನಿಮಿತ್ತವಾದ ಬಾಂಧವ್ಯವನ್ನು ನೆಚ್ಚಿಕೊಂಡಿದ್ದರೆ ಅದಾದರೂ ಎಷ್ಟು ದಿವಸದವರೆಗೆ ಇದ್ದೀತು ? ಸರಿಯಾಗಿ ಒಳಹೊಕ್ಕು ನೋಡಿದರೆ ಗಂಡಹೆಂಡರ ಪ್ರೇಮವೆಂಬುದು ಗಂಡಹೆಂಡರಿಗಾಗಿರುವದಲ್ಲ ; ನಮ್ಮೆಲ್ಲರ ಆತ್ಮನಾಗಿರುವ ಆ ಪರಮಾತ್ಮನಿಗಾಗಿಯೇ ಆ ಪ್ರೇಮವನ್ನು ನಾವು ಅರಿಯದೆ ಮಾಡುತ್ತಿರುವೆವು. ಆದರೆ ಈ ನಿಜವನ್ನು ಸಾಮಾನ್ಯರು ಅರಿತುಕೊಳ್ಳಲಾರದೆ ಇರುವರು. ಮನುಷ್ಯರಲ್ಲಿ ರುವ ಸೌಂದರ್ಯವು ನಿಜವಾಗಿ ಯಾರದ್ದು ? ಭೌತಿಕದೇಹಕ್ಕೇ ಆ ಸೌಂದರ್ಯವು ಸ್ವಾಭಾವಿಕವಾಗಿದ್ದಿದ್ದರೆ ಅದೇ ಸೌಂದರ್ಯವು ಆತ್ಮರಹಿತವಾಗಿರುವ ಆ ಹೆಣ ದಲ್ಲೇಕೆ ಇರಬಾರದು ? ಅದೇಕೆ ಅಷ್ಟು ವಿಕಾರವಾಗಿ ಕಾಣುವದು ? ಮಣ್ಣುಬೊಂಬೆ ಯಾಗಿರುವ ದೇಹದಲ್ಲಿ ಸೌಂದರ್ಯವು ಹೇಗೆ ಇದ್ದೀತು ? ಲೋಕದಲ್ಲಿ ಕಾಣಬರು ತ್ತಿರುವ ಸೌಂದರ್ಯವೆಲ್ಲ ಆತನದೇ ! ಗೋಪಾಲಕೃಷ್ಣನಾಗಿ ಹದಿನಾರುಸಾವಿರ ಗೋಪಿಯರ ಮನಸ್ಸನ್ನು ಸೆಳೆದ ಸೌಂದರ್ಯವು ಎಂಥದ್ದಾಗಿರಬೇಕು ! ಮೋಹಿನಿ ಯ ರೂಪದಿಂದ ಮೂವತ್ತುಮೂರುಕೋಟಿ ದೇವತೆಗಳನ್ನೂ ಅಸುರರನ್ನೂ ಬೆರಗು ಮಾಡಿದ ಸೌಂದರ್ಯವನ್ನೇನನ್ನೋಣ ! ಹೀಗೆ ಇಚ್ಛಾಮಾತ್ರದಿಂದ ದಿವ್ಯಸುಂದರ ವಿಗ್ರಹವನ್ನು ಧರಿಸಬಲ್ಲ ಆ ಪರಮಪುರುಷನೇ ನಿಜವಾಗಿ ಎಲ್ಲರಿಗೂ ಪತಿಯು ; ಆತನನ್ನು ಪ್ರೀತಿಸಬಲ್ಲ ಮೃದುಹೃದಯರೆಲ್ಲರೂ ಆತನ ಕಾಂತೆಯರೇ. 'ದೇವ, ಈವರೆಗೆ ನಿನ್ನ ತತ್ತ್ವದ ಅರಿವಿಲ್ಲದೆ ನಿನ್ನನ್ನು ಪ್ರೀತಿಸುತ್ತಿದ್ದದ್ದು ನಿಜ. ಆದರೆ ಈಗ ನಾನು ನಿನ್ನ ಪರಮಪ್ರಿಯಳಾದ ಕಾಂತೆಯಾಗಿರುವೆನು. ನಿನ್ನವಳೇ ಆಗಿರುವ ನನ್ನನ್ನು ಇನ್ನು ಎಂದಿಗೂ ಅಜ್ಞಾನದ ಕಗ್ಗತ್ತಲೆಯಲ್ಲಿ ಬಿಡದಿರು ! ನನ್ನ ಹೃದ ಯದ ಹತ್ತಿರವೇ ಎಂದೆಂದಿಗೂ ಇದ್ದುಕೊಂಡಿರು !' ಎಂದು ಬೇಡಿಕೊಳ್ಳುವದೇ **ಕಾಂತಾಸಕ್ತಿ.**

## ಆತ್ಮನಿವೇದನಾಸಕ್ತಿ

೧೫೫. ಭಕ್ತಿಯ ಒಂಬತ್ತನೆಯ ರೂಪವು **ಆತ್ಮನಿವೇದನಾಸಕ್ತಿ.** ಈ ಆಸಕ್ತಿಯುಳ್ಳ ಭಕ್ತನು ಪರಮಾತ್ಮನನ್ನು ಪ್ರೀತಿಸುವದರಲ್ಲಿರುವ ಸ್ವಾತಂತ್ರ್ಯವನ್ನು ಕೂಡ ಆತನಿಗೇ ಒಪ್ಪಿಸಿಬಿಟ್ಟಿರುತ್ತಾನೆ. ಆ ಮಹಾಮಹಿಮನನ್ನು ಪ್ರೀತಿಸುವ ನೆನ್ನುವದಕ್ಕಾದರೂ ನಾನೆಷ್ಟರವನು ? ನನಗೆ ಪ್ರೀತಿಯನ್ನು ಅನುಗ್ರಹಿಸಿಕೊಟ್ಟಿರು ವವನಾದರೂ ಯಾರು ? ಆತನ ಅನುಗ್ರಹವಿಲ್ಲದಿದ್ದರೆ ಪ್ರೀತಿಯನ್ನು ಮಾಡುವ ಹಾದಿಯಾದರೂ ನನಗೆ ಹೇಗೆ ದೊರಕೀತು ? **'ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ । ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥'** (ಗೀ. ೧೦-೧೦) ನನ್ನನ್ನು ಪ್ರೀತಿಸುವವರಿಗೆ ನನ್ನನ್ನೇ ಸೇರುವ ಬುದ್ಧಿಯನ್ನು ನಾನೇ ಕೊಡುವೆನು- ಎಂದಲ್ಲವೆ, ಆತನು ಹೇಳಿರುವನು ?

ಆದ್ದರಿಂದ ಭಕ್ತಿಮಾರ್ಗವನ್ನು ಹಿಡಿಯುವ ಪ್ರಕಾರವು ಸುಪಥವಾಗುವಂತೆ ಮಾಡುವಾತನೂ ಆತನೇ. ಆತನು ಕೊಟ್ಟಿರುವ ದೇಹದಲ್ಲಿ ಆತನಿಟ್ಟಿರುವ ಇಂದ್ರಿಯಗಳನ್ನೂ ಆತನೇ ಕೊಟ್ಟಿರುವ ಮನಸ್ಸನ್ನೂ ಆತನ ಪ್ರೇಮಕ್ಕೆ ವಿನಿಯೋಗಿಸುವದೆಂಬುದೂ ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಭಗವಂತನಿಗೆ ಅರ್ಘ್ಯವನ್ನು ಕೊಟ್ಟೆನೆಂಬ ಅಭಿಮಾನಕ್ಕೆ ಸಮವಲ್ಲವೆ? ಆತನಲ್ಲದ ಯಾವ ವಸ್ತುವನ್ನು ತಾನೆ ನಾನು ಆತನಿಗೆ ಕೊಟ್ಟೇನು? ಇಗೊ, ಈ ನನ್ನ ಆತ್ಮವೇ ಆತನದಾಗಿದೆ. ಅದನ್ನು ಹೇಗೆಬೇಕೆಂದರೆ ಹಾಗೆ ವಿನಿಯೋಗಿಸುವದಕ್ಕೆ ಆತನು ಸ್ವತಂತ್ರನು. ನನ್ನ ಪ್ರಾಣವು ಎಷ್ಟು ದಿನವಿರಬೇಕೋ ದೇಹಾದಿಗಳು ಯಾವಯಾವ ಕೆಲಸವನ್ನು ಹೇಗೆಹೇಗೆ ಮಾಡಬೇಕೋ ಅದನ್ನು ಗೊತ್ತುಪಡಿಸಿರುವವನು ಆತನೇ.

> ಏಹ್ಯೇಹಿ ದೇವೇಶ ಜಗನ್ನಿವಾಸ
> ನಮೋಽಸ್ತು ತೇ ಮಾಧವ ಚಕ್ರಪಾಣೇ ।
> ಪ್ರಸಹ್ಯ ಮಾಂ ಪಾತಯ ಲೋಕನಾಥ
> ರಥೋತ್ತಮಾತ್ ಸರ್ವಶರಣ್ಯ ಸಙ್ಖ್ಯೇ ॥
> ಮ. ಭಾ. ಭೀಷ್ಮ. ೫೯-೯೭

"ದೇವೇಶನೆ, ಜಗನ್ನಿವಾಸನೆ, ಬಾ, ಬಾ! ಲಕ್ಷ್ಮೀಪತಿಯೆ, ಚಕ್ರಪಾಣಿಯೆ, ಲೋಕದೊಡೆಯನೆ, ನಿನಗೆ ನಮಸ್ಕಾರ! ಬಲವಾಗಿ ನನ್ನನ್ನು ರಥದಮೇಲಿಂದ ಯುದ್ಧದಲ್ಲಿ ಕೆಡಹು!" ಎಂದು ಭೀಷ್ಮಾಚಾರ್ಯರು ಹೇಳಿರುವಂತೆ ಈಗಲೇ ಬೇಕೆಂದರೆ ಆತನು ನನ್ನನ್ನು ಕಡಿದುಹಾಕಬೇಕೆಂದರೂ ಅದು ನನಗೆ ಒಂದು ಅನುಗ್ರಹವೇ ಆಗುವದು! ಉಪಮನ್ಯುವು 'ಅಪಿ ಕೀಟಃ ಪತಙ್ಗೋ ವಾ ಭವೇಯಂ ಶಙ್ಕರಾಜ್ಞಯಾ' (ಮ.ಭಾ.ಅನು. ೧೪-೧೮೬), 'ಶಂಕರನು ಅಪ್ಪಣೆಮಾಡಿದರೆ ನಾನು ಹುಳುವೋ ಹುಪ್ಪಟೆಯೋ ಆಗಿಯೂ ಹುಟ್ಟುವದಕ್ಕೆ ಸಿದ್ಧನಾಗಿರುವೆನು. ಎಂದು ಹೇಳಿರುವಂತೆ ನನ್ನನ್ನೇ ಆತನಿಗೆ ಅರ್ಪಣೆಮಾಡಿದಮೇಲೆ, ಏತಕ್ಕೆತಾನೆ ಏಕೆ ಅಂಜಬೇಕು?– ಹೀಗೆಂಬುದು **ಆತ್ಮನಿವೇದನಾಸಕ್ತಿಯ ಸ್ವರೂಪ.**

## ತನ್ಮಯತಾಸಕ್ತಿ

೧೫೬. **ತನ್ಮಯನಾಗಿರುವದರಲ್ಲಿರುವ ಆಸಕ್ತಿಯು** ಭಕ್ತಿಯ **ಹತ್ತನೆಯ ರೂಪವು.** ಆತ್ಮನಿವೇದನೆಯ ತೀರ ಕೊನೆಯ ಮೆಟ್ಟಲು ಇದು.

> प्रणवो धनुः शरो ह्यात्मा ब्रह्म तल्लक्ष्यमुच्यते ।
> अप्रमत्तेन वेद्धव्यं शरवत्तन्मयो भवेत् ॥ ಮುಂ. ೨-೨-೪

ಎಂಬ ಶ್ರುತಿಯಂತೆ ಬಾಣವನ್ನು ಬಿಲ್ಲಿನ ಹೆದೆಗೇರಿಸಿ ಗುರಿಯಿಟ್ಟಕಡೆಗೆ ಬಿಗಿದೆಳೆದು ಬಿಟ್ಟಾಗ ಬಾಣವು ಹೇಗೆ ಗುರಿಯಿಟ್ಟ ವಸ್ತುವಿನಲ್ಲಿ ಸೇರಿಕೊಂಡು ಅದರಲ್ಲಿಯೇ

ಒಂದಾಗಿಬಿಡುವದೋ, ಹಾಗೆಯೇ ಭಗವನ್ನಾಮವೆಂಬ ಬಿಲ್ಲಿನಲ್ಲಿ ತನ್ನನ್ನೇ ಬಾಣವನ್ನಾಗಿ ಮಾಡಿಕೊಂಡು ಪರಮಾತ್ಮನನ್ನೇ ಗುರಿಯಾಗಿಟ್ಟು ಎಚ್ಚರಿಕೆಯಿಂದ ಹೊಡೆದಾಗ ಬಾಣನಾದ ಸಾಧಕನು ವೇಗದಿಂದ ಹೋಗಿ ಲಕ್ಷ್ಯವಾಗಿರುವ ಪರಮಾತ್ಮನಲ್ಲಿ ಸೇರಿಕೊಂಡು ಒಂದಾಗಿಬಿಡುವನು.

यथोदकं शुद्धे शुद्धमासिक्तं तादृगेव भवति ।
एवं मुनेर्विजानत आत्मा भवति गौतम ॥        ಕಾ. ೪-೧೫

ಎಂಬ ಶ್ರುತ್ಯುಕ್ತಿಯಂತೆ ನಿರ್ಮಲವಾದ ನೀರನ್ನು ನಿರ್ಮಲವಾದ ನೀರಿನಲ್ಲಿ ಹಾಕಿದಾಗ ಹೇಗೆ 'ಸೇರಿಕೊಂಡ ನೀರು ಇದು, ಮೊದಲೇ ಇದ್ದ ನೀರು ಇದು' ಎಂದು ವಿಂಗಡಿಸಿ ಅರಿಯುವದಕ್ಕಾಗದಂತೆ ಹೊಸ ನೀರೂ ಹಳೆಯ ನೀರಿನಂತೆಯೇ ಆಗಿಬಿಡುವದೋ, ಹಾಗೆಯೇ ಆತ್ಮನಿವೇದನೆಯನ್ನು ಮಾಡಿಕೊಂಡ ಭಕ್ತನಿಗೆ ಮೇಲೆ ಕೆಳಗೆ ಎಡಕ್ಕೆ ಬಲಕ್ಕೆ ಹಿಂದಕ್ಕೆ ಮುಂದಕ್ಕೆ ಎಂಬ ಯಾವ ತಾರತಮ್ಯವೂ ಇಲ್ಲದೆ ಎಲ್ಲವೂ ತಾನೂ ಭಗವನ್ಮಯವೇ ಆಗಿಬಿಟ್ಟಿರುತ್ತದೆ. ಪ್ರೇಮರೂಪನಾದ ಭಕ್ತನ ಪ್ರೇಮರೂಪವಾದ ಭಕ್ತಿಯು ಪರಮಪ್ರೇಮರೂಪನಾದ ಭಗವಂತನಲ್ಲಿ ಒಂದಾದಾಗ ಪ್ರೇಮವೊಂದೇ ಅಲ್ಲದೆ ಮತ್ತೇನು ವಿಂಗಡವಾಗಿದ್ದೀತು ?

## ಪರಮವಿರಹಾಸಕ್ತಿ

೧೫೭. **ಪರಮವಿರಹಾಸಕ್ತಿ ಎಂಬುದು ಹನ್ನೊಂದನೆಯ ಪ್ರಕಾರವು.** ಪ್ರೇಮವು ಅತ್ಯಂತಪ್ರಬಲವೆಂದು ತೋರುವದಕ್ಕೆ ಶಾಂತಸ್ಥಿತಿಯಲ್ಲಿದ್ದರೆ ಸಾಲದು. ಜನರಿಗೆ ಬೇಕಾಗಿರುವ ವಸ್ತುವಿನ ಬೆಲೆಯು, ಅದು ತಮ್ಮ ವಶದಲ್ಲಿದ್ದಾಗ ಅಷ್ಟು ಮಟ್ಟಿಗೆ ಗೊತ್ತಾಗುವದಿಲ್ಲ; ಅದು ಯಾವದಾದರೂ ನಿಮಿತ್ತದಿಂದ ಕಳೆದುಹೋಗಿ ಅದನ್ನಗಲಿರುವಾಗ ತಮಗೆ ಪರಮಪ್ರಿಯವಾಗಿದ್ದ ವಸ್ತು ಹೋಯಿತಲ್ಲ ! ಎಂದು ಸಹಿಸಲಾರದ ದುಃಖವುಂಟಾಗುವದು. ತಮ್ಮ ಪ್ರೇಮಕ್ಕೆ ಪಾತ್ರರಾಗಿದ್ದ ತಂದೆ ತಾಯಿ, ಹೆಂಡಿರುಮಕ್ಕಳು– ಮೊದಲಾದವರು ಇದ್ದಕ್ಕಿದ್ದಹಾಗೆ ಎಲ್ಲಿಯೋ ಹೋಗಿ ಕಣ್ಮರೆಯಾಗಿಬಿಟ್ಟರೆ, ಅಥವಾ ಈ ದೇಹವನ್ನೇ ಬಿಟ್ಟು ಲೋಕಾಂತರಕ್ಕೆ ಹೋದರೆ ಆಗ ಅವರನ್ನು ಕಳೆದುಕೊಂಡವರಿಗೆ ಆಗುವ ಚಿತ್ತದ ಪರವಶತೆಯು ಮಿತಿಮೀರುವದು. ಅವರಿಗೆ ಶರೀರದ ಭಾನವೇ ತಪ್ಪಿಬಿಡಬಹುದು. ಆ ಪ್ರಿಯತಮರಾದವರನ್ನಗಲಿದ ದುಃಖದಿಂದ ತಾವು ಅಳುತ್ತಿದ್ದರೆ ಮಿಕ್ಕವರು ಏನೆಂದುಕೊಂಡಾರು ?– ಎಂಬ ಯೋಚನೆಯೇ ಇರುವದಿಲ್ಲ; ಸುಮ್ಮನೆ ದುಃಖದಿಂದ ಅಳುತ್ತಿದ್ದರೆ ದೇಹಾಯಾಸವಾದೀತೆಂಬ ಅಂಜಿಕೆಯೂ ಇರುವದಿಲ್ಲ. ಮೈಮೇಲಿನ ಬಟ್ಟೆಗಳು ಸಡಿಲಿದರೆ, ಅಥವಾ ಜಗಳಿಬಿದ್ದರೆ ಅವನ್ನು ಸರಿಪಡಿಸಿಕೊಳ್ಳಬೇಕೆಂಬ ವಿಚಾರವೂ ಮನಸ್ಸಿಗೆ ಬರುವದಿಲ್ಲ. ಅವರನ್ನು ಸಮಾಧಾನಗೊಳಿಸುವದಕ್ಕೆಂದು ಯಾರಾದರೂ

ಹತ್ತಿರಕ್ಕೆ ಬಂದರೆ ಅವರ ಮನಸ್ಸಿನ ತಳಮಳವು ಇನ್ನಷ್ಟು ಹೆಚ್ಚುವದು. ಹೀಗೆಯೇ ತನ್ನ ಪ್ರೀತಿಗೆ ಪಾತ್ರನಾದವನು ನಿರೀಕ್ಷಿಸಿದಾಗ ತನ್ನ ಬಳಿಗೆ ಬಂದು ಸೇರದೆಇದ್ದರೆ ಕಾಮಿನಿಯಾದವಳಿಗೆ ಮನಸ್ಸಿನಲ್ಲುಂಟಾದ ವ್ಯಥೆಯಿಂದ ಮೈಬಡವಾಗುವದು ; ಅನ್ನವು ರುಚಿಸಿದೆಹೋಗುವದು, ಮೈಗೆ ಜ್ವರವು ಹತ್ತಿದಂತೆ ಮೈಬಿಸಿಯೇರುವದು ; ಹತ್ತಿರಕ್ಕೆ ಯಾರಾದರೂ ಬಂದರೂ ಅಸಮಾಧಾನವಾಗುವದು. ಅಂಥವರಿಗೆ ಮತ್ತೆ ಏತರ ವಿಚಾರವೂ ಮನಸ್ಸಿಗೆ ಒಗ್ಗದೆಹೋಗುವದು. ಮನಸ್ಸಿಗೆ ಸಂತೋಷಕರ ವಾಗಿದ್ದ ಮಿಕ್ಕ ವಸ್ತುಗಳಿಂದಲೂ ಈಗ ಯಾವ ಉಪಯೋಗವೂ ಇರುವದಿಲ್ಲ. ಹೀಗಿದೆ ಪ್ರಿಯವಸ್ತುವಿನ ವಿರಹದಿಂದ ಆಗುವ ವ್ಯಥೆಯವೇಗ. ಹೀಗೆ ಭಗವತ್ಪ್ರಾಪ್ತಿಗೆ ಯಾವದಾದರೂ ಅಡ್ಡಿಗಳಿರಬೇಕೆಂದೂ ಅವುಗಳನ್ನೆಲ್ಲ ಮೀರಿ ಪರಮಾತ್ಮನನ್ನು ಮುಟ್ಟಬೇಕಾಗಿದೆಯೆಂದೂ ಭಾವಿಸಿ ಅಭ್ಯಾಸಮಾಡುವ ಪ್ರೇಮದ ಪ್ರಕಾರಕ್ಕೆ **ಪರಮವಿರಹಾಸಕ್ತಿ**ಎಂದು ಹೆಸರು. ಯಾವನಿಗೆ ಭಕ್ತಿಯೆಂಬುದರ ಅರಿವೇ ಇಲ್ಲವೋ ಅವನಿಗೆ ಈ ಮಾರ್ಗವನ್ನನುಸರಿಸುವದರಿಂದ ಯಾವ ಪ್ರಯೋಜನವೂ ಆಗುವಂತಿಲ್ಲ ವೆಂಬುದು ಸ್ಪಷ್ಟ. ಜಾರಿಣಿಯಾದವಳು ಯಾವಾಗಲೂ ತನ್ನ ಪ್ರಿಯನನ್ನೇ ಚಿಂತಿಸುತ್ತಾ ಮನೆಯವರನ್ನೆಲ್ಲ ವಂಚಿಸಿ ತಿಳಿದವರು ಯಾರಾದರೂ ಬುದ್ಧಿಯನ್ನು ಹೇಳಿದರೆ ಅದನ್ನೂ ಕಿವಿಗೆ ಹಾಕಿಕೊಳ್ಳದೆ ಕತ್ತಲೆಯಲ್ಲಿಯೇ, ದಾರಿಯಲ್ಲಿರುವ ಹಳ್ಳಕೊಳ್ಳಗಳನ್ನೂ ಕಲ್ಲುಮುಳ್ಳುಗಳನ್ನೂ ಲೆಕ್ಕಿಸದೆ ಒಬ್ಬಳೇ ಒಬ್ಬಳು ತನ್ನ ಪ್ರಿಯ ನಿದ್ದಲ್ಲಿಗೆ ಹೋಗಿ ಸೇರುವ ಪ್ರೇಮದ ಬಲವು ಎಷ್ಟಿರುವದೋ ಅದಕ್ಕಿಂತಲೂ ಉತ್ಕಟ ವಾಗಿ ಪ್ರೇಮವನ್ನೇ ಭಗವಂತನಲ್ಲಿ ಮಾಡಿದರೆ ಅವನು ಎಂಥ ಮಹಾತ್ಮನೆಂದಾ ಯಿತು ! ತುಚ್ಛವಿಷಯಗಳಿಗಾಗಿ ಕಣ್ಣೀರಕೋಡಿಯನ್ನು ಹರಿಯಿಸುವವರು ಸಿಕ್ಕಬಹುದು ; ಲೋಕದ ವಿಷಯಗಳನ್ನೆಲ್ಲ ನಿಸ್ಸಾರವೆಂದು ತಿಳಿದು ಪರಮಾತ್ಮ ನನ್ನು ಕಾಣುವವರೆಗೆ ಮನಶ್ಶಾಂತಿಯಿಲ್ಲದೆ ತಳಮಳಿಸುವ ಭಕ್ತರ ಸ್ಥಿತಿಯನ್ನು ಮನವರಿಕೆಮಾಡಿಕೊಳ್ಳುವವರು ಬಹುವಿರಳ.

## ತನ್ಮಯತ್ವದ ರಹಸ್ಯ

೧೫೮. ಸರಿಯಾಗಿ ನೋಡಿದರೆ ತನ್ಮಯತಾಸಕ್ತಿಯನ್ನೇ ಕೊನೆಗೆ ಹಾಕ ಬೇಕಾಗಿತ್ತು. ಏಕೆಂದರೆ ಪರಮಾತ್ಮನಲ್ಲಿ ಆತ್ಮಸಮರ್ಪಣೆಯನ್ನು ಮಾಡಿ ಅವನಲ್ಲಿ ಸೇರಿಹೋದಮೇಲೆ ಮಾಡಬೇಕಾದದ್ದು ಏನೂ ಉಳಿದಿರುವದೇಇಲ್ಲ. ಹೀಗಿದ್ದರೂ ಪರಮವಿರಹಾಸಕ್ತಿಯನ್ನೇ ಕೊನೆಗೆ ಹಾಕಿದ್ದಕ್ಕೆ ಕಾರಣವೇನೆಂದರೆ ಭಕ್ತನಾದ ವನು ಯಾವಾಗಲೂ ಪರಮಾತ್ಮನ ಯಾವ ಭಕ್ತಿಯನ್ನಾದರೂ ಭಗವಂತನಿಗಿಂತ ಬೇರೆಯಾಗಿದ್ದೇ ಮಾಡುವದಕ್ಕೆ ಇಚ್ಛಿಸುವನೇ ಹೊರತು, ಆತನಲ್ಲಿ ತಾನು ಒಂದಾಗ ಬೇಕೆಂದೇನೂ ಬಯಸುವದಿಲ್ಲ. ಸಕ್ಕರೆಯ ಸಿಹಿಯನ್ನು ಅನುಭವಿಸಬೇಕೆನ್ನು ವವನು ತಾನೇ ಸಕ್ಕರೆಯಾಗಿರಬೇಕೆಂದು ಎಂದಿಗಾದರೂ ಬಯಸುವನೆ ? ಇಲ್ಲ. ಹೀಗೆಯೇ ನಿಜವಾದ ಭಕ್ತನು:

**ಸತ್ಯಪಿ ಭೇದಾಪಗಮೇ ನಾಥ ತವಾಹಂ ನ ಮಾಮಕೀನಸ್ತ್ವಮ್ ।**
**ಸಾಮುದ್ರೋ ಹಿ ತರಙ್ಗಃ ಕ್ವಚನ ಸಮುದ್ರೋ ನ ತಾರಙ್ಗಃ ॥**

ಆಚಾರ್ಯಕೃತಷಟ್ಪದೀ ೩

ಎಂಬಂತೆ 'ದೇವ, ನಮ್ಮಿಬ್ಬರ ನಡುವೆಯಿರುವ ಭೇದವು ಹೋದರೂ ನಾನು ನಿನ್ನವನೇ ಆಗುವೆನೇ ಹೊರತು, ನೀನು ನನ್ನವನಾಗುವದಿಲ್ಲ; ಅಲೆಯು ಸಮುದ್ರಕ್ಕೆ ಸೇರಿದ್ದೇ ಹೊರತು, ಸಮುದ್ರವು ಎಂದಿಗೂ ಅಲೆಯದು ಎನಿಸಲಾರದಷ್ಟೆ ?' ಎನ್ನುತ್ತಿರುವನು. ಹೀಗಿದ್ದರೂ ಭಗವಂತನು ತನ್ನನ್ನು ಪ್ರೀತಿಪೂರ್ವಕವಾಗಿ ಭಜಿಸುತ್ತಿರುವವರಿಗೆ ತನ್ನ ಸ್ವರೂಪವನ್ನೇ ಧಾರೆಯೆರೆದುಬಿಡುತ್ತಾನೆ. ಇದು ಅನಿವಾರ್ಯವಾದ ಆನಂದ. ಬೆಂಕಿಯನ್ನು ಮುಟ್ಟಿ ಸುಡಬಾರದೆಂದರೆ ಹೇಗೆ ಆಗದಿರುವ ಮಾತೋ ಹಾಗೆಯೇ ಭಗವಂತನಲ್ಲಿ ಅತ್ಯುತ್ಕಟವಾದ ಪ್ರೇಮವುಂಟಾದರೆ ಆ ಪ್ರೇಮವು ಭಕ್ತರನ್ನೂ ಭಗವಂತನನ್ನೂ ಒಂದುಗೂಡಿಸದೆ ಇರುವದೆಂಬುದು ಆಗದಮಾತು. ಹೀಗಿರುವದರಿಂದ ಭಕ್ತನು ತಾನೇ ಬೇರೆ ಇದ್ದುಕೊಂಡೇ ಭಗವಂತನನ್ನು ಪ್ರೀತಿಸುತ್ತಾನಾದರೂ ಭಗವಂತನಲ್ಲಿ ಕೊನೆಗೆ ಒಂದಾಗಿಬಿಡುತ್ತಾನೆ- ಎಂಬುದೇ ವ್ಯವಹಾರದೃಷ್ಟಿಯಿಂದ ಸರಿ. ಆದರೆ ಪರಮಾರ್ಥದೃಷ್ಟಿಯಿಂದ ನೋಡಿದರೆ, ಭೇದವಿರುವಂತೆ ತೋರುವಾಗಲೂ ಭಕ್ತನೂ ಭಗವಂತನೂ ಒಬ್ಬ ಪರಮಾತ್ಮನೇ ಆಗಿರುತ್ತಾರೆ. ಭಕ್ತಿಯಿಂದ ಕೊನೆಗೆ ಒಂದಾಗುವದಿಲ್ಲ; ಗಡಿಗೆಯು ಒಡೆದಮೇಲೆ ಘಟಾಕಾಶವು ಮಹಾಕಾಶದಲ್ಲಿ ಸೇರಿ ಒಂದಾಗುವದೆಂಬುದು ಯುಕ್ತವೇ ಆದರೂ ಗಡಿಗೆ ಎಂಬ ಉಪಾಧಿಯೂ ನಿಜವಾಗಿ ಆಕಾಶದ ಕಾರ್ಯವೇ ಆಗಿರುವದರಿಂದ ಅದು ತೋರುವಾಗಲೂ ವಸ್ತುತಃ ಆಕಾಶವೇ ಆಗಿರುತ್ತದೆ. ಆಕಾಶಕ್ಕಿಂತ ಬೇರೆಯಾಗಿರುವ ವಾಯು, ಅಗ್ನಿ, ಅಪ್ಪು, ಪೃಥಿವಿ -ಎಂಬ ಭೂತಗಳೇ ಪರಮಾರ್ಥವಾಗಿರುವದಿಲ್ಲ ; ಅಲ್ಲವೆ ? ಇದರಂತೆ ಆತ್ಮನಿಂದಲೇ ಎಲ್ಲವೂ ಆಗಿರುವ ಕಾರ್ಯವಾಗಿರುವದರಿಂದ ಪರಮಾರ್ಥವಾಗಿರುವ ಆತ್ಮನಿಗಿಂತ ಬೇರೆಯಾಗಿ ಏನೊಂದೂ ಇರುವದೇಇಲ್ಲ. ಆದ್ದರಿಂದಲೇ ಶ್ರೀಕೃಷ್ಣಭಗವಂತನು :

**ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ ಮಾಂ ಪ್ರಪದ್ಯತೇ ।**
**ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥ ಗೀ. ೭-೧೯**

"ಬಹುಜನ್ಮಗಳಾದ ಬಳಿಕ ಕೊನೆಯಲ್ಲಿ ಜ್ಞಾನವನ್ನು ಪಡೆದು 'ವಾಸುದೇವನೇ ಸರ್ವವು' ಎಂದು ನನ್ನ ಭಕ್ತನಾಗುವನು. ಅಂಥ ಮಹಾತ್ಮನು ಸಿಕ್ಕುವದು ಬಹುಕಷ್ಟ"- ಎಂದಿರುತ್ತಾನೆ. ಜ್ಞಾನದೃಷ್ಟಿಯಿಂದ ನೋಡಿದಾಗ ಜನ್ಮಗಳೇ ಇಲ್ಲದ್ದರಿಂದ ಒಬ್ಬನೇ ಆಗಿರುವ ವಾಸುದೇವಭಗವಂತನೇ ಭಕ್ತ, ಭಕ್ತಿ, ಭಗವಂತ -ಎಂದು ವಿಭಕ್ತರೂಪದಿಂದ ತೋರಿಕೊಳ್ಳುತ್ತಿರುವನು ಎಂಬುದೇ ಪರಮಾರ್ಥವು.

## ವಿವಿಧಭಕ್ತಿಪ್ರಕಾರವನ್ನನುಸರಿಸಿದ ಭಕ್ತರು

೧೫೫. ಇದುವರೆಗೆ ವರ್ಣಿಸಿರುವ ಹನ್ನೊಂದು ಪ್ರಕಾರಗಳ ಭಕ್ತಿಯು ಒಬ್ಬೊಬ್ಬರಲ್ಲಿಯೇ ಅವಶ್ಯವಾಗಿ ಇರುವದೆಂದು ತಿಳಿಯಬಾರದು. ಪ್ರಾರಬ್ಧಕರ್ಮದ ವಾಸನೆಯಂತೆ ಒಬ್ಬೊಬ್ಬ ಭಕ್ತನಿಗೆ ಒಂದೊಂದು ಬಗೆಯ ಭಕ್ತಿವಿಶೇಷದಲ್ಲಿ ಆದರ ವಿರುತ್ತದೆ. ಹೀಗಿದ್ದರೂ ಅವರೆಲ್ಲರ ಭಕ್ತಿಯ ಸ್ವರೂಪದಲ್ಲಿ ಯಾವ ತಾರತಮ್ಯವೂ ಇರುವದಿಲ್ಲ.

> ಶ್ರೀಕೃಷ್ಣಶ್ರವಣೇ ಪರೀಕ್ಷಿದಭವದ್ವೈಯಾಸಕಿಃ ಕೀರ್ತನೇ
> ಪ್ರಹ್ಲಾದಃ ಸ್ಮರಣೇ ತದಙ್ಘ್ರಿಭಜನೇ ಲಕ್ಷ್ಮೀಃ ಪೃಥುಃ ಪೂಜನೇ ।
> ಅಕ್ರೂರಸ್ತ್ವಭಿವನ್ದನೇ ಕಪಿಪತಿರ್ದಾಸ್ಯೇ ಚ ಸಖ್ಯೇಽರ್ಜುನಃ
> ಸರ್ವಸ್ವಾತ್ಮನಿವೇದನೇ ಬಲಿರಭೂತ್ಕೈವಲ್ಯಮೇಷಾಂ ಸಮಮ್ ॥

ಎಂದು ಒಂದು ಶ್ಲೋಕವನ್ನು ಜನರು ಪಠಿಸುತ್ತಿರುವರು. **ಪರೀಕ್ಷಿತಮಹಾರಾಜನು** ಶ್ರವಣದಲ್ಲಿ, **ಶುಕರು** ಕೀರ್ತನದಲ್ಲಿ, **ಪ್ರಹ್ಲಾದನು** ಸ್ಮರಣದಲ್ಲಿ, **ಲಕ್ಷ್ಮಿಯು** ಪಾದಸೇವೆಯಲ್ಲಿ, **ಪೃಥುಚಕ್ರವರ್ತಿಯು** ಪೂಜೆಯಲ್ಲಿ, **ಅಕ್ರೂರನು** ನಮಸ್ಕಾರ ದಲ್ಲಿ, **ಹನುಮಂತನು** ದಾಸ್ಯದಲ್ಲಿ, **ಅರ್ಜುನನು** ಸಖ್ಯದಲ್ಲಿ, **ಬಲಿಯು** ಆತ್ಮ ನಿವೇದನೆಯಲ್ಲಿ, ಆದರವುಳ್ಳವರಾಗಿದ್ದರು. ಅವರೆಲ್ಲರಿಗೂ ಕೈವಲ್ಯವು ಸಮವಾಗಿಯೇ ದೊರಕಿತು— ಎಂದು ಶ್ಲೋಕದ ಅರ್ಥ. ಇಲ್ಲಿರುವ ಭಕ್ತಿಪ್ರಕಾರಗಳನ್ನು ಅನುಸರಿಸು ತ್ತಿದ್ದವರ ಹೆಸರುಗಳನ್ನು ಮತ್ತೆ ಕೆಲವರು ಹೀಗೆ ಉದಾಹರಿಸಿರುತ್ತಾರೆ : **ನಾರದರೂ ವ್ಯಾಸರೂ** ಪರಮಾತ್ಮನ ಮಹಿಮೆಯನ್ನು **ಕೀರ್ತನೆ**ಮಾಡಿರುತ್ತಾರೆ. **ಗೋಪಿ ಯರು** ಶ್ರೀಕೃಷ್ಣನ **ಲಾವಣ್ಯ**ದಿಂದ ಆಕರ್ಷಿತರಾಗಿದ್ದರು, **ಅಂಬರೀಷನು** ಪೂಜಾಸಕ್ತನಾಗಿದ್ದನು, **ಪ್ರಹ್ಲಾದನು** ಸ್ಮರಣೆಯಲ್ಲಿ ಆಸಕ್ತನಾಗಿದ್ದನು. **ಹನುಮಂತನು** ದಾಸ್ಯದಲ್ಲಿ ಆಸಕ್ತಿಯುಳ್ಳವನಾಗಿದ್ದನು. **ಅರ್ಜುನನು** ಸಖ್ಯ ಭಕ್ತಿಯಲ್ಲಿ ನಿರತನಾಗಿದ್ದನು. **ರುಕ್ಮಿಣಿಸತ್ಯಭಾಮೆಯರು** ಆತನನ್ನು ಕಾಂತ ನೆಂದು ಬಗೆದು ಸೇವಿಸಿದರು. **ಕೌಸಲ್ಯೆಯೂ ದೇವಕಿಯೂ** ಆತನನ್ನು ತಮ್ಮ ಮಗನೆಂದು ಭಾವಿಸಿದ್ದರು. **ವಿಭೀಷಣನೂ ಬಲಿಯೂ** ಆತ್ಮನಿವೇದನವನ್ನು ಮಾಡಿದ್ದರು. **ಸನತ್ಕುಮಾರ, ಯಾಜ್ಞವಲ್ಕ್ಯ** —ಮೊದಲಾದ ಋಷಿಗಳೂ ಆತ್ಮಾನಂದದಲ್ಲಿ ಮಗ್ನರಾಗಿರುತ್ತಿದ್ದರು. ಹೀಗೆ ಒಬ್ಬೊಬ್ಬರಲ್ಲಿ ಒಂದೊಂದು ಪ್ರಕಾರವು ಪ್ರಧಾನವಾಗಿದ್ದಿತು. **ಪರಮವಿರಹಾಸಕ್ತಿ**ಯೂ ಎಲ್ಲರಿಗೂ ಸಮಾನವಾಗಿದ್ದಿತು ; **ರಾಧೆ**ಯಲ್ಲಿಯೂ **ಗೋಪಿಯರ**ಲ್ಲಿಯೂ ಪ್ರಧಾನವಾಗಿ ತೋರುತ್ತಿತ್ತು.

ಪುರಂದರದಾಸರ ಪ್ರಸಿದ್ಧವಾದ ಒಂದು ಪದದಲ್ಲಿ ಭಕ್ತರ ಪ್ರೇಮಪ್ರಕಾರ ಗಳನ್ನು ಹೀಗೆ ವರ್ಣಿಸಿದೆ :—

ರಾಗ : ಧನಾಸರಿ ಅಟತಾಳ

ಕರುಣಿಸೊ ಕೃಷ್ಣ ಕರುಣಿಸೊ ।
ಮರಣಗಾಲಕೆ ನಿನ್ನ ಚರಣದ ಸ್ಮರಣೆಯ ॥ ಪ ॥

೧. ರುಕುಮಾಂಗದನಂತೆ ವ್ರತವ ನಾನರಿಯೆನು ।
ಶುಕಯೋಗಿಯಂತೆ ಸ್ತುತಿಸಲರಿಯೆ ॥
ಬಕವೈರಿಯಂತೆ ಧ್ಯಾನವ ಮಾಡಲರಿಯೆ ದೇ ।
ವಕಿಯಂತೆ ಮುದ್ದಿಸಲರಿಯೆನೊ ರಂಗ ॥

೨. ಗರುಡನಂತೆ ಪೊತ್ತು ತಿರುಗಲರಿಯೆ ನಿನ್ನ ।
ಕರಿರಾಯನಂತೆ ಕರೆಯಲರಿಯೆ ॥
ವರಕಪಿಯಂತೆ ಸೇವೆಯ ಮಾಡಲರಿಯೆನು ।
ಸಿರಿಯಂತೆ ನೆರೆದು ಮೋಹಿಸಲರಿಯೆನೊ ರಂಗ ॥

೩. ಬಲಿಯಂತೆ ದಾನವ ಕೊಡಲರಿಯೆನು ನಾನು ।
ಪ್ರಹ್ಲಾದನಂತೆ ದೃಢವನರಿಯೆ ॥
ಒಲಿಸಲರಿಯೆ ಅರ್ಜುನನಂತೆ ಸಖನಾಗಿ ।
ಸಲಹಿಕೊಳ್ಳಯ್ಯ ಶ್ರೀಪುರಂದರವಿಠಲ ॥

ಅಂತೂ ಭಕ್ತಿಯ ಪ್ರಕಾರಗಳಿಗೆ ಅನೇಕನಿದರ್ಶನಗಳನ್ನು ಕೊಡಬಹುದು. ಸಾಮಾನ್ಯಜನರಿಗೆ ವ್ಯವಹಾರದಲ್ಲಿ ಕಂಡುಬರುವ ಪ್ರೇಮಪ್ರಕಾರಗಳನ್ನು ಭಗವಂತನಲ್ಲಿರಿಸಬೇಕೆಂದು ತಿಳಿಸುವದಕ್ಕೆ ಇವೆಲ್ಲ ಉಪಾಯಗಳೇ ಸರಿ. ಹೇಗೇ ಆಗಲಿ, ಎಲ್ಲಾ ಪ್ರಕಾರಗಳಲ್ಲಿಯೂ ಭಗವಂತನಲ್ಲಿ ಪರಮಪ್ರೇಮವಿರುವದು ಸಮಾನವಾಗಿರುತ್ತದೆ ಎಂಬುದು ಮನದಟ್ಟಾದರೆ ಈ ಸೂತ್ರದ ಉದ್ದೇಶವು ಪರಿಪೂರ್ಣವಾದಂತೆ ಎಂದರಿಯಬೇಕು.

## ೨೦. ಭಕ್ತ್ಯಾಚಾರ್ಯರುಗಳ ಐಕಮತ್ಯ

ಇತ್ಯೇವಂ ವದನ್ತಿ ಜನಜಲ್ಪನಿರ್ಭಯಾಃ ಏಕಮತಾಃ ಕುಮಾರ-ವ್ಯಾಸ- ಶುಕ-ಶಾಣ್ಡಿಲ್ಯ - ಗರ್ಗ-ವಿಷ್ಣು - ಕೌಣ್ಡಿನ್ಯ-ಶೇಷೋದ್ಧವಾರುಣಿ - ಬಲಿ- ಹನುಮದ್ವಿಭೀಷಣಾದಯೋ ಭಕ್ತ್ಯಾಚಾರ್ಯಾಃ ॥ ೮೩ ॥

೮೩. ಹೀಗೆಂದು ಸನತ್ಕುಮಾರ, ವ್ಯಾಸ, ಶುಕ, ಶಾಂಡಿಲ್ಯ, ಗರ್ಗ, ವಿಷ್ಣು, ಕೌಂಡಿನ್ಯ, ಶೇಷ, ಉದ್ಧವ, ಅರುಣಿ, ಬಲಿ,

ಹನುಮಂತ, ವಿಭೀಷಣ- ಇವರೇ ಮೊದಲಾದ ಭಕ್ತ್ಯಾಚಾರ್ಯರುಗಳು ಜನರ ಹರಟೆಗೆ ಅಂಜದೆ ಒಕ್ಕೊರಲಿನಿಂದ ಹೇಳುತ್ತಿರುವರು.

೧೬೦. ಇಲ್ಲಿ ಅನೇಕ ಭಕ್ತ್ಯಾಚಾರ್ಯರುಗಳ ಹೆಸರನ್ನು ಉಲ್ಲೇಖಿಸಿರುವದು ಭಕ್ತಿಯೇ ಪರಮಪುರುಷಾರ್ಥಕ್ಕೆ ಮುಖ್ಯಸಾಧನವೆಂಬುದನ್ನು ಎಲ್ಲರೂ ಒಪ್ಪಿರುತ್ತಾರೆಂದೂ ಈ ಶಾಸ್ತ್ರದಲ್ಲಿ ನಿರೂಪಿತವಾಗಿರುವ ವಿಷಯಗಳ ಬಗೆಗೆ ಅವರೆಲ್ಲರ ಸಮ್ಮತಿಯಿದೆಯೆಂದೂ ತಿಳಿಯಿಸುವದಕ್ಕೆ.

ಇಲ್ಲಿ ವ್ಯಾಸ, ಗರ್ಗ, ಶಾಂಡಿಲ್ಯ- ಇವರ ಹೆಸರುಗಳನ್ನು ಸೇರಿಸಿರುವದನ್ನು ನೋಡಿದರೆ ಹಿಂದೆ (ಪು. ೪೯, ೫೦) ಈ ಆಚಾರ್ಯರುಗಳ ಮತವನ್ನು ಭಕ್ತಿಯ ಲಕ್ಷಣವನ್ನು ತಿಳಿಯಿಸುವದಕ್ಕೆಂದು ಕೊಟ್ಟಿದ್ದಾಗ ಇವರ ಬೇರೆಬೇರೆಯ ಅಭಿಪ್ರಾಯವಿಶೇಷಗಳನ್ನು ವಿವರಿಸಲಾಗಿತ್ತಾದರೂ ಯಾವ ಭಕ್ತ್ಯಾಚಾರ್ಯರಿಗೂ, ಭಕ್ತಿಯ ಸ್ವರೂಪದ ಬಗೆಗೆ ಮತಭೇದವು ಎಳ್ಳಷ್ಟೂ ಇರುವದಿಲ್ಲ ಎಂಬುದನ್ನು ಮತ್ತೆ ದೃಢಪಡಿಸಿದಂತೆ ಆಗಿರುತ್ತದೆ.

ಶಾಸ್ತ್ರಗಳ ಅಭಿಪ್ರಾಯವನ್ನು ವಿವರಿಸಿ, ಆಚಾರದಲ್ಲಿ ಅವನ್ನು ಸ್ಥಾಪಿಸಿ ತಾನೂ ಅದರಂತೆ ಆಚರಿಸುವಾತನಿಗೆ **ಆಚಾರ್ಯ**ನೆಂಬ ಹೆಸರು ಎಂದು ಸ್ಮೃತಿ ವಚನವುಂಟು. ಇಲ್ಲಿ ಹೇಳಿರುವ ಆಚಾರ್ಯರುಗಳು ಸ್ವತಂತ್ರವಾಗಿ ಭಕ್ತಿಶಾಸ್ತ್ರದ ಗ್ರಂಥಗಳನ್ನು ಬರೆದಿದ್ದರೆ ?- ಎಂಬುದನ್ನು ನಿರ್ಧರಿಸುವದಕ್ಕೆ ನಮಗೆ ಆಧಾರಗಳು ಸಿಕ್ಕಿಲ್ಲವಾದರೂ ಇವರೆಲ್ಲರೂ ತಮ್ಮ ಆಚರಣೆಯಿಂದ ಭಕ್ತಾಗ್ರೇಸರರೆಂಬುದನ್ನು ತೋರಿಸಿಕೊಂಡಿರುತ್ತಾರೆಂಬುದಕ್ಕೆ ಅವರ ಹೆಸರುಗಳ ಪರಾಮರ್ಶವಿರುವ ಶ್ರುತೀತಿಹಾಸಪುರಾಣಗಳಿಂದ ತಿಳಿಯಬಹುದು. ಭಕ್ತಿಯೆಂಬುದು ಅನುಭವಗಮ್ಯವಾದ ತತ್ತ್ವವಾಗಿರುವದರಿಂದ ಇವರೆಲ್ಲರ ಆಚರಣೆಯು ಭಕ್ತಿಯ ಸಾಧಕರಿಗೆ ಆದರ್ಶವಾಗಿವೆ ಎಂಬುದಕ್ಕೆ ಯಾವ ಸಂಶಯವೂ ಇರುವದಿಲ್ಲ.

**'ಜನಜಲ್ಪನಿರ್ಭಯಾಃ'** ಜನರ ಹರಟೆಗೆ ಅಂಜದವರು ಎಂಬ ವಿಶೇಷಣವನ್ನು ಭಕ್ತ್ಯಾಚಾರ್ಯರಿಗೆ ಕೊಟ್ಟಿರುವದರಿಂದ ಭಕ್ತರಾದವರು ಭಗವದೇಕಪರಾಯಣರಾಗಿ ತನ್ಮಯರಾಗಿರುವದರಿಂದ ಜನರು ತಮ್ಮ ವಿಷಯಕ್ಕೆ ಏನೆಂದುಕೊಂಡಾರು ? -ಎಂಬ ಅಂಜಿಕೆಯೇನೂ ಅವರಿಗಿರುವದಿಲ್ಲ. ಅವರ ದೃಷ್ಟಿಯಲ್ಲಿ ಎಲ್ಲೆಲ್ಲಿಯೂ ಭಗವಂತನೇ ಕಾಣಿಸುತ್ತಿದಾನೆ ಎಂಬ ತತ್ತ್ವವನ್ನು ಸೂಚಿಸುವದು. ಆಸ್ತಿಕರಾದ ಭಕ್ತಿಜಿಜ್ಞಾಸುಗಳಿಗಂತೂ ಇವರೆಲ್ಲರೂ ಆದರ್ಶಪ್ರಾಯರಾಗಿ ವರ್ತಿಸಿದವರೆಂಬುದು ಶ್ರುತಿಸ್ಮೃತಿಪುರಾಣಗಳಿಂದ ತಿಳಿದೇ ಇರುತ್ತದೆ.

## ಭಕ್ತ್ಯಾಚಾರ್ಯರುಗಳು

ಇಲ್ಲಿರುವ ಹೆಸರುಗಳು ಯಾವಯಾವ ಭಕ್ತ್ಯಾಚಾರ್ಯರುಗಳನ್ನು ಪರಾಮರ್ಶಿಸುತ್ತಿವೆ ? - ಎಂಬುದನ್ನು ನಿರ್ಧರಿಸುವದು ಕಷ್ಟ. ಕುಮಾರ ಎಂಬುದು ನಾರದರಿಗೆ ಭೂಮವಿದ್ಯೆಯನ್ನುಪದೇಶಿಸಿದ 'ಸನತ್ಕುಮಾರ' ಅಥವಾ 'ಸ್ಕಂದ' ಎಂಬವರು -ಎಂದು ಕೆಲವರು ಕಲ್ಪಿಸಿರುತ್ತಾರೆ. ಬ್ರಹ್ಮವೈವರ್ತಪುರಾಣದಲ್ಲಿಯೂ ನಾರದರ ಗುರುಗಳು ಸನತ್ಕುಮಾರರೆಂದು ಹೇಳಿದೆಯಂತೆ ಅವರು ವೈಷ್ಣವಾಗ್ರಣಿಗಳೆಂದು ಅಲ್ಲಿದೆಯಂತೆ. 'ಹರಿಃ ಶರಣಮ್' ಎಂಬ ಮಂತ್ರವನ್ನು ಜಪಿಸುತ್ತಿದ್ದರಂತೆ. ಆದರೆ ಆ ಪುರಾಣದಲ್ಲಿರುವ ಸನತ್ಕುಮಾರರೂ ಉಪನಿಷತ್ತಿನಲ್ಲಿ ಪರಾಮೃಷ್ಟರಾಗಿರುವ ಸನತ್ಕುಮಾರರೂ ಒಬ್ಬರೇ ಎಂಬುದಕ್ಕೆ ಪ್ರಮಾಣವೇನೂ ನಮಗೆ ಕಾಣಿಸುತ್ತಿಲ್ಲ; ಮಂತ್ರವನ್ನಾಗಲಿ ಮಂತ್ರಜಪವನ್ನಾಗಲಿ ಉಪನಿಷತ್ತಿನಲ್ಲಿ ಹೇಳಿಲ್ಲ. ಋಗ್ವೇದಾದಿ ಮಂತ್ರಗಳೆಲ್ಲವೂ ನಾಮಮಾತ್ರವೆಂದೂ ನಾಮವೇ ಬ್ರಹ್ಮವೆಂದು ಉಪಾಸನೆಮಾಡಬೇಕೆಂದೂ ಮೊಟ್ಟಮೊದಲೇ ಹೇಳಿದ್ದರೂ ಕೊನೆಗೆ ನಾಮರೂಪಗಳನ್ನು ಮೀರಿರುವ ಭೂಮ(ಬ್ರಹ್ಮ)ವೇ ಪರಮಾರ್ಥಸತ್ಯವೆಂದೂ ಆನಂದಸ್ವರೂಪವೆಂದೂ ಉಪನಿಷತ್ತಿನಲ್ಲಿ ಉಪಸಂಹಾರಮಾಡಿರುತ್ತದೆ.

ವ್ಯಾಸರೂ ಶುಕರೂ ಪ್ರಸಿದ್ಧರಾಗಿರುತ್ತಾರೆ. ಭಾರತದಲ್ಲಿ ಶ್ರೀಕೃಷ್ಣನ ಮಾಹಾತ್ಮ್ಯವನ್ನು ಎತ್ತಿಹೇಳಿರುವದು ನಿಜ. ಶುಕರು ಭಾಗವತಮಹಾಪುರಾಣವನ್ನು ಪರೀಕ್ಷಿದ್ರಾಜನಿಗೆ ಉಪದೇಶಿಸಿದರೆಂಬ ಪೌರಾಣಿಕಾಖ್ಯಾನವನ್ನು ನಂಬಿದರೆ ಶುಕರು ಪರಮಭಾಗವತರೆಂಬುದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

ಶಾಂಡಿಲ್ಯರ ಹೆಸರು ಛಾಂದೋಗ್ಯದಲ್ಲಿ (೩-೧೪-೪) ಕಣುತ್ತದೆ ; ಬೃಹದಾರಣ್ಯಕದಲ್ಲಿಯೂ (ಬೃ. ೨-೬-೧) ಇದೆ. ಶಾಂಡಿಲ್ಯರು ಬರೆದಿರುವ ಭಕ್ತಿಸೂತ್ರಗಳೂ ಪ್ರಸಿದ್ಧವಾಗಿವೆ. ಪ್ರಕೃತಸೂತ್ರದಲ್ಲಿ ಇವುಗಳೊಳಗೆ ಯಾವದಾದರೂ ಹೆಸರನ್ನು ಪರಾಮರ್ಶಿಸಿದೆಯೆ ? -ಎಂಬುದನ್ನು ನಿರ್ಧಾರವಾಗಿ ಹೇಳುವದಕ್ಕೆ ಬರುವಂತಿಲ್ಲ.

ಗರ್ಗ ಎಂಬ ಹೆಸರೂ ಶ್ರುತಿಸ್ಮೃತಿಗಳಲ್ಲಿ ಕಂಡುಬರುತ್ತದೆಯಾದರೂ ಇಲ್ಲಿ ಪರಾಮರ್ಶಿಸಿರುವ ಭಕ್ತ್ಯಾಚಾರ್ಯರೇ ಅವರೆಂಬ ನಿರ್ಣಯಕ್ಕೆ ಆಧಾರವು ಕಾಣುತ್ತಿಲ್ಲ.

ವಿಷ್ಣುಸ್ಮೃತಿಯು ಪ್ರಸಿದ್ಧವಾಗಿದೆ; ಆದರೆ ಆ ಸ್ಮೃತಿಕಾರರು ಭಕ್ತ್ಯಾಚಾರ್ಯರೆಂದು ಪ್ರಸಿದ್ಧರಾಗಿಲ್ಲ. ಭಾರತದ ನಾರಾಯಣೀಯೋಪಾಖ್ಯಾನದಲ್ಲಿ ವಿಷ್ಣುವಿನ ಮಾಹಾತ್ಮ್ಯವನ್ನು ನಾರದರಿಗೆ ಉಪದೇಶಿಸಿದ ನಾರಾಯಣಋಷಿಯು ವಿಷ್ಣುವಿನ ಅಂಶದಿಂದ ಅವತರಿಸಿದನೆಂದು ಉಕ್ತವಾಗಿದೆಯಾದರೂ ವಿಷ್ಣುವೆಂಬ

ಹೆಸರಿನಿಂದ ಆತನು ಪ್ರಸಿದ್ಧನಾಗಿಲ್ಲ. **ಕೌಂಡಿನ್ಯ, ಶೇಷ**– ಎಂಬ ಹೆಸರುಗಳೂ ಅಷ್ಟೇ; ಅವರು ಭಕ್ತ್ಯಾಚಾರ್ಯರೆಂಬುದಕ್ಕೂ ಸಾಕಾದಷ್ಟು ಆಧಾರವು ಸಿಕ್ಕುವದಿಲ್ಲ. **ಉದ್ಧವನು** ಮಹಾಭಕ್ತನೆಂಬುದು ಭಾಗವತಪುರಾಣದಿಂದ ಪ್ರಸಿದ್ಧ. **ಆರುಣಿ** ಎಂಬ ಹೆಸರೂ ಪ್ರಸಿದ್ಧನಾದ ಯಾವನೊಬ್ಬ ಭಕ್ತ್ಯಾಚಾರ್ಯನದಾಗಿಲ್ಲ ಛಾಂದೋಗ್ಯದಲ್ಲಿ ಆರನೆಯ ಅಧ್ಯಾಯದಲ್ಲಿರುವ ಒಬ್ಬ ಆಚಾರ್ಯನ ಹೆಸರದು. **ಬಲಿ, ಹನುಮಂತ, ವಿಭೀಷಣ**– ಇವರು ಪ್ರಸಿದ್ಧರಾದ ಭಕ್ತರೆಂಬುದಕ್ಕೆ ಸಂಶಯವಿಲ್ಲ.

ಇದು ಹೇಗಾದರೂ ಇರಲಿ. ಇಲ್ಲಿ ಹೇಳಿರುವವರು ಭಕ್ತಿಯನ್ನು ತಮ್ಮ ಆಚಾರದಲ್ಲಿ ತೋರಿಸಿರುತ್ತಾರೆಂದೂ ಅವರ ವರ್ತನೆಯಿಂದ ಪ್ರಕೃತಸೂತ್ರದಲ್ಲಿ ವರ್ಣಿಸಿರುವ ಭಕ್ತಿಸಿದ್ಧಾಂತಕ್ಕೆ ಪುಷ್ಟಿ ದೊರಕುತ್ತದೆಯೆಂದೂ ಸೂತ್ರಕಾರರ ಅಭಿಪ್ರಾಯವಿರಬಹುದು– ಎಂದು ನಾವು ಇಟ್ಟುಕೊಳ್ಳಬಹುದಾಗಿದೆ.

ಯ ಇದಂ[1] ನಾರದಪ್ರೋಕ್ತಂ ಶಿವಾನುಶಾಸನಂ ವಿಶ್ವಸಿತಿ ಶ್ರದ್ಧತ್ತೇ ಸ ಭಕ್ತಿಮಾನ್ ಭವತಿ ಸ ಪ್ರೇಷ್ಠಂ ಲಭತ ಸ ಪ್ರೇಷ್ಠಂ ಲಭತ ಇತಿ ॥ ೮೪ ॥

೮೪. ನಾರದರು ಹೇಳಿರುವ ಈ ಮಂಗಲಕರವಾದ ಉಪದೇಶದಲ್ಲಿ ಯಾವನು ವಿಶ್ವಾಸವಿಡುವನೋ, ಶ್ರದ್ಧೆಯಿಂದ ವರ್ತಿಸುವನೋ– ಅವನು ಭಕ್ತಿವಂತನಾಗುವನು. ಪ್ರಿಯತಮನಾದ ಭಗವಂತನನ್ನು ಪಡೆದುಕೊಳ್ಳುವನು, ಪ್ರಿಯತಮನಾದ ಭಗವಂತನನ್ನು ಪಡೆದುಕೊಳ್ಳುವನು.

೧೬೧. ಶ್ರದ್ಧಾಭಕ್ತಿಧ್ಯಾನಗಳಿಂದಲೇ ಸರ್ವರಿಗೂ ಆತ್ಮನಾಗಿರುವ ಭಗವಂತನ ಆನಂದಸ್ವರೂಪದ ಅನುಭವವು ದೊರಕುವದೆಂಬುದು ಸಕಲಶಾಸ್ತ್ರಗಳ ಸಾರಾಂಶವು. ಇದನ್ನು ಈ ಶಾಸ್ತ್ರದಲ್ಲಿ ಪ್ರತಿಪಾದಿಸಿರುವದರಿಂದ ಇಲ್ಲಿ ಹೇಳಿರುವ ಉಪದೇಶದಲ್ಲಿ ನಂಬಿಕೆಯನ್ನಿಟ್ಟು ಶ್ರದ್ಧೆಯಿಂದ ಈ ಪದ್ಧತಿಯನ್ನು ಯಾರು ಅನುಸರಿಸುವರೋ ಅವರಿಗೆ ಎಲ್ಲಕ್ಕಿಂತಲೂ ಪ್ರಿಯತಮನೆಂದು ಶಾಸ್ತ್ರಪ್ರಸಿದ್ಧನಾಗಿರುವ ಪರಮಾನಂದಸ್ವರೂಪನಾದ ಆ ಪರಮಾತ್ಮನ ಸಾಯುಜ್ಯವು ದೊರಕುವದು. ಶಾಸ್ತ್ರವು ಇಲ್ಲಿಗೆ ಮುಗಿಯಿತೆಂಬುದನ್ನು ತಿಳಿಸುವದಕ್ಕಾಗಿ 'ಸ ಪ್ರೇಷ್ಠಂ ಲಭತೇ' ಎಂಬ ವಾಕ್ಯವನ್ನು ಎರಡುಸಲ ಇಟ್ಟಿರುತ್ತದೆ.

---

1. 'ಇದಮ್' ಎಂಬುದಕ್ಕೆ 'ಇಹ' ಎಂದು ಪಾಠಾಂತರವಿದೆ.

# ೧. ಪರಿಶಿಷ್ಟ

## ಭಕ್ತಿಯ ವಿಷಯಕ್ಕೆ ಆಕ್ಷೇಪಸಮಾಧಾನಗಳು

ಭಕ್ತಿಯು ಸ್ವಯಂಪ್ರಮಾಣವಾಗಿ ಅನುಭವದಲ್ಲಿ ಪರ್ಯವಸಾನವಾಗಿರುತ್ತಿದ್ದರೂ ತತ್ತ್ವದ ಮರ್ಮವನ್ನರಿಯದೆ ಮತಾಂಧರಾಗಿರುವ ಸಾಮಾನ್ಯಜನರು ಇದರ ವಿಷಯಕ್ಕೆ ಬಗೆಬಗೆಯ ಆಕ್ಷೇಪಗಳನ್ನು ಎತ್ತುತ್ತಿರುವರು. ಶಾಸ್ತ್ರಾರ್ಥವನ್ನು ನಿರ್ಮಲಗೊಳಿಸಿ ಜಿಜ್ಞಾಸುಗಳ ಸಂಶಯಗಳನ್ನು ಪರಿಹರಿಸುವದಕ್ಕಾಗಿ ಅಂಥ ಆಕ್ಷೇಪಗಳಿಗೆ ಒಂದೊಂದಾಗಿ ತಿಳಿದಮಟ್ಟಿಗೆ ಪರಿಹಾರವನ್ನು ಇಲ್ಲಿ ಹೇಳುವೆವು :-

೧. ಜ್ಞಾನದಿಂದ ಮೋಕ್ಷವೆಂದು ಶ್ರುತಿಸ್ಮೃತಿಗಳಲ್ಲಿ ಪ್ರಸಿದ್ಧವಾಗಿರುವಲ್ಲಿ ಭಕ್ತಿಯಿಂದಲೇ ಪರಮಪುರುಷಾರ್ಥವೆಂದು ಹೇಳಿರುವದು ಎಷ್ಟರಮಟ್ಟಿಗೆ ಸರಿ ?- ಎಂಬುದು ಮೊಟ್ಟಮೊದಲನೆಯ ಆಕ್ಷೇಪಣೆ.

ಇದಕ್ಕೆ ಪರಿಹಾರವನ್ನು ಗ್ರಂಥಶರೀರದಲ್ಲಿಯೇ ಹೇಳಿರುತ್ತೇವೆ. ಪರಮಾತ್ಮನು ಜ್ಞಾನಸ್ವರೂಪನೆಂದೂ ಆನಂದಸ್ವರೂಪನೆಂದೂ '**सत्यं ज्ञानमनन्तं ब्रह्म**' (ತೈ. ೨-೧), '**आनन्दो ब्रह्मेति व्यजानात्**' (ತೈ. ೩-೬), '**विज्ञानमानन्दं ब्रह्म**' (ಬೃ. ೩-೯-೨೮)- ಮುಂತಾದ ಶ್ರುತಿಗಳಲ್ಲಿ ಸಾರಿದೆ. ಯಾವದು ಅತ್ಯಂತ ಪ್ರೇಮಕ್ಕೆ ವಿಷಯವಾಗಿರುತ್ತದೆಯೋ ಅದು ಆನಂದಸ್ವರೂಪವಾಗಿರುತ್ತದೆ ; ಪರಮಾತ್ಮನು ಎಲ್ಲಕ್ಕಿಂತಲೂ ಪ್ರಿಯನಾಗಿರುತ್ತಾನೆಂದು :

> **तदेतत् प्रेयः पुत्रात् प्रेयो वित्तात् प्रेयोऽन्यस्मात्सर्वस्मादन्तरतरं यदयमात्मा ........ स य आत्मानमेव प्रियमुपास्ते न हास्य प्रियं प्रमायुकं भवति-॥** ಬೃ. ೧-೪-೮

ಎಂದು ಆತ್ಮನೇ ಎಲ್ಲಕ್ಕಿಂತಲೂ ಪ್ರಿಯನೆಂದೂ ನಿತ್ಯಾನಂದಸ್ವರೂಪನೆಂದೂ ಶಾಸ್ತ್ರದಲ್ಲಿ ತಿಳಿಸಿರುತ್ತದೆ. ಆದ್ದರಿಂದ ಆತ್ಮಜ್ಞಾನವು ಆತ್ಮನಲ್ಲಿ ಪ್ರೇಮವಿಲ್ಲದೆ ಎಂದಿಗೂ ಉಂಟಾಗಲಾರದು. '**ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ**' (ಗೀ. ೭-೧೭) ಎಂದು ಭಗವಂತನು ಗೀತೆಯಲ್ಲಿ ಜ್ಞಾನಿಯು ತನಗೆ ಅತ್ಯಂತಪ್ರಿಯನೆಂದು ಹೇಳಿರುವದಲ್ಲದೆ, '**ಯೋ ಮದ್ಭಕ್ತಃ ಸ ಮೇ ಪ್ರಿಯಃ**' (ಗೀ. ೧೨-೧೪)- ಮುಂತಾದ ಶ್ಲೋಕಗಳಲ್ಲಿ ತನ್ನ ಪ್ರಿಯಭಕ್ತನಿಗೆ ಜ್ಞಾನಿಯ ಲಕ್ಷಣಗಳನ್ನೇ ಹೇಳಿರುವದರಿಂದಲೂ ಪರಜ್ಞಾನಕ್ಕೂ ಪರಭಕ್ತಿಗೂ ಯಾವ ಭೇದವೂ ಇಲ್ಲವೆಂಬುದು ಶಾಸ್ತ್ರಸಿದ್ಧಾಂತವೆಂದಾಯಿತು. ಆದ್ದರಿಂದ ಜ್ಞಾನನಿಷ್ಠಾರೂಪಭಕ್ತಿಯಿಂದಲೇ ಪರಮಪುರುಷಾರ್ಥವೆಂಬ ಸಿದ್ಧಾಂತಕ್ಕೆ ಯಾವ ಆತಂಕವೂ ಇಲ್ಲ.

೨. ಭಕ್ತಿಯೆಂಬ ಶಬ್ದವೇ ಉಪನಿಷತ್ತಿನಲ್ಲಿಲ್ಲ- ಎಂಬುದು ಕೆಲವರ ಆಕ್ಷೇಪ.

ಭಕ್ತಿಯೆಂದರೆ ಪ್ರೇಮವು. ಪ್ರೇಮವನ್ನು ಸೂಚಿಸುವ ನಾನಾಶಬ್ದಗಳನ್ನು ಉಪನಿಷತ್ತುಗಳಲ್ಲಿ ಬಳಸಿರುತ್ತದೆ.

**आत्मरतिरात्मक्रीड आत्ममिथुन आत्मानन्दः स स्वराड् भवति ॥**

ಛಾಂ. ೭-೨೫-೨

ಎಂಬ ಶ್ರುತಿಯಲ್ಲಿ ಆತ್ಮರತಿ, ಆತ್ಮಕ್ರೀಡೆ, ಆತ್ಮಾನಂದ- ಮುಂತಾದ ಶಬ್ದಗಳಿಂದ ಪರಮಾತ್ಮನ ಪ್ರೇಮವನ್ನು ತಿಳಿಸಿಕೊಟ್ಟಿರುತ್ತದೆ.

**यस्य देवे परा भक्तिर्यथा देवे तथा गुरौ ।**
**तस्यैते कथिता ह्यर्थाः प्रकाशन्ते महात्मनः ॥** ಶ್ವೇ. ೬-೨೩

ಎಂಬ ಶ್ರುತಿವಚನದಲ್ಲಿಯೂ '**ಶ್ರದ್ಧಾಭಕ್ತಿಧ್ಯಾನಯೋಗಾದವೇಹಿ**' (ಕೈ. ) ಎಂಬ ವಚನದಲ್ಲಿಯೂ ಭಕ್ತಿಶಬ್ದವೇ ಇರುತ್ತದೆ. ಪರಮಾತ್ಮನ ಪ್ರೇಮವನ್ನು ಸೂಚಿಸುವ ಶಬ್ದಗಳು ಅಲ್ಲಲ್ಲಿರುವದರಿಂದಲೂ ಪ್ರೇಮವಿಲ್ಲದ ಜ್ಞಾನವು ಆತ್ಮಜ್ಞಾನವೇ ಆಗಲಾರದಾದ್ದರಿಂದಲೂ ಈ ಆಕ್ಷೇಪಕ್ಕೆ ಅವಕಾಶವಿಲ್ಲ. ಭಗವದ್ಗೀತೆಯಲ್ಲಂತೂ ಭಕ್ತಿಶಬ್ದವು ತುಂಬಿತುಳುಕಾಡುತ್ತಿದೆ. ಜ್ಞಾನದಿಂದಲೇ ಮುಕ್ತಿ ಎಂಬ ಆಚಾರ್ಯರುಗಳೂ ಭಗವದ್ಗೀತೆಯನ್ನು ಸಾಧನಪ್ರಸ್ಥಾನವೆಂದೇ ಒಪ್ಪಿ ಭಾಷ್ಯವನ್ನು ಬರೆದಿರುವದರಿಂದಲೂ ಈ ಆಕ್ಷೇಪಕ್ಕೆ ಅವಕಾಶವಿರುವದಿಲ್ಲ.

೩. ಭಕ್ತಿಯು ಜ್ಞಾನಕ್ಕೆ ಸಾಧನವೇ ಹೊರತು ಅದೇ ಜ್ಞಾನವಲ್ಲ. ಶ್ವೇತಾಶ್ವತರದಲ್ಲಿ ಭಕ್ತಿಯಿದ್ದವನಿಗೆ ಈ ಉಪನಿಷತ್ತಿನ ಅರ್ಥಗಳು ತಿಳಿಯುವವು ಎಂದಲ್ಲವೆ, ಇದೆ ?- ಎಂದು ಕೆಲವರು ಆಕ್ಷೇಪಿಸುತ್ತಾರೆ.

ಭಕ್ತಿಯು ಜ್ಞಾನಕ್ಕೆ ಸಾಧನವೆಂಬುದು ನಿಜ. ಆದರೆ ಅದು ಗೌಣಭಕ್ತಿಯು ; ಪರಭಕ್ತಿಯಲ್ಲ.

**ಚತುರ್ವಿಧಾ ಭಜನ್ತೇ ಮಾಂ ಜನಾಃ ಸುಕೃತಿನೋಽರ್ಜುನ ।**
**ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥**

ಗೀ. ೭-೧೬

ಎಂಬ ಶ್ಲೋಕದಲ್ಲಿ ಜಿಜ್ಞಾಸುಭಕ್ತನು ಗೌಣಭಕ್ತನೆಂದು ಹೇಳಿದಮೇಲೂ ಜ್ಞಾನಿಭಕ್ತನನ್ನು ಬೇರೆಯಾಗಿ ಹೇಳಿರುತ್ತದೆ. ಹೀಗೆಯೇ '**ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।**' (ಗೀ. ೧೩-೧೦) ಎಂಬ ಶ್ಲೋಕಾರ್ಧದಲ್ಲಿ

ಗೌಣಭಕ್ತಿಯು ಜ್ಞಾನಕ್ಕೆ ಸಾಧನವೆಂದೂ ಹೇಳಿರುತ್ತದೆ. ಆದರೆ ಅಕ್ಷರೋಪಾಸಕ ರಾದ ಜ್ಞಾನಿಭಕ್ತರ ಲಕ್ಷಣವನ್ನು **'ಅದ್ವೇಷ್ಟಾ ಸರ್ವಭೂತಾನಾಮ್'** (ಗೀ. ೧೨-೧೩) ಮುಂತಾದ ಶ್ಲೋಕಗಳಲ್ಲಿ ಹೇಳಿದೆ ಎಂಬುದಕ್ಕೆ ಸಂಶಯವಿಲ್ಲ. ಏಕೆಂದರೆ ಸ್ಥಿತಪ್ರಜ್ಞ, ಗುಣಾತೀತ- ಎಂಬ ಹೆಸರುಗಳಿಂದ ವರ್ಣಿಸಿರುವ ಕೃತ ಕೃತ್ಯನ ಲಕ್ಷಣಗಳಿಗೂ ಅವಕ್ಕೂ ಯಾವ ವೈಲಕ್ಷಣ್ಯವೂ ತೋರುತ್ತಿಲ್ಲ.

**'यस्य देवे परा भक्तिः'** (ಶ್ವೇ.) ಎಂದು ಶ್ರುತಿಯಲ್ಲಿ ಹೇಳಿರುವದು 'ಪರಭಕ್ತಿ' ಎಂದೇ ಸ್ಫುಟವಾಗಿದ್ದರೂ ವಾಕ್ಯಕ್ಕೆ ಗೌಣಭಕ್ತಿಯಲ್ಲಿಯೇ ತಾತ್ಪರ್ಯವಿದೆ ಎಂದು ನಿರ್ಣಯಿಸುವದಕ್ಕೆ ಕಾರಣವಿರುವದಿಲ್ಲ. ಪರಭಕ್ತನಲ್ಲದವನಿಗೆ ಪರಮಾರ್ಥವು ತಿಳಿಯುವದಿಲ್ಲವೆಂತಲೂ ಆದ್ದರಿಂದಲೇ ಪರಭಕ್ತನೇ ಜ್ಞಾನಿ, ಅವನೇ ಮಹಾತ್ಮನು -ಎಂತಲೂ ಆ ವಾಕ್ಯಕ್ಕೆ ಅರ್ಥವನ್ನು ಮಾಡುವದು ಯುಕ್ತವಾಗಿದೆ. ಆ ಶ್ರುತಿ ಯಲ್ಲಿ ಹೇಳಿರುವದು ಪರಭಕ್ತಿಯೇ ಎಂಬುದಕ್ಕೆ ಇನ್ನೊಂದು ಗಮಕವು ಆ ವಾಕ್ಯ ದಲ್ಲಿದೆ. ಏನೆಂದರೆ : ಹೇಗೆ ದೇವರಲ್ಲಿ ಭಕ್ತಿಯಿರುವದೋ ಹಾಗೆಯೇ ಗುರುವಿ ನಲ್ಲಿಯೂ ಪರಭಕ್ತಿಯು ಇರುವವನಿಗೇ ಉಪನಿಷದರ್ಥವು ಬೆಳಗಿತೋರುವದು- ಎಂದು ಆ ವಾಕ್ಯದಲ್ಲಿದೆ. ಭಕ್ತನೂ ಭಗವಂತನ ಆತ್ಮನೇ- **'ಜ್ಞಾನೀ ತ್ವಾತ್ಮೈವ ಮೇ ಮತಮ್'** ಎಂದೂ ಅವನೇ ಏಕಭಕ್ತನೆಂದೂ ಗೀತೆಯಲ್ಲಿ ಹೇಳಿಯೂ ಇದೆ. ಅದರಂತೆ ಈ ಶಾಸ್ತ್ರದಲ್ಲಿಯೂ **'ತಸ್ಮಿಂಸ್ತಜ್ಜನೇ ಭೇದಾಭಾವಾತ್'** (ಸೂ. ೪೧) ಎಂದು ಹೇಳಿರುತ್ತದೆ. ಆದ್ದರಿಂದ ಪರಮಾತ್ಮನು ಅನುಭವೈಕ ಗಮ್ಯನು ಎಂದು ಹೇಳುವಾಗ ಅನುಭವಸ್ವರೂಪನಾದ ಪರಮಾತ್ಮನು ತಾನೇ ತನಗೆ ಮತ್ತೊಂದರ ಅಪೇಕ್ಷೆಯಿಲ್ಲದೆ ಬೆಳಗಿತೋರುತ್ತಾನೆ ಎಂದು ಅರ್ಥವನ್ನು ಕಲ್ಪಿಸು ವಂತೆ ಇಲ್ಲಿಯೂ ಕಲ್ಪಿಸುವದು ಯುಕ್ತವಾಗಿರುತ್ತದೆ.

೬. ಉಪಾಸನೆ, ಉಪಾಸ್ಯ, ಉಪಾಸಕ- ಎಂಬ ವಿಂಗಡವು ಹೇಗೆ ದ್ವೈತವ್ಯವಹಾರಕ್ಕೇ ಸೇರಿದ್ದೋ, ಹಾಗೆಯೇ ಭಕ್ತಿ, ಭಗವಂತ, ಭಕ್ತ- ಎಂಬ ವ್ಯವಹಾರವೂ ದ್ವೈತಭೂಮಿಕೆಯಲ್ಲಿಯೇ ಇರುವದಕ್ಕೆ ತಕ್ಕದ್ದಲ್ಲವೆ ?- ಎಂದು ಕೆಲವರು ಆಕ್ಷೇಪಿಸುತ್ತಾರೆ.

ಇದು ಸರಿಯಲ್ಲ. ಏಕೆಂದರೆ ಬ್ರಹ್ಮವು ಅದ್ವಿತೀಯವೇ ಆಗಿದ್ದರೂ ವ್ಯವ ಹಾರದೃಷ್ಟಿಯಿಂದ ಜಿಜ್ಞಾಸು, ಜಿಜ್ಞಾಸ್ಯ, ಜಿಜ್ಞಾಸಾ-ಎಂಬ ಭೇದವನ್ನು ಕಲ್ಪಿಸು ವದೇ ಅಲ್ಲದೆ ಜ್ಞಾನಿ, ಜ್ಞೇಯವಾದ ಬ್ರಹ್ಮ- ಎಂದೂ ಉಪಚಾರಕ್ಕೆ ಕಲ್ಪಿಸಿ ವ್ಯವಹಾರಮಾಡುವಂತೆ ಇಲ್ಲಿಯೂ ಗೌಣಭಕ್ತಿ, ಪರಭಕ್ತಿ- ಎಂಬ ಭೇದವನ್ನು ಕಲ್ಪಿಸಿಕೊಂಡು ವ್ಯವಹಾರಮಾಡುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಪ್ರೇಮ ವೆಂಬುದು ದ್ವೈತವನ್ನು ಬಯಸುವ ಶಬ್ದವೆಂಬುದು ನಿಜವಾದರೂ ದ್ವೈತವೆಲ್ಲವೂ ಬಾಧಿತವಾದ ಜ್ಞಾನದ ದೆಶೆಯಲ್ಲಿ ಜ್ಞಾನಿ, ಜ್ಞಾತವಾದ ಬ್ರಹ್ಮ- ಎಂದು ವ್ಯವ

ಹರಿಸುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಇದಲ್ಲದೆ ಭಗವಂತನು ಕಲ್ಪಿತವಾದ ದ್ವೈತವನ್ನು ಅನುಸರಿಸಿಯೇ ತನ್ನ ಅವತಾರಗಳಲ್ಲಿ ವ್ಯವಹರಿಸಿರುತ್ತಾನೆ. ಪರಶುರಾಮ, ದಶರಥರಾಮ- ಎಂಬ ಎರಡು ರೂಪಗಳಿಂದ ಭಗವಂತನ ವ್ಯವಹಾರವಾಗಿರುವದೂ, ಶಿವವಿಷ್ಣು- ಎಂಬ ರೂಪಗಳಿಂದ ವ್ಯವಹಾರವಾಗಿರುವದೂ ಸುಪ್ರಸಿದ್ಧವಾಗಿರುತ್ತದೆ. ಇದರಂತೆ ಭಗವಂತನು ಪರಮಾರ್ಥದೃಷ್ಟಿಯಿಂದ ವಾಸುದೇವ ಪರಬ್ರಹ್ಮವೇ ಆಗಿದ್ದರೂ 'ನಾನು, ನೀನು, ಈ ರಾಜರು' ಎಂದುಮುಂತಾಗಿ ದ್ವೈತವ್ಯವಹಾರವನ್ನು ಮಾಡಿದಮಾತ್ರದಿಂದ ಅದ್ವೈತಸಿದ್ಧಾಂತಕ್ಕೆ ಯಾವ ಹಾನಿಯೂ ಇರುವದಿಲ್ಲ. ಪರಜ್ಞಾನರೂಪವಾದ ಅವಗತಿಯನ್ನು ಜಿಜ್ಞಾಸ್ಯವೆಂದು ಉಪದೇಶಕ್ಕಾಗಿ ಕಲ್ಪಿಸುವಂತೆಯೇ ಪರಭಕ್ತಿಯನ್ನು ಭಗವಂತನಲ್ಲಿರುವ ಪರಮಪ್ರೇಮವೆಂದು ಉಪದೇಶಕ್ಕೆ ಕಲ್ಪಿಸಿ ಹೇಳುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

೫. ಶ್ರುತಿಯು ಹೀಗೆಂದು ಹೇಳುತ್ತಿದೆ:

**यन्मनसा न मनुते येनाहुर्मनो मतम् ।**

**तदेव ब्रह्म त्वं विद्धि नेदं यदिदमुपासते ॥** ಕೇ. ೧-೬

"ಯಾವದನ್ನು ಮನಸ್ಸಿನಿಂದ ಅರಿಯುವದಕ್ಕಾಗುವದಿಲ್ಲವೋ ಯಾವದರಿಂದಲೇ ಮನಸ್ಸು ಅರಿಯಲ್ಪಡುತ್ತಿರುವದೆಂದು ಬಲ್ಲವರು ಹೇಳುತ್ತಿರುವರೋ ಅದನ್ನೇ ಬ್ರಹ್ಮವೆಂದು ಅರಿ; ಇದು ಎಂದು ಉಪಾಸನೆಮಾಡುತ್ತಿರುವರಲ್ಲ, ಇದು ಬ್ರಹ್ಮವಲ್ಲ." ಈ ಶ್ರುತಿವಾಕ್ಯದಲ್ಲಿ ಬ್ರಹ್ಮವನ್ನು ಮನಸ್ಸಿನಿಂದ ಅರಿಯುವದು ಆಗಲಾರದು- ಎಂದು ಸ್ಪಷ್ಟವಾಗಿ ಹೇಳಿ, ಉಪಾಸನೆಗೂ ಬ್ರಹ್ಮವು ವಿಷಯವಲ್ಲ ಎಂದಿದೆ. ಇನ್ನೊಂದು ಮಂತ್ರದಲ್ಲಿ '**अन्यदेव तद्विदितादथो अविदितादधि**' (ಕೇ. ೧-೪) ಬ್ರಹ್ಮವು ಜ್ಞಾತ, ಅಜ್ಞಾತ-ಎರಡಕ್ಕಿಂತಲೂ ಭಿನ್ನವಾಗಿರುತ್ತದೆ ಎಂದು ಸ್ಪಷ್ಟವಾಗಿ ಹೇಳಿರುತ್ತದೆ. ಹೀಗಿರುವದರಿಂದ ಭಕ್ತಿಯು ಉಪಾಸನಾರೂಪವಾಗಿರಲಿ, ಜ್ಞಾನರೂಪವೇ ಆಗಿರಲಿ- ಹೇಗೂ ಭಕ್ತಿಗೆ ಆತ್ಮನು ನಿಲುಕುವಂತೆಯೇ ಆಯಿತಲ್ಲವೆ? - ಎಂಬುದು ಕೆಲವರ ಆಕ್ಷೇಪ.

ಈ ಆಕ್ಷೇಪದಲ್ಲಿ ಒಂದು ಅರ್ಧಸತ್ಯವಿದೆ: ಅದೇನೆಂದರೆ, ಯಾವ ವಸ್ತುವಿನ ಅನುಭವವು ನಮಗೆ ಬರಬೇಕಾದರೂ ಅದರ ಆಕಾರವಾಗಿರುವ ಮನಸ್ಸಿನ ವೃತ್ತಿಯು ಅವಶ್ಯವಾಗುತ್ತದೆ. ಆದರೆ ಆತ್ಮನು ನಿರಾಕಾರನಾಗಿರುವದರಿಂದ ಅವನ ಆಕಾರವು ಯಾವ ವೃತ್ತಿಯನ್ನಾದರೂ ತಳೆಯುವದೆಂಬುದು ಅಸಾಧ್ಯ. ಆದ್ದರಿಂದ ಉಪಾಸನೆಯುಲ್ಲಾಗಲಿ, ವಿಚಾರಪೂರ್ವಕಜ್ಞಾನದಲ್ಲಾಗಲಿ ಆತ್ಮನ ಆಕಾರವಾಗಿ ವೃತ್ತಿಯು ಎಂದಿಗೂ ಆಗಲಾರದು. ಆತ್ಮನನ್ನು ಅರಿಯುವ ಮನೋವೃತ್ತಿಯು ನಿಜವಾಗಿರುವದೇ ಇಲ್ಲವೆಂಬುದು ಈ ಕಾರಣದಿಂದ ನಿಜವಾದರೂ ಪರಿಶುದ್ಧಾಂತಃಕರಣರಾದ ಮಹನೀಯರು ನೇರಾಗಿ ಮನಸ್ಸನ್ನು ಯಾವ ಆತ್ಮನ ಅನುಭವರೂಪವಾದ ಬೆಳಕಿನಿಂದ ಅರಿಯಬಲ್ಲರೋ ಆ ಆತ್ಮನು ಸ್ವಯಂಪ್ರಕಾಶನೇ ಆಗಿರುತ್ತಾನೆಂಬುದನ್ನು

ಅವರು ಅನುಭವದಲ್ಲಿಯೇ ಕಂಡುಕೊಳ್ಳುವರು. ಇದು ಸಾಂಖ್ಯಮಾರ್ಗವೆಂದು ಭಗವದ್ಗೀತೆಯಲ್ಲಿ ವರ್ಣಿಸಿದೆ. ಇನ್ನು ಧ್ಯಾನಯೋಗ(ಅಥವಾ ಅಧ್ಯಾತ್ಮಯೋಗ)ದ ಮಾರ್ಗದಿಂದ ಆತ್ಮನನ್ನು ಅರಿಯುವದಕ್ಕೆ ಪ್ರಯತ್ನಿಸುವವರು ಇಂದ್ರಿಯಗಳನ್ನು ಕೈಬಿಟ್ಟು ಮನಸ್ಸನ್ನು ಸೂಕ್ಷ್ಮಗೊಳಿಸಿಕೊಳ್ಳುತ್ತಾ ಆತ್ಮನಲ್ಲಿಯೇ ಅದನ್ನು ನಿಲ್ಲಿಸಿಕೊಳ್ಳುವದಕ್ಕೆ ಪ್ರಯತ್ನಿಸುವಾಗ, ಅದು ಆತ್ಮನಲ್ಲಿಯೇ ಪ್ರಶಾಂತವಾಗಿ ಆತ್ಮರೂಪನಾಗಿ ಹೋಗುವದು. ಆಗ ನಿತ್ಯಾನುಭವರೂಪನಾಗಿರುವ ಆತ್ಮನು ತನ್ನ ಚೈತನ್ಯ ಪ್ರಕಾಶದಿಂದ ತಾನೇ ಬೆಳಗುತ್ತಾನೆ.

**ಪ್ರಶಾನ್ತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಮ್ ।**
**ಉಪೈತಿ ಶಾನ್ತರಜಸಂ ಬ್ರಹ್ಮಭೂತಮಕಲ್ಮಷಮ್ ॥** ಗೀ. ೬-೨೭

ಎಂಬ ಗೀತಾಶ್ಲೋಕದಲ್ಲಿ ಹೀಗೆ ಆತ್ಮನಲ್ಲಿಯೇ ಬೆರೆತುಹೋಗಿರುವ ಮನಸ್ಸಿನವನು ಬ್ರಹ್ಮಸ್ವರೂಪನೇ ಆಗಿ ನಿಷ್ಕಲ್ಮಷನಾಗಿ ತನ್ನ ನಿತ್ಯಾನಂದಸ್ವರೂಪವನ್ನು ಹೊಂದುವನೆಂದು ವರ್ಣಿಸಿರುತ್ತದೆ. ಆದ್ದರಿಂದ ಮನೋವೃತ್ತಿಗೆ ವಿಷಯನಲ್ಲದಿದ್ದರೂ ಪರಮಾತ್ಮನನ್ನು ಸಾಂಖ್ಯಮಾರ್ಗದಿಂದಲಾಗಲಿ ಯೋಗಮಾರ್ಗದಿಂದಲಾಗಲಿ ಕಾಣಲು ಸಾಧ್ಯವಿದೆ ಎಂಬುದು ಸಿದ್ಧಾಂತ. ಹೀಗೆ ಪರಭಕ್ತರಿಗೆ ನಿರಾಕಾರ ರೂಪನಾದ ಭಗವಂತನು ಅನುಭವಸ್ವರೂಪದಿಂದಲೇ ಅವರ ಆತ್ಮನಾಗಿ ತೋರಿಕೊಳ್ಳುವದರಲ್ಲಿ ಯಾವ ಅಡ್ಡಿಯೂ ಇರುವದಿಲ್ಲ. ಪ್ರಹ್ಲಾದಾದಿಭಕ್ತಾಗ್ರೇಸರರ ಕಷ್ಟಗಳನ್ನು ಪರಿಹರಿಸುವದಕ್ಕೆಂದು ತನ್ನ ಐಶ್ವರ್ಯಯೋಗದಿಂದ ನರಸಿಂಹಾದ್ಯಾಕಾರಗಳಿಂದಲೂ ಆತನು ಪ್ರತ್ಯಕ್ಷನಾಗಿರುತ್ತಾನೆಂಬುದು ಪುರಾಣಗಳಲ್ಲಿ ಪ್ರಸಿದ್ಧವಾಗಿರುತ್ತದೆ. ಹೀಗಿರುವದರಿಂದ ಆತ್ಮನು ಭಕ್ತಿಗಮ್ಯನೆಂಬ ಸಿದ್ಧಾಂತಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

೬. ಶಂಕರಾಚಾರ್ಯರವರ ಅನುಯಾಯಿಗಳು ಭಕ್ತಿಯನ್ನು ಸಾಧನವಾಗಿಯೇ ಒಪ್ಪಬೇಕು. ಏಕೆಂದರೆ ಆ **ಆಚಾರ್ಯರಿಗೆ ಜ್ಞಾನವೂ ಭಕ್ತಿಯೂ ಒಂದೇ ಎಂಬುದು ಸಮ್ಮತವಲ್ಲ**-ಎಂದು ಕೆಲವರು ಕಲ್ಪಿಸಿರುತ್ತಾರೆ. ಭಕ್ತಿಯು ಸಾಧನವು, ಜ್ಞಾನವು ಫಲ- ಎಂಬುದು ಅವರ ಆಶಯ.

ಈ ಕಲ್ಪನೆಗೆ ಯಾವ ಆಧಾರವೂ ಇಲ್ಲ. ಭಕ್ತಿಯು ಸಾಧನವೆಂಬುದನ್ನು ಆಚಾರ್ಯರು ಮತ್ತೆಮತ್ತೆ ಹೇಳಿರುತ್ತಾರೆ; ಈ ವಾದಿಗಳೂ ಒಪ್ಪಿರುತ್ತಾರಾದ್ದರಿಂದ ಆ ವಿಷಯದಲ್ಲಿ ಆಚಾರ್ಯರ ವಚನಗಳನ್ನು ಉದಾಹರಿಸುವದು ಇಲ್ಲಿ ಅಪ್ರಕೃತ. **ಪರಿಪಕ್ವವಾದ ಜ್ಞಾನವೂ ಭಕ್ತಿಯೂ ಒಂದೇ** ಎಂಬುದಕ್ಕೆ ಆಚಾರ್ಯರವರ ಒಂದು ವಾಕ್ಯವನ್ನು ಮಾತ್ರ ಇಲ್ಲಿ ಉದಾಹರಿಸಿದರೆ ಸಾಕಾಗಿರುತ್ತದೆ :

**"ಶಾಸ್ತ್ರಾಚಾರ್ಯೋಪದೇಶೇನ ಜ್ಞಾನೋತ್ಪತ್ತಿಪರಿಪಾಕಹೇತುಂ ಸಹಕಾರಿಕಾರಣಂ ಬುದ್ಧಿವಿಶುದ್ಧ್ಯಾದಿ, ಅಮಾನಿತ್ವಾದಿ ಚಾಪೇಕ್ಷ್ಯ**

ಜನಿತಸ್ಯ ಕ್ಷೇತ್ರಜ್ಞಪರಮಾತ್ಮೈಕತ್ವಜ್ಞಾನಸ್ಯ ಕರ್ತ್ರಾದಿಕಾರಕಭೇದಬುದ್ಧಿನಿಬನ್ಧನಸರ್ವಕರ್ಮಸಂನ್ಯಾಸಸಹಿತಸ್ಯ ಸ್ವಾತ್ಮಾನುಭವನಿಶ್ಚಯರೂಪೇಣ ಯದವಸ್ಥಾನಂ ಸಾ ಪರಾ ಜ್ಞಾನನಿಷ್ಠಾ ಇತ್ಯುಚ್ಯತೇ। ಸೇಯಂ ಜ್ಞಾನನಿಷ್ಠಾ ಆರ್ತಾದಿಭಕ್ತಿತ್ರಯಾಪೇಕ್ಷ-ಯಾ ಪರಾ ಚತುರ್ಥೀ ಭಕ್ತಿರಿತ್ಯುಕ್ತಾ। ತಯಾ ಪರಯಾ ಭಕ್ತ್ಯಾ ಭಗವನ್ತಂ ತತ್ತ್ವತೋಽಭಿಜಾನಾತಿ। ಯದನನ್ತರಮೇವ ಈಶ್ವರ ಕ್ಷೇತ್ರಜ್ಞಬುದ್ಧಿರಶೇಷತೋ ನಿವರ್ತತೇ। ಅತೋ ಜ್ಞಾನನಿಷ್ಠಾ-ಲಕ್ಷಣಯಾ ಭಕ್ತ್ಯಾ ಮಾಮ್ ಅಭಿಜಾನಾತಿ – ಇತಿ ವಚನಂ ನ ವಿರುಧ್ಯತೇ॥" ಗೀ. ಭಾ. ೧೮–೫೫, ಪುಟ ೨೮೪.

ಈ ಭಾಷ್ಯಭಾಗದಲ್ಲಿ ಆಚಾರ್ಯರ ಅಭಿಪ್ರಾಯವು ಸುಸ್ಪಷ್ಟವಾಗಿರುತ್ತದೆ. ಇಲ್ಲಿ ಹೇಳಿರುವದೇನೆಂದರೆ: 'ಶಾಸ್ತ್ರದ ಮತ್ತು ಆಚಾರ್ಯರ ಉಪದೇಶದಿಂದ ಜ್ಞಾನೋತ್ಪತ್ತಿಯಾಗಿ ಪರಿಪಕ್ವವಾಗುವದಕ್ಕೆ ಕಾರಣವಾಗಿರುವ ಬುದ್ಧಿವಿಶುದ್ಧಿಯೇ ಮುಂತಾಗಿ ಈ ಅಧ್ಯಾಯದಲ್ಲಿ ಹೇಳಿರುವ, ಮತ್ತು ಹದಿಮೂರನೆಯ ಅಧ್ಯಾಯದಲ್ಲಿ ಹೇಳಿರುವ ಅಮಾನಿತ್ವವೇ ಮುಂತಾದವುಗಳಿಂದ ಹುಟ್ಟಿರುವ, ಕ್ಷೇತ್ರಜ್ಞೇಶ್ವರೈಕತ್ವ ಜ್ಞಾನವು ಕರ್ತೃವೇ ಮುಂತಾದ ಕಾರಕಗಳು ಬೇರೆಬೇರೆ ಎಂಬ ಬುದ್ಧಿಯಿಂದ ಮಾಡಬೇಕಾಗಿರುವ ಸರ್ವಕರ್ಮಗಳ ಸಂನ್ಯಾಸದಿಂದೊಡಗೂಡಿದರೆ ತನ್ನ ಅನುಭವ ರೂಪದಲ್ಲಿ ಕೊನೆಗಾಣುವದಿದೆಯಲ್ಲ, ಅದೇ ಜ್ಞಾನದ ಪರನಿಷ್ಠೆಯೆನಿಸುವದು; ಅಂಥ ಈ ಜ್ಞಾನನಿಷ್ಠೆಯೇ ಆರ್ತಾದಿಮೂರುಭಕ್ತಿಗಳಿಗೆ ಹೋಲಿಸಿದರೆ ನಾಲ್ಕನೆಯದಾದ ಪರಭಕ್ತಿಯೆನಿಸುತ್ತದೆ– ಎಂದು ಹಿಂದೆ (ಗೀ. ೭–೧೭ರಲ್ಲಿ) ಹೇಳಲಾಗಿದೆ. ಆ ಪರಭಕ್ತಿಯಿಂದ ಭಗವಂತನನ್ನು ಸ್ವಲ್ಪವೂ ಉಳಿಯದಂತೆ ಸಂಪೂರ್ಣವಾಗಿ ಗುರುತಿಸಿಕೊಳ್ಳುತ್ತಾನೆ. ಆ ಅಭಿಜ್ಞಾನವು ಉಂಟಾದಕೂಡಲೆ ಈಶ್ವರನೂ ಕ್ಷೇತ್ರಜ್ಞನೂ ಬೇರೆಬೇರೆ ಎಂಬ ಅಜ್ಞಾನವು ಸ್ವಲ್ಪವೂ ಉಳಿಯದೆ ತೊಲಗುತ್ತದೆ. ಆದ್ದರಿಂದ ಈ ಜ್ಞಾನಲಕ್ಷಣವಾದ ಭಕ್ತಿಯಿಂದ ನನ್ನನ್ನು ಗುರುತಿಸುತ್ತಾನೆಂದು ಹೇಳಿದ್ದು ವಿರುದ್ಧವಲ್ಲ.'

ಈ ವಚನದ ಅರ್ಥವನ್ನು ಆಳವಾಗಿ ಒಳಹೊಕ್ಕು ಮನಗಂಡವರಿಗೆ ಪರಜ್ಞಾನವೂ ಪರಭಕ್ತಿಯೂ ಒಂದೇ ಎಂಬ ವಿಷಯಕ್ಕೆ ಯಾವ ಸಂಶಯವೂ ಉಳಿಯುವದಿಲ್ಲ. ಜ್ಞಾನನಿಷ್ಠೆಯೂ ಪರಮಪ್ರೇಮರೂಪವಾದ ಅನುಭವವೂ ಒಂದೇ ಎಂಬುವನ್ನು ಈ ನಾರದಭಕ್ತಿಸೂತ್ರಗಳ ವಿವರಣೆಯಲ್ಲಿ ನಾವು ವಿಶದಗೊಳಿಸಿರುವದಕ್ಕೆ ಹೋಲಿಸಿದರೆ ಪರಜ್ಞಾನ ಪರಭಕ್ತಿಗಳು ಒಂದೇ ಎಂಬುದು ಗೀತಾಚಾರ್ಯನಾದ ಶ್ರೀಕೃಷ್ಣ, ಭಾಷ್ಯಕಾರರಾದ ಶಂಕರಾಚಾರ್ಯರು– ಈ ಇಬ್ಬರ ವಚನಕ್ಕೆ ಹೊಂದುಗೆ

ಯಾಗಿಯೇ ಇದೆ; ಅನುಭವಾನುಸಾರಿಯಾಗಿಯೂ ಇದೆ- ಎಂಬುದು ನಿಸ್ಸಂಶಯವಾಗಿ ಮನದಟ್ಟಾಗುವದು.

೭. ಜ್ಞಾನಶಾಸ್ತ್ರವೂ ಭಕ್ತಿಶಾಸ್ತ್ರವೂ ಪರಸ್ಪರವಿರುದ್ಧವಾಗಿರುತ್ತವೆ. ಏಕೆಂದರೆ ವೇದಾಂತೋಕ್ತವಾದ ಜ್ಞಾನದಲ್ಲಿ ವೈದಿಕಕರ್ಮಗಳ ಅನುಷ್ಠಾನವನ್ನು ಮಾಡಿರುವ ದ್ವಿಜನಿಗೇ ಅಧಿಕಾರವಿರುವದೇ ಹೊರತು ಶೂದ್ರಾದಿಗಳಿಗಿಲ್ಲ - ಎಂದು ಬ್ರಹ್ಮಸೂತ್ರದ ಅಪಶೂದ್ರಾಧಿಕರಣದಲ್ಲಿ (೧-೩-೩೪) ಸ್ಪಷ್ಟವಾಗಿ ಹೇಳಿರುತ್ತದೆ. ಭಕ್ತಿಶಾಸ್ತ್ರದಲ್ಲಿಯೊ, ಜಾತ್ಯಾದಿಗಳ ನಿರ್ಬಂಧವಿಲ್ಲದೆ ಸರ್ವರಿಗೂ ಭಕ್ತಿಗೆ ಅಧಿಕಾರವಿದೆಯೆಂದು ಸುಸ್ಪಷ್ಟವಾಗಿ ಹೇಳಿರುತ್ತದೆ. ಆದ್ದರಿಂದ ಜ್ಞಾನ ಭಕ್ತಿಗಳ ಐಕ್ಯವನ್ನು ಮಂಡಿಸುವ ವಾದವು ಯುಕ್ತವಲ್ಲ- ಎಂದು ಕೆಲವರ ಆಕ್ಷೇಪ.

ಇದೂ ಸರಿಯಲ್ಲ. ಏಕೆಂದರೆ ಯಾವ ಆಶ್ರಮಧರ್ಮವೂ ಇಲ್ಲದಿದ್ದರೂ ರೈಕ್ವ, ವಾಚಕ್ನವಿ- ಮುಂತಾದವರು ಬ್ರಹ್ಮಜ್ಞಾನಿಗಳಾಗಿದ್ದರೆಂದು ಶ್ರುತಿಯಲ್ಲಿದೆ. ಆದ್ದರಿಂದ ಆಶ್ರಮಧರ್ಮವಿಲ್ಲದ ವಿಧುರನೇ ಮುಂತಾದವರಿಗೆ ಜಪ, ಉಪವಾಸ ದೇವತಾರಾಧನೆ- ಮುಂತಾದ ಕರ್ಮಗಳ ಮೂಲಕ ಜ್ಞಾನಕ್ಕೆ ಬೇಕಾದ ಸಾಧನವು ದೊರಕಬಹುದು. 'ಜಪ್ಯೇನೈವ ತು ಸಂಸಿಧ್ಯೇದ್ ಬ್ರಾಹ್ಮಣೋ ನಾತ್ರ ಸಂಶಯಃ । ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ॥' (ಮನು. ೨-೮೭) ಎಂದು ಸ್ಮೃತಿಯಲ್ಲಿ ಆಶ್ರಮಕರ್ಮಕ್ಕೆ ಅಧಿಕಾರ ವಿಲ್ಲದವರಿಗೂ ಜಪದಲ್ಲಿ ಅಧಿಕಾರವೂ ಜ್ಞಾನಕ್ಕೆ ಯೋಗ್ಯತೆಯೂ ಬರಬಹುದೆಂದು ಹೇಳಿರುತ್ತದೆ. ಇದೂ ಅಲ್ಲದೆ ಜ್ಞಾನಕ್ಕೆ ಬೇಕಾದ ಚಿತ್ತಶುದ್ಧಿಯೇ ಮುಂತಾದ ಯೋಗ್ಯತೆಯು ಜನ್ಮಾಂತರದ ಸಂಸ್ಕಾರದಿಂದಲೂ ಉಂಟಾಗಬಹು ದಾಗಿದೆ. ಇದಕ್ಕೆ 'ಅನೇಕಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್' (ಗೀ. ೬-೪೫) ಎಂಬ ಗೀತೋಕ್ತಿಯೇ ಪ್ರಮಾಣ. ವಿದುರ, ಧರ್ಮವ್ಯಾಧ- ಮುಂತಾದವರಿಗೆ ಪೂರ್ವಜನ್ಮದ ಸಂಸ್ಕಾರದಿಂದ ಜ್ಞಾನವುಂಟಾದದ್ದಕ್ಕೆ ಭಾರತಾದಿ ಗಳಲ್ಲಿ ದೃಷ್ಟಾಂತವೂ ಇರುತ್ತದೆ. 'ಶ್ರಾವಯೇಚ್ಚತುರೋ ವರ್ಣಾನ್ ಕೃತ್ವಾ ಬ್ರಾಹ್ಮಣಮಗ್ರತಃ' (ಮೋ.ಧ. ೩೨೭-೪೯) ಎಂದು ಇತಿಹಾಸಪುರಾಣ ಗಳ ಶ್ರವಣದಿಂದಲೇ ಜ್ಞಾನವುಂಟಾಗುವದೆಂದು ಭಾರತದಲ್ಲಿ ಸೂಚಿಸಿಯೂ ಇರುತ್ತದೆ. ವೇದಪೂರ್ವಕವಾದ ಕರ್ಮದಲ್ಲಿಯೂ ಶ್ರವಣಾದಿಗಳಲ್ಲಿಯೂ ಅಧಿಕಾರವಿಲ್ಲದಿದ್ದಮಾತ್ರದಿಂದ ದ್ವಿಜರಲ್ಲದವರಿಗೆ ಭಕ್ತಿಯ ದ್ವಾರದಿಂದ ಜ್ಞಾನವೇ ಉಂಟಾಗುವದಿಲ್ಲ- ಎಂದು ಹೇಳುವದಕ್ಕೆ ಯಾವ ಆಧಾರವೂ ಇರುವದಿಲ್ಲ.

ಆದ್ದರಿಂದ ಜ್ಞಾನದಂತೆಯೇ ಭಕ್ತಿಯನ್ನು ಸಂಪಾದಿಸಲು ವೇದಮೂಲಕವಾಗಿ ಅನುಷ್ಠಿಸಬೇಕಾಗಿರುವ ವರ್ಣಾಶ್ರಮಧರ್ಮವೇ ಮುಂತಾದವುಗಳಿಂದ ಚಿತ್ತಶುದ್ಧಿ ಯನ್ನು ಪಡೆದುಕೊಳ್ಳುವದು ಯುಕ್ತ. ಅದಕ್ಕೆ ಅಧಿಕಾರವಿಲ್ಲದವರು ಭಗವನ್ನಾಮ

ಸ್ಮರಣೆಯೇ ಮುಂತಾದ ಉಪಾಯಗಳಿಂದ ಚಿತ್ತಶುದ್ಧಿಯನ್ನು ಹೊಂದಿ ಭಕ್ತಿಯನ್ನು ಸಂಪಾದಿಸಿಕೊಳ್ಳಬೇಕು. **'ಕೌನ್ತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ'** (ಗೀ. ೯-೩೦) ಎಂಬ ಭಗವದ್ವಚನದಂತೆ **ಎಂಥ ಪಾಪಿಷ್ಠನಾಗಿದ್ದರೂ ಭಗವಂತನನ್ನು 'ನೀನೇ ಗತಿ' ಎಂದು ಶರಣುಹೊಕ್ಕರೆ ಅಷ್ಟುಮಾತ್ರದಿಂದಲೇ ಧರ್ಮಾತ್ಮನಾಗಿ, ಪರಮಪುರುಷಾರ್ಥವನ್ನು ಪಡೆಯಬಹುದು** ಎಂಬುದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

೮. ನಾಮಜಪವೇ ಮುಂತಾದ ಸಾಧನಗಳು ಬಹಳ ಸುಲಭ; ಆದರೆ ಶಾಸ್ತ್ರೋಕ್ತಕರ್ಮಗಳ ಅನುಷ್ಠಾನವೂ ವೇದಾಂತಶ್ರವಣಾದಿಗಳೂ ಬಹಳ ಕಷ್ಟಸಾಧ್ಯ. ನಾಮಜಪಾದಿಗಳಿಂದಲೇ ಪರಮಪುರುಷಾರ್ಥವು ದೊರಕುವದೆಂದರೆ ವೇದೋಕ್ತಕರ್ಮಗಳಲ್ಲಿ ಯಾರುತಾನೆ ಮನಸ್ಸುಹಾಕಿಯಾರು? **'ಅರ್ಕೇ ಚೇನ್ಮಧು ವಿನ್ದೇತ ಕಿಮರ್ಥಂ ಪರ್ವತಂ ವ್ರಜೇತ್'** (ಎಕ್ಕದಗಿಡದಲ್ಲಿ ಜೇನುತುಪ್ಪವು ಸಿಕ್ಕುವಂತಿದ್ದರೆ ಏಕೆತಾನೆ ಪರ್ವತದಮೇಲಕ್ಕೆ ಹೋದಾರು?) ಎಂಬ ನ್ಯಾಯದಿಂದ ಆಯಾಸಸಾಧ್ಯವಾದ ಕರ್ಮಗಳನ್ನು ಮಾಡುವದಕ್ಕಾಗಲಿ ವೇದಾಂತಶ್ರವಣಾದಿಗಳನ್ನು ಮಾಡುವದಕ್ಕಾಗಲಿ ಯಾರುತಾನೆ ಶ್ರಮಪಟ್ಟಾರು? ಹೀಗಿರುವದರಿಂದ ನಾಮಜಪವೇ ಮುಂತಾದವುಗಳನ್ನು ಹೊಗಳಿರುವ ವಾಕ್ಯಗಳಿಗೆ ಮರುಳಾಗಿ ಯಾರೋ ಭಕ್ತಿಮಾರ್ಗವನ್ನು ಹೇಳಿರಬೇಕು- ಎಂದು ಕೆಲವರು ಕಲ್ಪಿಸುತ್ತಾರೆ; ಇದು ಸರ್ವಥಾ ಸರಿಯಲ್ಲ. ಏಕೆಂದರೆ ಜಪಾದಿಗಳನ್ನು ಮಾಡುವದು ಸುಲಭವಾಗಿರಬಹುದಾದರೂ ಶ್ರದ್ಧೆಯಿಂದಲೂ ಏಕಾಗ್ರತೆಯಿಂದಲೂ ಭಗವಂತನಲ್ಲಿ ಮನಸ್ಸನ್ನು ನಿಲ್ಲಿಸಿ ಜಪಾದಿಸಾಧನಗಳನ್ನು ಮಾಡುವದೇನೂ ಸುಲಭವಲ್ಲ. ಮನಸ್ಸನ್ನು ಎತ್ತಲೋ ಇಟ್ಟು ಕರ್ಮಾದಿಗಳನ್ನು ಮಾಡುವದಕ್ಕಿಂತಲೂ ಉಪಾಸನೆಯೇ ಮುಂತಾದ ಭಾವನಾಪ್ರಧಾನವಾದ ಅನುಷ್ಠಾನಗಳನ್ನು ಮಾಡುವದು ಕಷ್ಟವೇ ಆಗಿರುತ್ತದೆ. ಆದ್ದರಿಂದಲೇ ವೇದದಲ್ಲಿ ಕಾಯಪ್ರಧಾನವಾದ ಕರ್ಮವನ್ನು ಹೇಳಿದಮೇಲೆ ಮಾನಸಕರ್ಮರೂಪವಾದ ಉಪಾಸನೆಯನ್ನು ಹೇಳಿರುತ್ತದೆ. ತಾಮಸರಾಜಸಭಕ್ತಿಗಳಿಗಿಂತ ಸಾತ್ತ್ವಿಕಭಕ್ತಿಯು ದೊರಕಬೇಕಾದರೆ ಹೆಚ್ಚು ಆಯಾಸವೇ ಬೇಕಾಗುತ್ತದೆ- ಎಂಬುದು ಯುಕ್ತಿಯುಕ್ತವೂ ಆಗಿದೆ.

ಆದ್ದರಿಂದ ಒಂದೇ ಮನಸ್ಸಿನಿಂದ ಪರಮಾತ್ಮನನ್ನು ಚಿಂತಿಸುತ್ತಾ ನಾಮಜಪಕೀರ್ತನಾದಿಗಳನ್ನು ಎಡೆಬಿಡದೆ ಮಾಡುವವನಿಗೆ ಶೀಘ್ರವಾಗಿ ಭಗವಂತನ ಅನುಗ್ರಹವಾಗುವದು; ಹಾಗಿಲ್ಲದಿದ್ದರೆ ಗೌಣಭಕ್ತಿಸಾಧಕನಿಗೆ ಜನ್ಮಾಂತರಗಳೂ ಬೇಕಾಗಬಹುದು. ಇಷ್ಟುಮಾತ್ರದಿಂದ ಭಕ್ತಿಮಾರ್ಗವನ್ನು ಅನಾದರಮಾಡುವದಕ್ಕೆ ಯಾವ ಕಾರಣವೂ ಇಲ್ಲ. ಭಗವದ್ಗೀತಾದಿಗಳಲ್ಲಿ ಶಾಸ್ತ್ರೋಕ್ತಕರ್ಮಗಳನ್ನು ಕೂಡ ಭಗವಂತನ ಅರ್ಚನೆಯಾಗಿ ಮಾಡುವದೇ ಚಿತ್ತಶುದ್ಧಿಗೆ ಕಾರಣವಾಗುವದೆಂದು ಹೇಳಿರುವದನ್ನು ಇಲ್ಲಿ ನೆನಪಿಟ್ಟರೆ ಭಕ್ತಿಯ ದ್ವಾರದಿಂದಲೇ ಕರ್ಮಕ್ಕೆ ಚಿತ್ತಶುದ್ಧ್ಯಾದಿಫಲಗಳು ಲಭಿಸಿ ಸಿದ್ಧಿಯುಂಟಾಗುವದೆಂದು ಮನದಟ್ಟಾಗುವದು.

೯. ಪರಮಾತ್ಮನು ನಿರ್ಗುಣನು, ನಿರಾಕಾರನು ; ಆದ್ದರಿಂದ ನಿರ್ಗುಣ ಭಕ್ತಿಯಲ್ಲಿಯೇ ಶಾಸ್ತ್ರಕ್ಕೆ ತಾತ್ಪರ್ಯವಿದೆ–ಎಂಬುದು ಕೆಲವರ ಮತವು. ಆದ್ದರಿಂದ ಸಗುಣಭಕ್ತಿಯು ಶಾಸ್ತ್ರೀಯವಲ್ಲವೆಂದು ಅವರ ಅಭಿಪ್ರಾಯ.

ಇದಂತೂ ಸರ್ವಥಾ ಸರಿಯಲ್ಲ. ಏಕೆಂದರೆ ಶಾಸ್ತ್ರದಲ್ಲಿ ಉಪಾಸನೆಯನ್ನು ಹೇಳಿರುವದು ಸಗುಣಬ್ರಹ್ಮದ ವಿಷಯವೇ ಆಗಿರುತ್ತದೆ. ಪರಮಾತ್ಮನು ಜಗತ್ಕಾರಣನಾಗಿರುವದರಿಂದ ನಾಮರೂಪಗಳಿಂದೊಡಗೂಡಿದವನಾಗಿಯೂ ಅವನನ್ನು ಉಪಾಸನೆಮಾಡಬಹುದು ಎಂಬುದೇ– ಶಾಸ್ತ್ರದ ಅಭಿಪ್ರಾಯ. ಹೀಗಿಲ್ಲದಿದ್ದರೆ ವೇದದ ಉಪಾಸನಾಭಾಗವೆಲ್ಲವೂ ವ್ಯರ್ಥವೇ ಆಗಿಬಿಟ್ಟಿರುತ್ತಿತ್ತು.

ಪರಮಾತ್ಮನು ವಸ್ತುತಃ ನಿರ್ಗುಣನು, ನಿರಾಕಾರನು– ಎಂಬುದೂ ಯಥಾರ್ಥವೇ ಆಗಿದ್ದರೂ ಎಲ್ಲರಿಗೂ ನಿರ್ಗುಣನಿರಾಕಾರದ ಜ್ಞಾನಧ್ಯಾನಗಳಲ್ಲಿ ಅಧಿಕಾರವಿರುವದಿಲ್ಲ.

**ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ ।**
**ಸರ್ವತ್ರಗಮಚಿನ್ತ್ಯಂ ಚ ಕೂಟಸ್ಥಮಚಲಂ ಧ್ರುವಮ್ ॥**
**ಸಂನಿಯಮ್ಯೇನ್ದ್ರಿಯಗ್ರಾಮಂ ಸರ್ವತ್ರ ಸಮಬುದ್ಧಯಃ ।**
**ತೇ ಪ್ರಾಪ್ನುವನ್ತಿ ಮಾಮೇವ ಸರ್ವಭೂತಹಿತೇ ರತಾಃ ॥** ಗೀ. ೧೨-೩.೪

ಎಂದು ನಿರ್ವಿಶೇಷರೂಪದಿಂದ ತನ್ನನ್ನು ಧ್ಯಾನಿಸುವವರಿಗೆ ತನ್ನನ್ನೇ ಸೇರುವ ಯೋಗ್ಯತೆಯುಂಟು ಎಂದು ಹೇಳಿದ್ದರೂ

**ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।**
**ಅನನ್ಯೇನೈವ ಯೋಗೇನ ಮಾಂ ಧ್ಯಾಯನ್ತ ಉಪಾಸತೇ ॥**
**ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।**
**ಭವಾಮಿ ನ ಚಿರಾತ್ ಪಾರ್ಥ ಮಯ್ಯಾವೇಶಿತಚೇತಸಾಮ್ ॥**
ಗೀ. ೧೨-೬, ೭

ಯಾರು ಸರ್ವಕರ್ಮಗಳನ್ನೂ ವಿಶ್ವರೂಪನಾದ ನನಗೆ ಅರ್ಪಿಸಿ ನನ್ನಲ್ಲಿಯೇ ಚಿತ್ತ ವಿಟ್ಟು ಉಪಾಸನೆಮಾಡುವರೋ ಅವರನ್ನು ನಾನೇ ಬೇಗನೆ ಮೃತ್ಯುಸಂಸಾರದಿಂದ ಉದ್ಧಾರಮಾಡುವೆನು– ಎಂದು ವಾಗ್ದಾನವಿತ್ತಿರುತ್ತಾನೆ.

**ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಮ್ ।**
**ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥** ಗೀ. ೧೨-೫

ಅತೀಂದ್ರಿಯವಾಗಿರುವ ಅಕ್ಷರವನ್ನು ಉಪಾಸನೆಮಾಡುವದು ದೇಹಾಭಿಮಾನಿಗಳಿಗೆ ವಿಶ್ವರೂಪೋಪಾಸನೆಗಿಂತಲೂ ಕ್ಲಿಷ್ಟತರವೆಂದೂ ಹೇಳಿರುತ್ತಾನೆ ; ಸಾಧಕರಿಗೆ ಇದು ಅನುಭವದಲ್ಲಿಯೂ ತೋರಿಬಂದಿರುತ್ತದೆ. ಆದ್ದರಿಂದ

**ಯೇ ಯಥಾ ಮಾಂ ಪ್ರಪದ್ಯನ್ತೇ ತಾಂಸ್ತಥೈವ ಭಜಾಮ್ಯಹಮ್ ॥**
ಗೀ. ೪-೧೧

(ಯಾರುಯಾರು ಹೇಗೆಹೇಗೆ ನನ್ನನ್ನು ಭಜಿಸುವರೋ ಅದದಕ್ಕೆ ತಕ್ಕಂತೆ ನಾನು ಅವರಿಗೆ ಫಲವನ್ನು ನೀಡುವೆನು)- ಎಂಬ ಭಗವದುಕ್ತಿಯಲ್ಲಿ ಭರವಸೆಯನ್ನಿಟ್ಟು ಸಗುಣಭಗವಂತನನ್ನು ಸರ್ವಭಾವದಿಂದ ಯಾರು ಭಜಿಸುವರೋ ಅವರಿಗೆ ಭಗವಂತನ ಅನುಗ್ರಹದಿಂದಲೇ ಪರಮಗತಿಯು ದೊರಕುವದೆಂಬುದು ಶ್ರುತಿಸ್ಮೃತಿ ಸಮ್ಮತವಾಗಿರುತ್ತದೆ.

೧೦. ಭಗವದ್ಭಕ್ತರು ವೈಕುಂಠವೇ ಮುಂತಾದ ಲೋಕಗಳನ್ನು ಸೇರುವ ರೆಂದು ಕೆಲವು ಪುರಾಣಗಳಲ್ಲಿ ಹೇಳಿರುವಲ್ಲಿ ಈ ಸೂತ್ರಕಾರರೂ ಭಕ್ತರಿಗೆ ಇಲ್ಲಿಯೇ ತನ್ನ ಸಾಕ್ಷಾತ್ಕಾರವನ್ನು ಅನುಗ್ರಹಿಸುವನೆಂದು ಹೇಳಿದಾರಲ್ಲ !- ಎಂದು ಕೆಲವರು ಶಂಕಿಸುತ್ತಾರೆ.

ಇದಕ್ಕೆ ಪರಿಹಾರವೇನೆಂದರೆ : ಇಲ್ಲಿಯೇ ಭಗವಂತನ ಸಾಕ್ಷಾತ್ಕಾರವು ದೊರೆತು ಭಕ್ತರು ಭಗವಂತನಲ್ಲಿ ಸೇರಿಹೋಗುವರೆಂಬುದು ಪರಭಕ್ತಿಯ ವಿಷಯ. ಗೌಣ ಭಕ್ತರಿಗೆ ಲೋಕವಾಸನೆಯೂ ಇರುವದರಿಂದ ಅವರಿಗೆ ಲೋಕಾಂತರದಲ್ಲಿ ಭಗವಂತನ ಅನುಗ್ರಹವುಂಟಾಗುವದೆಂಬುದೂ ಸರಿಯೇ. ಆದರೆ ಲೋಕವಾಸನೆ ಯನ್ನು ಬೇರುಮುಟ್ಟಕಿತ್ತುಹಾಕಿದವನೇ ಮಾಯೆಯನ್ನು ದಾಟುತ್ತಾನೆಂದು (ಸೂ. ೪೭ರಲ್ಲಿ) ಹೇಳಿರುವದರಿಂದ ಅಂಥ ಪರಭಕ್ತನು ಇಲ್ಲಿಯೇ ಭಗವನ್ಮಯನಾಗು ವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

**ನೂನಮೇಕಾನ್ತಧರ್ಮೋಽಯಂ ಶ್ರೇಷ್ಠೋ ನಾರಾಯಣಪ್ರಿಯಃ ।**
**ಅಗತ್ವಾ ಗತಯಸ್ತಿಸ್ರೋ ಯದ್ಗಚ್ಛನ್ತ್ಯವ್ಯಯಂ ಹರಿಮ್ ॥**
ಮಹಾಭಾರತ ಮೋ ಧ. ३೪೮-೪

ಎಂಬ ವಚನದಂತೆ ಏಕಾಂತಭಕ್ತರಿಗೆ ಭಗವಂತನಾದ ಶ್ರೀಹರಿಯೇ ಗತಿಯೆಂಬುದು ನ್ಯಾಯವೇ ಆಗಿದೆ.

೧೧. ನಾಮಕೀರ್ತನೆಯು ಪಾಪನಾಶಕ್ಕೂ ಮಾಡಿದ ಕರ್ಮಗಳ ಸಾದ್ಗುಣ್ಯ ಕ್ಕೂ ವಿನಿಯೋಗವಾಗುವದೆಂದು ಸ್ಮೃತಿಪುರಾಣಗಳಲ್ಲಿ ಹೇಳಿರುತ್ತದೆ.

**ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ ।**
**ಪುಮಾನ್ ವಿಮುಚ್ಯತೇ ಸದ್ಯಃ ಸಿಂಹತ್ರಸ್ತೈರ್ಮೃಗೈರಿವ ॥**
**ಯನ್ನಾಮಕೀರ್ತನಂ ಭಕ್ತ್ಯಾ ವಿಲಾಪನಮನುತ್ತಮಮ್ ।**
**ಮೈತ್ರೇಯಾಶೇಷಪಾಪಾನಾಂ ಧಾತೂನಾಮಿವ ಪಾವಕಃ ॥**
ವಿ. ಪು. ೬-೮-೧೯, ೨೦

"ಪರವಶನಾಗಿ ಆ ಭಗವಂತನ ನಾಮವನ್ನು ಕೀರ್ತನೆಮಾಡಿದರೂ ಸಿಂಹಕ್ಕೆ ಅಂಜಿದ ತೋಳಗಳಿಂದ ಬಿಡುಗಡೆಯಾಗುವಂತೆ ಸರ್ವಪಾತಕಗಳಿಂದಲೂ

ಮನುಷ್ಯನು ಮುಕ್ತನಾಗುವನು. ಭಕ್ತಿಯಿಂದ ಆತನ ನಾಮವನ್ನು ಕೀರ್ತನೆ ಮಾಡಿದರೆ ಬೆಂಕಿಯು ಧಾತುಗಳನ್ನು ಕರಗಿಸುವಂತೆ ಅದು ಪಾಪಗಳನ್ನೆಲ್ಲ ಕರಗಿಸುವದು'' ಎಂದು ಪುರಾಣವಚನ.

**ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪೋಯಜ್ಞಕ್ರಿಯಾದಿಷು ।**
**ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವನ್ದೇ ತಮಚ್ಯುತಮ್ ॥**

ಎಂದು ಪ್ರಸಿದ್ಧವಾದ ಸ್ಮೃತಿವಚನ.

ಆದರೆ ಈ ಶಾಸ್ತ್ರದಲ್ಲಿ (೮೦ನೆಯ ಸೂತ್ರದಲ್ಲಿ) ಭಗವಂತನ ಸಾಕ್ಷಾತ್ಕಾರಕ್ಕೆ ನಾಮಕೀರ್ತನೆಯು ಸಾಧನವೆಂತ ಹೇಳಿದೆಯಲ್ಲ! ಎಂಬುದೊಂದು ಶಂಕೆ.

ನಾಮಕೀರ್ತನೆಯಿಂದ ಪಾಪಪರಿಹಾರವೂ ಕರ್ಮಸಮೃದ್ಧಿಯೂ ಆಗುವವೆಂಬುದು ಸಪ್ರಮಾಣವೇ ಸರಿ. ಆದರೆ ನಾಮಕೀರ್ತನೆಯ ಮುಖ್ಯವಾದ ಫಲವೇನೆಂದರೆ ಆನಂದವನ್ನು ಪಡೆದು ಆನಂದರೂಪನಾದ ಪರಮಾತ್ಮನಲ್ಲಿ ಬೆರೆಯುವದೇ. ಆದ್ದರಿಂದ ಭಗವಂತನ ಅನುಗ್ರಹಕ್ಕೆ ನಾಮಕೀರ್ತನೆಯನ್ನು ಸಾಧನವಾಗಿ ಹೇಳಿರುವದರಲ್ಲಿ ಏನೂ ತಪ್ಪಿಲ್ಲ. ಇದಲ್ಲದೆ **ಈ ಶಾಸ್ತ್ರದಲ್ಲಿ ಕೀರ್ತನೆಯೊಂದರಿಂದಲೇ ಪರಮಗತಿಯಾಗುವದೆಂದೇನೂ ಹೇಳಿಲ್ಲ; ಕೀರ್ತನಶ್ರವಣಾದಿಗಳಿಂದ ಮುಖ್ಯಭಕ್ತಿಯು ದೊರೆಯುವದೆಂದೂ ಆ ಮುಖ್ಯಭಕ್ತಿಯಿಂದಲೇ ಭಗವಂತನು ಪ್ರತ್ಯಕ್ಷನಾಗಿ ಭಕ್ತರನ್ನು ಅನುಗ್ರಹಿಸುವನೆಂದೂ ಸಿದ್ಧಾಂತಮಾಡಿರುತ್ತದೆ.** ಸ್ತೋತ್ರಾದಿಗಳಿಂದಲೂ ಪರಮಪುರುಷಾರ್ಥವು ದೊರೆಯುವದೆಂಬ ವಚನಗಳಿಗೆ ಹೀಗೆಯೇ ಅಭಿಪ್ರಾಯವನ್ನು ಕಲ್ಪಿಸಬೇಕು. ಉದಾಹರಣೆಗೆ ವಿಷ್ಣುಸಹಸ್ರನಾಮಸ್ತೋತ್ರದಲ್ಲಿ :

**ಕಿಂ ಜಪನ್ಮುಚ್ಯತೇ ಜನ್ತುರ್ಜನ್ಮಸಂಸಾರಬನ್ಧನಾತ್ ॥ ವಿ. ಸ. ೩**

ಎಂದು ಯುಧಿಷ್ಠಿರನು ಕೇಳಿದ ಪ್ರಶ್ನೆಗೆ ಭೀಷ್ಮರು ವಿಷ್ಣುಸಹಸ್ರನಾಮಾವಳಿಯನ್ನು ಹೇಳಿದಮೇಲೆ,

**ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್ ।**
**ನಾಶುಭಂ ಪ್ರಾಪ್ನುಯಾತ್ ಕಿಞ್ಚಿತ್ ಸೋಽಮುತ್ರೇಹ ಚ ಮಾನವಃ । ವೇದಾನ್ತಗೋ ಬ್ರಾಹ್ಮಣಃ ಸ್ಯಾತ್ ॥....**

ಎಂದು ವೇದಾಂತಜ್ಞಾನವೂ ಈ ಸ್ತೋತ್ರದಿಂದ ಪರಂಪರೆಯಿಂದ ಲಭಿಸುವದೆಂದು ಫಲಶ್ರುತಿಯಲ್ಲಿ ಹೇಳಿದ್ದಾರೆ.

**ವಾಸುದೇವಾಶ್ರಯೋ ಮರ್ತ್ಯೋ ವಾಸುದೇವಪರಾಯಣಃ ।**
**ಸರ್ವಪಾಪವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥**

**ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।**
**ಜನ್ಮಮೃತ್ಯುಜರಾವ್ಯಾಧಿಭಯಂ ನೈವೋಪಜಾಯತೇ ॥**

ಎಂದು ಪರಂಪರೆಯಿಂದ ಮೋಕ್ಷಫಲವನ್ನೂ ಹೇಳಿರುತ್ತದೆ. ಆದ್ದರಿಂದ ಇಲ್ಲಿ ಯಾವ ವಿರೋಧವೂ ಇರುವದಿಲ್ಲ.

೧೨. ಈಶ್ವರಪ್ರಣಿಧಾನದಿಂದ ಸಮಾಧಿಯು ದೊರಕುವದೆಂದು ಯೋಗ ಶಾಸ್ತ್ರದಲ್ಲಿ ಹೇಳಿರುವದರಿಂದ ಯೋಗವಿಲ್ಲದೆ ಮುಕ್ತಿಯಾಗಲಾರದೆಂದು ಕೆಲವರ ನಂಬಿಕೆ.

ಗೌಣಭಕ್ತಿಯು ಸಮಾಧಿಗೆ ಸಾಧನವೆಂಬುದೇ ಸರಿ. **ಸಮಾಧಿಯೆಂದರೆ ಆತ್ಮನಲ್ಲಿಯೇ ಮನಸ್ಸು ನೆಲೆನಿಲ್ಲುವದು. ಆದ್ದರಿಂದ ನಿಜವಾದ ಸಮಾಧಿಯೂ ಪರಭಕ್ತಿಯೂ ಬೇರೆಬೇರೆಯಲ್ಲ.** ಹೀಗಿರುವದರಿಂದ ಯೋಗದಲ್ಲಿ ಹೇಳಿರುವ ಪೌರುಷಪ್ರಯತ್ನದ ಕ್ಲೇಶವಿಲ್ಲದೆಯೂ ಅಣಿಮಾದಿಸಿದ್ಧಿಗಳ ತೊಡಕಿಗೆ ಸಿಕ್ಕಿಕೊಳ್ಳದೆಯೂ ಪರಮಾತ್ಮನ ನೇರಾದ ಪರಭಕ್ತಿಯನ್ನು ಪಡೆದುಕೊಳ್ಳುವದಕ್ಕೆ ಇಲ್ಲಿ ಹೇಳಿರುವ ಗೌಣಭಕ್ತಿವಿಶೇಷಗಳು ಸುಲಭತರವಾಗಿರುವವೆನ್ನುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

## ಉಪಸಂಹಾರ

ಹೀಗೆ ಭಕ್ತಿಯ ವಿಷಯಕ್ಕೆ ಯಾವ ಆಕ್ಷೇಪಣೆಯೂ ಇರುವದಿಲ್ಲ.

**श्रद्धावित्तो भूत्वाऽऽत्मन्येवात्मानं पश्येत् ॥**

ಬೃ. ಮಾ. ೪-೨-೨೮

**ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಙ್ಗವರ್ಜಿತಃ ।**
**ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಣ್ಡವ ॥**

ಗೀ. ೧೧-೫೫

'ನನ್ನ ಕರ್ಮದಲ್ಲಿಯೇ ನಿರತನಾಗಿ, ನಾನೇ ಪರಮಶ್ರೇಷ್ಠನೆಂದು ತತ್ಪರನಾಗಿರುವನಾಗಿ ನನ್ನ ಭಕ್ತನಾಗಿ ವಿಷಯಸಂಗ, ಕರ್ಮಸಂಗ, ಫಲಸಂಗ, ಭೋಗಸಂಗ- ಎಂಬ ಎಲ್ಲಾ ಸಂಗಗಳನ್ನೂ ಬಿಟ್ಟು ಯಾವ ಪ್ರಾಣಿಯಲ್ಲೂ ವೈರವಿಲ್ಲದಾತನಾಗಿ ಯಾವನಿರುತ್ತಾನೋ ಅವನು ನನ್ನನ್ನೇ ಸೇರುತ್ತಾನೆ'- ಎಂದು ಭಗವಂತನೇ ಹೇಳಿರುತ್ತಾನೆ.

**ಧರ್ಮಾರ್ಥಕಾಮೈಃ ಕಿಂ ತಸ್ಯ ಮುಕ್ತಿಸ್ತಸ್ಯ ಕರೇ ಸ್ಥಿತಾ ।**
**ಸಮಸ್ತಜಗತಾಂ ಮೂಲೇ ಯಸ್ಯ ಭಕ್ತಿಃ ಸ್ಥಿರಾ ತ್ವಯಿ ॥**

ವಿ. ಪು. ೧-೨೦-೨೭

ಯಾವನಿಗೆ ಸಮಸ್ತಜಗತ್ತುಗಳಿಗೂ ಮೂಲಕಾರಣನಾಗಿರುವ ನಿನ್ನಲ್ಲಿ ಸ್ಥಿರವಾದ ಭಕ್ತಿಯಿರುವದೋ ಅವನಿಗೆ ಧರ್ಮಾರ್ಥಕಾಮುಗಳಿಂದಾಗಬೇಕಾದದ್ದೇನು ? ಮುಕ್ತಿಯು ಅವನ ಕೈಯಲ್ಲಿಯೇ ಇರುತ್ತದೆ- ಎಂದು ಪುರಾಣದಲ್ಲಿ ಪ್ರಹ್ಲಾದನ ವಚನವಿದೆ.

ಹೀಗೆ ಶ್ರುತಿಸ್ಮೃತಿಪುರಾಣಗಳಲ್ಲಿ ಪರಭಕ್ತಿಯಿಂದಲೇ ಪರಮಪುರುಷಾರ್ಥವೆಂಬುದು ಸುಪ್ರಸಿದ್ಧವಾಗಿರುತ್ತದೆ. ಪಂಚಮಹಾಯಜ್ಞಗಳು, ದೇವತಾಪೂಜೆ, ಮಂತ್ರಜಪಾಧ್ಯಯನಾದಿಗಳು, ಪರಮಾತ್ಮನ ಧ್ಯಾನ-ಇವೆಲ್ಲ ಗೌಣಭಕ್ತಿಯಲ್ಲಿಯೇ ಅಡಕವಾಗಿರುತ್ತವೆ. ಭಗವತ್ಪ್ರೇಮವೊಂದೇ ನಿಜವಾದ ಭಕ್ತಿಯು; ಆ ಪ್ರೇಮವು ಭಗವಂತನ ಸ್ವರೂಪವೇ ಆಗಿರುತ್ತದೆ. ಆ ಪ್ರೇಮರೂಪನಾದ ಭಗವಂತನಲ್ಲಿ ಬೆರೆತು ತನ್ಮಯನಾಗಿರುವದಕ್ಕಿಂತ ಹೆಚ್ಚಿನ ಪರಗತಿಯು ಬೇರೆಯಿಲ್ಲ- ಎಂಬುದೇ ಭಕ್ತಿಶಾಸ್ತ್ರದ ಪರಮಸಿದ್ಧಾಂತವು.

ಓಂ ತತ್ಸತ್

# ೨. ಪರಿಶಿಷ್ಟ

## ಸಾರ್ಥಸೂತ್ರಪಾಠ

### ಓಂ ॥ ಅಥಾತೋ ಭಕ್ತಿಂ ವ್ಯಾಖ್ಯಾಸ್ಯಾಮಃ ॥ ೧ ॥

[ಅಥ-ಈಗ, ಅತಃ-ಅದ್ದರಿಂದ ಭಕ್ತಿಮ್-ಭಕ್ತಿಯನ್ನು ವ್ಯಾಖ್ಯಾಸ್ಯಾಮಃ-ವಿವರಿಸಿ ಹೇಳುವೆವು.]

೧. ಭಕ್ತಿಯ ಹೊರತು ಮತ್ತೆ ಯಾವದರಿಂದಲೂ ಅಹಂಕಾರವು ಹೋಗಲಾರದಾದ್ದರಿಂದ ಈಗ ಭಕ್ತಿಯನ್ನು ಚೆನ್ನಾಗಿ ವಿವರಿಸಿ ಪ್ರತಿಪಾದಿಸುವೆವು.

### ಸಾ ತ್ವಸ್ಮಿನ್ ಪರಮಪ್ರೇಮರೂಪಾ ॥ ೨ ॥

[ಸಾ ತು-ಅದಾದರೋ, ಅಸ್ಮಿನ್-ಈತನಲ್ಲಿ, ಪರಮಪ್ರೇಮರೂಪಾ-ಮಿಗಿಲಿಲ್ಲದ ಪ್ರೇಮದ ಸ್ವರೂಪವಾಗಿರುವದು.]

೨. ಆ ಭಕ್ತಿಯೆಂಬುದು ಈ (ನಮ್ಮ ಆತ್ಮನಾದ ಭಗವಂತನಲ್ಲಿರುವ) ನಿರತಿಶಯವಾದ ಪ್ರೇಮದ ಸ್ವರೂಪವಾಗಿರುತ್ತದೆ.

### ಅಮೃತಸ್ವರೂಪಾ ಚ ॥ ೩ ॥

[ಚ-ಮತ್ತು ಅಮೃತಸ್ವರೂಪಾ-ನಾಶವಿಲ್ಲದ ಸ್ವರೂಪವುಳ್ಳದ್ದು.]

೩. ಆ ಭಕ್ತಿಯು ನಾಶವಿಲ್ಲದ ಸ್ವರೂಪವುಳ್ಳದ್ದೂ ಆಗಿರುತ್ತದೆ.

### ಯಲ್ಲಬ್ಧ್ವಾ ಪುಮಾನ್ ಸಿದ್ಧೋ ಭವತ್ಯಮೃತೋ ಭವತಿ ತೃಪ್ತೋ ಭವತಿ ॥ ೪ ॥

[ಯತ್-ಯಾವದನ್ನು, ಲಬ್ಧ್ವಾ-ಪಡೆದುಕೊಂಡರೆ, ಪುಮಾನ್-ಮನುಷ್ಯನು, ಸಿದ್ಧೋ ಭವತಿ-ಸಿದ್ಧನಾಗುತ್ತಾನೆ. ಅಮೃತೋ ಭವತಿ-ಅಮೃತನಾಗುತ್ತಾನೆ. ತೃಪ್ತೋ ಭವತಿ-ತೃಪ್ತನಾಗುತ್ತಾನೆ.]

೪. ಅದನ್ನು ಪಡೆದುಕೊಂಡರೆ ಮನುಷ್ಯನು ಏನನ್ನೂ ಬಯಸದ ಸಿದ್ಧನಾಗುವನು; ಭಗವದ್ರೂಪನೇ ಆಗಿಬಿಡುವದರಿಂದ ಅಮರಣಸ್ವಭಾವದವನಾಗುವನು; ತೃಪ್ತನಾಗುತ್ತಾನೆ.

### ಯತ್ಪ್ರಾಪ್ಯ ನ ಕಿಞ್ಚಿದ್ ವಾಞ್ಛತಿ, ನ ಶೋಚತಿ, ನ ದ್ವೇಷ್ಟಿ ನ ರಮತೇ, ನೋತ್ಸಾಹೀ ಭವತಿ ॥ ೫ ॥

[ಯತ್-ಯಾವ ಅದನ್ನು, ಪ್ರಾಪ್ಯ-ಪಡೆದುಕೊಂಡಾಗ, ಕಿಞ್ಚಿತ್-ಏನನ್ನೂ ನ ವಾಞ್ಛತಿ-ಬೇಕೆನ್ನುವದಿಲ್ಲ, ನ ಶೋಚತಿ-ಶೋಕಿಸುವದಿಲ್ಲ, ನ ದ್ವೇಷ್ಟಿ-ಹಗೆಮಾಡುವದಿಲ್ಲ, ನ ರಮತೇ-ರತನಾಗಿರುವದಿಲ್ಲ, ಉತ್ಸಾಹೀ ನ ಭವತಿ-ಉತ್ಸಾಹವುಳ್ಳವನೂ ಆಗಿರುವದಿಲ್ಲ.]

೫. ಈ ಭಕ್ತಿಯನ್ನು ಪಡೆದುಕೊಂಡಮೇಲೆ ಏನನ್ನೂ ಬಯಸುವದಿಲ್ಲ, ಯಾವದಾದರೂ ಹೋಗುವದಲ್ಲ ಅಥವಾ ಹೋಯಿತಲ್ಲ !– ಎಂದು ಶೋಕಿಸುವದಿಲ್ಲ; ಯಾರನ್ನೂ ಅಥವಾ ಏನನ್ನೂ ದ್ವೇಷಿಸುವದಿಲ್ಲ, ಯಾವದರಲ್ಲಿಯೂ ಮನಸ್ಸಿಟ್ಟು ಅದರಲ್ಲಿಯೇ ರತನಾಗಿರುವದಿಲ್ಲ ; ಯಾವದೊಂದು ಕಾರ್ಯದಲ್ಲಿಯೂ ಉತ್ಸಾಹಿಯಾಗಿರುವದಿಲ್ಲ.

**ಯಜ್ಜ್ಞಾತ್ವಾ ಮತ್ತೋ ಭವತಿ ಸ್ತಬ್ಧೋ ಭವತ್ಯಾತ್ಮಾರಾಮೋ ಭವತಿ ॥ ೬ ॥**

[ಯತ್–ಯಾವ ಇದನ್ನು, ಜ್ಞಾತ್ವಾ–ಅರಿತುಕೊಂಡಾಗ, ಮತ್ತೋ ಭವತಿ–ಮದಿಸಿದವನಾಗಿರುವನು, ಸ್ತಬ್ಧೋ ಭವತಿ–ನಿಂತೇ ಇರುವನು, ಆತ್ಮಾರಾಮೋ ಭವತಿ–ಆತ್ಮನಲ್ಲಿಯೇ ರತನಾಗಿರುತ್ತಾನೆ.]

೬. ಭಕ್ತಿಯನ್ನು ಅನುಭವಕ್ಕೆ ತಂದುಕೊಂಡವನು ಮೈಮರೆತಂತೆ ಇರುವನು, ನಿಂತಲ್ಲಿ ನಿಂತಿರುವನು, ಆತ್ಮನಲ್ಲಿಯೇ ಮನಸ್ಸನ್ನು ಆಡಿಸುತ್ತಿರುವನು.

**ಸಾ ನ ಕಾಮಯಮಾನಾ ನಿರೋಧರೂಪತ್ವಾತ್ ॥ ೭ ॥**

[ಸಾ–ಆ ಭಕ್ತಿಯು, ನ ಕಾಮಯಮಾನಾ–ಕಾಮಿಸುವದಲ್ಲ ; ನಿರೋಧರೂಪತ್ವಾತ್–ಏಕೆಂದರೆ ತಡೆಯ ರೂಪವಾಗಿರುತ್ತದೆ.]

೭. ಭಕ್ತಿಯೆಂದರೆ ಕಾಮಿಸುವದಲ್ಲ; ಏಕೆಂದರೆ ಅದು ಎಲ್ಲಾ ಕಾಮಗಳನ್ನೂ ನಾಶಗೊಳಿಸುವ ರೂಪದ್ದಾಗಿರುತ್ತದೆ.

**ನಿರೋಧಸ್ತು ಲೋಕವೇದವ್ಯಾಪಾರನ್ಯಾಸಃ ॥ ೮ ॥**

[ನಿರೋಧಸ್ತು–ನಿರೋಧವಾದರೊ, ಲೋಕವೇದವ್ಯಾಪಾರನ್ಯಾಸಃ–ಲೋಕದ ಮತ್ತು ವೇದದ ವ್ಯಾಪಾರಗಳನ್ನು ಬಿಡುವದು.]

೮. ನಿರೋಧವೆಂದರೆ ಲೌಕಿಕಕರ್ಮಗಳನ್ನೂ ವೈದಿಕಕರ್ಮಗಳನ್ನೂ ಸಂನ್ಯಾಸಮಾಡುವದು.

**ತಸ್ಮಿನ್ನನನ್ಯತಾ ತದ್ವಿರೋಧಿಷೂದಾಸೀನತಾ ಚ ॥ ೯ ॥**

[ತಸ್ಮಿನ್– ಆತನಲ್ಲಿ ಅನನ್ಯತಾ– ಅನನ್ಯವಾಗಿರುವದು, ತದ್ವಿರೋಧಿಷು – ಅದಕ್ಕೆ ಪ್ರತಿಕೂಲವಾದವುಗಳಲ್ಲಿ, ಉದಾಸೀನತಾ–ಉದಾಸೀನನಾಗಿರುವದು.]

೯. ಪರಮಾತ್ಮನಲ್ಲಿ ಅನನ್ಯಭಾವದಿಂದ ಇರುವದೂ ಹಾಗಿರುವದಕ್ಕೆ ಅಡ್ಡಿಯಾಗಿರುವ ಕರ್ಮಗಳನ್ನು ಮನಸ್ಸಿಗೆ ತಂದುಕೊಳ್ಳದೆ ಇರುವದೂ (ನಿರೋಧವು).

**ಅನ್ಯಾಶ್ರಯಾಣಾಂ ತ್ಯಾಗೋಽನನ್ಯತಾ ॥ ೧೦ ॥**

[ಅನ್ಯಾಶ್ರಯಾಣಾಂ–ಮಿಕ್ಕ ಆಶ್ರಯಗಳನ್ನು, ತ್ಯಾಗಃ–ಬಿಟ್ಟುಬಿಡುವದು, ಅನನ್ಯತಾ–ಅನನ್ಯತೆ.]

೧೦. ಪರಮಾತ್ಮನನ್ನು ಬಿಟ್ಟು ಮತ್ತೇನನ್ನೂ ಆಶ್ರಯಿಸದೆ ಇರುವದು ಅನನ್ಯತೆ.

**ಲೋಕವೇದೇಷು[1] ತದನುಕೂಲಾಚರಣಂ ತದ್ವಿರೋಧಿಷೂದಾಸೀನತಾ॥**

[ಲೋಕವೇದೇಷು–ಲೋಕದ ಮತ್ತು ವೇದಗಳ ಕರ್ಮಗಳಲ್ಲಿ, ತದನುಕೂಲಾಚರಣಮ್–ಅದಕ್ಕೆ ಅನುಕೂಲವಾಗಿರುವದನ್ನೇ ಮಾಡುತ್ತಿರುವದು, ತದ್ವಿರೋಧಿಷು–ಅದಕ್ಕೆ ವಿರುದ್ಧವಾದವುಗಳಲ್ಲಿ, ಉದಾಸೀನತಾ–ಉದಾಸೀನನಾಗಿರುವದು.]

೧೧. ಲೌಕಿಕಕರ್ಮಗಳಲ್ಲಿಯೂ ವೈದಿಕಕರ್ಮಗಳಲ್ಲಿಯೂ ಭಗವಂತನಲ್ಲಿ ಅನನ್ಯತೆಯಿಂದಿರುವದಕ್ಕೆ ಅನುಕೂಲವಾದದ್ದನ್ನೇ ಮಾಡುವದು, ಅದಕ್ಕೆ ವಿರುದ್ಧವಾದ ಕರ್ಮಗಳನ್ನು ಮನಸ್ಸಿಗೆ ತಂದುಕೊಳ್ಳದೇ ಇರುವದು (ನಿರೋಧವು).

**ಭವತು ನಿಶ್ಚಯದಾರ್ಢ್ಯಾದೂರ್ಧ್ವಂ ಶಾಸ್ತ್ರರಕ್ಷಣಮ್ ॥ ೧೨ ॥**

[ನಿಶ್ಚಯದಾರ್ಢ್ಯಾತ್ ಊರ್ಧ್ವಮ್–ನಿಶ್ಚಯವು ಗಟ್ಟಿಯಾದಮೇಲೆ, ಶಾಸ್ತ್ರರಕ್ಷಣಮ್–ಶಾಸ್ತ್ರವನ್ನು ಕಾಪಾಡಿಕೊಳ್ಳುವದು, ಭವತು–ಇರಲಿ.]

೧೨. ಭಕ್ತಿಯ ವಿಷಯದಲ್ಲಿ ಗಟ್ಟಿಯಾದ ಮನೋನಿರ್ಧಾರವಾದಬಳಿಕವೂ (ಭಕ್ತನು) ಶಾಸ್ತ್ರವನ್ನು ಕಾಪಾಡಿಕೊಂಡಿರಬೇಕು.

**ಅನ್ಯಥಾ ಪಾತಿತ್ಯಶಙ್ಕಯಾ ॥ ೧೩ ॥**

[ಅನ್ಯಥಾ–ಹೀಗೆ ಮಾಡದಿದ್ದರೆ, ಪಾತಿತ್ಯಶಙ್ಕಯಾ–ಪತಿತನೆಂಬ ಶಂಕೆಯುಂಟಾದೀತಾದ್ದರಿಂದ.]

೧೩. ಕೃತಕೃತ್ಯನಾದ ಭಕ್ತನು ಶಾಸ್ತ್ರರಕ್ಷಣೆಯನ್ನು ಮಾಡಿಕೊಂಡು ಕರ್ತವ್ಯಕರ್ಮವನ್ನು ಮಾಡದೆಇದ್ದರೆ ಇವನು ಪತಿತನೆಂದು ಜನರು ಶಂಕಿಸಬಹುದು.

**ಲೋಕೋಽಪಿ ತಾವದೇವ, ಭೋಜನಾದಿವ್ಯಾಪಾರ-ಸ್ತ್ವಾ ಶರೀರಧಾರಣಾವಧಿ ॥ ೧೪ ॥**

[ಲೋಕೋಽಪಿ–ಲೌಕಿಕವ್ಯಾಪಾರವೂ, ತಾವದೇವ–ಅಲ್ಲಿಯವರೆಗೇ, ಭೋಜನಾದಿವ್ಯಾಪಾರಸ್ತು–ಊಟವೇ ಮುಂತಾದ ಕೆಲಸವು, ಆ ಶರೀರಧಾರಣಾವಧಿ–ಶರೀರವನ್ನು ಧರಿಸಿರುವವರೆಗೂ.]

---

1. 'ಲೋಕೇ ವೇದೇಷು' ಎಂಬ ಪಾಠವೂ ಉಂಟು.

೧೪. ಲೌಕಿಕಕರ್ಮವೂ ಭಕ್ತಿಯ ವಿಷಯಕ್ಕೆ ನಿಶ್ಚಯವು ಗಟ್ಟಿಯಾಗುವವರೆಗೇ ಸರಿ ; ಅನಿವಾರ್ಯವಾದ ಶರೀರಸ್ಥಿತಿಗೆ ಅವಶ್ಯವಾದ ಭೋಜನಾದಿ ವ್ಯಾಪಾರಗಳು ಪ್ರಾರಬ್ಧವಶದಿಂದ ಶರೀರವಿರುವವರೆಗೂ ಬಾಧಿತಾನುವೃತ್ತಿಯಿಂದ ಇದ್ದು ಕೊಂಡಿರುವವು.

## ತಲ್ಲಕ್ಷಣಾನಿ ವಾಚ್ಯನ್ತೇ ನಾನಾಮತಭೇದಾತ್ ॥ ೧೫ ॥

[ನಾನಾಮತಭೇದಾತ್–ಬೇರೆಬೇರೆಯ ಮತಗಳಿಗೆ ಅನುಗುಣವಾಗಿ, ತಲ್ಲಕ್ಷಣಾನಿ–ಆ ಭಕ್ತಿಯ ಲಕ್ಷಣಗಳು, ವಾಚ್ಯನ್ತೇ–ಹೇಳಲ್ಪಡುವವು.]

೧೫. ಆ ಭಕ್ತಿಯ ಲಕ್ಷಣಗಳ ವಿಷಯಕ್ಕೆ ಬೇರೆಬೇರೆಯ ಆಚಾರ್ಯರುಗಳ ಅಭಿಪ್ರಾಯಗಳು ಹೇಗಿರುವವೆಂಬುವನ್ನು ಈಗ ಹೇಳುವೆವು.

## ಪೂಜಾದಿಷ್ವನುರಾಗ ಇತಿ ಪಾರಾಶರ್ಯಃ ॥ ೧೬ ॥

[ಪೂಜಾದಿಷು–ಪೂಜೆಯೇ ಮುಂತಾದವುಗಳಲ್ಲಿರುವ, ಅನುರಾಗಃ–ಅನುರಾಗವು, ಇತಿ–ಎಂದು, ಪಾರಾಶರ್ಯಃ–ವ್ಯಾಸನು.]

೧೬. ಭಗವಂತನ ಪೂಜೆಯೇ ಮುಂತಾದವುಗಳಲ್ಲಿ ಅನುರಾಗವಿರುವದೇ ಭಕ್ತಿಯ ಲಕ್ಷಣವೆಂದು ವ್ಯಾಸರು ಹೇಳುತ್ತಾರೆ.

## ಕಥಾದಿಷ್ವಿತಿ ಗರ್ಗಃ ॥ ೧೭ ॥

[ಕಥಾದಿಷು–ಕಥೆಯೇ ಮುಂತಾದವುಗಳಲ್ಲಿ, ಇತಿ–ಎಂದು, ಗರ್ಗಃ–ಗರ್ಗನು.]

೧೭. ಕಥಾಶ್ರವಣಬೋಧನವೇ ಮುಂತಾದವುಗಳಲ್ಲಿರುವ ಅನುರಾಗವೇ ಭಕ್ತಿಯೆಂದು ಗರ್ಗಾಚಾರ್ಯರು ಹೇಳಿರುತ್ತಾರೆ.

## ಆತ್ಮರತ್ಯವಿರೋಧೇನೇತಿ ಶಾಣ್ಡಿಲ್ಯಃ ॥ ೧೮ ॥

[ಆತ್ಮರತ್ಯವಿರೋಧೇನ–ಆತ್ಮರತಿಗೆ ಅಡ್ಡಿಯಾಗದಂತೆ (ಇರುವ ಅನುರಾಗವು), ಇತಿ–ಎಂದು, ಶಾಂಡಿಲ್ಯಃ–ಶಾಂಡಿಲ್ಯನು.]

೧೮. ಆತ್ಮರತನಾಗಿಯೇ ಇರುವದಕ್ಕೆ ಅಡ್ಡಿಯಿಲ್ಲದಂತೆ ಪೂಜಾದಿಗಳಲ್ಲಿಯೂ ಕಥಾದಿಗಳಲ್ಲಿಯೂ ಇರುವ ಅನುರಾಗವೇ ಭಕ್ತಿಯ ಲಕ್ಷಣವೆಂದು ಶಾಂಡಿಲ್ಯಾಚಾರ್ಯರು ಹೇಳುತ್ತಾರೆ.

## ನಾರದಸ್ತು ತದರ್ಪಿತಾಖಿಲಾಚಾರತಾ ತದ್ವಿಸ್ಮರಣೇ ಪರಮವ್ಯಾಕುಲತೇತಿ ॥ ೧೯ ॥

[ನಾರದಸ್ತು–ನಾರದನಾದರೊ, ತದರ್ಪಿತಾಖಿಲಾಚಾರತಾ–ಆತನಿಗೆ ಅರ್ಪಿಸಿದ ಎಲ್ಲಾ ಆಚಾರಗಳನ್ನೂ ಉಳ್ಳವನಾಗಿರುವದು, ತದ್ವಿಸ್ಮರಣೇ – ಆತನನ್ನು ಮರೆತರೆ, ಪರಮವ್ಯಾಕುಲತಾ–ಹೆಚ್ಚಿನ ವ್ಯಾಕುಲತ್ವವು, ಇತಿ–ಎಂದು.]

೧೯. ಆ ಭಗವಂತನಿಗೆ ತನ್ನ ಎಲ್ಲಾ ಆಚಾರಗಳನ್ನೂ ಅರ್ಪಿಸುವದೂ ಆ ಭಗವಂತನ ಸ್ಮರಣೆಯು ತಪ್ಪಿದರೆ ಅತ್ಯಂತವ್ಯಾಕುಲತೆಯುಳ್ಳವನಾಗಿರುವದೂ ಭಕ್ತಿಯ ಲಕ್ಷಣ- ಎಂದು ನಾರದರು ಹೇಳುತ್ತಾರೆ.

**ಅಸ್ತ್ಯೇವಮೇವಮ್ ॥ ೨೦ ॥**

[ಅಸ್ತಿ-ದೃಷ್ಟಾಂತವಿದೆ, ಏವಮ್-ಹೀಗೆ, ಏವಮ್-ಹೀಗೆ.]

೨೦. ಇದು ಹೀಗೆಂಬುದಕ್ಕೆ ದೃಷ್ಟಾಂತವಿದೆ -ಹೀಗೆಯೇ ಎಂಬುದಕ್ಕೆ ದೃಷ್ಟಾಂತವಿದೆ.

**ಯಥಾ ವ್ರಜಗೋಪಿಕಾನಾಮ್ ॥ ೨೧ ॥**

[ವ್ರಜಗೋಪಿಕಾನಾಮ್-ವ್ರಜಗೋಪಿಯರ, ಯಥಾ-ಹೇಗೋ ಹಾಗೆ.]

೨೧. ವ್ರಜದ ಗೋಪಿಯರ ಭಕ್ತಿಯೇ ಇದಕ್ಕೆ ದೃಷ್ಟಾಂತ.

**ನ ತತ್ರಾಪಿ ಮಾಹಾತ್ಮ್ಯಜ್ಞಾನವಿಸ್ಮೃತ್ಯಪವಾದಃ ॥ ೨೨ ॥**

[ತತ್ರಾಪಿ-ಅಲ್ಲಿಯೂ ಮಾಹಾತ್ಮ್ಯಜ್ಞಾನವಿಸ್ಮೃತ್ಯಪವಾದಃ-ಮಹಿಮೆಯ ಜ್ಞಾನವನ್ನು ಮರೆಯುವದೆಂಬ ಆಪವಾದವು, ನ-ಇಲ್ಲ.]

೨೨. ಅದರಲ್ಲಿಯೂ ಭಗವಂತನ ಮಾಹಾತ್ಮ್ಯವನ್ನು ಮರೆತದ್ದೆಂಬ ನಿಯಮಾಪವಾದವೂ ಇದ್ದಿತೆಂಬುದಿಲ್ಲ.

**ತದ್ವಿಹೀನಂ ಜಾರಾಣಾಮಿವ ॥ ೨೩ ॥**

[ತದ್ವಿಹೀನಮ್-ಅದಿಲ್ಲದ್ದು, ಜಾರಾಣಾಮ್ ಇವ-ಜಾರರ ಪ್ರೇಮದಂತೆ.]

೨೩. ಆ ಲಕ್ಷಣವಿಲ್ಲದ್ದು ಜಾರರ ಪ್ರೇಮದಂತೆ ಇರುತ್ತದೆ.

**ನಾಸ್ತ್ಯೇವ ತಸ್ಮಿಂಸ್ತತ್ಸುಖಸುಖಿತ್ವಮ್ ॥ ೨೪ ॥**

[ತಸ್ಮಿನ್-ಅದರಲ್ಲಿ, ತತ್ಸುಖಸುಖಿತ್ವಮ್-ಅವರ ಸುಖದಲ್ಲಿ ತಾನೂ ಸುಖಿಯೆಂಬುದು ನಾಸ್ತ್ಯೇವ-ಇರುವದೇ ಇಲ್ಲ.]

೨೪. ಆ ಜಾರರ ಪ್ರೀತಿಯಲ್ಲಿ ಮತ್ತೊಬ್ಬರು ಸುಖವಾಗಿದ್ದರೆ ತಾನು ಸುಖವಾಗಿದ್ದಂತೆ ಎಂಬ ಭಾವವು ಇರುವದೇಇಲ್ಲ.

**ಸಾ ತು ಕರ್ಮಜ್ಞಾನಯೋಗೇಭ್ಯೋಽಪ್ಯಧಿಕತರಾ ॥ ೨೫ ॥**

[ಸಾ ತು-ಅದಾದರೊ, ಕರ್ಮಜ್ಞಾನಯೋಗೇಭ್ಯೋಽಪಿ-ಕರ್ಮ, ಜ್ಞಾನ, ಯೋಗ-ಇವುಗಳಿಗಿಂತಲೂ, ಅಧಿಕತರಾ-ಬಹಳ ಹೆಚ್ಚಿನದು.]

೨೫. ಆ ಭಕ್ತಿಯೆಂಬುದಾದರೊ, ಕರ್ಮಜ್ಞಾನಯೋಗಗಳಿಗಿಂತ ಹೆಚ್ಚಾದದ್ದು.

## ಫಲರೂಪತ್ವಾತ್ ॥ ೨೬ ॥

[ಫಲರೂಪತ್ವಾತ್–ಫಲರೂಪವಾಗಿದೆಯಾದ್ದರಿಂದ.]

೨೬. ಏಕೆಂದರೆ (ಈ ಪರಭಕ್ತಿಯು ಅವೆಲ್ಲಕ್ಕೂ) ಫಲರೂಪವಾಗಿರುತ್ತದೆ.

## ಈಶ್ವರಸ್ಯಾಪ್ಯಭಿಮಾನದ್ವೇಷಿತ್ವಾದ್ ದೈನ್ಯಪ್ರಿಯತ್ವಾಚ್ಚ ॥ ೨೭ ॥

[ಈಶ್ವರಸ್ಯಾಪಿ–ಈಶ್ವರನಿಗೆಕೂಡ, ಅಭಿಮಾನದ್ವೇಷಿತ್ವಾತ್–ಅಹಂಕಾರಕ್ಕೆ ದ್ವೇಷಿಯಾಗಿರುವದರಿಂದಲೂ, ದೈನ್ಯಪ್ರಿಯತ್ವಾಚ್ಚ–ದೈನ್ಯವನ್ನು ಪ್ರೀತಿಸುವಿಕೆಯಿರುವದರಿಂದಲೂ.]

೨೭. ಈಶ್ವರನಿಗೆ ಅಹಂಕಾರವನ್ನು ಕಂಡರೆ ಆಗುವದಿಲ್ಲ, ಮತ್ತು ದೀನರಾಗಿ ಶರಣಾಗತರಾದವರನ್ನು ಆತನು ಪ್ರೀತಿಸುತ್ತಾನೆ. (ಆದ್ದರಿಂದ ಭಕ್ತಿಯು ಕರ್ಮಾದಿಗಳಿಗಿಂತ ಹೆಚ್ಚಿನದು.)

## ತಸ್ಯಾ ಜ್ಞಾನಮೇವ ಸಾಧನಮಿತ್ಯೇಕೇ ॥ ೨೮ ॥

[ತಸ್ಯಾಃ–ಅದಕ್ಕೆ, ಜ್ಞಾನಮೇವ–ಜ್ಞಾನವೇ, ಸಾಧನಮ್ ಇತಿ–ಸಾಧನವೆಂದು, ಏಕೇ–ಕೆಲವರು.]

೨೮. ಆ ಭಕ್ತಿಗೆ ಜ್ಞಾನವೇ ಸಾಧನವೆಂದು ಕೆಲವರ ಮತ.

## ಅನ್ಯೋನ್ಯಾಶ್ರಯತ್ವಮಿತ್ಯನ್ಯೇ ॥ ೨೯ ॥

[ಅನ್ಯೋನ್ಯಾಶ್ರಯತ್ವಮ್ ಇತಿ–ಒಂದನ್ನೊಂದಾಶ್ರಯಿಸಿರುವದು ಎಂದು, ಅನ್ಯೇ–ಮತ್ತೆ ಕೆಲವರು.]

೨೯. ಭಕ್ತಿಜ್ಞಾನಗಳು ಒಂದರಿಂದೊಂದು ಉಂಟಾಗುವವು ಎಂದು ಮತ್ತೆ ಕೆಲವರು ಆಚಾರ್ಯರ ಮತ.

## ಸ್ವಯಂಫಲರೂಪತೇತಿ ಬ್ರಹ್ಮಕುಮಾರಃ ॥ ೩೦ ॥

[ಸ್ವಯಂಫಲರೂಪತಾ ಇತಿ–ತಾನೇ ಫಲರೂಪನಾಗಿರುವದು ಎಂದು, ಬ್ರಹ್ಮಕುಮಾರಃ–ಬ್ರಹ್ಮನ ಮಗನು.]

೩೦. ಭಕ್ತಿಯು ತನಗೆತಾನೇ ಫಲವು– ಎಂದು ನಾರದರು ಅಭಿಪ್ರಾಯಪಡುತ್ತಾರೆ.

## ರಾಜಗೃಹಭೋಜನಾದಿಷು ತಥೈವ ದೃಷ್ಟತ್ವಾತ್ ॥ ೩೧ ॥

[ರಾಜಗೃಹಭೋಜನಾದಿಷು–ಅರಮನೆ, ಊಟ –ಇವೇ ಮುಂತಾದವುಗಳಲ್ಲಿ, ತಥೈವ–ಹಾಗೆಯೇ, ದೃಷ್ಟತ್ವಾತ್–ಕಂಡಿರುವದರಿಂದ.]

೩೧. ಏಕೆಂದರೆ ಅರಮನೆ, ಊಟ ಮುಂತಾದವುಗಳಲ್ಲಿ ಹಾಗೆ (ಪ್ರೇಮವೇ ಸಾಧನವೆಂದೇ) ಕಂಡುಬಂದಿರುತ್ತದೆ.

**ನ ತೇನ ರಾಜಪರಿತೋಷಃ ಕ್ಷುಚ್ಛಾನ್ತಿರ್ವಾ[1] || ೩೨ ||**

[ತೇನ–ಅದರಿಂದ ರಾಜಪರಿತೋಷಃ–ರಾಜನಿಗೆ ತೃಪ್ತಿ(ಯಾಗಲಿ), ಕ್ಷುಚ್ಛಾನ್ತಿಃ ವಾ–ಹಸಿವು ಅಡಗುವದೇ ಆಗಲಿ, ನ–ಇಲ್ಲ.]

೩೨. ದೃಷ್ಟಾಂತದಲ್ಲಿ ಜ್ಞಾನಮಾತ್ರದಿಂದ ರಾಜನು ತುಷ್ಟನಾಗುವದಿಲ್ಲ, ಹಸಿವು ಅಡಗುವದೂ ಇಲ್ಲ.

**ತಸ್ಮಾತ್ ಸೈವ ಪರಿಗ್ರಾಹ್ಯಾ ಮುಮುಕ್ಷುಭಿಃ || ೩೩ ||**

[ತಸ್ಮಾತ್–ಆದ್ದರಿಂದ, ಸೈವ–ಅದೇ, ಮುಮುಕ್ಷುಭಿಃ–ಮೋಕ್ಷೇಚ್ಛುಗಳಿಂದ, ಪರಿಗ್ರಾಹ್ಯಾ–ಗ್ರಹಿಸಲ್ಪಡತಕ್ಕದ್ದು.]

೩೩. ಆದ್ದರಿಂದ ಮೋಕ್ಷವನ್ನು ಬಯಸುವವರು ಆ ಗೌಣಭಕ್ತಿಯನ್ನೇ ಸಾಧನವಾಗಿ ಸ್ವೀಕರಿಸತಕ್ಕದ್ದು.

**ತಸ್ಯಾಃ ಸಾಧನಾನಿ ಗಾಯನ್ತ್ಯಾಚಾರ್ಯಾಃ || ೩೪ ||**

[ತಸ್ಯಾಃ–ಆ ಭಕ್ತಿಗೆ, ಸಾಧನಾನಿ–ಸಾಧನಗಳನ್ನು, ಆಚಾರ್ಯಾಃ–ಆಚಾರ್ಯರು, ಗಾಯನ್ತಿ–ಹೇಳುತ್ತಾರೆ.]

೩೪. ಆ ಭಕ್ತಿಗೆ ಸಾಧನಗಳನ್ನು ಆಚಾರ್ಯರುಗಳು ಹೀಗೆಂದು ಹೇಳಿರುತ್ತಾರೆ.

**ತತ್ತು ವಿಷಯತ್ಯಾಗಾತ್ ಸಙ್ಗತ್ಯಾಗಾಚ್ಚ || ೩೫ ||**

[ತತ್ತು–ಅದಾದರೊ, ವಿಷಯತ್ಯಾಗಾತ್–ವಿಷಯತ್ಯಾಗದಿಂದಲೂ, ಸಙ್ಗತ್ಯಾಗಾಚ್ಚ–ಸಂಗತ್ಯಾಗದಿಂದಲೂ.]

೩೫. ವಿಷಯಗಳನ್ನು ಬಿಡುವದರಿಂದಲೂ ಅವುಗಳಲ್ಲಿ ಆಸಕ್ತನಾಗದೆ ಇರುವದರಿಂದಲೂ ಭಕ್ತಿಯು ದೊರಕುವದು.

**ಅವ್ಯಾವೃತ್ತಭಜನಾತ್ || ೩೬ ||**

[ಅವ್ಯಾವೃತ್ತಭಜನಾತ್–ಎಡೆಬಿಡದೆ ಸೇವಿಸುವದರಿಂದ.]

೩೬. ಎಡೆಬಿಡದೆ ಭಗವಂತನನ್ನು ಭಜನೆಮಾಡುವದರಿಂದ ಅದು ದೊರಕುವದು.

**ಲೋಕೇಽಪಿ ಭಗವದ್ಗುಣಶ್ರವಣಕೀರ್ತನಾತ್ || ೩೭ ||**

[ಲೋಕೇಽಪಿ–ಲೋಕವ್ಯವಹಾರದಲ್ಲಿಯೂ ಭಗವದ್ಗುಣಶ್ರವಣಕೀರ್ತನಾತ್–ಭಗವಂತನ ಗುಣಗಳನ್ನು ಶ್ರವಣಮಾಡುವದರಿಂದಲೂ ಕೀರ್ತನಮಾಡುವದರಿಂದಲೂ.]

---

1. 'ಕ್ಷುಧಾ ಶಾನ್ತಿರ್ವಾ'– ಎಂದೂ ಪಾಠ.

೩೭. ಲೌಕಿಕವ್ಯವಹಾರದಲ್ಲಿ ತೊಡಗಿರುವಾಗಲೂ ಭಗವಂತನ ಗುಣಗಳನ್ನು ಶ್ರವಣಮಾಡುತ್ತಿರುವದು, ಕೀರ್ತನಮಾಡುತ್ತಿರುವದು- ಇವುಗಳಿಂದ ಭಕ್ತಿಯು ದೊರಕುವದು.

**ಮುಖ್ಯತಸ್ತು ಮಹತ್ಕೃಪಯೈವ ಭಗವತ್ಕೃಪಾಲೇಶಾದ್ವಾ ॥ ೩೮ ॥**

[ಮುಖ್ಯತಸ್ತು–ಆದರೆ ಮುಖ್ಯವಾಗಿ, ಮಹತ್ಕೃಪಯೈವ–ದೊಡ್ಡವರ ಕೃಪೆಯಿಂದಲೇ, ಭಗವತ್ಕೃಪಾಲೇಶಾದ್ವಾ–ಭಗವಂತನ ಕೃಪಾಲೇಶದಿಂದಾದರೂ.]

೩೮. ಮುಖ್ಯವಾಗಿ ಮಹಾಪುರುಷರ ದಯೆಯಿಂದಲೇ ಭಕ್ತಿಯು ದೊರಕುವದು. ಭಗವಂತನ ಕೃಪೆಯು ಒಂದಿಷ್ಟಾದರೂ ಸಿಕ್ಕಿದರೆ ಅದರಿಂದ (ಸತ್ಸಂಗವು ದೊರಕುವದರಿಂದ) ಎರಡೂ ದೊರಕುವದು.

**ಮಹತ್ಸಙ್ಗಸ್ತು ದುರ್ಲಭೋಽಗಮ್ಯೋಽಮೋಘಶ್ಚ ॥ ೩೯ ॥**

[ಮಹತ್ಸಂಗಸ್ತು–ಮಹಾಪುರುಷರ ಸಂಗವಾದರೊ, ದುರ್ಲಭಃ–ಸಿಕ್ಕುವದು ಕಷ್ಟ, ಅಗಮ್ಯಃ–ಅದರ ತತ್ತ್ವವನ್ನು ಅರಿತುಕೊಳ್ಳುವದೂ ಕಷ್ಟ; ಅಮೋಘಃ ಚ–ಮತ್ತು ಅಮೂಲ್ಯ.]

೩೯. ದೊಡ್ಡವರ ಸಂಗವು ದೊರಕುವದು ಕಷ್ಟವು, ದೊರಕಿದಾಗ ಅದರ ಹೆಚ್ಚುಗಾರಿಕೆಯನ್ನು ಅರಿತುಕೊಳ್ಳುವದೂ ಕಷ್ಟ, ಅದು ಬಹು ಅಮೂಲ್ಯವಾದದ್ದು.

**ಲಭ್ಯತೇಽಪಿ ತತ್ಕೃಪಯೈವ ॥ ೪೦ ॥**

[ತತ್ಕೃಪಯೈವ–ಆತನ ಕೃಪೆಯಿಂದಲೇ, ಲಭ್ಯತೇಽಪಿ–ದೊರಕಲೂಬಹುದು.]

೪೦. ಹೀಗಿದ್ದರೂ ಆ ಭಗವಂತನ ಕೃಪೆಯಿಂದಲೇ ಅದು ದೊರಕಬಹುದಾಗಿರುತ್ತದೆ.

**ತಸ್ಮಿಂಸ್ತಜ್ಜನೇ ಭೇದಾಭಾವಾತ್ ॥ ೪೧ ॥**

[ತಸ್ಮಿನ್–ಆತನಲ್ಲಿ, ತಜ್ಜನೇ–ಆತನ ಜನರಲ್ಲಿ, ಭೇದಾಭಾವಾತ್–ಭೇದವಿಲ್ಲದ್ದರಿಂದ.]

೪೧. ಏಕೆಂದರೆ ಆ ಭಗವಂತನಿಗೂ ಆತನವರಾದ ಭಕ್ತರಿಗೂ ಭೇದವಿರುವದಿಲ್ಲ.

**ತದೇವ ಸಾಧ್ಯತಾಮ್ ತದೇವ ಸಾಧ್ಯತಾಮ್ ॥ ೪೨ ॥**

[ತದೇವ–ಅದೇ, ಸಾಧ್ಯತಾಮ್–ಸಾಧಿಸಲ್ಪಡಲಿ, ತದೇವ–ಅದೇ, ಸಾಧ್ಯತಾಮ್–ಸಾಧಿಸಲ್ಪಡಲಿ.]

೪೨. ಆದ್ದರಿಂದ ಅದನ್ನೇ ಸಾಧಿಸಿಕೊಳ್ಳಬೇಕು, ಅದನ್ನೇ ಸಾಧಿಸಿಕೊಳ್ಳಬೇಕು.

**ದುಃಸಙ್ಗಃ ಸರ್ವಥೈವ ತ್ಯಾಜ್ಯಃ || ೪೩ ||**

[ದುಃಸಙ್ಗಃ-ಕೆಟ್ಟ ಸಂಗವು, ಸರ್ವಥೈವ-ಎಲ್ಲಾ ಪ್ರಕಾರದಿಂದಲೂ, ತ್ಯಾಜ್ಯಃ-ಬಿಡಲ್ಪಡತಕ್ಕದ್ದು.]

೪೩. ಕೆಟ್ಟಪದಾರ್ಥಗಳ ಮತ್ತು ಕೆಟ್ಟವರ ಸಂಗವನ್ನು ಎಲ್ಲಾ ಪ್ರಕಾರ ದಿಂದಲೂ ಬಿಟ್ಟುಬಿಡಬೇಕು.

**ಕಾಮಕ್ರೋಧಮೋಹಸ್ಮೃತಿಭ್ರಂಶಬುದ್ಧಿನಾಶಸರ್ವನಾಶಕಾರಣತ್ವಾತ್||**

[ಕಾಮಕ್ರೋಧಮೋಹಸ್ಮೃತಿಭ್ರಂಶಬುದ್ಧಿನಾಶಸರ್ವನಾಶಕಾರಣತ್ವಾತ್ – ಕಾಮ, ಕ್ರೋಧ, ಮೋಹ, ಸ್ಮೃತಿತಪ್ಪುವದು, ಬುದ್ಧಿನಷ್ಟವಾಗುವದು– (ಹೀಗೆ) ಎಲ್ಲವೂ ಹಾಳಾಗುವದಕ್ಕೆ ಕಾರಣವಾಗುವದರಿಂದ.]

೪೪. ಏಕೆಂದರೆ ದುಸ್ಸಂಗವು ಕಾಮ, ಕ್ರೋಧ, ಮೋಹ, ಸ್ಮೃತಿಯು ಇಲ್ಲವಾಗುವದು, ಬುದ್ಧಿಯ ನಾಶ– ಹೀಗೆ ಸರ್ವನಾಶಕ್ಕೂ ಕಾರಣವಾಗಿರುತ್ತದೆ.

**ತರಙ್ಗಾಯಿತಾ ಅಪೀಮೇ ಸಙ್ಗಾತ್ ಸಮುದ್ರಾಯನ್ತಿ || ೪೫ ||**

[ತರಙ್ಗಾಯಿತಾ ಅಪಿ–ಅಲೆಗಳಂತಿರುವವಾದರೂ, ಇಮೇ–ಇವು, ಸಙ್ಗಾತ್–ಒಂದ ಕ್ಕೊಂದು ಸೇರಿಕೊಳ್ಳುವದರಿಂದ, ಸಮುದ್ರಾಯನ್ತಿ–ಸಮುದ್ರದಂತೆ ಆಗುವವು.]

೪೫. ಈ ಕಾಮಕ್ರೋಧಾದಿಗಳು ಒಂದೊಂದೂ ಒಂದೊಂದು ಅಲೆಯಂತೆ ಇದ್ದರೂ ಒಂದಕ್ಕೊಂದು ಕಾರಣವಾಗಿ ದಾಟಲಶಕ್ಯವಾದ ಸಮುದ್ರವೇ ಆಗಿ ಬಿಡುವವು.

**ಕಸ್ತರತಿ ಕಸ್ತರತಿ ಮಾಯಾಮ್ ? ಯಃ ಸಙ್ಗಾಂಸ್ತ್ಯಜತಿ ಯೋ ಮಹಾನುಭಾವಂ ಸೇವತೇ ಯೋ ನಿರ್ಮಮೋ ಭವತಿ || ೪೬ ||**

[ಮಾಯಾಮ್–ಮಾಯೆಯನ್ನು, ಕಃ ತರತಿ–ಯಾವನು ದಾಟುತ್ತಾನೆ, ಕಃ ತರತಿ–ಯಾವನು ದಾಟುತ್ತಾನೆ ? ಯಃ–ಯಾವನು, ಸಙ್ಗಾನ್–ಸಂಗಗಳನ್ನು, ತ್ಯಜತಿ–ಬಿಡುತ್ತಾನೋ, ಯಃ–ಯಾವನು, ಮಹಾನುಭಾವಂ–ಮಹಾನುಭಾವನನ್ನು, ಸೇವತೇ, ಸೇವಿಸುತ್ತಾನೋ, ಯಃ–ಯಾವನು, ನಿರ್ಮಮೋ ಭವತಿ–ನನ್ನದೆಂಬುದಿಲ್ಲದವನಾಗುವನೋ.]

೪೬. ಮಾಯೆಯನ್ನು ದಾಟಬಲ್ಲವನು ಯಾವಾತನು ?– ಎಂದು ಒತ್ತಿ ಕೇಳಿದರೆ ಉತ್ತರವಿದು : ಯಾವನು ವಿಷಯಾದಿಗಳ ಸಂಗಗಳನ್ನು ಬಿಡುವನೋ, ಯಾವನು ಮಹಾತ್ಮರಾದ ಸಾಧುಜನರನ್ನು ಸೇವಿಸುತ್ತಾನೋ, ಯಾವನಿಗೆ ತನ್ನದಿದೆಂಬ ಅಭಿಮಾನವಿರುವದಿಲ್ಲವೋ ಅವನೇ ಮಾಯೆಯನ್ನು ದಾಟಬಲ್ಲನು.

**ಯೋ ವಿವಿಕ್ತಸ್ಥಾನಂ ಸೇವತೇ ಯೋ ಲೋಕಬನ್ಧಮುನ್ಮೂಲಯತಿ ನಿಸ್ತ್ರೈಗುಣ್ಯೋ ಭವತಿ ಯೋ ಯೋಗಕ್ಷೇಮಂ ತ್ಯಜತಿ ॥ ೪೭ ॥**

[ಯಃ–ಯಾವನು, ವಿವಿಕ್ತಸ್ಥಾನಮ್–ಏಕಾಂತವಾದ ಸ್ಥಲವನ್ನು, ಸೇವತೇ–ಸೇವಿಸುತ್ತಿರುವನೋ, ಯಃ–ಯಾವನು, ಲೋಕಬನ್ಧಮ್–ಲೋಕಗಳ ಬಂಧವನ್ನು, ಉನ್ಮೂಲಯತಿ–ಕಿತ್ತುಹಾಕುವನೋ, ನಿಸ್ತ್ರೈಗುಣ್ಯೋ ಭವತಿ – ನಿಸ್ತ್ರೈಗುಣ್ಯನಾಗಿರುವನೋ, ಯಃ–ಯಾವನು, ಯೋಗಕ್ಷೇಮಂ–ಯೋಗಕ್ಷೇಮವನ್ನು, ತ್ಯಜತಿ–ಬಿಡುವನೋ.]

೪೭. ಯಾವನು ಏಕಾಂತವಾಸವನ್ನು ಸೇವಿಸುತ್ತಿರುವನೋ, ಯಾವನು ಮನುಷ್ಯಲೋಕಪಿತೃಲೋಕದೇವಲೋಕಗಳ ವಾಸನಾಬಂಧವನ್ನು ಬೇರುಸಹಿತವಾಗಿ ಕಿತ್ತುಹಾಕಿರುವನೋ ಸತ್ತ್ವರಜಸ್ತಮಸ್ಸುಗಳೆಂಬ ಗುಣಗಳನ್ನು ಮೀರುವದಕ್ಕೆ ಪ್ರಯತ್ನಿಸುತ್ತಿರುವನೋ ಪದಾರ್ಥಗಳ ಲಾಭರಕ್ಷಣೆಯಲ್ಲಿ ತತ್ಪರನಾಗದೆ ಇರುವನೋ ಅವನು ಮಾಯೆಯನ್ನು ದಾಟುವನು.

**ಯಃ ಕರ್ಮಫಲಂ ತ್ಯಜತಿ, ಕರ್ಮಾಣಿ ಸಂನ್ಯಸ್ಯತಿ, ತತೋ ನಿರ್ದ್ವನ್ದ್ವೋ ಭವತಿ ॥ ೪೮ ॥**

[ಯಃ–ಯಾವಾತನು, ಕರ್ಮಫಲಮ್–ಕರ್ಮಗಳ ಫಲವನ್ನು, ತ್ಯಜತಿ–ಬಿಡುತ್ತಾನೋ, ಕರ್ಮಾಣಿ–ಕರ್ಮಗಳನ್ನು, ಸಂನ್ಯಸ್ಯತಿ–ಬಿಡುತ್ತಾನೋ. ತತಃ–ಅದರಿಂದ, ನಿರ್ದ್ವಂದ್ವೋ ಭವತಿ–ದ್ವಂದ್ವಗಳಿಲ್ಲದವನಾಗುತ್ತಾನೋ.]

೪೮. ಯಾವನು ಕರ್ಮಫಲವನ್ನು ಬಿಡುತ್ತಾನೋ ಕರ್ಮಗಳನ್ನು ಭಗವಂತನಿಗೇ ಸಮರ್ಪಿಸಿ ಸಂನ್ಯಾಸಮಾಡುವನೋ ಇಚ್ಛಾದ್ವೇಷಗಳಿಂದಾಗುವ ಸುಖದುಃಖಾದಿದ್ವಂದ್ವಗಳ ಸಂಬಂಧವೂ ಇಲ್ಲದವನಾಗುವನೋ ಅವನು ಮಾಯೆಯನ್ನು ದಾಟುವನು.

**ವೇದಾನಪಿ ಸಂನ್ಯಸ್ಯತಿ ಕೇವಲಮವಿಚ್ಛಿನ್ನಾನುರಾಗಂ ಲಭತೇ ॥ ೪೯ ॥**

[ವೇದಾನಪಿ–ವೇದಗಳನ್ನುಕೂಡ, ಸಂನ್ಯಸ್ಯತಿ–ಬಿಡುತ್ತಾನೋ, ಕೇವಲಮ್–ಬರಿಯ ಅವಿಚ್ಛಿನ್ನಾನುರಾಗಂ–ಕಡಿವಡೆಯದ ಅನುರಾಗವನ್ನು, ಲಭತೇ–ಪಡೆದುಕೊಳ್ಳುತ್ತಾನೆ.]

೪೯. ಕರ್ಮಗಳಂತೆ ವೇದಗಳನ್ನೂ ಸಂನ್ಯಾಸಮಾಡಿ ಭಗವಂತನಲ್ಲಿ ನೆಲೆನಿಂತಿರುವ ಅನುರಾಗವೊಂದನ್ನೇ ಯಾವನು ಪಡೆದುಕೊಳ್ಳುವನೋ ಅವನು ಮಾಯೆಯನ್ನು ದಾಟುವನು.

**ಸ ತರತಿ ಸ ತರತಿ ಸ ಲೋಕಾಂಸ್ತಾರಯತಿ ॥ ೫೦ ॥**

[ಸಃ–ಅವನು, ತರತಿ–ದಾಟುತ್ತಾನೆ, ಸಃ–ಅವನು, ತರತಿ–ದಾಟುತ್ತಾನೆ, ಸಃ–ಅವನು, ಲೋಕಾನ್–ಜನರನ್ನು, ತಾರಯತಿ–ದಾಟಿಸುತ್ತಾನೆ.]

೫೦. ಅವನೇ (ಮಾಯೆಯನ್ನು) ದಾಟುವನು, ಅವನೇ ದಾಟುವನು; ಅವನು ಜನರನ್ನು ದಾಟಿಸುವನು.

**ಅನಿರ್ವಚನೀಯಂ ಪ್ರೇಮಸ್ವರೂಪಮ್ ॥ ೫೧ ॥**

[ಪ್ರೇಮಸ್ವರೂಪಮ್–ಪ್ರೇಮದ ಸ್ವರೂಪವು, ಅನಿರ್ವಚನೀಯಮ್–ವರ್ಣಿಸಲು ಅಸಾಧ್ಯವಾದದ್ದು.]

೫೧. ಪ್ರೇಮದ ಸ್ವರೂಪವು (ಇಂಥದ್ದೆಂದು ಗೊತ್ತುಪಡಿಸಿ) ಹೇಳುವದಕ್ಕೆ ಬರುವಂಥದ್ದಲ್ಲ.

**ಮೂಕಾಸ್ವಾದನವತ್ ॥ ೫೨ ॥**

[ಮೂಕಾಸ್ವಾದನವತ್–ಮೂಕನು ರುಚಿನೋಡಿದಂತೆ.]

೫೨. ಮೂಕನು ಅನುಭವಿಸಿದ ರುಚಿಯಂತೆ (ಅನಿರ್ವಚನೀಯ).

**ಪ್ರಕಾಶತೇ[1] ಕ್ವಾಪಿ ಪಾತ್ರೇ ॥ ೫೩ ॥**

[ಕ್ವಾಪಿ–ಎಲ್ಲಿಯೋ, ಪಾತ್ರೇ–ಯೋಗ್ಯನಲ್ಲಿ, ಪ್ರಕಾಶತೇ–ತೋರುತ್ತದೆ.]

೫೩. ಯಾವನೋ ಒಬ್ಬೊಬ್ಬ ಯೋಗ್ಯಭಕ್ತನಲ್ಲಿ ಅದು ತೋರಿಕೊಳ್ಳುವದು.

**ಗುಣರಹಿತಂ ಕಾಮನಾರಹಿತಂ ಪ್ರತಿಕ್ಷಣಂ ವರ್ಧಮಾನಮವಿಚ್ಛಿನ್ನಂ ಸೂಕ್ಷ್ಮತರಮನುಭವರೂಪಮ್ ॥ ೫೪ ॥**

[ಗುಣರಹಿತಂ–ಗುಣಗಳಿಲ್ಲದ್ದಾಗಿಯೂ, ಕಾಮನಾರಹಿತಂ–ಕಾಮವಿಲ್ಲದ್ದಾಗಿಯೂ, ಪ್ರತಿಕ್ಷಣಂ ವರ್ಧಮಾನಮ್ – ಪ್ರತಿಕ್ಷಣವೂ ಬೆಳೆಯತಕ್ಕದ್ದಾಗಿಯೂ, ಅವಿಚ್ಛಿನ್ನಂ–ಕಡಿವಡೆಯದ್ದಾಗಿಯೂ, ಸೂಕ್ಷ್ಮತರಂ–ಬಹಳ ಸೂಕ್ಷ್ಮವಾಗಿರುವದಾಗಿಯೂ, ಅನುಭವ ರೂಪಮ್–ಅನುಭವರೂಪವಾಗಿಯೂ (ಇರುವದು).]

೫೪. (ಅದು) ಸತ್ತ್ವರಜಸ್ತಮೋಗುಣಗಳ ಸಂಬಂಧವಿಲ್ಲದ್ದು, ಕಾಮವಿಲ್ಲದ್ದು, ಕ್ಷಣಕ್ಷಣಕ್ಕೂ ಬೆಳೆಯುತ್ತಿರತಕ್ಕದ್ದು, ಕಡಿವಡೆಯದೆ ಇರುವದು, ಬಹಳ ಸೂಕ್ಷ್ಮವಾಗಿರುವದು, ಅನುಭವರೂಪವಾಗಿರುವದು.

**ತತ್ಪ್ರಾಪ್ಯ ತದೇವಾಲೋಕಯತಿ, ತದೇವ ಶೃಣೋತಿ, ತದೇವ ಭಾಷಯತಿ, ತದೇವ ಚಿನ್ತಯತಿ ॥ ೫೫ ॥**

[ತತ್ಪ್ರಾಪ್ಯ–ಅದನ್ನು ಪಡೆದುಕೊಂಡು, ತದೇವ–ಅದನ್ನೇ, ಆಲೋಕಯತಿ–ನೋಡುತ್ತಾನೆ, ತದೇವ–ಅದನ್ನೇ, ಶೃಣೋತಿ–ಕೇಳುತ್ತಾನೆ, ತದೇವ–ಅದನ್ನೇ, ಭಾಷಯತಿ (?)–ಮಾತನಾಡುತ್ತಾನೆ, ತದೇವ–ಅದನ್ನೇ, ಚಿನ್ತಯತಿ–ಆಲೋಚಿಸುತ್ತಾನೆ.]

---

1. 'ಪ್ರಕಾಶ್ಯತೇ' ಎಂದು ಪಾಠ.

೫೫. ಆ ಪ್ರೇಮವನ್ನು ಪಡೆದುಕೊಂಡವನು ಪ್ರೇಮವೇ ಆಗಿಬಿಡುವದರಿಂದ ಅವನಿಗೆ ಸರ್ವವೂ ಪ್ರೇಮಮಯವಾಗಿಬಿಡುವದು. ಅವನ ಮಾತು, ನೋಟ, ಆಲೋಚನೆ- ಎಲ್ಲವೂ ಪ್ರೇಮದಲ್ಲಿ ಒಂದಾಗಿರುವದು.

**ಗೌಣೀ ತ್ರಿಧಾ ಗುಣಭೇದಾದಾರ್ತಾದಿಭೇದಾದ್ವಾ || ೫೬ ||**

[ಗೌಣೀ-ಗೌಣಭಕ್ತಿಯು, ಗುಣಭೇದಾತ್-ಗುಣಗಳ ಭೇದದಿಂದ, ಆರ್ತಾದಿಭೇದಾದ್ವಾ- ಅಥವಾ ಆರ್ತನೇ ಮುಂತಾದ ಭೇದದಿಂದ, ತ್ರಿಧಾ- ಮೂರು ವಿಧವಾಗಿದೆ.]

೫೬. ಗೌಣಭಕ್ತಿಯು ಸತ್ತ್ವರಜಸ್ತಮಗಳೆಂಬ ಗುಣಗಳು ಪ್ರಧಾನವಾಗಿರುವದರಿಂದಲೋ, ಆರ್ತ, ಜಿಜ್ಞಾಸು, ಅರ್ಥಾರ್ಥಿ- ಎಂಬ ಭೇದದಿಂದಲೋ ಮೂರು ಬಗೆ.

**ಉತ್ತರಸ್ಮಾದುತ್ತರಸ್ಮಾತ್ ಪೂರ್ವಪೂರ್ವಾ ಶ್ರೇಯಾಯ ಭವತಿ || ೫೭ ||**

[ಉತ್ತರಸ್ಮಾತ್, ಉತ್ತರಸ್ಮಾತ್-ಮುಂದಿನಮುಂದಿನಕ್ಕಿಂತ, ಪೂರ್ವಪೂರ್ವಾ- ಹಿಂದುಹಿಂದಿನದು, ಶ್ರೇಯಾಯ-ಶ್ರೇಯಸ್ಸಿಗೆ, ಭವತಿ-ಆಗುವದು.]

೫೭. ಈ ಭಕ್ತಿಗಳೊಳಗೆ, ಮುಂದೆಮುಂದೆ ಹೇಳಿರುವ ಭಕ್ತಿಗಿಂತ ಅದರ ಹಿಂದೆಹಿಂದೆ ಹೇಳಿರುವ ಭಕ್ತಿಯು ಶ್ರೇಯಸ್ಸಿಗೆ ಹೆಚ್ಚಿನ ಕಾರಣವಾಗಿರುತ್ತದೆ.

**ಅನ್ಯಸ್ಮಾತ್ ಸೌಲಭ್ಯಂ ಭಕ್ತೌ || ೫೮ ||**

[ಭಕ್ತೌ-ಭಕ್ತಿಯಲ್ಲಿ, ಅನ್ಯಸ್ಮಾತ್-ಮತ್ತೊಂದಕ್ಕಿಂತ, ಸೌಲಭ್ಯಮ್-ಸೌಲಭ್ಯವು.]

೫೮. ಭಕ್ತಿಯು ಮಿಕ್ಕ ಸಾಧನವೆಲ್ಲಕ್ಕಿಂತಲೂ ಸುಲಭವಾಗಿರುತ್ತದೆ.

**ಪ್ರಮಾಣಾನ್ತರಸ್ಯಾನಪೇಕ್ಷತ್ವಾತ್[1] ಸ್ವಯಂಪ್ರಮಾಣತ್ವಾತ್ || ೫೯ ||**

[ಪ್ರಮಾಣಾನ್ತರಸ್ಯ-ಮತ್ತೊಂದು ಪ್ರಮಾಣದ, ಅನಪೇಕ್ಷತ್ವಾತ್-ಅಪೇಕ್ಷೆಯಿಲ್ಲದ್ದರಿಂದ ; ಸ್ವಯಂಪ್ರಮಾಣತ್ವಾತ್-ತಾನೇ ಪ್ರಮಾಣವಾಗಿರುವದರಿಂದ.]

೫೯. ಏಕೆಂದರೆ (ಭಕ್ತನಿಗೆ) ಮತ್ತೊಂದು ಪ್ರಮಾಣದ ಅಪೇಕ್ಷೆಯಿರುವದಿಲ್ಲ, (ಇದು) ತನಗೆತಾನೇ ಪ್ರಮಾಣವಾಗಿರುತ್ತದೆ.

**ಶಾನ್ತಿರೂಪಾತ್ ಪರಮಾನನ್ದರೂಪಾಚ್ಚ || ೬೦ ||**

[ಶಾನ್ತಿರೂಪಾತ್-ಶಾಂತಿಯ ರೂಪವುಳ್ಳದ್ದಾಗಿರುವದರಿಂದಲೂ, ಪರಮಾನನ್ದರೂಪಾತ್ ಚ-ಪರಮಾನಂದದ ರೂಪವುಳ್ಳದ್ದಾಗಿರುವದರಿಂದಲೂ.]

೬೦. (ಭಕ್ತಿಯು) ಶಾಂತಿಯ ಸ್ವಭಾವವಾದದ್ದರಿಂದಲೂ ಪರಮಾನಂದದ ಸ್ವಭಾವದ್ದಾದ್ದರಿಂದಲೂ (ಇದರಲ್ಲಿ) ಹೆಚ್ಚಿನ ಸೌಲಭ್ಯವಿದೆ.

1. 'ಪ್ರಮಾಣಾನ್ತರಾನಪೇಕ್ಷತ್ವಾತ್' ಎಂದಾಗಲಿ 'ಪ್ರಮಾಣಾನ್ತರಸ್ಯ ಅನಪೇಕ್ಷತ್ವಾತ್' ಎಂದಾಗಲಿ ಅಕ್ಷರವಿನ್ಯಾಸವಿದ್ದರೆ ಚೆನ್ನಾಗಿರುತ್ತೆಂದು ಕೆಲವರು ಹೇಳುತ್ತಾರೆ.

**ಲೋಕಹಾನೌ ಚಿನ್ತಾ ನ ಕಾರ್ಯಾ ನಿವೇದಿತಾತ್ಮಲೋಕವೇದತ್ವಾತ್ ॥**

[ಲೋಕಹಾನೌ-ಲೋಕವು ಹಾಳಾದರೆ, ಚಿನ್ತಾ-ಯೋಚನೆಯು, ನ ಕಾರ್ಯಾ-ಮಾಡಲ್ಪಡತಕ್ಕದ್ದಲ್ಲ, ನಿವೇದಿತಾತ್ಮಲೋಕವೇದತ್ವಾತ್, ಏಕೆಂದರೆ (ಭಕ್ತನು) ತಾನು ಲೋಕ, ವೇದ-ಇವುಗಳನ್ನು ಅರ್ಪಣೆಮಾಡಿದವನಾಗಿರುತ್ತಾನೆ.]

೬೧. ಭಕ್ತನಾದವನು ಲೋಕದ ಯೋಗಕ್ಷೇಮಗಳ ಚಿಂತೆಯನ್ನು ಮನಸ್ಸಿಗೆ ಹತ್ತಿಸಿಕೊಳ್ಳಬಾರದು, ಏಕೆಂದರೆ ತನ್ನನ್ನೂ, ತನ್ನ ಯೋಗಕ್ಷೇಮವನ್ನೂ, ವೇದವನ್ನೂ ಭಗವಂತನಿಗೆ ಅರ್ಪಿಸಿಬಿಟ್ಟಿರುತ್ತಾನೆ.

**ನ ತದಸಿದ್ಧೌ ಲೋಕವ್ಯವಹಾರೋ ಹೇಯಃ, ಕಿಂ ತು ಫಲತ್ಯಾಗಸ್ತತ್ಸಾಧನಂ ಚ ಕಾರ್ಯಮೇವ ॥ ೬೨ ॥**

[ತದಸಿದ್ಧೌ-ಅದು ಸಿದ್ಧಿಯಾಗದೆ ಇರುವಲ್ಲಿ, ಲೋಕವ್ಯವಹಾರಃ-ಲೋಕದ ವ್ಯವಹಾರವು, ನ ಹೇಯಃ-ಬಿಡತಕ್ಕದ್ದಲ್ಲ ; ಕಿಂ ತು-ಮತ್ತೇನೆಂದರೆ, ಫಲತ್ಯಾಗಃ-ಫಲತ್ಯಾಗವೂ ತತ್ಸಾಧನಂ ಚ-ಅದರ ಸಾಧನವೂ, ಕಾರ್ಯಮೇವ-ಮಾಡಲ್ಪಡತಕ್ಕದ್ದೇ.]

೬೨. (ಗೌಣಭಕ್ತಿಯು) ಇನ್ನೂ ಸಿದ್ಧಿಯಾಗದೆ ಇರುವಾಗ ಲೋಕಸಮ್ಮತವಾದ ವ್ಯವಹಾರವನ್ನು ಬಿಡಬಾರದು, ಸರ್ವಕರ್ಮಗಳನ್ನೂ ಫಲತ್ಯಾಗಪೂರ್ವಕವಾಗಿ ಮಾಡುತ್ತಾ ಆ (ಭಕ್ತಿಯ) ಸಾಧನಗಳನ್ನು ಮಾಡುತ್ತಲೇಇರಬೇಕು.

**ಸ್ತ್ರೀಧನನಾಸ್ತಿಕಚರಿತ್ರಂ ನ ಶ್ರವಣೀಯಮ್ ॥ ೬೩ ॥**

[ಸ್ತ್ರೀಧನನಾಸ್ತಿಕಚರಿತ್ರಮ್-ಹೆಂಗಸರ, ಧನದ ಮತ್ತು ನಾಸ್ತಿಕರ ನಡತೆಯು, ನ ಶ್ರವಣೀಯಮ್-ಕೇಳಲ್ಪಡತಕ್ಕದ್ದಲ್ಲ.]

೬೩. ಹೆಂಗಸರ ವಿಷಯದ ಮಾತನ್ನಾಗಲಿ ಧನದ ವಿಚಾರದ ಮಾತನ್ನಾಗಲಿ ನಾಸ್ತಿಕರ ನಡತೆಯ ಸುದ್ದಿಯನ್ನಾಗಲಿ ಕೇಳಬಾರದು.

**ಅಭಿಮಾನದಮ್ಭಾದಿಕಂ ತ್ಯಾಜ್ಯಮ್ ॥ ೬೪ ॥**

[ಅಭಿಮಾನದಮ್ಭಾದಿಕಂ-ಅಭಿಮಾನ, ಡಂಭ- ಇವೇ ಮೊದಲಾದದ್ದು, ತ್ಯಾಜ್ಯಮ್-ಬಿಡಲ್ಪಡಬೇಕು.]

೬೪. ಅಭಿಮಾನ, ದಂಭ- ಮುಂತಾದ (ದುರ್ಗುಣಗಳನ್ನು) ಬಿಡಬೇಕು.

**ತದರ್ಪಿತಾಖಿಲಾಚಾರಃ ಸನ್ ಕಾಮಕ್ರೋಧಾಭಿಮಾನಾದಿಕಂ ತಸ್ಮಿನ್ನೇವ ಕರಣೀಯಮ್[1] ॥ ೬೫ ॥**

[ತದರ್ಪಿತಾಖಿಲಾಚಾರಃ ಸನ್-ಆತನಲ್ಲಿ ಅರ್ಪಿಸಲ್ಪಟ್ಟ ಸಕಲಾಚಾರಗಳುಳ್ಳವನಾಗಿ, ಕಾಮಕ್ರೋಧಾಭಿಮಾನಾದಿಕಂ-ಕಾಮ, ಕ್ರೋಧ, ಅಭಿಮಾನ- ಮುಂತಾದವುಗಳನ್ನು, ತಸ್ಮಿನ್ನೇವ-ಆತನಲ್ಲಿಯೇ, ಕರಣೀಯಮ್ (= ಕುರ್ಯಾತ್) ಮಾಡುತ್ತಿರಬೇಕು.]

---

1. 'ಕುರ್ಯಾತ್' ಎಂದಿದ್ದರೆ ಅನ್ವಯವು ಸರಿಯಾಗುತ್ತಿತ್ತು. ಮುದ್ರಿತಪುಸ್ತಕಗಳ ಪಾಠವೇನೋ ಹೀಗೆಯೇ ಇದೆ.

೬೫. ಎಲ್ಲಾ ಆಚಾರಗಳನ್ನೂ ಆತನಿಗೇ ಅರ್ಪಿಸಿದವನಾಗಿ ಕಾಮ, ಕ್ರೋಧ, ಅಭಿಮಾನ- ಮುಂತಾದವುಗಳನ್ನು ಆತನಲ್ಲಿಯೇ ಮಾಡುತ್ತಿರಬೇಕು.

**ತ್ರಿರೂಪಭಙ್ಗಪೂರ್ವಕಂ ನಿತ್ಯದಾಸ್ಯನಿತ್ಯಕಾನ್ತಾಭಜನಾತ್ಮಕಂ ಪ್ರೇಮ ಕಾರ್ಯಂ ಪ್ರೇಮೈವ ಕಾರ್ಯಮ್ ॥ ೬೬ ॥**

[ತ್ರಿರೂಪಭಙ್ಗಪೂರ್ವಕಮ್-ಮೂರು ರೂಪಗಳನ್ನು ನಾಶಪಡಿಸಿಕೊಂಡು, ನಿತ್ಯದಾಸ್ಯ ನಿತ್ಯಕಾನ್ತಾಭಜನಾತ್ಮಕಮ್ - ನಿತ್ಯದಾಸ್ಯಭಜನ ಮತ್ತು ನಿತ್ಯಕಾಂತಾಭಜನರೂಪವಾದ, ಪ್ರೇಮ – ಪ್ರೇಮವು, ಕಾರ್ಯಮ್-ಮಾಡಲ್ಪಡತಕ್ಕದ್ದು, ಪ್ರೇಮೈವ – ಪ್ರೇಮವೇ, ಕಾರ್ಯಮ್-ಮಾಡಲ್ಪತಕ್ಕದ್ದು.]

೬೬. ಭಯ, ಕಾಮ, ಸಾತಿಶಯತ್ವ ಎಂಬ ಅಥವಾ ಪ್ರೇಮ, ಪ್ರೇಮವನ್ನು ಮಾಡುವವನು, ಪ್ರೇಮವಿಷಯ- ಎಂಬ ಮೂರು ರೂಪಗಳನ್ನು ತ್ಯಜಿಸಿದ ಪ್ರೇಮವನ್ನೇ ಮಾಡಬೇಕು ; ಪ್ರೇಮವನ್ನೇ ಮಾಡಬೇಕು.

**ಭಕ್ತಾ ಏಕಾನ್ತಿನೋ ಮುಖ್ಯಾಃ ॥ ೬೭ ॥**

[ಏಕಾನ್ತಿನಃ-ಏಕಾಂತಿಗಳಾದ, ಭಕ್ತಾಃ-ಭಕ್ತರು, ಮುಖ್ಯಾಃ-ಮುಖ್ಯರು.]

೬೭. ಏಕಾಂತ(ನಿಯತ)ವಾದ ಭಕ್ತಿಯುಳ್ಳವರು ಮುಖ್ಯಭಕ್ತರು.

**ಕಣ್ಠಾವರೋಧರೋಮಾಞ್ಚಾಶ್ರುಭಿಃ ಪರಸ್ಪರಂ ಲಪಮಾನಾಃ ಪಾವಯನ್ತಿ ಕುಲಾನಿ ಪೃಥಿವೀಂ ಚ ॥ ೬೮ ॥**

[ಕಣ್ಠಾವರೋಧರೋಮಾಞ್ಚಾಶ್ರುಭಿಃ-ಗಂಟಲುಕಟ್ಟುವದು, ಮೈನವಿರೇಳುವದು, ಕಂಬನಿಯನ್ನು ಸುರಿಸುವದು- ಇವುಗಳಿಂದ, ಪರಸ್ಪರಂ-ಅನ್ಯೋನ್ಯವಾಗಿ, ಲಪಮಾನಾಃ- ಮಾತನಾಡುತ್ತಾ, ಕುಲಾನಿ-ಕುಲಗಳನ್ನೂ, ಪೃಥಿವೀಂ ಚ-ಭೂಮಿಯನ್ನೂ, ಪಾವಯನ್ತಿ- ಪವಿತ್ರಗೊಳಿಸುವರು.]

೬೮. ಏಕಾಂತಿಭಕ್ತರು ಪ್ರೇಮದಿಂದ ಕರಗಿದ ಚಿತ್ತದಿಂದ ಗಂಟಲುಕಟ್ಟಿ, ಮೈನವಿರೇಳುತ್ತಿದ್ದು, ಆನಂದಬಾಷ್ಪವನ್ನು ಸುರಿಸುತ್ತಾ ಭೂಮಂಡಲವನ್ನೂ ಕುಲಗಳನ್ನೂ ಪಾವನಗೊಳಿಸುತ್ತಿರುವರು.

**ತೀರ್ಥೀಕುರ್ವನ್ತಿ ತೀರ್ಥಾನಿ ಸುಕರ್ಮೀಕುರ್ವನ್ತಿ ಕರ್ಮಾಣಿ ಸಚ್ಛಾಸ್ತ್ರೀಕುರ್ವನ್ತಿ ಶಾಸ್ತ್ರಾಣಿ ॥ ೬೯ ॥**

[ತೀರ್ಥಾನಿ – ತೀರ್ಥಗಳನ್ನು, ತೀರ್ಥೀಕುರ್ವನ್ತಿ – ತೀರ್ಥಗಳಾಗಿ ಮಾಡುವರು, ಕರ್ಮಾಣಿ – ಕರ್ಮಗಳನ್ನು, ಸುಕರ್ಮೀಕುರ್ವನ್ತಿ – ಸತ್ಕರ್ಮಗಳಾಗಿ ಮಾಡುವರು, ಶಾಸ್ತ್ರಾಣಿ–ಶಾಸ್ತ್ರಗಳನ್ನು, ಸಚ್ಛಾಸ್ತ್ರೀಕುರ್ವನ್ತಿ–ಉತ್ತಮವಾದ ಶಾಸ್ತ್ರಗಳಾಗಿ ಮಾಡುತ್ತಾರೆ.]

೬೯. (ಆ ಭಕ್ತರು) ತೀರ್ಥಗಳನ್ನು ತೀರ್ಥಗಳೆನಿಸುವರು, ಕರ್ಮಗಳನ್ನು ಸತ್ಕರ್ಮಗಳೆನಿಸುವರು, ಶಾಸ್ತ್ರಗಳನ್ನು ಸಚ್ಛಾಸ್ತ್ರಗಳೆನಿಸುವರು.

## ತನ್ಮಯಾಃ ॥ ೭೦ ॥

[ತನ್ಮಯಾಃ–ಭಗವನ್ಮಯರು.]

೭೦. ಅವರು ಭಗವನ್ಮಯನಾಗಿರುತ್ತಾರೆ.

## ಮೋದನ್ತೇ ಪಿತರೋ ನೃತ್ಯನ್ತಿ ದೇವತಾಃ ಸನಾಥಾ ಚೇಯಂ ಭೂರ್ಭವತಿ ॥ ೭೧ ॥

[ಪಿತರಃ–ಪಿತೃಗಳು, ಮೋದನ್ತೇ–ಪ್ರೀತಿಯನ್ನು ಪಡೆಯುತ್ತಾರೆ; ದೇವತಾಃ–ದೇವತೆಗಳು, ನೃತ್ಯನ್ತಿ–ಕುಣಿದಾಡುತ್ತಾರೆ; ಇಯಂ ಭೂಃ–ಈ ಭೂಮಿಯು, ಸನಾಥಾ ಚ–ನಾಥರುಳ್ಳದ್ದಾಗಿ, ಭವತಿ–ಆಗುತ್ತದೆ.]

೭೧. ಇವರಿಂದ ಪಿತೃಗಳು ಹರ್ಷಿತರಾಗುತ್ತಾರೆ, ದೇವತೆಗಳು ಕುಣಿದಾಡುತ್ತಾರೆ, ಭೂಲೋಕವೂ ಸನಾಥವೆನಿಸುವದು.

## ನಾಸ್ತಿ ತೇಷು ಜಾತಿವಿದ್ಯಾರೂಪಕುಲಧನಕ್ರಿಯಾದಿಭೇದಃ ॥ ೭೨ ॥

[ತೇಷು–ಅವರಲ್ಲಿ, ಜಾತಿವಿದ್ಯಾರೂಪಕುಲಧನಕ್ರಿಯಾದಿಭೇದಃ–ಜಾತಿ, ವಿದ್ಯೆ, ರೂಪ, ಕುಲ, ಧನ, ಕರ್ಮ– ಮುಂತಾದವುಗಳಿಂದಾದ ಭೇದವು, ನಾಸ್ತಿ–ಇರುವದಿಲ್ಲ.]

೭೨. ಅವರಲ್ಲಿ ಜಾತಿ, ವಿದ್ಯೆ, ರೂಪ, ಕುಲ, ಧನ, ಕರ್ಮ– ಮುಂತಾದವುಗಳಿಂದಾದ ಭೇದವೂ ಇರುವದಿಲ್ಲ; ಅವರು ಜಾತಿಯೇ ಮುಂತಾದವುಗಳಿಂದಾಗಿರುವ ಭೇದವನ್ನು ಎತ್ತಿ ಎಣಿಸುವದೂ ಇಲ್ಲ.

## ಯತಸ್ತದೀಯಾಃ ॥ ೭೩ ॥

[ಯತಃ–ಏಕೆಂದರೆ, ತದೀಯಾಃ–ಆತನವರು.]

೭೩. ಏಕೆಂದರೆ (ಅವರು) ಆತನವರು.

## ವಾದೋ ನಾವಲಮ್ಬ್ಯಃ ॥ ೭೪ ॥

[ವಾದಃ–ವಾದವು, ನ ಅವಲಮ್ಬ್ಯಃ–ಆಶ್ರಯಿಸಲ್ಪಡತಕ್ಕದ್ದಲ್ಲ.]

೭೪. ಚರ್ಚೆಯನ್ನು ಆಶ್ರಯಿಸಬಾರದು.

## ಬಾಹುಲ್ಯಾವಕಾಶತ್ವಾದನಿಯತತ್ವಾತ್ ॥ ೭೫ ॥

[ಬಾಹುಲ್ಯಾವಕಾಶತ್ವಾತ್–ಬಹಳವಾಗುವದಕ್ಕೆ ಅವಕಾಶವನ್ನುಳ್ಳದ್ದಾಗಿರುವದರಿಂದ ಅನಿಯತತ್ವಾತ್–ಗೊತ್ತಾಗಿರುವದಿಲ್ಲವಾದ್ದರಿಂದ.]

೭೫. ಏಕೆಂದರೆ ವಾದವು ಬೆಳೆಯುತ್ತಾಹೋಗುವದಕ್ಕೆ ಅವಕಾಶವನ್ನು (ಕೊಡುವಂಥದ್ದು), ಮತ್ತು ನಿಲುಗಡೆಯಿಲ್ಲದ್ದು.

## ಭಕ್ತಿಶಾಸ್ತ್ರಾಣಿ ಮನನೀಯಾನಿ ತದುದ್ಬೋಧಕಕರ್ಮಾಣಿ ಕರಣೀಯಾನಿ ॥ ೭೬ ॥

[ಭಕ್ತಿಶಾಸ್ತ್ರಾಣಿ-ಭಕ್ತಿಶಾಸ್ತ್ರಗಳು, ಮನನೀಯಾನಿ-ಮನನಮಾಡಲ್ಪಡತಕ್ಕವು, ತದುದ್ಬೋಧಕಕರ್ಮಾಣಿ-ಅದನ್ನು ಎಚ್ಚರಿಸುವ ಕರ್ಮಗಳು, ಕರಣೀಯಾನಿ-ಮಾಡಲ್ಪಡತಕ್ಕವು.]

೭೬. ಭಕ್ತಿಶಾಸ್ತ್ರಗಳನ್ನು ಮನನಮಾಡುತ್ತಿರಬೇಕು, (ಭಕ್ತಿಯನ್ನು) ಎಬ್ಬಿಸುವ ಕರ್ಮಗಳನ್ನು ಮಾಡುತ್ತಿರಬೇಕು.

## ಸುಖದುಃಖೇಚ್ಛಾಲಾಭಾದಿತ್ಯಕ್ತೇ ಕಾಲೇ ಪ್ರತೀಕ್ಷ್ಯಮಾಣೇ ಕ್ಷಣಾರ್ಧಮಪಿ ವ್ಯರ್ಥಂ ನ ನೇಯಮ್ ॥ ೭೭ ॥

[ಸುಖದುಃಖೇಚ್ಛಾಲಾಭಾದಿತ್ಯಕ್ತೇ-ಸುಖ, ದುಃಖ, ಇಚ್ಛೆ, ಲಾಭ- ಮುಂತಾದವುಗಳಿಂದ ಬಿಡಲ್ಪಟ್ಟ, ಕಾಲೇ- ಕಾಲವು, ಪ್ರತೀಕ್ಷ್ಯಮಾಣೇ-ನಿರೀಕ್ಷಿಸಿಕೊಳ್ಳಲ್ಪಟ್ಟಿರುವಲ್ಲಿ ಕ್ಷಣಾರ್ಧಮಪಿ-ಅರ್ಧಕ್ಷಣವು ಕೂಡ, ವ್ಯರ್ಥಂ-ವ್ಯರ್ಥವಾಗಿ, ನ ನೇಯಮ್-ಕಳೆಯತಕ್ಕದ್ದಲ್ಲ.]

೭೭. ಸುಖದುಃಖಗಳು, ಇಚ್ಛೆ, ಲಾಭ- ಮುಂತಾದವುಗಳಿಲ್ಲದ ಕಾಲವನ್ನೇ (ಮುಮುಕ್ಷುವಾದವನು) ಕಾಯ್ದುಕೊಂಡಿರುವದರಿಂದ (ಸಾಧಕನಾದವನು) ಅರ್ಧಕ್ಷಣವನ್ನೂ ವ್ಯರ್ಥವಾಗಿ ಕಳೆಯಬಾರದು.

## ಅಹಿಂಸಾಸತ್ಯಶೌಚದಯಾಸ್ತಿಕ್ಯಾದಿಚರಿತ್ರಾಣಿ ಪಾಲನೀಯಾನಿ ॥

[ಅಹಿಂಸಾಸತ್ಯಶೌಚದಯಾಸ್ತಿಕ್ಯಾದಿಚರಿತ್ರಾಣಿ-ಅಹಿಂಸೆ, ಸತ್ಯ, ಶುಚಿತ್ವ, ದಯೆ, ಆಸ್ತಿಕ್ಯ- ಇವೇ ಮುಂತಾದ ನಡತೆಗಳು, ಪಾಲನೀಯಾನಿ, ಕಾಪಾಡಿಕೊಳ್ಳಲ್ಪಡತಕ್ಕವು.]

೭೮. ಅಹಿಂಸೆ, ಸತ್ಯ, ಶುಚಿತ್ವ, ದಯೆ, ಆಸ್ತಿಕ್ಯ- ಮುಂತಾದ ನಡತೆಗಳನ್ನು ಕಾಪಾಡಿಕೊಳ್ಳಬೇಕು.

## ಸರ್ವದಾ ಸರ್ವಭಾವೇನ ನಿಶ್ಚಿನ್ತೈರ್ಭಗವಾನೇವ ಭಜನೀಯಃ ॥ ೭೯ ॥

[ಸರ್ವದಾ-ಯಾವಾಗಲೂ, ಸರ್ವಭಾವೇನ-ಸರ್ವಭಾವದಿಂದ, ಭಗವಾನೇವ-ಭಗವಂತನೇ, ನಿಶ್ಚಿನ್ತೈಃ-ಯಾವ ಯೋಚನೆಯೂ ಇಲ್ಲದೆ, ಭಜನೀಯಃ-ಭಜಿಸಲ್ಪಡತಕ್ಕವನು.]

೭೯. ಯಾವ ಯೋಚನೆಯನ್ನೂ ಮನಸ್ಸಿಗೆ ಹತ್ತಿಸಿಕೊಳ್ಳದೆ ಕಾಣುವದೆಲ್ಲವೂ ಭಗವಂತನೇ ಎಂದು ಆತನನ್ನೇ ಭಜಿಸುತ್ತಿರಬೇಕು.

## ಸಙ್ಕೀರ್ತ್ಯಮಾನಃ ಶೀಘ್ರಮೇವಾವಿರ್ಭವತ್ಯನುಭಾವಯತಿ ಭಕ್ತಾನ್ ॥

[ಸಙ್ಕೀರ್ತ್ಯಮಾನಃ-ಸಂಕೀರ್ತನಮಾಡಲ್ಪಡುತ್ತಿರುವನಾಗಿ, ಶೀಘ್ರಮೇವ-ಶೀಘ್ರದಲ್ಲಿಯೇ, ಆವಿರ್ಭವತಿ-ತೋರಿಕೊಳ್ಳುತ್ತಾನೆ, ಭಕ್ತಾನ್-ಭಕ್ತರನ್ನು ಅನುಭಾವಯತಿ-ಅನುಭವಿಸುವಂತೆ ಮಾಡುತ್ತಾನೆ.]

೮೦. ಸಂಕೀರ್ತನೆಮಾಡುತ್ತಲೇ ಇದ್ದರೆ, ಶೀಘ್ರವಾಗಿಯೇ ಭಗವಂತನು ನ್ಯೆದೋರಿ ಭಕ್ತರನ್ನು ಅನುಭವದಿಂದ ಅನುಗ್ರಹಿಸುತ್ತಾನೆ.

**ತ್ರಿಸತ್ಯಸ್ಯ ಭಕ್ತಿರೇವ ಗರೀಯಸೀ ಭಕ್ತಿರೇವ ಗರೀಯಸೀ ॥ ೮೧ ॥**

[ತ್ರಿಸತ್ಯಸ್ಯ-ಮೂರು ಸತ್ಯಕ್ಕೂ, ಭಕ್ತಿರೇವ-ಭಕ್ತಿಯೇ, ಗರೀಯಸೀ-ಹೆಚ್ಚು ದೊಡ್ಡದು, ಭಕ್ತಿರೇವ-ಭಕ್ತಿಯೇ, ಗರೀಯಸೀ-ದೊಡ್ಡದು.]

೮೧. ಮೂರು ಸತ್ಯಕ್ಕೂ ಭಕ್ತಿಯೇ ದೊಡ್ಡದು, ಭಕ್ತಿಯೇ ಎಲ್ಲಕ್ಕಿಂತಲೂ ದೊಡ್ಡದು.

**ಗುಣಮಾಹಾತ್ಮ್ಯಸಕ್ತಿ-ರೂಪಾಸಕ್ತಿ-ಪೂಜಾಸಕ್ತಿ-ಸ್ಮರಣಾಸಕ್ತಿ-ದಾಸ್ಯಾಸಕ್ತಿ-ಸಖ್ಯಾಸಕ್ತಿ-ವಾತ್ಸಲ್ಯಾಸಕ್ತಿ-ಕಾನ್ತಾಸಕ್ತಿ-ಆತ್ಮನಿವೇದನಾಸಕ್ತಿ-ತನ್ಮಯತಾಸಕ್ತಿ-ಪರಮವಿರಹಾಸಕ್ತಿರೂಪೈಕಧಾಪ್ಯೇಕಾದಶಧಾ ಭವತಿ ॥ ೮೨ ॥**

[ಗುಣಮಾಹಾತ್ಮ್ಯಸಕ್ತಿ-ಗುಣಮಾಹಾತ್ಮ್ಯೆಯ ಆಸಕ್ತಿ, ರೂಪಾಸಕ್ತಿ- ರೂಪದ ಆಸಕ್ತಿ, ಪೂಜಾಸಕ್ತಿ-ಪೂಜೆಯಲ್ಲಿ ಆಸಕ್ತಿ, ಸ್ಮರಣಾಸಕ್ತಿ-ಸ್ಮರಣೆಯಲ್ಲಿ ಆಸಕ್ತಿ-ದಾಸ್ಯಾಸಕ್ತಿ ಸೇವೆಯಲ್ಲಿ ಆಸಕ್ತಿ, ಸಖ್ಯಾಸಕ್ತಿ-ಸ್ನೇಹನಿಮಿತ್ತವಾದ ಆಸಕ್ತಿ, ವಾತ್ಸಲ್ಯಾಸಕ್ತಿ-ಮಕ್ಕಳ ಪ್ರೀತಿನಿಮಿತ್ತವಾದ ಆಸಕ್ತಿ, ಕಾನ್ತಾಸಕ್ತಿ-ಪತ್ನಿಗೆ ಪತಿಯಲ್ಲಿರುವ ಪ್ರೇಮದಂಥ ಆಸಕ್ತಿ, ಆತ್ಮನಿವೇದನಾಸಕ್ತಿ-ತನ್ನನ್ನೇ ಸಮರ್ಪಿಸಿಕೊಳ್ಳುವ ಆಸಕ್ತಿ, ತನ್ಮಯತಾಸಕ್ತಿ-ಅವನೇ ತಾನಾಗಿ ಬಿಡುವ ಆಸಕ್ತಿ, ಪರಮವಿರಹಾಸಕ್ತಿ-ಅತನ ಅಗಲುವಿಕೆಯಿಂದಾದ ತೀವ್ರತೆಯ ಆಸಕ್ತಿ (ಹೀಗೆ), ರೂಪಾ-ರೂಪವುಳ್ಳ, ಏಕಧಾಪಿ-ಒಂದೇ ಆಗಿದ್ದರೂ, ಏಕಾದಶಧಾ-ಹನ್ನೊಂದು ಬಗೆಯಾಗಿ, ಭವತಿ-ಆಗುತ್ತದೆ.]

೮೨. ಗುಣಮಾಹಾತ್ಮ್ಯಸಕ್ತಿ, ರೂಪಾಸಕ್ತಿ, ಪೂಜಾಸಕ್ತಿ, ಸ್ಮರಣಾಸಕ್ತಿ, ದಾಸ್ಯಾಸಕ್ತಿ, ಸಖ್ಯಾಸಕ್ತಿ, ವಾತ್ಸಲ್ಯಾಸಕ್ತಿ, ಕಾಂತಾಸಕ್ತಿ, ಆತ್ಮನಿವೇದನಾಸಕ್ತಿ, ತನ್ಮಯತಾಸಕ್ತಿ, ಪರಮವಿರಹಾಸಕ್ತಿ ಎಂಬ ಬೇರೆಬೇರೆಯ ರೂಪವುಳ್ಳದ್ದಾಗಿ - (ನಿಜವಾಗಿ) ಒಂದೇ ರೂಪದ್ದಾದರೂ- (ಭಕ್ತಿಯು) ಹನ್ನೊಂದು ಬಗೆಯುಳ್ಳದ್ದಾಗಿರುತ್ತದೆ.

**ಇತ್ಯೇವಂ ವದನ್ತಿ ಜನಜಲ್ಪನಿರ್ಭಯಾಃ ಏಕಮತಾಃ ಕುಮಾರ-ವ್ಯಾಸ-ಶುಕ-ಶಾಣ್ಡಿಲ್ಯ-ಗರ್ಗ-ವಿಷ್ಣು-ಕೌಣ್ಡಿನ್ಯ-ಶೇಷೋದ್ಧವಾರುಣಿ-ಬಲಿ-ಹನುಮದ್ವಿಭೀಷಣಾದಯೋ ಭಕ್ತ್ಯಾಚಾರ್ಯಾಃ ॥ ೮೩ ॥**

[ಇತಿ-ಹೀಗೆಂದು, ಜನಜಲ್ಪನಿರ್ಭಯಾಃ-ಜನರ ಹರಟೆಗೆ ಅಂಜದೆ ಇರುವ, ಏಕಮತಾಃ-ಒಂದೇ ಅಭಿಪ್ರಾಯವುಳ್ಳವರಾದ, ಕುಮಾರಃ....ವಿಭೀಷಣಾದಯಃ-ಕುಮಾರವ್ಯಾಸ.... -ವಿಭೀಷಣ ಮುಂತಾದ, ಭಕ್ತ್ಯಾಚಾರ್ಯಾಃ-ಭಕ್ತ್ಯಾಚಾರ್ಯರು, ವದನ್ತಿ-ಹೆ ತ್ತಿರೆ.]

೮೩. ಹೀಗೆಂದು ಸನತ್ಕುಮಾರ, ವ್ಯಾಸ, ಶುಕ, ಶಾಂಡಿಲ್ಯ, ಗರ್ಗ, ವಿಷ್ಣು, ಕೌಂಡಿನ್ಯ, ಶೇಷ, ಉದ್ಧವ, ಆರುಣಿ, ಬಲಿ, ಹನುಮಂತ, ವಿಭೀಷಣ– ಇವರೇ ಮುಂತಾದ ಭಕ್ತ್ಯಾಚಾರ್ಯರುಗಳು ಜನರ ಹರಟೆಗೆ ಅಂಜದೆ ಒಂದೇ ಅಭಿಪ್ರಾಯ ದಿಂದ ಹೇಳುತ್ತಿರುವರು.

**ಯ ಇದಂ ನಾರದಪ್ರೋಕ್ತಂ ಶಿವಾನುಶಾಸನಂ ವಿಶ್ವಸಿತಿ ಶ್ರದ್ಧತ್ತೇ ಸ ಭಕ್ತಿಮಾನ್ ಭವತಿ ಸ ಪ್ರೇಷ್ಠಂ ಲಭತೇ ಸ ಪ್ರೇಷ್ಠಂ ಲಭತ ಇತಿ ||**

[ಯಃ-ಯಾವನು, ಇದಂ-ಈ, ನಾರದಪ್ರೋಕ್ತಂ-ನಾರದರಿಂದ ಉಕ್ತವಾಗಿರುವ, ಶಿವಾನುಶಾಸನಂ-ಮಂಗಲಕರವಾದ ಉಪದೇಶವನ್ನು ವಿಶ್ವಸಿತಿ-ವಿಶ್ವಾಸಮಾಡುತ್ತಾನೋ, ಶ್ರದ್ಧತ್ತೇ-ಶ್ರದ್ಧೆಯಿಂದ ಕಾಣುವನೋ, ಸಃ-ಅವನು, ಭಕ್ತಿಮಾನ್ ಭವತಿ-ಭಕ್ತಿವಂತನಾಗು ತ್ತಾನೆ, ಪ್ರೇಷ್ಠಂ-ಪ್ರಿಯತಮನಾದ ಭಗವಂತನನ್ನು ಲಭತೇ-ಪಡೆದುಕೊಳ್ಳುವನು, ಪ್ರೇಷ್ಠಂ ಲಭತೇ-ಪ್ರಿಯತಮನಾದ ಭಗವಂತನನ್ನು ಪಡೆದುಕೊಳ್ಳುವನು.]

೮೪. ಯಾವನು ಈ ನಾರದರು ಹೇಳಿರುವ ಶಾಸ್ತ್ರೋಪದೇಶದಲ್ಲಿ ವಿಶ್ವಾಸ ವನ್ನಿಟ್ಟು ಶ್ರದ್ಧೆಯಿಂದ ವರ್ತಿಸುವನೋ ಅವನು ಭಕ್ತಿವಂತನಾಗಿ ಪ್ರಿಯತಮನಾದ ಭಗವಂತನನ್ನು ಪಡೆದುಕೊಳ್ಳುವನು.

# ಭಕ್ತಿಯ ಬುಗ್ಗೆಯನ್ನು ಉಕ್ಕೇರಿಸುವ

# ಸ್ತೋತ್ರಗಳು

೧. ವಾಗ್ದೇವೀಸ್ತೋತ್ರ :– ಸರಸ್ವತಿಯ ಸ್ತೋತ್ರವನ್ನು ಭಜನೆಗೆ ಉಪಯೋಗಿಸ ಬೇಕೆನ್ನುವವರಿಗೆ ಅನುಕೂಲವಾದದ್ದು.

೨. ಗಣೇಶಾಷ್ಟಕ :– ಭಾವಾರ್ಥಸಮೇತವಾಗಿ ಕನ್ನಡದ ವಿವರಣೆಯನ್ನು ಜೋಡಿಸಿದೆ. ಗಣೇಶನ ಭಕ್ತಿಯನ್ನು ಹೆಚ್ಚಿಸುವದಲ್ಲದೆ ಉಪನಿಷತ್ಸಿದ್ಧಾಂತವನ್ನು ಮನೋಹರವಾದ ರೀತಿಯಿಂದ ವರ್ಣಿಸಿರುವ ಸ್ತೋತ್ರವಿದು. ಗಣೇಶಪುರಾಣದಿಂದ ಆರಿಸಿದ್ದು.

೩. ಭಗವಚ್ಛರಣಸ್ತೋತ್ರ :– ಭಗವಂತನನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವದಕ್ಕೆ ಬೇಕಾದ ಸಾಧನಗಳನ್ನು ಸಂಗ್ರಹಿಸಿರುವ ಸ್ತೋತ್ರ. ಶ್ರೀ ಬ್ರಹ್ಮಾನಂದರ ಕೃತಿ.

೪. ಹರಿಶರಣಾಷ್ಟಕ :– ಭಗವಂತನ ಕಡೆಗೆ ಬೆನ್ನುತಿರುಗಿಸುವವರಿಗೆ ಆಗುವ ಕೇಡನ್ನೂ ಭಗವತ್ಪ್ರಾಪ್ತಿಯಾಗುವದಕ್ಕೆ ಬೇಕಾದ ಸಾಧನಗಳನ್ನೂ ತಿಳಿಸುವದು. ಶ್ರೀ ಬ್ರಹ್ಮಾ ನಂದರ ಕೃತಿ.

ವಿಶೇಷ :– ಮೇಲಿನ ಎರಡು ಸ್ತೋತ್ರಗಳಿಗೂ ಅರ್ಥ, ವಿವರಣೆ– ಇವೆ.

೫. ಭೀಷ್ಮಸ್ತವರಾಜ :– ಭೀಷ್ಮಾಚಾರ್ಯರು ತಮ್ಮ ಅಂತ್ಯಕಾಲದಲ್ಲಿ ಭಗವಂತ ನನ್ನು ಸ್ತೋತ್ರಮಾಡಿದ ಉತ್ತಮಸ್ತೋತ್ರವಿದು. ಭಾರತದಿಂದ ಆರಿಸಿದ್ದು, ಭಾವಾರ್ಥ ಸಹಿತ.

೬. ಶಿವನಾಮಾಷ್ಟೋತ್ತರ : ಪ್ರತಿಯೊಂದು ನಾಮಕ್ಕೂ ಅರ್ಥವಿವರಣೆಯಿದೆ. ಪೂಜೆಗೆ ಉಪಯೋಗಿಸುವವರಿಗಾಗಿ ನಾಮಾವಳಿಯಿದೆ ; ಪ್ರತಿದಿನದ ಪಾಠಕ್ಕೆ ಮೂಲ ಶ್ಲೋಕಗಳನ್ನು ಕೊಟ್ಟಿದೆ. ಸ್ಕಾಂದಪುರಾಣದಿಂದ ಆರಿಸಿದ್ದು.

೭. ಶಿವಕವಚ : ಮೂಲ, ಅರ್ಥ, ವಿವರಣೆ– ಇಷ್ಟೂ ಇವೆ. ಬ್ರಹ್ಮೋತ್ತರಖಂಡ ದಿಂದ ಆರಿಸಿರುವ ಈ ಸ್ತೋತ್ರವು ಸರ್ವತ್ರ ಪ್ರಸಿದ್ಧವಾಗಿದೆ.

೮. ಮುಕುಂದಮಾಲಾ : ಶ್ರೀಕುಲಶೇಖರಾಳ್ವಾರ್ ವಿರಚಿತ ಸುಪ್ರಸಿದ್ಧ ಸ್ತೋತ್ರ. ಭಾವಾರ್ಥಸಹಿತ.

೯. ಗುರುಭಕ್ತಿಸಾರ : ಗುರುಭಕ್ತಿಯಿಂದಲೇ ಎಲ್ಲಾ ಸಾಧನಗಳೂ ಪುರುಷಾರ್ಥ ಗಳೂ ಕೈಗೂಡುವವೆಂಬುದನ್ನು ತೋರಿಸಿಕೊಡುವ ಕುಸುಮಷಟ್ಪದಿಯ ಗ್ರಂಥ. ಸಾಧನ ಸಿದ್ಧಾಂತಗಳೆರಡನ್ನೂ ಎರಕವಾಗಿಟ್ಟಿರುವ ಗ್ರಂಥ. ಭಾವಾರ್ಥವನ್ನು ತಿಳಿಸುವ ಟಿಪ್ಪಣಿ ಯನ್ನು ಕೊಟ್ಟಿದೆ.

೧೦–೧೧. ಚಿದಾನಂದರಗಳೆ, ಚಿದಾನಂದಸವಾಯಿ : ಜ್ಞಾನದ ಮಹಿಮೆಯನ್ನೂ ಸಾಧನವನ್ನೂ ತಿಳಿಸುವ ಗ್ರಂಥಗಳು. ಟಿಪ್ಪಣಿಸಹಿತವಾಗಿವೆ.

ಪುಸ್ತಕಗಳ ಈಗಿನ ಬೆಲೆಪಟ್ಟಿಗೆ ಬರೆದು ತರಿಸಿಕೊಳ್ಳಿರಿ.

ಗ್ರಂಥಗಳಿಗೆಲ್ಲ ಅಂಚೆಯಹಾಸಲು ಬೇರೆ.

---

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.

15-8-72, 1000. ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.

# ಶ್ರೀಶ್ರೀಗಳವರ ಉಪನ್ಯಾಸಗಳು

೧೦-೧೧. **ಕೇನೋಪನ್ಯಾಸಮಂಜರಿ, ಮುಂಡಕೋಪನ್ಯಾಸಮಂಜರಿ :** ಕೇನೋಪನಿಷತ್ತು- ಮುಂಡಕೋಪನಿಷತ್ತುಗಳ ಸಾರವನ್ನು ಸುಲಭವಾಗಿ ತಿಳಿಯಬೇಕೆನ್ನುವವರಿಗೆ ಈ ಗ್ರಂಥಗಳು ತುಂಬ ಉಪಯುಕ್ತವಾಗಿವೆ. ಉಪನಿಷತ್ತುಗಳ ಮೇಲಿನ ವಿವರಣೆಯನ್ನು ಭಾಷ್ಯಾನುಸಾರವಾಗಿಯೇ ಇಲ್ಲಿ ವಿವರಿಸಿದೆ. **ಒಟ್ಟು ಪುಟಗಳು : ಡೆಮ್ಮಿ ೧೪೪**

೧೨. **ಕಾಠಕೋಪನ್ಯಾಸಮಂಜರಿ :** ಕಠೋಪನಿಷತ್ತಿನ ವಿವರವನ್ನು ಭಾಷ್ಯಾನುಸಾರವಾಗಿ ತಿಳಿಗನ್ನಡದಲ್ಲಿ ಉಪನ್ಯಾಸರೂಪವಾಗಿ ವಿವರಿಸಿದೆ. ಪ್ರತಿ ಭಾನುವಾರವೂ ಶ್ರೀಶ್ರೀಗಳವರು ಕಾರ್ಯಾಲಯದಲ್ಲಿ ಅನುಗ್ರಹಿಸಿದ ಈ ಉಪನ್ಯಾಸಗಳನ್ನು ಜಿಜ್ಞಾಸುಗಳ ಉಪಯೋಗಕ್ಕಾಗಿ ಪ್ರಕಟಿಸಿದೆ. ಯಮನು ನಚಿಕೇತನಿಗೆ ಉಪದೇಶಿಸಿದ ಆತ್ಮಸ್ವರೂಪ, ಅಧ್ಯಾತ್ಮಯೋಗ- ಇವುಗಳ ಮರ್ಮವನ್ನು ಸುಲಭರೀತಿಯಿಂದ ವರ್ಣಿಸಲಾಗಿದೆ. **ಪುಟಗಳು : ಡೆಮ್ಮಿ ೨೬೬**

೧೩. **ಪ್ರಶ್ನೋಪನ್ಯಾಸಮಂಜರಿ :** ಮುಂಡಕೋಪನಿಷತ್ತಿನ ವಿವರವೆಂದು ಆಚಾರ್ಯರು ಪ್ರಶ್ನೋಪನಿಷತ್ತನ್ನು ವರ್ಣಿಸಿದ್ದಾರೆ. ಇದರಲ್ಲಿ ಗುರುಶಿಷ್ಯಸಂವಾದರೂಪದಲ್ಲಿ ಪ್ರಾಣನ ಸ್ವರೂಪ, ಅವನ ಉತ್ಪತ್ತ್ಯಾದಿಗಳು, ಓಂಕಾರೋಪಾಸನೆ, ಷೋಡಶಕಲಾಪುರುಷನ ಜ್ಞಾನ- ಇವುಗಳನ್ನು ಬಹಳ ಚೆನ್ನಾಗಿ ವರ್ಣಿಸಿದೆ. ವಿವರಣೆಯಲ್ಲಿ ಶ್ರೀಶ್ರೀಗಳವರು ಉಪನಿಷತ್ತಿನ ಗ್ರಂಥಗ್ರಂಥಿಗಳನ್ನೆಲ್ಲ ಬಿಡಿಸಿ ತಿಳಿಸಿರುತ್ತಾರೆ. **ಪುಟಗಳು : ಡೆಮ್ಮಿ ೮೮+೪**

೧೪. **ಭಗವದ್ಗೀತೆಯ ಉಪನ್ಯಾಸಗಳು :** (೧ರಿಂದ ೭ ಭಾಗಗಳು) ಶ್ರೀಶ್ರೀಗಳವರು ಕಾರ್ಯಾಲಯದಲ್ಲಿ ಪ್ರತಿಭಾನುವಾರವೂ ಮಾಡುತ್ತಾ ಬಂದಿರುವ ಉಪನ್ಯಾಸಗಳಿವು. ಇವುಗಳನ್ನು ಸಂಗ್ರಹಿಸಿ ತಿಳಿಗನ್ನಡದಲ್ಲಿ ದೃಷ್ಟಾಂತಸಮೇತ ಶಾಸ್ತ್ರಗಳ ಪರಿಚಯವಿಲ್ಲದ ಸಾಮಾನ್ಯರಿಗೂ ತಿಳಿಯುವಂತೆ ಗೀತೆಯ ಹದಿನೆಂಟು ಅಧ್ಯಾಯಗಳ ಅಭಿಪ್ರಾಯವನ್ನು ಭಾಷ್ಯಾನುಸಾರವಾಗಿ ವಿವರಿಸಿ ಬರೆದಿದೆ. ಗೀತೆಯ ಹೃದಯವನ್ನು ಮನಗಂಡು ಅಧ್ಯಾತ್ಮಪಥದಲ್ಲಿ ನಡೆಯಬೇಕೆಂಬ ಮುಮುಕ್ಷುಗಳಿಗೆ ಒಂದು ಸುಗಮವಾದ ಮಾರ್ಗವನ್ನು ಇವು ತಿಳಿಸುವವು. ಇವನ್ನು ಓದಿದವರೆಲ್ಲ ಕೊಂಡಾಡಿರುತ್ತಾರೆ. **ಒಟ್ಟು ಪುಟಗಳು : ಡೆಮ್ಮಿ ೧೨೬೮**

೧೫. **ಪರಿಶುದ್ಧವೇದಾಂತಸಾರ :** ಶಾಂಕರವೇದಾಂತಕ್ಕೆ ಪ್ರವೇಶಿಕೆಯಾಗಿ ಸುಲಭವಾಗಿ ಬರೆದಿರುವ ಚಿಕ್ಕಗ್ರಂಥವಿದು. ಇದರಲ್ಲಿ ಶಾಸ್ತ್ರದೃಷ್ಟಿ, ಸಾಕ್ಷಿಸ್ವರೂಪ, ಆತ್ಮನ ಅದ್ವಿತೀಯತ್ವ- ಈ ಮೂರು ವಿಷಯಗಳನ್ನು ಜಿಜ್ಞಾಸುಗಳಿಗೆ ಮನದಟ್ಟಾಗುವಂತೆ ಸುಲಭಶೈಲಿಯಲ್ಲಿ ವಿವರಿಸಿದೆ.

**ಪುಟಗಳು : ಕ್ರೌನ್ ೪೦+೪**

ಬೇರೆ ಗ್ರಂಥಗಳ ವಿವರವಾದ ಬೆಲೆಪಟ್ಟಿಗೆ ಈ ವಿಳಾಸಕ್ಕೆ ಬರೆಯಿರಿ :

---

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.

ಅಧ್ಯಾತ್ಮವಿದ್ಯೆಯ ಮರ್ಮವನ್ನು ಬಿಚ್ಚಿ ತೋರಿಸುವ

# ಶ್ರೀಶ್ರೀಗಳವರ ಉಪನ್ಯಾಸಗಳು

**೧. ಶ್ರೀಶಂಕರಭಗವತ್ಪಾದರವರ ಸರ್ವಸಮ್ಮತೋಪದೇಶಗಳು :** ೧,೨ನೆಯ ಭಾಗಗಳು: ಶ್ರೀಶ್ರೀಗಳವರು ಹುಬ್ಬಳ್ಳಿಯಲ್ಲಿ ಚಾತುರ್ಮಾಸ್ಯಸಂಕಲ್ಪ ಕಾಲದಲ್ಲಿ ಮಾಡಿದ ಉಪನ್ಯಾಸಗಳಿವು. ಶಾಂಕರವೇದಾಂತಜಿಜ್ಞಾಸುಗಳ ವಿಚಾರ ಪ್ರಪಂಚದಲ್ಲಿ ಮಹಾಕ್ರಾಂತಿಯನ್ನುಂಟುಮಾಡಿ ಆಚಾರ್ಯರ ಮೂಲಭಾಷ್ಯಗಳನ್ನೇ ಅಭ್ಯಾಸಮಾಡಬೇಕೆಂಬ ಹಸಿವನ್ನುಂಟುಮಾಡಿರುತ್ತವೆ. ಶ್ರುತಿಯುಕ್ತ್ಯನುಭವಗಳ ಆಧಾರದಿಂದ ತತ್ತ್ವವನ್ನೂ ಸಾಧನಕ್ರಮವನ್ನೂ ವಿಂಗಡವಾಗಿ ಪ್ರತಿಪಾದಿಸಿದೆ. ಭಾಷ್ಯವಿರುದ್ಧವಾದ ವಾದಗಳನ್ನೆಲ್ಲ ನಿರಾಕರಿಸಿ ಜಿಜ್ಞಾಸುಗಳ ಸಂದೇಹವನ್ನು ದೂರ ಮಾಡಿವೆ. ಆಚಾರ್ಯರ ಅಭಿಪ್ರಾಯಗಳನ್ನು ಇದ್ದದ್ದು ಇದ್ದಹಾಗೆಯೇ ತಿಳಿಯ ಬೇಕೆನ್ನುವವರಿಗೆ ಲಾಭದಾಯಕವಾದ ಪುಸ್ತಕಗಳಿವು. ಒಟ್ಟು ೫೪ ಉಪನ್ಯಾಸಗಳಿವೆ.

**ಪುಟಗಳು ೩೮೨**

**೨. ಅನುಭವಪರ್ಯಂತವಾದ ಆತ್ಮವಿಚಾರ :** ಇದರಲ್ಲಿ (1) ವೇದಾಂತ ವಿಚಾರಸರಣಿ (2) ಆತ್ಮನನ್ನು ಶಾಸ್ತ್ರವು ತಿಳಿಸಿಕೊಡುವ ರೀತಿ (3) ಆಗಮ, ತರ್ಕ (4) ಅನುಭವಾನುಸಾರಿಯಾದ ತರ್ಕ (5) ಬ್ರಹ್ಮಾತ್ಮಾನುಭವಕ್ಕೆ ಉಪಾಯಗಳು (6) ಅಜಾತಿವಾದ– ಎಂಬ ಶ್ರೀಶ್ರೀಗಳವರ ಆರು ಉಪನ್ಯಾಸಗಳಿವೆ. ಶ್ರುತಿ, ಆಗಮ, ಉಪಪತ್ತಿ ಅಥವಾ ತರ್ಕ– ಇವುಗಳ ಮರ್ಮವನ್ನು ಶ್ರೋತೃಗಳಿಗೆ ಹೃದಯಂಗಮ ವಾಗುವಂತೆ ಪ್ರತಿಪಾದಿಸಿದೆ. **ಪುಟಗಳು : ಕ್ರೌನ್ ೬೬+೬**

**೩. ಪರಿಪೂರ್ಣದರ್ಶನ :** ಆಚಾರ್ಯರು ಉಪದೇಶಿಸಿರುವ ವೇದಾಂತದ ಆಳವನ್ನು ಕಾಣಬೇಕೆಂಬ ಕುತೂಹಲವುಳ್ಳವರಿಗೂ ಅದರ ವಿಶೇಷವನ್ನು ನಿಷ್ಕೃಷ್ಟವಾಗಿ ತಿಳಿಯಬೇಕೆನ್ನುವವರಿಗೂ ಇದು ಉಪಯುಕ್ತವಾಗಿದೆ. ಇದರಲ್ಲಿ ಆಚಾರ್ಯರ ಮತಾನುಸಾರಿಯಾದ ವೇದಾಂತವೊಂದೇ ಪರಿಪೂರ್ಣದರ್ಶನವೆಂದು ತಿಳಿಸಿಕೊಡುವ ಉಪನ್ಯಾಸಗಳಿವೆ. (1) ಭೌತಿಕವಿಜ್ಞಾನವೂ ವೇದಾಂತವೂ (2) ಲೌಕಿಕವಿಜ್ಞಾನದ ಎಲ್ಲೆಕಟ್ಟು (3) ಅಕೃತ್ಸ್ನದರ್ಶನಗಳು (4) ಶಾಂಕರವೇದಾಂತಪ್ರಕ್ರಿಯೆಯ ವಿಶೇಷ ಲಕ್ಷಣಗಳು (5) ಶಾಸ್ತ್ರ, ಪ್ರಮಾಣ, ತರ್ಕಗಳ ಸ್ವರೂಪ (6) ಬ್ರಹ್ಮಾತ್ಮಾನುಭವ (7) ವೇದಾಂತಜ್ಞಾನದ ಪ್ರಯೋಜನ– ಮುಂತಾದ ಉಪನ್ಯಾಸಗಳಿವೆ.

**ಪುಟಗಳು : ಕ್ರೌನ್ ೫೬+೪**

**೪. ಸರ್ವವ್ಯವಹಾರಾತೀತವಾದ ಪರಮಾರ್ಥ :** ಸರ್ವವ್ಯವಹಾರಾತೀತ ನಾದ ನಿತ್ಯಶುದ್ಧಬುದ್ಧಮುಕ್ತಾತ್ಮನಲ್ಲಿ ನೆಲೆನಿಲ್ಲುವ ಪರಮಾನುಭವವೇ ಪರಮಾರ್ಥ ವಿದ್ಯೆ– ಎಂದು ತಿಳಿಸಿಕೊಡುವ ಉಪದೇಶಗಳು ಇದರಲ್ಲಿ ಅಡಗಿವೆ. ಭೋಕ್ತೃಭೋಗ್ಯ ವ್ಯವಹಾರ, ಕರ್ತೃಕರ್ಮಫಲವ್ಯವಹಾರ, ಜ್ಞಾತೃಜ್ಞಾನಜ್ಞೇಯವ್ಯವಹಾರ, ಅವಿದ್ಯಾ ವ್ಯವಹಾರ. ಅಹಂಮಮವ್ಯವಹಾರ, ವಿದ್ಯಾವಿದ್ಯಾವ್ಯವಹಾರ– ಇವುಗಳ ಮರ್ಮವನ್ನು ಹೊರಗೆಡ. ..ರಮಾರ್ಥದ ಅರಿವನ್ನುಂಟುಮಾಡುವ ಉಪನ್ಯಾಸಗಳಿವು.

**ಪುಟಗಳು : ಕ್ರೌನ್ ೪೮+೪**

---

ಮೇಲಿನ ಪುಸ್ತಕಗಳು ಸಿಕ್ಕುವ ವಿಳಾಸ :

ಕಾರ್ಯದರ್ಶಿ, ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.